

ಮುಗಿಯದ ಮಾಯೆ

ಕಾದಂಬರಿ

ಡಾ. ಆರ್ ಲಕ್ಷ್ಮೀನಾರಾಯಣ

ಓ. ಆರ್. ರಾಮಣ್ಣ, ಪುಟ್ಟಮ್ಮ ದಂಪತಿಗಳ ಮಗನಾದ **ಡಾ. ಆರ್. ಲಕ್ಷ್ಮೀನಾರಾಯಣ** ಅವರು (ಜನನ: 2–12–1949) ತುಮಕೂರಿನವರು. 1971ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಮುಗಿಸಿದ ಮೇಲೆ 1971 ರಿಂದ 2006ರ ವರೆಗೆ ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕ, ಪ್ರಾಧ್ಯಾಪಕ ಮತ್ತು ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿ, 2006 ಮೇಯಿಂದ 2007ರ ಡಿಸೆಂಬರ್ ವರೆಗೆ ಧಾರವಾಡದಲ್ಲಿ ಇಲಾಖೆಯ ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸಿ 2007ರಲ್ಲಿ ನಿವೃತ್ತರು. 2004ರಲ್ಲಿ 'ವಕ್ರೋಕ್ತಿ ಜೀವಿತ– ಒಂದು ಅಧ್ಯಯನ' ಎಂಬ ಮಹಾ ಪ್ರಬಂಧಕ್ಕೆ ಬೆಂಗಳೂರು ವಿಶ್ವ ವಿದ್ಯಾಲಯದ ಪಿಎಚ್.ಡಿ. ಪದವಿ. ಇಂಗ್ಲಿಷ್ ಮತ್ತು ಹಿಂದಿಯಿಂದ ಅನುವಾದ ಮಾಡುವುದರಲ್ಲಿ ನಿರತರು. ಪ್ರಸ್ತುತ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಯಕ್ಷರು.

ಪ್ರಕಟಿತ ಸ್ವತಂತ್ರ ಕೃತಿಗಳು: ವಿಮರ್ಶೆ: 'ಮಾಸ್ತಿ' (ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ), ಆಹ್ಲಾದ (ಇಳಾ ಪ್ರಕಾಶನ), 'ಎಸ್.ವಿ. ಪರಮೇಶ್ವರ ಭಟ್ಟ' (ಕೇಂದ್ರ ಸಾಹಿತ್ಯ ಅಕಡೆಮಿ ಪ್ರಕಟಣೆ), ಚೆಲುವಿನ ನೆಲೆಗಳ ಹಾದಿಯಲ್ಲಿ, ಒಳತಿರುಳು (ಎರಡೂ ಸಿ.ವಿ.ಜಿ ಪ್ರಕಾಶನ), ವಕ್ರೋಕ್ತಿ ಜೀವಿತ–ಒಂದು ಅಧ್ಯಯನ, ಉರಿಲಿಂಗ ಪೆದ್ದಿ (ಮೈ.ವಿ.ವಿ), ಹಳಗನ್ನಡ ಸಾಹಿತ್ಯ ಪ್ರಕಾರಗಳು (ಅಚ್ಚಿನಲ್ಲಿ).

ಅನುವಾದಿತ ಕೃತಿಗಳು: 'ಚಿನ್ನದ ಕಳಶ (ಚೀಣಾದ ಜನಪದ ಕಥೆಗಳ ಸಂಕಲನ), 'ಬರ್ಟೋಲ್ಟ್ ಬ್ರೆಕ್ಟ್' (ಇಂಗ್ಲಿಷ್‌ನಿಂದ), ವಾಙ್ಮಯ ವಿವೇಕ (ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಯ ಅನುವಾದಿತ ಲೇಖನಗಳು), 'ಇನ್ನೊಬ್ಬ ದ್ರೋಣಾಚಾರ್ಯ' (ಹೆಸರಾಂತ ಹಿಂದೀ ನಾಟಕದ ಕನ್ನಡ ಅನುವಾದ), ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಕನ್ನಡ ವಕ್ರೋಕ್ತಿ ಜೀವಿತ, (ಸಂಸ್ಕೃತ ವಕ್ರೋಕ್ತಿ ಜೀವಿತದ ಕನ್ನಡ ರೂಪ) ಬೇಗುದಿ (ಕಿರಣ್ ನಗರ್‌ಕರ್ ಅವರ ಪ್ರಶಸ್ತಿ ಪುರಸ್ಕೃತ ಇಂಗ್ಲಿಷಿನ 'ಕಕೋಲ್ಡ್' ಕಾದಂಬರಿಯ ಕನ್ನಡ ರೂಪ), ಅನುರೂಪ (ಪ್ರಸಿದ್ಧ ಕವಿಗಳ ಅನುವಾದಿತ ಕವಿತೆಗಳ ಸಂಕಲನ), ವಕ್ರೋಕ್ತಿ ಮತ್ತು ಶೈಲಿಶಾಸ್ತ್ರದ ಪರಿಕಲ್ಪನೆಗಳು (ಇಂಗ್ಲಿಷ್‌ನಿಂದ), ಬದುಕಿನ ಇನ್ನೊಂದು ಹಾದಿ (ಆರ್.ಎಲ್. ಕಪೂರರ ಇಂಗ್ಲಿಷ್ ಕೃತಿಯ ಕನ್ನಡ ಅನುವಾದ), ಪಾಲಿ–ಕನ್ನಡ ಶಬ್ದಕೋಶ (ಮೂಲ ಡಾ. ಅಂಬೇಡ್ಕರ್‌ರವರ ಇಂಗ್ಲಿಷ್ ಕೃತಿಯ ಕನ್ನಡ ಅಳವಡಿಕೆ), ಪ್ರಾಕೃತ–ಕನ್ನಡ ಬೃಹತ್ ನಿಘಂಟು ('ಪಾಇಅ ಸದ್ದ– ಮಹಣ್ಣವೋ'ದ ಕನ್ನಡ ಅಳವಡಿಕೆ), ಕಾಗದ ಮತ್ತು ಕ್ಯಾನ್‌ವಾಸ್(ಅಮೃತಾ ಪ್ರೀತಮ್ ಅವರ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವನಸಂಕಲನದ ಕನ್ನಡ ರೂಪ), ಹಲವುಭೂಮಿ ಹಲವು ಬಣ್ಣ (ಪ್ರಸಿದ್ಧ ಅನುವಾದಿತ ಕಥೆಗಳ ಸಂಕಲನ) (ಅಚ್ಚಿನಲ್ಲಿ)

ಸಂಪಾದಿತ ಕೃತಿಗಳು: 'ರುದ್ರಭಟ್ಟ' (ಜಗನ್ನಾಥ ವಿಜಯ ಸಂಗ್ರಹ), ಎಂ. ವಿ.ಸೀ ಸಮಗ್ರ ಸಾಹಿತ್ಯ ಸಂಪುಟ–4 (ಭಾಗ–1 ಮತ್ತು 2), ಹೊಸಗನ್ನಡ ಕಾವ್ಯ ಸಂಗ್ರಹ.

ಪ್ರಶಸ್ತಿಗಳು: ಕನ್ನಡ ವಕ್ರೋಕ್ತಿ ಜೀವಿತ ಕೃತಿಗೆ 2007ರ ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ, ಅದೇ ಕೃತಿಗೆ 2004ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಬೇಗುದಿ' ಕೃತಿಗೆ 2013ರ ಕರ್ನಾಟಕ ಸಾಹಿತ್ಯ ಅಕಡೆಮಿ ಪ್ರಶಸ್ತಿ. ಆಹ್ಲಾದ ಕೃತಿಗೆ ಗೊರೂರು ಸಾಹಿತ್ಯ ಪ್ರಶಸ್ತಿ, 20219ರಲ್ಲಿ ಕುವೆಂಪು ಭಾಷಾ ಭಾರತಿ ಜೀವಮಾನದ ಸಾಧನೆಗಾಗಿ ನೀಡುವ ವಿಶೇಷ ಪುರಸ್ಕಾರ, ಮೈಕೋ ಕನ್ನಡ ಬಳಗದ ಕಿಟ್ಟೆಲ್ ಪುರಸ್ಕಾರ(2019). ಮಂಗಳೂರಿನ ಎಸ್.ವಿ.ಪಿ. ಸಂಸ್ಮರಣ ಸಮಿತಿಯು ನೀಡುವ 'ಎಸ್.ವಿ.ಪಿ. ಸಂಸ್ಮರಣ ಪ್ರಶಸ್ತಿ'(2020) 2000ದಲ್ಲಿ ರಾಜ್ಯ ಸರ್ಕಾರದಿಂದ ಉತ್ತಮ ಕಾಲೇಜು ಶಿಕ್ಷಕ ಪ್ರಶಸ್ತಿ.

ಮುಗಿಯದ ಮಾಯೆ

(ಕಾದಂಬರಿ)

ಡಾ. ಆರ್. ಲಕ್ಷ್ಮೀನಾರಾಯಣ

ವಸಂತ ಪ್ರಕಾಶನ
ನಂ. 360, 10ನೇ 'ಬಿ' ಮುಖ್ಯರಸ್ತೆ, 3ನೇ ಬ್ಲಾಕ್
ಜಯನಗರ, ಬೆಂಗಳೂರು – 560 011

Mugiyada Maaye (Kannada) : a novel by Dr. R. Lakshminarayana;
published by Vasantha Prakashana, No. 360, 10th 'B' Main, Jayanagar,
3rd Block, Bengaluru - 560 011, India. Ph : 080-22443996,
e-mail: vasantha_prakashana@yahoo.com,
website: www.vasanthaprakashana.com

First print : 2020

ಪ್ರಥಮ ಮುದ್ರಣ : 2020
ಉಪಯೋಗಿಸಿದ ಕಾಗದ : 70 ಜಿಎಸ್ಎಂ ಮ್ಯಾಪ್‌ಲಿಥೊ
ಪುಟಗಳು : 226 ಬೆಲೆ : ರೂ. 170

ಮುಖಪುಟ ವಿನ್ಯಾಸ : ಪ.ಸ. ಕುಮಾರ್
ಪುಟ ವಿನ್ಯಾಸ : ವಸಂತ ಪ್ರಕಾಶನ
ಮುದ್ರಣ : ರೀಗಲ್ ಪ್ರಿಂಟರ್ಸ್

ಅರ್ಪಣೆ

ಆತ್ಮೀಯ ಹಿರಿಯ ಬಂಧು

ಟಿ. ಎಸ್. ಶಾಮಣ್ಣನವರಿಗೆ ಪ್ರೀತಿಯಿಂದ

ಮುನ್ನುಡಿ

ಡಾ. ಅರ್ ಲಕ್ಷ್ಮೀನಾರಾಯಣ ಅವರು ಪ್ರಧಾನವಾಗಿ ವಿದ್ವತ್ ಪರಂಪರೆಗೆ ಸೇರಿದ ಪ್ರಸಿದ್ಧ ಲೇಖಕರು. ಅವರೀಗ 'ಮುಗಿಯದ ಮಾಯೆ' ಎಂಬ ಕಾದಂಬರಿಯನ್ನು ಬರೆದು ಅಚ್ಚರಿ ಮೂಡಿಸಿದ್ದಾರೆ. ಸೃಜನಶೀಲ ಮನಸ್ಸು ಕೂಡ ಮುಗಿಯದ ಮಾಯೆಯಂತೆ ಹೊಸ ಹುಡುಕಾಟಗಳಲ್ಲಿ ತೊಡಗುತ್ತದೆಂಬುದಕ್ಕೆ ಸನ್ಮಿತ್ರ ಲಕ್ಷ್ಮೀನಾರಾಯಣರ ಕಾದಂಬರಿ ರಚನೆಯೂ ಒಂದು ಸಾಕ್ಷಿ ಎನ್ನಬಹುದು.

ಡಾ. ಲಕ್ಷ್ಮೀನಾರಾಯಣ ಅವರ ಈ ಕಾದಂಬರಿಯು ಒಟ್ಟು ಬದುಕನ್ನು ಮುಗಿಯದ ಮಾಯೆ ಎಂಬ ರೂಪಕದ ಪರಿಭಾಷೆಯಲ್ಲಿ ಹೇಳುತ್ತಿದೆ. ನಾವು ಅಂದುಕೊಂಡಂತೆ ನಡೆಯದ ಹಾಗೂ ತರ್ಕ ಮೀರಿದ ಘಟನಾವಳಿಯ ರೂಪಕವಾಗಿ ಬದುಕನ್ನು ಕಾಣುವ ದೃಷ್ಟಿಕೋನವನ್ನು 'ಮುಗಿಯದ ಮಾಯೆ'ಯಲ್ಲಿ ಕಾಣಬಹುದು. ಬದುಕಿನಲ್ಲಿ ಅಪೇಕ್ಷೆ, ನಿರೀಕ್ಷೆ, ಕನಸು, ಎಲ್ಲವೂ ಇರುತ್ತವೆ. ಆದರೆ ಎಲ್ಲವೂ ನಾವು ಅಂದುಕೊಂಡಂತೆ ನಡೆಯಬಹುದು, ನಡೆಯದೆ ಇರಬಹುದು, ನಮ್ಮ ತೆಕ್ಕೆಗೆ ದಕ್ಕಬಹುದು ದಕ್ಕದೆ ಇರಬಹುದು– ಎಲ್ಲ ಏರಿಳಿತಗಳನ್ನು ಒಳಗೊಂಡು ನಿರಂತರ ನಡೆಯುತ್ತಲೇ ಇರುವ ಬಾಳ ನಡಿಗೆಯನ್ನು ಲಕ್ಷ್ಮೀನಾರಾಯಣ್ 'ಮುಗಿಯದ ಮಾಯೆ' ಯಲ್ಲಿ ಕಂಡಿದ್ದಾರೆ. ಹಾಗೆಂದು ಅವರು 'ಕಾಣದ ಶಕ್ತಿ'ಯ ಪ್ರತಿಪಾದನೆಯನ್ನೇನೂ ಮಾಡುವುದಿಲ್ಲ. 'ಮಾಯೆ' ಎಂಬುದಕ್ಕೆ ಅಲೌಕಿಕ ಕಲ್ಪನೆಯನ್ನು ಆರೋಪಿಸುವುದಿಲ್ಲ. ಎಲ್ಲವೂ ಲೌಕಿಕದಲ್ಲಿ ನಡೆಯುತ್ತದೆ; ಕಣ್ಣಳತೆಯಲ್ಲೇ ಎಲ್ಲ ಘಟನೆಗಳೂ ಸಂಭವಿಸುತ್ತವೆ. ಕಣ್ಣೆದುರೇ ಕೆಲವು ಕೈಗೆ ಸಿಗುತ್ತವೆ–ಕೆಲವು ಕೈ ಜಾರುತ್ತವೆ. ನಮ್ಮನ್ನು ಮೀರಿ ನಮ್ಮ ಬದುಕು ನಮ್ಮನ್ನು ಕರೆದೊಯ್ಯುತ್ತದೆ. ಇನ್ನೇನು ಮುಗಿಯಿತು ಎನ್ನುವಾಗ ಮತ್ತೇನೊ ಹೊಸ ಆರಂಭಕ್ಕೆ ಅನುವಾಗುತ್ತದೆ. ಆದ್ದರಿಂದ ಬದುಕೆಂಬುದು 'ಮುಗಿಯದ ಮಾಯೆ' – ಇದು ಈ ಕಾದಂಬರಿಯ ಮೂಲಕ ನಾನು ಗ್ರಹಿಸಿದ ಡಾ. ಲಕ್ಷ್ಮೀನಾರಾಯಣ ಅವರ ಜೀವನ ದೃಷ್ಟಿ.

ಕಾದಂಬರಿಯ ಬಹುಪಾಲು ಘಟನೆಗಳು ಕಾಲೇಜಿನ ಶೈಕ್ಷಣಿಕ ಆವರಣದಲ್ಲಿ ಸಂಭವಿಸುತ್ತವೆ. ಕಾಲೇಜಿನಿಂದ ಆರಂಭವಾಗಿ ಕುಟುಂಬದ ಒಳ ಹೊರಗಿನ ತಲ್ಲಣಗಳನ್ನು ಕಾಣಿಸುತ್ತ ಕಾದಂಬರಿಯು ಸಾಮಾಜಿಕ ಆಯಾಮವನ್ನೂ ಪಡೆಯುತ್ತದೆ. ಏಕಕಾಲಕ್ಕೆ ಶೈಕ್ಷಣಿಕ ಮತ್ತು ಸಾಮಾಜಿಕ ಆಯಾಮವನ್ನು ಒಳಗೊಂಡ ಕಾದಂಬರಿ ಈ 'ಮುಗಿಯದ ಮಾಯೆ.'

ವಸುಂಧರಾ ಎಂಬ ಪ್ರಧಾನ ಪಾತ್ರದ ಮೂಲಕ ಆರಂಭವಾಗುವ ಕಾದಂಬರಿಯು ಆ ನಂತರ ಅನೇಕ ಮಹಿಳಾ ಪಾತ್ರಗಳನ್ನು ಒಳಗೊಳ್ಳುತ್ತ ವಿಭಿನ್ನ ಹಾಗೂ ವೈರುಧ್ಯಗಳ ಒಂದು ಒಕ್ಕೂಟವನ್ನೇ ಕಟ್ಟಿಕೊಡುತ್ತದೆ. ವಸುಂಧರಳು ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬಕ್ಕೆ ಸೇರಿದವಳು. ಅಧ್ಯಯನಾಸಕ್ತಳು; ಸಾಹಿತ್ಯ ಮತ್ತು ಇತಿಹಾಸವೆಂದರೆ ಅಪಾರ ಆಸಕ್ತಿ. ಇತಿಹಾಸ ವಿಷಯದ ಅಧ್ಯಾಪಕ ಶ್ರೀನಿವಾಸನನ್ನು ವಿಚಾರ ವಿನಿಮಯಕ್ಕಾಗಿ ಭೇಟಿಯಾಗುತ್ತಲೇ ಅನುರಕ್ತಳಾದಳು. ಶ್ರೀನಿವಾಸನೂ ಈಕೆಯಲ್ಲಿ ಅನುರಕ್ತ. ಆತ ಆದರ್ಶವಾದಿ ವ್ಯಕ್ತಿತ್ವದ ಅಧ್ಯಾಪಕ. ತನ್ನ ಜಾತ್ಯತೀತ ಆದರ್ಶದ ಕಾರಣಕ್ಕೇ ಜಾತಿ ಸೂಚಕವಾದ 'ಗೌಡ' ಎಂಬುದನ್ನು ತನ್ನ ಹೆಸರಿನಿಂದ ಬಿಟ್ಟವನು. ಇವರಿಬ್ಬರ ನಡುವೆ ನಡೆಯುವ ಪಠ್ಯ ಕೇಂದ್ರಿತ ಚರ್ಚೆಯಲ್ಲಿ ಬರುವ ನಿರ್ಣಯಾತ್ಮಕ ನುಡಿಗಳು ಕಾದಂಬರಿಕಾರರ ದೃಷ್ಟಿಕೋನದ ಕನ್ನಡಿಯೂ ಆಗಿವೆ. ಇದು ತಪ್ಪೇನಲ್ಲ. ಯಾಕೆಂದರೆ ಯಾವುದೇ ಲೇಖಕ-ಲೇಖಕಿಗೆ ಬದುಕಿನ ವಿವಿಧ ನೆಲೆಗಳ ಬಗ್ಗೆ ಇರುವ ನಿಲುವೊಂದು ಪ್ರಚಾರಪತ್ರವಾಗದ ರೀತಿಯಲ್ಲಿ ಕೃತಿಯ ಭಾಗವಾಗುವುದು ಮುಖ್ಯವೆಂದೇ ನನ್ನ ತಿಳುವಳಿಕೆ. ಕೃತಿಕಾರರ ತಾತ್ವಿಕ ನೋಟವು ಕೃತಿಯ ಸಾವಯವ ಸಾಂಗತ್ಯದಲ್ಲಿ ಸೃಜನಾತ್ಮಕವಾಗಿ ಅಭಿವ್ಯಕ್ತಗೊಳ್ಳುವುದು ಕೃತಿ ಮತ್ತು ಕೃತಿಕಾರರ ಮೌಲ್ಯದ ಪ್ರತೀಕವೂ ಹೌದು. ಈ ದೃಷ್ಟಿಯಿಂದ ಕಾದಂಬರಿಯಲ್ಲಿ ಬರುವ ಕೆಲವು ನಿರ್ಣಯಾತ್ಮಕ ನಿಲುವಿನ ನುಡಿಗಳು ಚಿಂತನಾ ಕ್ರಮವನ್ನು ನಿರೂಪಿಸುತ್ತವೆ. ಚಾರಿತ್ರಿಕ ಕಾದಂಬರಿಯ ಸ್ವರೂಪವನ್ನು ಕುರಿತ ಚರ್ಚೆ, ಟಿಪ್ಪೂ ಸುಲ್ತಾನ್ ಕುರಿತ ಚಾರಿತ್ರಿಕ ವಾಗ್ವಾದ ಕುರಿತ ನಿಲುವು, ಮಮತಾ ಮೇಡಮ್ ಮೂಲಕ ಬರುವ ಮಹಿಳಾಪರ ಪ್ರತಿಪಾದನೆ-ಇವೇ ಮುಂತಾದ ಅಂಶಗಳು ಕಾದಂಬರಿಯನ್ನು ಚಿಂತನಾತ್ಮಕವೂ ಆಗಿಸುತ್ತವೆ. 'ಇತಿಹಾಸದ ಸಂಗತಿಗಳನ್ನು ಸಂಗತಿಗಳಾಗಿಯೇ ನಿರೂಪಿಸಿದರೆ ಅಷ್ಟೊಂದು ವಿವಾದಕ್ಕಾಸ್ಪದವಾಗಲಾರದು' ಎಂಬ ಇತಿಹಾಸ ಅಧ್ಯಾಪಕ ಶ್ರೀನಿವಾಸನ ಮಾತು ಅರೋಗ್ಯಕರ ಚಿಂತನೆಯ ಸಂಕೇತವಾಗುವುದು ಗಮನೀಯ. ಚಾರಿತ್ರಿಕ ಸಂಗತಿಗಳನ್ನು ತಂತಮ್ಮ ಮೂಗಿನ ನೇರಕ್ಕೆ ಬಳಸಿಕೊಳ್ಳುವುದನ್ನು ವಿರೋಧಿಸುವ ನಿಲುವು ಇತಿಹಾಸ ಅಧ್ಯಾಪಕನ ಮೂಲಕ ಬರುವುದು ನಮ್ಮ ಸಮಕಾಲೀನ ಸಂದರ್ಭಕ್ಕೊಂದು 'ಪಾಠ' ವೂ ಆಗಿದೆ. ಅಧ್ಯಾಪಕ- ವಿದ್ಯಾರ್ಥಿ ನಡುವಿನ ಚರ್ಚೆಯಲ್ಲಿ ಟಿಪ್ಪು ವಿವಾದ, ತಾಜ್ ಮಹಲ್ ದೇವಾಲಯವಾಗಿತ್ತು ಎನ್ನುವ ಲೇಖಕ 'ಓಕ್' ವಿಚಾರ ಇವುಗಳಲ್ಲದೆ ದೇವರಾಜ ಅರಸು ಅವರ ಭೂಸುಧಾರಣೆ, ಹಾವನೂರು ಆಯೋಗದ ವರದಿಯೇ ಮುಂತಾದ ವಿಷಯಗಳು ಬರುತ್ತವೆ. ಕಡೆಗೆ ಸೌಹಾರ್ದಪರ ಮನೋಧರ್ಮದಲ್ಲಿ ಮುಕ್ತಾಯ ಕಾಣುತ್ತವೆ. ಯಾವುದೇ 'ಪಕ್ಷ' ಪರವಲ್ಲದ ಸೌಹಾರ್ದ ಸಮಾಜದ ಅಪೇಕ್ಷೆಯನ್ನು ಇಂತಹ ಚರ್ಚೆಗಳು ಒಳಗೊಳ್ಳುತ್ತವೆ. ತನ್ಮೂಲಕ ಲೇಖಕರ ಒಲವು-ನಿಲುವುಗಳನ್ನು ಅನಾವರಣಗೊಳಿಸುತ್ತವೆ.

ಕಾದಂಬರಿಯಲ್ಲಿ ಇಂತಹ ಚರ್ಚೆಗಳು ಆರಂಭದಲ್ಲಿ ಮಾತ್ರ ಬಂದು ಆನಂತರ ವಿವಿಧ ಪಾತ್ರಗಳ ಬದುಕಿನ ಅನುಭವ ಲೋಕವನ್ನು ತೆರೆಯುತ್ತ ಹೋಗಲಾಗಿದೆ.

ಬಹುದೊಡ್ಡ ಮಹಿಳಾಲೋಕವೊಂದು ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಕಾಲೇಜಿನಿಂದ ಕುಟುಂಬಕ್ಕೆ, ಕುಟುಂಬದಿಂದ ಸಮಾಜಕ್ಕೆ ಸ್ಥಿತ್ಯಂತರಗೊಳ್ಳುವ ಘಟನೆಗಳಲ್ಲಿ ತಂತಮ್ಮ ಬದುಕನ್ನು ವಾಸ್ತವಕ್ಕೆ ಒಡ್ಡಿಕೊಳ್ಳುತ್ತ ಮತ್ತು ಒಗ್ಗಿಕೊಳ್ಳುತ್ತ ಸಾಗುವ ಈ ಮಹಿಳಾ ಲೋಕವು ಕಟುವಾಸ್ತವದ ವೈರುಧ್ಯಗಳನ್ನು ಅನುಭವಿಸುತ್ತದೆ. ವಸುಂಧರ, ಹೇಮಾ, ಮಮತಾ ಮೇಡಮ್, ವಿಧವೆ ವಿದ್ಯಾ, ಭಾರತಿ, ಶೀಲಾ– ಎಲ್ಲರದೂ ಬದುಕಿನ ವಿಭಿನ್ನ ವಿನ್ಯಾಸ. ವಸುಂಧರಳನ್ನು ವಿವಾಹವಾಗಬೇಕಾಗಿದ್ದ ಇತಿಹಾಸ ಅಧ್ಯಾಪಕ ಶ್ರೀನಿವಾಸ– ನಮ್ಮ ಕೆಲವು ವಿದ್ಯಾವಂತ ಪ್ರೇಮಪುರುಷರಂತೆ ತಾಯಿಯ ಜೀವ ಹಟಕ್ಕೆ ಕಟ್ಟುಬಿದ್ದು ಬೇರೆ ಮದುವೆಯಾಗುತ್ತಾನೆ. ಆದರೆ ಉದ್ದಕ್ಕೂ ಪಾಪ ಪ್ರಜ್ಞೆಯಿಂದ ನರಳುತ್ತಾನೆ. ಈತನ ಪಾಪಪ್ರಜ್ಞೆಯು ಪ್ರಾಮಾಣಿಕವಾಗಿರುವುದು ಪಾತ್ರದ ಪ್ರತಿನಿಧೀಕರಣಕ್ಕೂ ಕಾರಣವಾಗುತ್ತದೆ. ಜಾತಿ ವ್ಯವಸ್ಥೆಯ ಎದುರು ಸೋಲಬೇಕಾಗಿ ಬಂದ 'ಅನಿವಾರ್ಯ' ವನ್ನು ಈತನ ಪಾಪ ಪ್ರಜ್ಞೆಯು ಪ್ರತಿನಿಧಿಸಿದರೂ ಅದು ಎಲ್ಲರ ಅನಿವಾರ್ಯವಾಗಬೇಕಿಲ್ಲ. ಕಡೆಗೆ ಈತನ ಪತ್ನಿ ಮತ್ತು ತಾಯಿ ಸತ್ತು, ವಸುಂಧರಳ ತಾಯಿಯೂ ಇಲ್ಲವಾಗಿ ಇಬ್ಬರ ವಿವಾಹವು ಕುವೆಂಪು ಅವರ 'ಮಂತ್ರಮಾಂಗಲ್ಯ'ದಂತೆ ನಡೆಯುತ್ತದೆ. ಇಬ್ಬರ ತಾಯಂದಿರು ಸಾಯದೆ ಅವರ ಮನಃಪರಿವರ್ತನೆಯ ಮೂಲಕ ಮಂತ್ರ ಮಾಂಗಲ್ಯವು ಸಾಧ್ಯವಾಗಿದ್ದರೆ, ಕಾದಂಬರಿಯ ದಿಕ್ಕು ಸ್ವಲ್ಪ ಬದಲಾಗುತ್ತಿತ್ತಲ್ಲವೆ ಎಂಬ ಪ್ರಶ್ನೆ ಏಳುತ್ತದೆ. ವಿರೋಧವೇ ಇಲ್ಲದಾಗ ನಡೆಯುವ ಮತ್ತು ವಿರೋಧವಿದ್ದಾಗಲೇ ನಡೆಯುವ ಆದರ್ಶ ವಿವಾಹಗಳಿಗೆ ವ್ಯತ್ಯಾಸವೊಂದು ಇದ್ದೇ ಇರುತ್ತದೆ. ಲೇಖಕರಿಗೆ ಇದೂ ಕೂಡ ಮುಗಿಯದ ಮಾಯೆಯಾಗಿರಬಹುದು!

ಕಾದಂಬರಿಯ ಮಹಿಳಾಲೋಕವು ನಿಜಕ್ಕೂ ವೈವಿಧ್ಯ ಮತ್ತು ವೈರುಧ್ಯಗಳ ಒಕ್ಕೂಟವಾಗಿದೆ; ಸ್ವೀಕಾರಯೋಗ್ಯ ಜೀವನ ವಿನ್ಯಾಸಗಳ ಸಮಚಿತ್ತದ ನಿಲುವನ್ನು ಕಾದಂಬರಿಯು ಒಳಗೊಂಡಿದೆ.

ವಸುಂಧರಳ ಗೆಳತಿ ಹೇಮಾ ಸಾಂಪ್ರದಾಯಿಕ ವಿವಾಹವಾಗಿ ಕಿರುಕುಳಕ್ಕೊಳಕ್ಕೆ ತುತ್ತಾಗಿ ಕಡೆಗೆ ಒಪ್ಪಿತ ವಿಚ್ಛೇದನ ಪಡೆಯುತ್ತಾಳೆ. ಅನ್ಯ ಜಾತಿಯ ಪ್ರಾಧ್ಯಾಪಕನನ್ನು ವಿವಾಹವಾಗುತ್ತಾಳೆ. ವಿಧವೆ ವಿದ್ಯಾ ತನ್ನದೇ 'ಆದರ್ಶ'ದಲ್ಲಿ ಬದುಕುತ್ತಾಳೆ. ಕ್ಷಣಿಕ ಭೋಗಕ್ಕೆ ಒಡ್ಡಿಕೊಂಡಿದ್ದ ಭಾರತಿಯು ವಸುಂಧರಳಿಂದ ವಿವೇಕದ ಹಾದಿ ಹಿಡಿಯುತ್ತಾಳೆ. ಮಮತಾ ಮೇಡಮ್ ಅವರದು ಇನ್ನೊಂದು ಬಗೆಯ ಬದುಕು. ಅನಿವಾರ್ಯವಾಗಿ ವಿಚ್ಛೇದನ ಪಡೆಯಬೇಕಾಗಿ ಬಂದ ಅವರು ಮಗನನ್ನು ಸಾಕುತ್ತ ಇನ್ನೊಬ್ಬ ಅಧ್ಯಾಪಕನೊಂದಿಗೆ 'ಸಹ್ಯ ಸುಖಕ್ಕೆ' ಒಡ್ಡಿಕೊಳ್ಳುತ್ತಾರೆ. ಹೀಗೆ ವಿಭಿನ್ನ ಪಾತ್ರಗಳಿಂದ ತುಂಬಿದ ಕಾದಂಬರಿಯು ಸಾಕಷ್ಟು ತಿರುವುಗಳನ್ನು ಒಳಗೊಂಡು ಅವರವರ ಕೈ ಮೀರಿದ ಬದುಕನ್ನೂ, ಕಡೆಗೆ ಕೈಗೆಟುಕಿದ ಕಟುವಾಸ್ತವಗಳನ್ನೂ ಚಿತ್ರಿಸುತ್ತದೆ. ನೈತಿಕ ಪ್ರಶ್ನೆಗಳನ್ನು ಎದುರಿಸುತ್ತಲೇ ಅವುಗಳನ್ನು ನಿಭಾಯಿಸಿಕೊಂಡು ಬದುಕುವ ಅನಿವಾರ್ಯ ಆಯ್ಕೆಗಳತ್ತ ಕಾದಂಬರಿಯು ಸಾಗುತ್ತದೆ. ನೈತಿಕತೆಯೆನ್ನುವುದು ಸಾಂಪ್ರದಾಯಿಕ ಜಡತ್ವವಾಗುವ ಬದಲು ಅವರವರ ಒಪ್ಪಿತ ಆರೋಗ್ಯಕರ ಆಯ್ಕೆಯ ಪ್ರಾಮಾಣಿಕತೆಯಲ್ಲಿದೆ ಎಂಬ

ಆಶಯವನ್ನು ಕಾದಂಬರಿಯು ಅಂತರ್ಗತಮಾಡಿಕೊಂಡಿದೆ. ಸರಳ ವಿವರಣೆಗಳ ಮೂಲಕ ಮುನ್ನಡೆಯುವ ಕಾದಂಬರಿಯಲ್ಲಿ ಪ್ರಾಮಾಣಿಕ, ಪಾರದರ್ಶಕ , ಮನೋಬದ್ಧ ಆಯ್ಕೆಗಳಲ್ಲಿ ನೈತಿಕತೆಯನ್ನು ಕಾಣುವ ರೀತಿ ವಿಶಿಷ್ಟವಾಗಿದೆ. ಕ್ರಿಯಾತ್ಮಕ ಮತ್ತು ವಿವರಣಾತ್ಮಕ ನಿರೂಪಣೆಯ ನಡುವೆ ಹೊಯ್ದಾಡುವ ಕಾದಂಬರಿಯಲ್ಲಿ 'ಅಧಿಕೃತತೆ' ಗಾಗಿ ಕೆಲವೊಮ್ಮೆ ವಿವರಣೆ ಹೆಚ್ಚಾದಂತೆ ಕಾಣುತ್ತದೆ. ಓದುಗರಲ್ಲಿ ಯಾವುದೇ ವಿಷಯದಲ್ಲಿ ಅಸ್ಪಷ್ಟತೆ-ಸಂದಿಗ್ಧತೆಗಳು ಕಾಣಿಸಿಕೊಳ್ಳಬಾರದೆಂಬ ಕಾಳಜಿಯೂ ಹೆಚ್ಚು ವಿವರಣೆಗೆ ಕಾರಣವಾಗಿರಬಹುದು. ಕಾಲೇಜಿನ ವಿವರಣೆ, ಪಿಎಚ್.ಡಿ. ಮುಂತಾದ ಅಂಶಗಳ ವಿವರಣೆ, ಆರ್ಯ ಸಮಾಜದ ವಿವಾಹ ವಿವರಣೆ-ಇವೇ ಮುಂತಾದ ಅಂಶಗಳು ಸಾಕಷ್ಟು ವಿಸ್ತಾರವಾಗಿವೆ. ಹಾಗೆಂದು ಕಾದಂಬರಿಯನ್ನು ಓದಲು ಅವು ಅಡ್ಡಗೋಡೆಯಾಗುವುದಿಲ್ಲ.; ಬದಲಾಗಿ ಕ್ರಿಯಾತ್ಮಕ ನಿರೂಪಣೆಯ ವೇಗವನ್ನು ಸ್ವಲ್ಪ ತಗ್ಗಿಸಬಹುದು.

ಒಟ್ಟಾರೆ ಕಾದಂಬರಿಯು ತನ್ನ ಸರಳ ನಿರೂಪಣೆಯಲ್ಲೇ ಸಂಕೀರ್ಣ ಸಂಗತಿಗಳನ್ನು ನಿರ್ವಹಿಸಿರುವುದೇ ಕಾದಂಬರಿಯ ವಿಶಿಷ್ಟತೆ. ಡಾ. ಲಕ್ಷ್ಮೀನಾರಾಯಣ ಅವರನ್ನು ಅಭಿನಂದಿಸುತ್ತ ಮತ್ತಷ್ಟು ಕಥನಗಳು ಅವರಿಂದ ಬರಲಿ ಎಂದು ಹಾರೈಸುತ್ತೇನೆ.

ಬೆಂಗಳೂರು **ಬರಗೂರು ರಾಮಚಂದ್ರಪ್ಪ**

29-12-2020

ಲೇಖಕನ ಮಾತು

ಮೂರು ವರ್ಷಗಳ ನಿರಂತರ ಪರಿಶ್ರಮದ ಫಲವಾಗಿ ಪ್ರಾಕೃತ–ಕನ್ನಡ ಬೃಹತ್ ನಿಘಂಟು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಿಂದ ಪ್ರಕಟವಾಗಿ ಒಂದೆರಡು ತಿಂಗಳು ಕಳೆದು ಮನಸ್ಸಿಗೆ ನಿರಾಳವೆನಿಸಿತ್ತು. ಬೇರೆ ಇನ್ಯಾವ ಕೆಲಸವನ್ನೂ ಕೈಗೆತ್ತಿಕೊಂಡಿರಲಿಲ್ಲ. ಆಗ ಕೊರೋನಾ ಪ್ರಯುಕ್ತ ದೇಶಾದ್ಯಂತ ಇದ್ದಕ್ಕಿದ್ದಂತೆ ಲಾಕ್ ಡೌನ್ ಘೋಷಿಸಿದ ನಂತರದ ಕೆಲವು ದಿನಗಳಲ್ಲಿ ಈ ಸಮಯವನ್ನು ಸಾರ್ಥಕಗೊಳಿಸಿಕೊಳ್ಳುವುದು ಹೇಗೆ ಎಂಬ ಯೋಚನೆ ತಲೆಹೊಕ್ಕಿತು. ಆಗ ನನ್ನ ಬದುಕಿನ ಅನುಭವಗಳು, ವೃತ್ತಿಜೀವನದ ಅನುಭವಗಳು ಇವನ್ನೆಲ್ಲ ಒಮ್ಮೆ ಮೆಲುಕುಹಾಕುವಷ್ಟು ವಿರಾಮ ದೊರೆತಾಗ ಇವಕ್ಕೆಲ್ಲ ಒಂದು ರೂಪುಕೊಡಬೇಕೆಂಬ ಬಲವಾದ ಆಕಾಂಕ್ಷೆ ಉಂಟಾದದ್ದರ ಪರಿಣಾಮವೇ ಪ್ರಸ್ತುತ ಕಾದಂಬರಿ. ಇಂಥ ಸೃಜನಶೀಲ ಬರವಣಿಗೆ ನನಗೆ ಹೊಸತಾದ್ದರಿಂದ ಬರೆದ ನಂತರದಲ್ಲಿ ನನ್ನ ಕೆಲವು ಆತ್ಮೀಯರಿಗೆ ಓದಲು ಕೊಟ್ಟೆ . ಅವರು ಓದಿ ಕಾದಂಬರಿ ಚೆನ್ನಾಗಿದೆ. ತುಂಬಾ ಚೆನ್ನಾಗಿ ಓದಿಸಿಕೊಂಡುಹೋಗುತ್ತದೆ. ಯಾವ ಹಿಂಜರಿಕೆಯೂ ಇಲ್ಲದೆ ಪ್ರಕಟಿಸಬಹುದು ಎಂದು ಪ್ರೋತ್ಸಾಹದ ಮಾತುಗಳನ್ನಾಡಿದ್ದರಿಂದ ಇದನ್ನು ಪ್ರಕಟಿಸುವ ಧೈರ್ಯಮಾಡಿದೆ.

ಇದಕ್ಕೊಂದು ಮುನ್ನುಡಿಯನ್ನು ಬರೆದುಕೊಡಬೇಕೆಂದು ಆತ್ಮೀಯರಾದ ಖ್ಯಾತ ಬರಹಗಾರ ಡಾ. ಬರಗೂರು ರಾಮಚಂದ್ರಪ್ಪನವರನ್ನು ಕೇಳಿಕೊಂಡೆ. ನನ್ನ ಪ್ರೀತಿಪೂರ್ವಕ ಒತ್ತಾಯಕ್ಕೆ ಕಟ್ಟುಬಿದ್ದು ತಮ್ಮ ನೂರೆಂಟು ಕೆಲಸಗಳ ಒತ್ತಡದ ನಡುವೆಯೂ ಅಮೂಲ್ಯವಾದ ತಮ್ಮ ಸಮಯವನ್ನು ನನಗಾಗಿ ಮೀಸಲಿಟ್ಟು ಇದಕ್ಕೊಂದು ಸಾರ್ಥಕ ಪ್ರವೇಶಿಕೆಯಾಗಬಲ್ಲ ಮುನ್ನುಡಿಯನ್ನು ದಯಪಾಲಿಸಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ. ವಸಂತ ಪ್ರಕಾಶನದ ಮುರಳಿಯವರ ವಿಶ್ವಾಸದಿಂದಾಗಿ ಇದು ಪ್ರಕಟಣೆಯ ಬೆಳಕು ಕಾಣುತ್ತಿದೆ. ಇದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಇನ್ನು ಇದನ್ನು ಹಸ್ತಪ್ರತಿಯಲ್ಲೇ ಓದಿ ಸದಭಿಪ್ರಾಯ ವ್ಯಕ್ತಪಡಿಸಿದ ಆತ್ಮೀಯರಾದ ಬೆಂಗಳೂರು ವಿ. ವಿಯ ಪ್ರಾಧ್ಯಾಪಕರಾದ ಡಾ. ಎಚ್. ಶಶಿಕಲಾ ಅವರನ್ನೇ ಇದಕ್ಕೊಂದು ಬೆನ್ನುಡಿ ಬರೆದುಕೊಡಬೇಕೆಂದು ಕೋರಿದೆ. ತಮ್ಮ ಬಿಡುವಿಲ್ಲದ ಕೆಲಸಗಳ ಮಧ್ಯದಲ್ಲೂ ಬಿಡುವು ಮಾಡಿಕೊಂಡು ಇದಕ್ಕೊಂದು ಅರ್ಥಪೂರ್ಣವಾದ ಬೆನ್ನುಡಿ ಬರೆದು

ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಕೃತಜ್ಞ. ಇನ್ನು ಕಾದಂಬರಿಯನ್ನು ಹಸ್ತಪ್ರತಿಯಲ್ಲೇ ಓದಿ ಕೂಡಲೇ ಮೆಚ್ಚುಗೆ ವ್ಯಕ್ತಪಡಿಸಿದ ಗೆಳೆಯರಾದ ಡಾ. ಸಿ. ಪಿ. ನಾಗರಾಜ್, ಟಿ.ಎಸ್. ದಕ್ಷಿಣಾಮೂರ್ತಿ, ಮತ್ತು ಡಾ. ಮಹೇಶ್ ಕುಮಾರ್– ಈ ಮೂವರಿಗೂ ನನ್ನ ನಮನಗಳು.

– ಆರ್. ಲಕ್ಷ್ಮೀನಾರಾಯಣ

12, ಶ್ರೀನಿಕೇತನ, 2ನೇ ಕ್ರಾಸ್, ಶಿವಾನಂದನಗರ,

ಮೂಡಲಪಾಳ್ಯ, ಬೆಂಗಳೂರು–560072

ಮೊ: 9449028996

ಅಧ್ಯಾಯ-1

ಡಿಗ್ರಿ ಕಾಲೇಜಿಗೆ ಸೇರಿದ ವಸುಂಧರಾ ಹದಿನೆಂಟರ ಹೊಸಿಲು ದಾಟಿ ಹತ್ತೊಂಬತ್ತರ ಯೌವನಕ್ಕೆ ಆಗ ತಾನೆ ಅಡಿಯಿಟ್ಟಿದ್ದ ಹುಡುಗಿ. ಅವಳ ಎತ್ತರದ ನಿಲುವು, ದಟ್ಟ ಕೂದಲಿನ ನೀಳ ಕಪ್ಪು ಜಡೆ, ಪುಟ್ಟ ಬಾಯಿ, ಅದಕ್ಕೆ ತಕ್ಕ ಗಲ್ಲ, ಸಂಪಿಗೆ ಎಸಳಿನ ಮೂಗು, ಮಲ್ಲಿಗೆ ಮೊಗ್ಗಿನಂಥ ಸುಂದರ ದಂತಪಂಕ್ತಿ, ಕೆಂಪು ಬಿಳಿ ಮಿಶ್ರಣದ ದುಂಡು ಮುಖ ದಿನೇದಿನೇ ಪ್ರವರ್ಧಿಸುತ್ತಿದ್ದ ಅವಳ ದೇಹ ಸೌಂದರ್ಯಕ್ಕೆ ಇನ್ನಷ್ಟು ಆಕರ್ಷಣೆ ನೀಡಿತ್ತು. ಯಾರಿಗೇ ಆದರೂ ಒಂದು ಕ್ಷಣ ನಿಂತು ನೋಡಬೇಕೆನಿಸುವಂಥ ರೂಪು. ಅವಳ ನಡೆ ನುಡಿಗಳು ಮೊದಲಿನಿಂದಲೂ ಅಮ್ಮನ ಪ್ರಭಾವದಿಂದಲೋ ಏನೋ ತುಂಬ ಸೌಜನ್ಯಯುತವಾಗಿದ್ದುವು. ಅದರ ಜೊತೆಗೆ ದಿಟ್ಟತನವೂ ಇತ್ತು. ಯಾರೊಂದಿಗಾದರೂ ಸರಿಯೆ ಹಿಂಜರಿಯದೆ ವಾಗ್ವಾದ ನಡೆಸುವ ರೀತಿ ಅವಳ ವಿಷಯಕ್ಕೆ ಎಲ್ಲರೂ ಮೆಚ್ಚುಗೆ ತೋರಿಸುವಂತಿತ್ತು. ಅಪ್ಪನ ಕೋಪಕ್ಕೆ, ಒರಟು ಮಾತುಗಳಿಗೆ ಮನೆಯಲ್ಲಿ ಸ್ವಲ್ಪ ಮಟ್ಟಿಗೆ ಬ್ರೇಕ್ ಹಾಕುವ ದಿಟ್ಟತನ ತೋರಿಸುತ್ತಿದ್ದವಳೇ ವಸುಂಧರಾ. ಒಂದು ಸಲ ಜಮೀನಿನಲ್ಲಿ ಬೆಳೆದ ದವಸವನ್ನು ಊರಿನಿಂದ ತಂದಿದ್ದ, ಹೊಲ ಮಾಡುತ್ತಿದ್ದ ದಲಿತರ ಮಾದಯ್ಯ ಮನೆಯ ಕಾಂಪೌಂಡ್‌ನಲ್ಲಿ ಇಡಬೇಕಾದ್ದು ಮರೆತು ವರಾಂಡಕ್ಕೆ ಕಾಲಿಟ್ಟು ಬಂದದ್ದಕ್ಕೆ ನರಸಿಂಹ ಜೊಯಿಸರು ಒಳಗಿನಿಂದಲೇ – "ಅಯ್ಯೋ ನಿನ್ನ ಮುಂಡಾಮೋಚಿತು, ಸೀದಾ ಗೂಳಿ ಥರ ಒಳಕ್ಕೆ ನುಗ್ಗಿಬಿಡೋದೇನೋ, ನಿಮಗೇನೂ ಮಡಿಮೈಲಿಗೆ ಇಲ್ಲ ಅಂತ ಆದರೆ ನಮಗಿರಲ್ವೇನೋ"–ಎಂದು ಅಬ್ಬರಿಸಿದ್ದರು. ಪಾಪ ಮಾದ ಕಕ್ಕಾಬಿಕ್ಕಿಯಾದವನಂತೆ ಕೂಡಲೇ ಹೊರನಡೆದ. ಆಗ ಮನೆಯಲ್ಲಿಯೇ ಇದ್ದ ವಸುಂಧರಾ "ಅಪ್ಪ ಅಮ್ಮ ಯಾಕೋ ಕರೀತಾಳೆ, ಒಂದು ನಿಮಿಷ ಬನ್ನಿ" ಅಂತ ಅಡಿಗೆ ಮನೆಗೆ ಕರೆದು "ಯಾಕಪ್ಪಾ ಅವನನ್ನು ಹಾಗೆಲ್ಲಾ ಗದರಿಸುತ್ತೀರಾ. ಪಾಪ ಅವನೇನು ಬೇಕು ಅಂತ ನುಗ್ಗಿದನೇನು. ಏನೋ ಅಕಸ್ಮಾತ್ ಒಳಕ್ಕೆ ಬಂದ. ಏನಾಯಿತೀಗ" ಎಂದು ಹೊರಗಿನವರಿಗೆ ಕೇಳಿಸದಂತೆ ಲಘುವಾಗಿ ಆಕ್ಷೇಪಿಸಿದಳು. ಜೋಯಿಸರಿಗೆ ಮಗಳ ಮಾತಿನಿಂದ ಕಸಿವಿಸಿಯಾಗಿ–"ನೀನು ಇನ್ನೂ ಹುಡುಗಿ. ನಿನಗಿದೆಲ್ಲ ಗೊತ್ತಾಗಲ್ಲ. ನೀನು ಇದಕ್ಕೆಲ್ಲ ತಲೆಹಾಕ್ಕಂಡು ಬರಬೇಡ" ಎಂದು ಬಾಯಿ ಮುಚ್ಚಿಸಿದರು. ಆದರೆ ಆಮೇಲೆ ಇದುವರೆಗೆ ತಮ್ಮ ಪತ್ನಿಯಾಗಲಿ ಇತರರಾಗಲಿ ತಮ್ಮ ಮಾತಿಗೆ ಎದುರು

ಹೇಳಿದ್ದು ಕಂಡಿರದ ಅವರಿಗೆ ಇನ್ನು ಮುಂದೆ ಇಂಥದಕ್ಕೆ ಅವಕಾಶವಾಗದ ಹಾಗೆ ನೋಡಿಕೊಳ್ಳಬೇಕು ಅಂತ ಅನ್ನಿಸಿತು. ಅವಳ ಆತ್ಮೀಯ ಸಹಪಾಠಿ ಲಿಂಗಾಯಿತರ ಹುಡುಗಿ ಹೇಮಾಳನ್ನು ಮನೆಗೆ ಕರೆದುಕೊಂಡು ಬಂದರೂ ಅಭ್ಯಾಸಬಲದಿಂದ ಅಮ್ಮ ಏನಾದರೂ ಅವಳಿಗೆ ಬೇಸರವಾಗುವ ರೀತಿಯಲ್ಲಿ ಮಾತಾಡಿದರೆ ಆಗಲೇ ಸೌಮ್ಯವಾದ ಮಾತಿನಿಂದಲೇ ಅಮ್ಮನಿಗೆ 'ಹಾಗೆ ಹೇಳೋದು ಸರಿಯಲ್ಲ' ಅಂತ ಸೂಚಿಸಿಬಿಡುತ್ತಿದ್ದಳು.

ಅವಳು ಓದಿದ ಹೈಸ್ಕೂಲು ಮತ್ತು ಅದಕ್ಕೇ ಸೇರಿದ್ದ ಜೂನಿಯರ್ ಕಾಲೇಜು ಎರಡೂ ಹೆಣ್ಣುಮಕ್ಕಳಿಗಾಗಿಯೇ ಇದ್ದಂಥವು. ಅದರೆ ಈಗ ಅವಳು ಸೇರಿದ್ದ ಸರ್ಕಾರಿ ಕಾಲೇಜು ಹುಡುಗಿಯರು ಮತ್ತು ಹುಡುಗರು ಒಟ್ಟಾಗಿಯೇ ಇರುವ ಸಹಶಿಕ್ಷಣದ ಕಾಲೇಜಾಗಿತ್ತು. ಕಾಲೇಜಿನ ವಾತಾವರಣ ಶಾಲೆಯ ವಾತಾವರಣಕ್ಕಿಂತ ತೀರ ಬೇರೇಯದೇ ಆಗಿತ್ತು. ಪದವಿ ಪೂರ್ವದಿಂದ ಪದವಿಯವರೆಗೆ ಸಾವಿರಾರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಓದುತ್ತಿದ್ದ ಕಾಲೇಜು. ಸುಸಜ್ಜಿತವಾದ ಪುಸ್ತಕ ಭಂಡಾರ ವಿದ್ಯಾರ್ಥಿಗಳ ಜ್ಞಾನದಾಹವನ್ನು ತಣಿಸಲು ಅನುಕೂಲವಾಗಿತ್ತು. ಅದರ ಉಪಯೋಗ ಪಡೆಯುತ್ತಿದ್ದವರು ಹೆಚ್ಚು ಜನ ಇರಲಿಲ್ಲವಾದರೂ ಉಯೋಗ ಪಡೆಯಬೇಕೆನ್ನುವವರಿಗೆ ಅದರಿಂದ ಆಗುತ್ತಿದ್ದ ಪ್ರಯೋಜನ ಅಪಾರ. ಹುಡುಗಿಯರ ಜೊತೆಗೆ ಹೆಚ್ಚು ಜನ ಬುದ್ಧಿವಂತ ಹುಡುಗರೂ ಇದ್ದ ಸೆಕ್ಷನ್ ಆಗಿದ್ದ ವಸುಂಧರಾಳ ತರಗತಿ ಅನೇಕ ರೀತಿಯಲ್ಲಿ ಎಲ್ಲರ ಮನೋವಿಕಾಸಕ್ಕೆ ಕಾರಣವಾಗಿತ್ತು. ಶಾಲೆಯಲ್ಲಾದರೆ ಅಧ್ಯಾಪಕರ ಭಯ ಇರುತ್ತಿತ್ತು. ಇಲ್ಲಿ ಅಂಥ ಭಯದ ವಾತಾವರಣವಿಲ್ಲದೆ ಮುಕ್ತ ವಾತಾವರಣವಿತ್ತು. ತರಗತಿ ತಗೆದುಕೊಳ್ಳುತ್ತಿದ್ದ ಹೆಚ್ಚು ಅಧ್ಯಾಪಕರು ನುರಿತವರಾಗಿದ್ದರು. ಅವರೊಂದಿಗೆ ತರುಣ, ಬುದ್ಧಿವಂತ ಹಾಗೂ ಉತ್ಸಾಹಶಾಲಿ ಅಧ್ಯಾಪಕರೂ ಸಾಕಷ್ಟು ಸಂಖ್ಯೆಯಲ್ಲಿದ್ದದ್ದರಿಂದ ಬಹಳಷ್ಟು ವಿದ್ಯಾರ್ಥಿಗಳು ತರಗತಿಗೆ ಚಕ್ಕರ್ ಹೊಡೆಯದೆ ಹಾಜರಾಗುತ್ತಿದ್ದರು. ಸುಮಾರು ಎಪ್ಪತ್ತು ಜನ ವಿದ್ಯಾರ್ಥಿಗಳಿದ್ದ ವಸುಂಧರಾಳ ತರಗತಿ ಬುದ್ಧಿವಂತ ವಿದ್ಯಾರ್ಥಿಗಳ ತರಗತಿಯೆಂದು ಬಹುಜನ ಅಧ್ಯಾಪಕರ ಅಭಿಪ್ರಾಯವಾಗಿತ್ತು.

ಅವರಿಗೆ ತರಗತಿ ತೆಗೆದುಕೊಳ್ಳುತ್ತಿದ್ದ ಅಧ್ಯಾಪಕರಲ್ಲಿ ಕೆಲವರು ತಮ್ಮದೇ ಆದ ಬೋಧನಾ ವಿಧಾನ, ಶೈಲಿ, ವಿಷಯ ಜ್ಞಾನ, ವಿದ್ಯಾರ್ಥಿಗಳ ವಿಷಯಕ್ಕೆ ತೋರುತ್ತಿದ್ದ ಅಕ್ಕರೆ ಮೊದಲಾದುವುಗಳ ಕಾರಣಕ್ಕಾಗಿ ವಿದ್ಯಾರ್ಥಿಗಳಿಗೆ ಮೆಚ್ಚುಗೆಯವರೂ ಹತ್ತಿರದವರೂ ಆಗಿದ್ದರು. ಇತಿಹಾಸ ಬೋಧಿಸುತ್ತಿದ್ದ ಎನ್. ಎಸ್. ಮಾಸ್ಟರು, ಸಮಾಜಶಾಸ್ತ್ರ ಬೋಧಿಸುತ್ತಿದ್ದ ಎಸ್ ಆರ್. ಮಾಸ್ಟರು, ಕನ್ನಡ ಬೋಧಿಸುತ್ತಿದ್ದ ಎಸ್. ಎಮ್ ಟೀಚರ್(ಮಮತಾ) ಆಂಗ್ಲ ಭಾಷೆ ಕಲಿಸುತ್ತಿದ್ದ ರಘುಪತಿ ಮಾಸ್ಟರ್ ಇವರುಗಳು ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನವರಾಗಿದ್ದರು. ತರಗತಿಯಲ್ಲಿ ಮಾಡಿದ ಪಾಠದ ಬಗ್ಗೆ ಏನಾದರೂ ಸಂದೇಹಗಳಿದ್ದರೆ ತರಗತಿ ಮುಗಿದ ನಂತರ ಸ್ಟ್ಯಾಫ್ ರೂಮಿನಲ್ಲಿ ತಮ್ಮನ್ನು ಭೇಟಿ ಮಾಡಿ ಸಂದೇಹಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಅಧ್ಯಾಪಕರೆಲ್ಲರೂ ಸಾಮಾನ್ಯವಾಗಿ ಹೇಳಿರುತ್ತಿದ್ದರು. ವಸುಂಧರಾ ಮತ್ತು ಹೇಮಾ ಇತಿಹಾಸ ವಿಷಯದ

ಬಗ್ಗೆ ಕೆಲವು ಸಲ ಜೊತೆಯಾಗಿ ಹೋಗಿ ಎನ್.ಎಸ್(ಶ್ರೀನಿವಾಸ್) ಮಾಸ್ಟರ್ ಅವರನ್ನು ಭೇಟಿಮಾಡಿದ್ದರು. ವಿಜಯನಗರದ ಇತಿಹಾಸದ ಬಗ್ಗೆ ತುಂಬಾ ರೋಚಕವಾಗಿ ಪಾಠಮಾಡುತ್ತಿದ್ದ ಎನ್. ಎಸ್. ಮಾಸ್ಟರ್ ಅವರು "if you don't know History, you don't know any thing. You are a leaf that doesn't know it is a part of a tree" ಎಂಬ michael chrichtonನ ಪ್ರಸಿದ್ಧ ಮಾತನ್ನು ಹೇಳಿ ವಿದ್ಯಾರ್ಥಿಗಳಿಗೆ ಇತಿಹಾಸದ ಪ್ರಾಮುಖ್ಯತೆ ಕುರಿತು ಮನದಟ್ಟು ಮಾಡಿಕೊಡುತ್ತಿದ್ದರು.

ಒಮ್ಮೆ ಇತಿಹಾಸದ ವಿಷಯದಲ್ಲಿ ತನ್ನ ಕೆಲವು ಅನುಮಾನಗಳನ್ನು ಬಗೆಹರಿಸಿಕೊಳ್ಳಲು ವಸುಂಧರಾ ಮತ್ತು ಹೇಮಾ ಇಬ್ಬರೂ ಎನ್.ಎಸ್. ಮಾಸ್ಟರ್ ಅವರನ್ನು ಸ್ಟ್ಯಾಫ್ ರೂಮ್‌ನಲ್ಲಿ ಭೇಟಿಯಾದರು. ಮಾತಿನ ಮಧ್ಯೆ ವಸುಂಧರಾ – "ಅಲ್ಲ ಸರ್, ನಮಗೆ ನೆನ್ನೆ ಮೊನ್ನೆ ಇದ್ದ ಪ್ರಖ್ಯಾತ ವ್ಯಕ್ತಿಗಳ ಬಗ್ಗೇನೇ ಸರಿಯಾಗಿ ಗೊತ್ತಿಲ್ಲ. ಉದಾಹರಣೆಗೆ ಕನ್ನಡದ ಮುದ್ದಣನ ಬಗ್ಗನೇ ತೆಗೆದುಕೊಳ್ಳಿ. ಅವನು ತನ್ನ ಹೆಸರಾದ ನಂದಳಿಕೆ ಲಕ್ಷ್ಮೀನಾರಾಯಣಯ್ಯ ಅನ್ನೋ ಹೆಸರಿನಲ್ಲಿ ತನ್ನ ಕೃತಿಗಳನ್ನು ಕಳಿಸಿದರೆ ಎಲ್ಲಿ ಪ್ರಕಾಶಕರು ಅದನ್ನು ಅಚ್ಚು ಮಾಡಲ್ಲವೋ ಅಂತ ಮೈಸೂರಿನ ಕಾವ್ಯಮಂಜರಿಯವರಿಗೆ 'ಮುದ್ದಣ' ಅನ್ನುವ ಹೆಸರಿನಲ್ಲಿ ಕಳಿಸಿಕೊಟ್ಟನಂತೆ. ಅದನ್ನು ಅವರು ಅಚ್ಚು ಮಾಡಿದರು. ಕೊನೆಗೆ ಮುದ್ದಣ ತೀರಿಕೊಂಡ ಮೇಲೆ ಇವುಗಳನ್ನು ಬರೆದವನು ಮುದ್ದಣನೋ ನಂದಳಿಕೆ ಲಕ್ಷ್ಮೀನಾರಣಪ್ಪನೋ ಎಂದು ಕೃತಿಗಳ ಕರ್ತೃತ್ವದ ಕುರಿತಾದ ವಿವಾದ ಎದ್ದಾಗ ಪಂಜೆಯವರು ಆ ಬಗ್ಗೆ – "ಇಲ್ಲ ಇವುಗಳನ್ನೆಲ್ಲಾ ಬರೆದವರು ನಂದಳಿಕೆಯವರೇ. ಆ ಬಗ್ಗೆ ತನಗೂ ನಂದಳಿಕೆ(=ಮುದ್ದಣ) ಯವರಿಗೂ ನಡೆದ ಮಾತುಕತೆಯ ವಿಷಯ, ಮಂಗಳೂರು ಸರ್ಕಾರೀ ಕಾಲೇಜಿನ ಕನ್ನಡ ಅಧ್ಯಾಪಕನ ಕೆಲಸಕ್ಕೆ ತಾವಿಬ್ಬರೂ ಅರ್ಜಿ ಹಾಕಿದ್ದು, ತಮಗೆ ಇಂಗ್ಲಿಷ್ ಜ್ಞಾನ ಇದೆ ಅನ್ನುವ ಕಾರಣಕ್ಕೆ ತಮ್ಮನ್ನು ಆಯ್ಕೆ ಮಾಡಿದ್ದು ಎಲ್ಲ ಹೇಳಿದ ಮೇಲೆ ಮುದ್ದಣ ಮತ್ತು ನಂದಳಿಕೆ ಲಕ್ಷ್ಮೀನಾರಾಯಣಪ್ಪ ಇಬ್ಬರೂ ಒಬ್ಬರೇ ಅಂತ ಖಚಿತವಾಯಿತು. ಇಲ್ಲದೆ ಇದ್ದರೆ ಅದೂ ಸಂದೇಹದಲ್ಲೇ ಉಳಿದುಬಿಡುತಿತ್ತು. ಭಾರತೀಯರಿಗೆ ಐತಿಹಾಸಿಕ ಪ್ರಜ್ಞೆ ತೀರ ಕಡಮೆ. ಯಾವುದರ ದಾಖಲೆಯನ್ನೂ ಇಡಲ್ಲ. ಇನ್ನು ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದಂತೆ ಮುಸಲ್ಮಾನರು ದ್ರೋಹ ಬಗೆದ ಬಗ್ಗೆ ಅಷ್ಟೇ ಖಚಿತವಾಗಿ ಹೇಳೋಕೆ ಏನು ಆಧಾರವಿದೆ ಸರ್" ಎಂದೆಲ್ಲಾ ವಾದಿಸಿದಳು. ಮೇಷ್ಟ್ರು ಹುಡುಗಿಯ ವಾದಸ್ಪಷ್ಟತೆ, ಅಸ್ಖಲಿತ ಮಾತುಗಾರಿಕೆ, ಧೈರ್ಯ ಎಲ್ಲ ನೋಡಿ ತುಂಬಾ ಸಂತೋಷ ಪಟ್ಟುಕೊಂಡರು. ಆಮೇಲೆ– "ನೋಡಿ, ನೀವು ಹೇಳೋದು ಪೂರ್ತಿ ತಪ್ಪಲ್ಲ. ಭಾರತದ ಇತಿಹಾಸವನ್ನು ಬರೆಯುವವರಿಗೆ ನಮ್ಮಲ್ಲಿ ಸಮಸ್ಯೆಗಳು ಇವೆ ಅನ್ನುವುದು ನಿಜ. ಆದರೆ, ಹಾಗಂತ ಆಧಾರಗಳೇ ಇಲ್ಲ, ದಾಖಲೆಗಳೇ ಇಲ್ಲ ಅಂತ ಹೇಳಕ್ಕೆ ಆಗಲ್ಲ. ಆ ಕಾಲದ ಕೆಲವು ಕವಿಗಳ ಕೃತಿಗಳು, ಆಯಾ ಕಾಲದ ರಾಜರುಗಳೇ ಹಾಕಿಸಿರುವ ಶಾಸನಗಳು, ಭೂಮಿಯ ಉತ್ಖನನ ಮಾಡಿದಾಗ ದೊರೆಯುವ ನಾಣ್ಯಗಳು, ಮುಂದೆ ಬಂದವರು ಹಾಕಿಸಿದ ಶಾಸನಗಳು, ಬಖೈರುಗಳು, ವಿದೇಶೀ ಪ್ರವಾಸಿಗಳು ಬರೆದಿರುವ

ಬರಹದ ದಾಖಲೆಗಳು, ಇವೆಲ್ಲವನ್ನೂ ನೋಡಬೇಕಾಗುತ್ತದೆ. ಅದಕ್ಕಾಗಿ ಸಂಶೋಧನೆ ನಡೆಸಬೇಕಾಗುತ್ತದೆ. ನೀವು ಮುಂದೆ ಇತಿಹಾಸವನ್ನೇ ಮುಖ್ಯ ವಿಷಯವನ್ನಾಗಿ ಆರಿಸಿಕೊಂಡು ಎಂ.ಎ. ಮಾಡಿದರೆ ಆಗ ಇದೆಲ್ಲ ಗೊತ್ತಾಗುತ್ತೆ ಎಂದು ಹೇಳಿದರು. ಹಾಗೆ ಹೇಳಿ "ಹೌದು ನಿಮಗೆ ಮುದ್ದಣನ ವಿಷಯ ಹೇಗೆ ಗೊತ್ತಾಯಿತು. ಕನ್ನಡ ಸಾಹಿತ್ಯವನ್ನು ನೀವು ತುಂಬ ಓದಿಕೊಂಡಿರೋ ಹಾಗೆ ಕಾಣಿಸುತ್ತೆ" ಅಂದರು. ಪಕ್ಕದಲ್ಲಿಯೇ ಇದ್ದ ಹೇಮಾ– "ಅಯ್ಯೋ ಇವಳು ಕನ್ನಡ ಸಾಹಿತ್ಯವನ್ನು ಅರೆದು ಕುಡಿದು ಬಿಟ್ಟಿದ್ದಾಳೆ ಸರ್. ಇವಳು, ಇವರಮ್ಮ ಓದದೆ ಇರುವ ಕನ್ನಡದ ಕಾದಂಬರೀನೇ ಇಲ್ಲಾ" ಎಂದಳು. ವಸುಂಧರಾ ಹೇಮಾಳನ್ನು ಮೆಲ್ಲಗೆ ಜಿಗುಟಿದಳು. ಮೇಷ್ಟರು – "ಹೌದಾ ಅಷ್ಟೊಂದು ಕಾದಂಬರಿ ಓದ್ತೀರಾ" ಅಂತ ಕೇಳಿದರು. ವಸುಂಧರಾ – "ಇಲ್ಲ ಸರ್, ಬೇರೆ ಹುಡುಗರು ಪಠ್ಯ ವಿಷಯ ಬಿಟ್ಟು ಇತರೆ ಪುಸ್ತಕಗಳನ್ನು, ಕಾದಂಬರಿಗಳನ್ನು ಓದಿರೋದು ಕಡಮೆ ಅಲ್ಲವಾ ಸರ್. ಅದಕ್ಕೆ ಇವಳಿಗೆ ನಾನು ಓದಿರೋದು ತುಂಬಾ ಜಾಸ್ತಿ ಅನ್ನಿಸಿ ಅದನ್ನೇ ದೊಡ್ಡದು ಮಾಡಿ ಹೇಳ್ತಾ ಇದ್ದಾಳೆ ಅಷ್ಟೆ. ನಾನು ಓದಿರೋದು ಎಲ್ಲೋ ಕೆಲವು ಮಾತ್ರ ಸರ್" ಎಂದು ನಾಚಿಕೆಯಿಂದ ಮುಗುಳ್ನಕ್ಕಳು. "ಹಾಗಾದರೆ ಈಗ ಹೇಳಿ ತ.ರಾ.ಸು, ಬಿ. ಪುಟ್ಟಸ್ವಾಮಯ್ಯ, ಕೆ. ವಿ. ಅಯ್ಯರ್ ಇವರ ಕಾದಂಬರಿಗಳನ್ನು ನೀವು ಓದಿರಬೇಕಲ್ಲವೆ?" "ಪುಟ್ಟಸ್ವಾಮಯ್ಯನವರದ್ದು ಓದಿಲ್ಲ, ಆದರೆ ತರಾಸು ಕೆ.ವಿ. ಅಯ್ಯರ್ ಮತ್ತು ಶ್ರೀನಿವಾಸರಾವ್ ಕೊರಟಿಯವರ ಕೆಲವು ಕಾದಂಬರಿಗಳನ್ನು ಓದಿದ್ದೀನಿ ಸರ್." "ವೆರಿ ಗುಡ್. 'ಹಂಸಗೀತೆ' ಓದಿದ್ದೀರಲ್ಲ ಅದು ನಿಜವಾಗಿ ಐತಿಹಾಸಿಕ ಕಾದಂಬರೀನಾ, ಜೊತೆಗೆ ದುರ್ಗಾಸ್ತಮಾನದಲ್ಲಿ ಎಷ್ಟರ ಮಟ್ಟಿಗೆ ಅವರು ಇತಿಹಾಸಕ್ಕೆ ಬದ್ಧರಾಗಿದ್ದಾರೆ?" "ಏನೋ ಸರ್. ಅಷ್ಟೆಲ್ಲಾ ಗೊತ್ತಾಗೋಲ್ಲ." "ನೋಡಿ ಸೃಜನಶೀಲ ಲೇಖಕರು ಇತಿಹಾಸದ ಯಾವುದೋ ಒಂದು ಎಳೆ ತೆಗೆದುಕೊಂಡು ತಮ್ಮ ಅದ್ಭುತ ಕಲ್ಪನೆ ಬಳಸಿ ಅಷ್ಟು ದೊಡ್ಡ ಕಾದಂಬರಿ ಬರೆದುಬಿಡುತ್ತಾರೆ. ಇತಿಹಾಸದಲ್ಲಿ ನಮಗೆ ಅಲ್ಲಿಯ ವ್ಯಕ್ತಿಗಳ ಬಗ್ಗೆ ಸಿಕ್ಕುವುದು ಕೇವಲ ಕೆಲವೊಂದು ಎಳೆಗಳು ಮಾತ್ರ. ಆ ಕಾಲದ ಜನಜೀವನ, ಅವರ ನಡೆ, ನುಡಿ, ವ್ಯವಹಾರ, ಒಟ್ಟಾರೆ ಅವರ ವ್ಯಕ್ತಿತ್ವವನ್ನು ಬರಹಗಾರರು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವುದು ತಮ್ಮ ಕಲ್ಪನಾ ಶಕ್ತಿಯಿಂದ. ಐತಿಹಾಸಿಕ ಕಾದಂಬರಿಗಳು ಅನ್ನುವ ಶೀರ್ಷಿಕೆಯ ಅನೇಕ ಕಾದಂಬರಿಗಳಲ್ಲಿ ಇತಿಹಾಸದ ವಸ್ತು ಸಂಗತಿಯೊಂದನ್ನು ಬಿಟ್ಟು ಇನ್ನೆಲ್ಲವೂ ಇರುತ್ತದೆ. ನಿಮಗೆ ಗೊತ್ತಾ 'ಹಂಸಗೀತೆ' ಐತಿಹಾಸಿಕ ಕಾದಂಬರೀನೆ ಅಲ್ಲ. ಅಲ್ಲಿ ಬರೋ ಭೈರವಿ ವೆಂಕಟಸುಬ್ಬಯ್ಯ ಲೇಖಕನ ಸೃಷ್ಟಿ. ಹೈದರಾಲಿ ಅವನ ಸಂಗೀತ ಕೇಳಲು ಇಷ್ಟಪಟ್ಟದ್ದು ಎಲ್ಲ ಕಾದಂಬರಿಕಾರರ ಕಲ್ಪನೆ. ಆದರೆ ಇತಿಹಾಸದ ತಲೆಮೇಲೆ ಹೊಡೆದ ಹಾಗೆ ಆ ಕಾದಂಬರಿ ಇದೆ. ಅನೇಕರು ಅದನ್ನು ಐತಿಹಾಸಿಕ ಕಾದಂಬರಿ ಎಂದು ಭ್ರಮಿಸಿದ್ದೂ ಉಂಟು. ಇತಿಹಾಸದ ಒಂದೆರಡು ವಸ್ತು ಸಂಗತಿ ಆಧರಿಸಿ ಕಾದಂಬರಿಕಾರ, ನಾಟಕಕಾರರು ಒಂದು ಅದ್ಭುತ ಬಿಂಬವನ್ನು, ಅಪೂರ್ವ ಲೋಕವನ್ನು ನಿರ್ಮಿಸಿಬಿಡುತ್ತಾರೆ. ಇವನ್ನು ಇಟ್ಟುಕೊಂಡು ಕೆಲವರು ಈ ಲೇಖಕರು ಇತಿಹಾಸಕ್ಕೆ ನ್ಯಾಯ ಸಲ್ಲಿಸಿಲ್ಲ ಅಂತೆಲ್ಲ ವ್ಯಾಜ್ಯ ತೆಗೀತಾರೆ. ಅದೆಲ್ಲ ಅರ್ಥವಿಲ್ಲದ್ದು.

ಅದೆಲ್ಲ ಸೃಜನಶೀಲ ಲೇಖಕನಿಗೆ ಇರುವ ಸ್ವಾತಂತ್ರ್ಯ. ಯಾವಾಗಲೂ ಇತಿಹಾಸ ಮತ್ತು ಸಾಹಿತ್ಯ ಜೊತೆಜೊತೆಯಲ್ಲಿ ಸಾಗುತ್ತವೆ. ಸಾಹಿತ್ಯದವರಿಗೆ ಇತಿಹಾಸದ ಜ್ಞಾನ ಇರಲೇಬೇಕು. ಹಾಗೇನೇ ಇತಿಹಾಸದವರಿಗೂ ಸಾಹಿತ್ಯದ ಜ್ಞಾನದ ಜೊತೆಗೆ ತಮಗೆ ಗೊತ್ತಿರುವ ಇತಿಹಾಸವನ್ನು ಸಮರ್ಥವಾಗಿ ಪ್ರಸ್ತುತ ಪಡಿಸಲು ಭಾಷಾ ಸಾಹಿತ್ಯಗಳ ಜ್ಞಾನ ಚೆನ್ನಾಗಿ ಇರಬೇಕಾಗುತ್ತೆ. ಹಿಂದಿನ ವಿದ್ವಾಂಸರಾದ ಶ್ರೀಕಂಠಶಾಸ್ತ್ರಿಗಳಾಗಲಿ, ಎಂ. ಎಚ್. ಕೃಷ್ಣ ಅವರಾಗಲಿ ಇತಿಹಾಸದ ಜೊತೆಗೆ ಸಾಹಿತ್ಯದ ಕುರಿತಾಗಿ ತುಂಬಾ ಒಳ್ಳೆಯ ಜ್ಞಾನ ಇದ್ದವರು. ಹಾಗೆಯೇ ಕನ್ನಡ ವಿದ್ವಾಂಸರುಗಳಾದ ಡಿ. ಎಲ್. ಎನ್, ತೀನಂಶ್ರೀ, ಡಾ. ಚಿದಾನಂದಮೂರ್ತಿ, ಡಾ. ತಿಪ್ಪೇರುದ್ರಸ್ವಾಮಿ ಕಲ್ಬುರ್ಗಿ ಇವರುಗಳೆಲ್ಲಾ ಇತಿಹಾಸವನ್ನೂ ಚೆನ್ನಾಗಿ ತಿಳಿದಿದ್ದವರು. ಈ ಅಭ್ಯಾಸವನ್ನು ಮುಂದುವರಿಸಿ. ಕೀಪ್ ಇಟ್ ಅಪ್" ಎಂದರು. ಹುಡುಗಿಯರಿಬ್ಬರೂ ತೃಪ್ತರಾಗಿ ನಗುತ್ತಾ ಹೊರಬಂದರು.

ವಸುಂಧರಾ ಮತ್ತು ಹೇಮಾ ಕಂಬೈನ್ಡ್ ಸ್ಟಡಿ ಮಾಡ್ತಾ ಇದ್ದದ್ದೂ ಉಂಟು. ಒಂದೊಂದು ಸಲ ಇವರ ಮನೆಯಲ್ಲಾದರೆ ಒಂದೊಂದು ಸಲ ಅವರ ಮನೆಯಲ್ಲಿ. ಆದರೆ ಎರಡೂ ಮನೆಗಳ ಹಿರಿಯರು ಅವರವರ ಮನೆಗಳ ಆಹಾರವನ್ನೇ ಸೇವಿಸಬೇಕು ಎಂದು ಲಕ್ಷ್ಮಣ ರೇಖೆ ವಿಧಿಸಿದ್ದರೂ ಅವರುಗಳಿಗೆ ಗೊತ್ತಾಗದ ಹಾಗೆ ಗೆಳತಿಯರು ಅವುಗಳನ್ನು ಮೀರುವ ಕೆಲಸ ಮಾಡುತ್ತಲೇ ಇದ್ದರು. ಸ್ನೇಹದ ಮುಂದೆ ಈ ಥರದ ಚಿಲ್ಲರೆ ಜಾತೀಯ ಕಟ್ಟುಪಾಡುಗಳು ಲೆಕ್ಕಕ್ಕಿಲ್ಲದವು ಎಂಬುದನ್ನು ಅವರ ಮನಸ್ಸುಗಳು ಎಂದೋ ಮನಗಂಡಿದ್ದವು.

ಅಧ್ಯಾಯ–2

ನರಸಿಂಹ ಜೋಯಿಸರದು ತುಮಕೂರಿನ ವೈದಿಕ ಮಂಡಲಿಯಲ್ಲಿ ತುಂಬ ಪ್ರಸಿದ್ಧವಾದ ಹೆಸರು. ವೈದಿಕ ವೃತ್ತಿ ಅವರ ಮನೆತನಕ್ಕೆ ಅನೂಚಾನವಾಗಿ ಬಂದದ್ದು. ಅವರ ತಂದೆಯ ಹಾಗೇನೇ ಶುಭ ಕರ್ಮಗಳು ಮತ್ತು ಅಪರ ಕರ್ಮಗಳು ಎರಡೂ ಬಗೆಯ ಕರ್ಮಗಳಲ್ಲಿ ಅವರು ನಿಷ್ಣಾತರು. ಶೃಂಗೇರಿಯಲ್ಲೇ ವೇದಾಭ್ಯಾಸ ಮಾಡಿಬಂದವರಾದ ಕಾರಣ ಎಲ್ಲದರಲ್ಲೂ ಪರಿಣತಿ ಹೊಂದಿದ್ದರು.

ಜೋಯಿಸರಿಗೆ ವೈದಿಕ ವೃತ್ತಿ ಒಂದು ಉಪ ಕಸುಬಾಗಿತ್ತು ಅಷ್ಟೆ. ವೇದ ವಿದ್ಯೆಯ ಬಗ್ಗೆ ಅವರಿಗೆ ಎಷ್ಟೇ ಶ್ರದ್ಧೆ ಇದ್ದರೂ ವೈದಿಕ ವೃತ್ತಿಯನ್ನು ಮುಖ್ಯ ಕಸುಬಾಗಿ ಅಳವಡಿಸಿಕೊಂಡರೆ ಅದರಿಂದಲೇ ಜೀವನ ಸುರಳೀತವಾಗಿ ಸಾಗುತ್ತೆ ಅನ್ನುವ ನಂಬಿಕೆ ಇರಲಿಲ್ಲ. ಹೊಸ ಕಾಲದಲ್ಲಿ ಜನಗಳಿಗೆ ಮೊದಲಿನ ಶ್ರದ್ಧೆ ನಂಬಿಕೆಗಳು ಉಳಿದಿಲ್ಲ ಅಂತ ಅವರಿಗೆ ಗೊತ್ತಿತ್ತು. ಇನ್ನು ವೈದಿಕ ವೃತ್ತಿಯ ಪುರೋಹಿತರ ಬಗ್ಗೆ ಸಮಾಜದಲ್ಲಿ ಇರುವ ಗೌರವವೂ ಅಷ್ಟರಲ್ಲೇ ಇದೆ ಎಂಬುದನ್ನು ಅವರು ಎಂದೋ ಕಂಡುಕೊಂಡಿದ್ದರು. ಬೇರೆ ಜಾತಿಗಳವರು ಹಾಗಿರಲಿ ಬ್ರಾಹ್ಮಣರುಗಳಲ್ಲೇ ಸಂಪ್ರದಾಯ ಬಿಡಬಾರದು ಅನ್ನುವ ಕಾರಣಕ್ಕೆ ವ್ರತ, ಪೂಜೆ, ಪುನಸ್ಕಾರ, ತಿಥಿಮತಿಗಳನ್ನು ಮಾಡಿಸುತ್ತ ಇದ್ದಾರೆ. ಆದರೆ ಅದನ್ನು ಮಾಡಿಸುವ ಪುರೋಹಿತರ ವಿಷಯಕ್ಕೆ ಹೊರಗಡೆ ಗೌರವ ತೋರಿಸಿದರೂ ಹಿಂದುಗಡೆ 'ದರ್ಭೆ ಬ್ರಾಹ್ಮಣ, ಪರಾನ್ನದ ಬ್ರಾಹ್ಮಣ' ಅಂತ ಆಡಿಕೊಳ್ಳುತ್ತಾರೆ ಅನ್ನುವುದೂ ಅವರಿಗೇನೂ ಗೊತ್ತಿಲ್ಲದ ಸಂಗತಿಯಲ್ಲ. ಹಾಗಾಗಿ ಅದನ್ನು ಒಂದು ಉಪ ಕಸುಬಾಗಿ ಇಟ್ಟುಕೊಂಡಿದ್ದರು.

ಒಂದು ಖಾಸಗಿ ಪ್ರೌಢಶಾಲೆಯಲ್ಲಿ ಅವರ ಇಂಟರ್ ಮೀಡಿಯಟ್ ಕೋರ್ಸ್ ವಿದ್ಯಾರ್ಹತೆಗೆ ದೊರಕಿದ್ದ ಗುಮಾಸ್ತ ಹುದ್ದೆಯನ್ನೇ ಮುಖ್ಯ ವೃತ್ತಿಯಾಗಿ ಅಳವಡಿಸಿಕೊಂಡಿದ್ದರು. ಯಾರಾದರೂ ತುಂಬ ಒತ್ತಾಯ ಮಾಡಿದರೆ ಇಲ್ಲವೆ ಬಹಳ ಬೇಕಾದ ಬಂಧು ಬಳಗದವರು ಆಗಿದ್ದರೆ ಅಂಥವರ ಮನೆಗಳಿಗೆ, ಅದೂ ತಮಗೆ ರಜಾ ದೊರೆಯುವಂತಿದ್ದರೆ, ಇಲ್ಲವೆ ಭಾನುವಾರವೋ ಸಾರ್ವತ್ರಿಕ ರಜಾದಿನವೋ ಆಗಿದ್ದರೆ, ಮಾತ್ರ ವ್ರತ, ಪೂಜೆ, ಮಾಡಿಸಲು ಹೋಗುತ್ತಿದ್ದರು. ಇನ್ನು ಅಪರ ಕರ್ಮವನ್ನು ಮಾಡಿಸಲು ಹೋಗುತ್ತಾ ಇದ್ದದ್ದು ಕೂಡ ರಜೆಯ ಅನುಕೂಲ ನೋಡಿಕೊಂಡು ಬಹಳ ವಿರಳವಾಗಿ ತುಂಬ ಒತ್ತಾಯ ಬಂದಾಗ ಮಾತ್ರ.

ಜೋಯಿಸರದು ಮೊದಲಿನಿಂದಲೂ ಸ್ವಲ್ಪ ಪ್ರತಿಷ್ಠೆಯ ಸ್ವಭಾವ. ಈಗ ತಿಂಗಳ ಸಂಬಳ ತರುವ ವೃತ್ತಿಯನ್ನು ಕೈಯಲ್ಲಿಟ್ಟುಕೊಂಡು, ಅದರ ಜೊತೆಗೆ ವೈದಿಕ ವಿದ್ಯೆಯ

ಪರಿಣತಿಯೂ ಸೇರಿಕೊಂಡು ಆ ಅಹಂ ಅನೇಕ ವೇಳೆ ಔಚಿತ್ಯವನ್ನೂ ಮೀರಿಯೇ ಪ್ರಕಟವಾಗುತ್ತಿತ್ತು. ಜೊತೆಗೆ ಯಾವಾಗಲೂ ಕೋಪ ಅನ್ನುವುದು ಮೂಗಿನ ತುದಿಯಲ್ಲೇ ಇರುತ್ತಿತ್ತು. ಅದಕ್ಕೆ ತನ್ನವರು, ಪರರು, ಹೆಣ್ಣು, ಗಂಡು ಆ ಜಾತಿ ಈ ಜಾತಿ ಅಂತ ಯಾವುದೇ ಭೇದಭಾವ ಇರುತ್ತಿರಲಿಲ್ಲ. ಮಾತು ಆಡೋದು ಅಂದರೆ ಆಡೋದೇ.

ಆದರೆ ಅವರ ಹೆಂಡತಿ ಸಾವಿತ್ರಮ್ಮನವರು ಈ ವಿಷಯದಲ್ಲಿ ಗಂಡನ ಸ್ವಭಾವಕ್ಕೆ ತದ್ವಿರುದ್ಧ ಸ್ವಭಾವದ ಹೆಂಗಸು. ಗಂಡ ಶೀಘ್ರಕೋಪಿಯಾದರೆ, ಹೆಂಡತಿ ಅತ್ಯಂತ ಸಮಾಧಾನಿ. ಅವರು ಕೋಪ ಮಾಡಿಕೊಂಡದ್ದನ್ನು ಯಾವತ್ತೂ ಯಾರೂ ನೋಡಿಯೇ ಇರಲಿಲ್ಲ. ಗಂಡನ ಸ್ವಭಾವದ ಪರಿಚಯವಿದ್ದ ಆಕೆ ಎಲ್ಲಕ್ಕೂ ಹೊಂದಿಕೊಂಡು ಹೋಗುತ್ತಿದ್ದರು. ಅಕ್ಕಪಕ್ಕದವರು, ನೆಂಟರು, ಇಷ್ಟರು, ಅಷ್ಟೇ ಏಕೆ ಮನೆಕೆಲಸದ ಆಳು ಕಾಳು ಎಲ್ಲರ ಹತ್ತಿರವೂ ನಗುನಗುತ್ತ ಮಾತಾಡಿಸುತ್ತ ಎಲ್ಲರ ವಿಷಯಕ್ಕೂ ಪ್ರೀತಿ ವಿಶ್ವಾಸದಿಂದ ನಡೆದುಕೊಳ್ಳುವ ಸ್ವಭಾವ. ಗಂಡ ಸಿಟ್ಟಿನಲ್ಲಿ ಏನಾದರೂ ಮಾತಾಡೋಕೆ ಶುರು ಮಾಡಿದರೆ ಮಧ್ಯೆ ಪ್ರವೇಶಿಸಿ ಅವರೇ ಕೋಪಕ್ಕೆ ಗುರಿಯಾದವರ ಪರವಾಗಿ ಮಾತಾಡಿ ಜೋಯಿಸರ ಕೋಪವನ್ನು ತಗ್ಗಿಸುವ ಕೆಲಸವನ್ನು ಮಾಡುತ್ತ ಇದ್ದರು. ಅವರ ಇಂಥ ಸ್ವಭಾವದಿಂದಾಗಿಯೇ ಜೋಯಿಸರು ಏನೇ ಅಂದರೂ ಆಡಿದರೂ ಯಾರೂ ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳುತ್ತಿರಲಿಲ್ಲ. ಒಂದು ಕಡೆ ಅವರ ಮನೆಯ ಹಾಲ್‌ನಲ್ಲಿ ಬೆಳಿಗ್ಗೆ ರೇಡಿಯೋದಿಂದ–" ಕೌಸಲ್ಯಾ ಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ" ಎಂಬ ಎಂ.ಎಸ್. ಸುಬ್ಬಲಕ್ಷ್ಮಿಯವರ ಸುಶ್ರಾವ್ಯವಾದ ವೆಂಕಟೇಶ್ವರ ಸುಪ್ರಭಾತ ಕೇಳಿಬರುತ್ತಿದ್ದರೆ ಇನ್ನೊಂದು ಕಡೆ ಎರಡು ಮೂರು ದಿನಕ್ಕೊಮ್ಮೆ ಬೆಳ್ಳಂಬೆಳಿಗ್ಗೆಯೇ ಹಿತ್ತಲ ಬಾಗಿಲಿನಲ್ಲಿ ಹಾಜರಾಗುತ್ತಿದ್ದ ಕ್ಷೌರಿಕ ರಂಗಸ್ವಾಮಿ ಇನ್ನೂ ದೂರದಿಂದಲೇ– "ನರಸುಮ್ಮ ಜೋಸ್ರೇ, ಎದ್ರಾ, ನರುಸುಮ್ಮ ಜೋಸ್ರೇ ಎದ್ರಾ" ಎಂದು ಜೋರಾಗಿ ಕೂಗುತ್ತಾ ಇರೋದು ಮಾಮಾಲು. ಅವನ ಧ್ವನಿ ಕೇಳಿದರೆ ಸಾಕು, ಜೋಯಿಸರಿಗೆ ಮೈಯೆಲ್ಲಾ ಉರಿ. "ಥೂ ಹಾಳು..... ಮಗನೇ ಬಂದು ಬಿಟ್ಟೆಲ್ಲೋ ಬೆಳಗಾಗೆದ್ದು, ನಿನ್ನ ಗಂಟಲಿಗೆ ಗಾಳ ಹಾಕ, ಅದೇನು ಹಂಗೆ ಅರಚಿಕೊಂತೀಯೋ" ಎಂದು ಒಳಗಿನಿಂದಲೇ ಕೂಗು ಹಾಕಿದರೆ ಅವರ ಹೆಂಡತಿ ಸಾವಿತ್ರಮ್ಮನೋರು "ನೀವೇ ಅವನಿಗೆ ಬರಕ್ಕೆ ಹೇಳಿ ಅದು ಯಾಕೆ ಹೀಗೆ ಕೂಗಾಡಬೇಕೋ ನಾನು ಬೇರೆ ಕಾಣೆ" ಅಂತ ಹೇಳಿದರೆ "ಅಯ್ಯೋ ಬಿಡ್ರವ್ವಾ ಈ ಅಯ್ನೋರು ಯಾವಾಗಲೂ ಇಂಗೇ ಅಲ್ಲುವ್ರಾ," ಎಂದು ಅವನು ದೊಡ್ಡದಾಗಿ ಹಲ್ಲು ಕಿಸಿದು ನಕ್ಕುಬಿಡುತ್ತಿದ್ದ. ಬೇರೆ ಆಳುಕಾಳುಗಳು ಕೂಡ ಈವಯ್ಯಂದು ಯವಾಗಲೂ ಇದ್ದದ್ದೇ ಅಂತ ಅಂದುಕೊಂಡು ಕೇಳಿಸಿಯೂ ಕೇಳಿಸದವರಂತೆ ಇದ್ದುಬಿಡುತ್ತಿದ್ದರು.

ಸಾವಿತ್ರಮ್ಮನವರ ತವರು ಮನೆಯೋರು ತುರುವೇಕೆರೆ ಕಡೆಯವರಂತೆ. ಈಗ ತವರು ಮನೆಯಲ್ಲಿ ಅಪ್ಪ ಅಮ್ಮ ಯಾರೂ ಇರಲಿಲ್ಲ. ಅವರ ತಮ್ಮ ಅಪರೂಪಕ್ಕೆ ಯಾವಾಗಲಾದರೂ ಒಂದು ಸಲ ಬಂದು ಹೋಗುವುದು ಇತ್ತು. ತುಮಕೂರಿನಲ್ಲಿ ಅವರ ಮನೆಗೆ ವಿಶೇಷವಾಗಿ ಬಂದು ಹೋಗಿ ಮಾಡುತ್ತಿದ್ದವರು ಅಂದರೆ ಸಾವಿತ್ರಮ್ಮನವರ

ಚಿಕ್ಕಮ್ಮ ವಿಶಾಲಾಕ್ಷಮ್ಮನವರ ಮನೆಯವರು. ಅವರು ಅದೇ ಊರಿನಲ್ಲಿ ಇವರ ಮನೆಯಿಂದ ಒಂದು ನಾಲ್ಕು ಕಿಲೋಮೀಟರ್ ದೂರದಲ್ಲಿದ್ದ ಪಶ್ಚಿಮ ಬಡಾವಣೆಯಲ್ಲಿ ಸ್ವಂತ ಮನೆಯಲ್ಲಿ ವಾಸ ಇದ್ದರು. ಅವರ ಮಗ ಶಾಮು ಸಾವಿತ್ರಮ್ಮನವರ ಹಿರೀ ಮಗಳು ವಸುಂಧರಾಳಿಗಿಂತ ಮೂರು ನಾಲ್ಕು ವರ್ಷ ದೊಡ್ಡವನು. ಅವನ ಅಕ್ಕ ಶಾಂತಳ ಮದುವೆಯಾಗಿ ಗಂಡನ ಮನೆಗೆ ಹೋಗಿದ್ದಳು. ಇನ್ನೊಬ್ಬಳು ಅವನ ತಂಗಿ ಸರೋಜ ವಸುಂಧರಾಳಿಗಿಂತ ಎರಡು ವರ್ಷ ಚಿಕ್ಕವಳು.

ಜೋಯಿಸರಿಗೆ ಮದುವೆಯಾಗಿ ಏಳೆಂಟು ವರ್ಷಗಳವರೆಗೂ ಮಕ್ಕಳಾಗಿರಲಿಲ್ಲ. ಹಾಗೆ ತಡವಾಗಿ ಹುಟ್ಟಿದ ಮಗಳಿಗೆ ವಸುಂಧರಾ ಎಂದು ಹೆಸರಿಟ್ಟು ತುಂಬ ಮುದ್ದಿನಿಂದ ಬೆಳೆಸಿದರು. ಸಾವಿತ್ರಮ್ಮನವರ ಮದುವೆಯಾದ ನಾಲ್ಕೈದು ವರ್ಷಗಳಲ್ಲೇ ಆಕೆಯ ಅಪ್ಪ ಅಮ್ಮ ತೀರಿಕೊಂಡಿದ್ದರಿಂದ ಸಾವಿತ್ರಮ್ಮನವರ ಬಾಣಂತನವನ್ನು ಮಾಡಿದವರು ಅವರ ಚಿಕ್ಕಮ್ಮ ವಿಶಾಲಾಕ್ಷಮ್ಮನವರೇ. ಅಪ್ಪನ ಎತ್ತರದ ನಿಲುವು, ತಾಯಿಯ ಸೌಂದರ್ಯ, ಮೈಬಣ್ಣ ಮತ್ತು ಶಾಂತ ಸ್ವಭಾವವನ್ನು ಹುಟ್ಟಿನಿಂದಲೇ ಹೊತ್ತುಬಂದಿದ್ದ ವಸುಂಧರಾ ಎಲ್ಲರ ಅಚ್ಚುಮೆಚ್ಚಿನ ಹುಡುಗಿಯಾಗಿದ್ದಳು. ಅಪ್ಪನ ಹಾಗೆಯೇ ತುಂಬಾ ಚುರುಕು ಬುದ್ಧಿ, ಓದಿನಲ್ಲಿ ಸದಾ ಮುಂದು. ಅಪ್ಪನಿಗೆ ವೇದಮಂತ್ರಗಳು ಹೇಗೆ ಕರತಲಾಮಲಕವಾಗಿ ಮುಖೋದ್ಗತವಾಗಿದ್ದುವೋ ಹಾಗೆಯೇ ಶಾಲೆಯಲ್ಲಿ ಅಧ್ಯಾಪಕರು ಹೇಳಿಕೊಡುತ್ತಿದ್ದ ಪಾಠಗಳನ್ನು ಬೇಗನೆ ಗ್ರಹಿಸಿ ಚೆನ್ನಾಗಿ ನೆನಪಿಟ್ಟುಕೊಳ್ಳುವುದು ಅವಳಿಗೆ ಕರಗತವಾಗಿತ್ತು. ಟೆಸ್ಟುಗಳಲ್ಲಿ ಅವಳೇ ಯಾವಾಗಲೂ ಫಸ್ಟ್. ಇನ್ನು ಚರ್ಚಾ ಸ್ಪರ್ಧೆ, ಭಾಷಣ ಸ್ಪರ್ಧೆ ಭಾವಗೀತೆ, ಜನಪದ ಗೀತೆ ಹಾಡುವುದೇ ಮೊದಲಾದ ಪಠ್ಯೇತರ ಚಟುವಟಿಕೆಗಳಲ್ಲಿ ಎಲ್ಲದರಲ್ಲೂ ಪಾಲ್ಗೊಳ್ಳುತ್ತಿದ್ದಳು. ಅಂತರ ಶಾಲಾ ಚರ್ಚಾಸ್ಪರ್ಧೆಗಳಲ್ಲಿ ತಾವು ಓದುತ್ತಿದ್ದ ಪ್ರೌಢ ಶಾಲೆಯನ್ನು ಪ್ರತಿನಿಧಿಸುತ್ತಿದ್ದವರೆಂದರೆ ವಸುಂಧರಾ ಮತ್ತು ಅವಳ ಸಹಪಾಠಿ ಹೇಮಾ. ಹೇಮಾ ಲಿಂಗಾಯಿತರ ಮನೆಯ ಹುಡುಗಿ. ಹೇಮಾ ಕೂಡ ತುಂಬಾ ಲಕ್ಷಣವಾದ ಮತ್ತು ಸುಟಿಯಾದ ಹುಡುಗಿ. ಅವಳನ್ನು ಆಗಾಗ್ಗೆ ಮನೆಗೆ ಕರೆದುಕೊಂಡು ಬರುತ್ತಿದ್ದಳು. ಇವರ ಮನೆ ಹೇಳಿ ಕೇಳಿ ಪುರೋಹಿತರ ಮನೆ. ಅಪ್ಪನ ಮಡಿವಂತಿಕೆಯ ಧೋರಣೆ ಗೊತ್ತಿದ್ದರಿಂದ ಮೊದಲು ಮೊದಲು ಅವಳನ್ನು ಮನೆಯ ವರಾಂಡದಲ್ಲೇ ಕೂಡಿಸಿ ಮಾತಾಡಿಸಿ ಕಳಿಸಬೇಕಾಗುತ್ತಿತ್ತು. ಅವಳು ಕುಡಿದ ಕಾಫಿ ಲೋಟ, ಕುರುಕಲು ಹಾಕಿ ಕೊಟ್ಟಿದ್ದ ಪ್ಲೇಟು ಮುಂತಾದ್ದನ್ನು ತಮ್ಮ ಮನೆಯ ಪಾತ್ರೆ ಜೊತೆ ಇಡದೆ ಬೇರೆಯಾಗಿ ಇಟ್ಟು ಕೆಲಸದವಳಿಂದ ತೊಳೆಸಿಕೊಳ್ಳುತ್ತಿದ್ದರು ವಸುಂಧರಾಳ ಅಮ್ಮ. ವಸುಂಧರಾಳಿಗೆ ಇದೆಲ್ಲ ಇಷ್ಟವಿಲ್ಲದಿದ್ದರೂ 'ನಿನಗೆ ಎಂಜಲು ಮೈಲಿಗೆ ಅಂದರೆ ಲೆಕ್ಕವೇ ಇಲ್ಲ' ಅಂತ ಅಪ್ಪನ ಕೈಯಲ್ಲಿ ಆಗಾಗ ಮಾತು ಕೇಳಿ ಮತ್ತೆ ಮತ್ತೆ ಅನ್ನಿಸಿಕೊಳ್ಳಲು ಇಷ್ಟವಿಲ್ಲದೆ ಅವನ್ನೆಲ್ಲ ಪಾಲಿಸುತ್ತಿದ್ದಳು. ಆದರೆ ಮುಂದೆ ಅವರಿಬ್ಬರ ಗೆಳೆತನ ಗಾಢವಾಗುತ್ತ ಹೋದಂತೆ ವಸುಂಧರಾ ಅವಳನ್ನು ಒಳಗಿನ ಕೋಣೆಗೆ ಕರೆದುಕೊಂಡುಹೋದರೂ ಆಕ್ಷೇಪಿಸುತ್ತಿರಲಿಲ್ಲ.

ವಸುಂಧರಾ ಓದಿನಲ್ಲಿ ಇಷ್ಟೊಂದು ಮುಂದಿರಲು ಅವಳ ತಾಯಿ ಸಾವಿತ್ರಮ್ಮನವರ

ಓದಿನ ಆಸಕ್ತಿಯೂ ಬಹುಮಟ್ಟಿಗೆ ಕಾರಣವಾಗಿತ್ತು. ಅವರು ಓದಿದ್ದು ಮಾಧ್ಯಮಿಕ ಶಾಲೆಯ ಎಂಟನೇ ತರಗತಿಯವರೆಗಾದರೂ ಮೊದಲಿನಿಂದಲೂ ಪುಸ್ತಕಗಳನ್ನು ಓದುವುದೆಂದರೆ ಅವರಿಗೆ ಎಲ್ಲಿಲ್ಲದ ಹುಚ್ಚು. ಮದುವೆಯಾಗಿ ಗಂಡನ ಮನೆಗೆ ಬಂದ ಮೇಲೆ ಗಂಡ ಶಾಲೆಯ ಕೆಲಸ ಮುಗಿಸಿಕೊಂಡು ಬರುತ್ತಿದ್ದುದು, ಅದಿಲ್ಲದಿದ್ದರೆ ಪೌರೋಹಿತ್ಯದ ಕೆಲಸಗಳನ್ನು ಮುಗಿಸಿಕೊಂಡು ಬರುತ್ತಿದ್ದುದು ತೀರಾ ತಡವಾಗಿಯೇ. ಮನೆಯಲ್ಲಿನ ಕೆಲಸ ಅಷ್ಟೇನೂ ಹೆಚ್ಚಿರುತ್ತಿರಲಿಲ್ಲ. ಮಕ್ಕಳೂ ಇಲ್ಲದ್ದರಿಂದ ಕಾಲ ಕಳೆಯಲು ಆಕೆ ಮೊರೆಹೊಕ್ಕಿದ್ದು ಪುಸ್ತಕಗಳ ಓದಿಗೆ. ನೆರೆ ಮನೆಯಲ್ಲಿದ್ದ ಮೇಷ್ಟರ ಮನೆಯಿಂದ ಅಥವಾ ಅವರ ಚಿಕ್ಕಮ್ಮನ ಯಜಮಾನರು ಅರ್ಥಾತ್ ಚಿಕ್ಕಪ್ಪನ ಕಡೆಯಿಂದ ಊರಿನ ಕೆ. ಆರ್ ಲೈಬ್ರರಿಯಿಂದ ಅನಕೃ, ತರಾಸು, ಕಟ್ಟೀಮನಿ, ಕಾರಂತ, ಕುವೆಂಪು ಬಂಗಾಳಿಯ ಶರತ್ಚಂದ್ರ ಚಟರ್ಜಿ ಮೊದಲಾದವರ ಕಾದಂಬರಿಗಳನ್ನು ತರಿಸಿಕೊಂಡು ಓದುತ್ತಿದ್ದರು. ಮಗಳು ಮಡಿಲು ತುಂಬಿದ ಮೇಲೆ ಅವಳಿಗೆ ಅಕ್ಷರಾಭ್ಯಾಸದಿಂದ ಹಿಡಿದು ಹಾಡು, ಹಸೆ ಇತ್ಯಾದಿಗಳಲ್ಲಿ ಆಕೆಯೇ ಗುರುವಾದರು. ಕಾದಂಬರಿ ಓದಿನ ಜೊತೆಜೊತೆಗೆ ಸಾವಿತ್ರಮ್ಮನವರಿಗೆ ಅವರ ತಂದೆಯಿಂದ ಬಂದಿದ್ದ ಗಮಕ ವಾಚನ ಕಲೆ ಈ ಮಗಳಿಗೂ ಅಷ್ಟಿಷ್ಟು ಒಲಿದುಬಂದಿತ್ತು. ಬಿಡುವಿದ್ದಾಗ ಮಧ್ಯಾಹ್ನದ ಹೊತ್ತು ಮತ್ತು ರಾತ್ರಿ ಊಟದ ನಂತರ ಮಗಳನ್ನೂ ಜೊತೆಯಲ್ಲಿ ಕೂಡಿಸಿಕೊಂಡು ಕುಮಾರವ್ಯಾಸಭಾರತ, ಜೈಮಿನಿಭಾರತ ಮತ್ತು ಹರಿಶ್ಚಂದ್ರ ಕಾವ್ಯಗಳ ಆಯ್ದ ಭಾಗಗಳ ವಾಚನ ಮಾಡಿ ಅವಳಿಂದಲೂ ಮಾಡಿಸುತ್ತಿದ್ದರು. ಮುಂದೆ ವಸುಂಧರಾ ಮಿಡಲ್ ಸ್ಕೂಲ್ ಕೊನೆಯ ವರ್ಷದಲ್ಲಿರುವಾಗಿನಿಂದ ಶುರುವಾದ ಕನ್ನಡದ ಕಥೆ ಕಾದಂಬರಿಗಳನ್ನು ಓದುವ ತಾಯಿಯ ಆಸಕ್ತಿ ಅವಳಲ್ಲೂ ಕುಡಿಯೊಡೆದು ಮುಂದೆ ಎಸ್.ಎಸ್.ಎಲ್.ಸಿ.ಗೆ ಬರುವಷ್ಟರಲ್ಲಿ ಅಮ್ಮನನ್ನೂ ಮೀರಿಸಿದ ಓದಾಳಿಯಾಗಿಬಿಟ್ಟಿದ್ದಳು. ವಸುಂಧರಾಳ ಬೆನ್ನಿಗೆ ಹುಟ್ಟಿದ ಇವಳಿಗಿಂತ ಐದು ವರ್ಷ ಕಿರಿಯವನಾದ ಪ್ರದ್ಯುಮ್ನನಿಗೂ ಅಮ್ಮ ಹೇಳಿಕೊಟ್ಟದ್ದರ ಜೊತೆಗೆ ಅಕ್ಕನ ನೆರವೂ ಸೇರಿತಾದರೂ ಓದಿನಲ್ಲಿ ಅವನ ಅಸಕ್ತಿ ಅಕ್ಕನಿಗಿದ್ದಷ್ಟಿರಲಿಲ್ಲ. ಎಲ್ಲೂ ಡುಂಕಿ ಹೊಡೆಯದೆ ಪಾಸಾಗಿ ಹೋಗುತ್ತಿದ್ದುದೇ ಪ್ರದ್ಯುಮ್ನನಿಗೆ ಹೆಚ್ಚಿನದಾಯಿತು. ವಸುಂಧರಾ ಏಳನೇ ಕ್ಲಾಸ್‌ನಲ್ಲಿ ಅವರ ಶಾಲೆಗೇ ಮೊದಲ ಸ್ಥಾನದಲ್ಲಿದ್ದಳು. ಹೈಸ್ಕೂಲಿನಲ್ಲೂ ಅವಳು ಮೊದಲ ಸ್ಥಾನವನ್ನು ಯಾರಿಗೂ ಬಿಟ್ಟುಕೊಡಲಿಲ್ಲ. ಟೆಸ್ಟ್‌ಗಳು ಮೊದಲುಗೊಂಡು ಮೊದಲನೇ ವರ್ಷದ ಮತ್ತು ಎರಡನೇ ವರ್ಷದ ವಾರ್ಷಿಕ ಪರೀಕ್ಷೆಗಳಲ್ಲೂ ಅವಳು ಮೊದಲನೆಯವಳಾಗಿ ಹೆಡ್‌ಮಾಸ್ಟರರಿಂದ ಹಿಡಿದು ಎಲ್ಲ ಅಧ್ಯಾಪಕರ ಮೆಚ್ಚುಗೆಗೆ ಪಾತ್ರಳಾದಳು. ಜೋಯಿಸರಿಗೆ ಊರಿನಲ್ಲಿದ್ದ ಪಿತ್ರಾರ್ಜಿತವಾದ ಅಲ್ಪ ಅಸ್ತಿಯಿಂದ ಸ್ವಲ್ಪ ಮಟ್ಟಿನ ಬೆಳೆಯೂ ಕೈ ಸೇರುತ್ತಿದ್ದುದರಿಂದ ಸಂಸಾರಕ್ಕೆ ಅಂಥ ಆರ್ಥಿಕ ಸಂಕಷ್ಟಗಳೇನೂ ಇರಲಿಲ್ಲ. ಹೀಗಾಗಿ ಮನೆಗೆ ಪ್ರಜಾವಾಣಿ ಪತ್ರಿಕೆಯ ಜೊತೆಗೆ ಸುಧಾ ವಾರ ಪತ್ರಿಕೆಯೂ ಬರುತ್ತಿದ್ದು ವಸುಂಧರಾಳ ಓದಿನ ಪಿಪಾಸೆಯನ್ನು ಅವು ತಣಿಸುತ್ತಿದ್ದುವು. ಇದರ ಜೊತೆಗೆ ವೀಣೆ ಕಲಿಯಲೆಂದು ಒಬ್ಬ ಶಿಕ್ಷಕಿಯ ಬಳಿ ಮನೆಪಾಠಕ್ಕೆ ಕಳಿಸುತ್ತಿದ್ದುದರಿಂದ

ಅದರಲ್ಲೂ ಅವಳ ಪ್ರಗತಿ ಚೆನ್ನಾಗಿಯೇ ಇತ್ತು. ಓದು ಮತ್ತು ಮನೆಕೆಲಸಗಳಿಂದ ಬಿಡುವು ಸಿಕ್ಕಿದಾಗ ಅಥವಾ ತನಗೆ ಬೇಸರವಾದಾಗಲೆಲ್ಲ ವೀಣೆ ನುಡಿಸುತ್ತ ಕೂತುಬಿಡುತ್ತಿದ್ದಳು.

ಓದು ಬರಹದಲ್ಲಿನ ತೀವ್ರವಾದ ಅನುರಕ್ತಿ, ಬುದ್ಧಿವಂತಿಕೆ, ಪರಿಶ್ರಮ, ಶ್ರದ್ಧೆಗಳಿಂದಾಗಿ ಎಸ್.ಎಸ್.ಎಲ್.ಸಿ. ಮತ್ತು ಅದೇ ಹೈಸ್ಕೂಲಿನ ಭಾಗವೇ ಆಗಿದ್ದ ಜೂನಿಯರ್ ಕಾಲೇಜಿನ ಪಿ.ಯು. ಪರೀಕ್ಷೆಗಳಲ್ಲಿ ಉನ್ನತ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದುವುದು ವಸುಂಧರಾಳಿಗೆ ಏನೇನೂ ಕಷ್ಟವಾಗಲಿಲ್ಲ. ಜೋಯಿಸರಿಗೆ ಮಗಳು ಓದಿದ್ದು ಇನ್ನು ಸಾಕು, ಎರಡು ಮೂರು ವರ್ಷದಲ್ಲಿ ಒಳ್ಳೆಯ ಕಡೆ ಸಂಬಂಧ ಕೂಡಿ ಬಂದರೆ ಮದುವೆ ಮಾಡಿಬಿಡುವುದು ಎನ್ನುವ ಯೋಚನೆ. ಹೆಚ್ಚು ಓದಿಸಿದರೆ ಅವಳಿಗಿಂತ ಹೆಚ್ಚು ಓದಿದ ಗಂಡು ನೋಡಬೇಕಾಗುತ್ತೆ. ಆದರೆ ತಾವಾದರೆ ಹೊಟ್ಟೆ ಬಟ್ಟೆಗೆ ಮಾತ್ರ ನೇರವಿರುವ ಕೆಳಮಧ್ಯಮ ವರ್ಗದವರು. ತಮಗಿಂತ ಮೇಲಿನ ವರ್ಗದವರ ಸಂಬಂಧ ಹುಡುಕುವುದು ಕಷ್ಟವಾಗುತ್ತೆ ಎನ್ನುವುದು ಅವರ ವಿಚಾರ. ಆದರೆ ಸ್ವತಃ ವಸುಂಧರಾಗೆ ಪದವಿ ವ್ಯಾಸಂಗವನ್ನು ಮುಂದುವರಿಸಲೇಬೇಕೆನ್ನುವ ಅದಮ್ಯ ಆಸೆ. ಜೊತೆಗೆ ತಾಯಿಯ ಒತ್ತಾಸೆಯೂ ಸೇರಿದ್ದರಿಂದ ಜೋಯಿಸರು ನಿರ್ವಾಹವಿಲ್ಲದೆ 'ಹೌದು ಈಗ ಕಾಲ ಬದಲಾಗಿದೆ, ಹೆಣ್ಣು ಮಕ್ಕಳಿಗೂ ಕಾಲೇಜು ಓದುವುದು ಅಗತ್ಯವಾದೀತು' ಎಂದು ಹೇಳಿ ತಮ್ಮ ನಿಲುವು ಬದಲಾಯಿಸಲೇ ಬೇಕಾಯಿತು. ಅದೂ ಅಲ್ಲದೆ ಒಳ್ಳೆಯ ಅಂಕಗಳು ಬಂದಿರುವುದರಿಂದ ಫೀಸು ಮಾಫಿಯ ಜೊತೆಗೆ ಸ್ಕಾಲರ್‌ಷಿಪ್ ಕೂಡ ದೊರೆಯುವುದರಲ್ಲಿ ಏನೂ ಕಷ್ಟವಾಗಲಾರದು ಎನಿಸಿದ್ದರಿಂದ ಅವಳ ಓದಿಗೆ ಅವರು ಅಡ್ಡಿಪಡಿಸಲಿಲ್ಲ. ವಸುಂಧರಾಳ ಗೆಳತಿ ಹೇಮಾ ಕೂಡ ಉನ್ನತ ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಳಾಗಿ ಅವಳ ಮನೆಯವರೂ ಪದವಿ ಕಾಲೇಜಿಗೆ ಸೇರಿಸಲು ಒಪ್ಪಿಗೆ ಕೊಟ್ಟರು.

ಗೆಳತಿಯರಿಬ್ಬರೂ ಒಟ್ಟಿಗೇ ಸರ್ಕಾರೀ ಕಾಲೇಜಿನ ಬಿ.ಎ. ತರಗತಿಗೆ ಅರ್ಜಿ ಸಲ್ಲಿಸಿದರು. ಹೇಮಾಗೆ ಎಸ್.ಎಸ್.ಎಲ್.ಸಿ ಮುಗಿಸುವವವರೆಗೂ ವಿಜ್ಞಾನದಲ್ಲಿ ಆಸಕ್ತಿಯಿದ್ದರೂ ಗಣಿತದಲ್ಲಿ ಅಷ್ಟಾಗಿ ಆಸಕ್ತಿ ಇಲ್ಲದ್ದರಿಂದ ಪಿ.ಯು.ಸಿ. ಯಲ್ಲಿ ಎಚ್.ಇ.ಪಿ.ಎಸ್ ತೆಗೆದುಕೊಂಡಿದ್ದರಿಂದ ಈಗ ರಾಜ್ಯಶಾಸ್ತ್ರವನ್ನು ಬಿಟ್ಟು ಸಮಾಜಶಾಸ್ತ್ರದ ಓದಿಗೆ ಅವಕಾಶವಿರುವ ಎಚ್.ಇ.ಎಸ್. ವಿಭಾಗಕ್ಕೆ ಸೇರಿಕೊಂಡಳು. ವಸುಂಧರಾಳ ಒಲವು ಮೊದಲಿನಿಂದಲೂ ಇತಿಹಾಸ, ಭಾಷಾ ಸಾಹಿತ್ಯಗಳ ಕಡೆಗೆ ಇದ್ದದ್ದರಿಂದ ಎಚ್.ಇ.ಪಿ.ಎಸ್. ತೆಗೆದುಕೊಂಡಿದ್ದು ಈಗ ತನಗೆ ಮೊದಲಿನಿಂದಲೂ ಇಷ್ಟದ ವಿಷಯಗಳಾದ ಇತಿಹಾಸ, ರಾಜ್ಯಶಾಸ್ತ್ರಗಳ ಅಧ್ಯಯನಕ್ಕೆ ಅವಕಾಶವಿರುವ ಎಚ್.ಇ.ಪಿ.ಗೆ ಸೇರಿಕೊಂಡಳು. ಕಾಲೇಜಿಗೂ ಮನೆಗೂ ದೂರ ಜಾಸ್ತಿ ಅನ್ನಿಸಿದ್ದರಿಂದ ಇಬ್ಬರೂ ಮನೆಯವರಿಗೆ ಹೇಳಿ ಬೈಸಿಕಲ್ ತರಿಸಿಕೊಂಡಿದ್ದರು, ಕಾಲೇಜಿಗೆ ಹೋಗುವುದು, ಹಿಂತಿರುಗುವುದು ಸಾಮಾನ್ಯವಾಗಿ ಜೊತೆಯಲ್ಲೇ. ತರಗತಿಗಳೂ ರಾಜ್ಯ ಶಾಸ್ತ್ರ ಮತ್ತು ಸಮಾಜಶಾಸ್ತ್ರಗಳನ್ನು ಹೊರತು ಪಡಿಸಿದರೆ ಉಳಿದ ಎಲ್ಲವೂ ಒಟ್ಟಿಗೇ ನಡೆಯುತ್ತಿದ್ದುವಾಗಿ ಸಮಸ್ಯೆ ಎನಿಸುತ್ತಿರಲಿಲ್ಲ. ಕೆಲವೊಮ್ಮೆ ಹೇಮಾಳಿಗೆ ಸಮಾಜಶಾಸ್ತ್ರ

ವಿಷಯದ ತರಗತಿ ಇದ್ದು ತಡವಾಗುವಂತಿದ್ದರೆ 'ನೀನು ಮುಂಚೆ ಹೋಗಿರು' ಎಂದು ಹೇಮಾ ಹೇಳಿಬಿಡುತ್ತಿದ್ದಳು.

* * *

ತುಮಕೂರಿನ ಸರ್ಕಾರೀ ಕಾಲೇಜು ಹತ್ತು ವರ್ಷಗಳ ಹಿಂದೆ ಇಡೀ ರಾಜ್ಯಕ್ಕೇ ಅತ್ಯಂತ ದೊಡ್ಡ ಕಾಲೇಜೆಂದು ಹೆಸರಾಗಿತ್ತು. ಸುಮಾರು ಮೂರೂವರೆ ಸಾವಿರ ವಿದ್ಯಾರ್ಥಿಗಳು ಮತ್ತು ಸುಮಾರು 150 ಜನ ಅಧ್ಯಾಪಕರಿಂದ ತುಂಬಿ ತುಳುಕುತ್ತಿದ್ದ ಕಾಲೇಜು ಊರಿನ ಬಿ.ಎಚ್. ರಸ್ತೆಯಲ್ಲಿ ಭವ್ಯವಾದ ಕಟ್ಟಡವನ್ನು ಹೊಂದಿತ್ತು. ಆ ರಸ್ತೆಯಲ್ಲಿ ನಡೆದು ಹೋಗುವವರಾದರೂ ಸರಿಯೆ ವಾಹನದಲ್ಲಿ ಹೋಗುವವರಾದರೂ ಸರಿಯೆ ಅ ಕಟ್ಟಡದ ಕಡೆಗೊಮ್ಮೆ ಕಣ್ಣುಹಾಯಿಸದೆ ಹೋಗುತ್ತಿರಲಿಲ್ಲ. ಅಂಥ ಭವ್ಯವಾದ ಕಟ್ಟಡ. ಈಗ ಸರ್ಕಾರೀ ಕಲಾ ಕಾಲೇಜು ಮತ್ತು ಸರ್ಕಾರೀ ವಿಜ್ಞಾನ ಕಾಲೇಜು ಎಂದು ವಿಭಜನೆ ಹೊಂದಿದ ಮೇಲೆ ಅತಿ ದೊಡ್ಡ ಕಾಲೇಜು ಎಂಬ ಹೆಸರು ಇಲ್ಲವಾಗಿತ್ತು. ಆದರೆ ಎರಡೂ ಕಾಲೇಜುಗಳಿಗೆ ಕಟ್ಟಡ ಮಾತ್ರ ಒಂದೇ ಆಗಿತ್ತು. ವಿದ್ಯಾರ್ಥಿಗಳ ಮತ್ತು ತರಗತಿಗಳ ಸಂಖ್ಯೆ ಹೆಚ್ಚಾದ್ದರಿಂದ ಬೆಳಿಗ್ಗೆ ಎಂಟು ಗಂಟೆಯಿಂದ ತೊಡಗಿ ಸಾಯಂಕಾಲ ಐದು ಗಂಟೆಯವರೆಗೂ ನಿರಂತರವಾಗಿ ತರಗತಿಗಳು ನಡೆಯುತ್ತಿದ್ದುವು. ವಿಜ್ಞಾನದ ಥಿಯರಿ ತರಗತಿಗಳು ಬೆಳಿಗ್ಗೆ ಎಂಟರಿಂದ ಪ್ರಾರಂಭವಾಗಿ ಸುಮಾರು ಹನ್ನೊಂದರ ಹೊತ್ತಿಗೆ ಮುಗಿಯುತ್ತಿದ್ದುವು. ಮಧ್ಯಾಹ್ನ ಪ್ರಯೋಗಶಾಲೆಗಳಲ್ಲಿ ಪ್ರಾಯೋಗಿಕ ತರಗತಿಗಳನ್ನು ನಡೆಸಿಕೊಳ್ಳಲು ಅನುಕೂಲವಾಗುತ್ತದೆಂಬ ಕಾರಣಕ್ಕೆ ಈ ಏರ್ಪಾಟಿತ್ತು. ಕಲೆ ಮತ್ತು ವಾಣಿಜ್ಯ ತರಗತಿಗಳು ಸಾಮಾನ್ಯವಾಗಿ ಬೆಳಿಗ್ಗೆ ಹನ್ನೊಂದರಿಂದ ಸಂಜೆ ಐದರ ತನಕ ನಡೆಯುತ್ತಿದ್ದುವು. ಕಲಾ ಕಾಲೇಜಿನ ಕಲೆ ಮತ್ತು ಭಾಷಾ ವಿಭಾಗಗಳು ಸಾಕಷ್ಟು ದೊಡ್ಡದಾಗಿಯೇ ಇದ್ದುವು. ಇಂಥ ಕಾಲೇಜಿಗೆ ಇತಿಹಾಸದ ಅಧ್ಯಾಪಕನಾಗಿ ಕೆ.ಪಿ.ಎಸ್.ಸಿ.ಯಿಂದ ಆಯ್ಕೆಯಾಗಿ ನೇಮಕವಾಗಿ ಬಂದವನು ಶ್ರೀನಿವಾಸ್. ಮಂಡ್ಯಾದ ಹತ್ತಿರದ ಒಂದು ಹಳ್ಳಿ ಅವನ ಸ್ವಂತ ಊರು. ಊರಿನಲ್ಲಿ ಅವರ ತಂದೆ ಪಟೇಲ್ ನಿಂಗೇಗೌಡರು ದೊಡ್ಡ ಕುಳವೇ. ಹಲವು ಎಕರೆಗಳಷ್ಟು ಗದ್ದೆ, ತೋಟ, ಹೊಲ ಎಲ್ಲ ಹೊಂದಿದ್ದ ಒಂದು ಪ್ರತಿಷ್ಠಿತ ಕುಟುಂಬ. ಶ್ರೀನಿವಾಸ್ ಅವರ ತಂದೆಗೆ ಒಬ್ಬನೇ ಮಗ. ಅವರ ತಂದೆ ಇಟ್ಟಿದ್ದ ಹೆಸರು ಶ್ರೀನಿವಾಸಗೌಡ ಎಂದು. ಬಿ.ಎ. ತರಗತಿಯಲ್ಲಿದ್ದಾಗ ಅವರ ಕನ್ನಡದ ಅಧ್ಯಾಪಕರು ಕುವೆಂಪು ಅವರ 'ಶೂದ್ರತಪಸ್ವಿ' ನಾಟಕವನ್ನು ಪಾಠ ಮಾಡುತ್ತಿದ್ದಾಗ ಕುವೆಂಪು ಹೇಗೆ ಜಾತೀಯತೆಯನ್ನು ಉಗ್ರವಾಗಿ ವಿರೋಧಿಸುತ್ತಿದ್ದರು ಎಂಬ ವಿಚಾರ, ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಲೇಖನವೇ ಮೊದಲಾದವುಗಳ ಬಗ್ಗೆ ಎಲ್ಲ ತಿಳಿಹೇಳಿ "ಆ ಮತದ ಈ ಮತದ ಹಳೆಮತದ ಸಹವಾಸ ಸಾಕಿನ್ನು, ಸೇರಿರೈ ಮನಜ ಮತಕೆ ಸಾರಿರೈ ವಿಶ್ವಪಥಕೆ" ಎಂಬ ವಿಚಾರಗಳನ್ನು ಮನವರಿಕೆ ಮಾಡಿಕೊಟ್ಟಿದ್ದರು. ಅದರಿಂದ ಪ್ರಭಾವಿತನಾಗಿದ್ದ ಕುವೆಂಪು ಅಭಿಮಾನಿ ಶ್ರೀನಿವಾಸಗೌಡ ತನ್ನ ಹೆಸರಿನ ಕೊನೆಯಲ್ಲಿದ್ದ 'ಗೌಡ' ಎಂಬ ಜಾತಿ ಸೂಚಕ

ಶಬ್ದವನ್ನು ಬಿ.ಎ. ಅಂತಿಮ ವರ್ಷದಲ್ಲಿದ್ದಾಗ ಕಾನೂನಿನ ಪ್ರಕಾರವೇ ತೆಗೆಸಿಹಾಕಿ ಕೇವಲ 'ಶ್ರೀನಿವಾಸ್' ಎಂದು ಹ್ರಸ್ವಗೊಳಿಸಿಕೊಂಡಿದ್ದ. ಮಗ ಹಠ ಹಿಡಿದದ್ದರಿಂದ ಎಂ.ಎ. ಓದಿಸಿದರೇ ಹೊರತು ಮಗನನ್ನು ಕೆಲಸಕ್ಕೆ ಕಳಿಸಬೇಕೆಂಬ ಅನಿವಾರ್ಯ ಅವರಿಗೆ ಇರಲಿಲ್ಲ. ಬದಲಿಗೆ ಪಿತ್ರಾರ್ಜಿತವಾಗಿ ಬಂದಿರುವ ಇಷ್ಟೊಂದು ಜಮೀನನ್ನು ನೋಡಿಕೊಂಡು ಬೇಕೆನಿಸಿದರೆ ಊರಿನ ರಾಜಕೀಯದಲ್ಲೂ ತೊಡಗಿಸಿಕೊಂಡು ಇದ್ದರೆ ಸಾಕು ಎನ್ನುವುದು ಅವರ ಇಚ್ಛೆಯಾಗಿತ್ತು. ಆದರೆ ಶ್ರೀನಿವಾಸ್ ಮೊದಲಿನಿಂದಲೂ ಓದಿನಲ್ಲಿ ತುಂಬ ಚುರುಕು. ಅದರಿಂದ ಎಲ್ಲ ತರಗತಿಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿ ತೇರ್ಗಡೆಯಾಗುತ್ತ ಬಂದಿದ್ದ. ಬಿ.ಎ. ಮುಗಿಸಿ ಜಮೀನು ಮನೆ ನೋಡಿಕೊಂಡಿರಲಿ ಎಂಬುದು ಗೌಡರ ಆಸೆಯಾಗಿತ್ತು. ಆದರೆ ಬಿ.ಎ.ಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಶ್ರೀನಿವಾಸನಿಗೆ ಮುಂದೆ ಮೈಸೂರಿಗೆ ಹೋಗಿ ಇತಿಹಾಸ ವಿಷಯದಲ್ಲಿ ಎಂ.ಎ ಮಾಡಬೇಕೆಂಬ ಆಸೆಯಾಯಿತು. ಅವನು ಓದಿದ ಮಂಡ್ಯ ಕಾಲೇಜಿನ ಅವನ ಇತಿಹಾಸದ ಪ್ರಾಧ್ಯಾಪಕರುಗಳು, ಸಹಪಾಠಿಗಳು ಎಲ್ಲರೂ ಎಂ.ಎ. ಓದಲು ಒತ್ತಾಯಿಸಿದರು. ಹೀಗಾಗಿ ಎಂ.ಎ. ಅಧ್ಯಯನ ಮುಂದುವರೆಸಿ ಅದರಲ್ಲೂ ಪ್ರಥಮ ದರ್ಜೆ ಪ್ರಥಮ ರ್‍ಯಾಂಕ್ ಪಡೆದುಕೊಂಡ. ಅವನ ಅದೃಷ್ಟಕ್ಕೆ ಮಂಡ್ಯಾದ ಖಾಸಗಿ ಕಾಲೇಜಿನಲ್ಲಿ ತಾತ್ಕಾಲಿಕ ಕೆಲಸ ಸಿಕ್ಕಿ ಎರಡು ವರ್ಷ ಅಲ್ಲಿ ಕೆಲಸ ಮುಗಿಸುವ ಹೊತ್ತಿಗೆ ಈ ಮುಂಚೆಯೇ ಅರ್ಜಿ ಸಲ್ಲಿಸಿ ಸಂದರ್ಶನ ನಡೆದಿದ್ದ ಕೆ.ಪಿಎಸ್.ಸಿ.ಯಿಂದ ಅಯ್ಕೆಯಾಗಿ ತುಮಕೂರು ಕಾಲೇಜಿಗೆ ನೇಮಕಗೊಂಡು ಕೆಲಸಕ್ಕೆ ಸೇರಿಕೊಂಡ. ತುಮಕೂರಿನಲ್ಲಿ ಕಾಲೇಜಿಗೆ ಹತ್ತಿರವಿದ್ದ ವಿದ್ಯಾನಗರದಲ್ಲಿ ಒಂದು ಅಟ್ಯಾಚ್ಡ್ ಬಾತ್ ರೂಮ್ ವ್ಯವಸ್ಥೆ ಇರುವ ರೂಮ್ ಮಾಡಿಕೊಂಡು ಹತ್ತಿರದಲ್ಲೇ ಇದ್ದ ಒಂದು ಮೆಸ್‌ನಲ್ಲಿ ಊಟ ಮಾಡಿಕೊಂಡು ಬೇಜಾರಾದರೆ ಸಾಯಂಕಾಲ ವಾಕ್ ಹೋದಾಗ ಹಾಗೇ ಹೋಟೆಲ್‌ನಲ್ಲಿ ಊಟ ಮುಗಿಸಿಕೊಂಡು ಬರುತ್ತಿದ್ದ. ಹದಿನೈದು ದಿನಕ್ಕೆ ಒಮ್ಮೆಯೋ, ತಿಂಗಳಿಗೆ ಒಂದು ಸಾರಿಯೋ ಶನಿವಾರ ಭಾನುವಾರ ಜೊತೆಗೆ ಒಂದು ಸಿ.ಎಲ್ ಇಲ್ಲ ಯಾವುದಾದರೂ ರಜೆ ಅಡ್ಜಸ್ಟ್ ಮಾಡಿಕೊಂಡು ಊರಿಗೆ ಹೋಗಿ ಬರ್‍ತಾ ಇದ್ದ. ಅತ್ಯಂತ ಉತ್ಸಾಹದಿಂದ ಪುಟಿಯುತ್ತಿದ್ದ ಶ್ರೀನಿವಾಸ್ ತನ್ನ ಅಧ್ಯಯನ ವಿಷಯವಾದ ಇತಿಹಾಸದಲ್ಲಿ ಆಳವಾದ ಜ್ಞಾನ ಹೊಂದಿದ್ದ. ಜೊತೆಗೆ ಅಧ್ಯಯನಶೀಲ. ಗ್ರಂಥಭಂಡಾರದಿಂದ ಪುಸ್ತಕಗಳನ್ನು ತಂದು ಓದುವುದನ್ನು ಮೊದಲಿನಿಂದಲೂ ರೂಡಿಸಿಕೊಂಡಿದ್ದ.

ಇಂಥ ಶ್ರೀನಿವಾಸ್ ಕಾಲೇಜಿನಲ್ಲಿ ಬಹಳಬೇಗ ಒಳ್ಳೆಯ ಅಧ್ಯಾಪಕನೆಂದು ಹೆಸರು ಗಳಿಸಿದ. ಪ್ರಿನ್ಸಿಪಾಲರಿಗೂ ಅವನ ವಿಭಾಗದ ಮುಖ್ಯಸ್ಥರಿಗೂ ಶ್ರೀನಿವಾಸನ ವಿಷಯಕ್ಕೆ ಒಳ್ಳೆಯ ಅಭಿಪ್ರಾಯವಿತ್ತು. ತರಗತಿಗಳನ್ನು ಎಂದೂ ತಪ್ಪಿಸುವುದಾಗಲಿ, ತರಗತಿಗಳಿಗೆ ತಡಮಾಡಿ ಬರುವುದಾಗಲಿ, ಇಲ್ಲವೆ ಅನಗತ್ಯವಾದ ಕಾಡುಹರಟೆಯಲ್ಲಿ ಕಾಲ ಕಳೆಯುವುದಾಗಲಿ ಮಾಡದೆ ಇದ್ದುದರಿಂದ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಅಧ್ಯಾಪಕನೆನಿಸಿಕೊಂಡ. ನೋಡಲು ಸ್ಫುರದ್ರೂಪಿಯಾಗಿದ್ದ, ಎತ್ತರದ ನಿಲುವಿನ

ಶ್ರೀನಿವಾಸ್ ವಿದ್ಯಾರ್ಥಿಗಳ ನೆಚ್ಚಿನ ಎನ್.ಎಸ್. ಮಾಸ್ಟರ್. ಇವನ ಉತ್ಸಾಹ ನೋಡಿ ಹೇಗೂ ಖಾಸಗಿ ಕಾಲೇಜಿನಲ್ಲಿ ಎರಡು ವರ್ಷಗಳ ಅಧ್ಯಾಪನದ ಅನುಭವ ಬೇರೆ ಇದ್ದುದರಿಂದ ಪ್ರಿನ್ಸಿಪಾಲರು ಎನ್. ಎಸ್. ಎಸ್. ಅನ್ನು ಅವನ ತಲೆಗೇ ಕಟ್ಟಿದರು. ಪದವಿ ತರಗತಿಯ ವಿದ್ಯಾರ್ಥಿಗಳದೊಂದು ಸ್ಟಡಿ ಸರ್ಕಲ್ ಮಾಡಿ ಅವರೆಲ್ಲ ವಾರಕ್ಕೊಂದು ದಿನ ತರಗತಿಯಿಲ್ಲದೆ ಇದ್ದಾಗ ಕೆಲವೊಂದು ಇತಿಹಾಸದ ವಿಷಯಗಳ ಕುರಿತು, ಇನ್ನಿತರೆ ಪ್ರಸ್ತುತ ವಿಷಯ ಕುರಿತು ಚರ್ಚಿಸಬೇಕೆಂದು ತಿಳಿಸಿದ. ಇದರಿಂದ ವಿದ್ಯಾರ್ಥಿಗಳಲ್ಲಿ ಹೊಸ ಉತ್ಸಾಹ ಮೂಡಿ ಸ್ಟಡಿ ಸರ್ಕಲ್ ನಲ್ಲಿ ಭಾಗವಹಿಸತೊಡಗಿದರು.

ವಸುಂಧರಾ ಮತ್ತು ಹೇಮಾ ಸ್ಟಡಿ ಸರ್ಕಲ್‌ನಲ್ಲೂ ಭಾಗವಹಿಸುತ್ತಿದ್ದುದಲ್ಲದೆ ಆಗಿಂದಾಗ್ಗೆ ಎನ್.ಎಸ್. ಮಾಸ್ಟರ್‌ರನ್ನು ಭೇಟಿಮಾಡಿ ಚರ್ಚಿಸುತ್ತಿದ್ದರು. ಹಾಗೊಮ್ಮೆ ಭೇಟಿಮಾಡಿದಾಗ ವಸುಂಧರಾ ತಾನು ಓದಿದ 'ಡೂಬಾಯ್ ಪಾದ್ರಿಯ ಪತ್ರ' ಎಂಬ ಮಾಸ್ತಿಯವರ ಕಥೆಯಲ್ಲಿ ಬರುವ ಸಂಗತಿಯೊಂದನ್ನು ಪ್ರಸ್ತಾಪಿಸಿದಳು. ಅದು ಟಿಪ್ಪೂ ಸುಲ್ತಾನರ ಆಡಳಿತದಲ್ಲಿ ನಡೆಯಿತೆನ್ನಲಾದ ಕೆಲವು ಬಲವಂತ ಮತಾಂತರಗಳ ಬಗ್ಗೆ ಅವನ ದುರಾಡಳಿತದ ಬಗ್ಗೆ ಡೂಬಾಯ್ ಪಾದ್ರಿ ಎಂಬುವನು ತನ್ನ ಮಿತ್ರರಿಗೆ ಬರೆದ ಪತ್ರ. ಅದರಲ್ಲಿ ಟಿಪ್ಪೂ ನೇರವಾಗಿ ಮತಾಂತರ ಮಾಡಿಸುತ್ತಿರಲಿಲ್ಲ. ಬಲವಂತವಾಗಿ ಮತಾಂತರ ಮಾಡಬೇಡಿರೆಂದು ಹೊರಗೆ ಹೇಳಿದರೂ, ಅಂತರಂಗದಲ್ಲಿ ಅದು ಇಷ್ಟವೇ ಆಗಿತ್ತು. ಆ ಕಾರಣಕ್ಕೆ ಬಲವಂತ ಮತಾಂತರದ ದೂರು ಬಂದಾಗ, ವಿಚಾರಣೆ ನಡೆಸುವ ನಾಟಕ ಮಾಡಿ ಅವರಾಗಿಯೇ ಮತಾಂತರ ಹೊಂದಿದರೆಂದು ತಿಪ್ಪೆ ಸಾರಿಸಿ ತೀರ್ಪುಕೊಡುತ್ತಿದ್ದನಂತೆ. ಅವನ ಈ ಧೋರಣೆಯೇ ಅವನ ಆಳ್ವಿಕೆ ಅಂತ್ಯಗೊಳ್ಳಲು ಕಾರಣವಾಯಿತೆಂಬ ಬಗ್ಗೆ ಹಾಗೆಯೇ ಅವನು ಹಿಂದೂಗಳ ಅದರಲ್ಲೂ ಮುಖ್ಯವಾಗಿ ಬ್ರಾಹ್ಮಣರ ವರ್ತನೆ, ಧೋರಣೆ ಕುರಿತು ಹೇಳಿರುವ ಬಗ್ಗೆ ಹೇಳಿದಳು. ನರಸಿಂಹನೆಂಬ ಒಬ್ಬ ಬ್ರಾಹ್ಮಣ ಯುವಕನಿಗೆ ಗೋಮಾಂಸ ತಿನಿಸಿ ಬಲವಂತವಾಗಿ ಇಸ್ಲಾಮ್‌ಗೆ ಮತಾಂತರಿಸಿದ್ದ ಸಂಗತಿ ಕುರಿತು, ಆಮೇಲೆ ಅವನು ಮತ್ತೆ ತನ್ನನ್ನು ತನ್ನ ಜಾತಿಯೊಳಕ್ಕೆ ಸೇರಿಸಿಕೊಳ್ಳಲು ತನ್ನ ಜಾತಿಯ ಹಿರಿಯರನ್ನು ಭೇಟಿಮಾಡಿ ಮೊರೆಯಿಟ್ಟದ್ದು, ಅದಕ್ಕೆ ಅವರುಗಳಾರೂ ಒಪ್ಪದೆ ಇದ್ದದ್ದು, ಅದಕ್ಕೆ ಅವನಿಗೆ ಭಾರೀ ನಿರಾಶೆ ಮತ್ತು ರೋಷ ಉಂಟಾಗಿ ಸೇಡು ತೀರಿಸಿಕೊಳ್ಳುವುದಾಗಿ ಹೇಳಿದ ವಿಚಾರ ಹೇಳಿ– "ಸರ್ ಇದು ಕೇವಲ ಮಾಸ್ತಿಯವರ ಕಲ್ಪನೆಯೋ ಇಲ್ಲ ಇದಕ್ಕೆ ಇತಿಹಾಸದ ಆಧಾರವುಂಟೋ" ಎಂದು ಕೇಳಿದಳು. ಆ ಬಗ್ಗೆ ಓದಿದ್ದ ಶ್ರೀನಿವಾಸ್‌ನು–"ನರಸಿಂಹನ ಕಥೆಗೆ ಸಂಬಂಧಿಸಿದ ಹಾಗೆ ಸ್ವಲ್ಪ ಕಲ್ಪನೆ ಇರುತ್ತೆ. ಆದರೆ ಟಿಪ್ಪೂ ಮತಾಂತರಕ್ಕೆ ಕುಮ್ಮಕ್ಕು ಕೊಡುತ್ತಿದ್ದ ವಿಚಾರ ಕೇವಲ ಕಥೆಗಾರರ ಕಲ್ಪನೆ ಅಂತ ಹೇಳಕ್ಕಾಗಲ್ಲ. ಇತಿಹಾಸದಲ್ಲಿ ಇದಕ್ಕೆ ಆಧಾರವುಂಟು. ಟಿಪ್ಪೂ ಸುಲ್ತಾನ್ ಬಗ್ಗೆ ಎರಡು ಬಗೆಯ ತೀವ್ರ ವಾದಗಳಿವೆ. ಒಂದು ಕಡೆ ಅವನೊಬ್ಬ ಮಹಾನ್ ದೇಶಭಕ್ತ, ಬ್ರಿಟಿಷರನ್ನು ಅವರ ಕಡು ವಿರೋಧಿಗಳಾಗಿದ್ದ ಫ್ರೆಂಚರ ನೆರವು ಪಡೆದು ಈ ದೇಶದಿಂದಲೇ ಓಡಿಸಬೇಕೆಂದು ಪಣತೊಟ್ಟು ಅದಕ್ಕಾಗಿ ನಾನಾ ರೀತಿಯಲ್ಲಿ ಪ್ರಯತ್ನಿಸಿದವನು. ರಾಕೆಟ್ ಬಗ್ಗೆ ಯಾರಿಗೂ ಯೋಚನೆ ಕೂಡ

ಹೊಳೆಯದೆ ಇದ್ದಾಗ ಅದರ ಬಗ್ಗೆ ಯೋಚಿಸಿದ್ದವನು. ಪ್ರಸಿದ್ಧವಾದ ಶೃಂಗೇರಿ ಮಠಕ್ಕೆ ಬೇಕಾದಷ್ಟು ದಾನ ದತ್ತಿ ನೀಡಿದ್ದವನು. ಅದೇ ರೀತಿ ಮಂಗಳೂರಿನ ಕ್ರಿಶ್ಚಿಯನ್ನರಿಗೆ ಇನ್ನಿಲ್ಲದ ಹಿಂಸೆ ಕೊಟ್ಟಿದ್ದ. ಸಾವಿರಾರು ಕೊಡವರನ್ನು ಕೊಲ್ಲಿಸಿದ ಹೀಗೆಲ್ಲ ಅವನ ಬಗ್ಗೆ ವಿವಿಧ ಪರಸ್ಪರ ವಿರುದ್ಧವಾದ ಅಭಿಪ್ರಾಯಗಳಿವೆ. ಇವೆಲ್ಲಕ್ಕೂ ಐತಿಹಾಸಿಕ ಆಧಾರಗಳಿವೆ. ಆದರೆ ಇತಿಹಾಸದ ಸಂಗತಿಗಳನ್ನು ಸಂಗತಿಗಳಾಗಿಯೇ ನಿರೂಪಿಸಿದರೆ ಅಷ್ಟೊಂದು ವಿವಾದಕ್ಕಾಸ್ಪದವಾಗಲಾರದು. ಅವುಗಳನ್ನು ತಮ್ಮ ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸಿದಾಗ ಅವು ತೀವ್ರ ವಿವಾದಕ್ಕೆ ಕಾರಣವಾಗುತ್ತವೆ. ರಾಜಕೀಯದಲ್ಲಿ ಎಡಪಂಥ ಬಲಪಂಥ ಅಂತ ಕೇಳಿದ್ದೀರಲ್ಲ. ನಮ್ಮ ದೇಶದಲ್ಲಂತೂ ಎಡಪಂಥೀಯರು ಅವರ ಮೂಗಿನ ನೇರಕ್ಕೆ ಅನುಸಾರವಾಗಿ ಇತಿಹಾಸವನ್ನು ರಚಿಸಿದ್ದಾರೆ ಮತ್ತು ವ್ಯಾಖ್ಯಾನಿಸಿದ್ದಾರೆ ಅಂತ ಬಲಪಂಥೀಯರು ಆರೋಪಿಸಿದರೆ ಎಡಪಂಥೀಯರೂ ಬಲಪಂಥೀಯರ ಬಗ್ಗೆ ಅದೇ ರೀತಿಯ ಆರೋಪವನ್ನು ಮಾಡುತ್ತಾರೆ. ಪಿ. ಎನ್. ಓಕ್ ಎಂಬ ಒಬ್ಬ ಕಟ್ಟಾ ಹಿಂದೂವಾದಿ ಇತಿಹಾಸ ಲೇಖಕ ಟಾಜ್ ಮಹಲ್ ಮುಂಚೆ ಶಿವದೇವಾಲಯ ಆಗಿತ್ತು, ಮಕ್ಕಾದ ಕಾಬಾ ಮಸೀದಿಯಲ್ಲಿ ಕೂಡ ಪರದೆಯ ಹಿಂದೆ ತ್ರಿಶೂಲ ಇದೆ ಅಂತೆಲ್ಲ ಬರೀತಾರೆ. ಇದನ್ನು ನಂಬೋಕೆ ಆಗುತ್ತಾ?" ಎಂದು ಹೇಳಿ ಅದಕ್ಕೆ ಸಂಬಂಧಿಸಿದ ಕೆಲವು ಪುಸ್ತಕಗಳನ್ನು ನಾಳೆ ಕೊಡುವುದಾಗಿ ಹೇಳಿ ತರಗತಿ ಮುಗಿದ ಮೇಲೆ ಭೇಟಿಮಾಡಲು ತಿಳಿಸಿದನು.

ಮರುದಿನ ವಸುಂಧರಾ ಅವರ ವಿಭಾಗದ ರೂಮಿಗೆ ಬಂದಾಗ ಶ್ರೀನಿವಾಸ್ ಒಬ್ಬನೇ ಇದ್ದ. ಹತ್ತು ನಿಮಿಷದ ಹಿಂದೆ ಪೀರಿಯಡ್ ಬೆಲ್ ಆಗಿ ತನ್ನ ಸಹೋದ್ಯೋಗಿಗಳು ಮೂರೂ ಜನ ತರಗತಿಗಳಿಗೆ ಹೋಗಿದ್ದ ಸಮಯ. ಶ್ರೀನಿವಾಸನಿಗೆ ಆಗ ಲೀಷರ್ ಇದ್ದುದರಿಂದ ಏನೋ ಪುಸ್ತಕ ಓದುತ್ತಾ ಇದ್ದ. "ಮೇ ಐ ಕಮಿನ್ ಸರ್" ಎಂಬ ಇಂಪಾದ ದನಿ ಕೇಳಿ ತಲೆ ಎತ್ತಿ ನೋಡಿ ಬಾಗಿಲ ಬಳಿ ವಸುಂಧರಾ ನಿಂತಿದ್ದು ಕಂಡು ಮುಗುಳ್ನಗುತ್ತ 'ಯೆಸ್ ಕಮಿನ್' ಎಂದ. ವಸುಂಧರಾ ಒಳಕ್ಕೆ ಬಂದಳು. ಶ್ರೀನಿವಾಸ್ ಭೇಟಿಗೆ ಬಂದವರು ಕುಳಿತುಕೊಳ್ಳಲು ಹಾಕಿದ್ದ ಛೇರ್ ಮೇಲೆ ಕೂರಲು ಹೇಳಿದ. ವಸುಂಧರಾ "ಪರ್ವಾಗಿಲ್ಲ ಸರ್" ಎಂದು ನಿಂತೇ ಇದ್ದಳು. "ಪರ್ವಾಗಿಲ್ಲ ಏನ್ರೀ, ಕೂತುಕೊಳ್ಳಿ, ಛೇರ್ ಇರೋದು ಕೂತುಕೊಳ್ಳೋಕೆ. ಅದರಲ್ಲೂ ನಿಮ್ಮಂಥೋರು ಕೂತರೆ ಆ ಛೇರ್‌ಗೂ ತುಂಬಾ ಸಂತೋಷ ಆಗುತ್ತೆ" – ಎಂದು ನಕ್ಕ. ವಸುಂಧರಾ ನಗುತ್ತ ಸಂಕೋಚದಿಂದ ಮುದುಡಿ ಕುಳಿತಳು. ವಸುಂಧರಾ ಇದಕ್ಕೆ ಮುಂಚೆ ಒಂದೆರಡು ಸಲ ಭೇಟಿಯಾಗಿದ್ದಳು. ಆಗ ಅವಳ ಜೊತೇಲಿ ಅವಳ ಫ್ರೆಂಡು ಹೇಮಾ ಕೂಡ ಇದ್ದಳು. ಅಲ್ಲದೆ ಅದು ಜನರಲ್ ಸ್ಟ್ಯಾಫ್‌ರೂಮ್. ಇತರೆ ಡಿಪಾರ್ಟ್‌ಮೆಂಟುಗಳ ಅಧ್ಯಾಪಕರೂ ಇದ್ದರು. ವಸುಂಧರಾಳನ್ನು ಸರಿಯಾಗಿ ಗಮನಿಸಿ ನೋಡಲು ಸಾಧ್ಯವಾಗಿರಲಿಲ್ಲ. ಈಗ ಒಬ್ಬಳೇ ಬಂದು ತಾನು ಒಬ್ಬನೇ ಇದ್ದಾಗ ಭೇಟಿಮಾಡಿದಾಗ ಅವಳನ್ನು ಇಡಿಯಾಗಿ ನೋಡುವ ಅವಕಾಶ ಒದಗಿ ಬಂದಿತ್ತು. ಪುಟಿಯುತ್ತಿದ್ದ ಸ್ನಿಗ್ಧ ಸೌಂದರ್ಯದ ಯುವತಿಯನ್ನು ನೋಡಿ "ಅಬ್ಬಾ ಎಂಥ ಸೌಂದರ್ಯ!" ಎನಿಸಿತು. ಅವಳನ್ನೇ

ಎವೆಯಿಕ್ಕದೆ ನೋಡಬೇಕೆಂಬ ಬಲವತ್ತರವಾದ ಆಸೆಯನ್ನು ಕಷ್ಟಪಟ್ಟು ಹತ್ತಿಕ್ಕಿಕೊಂಡ. ಅದು ತಾನು ಅವಳ ಅಧ್ಯಾಪಕ, ಅಲ್ಲದೆ ಒಂದು ಹೆಣ್ಣನ್ನು ಹಾಗೆ ತೀರ ದಿಟ್ಟಿಸಿ ನೋಡುವುದು ಸಭ್ಯತೆಯ ಲಕ್ಷಣವಲ್ಲ ಎಂದು ಅವನ ವಿದ್ಯೆ ಮತ್ತು ಲೋಕಜ್ಞಾನ ಅವನಿಗೆ ಕಲಿಸಿತ್ತು. ಲೋಕಾಭಿರಾಮವಾಗಿ ಮಾತಾಡುತ್ತ ಮನೆಯಲ್ಲಿ ಯಾರ್‍ಯಾರಿದ್ದೀರಿ, ಯಾವ ಕಡೆಯಿಂದ ಬರ್ತೀರಿ ಎಂದೆಲ್ಲ ವಿಚಾರಿಸಿದ. ಆ ಮೇಲೆ ಮುಂಚೆಯೇ ತೆಗೆದಿಟ್ಟಿದ್ದ ಪುಸ್ತಕವನ್ನು ಕೊಟ್ಟು– "ನೀವು ಯಾವುದೇ ಹೊಸ ಪುಸ್ತಕ ಓದಿದರೂ ಓದಿ ಹಾಗೇ ಬಿಟ್ಟುಬಿಡಬೇಡಿ. ಅದರ ಬಗ್ಗೆ ನೋಟ್ಸ್ ಮಾಡಿಕೊಳ್ಳಿ. ಮುಖ್ಯವಾದ ಅಂಶಗಳನ್ನು, ಪುಟ ಸಂಖ್ಯೆ, ಆ ಪುಸ್ತಕ ಪಬ್ಲಿಷ್ ಆದ ವರ್ಷ, ಪಬ್ಲಿಕೇಷನ್ ಹೆಸರು ಇವುಗಳನ್ನೆಲ್ಲ ಬರೆದಿಟ್ಟುಕೊಳ್ಳಿ. ಮುಂದೆ ಎಂದಾದರೂ ಅದು ಉಪಯೋಗಕ್ಕೆ ಬರುತ್ತೆ. "ರೈಟಿಂಗ್ ಮೇಕ್ಸ್ ಮ್ಯಾನ್ ಪರ್ಫೆಕ್ಟ್ ಅಂತ ಕೇಳಿದ್ದೀರಾ?" ಎಂದ. "ಹೂಂ ಕೇಳಿದ್ದೀನಿ ಸರ್" ಎಂದಳು. "ಬರೀ ಮ್ಯಾನ್ ಮಾತ್ರ ಅಲ್ಲರಿ ವುಮನ್ ಅನ್ನೂ ಪರ್ಫೆಕ್ಟ್ ಮಾಡುತ್ತೆ" ಅಂತ ತಮಾಶೆ ಮಾಡಿದ. "ಅದು ಯಾಕೆ ಸರ್ ಹಾಗೆ 'ವುಮನ್ ಅನ್ನೂ' ಅಂದಿರಿ ಅಂತ ಕೇಳಿದ್ದಕ್ಕೆ "ಮೇಕ್ಸ್ ಮ್ಯಾನ್ ಪರ್ಫೆಕ್ಟ್ ಅಂತ ನಾನೇದರೂ ನಿಮ್ಮ ಕನ್ನಡ ಮೇಡಮ್ ಮಮತಾ ಇದ್ದಾರಲ್ಲ ಅವರ ಮುಂದೆ ಹೇಳಿದ್ದರೆ 'ಹೂಂ ಈ ಜಗತ್ತೆಲ್ಲ ಮೇಲ್ ಛಾವನಿಸ್ಟಿಕ್ ಸೊಸೈಟಿ. ಅದಕ್ಕೇ ಹೆಂಗಸರು ಅವರಿಗೆ ಲೆಕ್ಕಕ್ಕೇ ಇಲ್ಲ. ಈ ಗಂಡಸರೆಲ್ಲಾ ಹೀಗೇ. ಗಾದೆಗಳು, ನುಡಿಗಟ್ಟುಗಳನ್ನೂ ಪುರುಷರಿಗೆ ಅನ್ವಯಿಸಿ ಹೇಳಿರೋದೇ ಹೆಚ್ಚು. ಮಹಾ ಪ್ರತಿಷ್ಠೆ ಜನ ಅಂತ' ನನ್ನನ್ನು ತರಾಟೆಗೆ ತಗೊಂಡುಬಿಡುತ್ತಿದ್ದರು. ನಾನೇನಾದರೂ ಛೇರ್‌ಮನ್ ಅಂತ ಹೇಳಿದರೆ, ಅಲ್ಲ ಶ್ರೀನಿವಾಸ್ ಒಬ್ಬ ಲೇಡಿ ಆ ಜಾಗದಲ್ಲಿದ್ದಾಗಲೂ ಛೇರ್‌ಮನ್ ಅಂತ ಅನ್ನಬೇಕಾ? ಅದರ ಬದಲು ಛೇರ್ ಪರ್ಸನ್ ಅನ್ನಿ" ಅಂತ ಎಲ್ಲವುದರಲ್ಲೂ ಹೆಣ್ಣಿನ ಅಸ್ತಿತ್ವ ಇರಬೇಕೆನ್ನುವವರು. ನೀವು ಬಿಡಿ ಪಾಪ ಸಾಧು, ಹಾಗೆಲ್ಲಾ ದಬಾಯಿಸಲ್ಲ" ಅಂತ ನಕ್ಕ. ವಸುಂಧರಾ ಅವನ ಮಾತಿಗೆ ಬಾಯಿ ತುಂಬ ನಕ್ಕಳು. ಅವಳ ಸುಂದರವಾದ ಮಲ್ಲಿಗೆಯ ಮೊಗ್ಗಿನಂಥ ದಂತ ಪಂಕ್ತಿ ಮತ್ತು ಎಂಥವರನ್ನೂ ಮೋಡಿಮಾಡಿ ಸೆರೆಹಿಡಿದುಬಿಡುವ ಅವಳ ನಗೆಯನ್ನು ನೋಡಿ ಅವಾಕ್ಕಾದ. "ಆಗಾಗ್ಗೆ ಬಂದು ಭೇಟಿ ಮಾಡ್ತಾ ಇರಿ. ಓದು, ಚರ್ಚೆಗಳಿಂದ ನಮ್ಮ ಅರಿವು ವಿಸ್ತಾರಗೊಳ್ಳುತ್ತೆ. ನಮ್ಮ ಪ್ರೊಫೆಸರ್ ಅವರು ಯಾವಾಗಲೂ ಇದನ್ನು ಹೇಳ್ತಾ ಇದ್ದರು." ಎಂದ. ವಸುಂಧರಾ 'ಥ್ಯಾಂಕ್ ಯೂ ಸರ್' ಎಂದು ಹೇಳಿ ಹೊರಬಂದಳು. ಶ್ರೀನಿವಾಸನಿಗೂ ತರಗತಿಯಿದ್ದುದರಿಂದ ಲಗುಬಗೆಯಿಂದ ವಾಚ್ ನೋಡಿಕೊಂಡು ಪುಸ್ತಕಗಳನ್ನು ಜೋಡಿಸಿಕೊಂಡ. ವಸುಂಧರಾಳಿಗೂ ನೆಕ್ಸ್ಟ್ ಪೀರಿಯಡ್ ರಾಜ್ಯಶಾಸ್ತ್ರದ ತರಗತಿ ಇದ್ದುದರಿಂದ ಹೊರಟಳು.

* * *

ಶ್ರೀನಿವಾಸ್‌ನನ್ನು ಭೇಟಿ ಮಾಡಿದ ಮೇಲೆ ಅಂದು ಕಾಲೇಜು ಮುಗಿಸಿಕೊಂಡು ಮನೆಗೆ ಹೋದಮೇಲೂ ಅದರ ಬಗೆಗೇ ವಸುಂಧರಾಳ ಮನಸ್ಸು ಯೋಚಿಸುತ್ತಿತ್ತು.

ಮೇಷ್ಟ್ರು ತುಂಬಾ ಸರಸಿ, ತಾನು ಕಾಲೇಜಿನ ಅಧ್ಯಾಪಕ ಎಂಬ ಯಾವುದೇ ಶ್ರೀಮದ್ ಗಾಂಭೀರ್ಯವಿಲ್ಲದ, ಸರಳವಾಗಿ ಎಲ್ಲರೊಂದಿಗೂ ಬೆರೆಯುವ ವ್ಯಕ್ತಿ ಎನಿಸಿತು. ತರಗತಿ ತೆಗೆದುಕೊಳ್ಳುವ ಕೆಲವು ಹಿರಿಯ ಪ್ರಾಧ್ಯಾಪಕರು, ಶ್ರೀಮದ್ ಗಾಂಭೀರ್ಯದ ಮೂರ್ತಿಗಳಾಗಿದ್ದುದು ಅವಳಿಗೆ ಗೊತ್ತಿತ್ತು. ಕೆಲವು ಮೇಡಮ್‌ಗಳು ವಿದ್ಯಾರ್ಥಿಗಳ ಹತ್ತಿರ ಹಾಗಿರಲಿ ವಿದ್ಯಾರ್ಥಿನಿಯರ ಹತ್ತಿರವೂ ಸಲಿಗೆಯಿಂದ ಮಾತಾಡ್ತಿರಲಿಲ್ಲ. ವಿಶ್ ಮಾಡಿದರೆ ಕೈ ಎತ್ತಿ ವಿಶ್ ಮಾಡೋಕೂ ಕಷ್ಟ ಎನ್ನುವ ಹಾಗೆ ಸುಮ್ಮನೆ ಗೋಣು ಆಡಿಸುತ್ತಿದ್ದರು. ಇನ್ನು ಪುಸ್ತಕ ಗಿಸ್ತಕ ಕೊಡಿ ಅಂತ ಅವರನ್ನು ಕೇಳೋದು ದೂರವೇ ಉಳಿಯಿತು. ಜೊತೆಗೆ ಎನ್.ಎಸ್. ಮೇಷ್ಟ್ರು ನೋಡೋಕೆ ಎಷ್ಟು ಸ್ಮಾರ್ಟ್ ಆಗಿದ್ದಾರೆ ಅನ್ನಿಸಿತು. ಅವರು ಮೊದಲನೇ ಕ್ಲಾಸ್ ತೆಗೆದುಕೊಂಡ ನಂತರದಲ್ಲೇ ತಾನು ಮತ್ತು ಹೇಮಾ ಆ ಬಗ್ಗೆ ಮಾತಾಡಿಕೊಂಡದ್ದು ನೆನಪಿಗೆ ಬಂತು. ಶ್ರೀನಿವಾಸ್ ಅವಳಿಂದ ಹೇಗೆ ಆಕರ್ಷಿತನಾಗಿದ್ದನೋ ವಸುಂಧರಾ ಕೂಡ ಅವನ ಮಾತುಕತೆ, ಇತಿಹಾಸದ ಜ್ಞಾನ, ಆಕರ್ಷಕವಾಗಿ ಪಾಠಮಾಡುವ ರೀತಿ ಮತ್ತು ಒಟ್ಟಾರೆ ಅವನ ವ್ಯಕ್ತಿತ್ವದಿಂದ ತುಂಬ ಪ್ರಭಾವಿತಳಾಗಿದ್ದಳು.

ಅಧ್ಯಾಪಕಿಯರಲ್ಲಿ ಅವರ ಕನ್ನಡ ಮೇಡಮ್ ಮಮತಾ ಮಾತ್ರ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರೊಂದಿಗೆ ತುಂಬಾ ಸೋಷಿಯಲ್ ಆಗಿರುತ್ತಿದ್ದರು. ಮಧ್ಯಮ ಎತ್ತರದ, ನೀಳ ಕಾಯದ, ಮಾಸಲು ಬಿಳುಪು ವರ್ಣದ ಆತ್ಮವಿಶ್ವಾಸ ತುಂಬಿದ ಅವರ ವ್ಯಕ್ತಿತ್ವಕ್ಕೆ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಸೂಜಿಗಲ್ಲಿನಂತೆ ಸೆಳೆದಿಟ್ಟುಕೊಳ್ಳುವ ಶಕ್ತಿಯಿತ್ತು. ವಿದ್ಯಾರ್ಥಿಗಳು ಅವರಿಗೆ ಬಿಡುವಿದ್ದಾಗ ಯಾವಾಗ ಬೇಕಾದರೂ ಅವರನ್ನು ಭೇಟಿಯಾಗಬಹುದಾಗಿತ್ತು. ಹಾಗಂತ ಅವರಿಗೆ ಮೊದಲ ಕ್ಲಾಸ್ ತೆಗೆದುಕೊಂಡ ದಿವಸವೇ ಹೇಳಿಬಿಟ್ಟಿದ್ದರು. ಅವರು ಪಾಠ ಚೆನ್ನಾಗಿ ಮಾಡ್ತಾರೆಂದು ವಿದ್ಯಾರ್ಥಿ ವಲಯದಲ್ಲಿ ಅವರ ಬಗ್ಗೆ ಒಳ್ಳೆಯ ಹೆಸರಿತ್ತು. ಅದುವರೆಗಾಗಲೇ ಒಂದೆರಡು ಪುಸ್ತಕಗಳನ್ನು ಬರೆದು ಹೆಸರು ಮಾಡಿದ್ದರು. ಅವರ ಪ್ರಗತಿಪರ ವಿಚಾರಗಳಿಗೂ ಮೇಡಮ್ ಸಾಹಿತ್ಯ ವಲಯದಲ್ಲಿ ಹೆಸರು ಮಾಡಿದ್ದರು. ಸಮಯ ಸಂದರ್ಭ ಬಂದಾಗ ಸ್ತ್ರೀವಾದ, ಅದರ ಕುರಿತಾದ ಬರಹಗಳ ಬಗ್ಗೆ ಪ್ರಸ್ತಾಪಿಸುತ್ತಾ ಇದ್ದರು. ಕನ್ನಡದ ಹಳೆಯ ಕವಿಗಳು, ಲೇಖಕರ ಕೃತಿಗಳನ್ನು ಸ್ತ್ರೀವಾದಿ ನೆಲೆಯಿಂದ ವಿಮರ್ಶಿಸುವುದು ಅವರ ರೀತಿಯಾಗಿತ್ತು. ಹೇಮಾಳಿಗಂತೂ ಮಮತಾ ಮೇಡಮ್ ವಿಚಾರಗಳು ಅವರ ಪಾಠ ಅಂದರೆ ಪ್ರಾಣ. ವಸುಂಧರಾ ಕೂಡ ಅವರ ಬಗ್ಗೆ ಗೌರವ ಅಭಿಮಾನ ಹೊಂದಿದ್ದರೂ ಈಗಿನ ಸ್ತ್ರೀವಾದೀ ನೆಲೆಯಿಂದ ಹಿಂದಿನ ಕವಿಗಳನ್ನು ಅಳೆಯ ಹೊರಡುವುದು ಎಷ್ಟು ಸರಿ ಎನ್ನುವ ಬಗ್ಗೆ ಅವಳಿಗೆ ಸ್ವಲ್ಪ ಗೊಂದಲ ಇತ್ತು. ಊರಿನಲ್ಲಿ ಭಾಷಣ, ವಿಚಾರ ಸಂಕಿರಣಗಳಲ್ಲಿ ಅವರು ಪಾಲ್ಗೊಳ್ಳುತ್ತಿದ್ದರು. ಕಾಲೇಜಿನ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಇವರು ಮತ್ತು ಇಂಗ್ಲಿಷ್ ವಿಭಾಗದ ಸುಕನ್ಯಾ ಮತ್ತು ಶ್ರೀನಿವಾಸ್ ಯಾವಾಗಲೂ ಜೊತೆಗೂಡುತ್ತಿದ್ದರು. ವಿದ್ಯಾರ್ಥಿಗಳ ಆ ವರ್ಷದ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ನಿಗದಿಯಾಗಿತ್ತು.

ಅದರ ಅಂಗವಾಗಿ ವಿದ್ಯಾರ್ಥಿಗಳಿಗೆಂದು ಕೆಲವು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಅವುಗಳ ನಂತರದಲ್ಲಿ ಸುಮ್ಮನೆ ವಿನೋದಕ್ಕೆಂದು ಅಧ್ಯಾಪಕರಿಗೆಂದು ಕೆಲವೊಂದು ವಿನೋದದ ಸ್ಪರ್ಧೆಗಳನ್ನು ವಿದ್ಯಾರ್ಥಿಗಳೇ ಏರ್ಪಡಿಸಿದ್ದರು. ಅವುಗಳಲ್ಲಿ ಇಲಿಗೆ ಬಾಲ ಬರೆಯುವುದೂ ಒಂದು. ಬೋರ್ಡಿನ ಮೇಲೊಂದು ಇಲಿಯನ್ನು ಬರೆದು ಅದರ ಬಾಲವನ್ನು ಬರೆಯದೆ ಬಿಟ್ಟಿದ್ದರು. ವಿದ್ಯಾರ್ಥಿ ಮುಖಂಡರುಗಳೇ ಅಧ್ಯಾಪಕರ ಕಣ್ಣು ಕಟ್ಟಿ ಮೂರು ಸುತ್ತು ಸುತ್ತಿಸಿ ಬೋರ್ಡಿನ ಸಮೀಪ ಬಿಟ್ಟು ಇಲಿಯ ಬಾಲವನ್ನು ಸರಿಯಾದ ಜಾಗದಲ್ಲಿ ಬರೆದವರು ವಿಜಯಿಗಳೆಂದು ಘೋಷಿಸುವುದು. ಏಳೆಂಟು ಜನ ಅಧ್ಯಾಪಕರು ಆ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಎಲ್ಲರೂ ಉತ್ಸಾಹದಿಂದ ಬೋರ್ಡಿನ ಹತ್ತಿರಕ್ಕೆ ಹೋಗಿ ಸರಿಯಾಗಿಯೇ ಬಾಲ ಬರೆದಿದ್ದೇವೆಂದುಕೊಂಡು ಎಲ್ಲೆಲ್ಲೋ ಬರೆಯುತ್ತಿದ್ದದ್ದನ್ನು ನೋಡಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬಿದ್ದುಬಿದ್ದು ನಗುತ್ತಿದ್ದರು. ಅದರಲ್ಲಿ ಸ್ವಲ್ಪ ಹತ್ತಿರ ಹತ್ತಿರ ಬಾಲ ಬರೆದವರು ಮಮತಾ ಮೇಡಮ್. ಆದರೆ ಸರಿಯಾದ ಜಾಗದಲ್ಲಿ ಬಾಲ ಬರೆದದ್ದು ಶ್ರೀನಿವಾಸ್. ಮುಂಚೆಯೇ ಇಲಿಯನ್ನು ಸರಿಯಾಗಿ ಗಮನಿಸಿ ಬಾಲ ಇರಬೇಕಾದ ಜಾಗದಲ್ಲಿಯೇ ಬಾಲವನ್ನು ಸರಿಯಾಗಿ ಬರೆದದ್ದು ನೋಡಿ ವಿದ್ಯಾರ್ಥಿವೃಂದ ಚಪ್ಪಾಳೆ ತಟ್ಟಿ ನಕ್ಕುನಲಿಯಿತು. ಆ ಮೇಲೆ ಮಾತನಾಡಿದ ಶ್ರೀನಿವಾಸ್"ನಾನು ಬಾಲ ಇರಬೇಕಾದ ಕಡೆ ಬಾಲ ಬರೆದಿದ್ದೀನಿ ಅಷ್ಟೇ. ಆದರೆ ಯಾರದೂ ಬಾಲ ಹಿಡಿಯೋಕೆ ಹೋಗೋನಲ್ಲ" ಎಂದು ಹೇಳಿದಾಗ ಎಲ್ಲರೂ ಮತ್ತೊಮ್ಮೆ ನಕ್ಕರು. ಆ ಹೊತ್ತಿನಿಂದ ಅಧ್ಯಾಪಕರು ಅವರವರೇ ಇದ್ದಾಗ "ಏನ್ರೀ ಇಲಿ ಬಾಲ ಬರೆದು ಪ್ರೈಜ್ ತಗೊಂಡ ಶ್ರೀನಿವಾಸ್ ಅವರೇ" ಎಂದು ತಮಾಶೆ ಮಾಡುತ್ತಿದ್ದರು."

* * *

ಶ್ರೀನಿವಾಸ್‌ನನ್ನು ವಸುಂಧರಾ ಭೇಟಿ ಮಾಡಿದ ದಿನ ಹೇಮಾ ಜೊತೆಗಿರಲಿಲ್ಲ. ಮರುದಿನ ಹೇಮಾ ಸಿಕ್ಕಿದಾಗ ಬಿಡುವಿನ ವೇಳೆಯಲ್ಲಿ ತಾನು ಎನ್.ಎಸ್. ಮಾಸ್ಟರನ್ನು ಭೇಟಿಮಾಡಿದ್ದು, ಅವರೊಂದಿಗೆ ನಡೆದ ಮಾತುಕತೆಯ ಕೆಲವು ವಿವರಗಳು ಇದನ್ನೆಲ್ಲ ಹೇಳಿ – "ಎನ್.ಎಸ್. ಮಾಸ್ಟರ್ ಬರೀ ನೋಡೋದಕ್ಕೆ ಮಾತ್ರ ಸ್ಮಾರ್ಟ್ ಅಲ್ಲ ಕಣೇ. ಇತಿಹಾಸದ ವಿಷಯದಲ್ಲಿ, ಮತ್ತು ತಮಾಷೆಯಾಗಿ ಮಾತಾಡೋದರಲ್ಲಿ, ಪಾಠ ಮಾಡೋದರಲ್ಲಿ ಎಲ್ಲವುದರಲ್ಲೂ ಸ್ಮಾರ್ಟ್. ನನಗಂತೂ ಅವರು ತುಂಬ ಹಿಡಿಸಿದರಪ್ಪ" ಎಂದಳು. ಹೇಮಾನಗುತ್ತ – "ಓಹ್ ಏನು ರಾಜಕುಮಾರಿಯ ಮದುವೆ ರಾಜಕುಮಾರನ ಜೊತೆ ಫಿಫ್ಟಿ ಪರ್ಸೆಂಟ್ ಫಿಕ್ಸ್ ಆದಂತಿದೆ" ಎಂದು ಛೇಡಿಸಿದಳು. ವಸುಂಧರಾ – "ಥೂ ಹೋಗೇ. ನಿನ್ನ ಹತ್ತಿರ ಏನೂ ಹೇಳಲೇ ಬಾರದು. ನಾನು ಹೇಳಿದ್ದು ಆ ಅರ್ಥದಲ್ಲಿ ಅಲ್ಲ ಕಣೆ. ನೀನು ಏನೇನೇನೋ ಲೆಕ್ಕ ಹಾಕಿಕೊಂಡು ಬಿಡಬೇಡಾ. ನಿನ್ನ ಹೆಸರು ಹೇಮಾ ಅಷ್ಟೆ, ನೀನು ವಾಸ್ತವದ ಆಧಾರ ಕಿಂಚಿತ್ತೂ ಇಲ್ಲದೆ ಇರೋ ಬರೀ ಕಲ್ಪನೆಯ ಹೇಮಾಹೇಮಿ ಕಾವ್ಯ ಕಟ್ಟೋಕೆ ಹೋಗಿಬಿಡಬೇಡ." ಎಂದು ಒಂದು ಚೂರು ಜಿಗುಟಿ

ಹುಸು ಮುನಿಸು ತೋರಿದಳು. "ಹೌದು, ಫಿಫ್ಟಿ ಪರ್ಸೆಂಟ್ ಫಿಕ್ಸ್ ಅಂದರೇನೆ?" ಎಂದಳು. "ಅವರು ಒಪ್ಪಿದಾರೋ ಬಿಟ್ಟಿದಾರೋ ಆದರೆ ನೀನಂತೂ ಅವರನ್ನು ಅಷ್ಟೊಂದು ಮೆಚ್ಚಿಕೊಂಡು ಮಾರುಹೋಗಿಬಿಟ್ಟಿದ್ದೀಯಲ್ಲಾ ಅದಕ್ಕೇ ಹಾಗಂದೆ" ಎಂದು ಮತ್ತೆ ನಕ್ಕಳು. ವಸುಂಧರಾ ಹೇಮಾಳಿಗೆ ಸ್ವಲ್ಪ ಜೋರಾಗಿಯೇ ಜಿಗುಟಿದಳು. ಅದಕ್ಕೆ ಹೇಮಾ "ಹೋಗಲಿ ಬಿಡೆ. ಆ ರಾಜಕುಮಾರನ್ನ ದೂರದಿಂದಲೇ ನೋಡಿ ನಾವಿಬ್ಬರೂ ಸಂತೋಷ ಪಡೋಣ. ಅವನು ನಮ್ಮಿಬ್ಬರಲ್ಲಿ ಯಾರಿಗೂ ದಕ್ಕೋನಲ್ಲ ಬಿಡು. ಅವರು ಮಂಡ್ಯ ಕಡೆ ಗೌಡರಂತಲ್ಲೇ. ಹಾಗಂತ ಅದನ್ನು ಪತ್ತೆ ಮಾಡಿದ ಆ ತರ್ಲೆ ಕಿಟ್ಟಿ ರೀಡಿಂಗ್ ರೂಮ್‌ನಲ್ಲಿ ಯಾರ ಹತ್ತಿರಾನೋ ಹೇಳುತ್ತಿದ್ದದ್ದು ಕೇಳಿಸಿಕೊಂಡೆ. ನಿಮ್ಮಪ್ಪ ಹೇಳಿಕೇಳಿ ಮಹಾನ್ ಹಾರುವಯ್ಯ, ವೈದಿಕ ಶಿರೋಮಣಿ. ಇನ್ನು ನಮ್ಮಪ್ಪ ಇನ್ನೇನು ಭಾರೀ ಜಂಗಮಯ್ಯ." ಎಂದಳು. ವಸುಂಧರಾ – "ಮಂಡ್ಯ ಕಡೆ ಗೌಡ್ರು ಅಂದರೆ ಭಾರೀ ಜಮೀನ್ನೋರು ಅಂತ ಅನ್ನಿಸುತ್ತೆ. ಇಂಥವರಿಗೆ ಇಷ್ಟೆಲ್ಲಾ ಇತಿಹಾಸ, ಕನ್ನಡ ಸಾಹಿತ್ಯ, ಇಂಗ್ಲಿಷ್ ಜ್ಞಾನ ಎಲ್ಲ ಹ್ಯಾಗೆ?" ಅದಕ್ಕೆ ಹೇಮಾ "ಓಹೋ ಏನ್ ಜ್ಞಾನ ಅಂದರೆ ಬರೀ ನಿಮ್ಮ ಬ್ರಾಹ್ಮಣರ ಸ್ವತ್ತು ಅಂತ ಅಂದುಕೊಂಡುಬಿಟ್ಟಿದ್ದೀಯಾ? ಅದೆಲ್ಲ ಹಳೇ ಕಾಲಕ್ಕಾಯಿತು. ಇದು 1985ನೇ ಇಸವಿ. 1895 ಅಲ್ಲ. ಈಗ ಎಲ್ಲಾ ಜಾತೀಲು ಬ್ರಾಹ್ಮಣರನ್ನು ಮೀರಿಸೋ ಬುದ್ಧಿವಂತರು ಬರ್ತಾ ಇದ್ದಾರೆ. ಇನ್ನುಮೇಲೆ ನಿಮ್ಮ ಜಂಬ ಎಲ್ಲಾ ಕಟ್ಟಿಡಿ" ಅಂತ ರೇಗಿಸಿದಳು. "ತಿರುಗ ಅದೇ ಎಡಸುತ್ತಿನ ಮಾತು. ಬ್ರಾಹ್ಮಣರನ್ನು ಮೀರಿಸೋ ಬುದ್ಧಿವಂತೆ ನೀನೇ ಇದ್ದೀಯಲ್ಲಾ ನನ್ನ ಕಣ್ಣೆದುರಿಗೆ. ಬೇರೆ ಇನ್ಯಾಕೆ ಬೇಕು. ನನ್ನನ್ನು ರೇಗಿಸೋದು ಅಂದರೆ ನಿನಗೆ ಎಲ್ಲಿಲ್ಲದ ಉತ್ಸಾಹ ಅಲ್ಲವಾ? ಈಗ ಬ್ರಾಹ್ಮಣರ ಸ್ಥಿತಿ ಏನಿದ್ದರೂ ಬೋಡಮುಂಡೆ ತುರುಬು ನೆನೆಸಿಕೊಂಡಳು ಅಂತ ಗಾದೆ ಹೇಳ್ತಾರಲ್ಲ ಹಾಗೆ. ಬ್ರಾಹ್ಮಣರ ಹತ್ತಿರ ಈಗ ದುಡ್ಡಂತೂ ಇಲ್ಲವೇ ಇಲ್ಲ. ನಮ್ಮಪ್ಪನ್ನೇ ತಗೋ. ಹೊರಗಡೆ ದೊಡ್ಡ ಪುರೋಹಿತರು ಅಂತ ಗೌರವ ಕೊಟ್ಟರೆ ನಮ್ಮವರೆ ಅವರವರಲ್ಲೇ ಆ ಜೋಯಿಸ 'ಪರಾನ್ನದ ಬ್ರಾಹ್ಮಣಾ' ಅಂತ ಆಡಿಕೊಳ್ತಾರೆ. ಮುಂಚೆ ಪೌರೋಹಿತ್ಯವೇ ಮುಖ್ಯ ಕಸುಬಾಗಿದ್ದ ನಮ್ಮಪ್ಪ ಅದರಿಂದ ಜೀವನ ನಡೆಸೋದು ಕಷ್ಟ ಅಂತ ಗೊತ್ತಾಗಿ ತಾವು ಓದಿದ ಇಂಟರ್ಮೀಡಿಯೇಟ್ ಕೋರ್ಸ್‌ನಿಂದಾಗಿ ಅವರಿವರನ್ನು ಹಿಡಿದು ಹೇಗೋ ಈಗಿನ ಕೆಲಸ ಗಿಟ್ಟಿಸಿಕೊಂಡರಂತೆ. ಭಾರೀ ಜಮೀನುಗಳ ಹಿಡುವಳಿ ಉಳ್ಳ ಬ್ರಾಹ್ಮಣರ ಸಂಖ್ಯೆ ಎಷ್ಟು ಮಹಾ ಇದೆ ನಮ್ಮ ರಾಜ್ಯದಲ್ಲಿ? ಹಳ್ಳಿಗಳ ಕಡೆ ತಿಥಿಮತಿ ಮಾಡಿಸ್ಕೊಂಡೋ ಇಲ್ಲ ದೇವರ ಪೂಜೆಯ ತಟ್ಟೆ ಕಾಸು ನಂಬಿಕೊಂಡೋ ಜೀವನ ಸಾಗಿಸೋ ಬ್ರಾಹ್ಮಣರೇ ಜಾಸ್ತಿ. ದೇವರಾಜ ಅರಸರು ಜಾರಿಗೆ ತಂದ ಭೂಸುಧಾರಣೆ ಕಾನೂನಿನಿಂದಾಗಿ ಚೂರೋ ಪಾರೋ ಜಮೀನು ಇಟ್ಟುಕೊಂಡಿದ್ದೋರೂ ಜಮೀನು ಕಳಕೊಂಡು, ಓದದೆ ಇದ್ದರೆ ಹೊಟ್ಟೆ ತುಂಬಿಸೋದು ಕಷ್ಟ ಅಂತ ಈಗ ಸ್ಕೂಲು ಕಾಲೇಜು ಕಡೆ ಮುಖ ಮಾಡ್ತಾ ಇದ್ದಾರೆ. ಆದರೆ ಅಲ್ಲೂ ಡಿಗ್ರಿ ಕಾಲೇಜು, ಮೆಡಿಕಲ್ಲು, ಇಂಜಿನಿಯರಿಂಗ್ ಇವಕ್ಕೆಲ್ಲಾ ಹೋಗೋರು ತೀರಾ ಕಡಿಮೆನೇ. ಮೆಡಿಕಲ್ಲಂತೂ ಇಲ್ಲವೇ ಇಲ್ಲ ಬಿಡು. ಅಷ್ಟೊಂದು ಹಣಾ ತೆರೋ ಶಕ್ತಿ ಈಗ ಬ್ರಾಹ್ಮಣರಲ್ಲಿ ಬೆರಳೆಣಿಕೆಯಷ್ಟು

ಜನ ಬಿಟ್ಟರೆ ಬಹಳ ಜನಕ್ಕಿಲ್ಲವೇ ಇಲ್ಲ. ಕ್ಲಾರ್ಕುಗಳೋ, ಮೇಷ್ಟ್ರುಗಳೋ ಆದರೆ ಅದೇ ಹೆಚ್ಚು. ವಿದ್ಯೆ ಯಾವ ಜಾತಿ ಸ್ವತ್ತೂ ಅಲ್ಲಾ ಕಣೆ. ಈಗ ಈ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರ ಅನ್ನುವ ಜಾತಿ ಭೇದ ಇಲ್ಲದೆ ಇರೋ ಹೊರ ದೇಶಗಳಲ್ಲೇ ವಿಜ್ಞಾನಿಗಳು ದೊಡ್ಡ ದೊಡ್ಡ ಜಗತ್ಪ್ರಸಿದ್ಧ ಡಾಕ್ಟರ್‌ಗಳೂ, ಸಾಹಿತಿಗಳೂ, ಸಂಶೋಧಕರೂ ಇಲ್ಲವೇನೇ. ಅವರೆಲ್ಲಾ ಏನು ಬ್ರಾಹ್ಮಣರಾ? ಅದೆಲ್ಲಾ ದಡ್ಡ ಬ್ರಾಹ್ಮಣರು ಒಣ ಪ್ರತಿಷ್ಠೆಗೆ ಹೇಳಿಕೊಳ್ಳುವ ಮತ್ತು ವಾಸ್ತವದ ಪರಿಜ್ಞಾನವಿಲ್ಲದ ಇತರ ಅನ್ಯ ಜಾತಿಗಳವರು ಹೇಳುವ ಮಾತು." ಎಂದಳು. ವಸುಂಧರಾಳ ವಾದ ಸರಣಿ ಕೇಳುತ್ತಿದ್ದ ಹೇಮಾ – "ಹೌದು ಅವತ್ತು ನೀನು ಕಾಲೇಜಿಗೆ ಬಂದಿರಲಿಲ್ಲ. ನಾನು ಸುಮ್ಮನೆ ಪೊಲಿಟಿಕಲ್ ಕ್ಲಾಸ್ ಹೇಗಿರುತ್ತೋ ನೋಡೋಣ ಅಂತ ಹೋಗಿದ್ದೆ. ನಮ್ಮ ಪೊಲಿಟಿಕಲ್ ಸೈನ್ಸ್‌ನ ಸೋಮಶೇಖರ್ ಸರ್ ಕ್ಲಾಸ್‌ನಲ್ಲಿ ಹೇಳ್ತಾ ಇದ್ದರು–"ನಮ್ಮ ರಾಜ್ಯದಲ್ಲಿ ದೇವರಾಜ ಅರಸು ಜಾರಿಗೆ ತಂದಂಥ 'ಉಳುವವನೇ ಹೊಲದೊಡೆಯ'(ಟಿಲ್ಲರ್ ಈಸ್ ದಿ ಓನರ್ ಆಫ್ ದಿ ಲ್ಯಾಂಡ್) ನೀತಿಯ ಭೂಸುದಾರಣೆ ಕಾಯಿದೆಯಂಥ ಪ್ರಗತಿಪರ ಕಾಯಿದೆ ಇಡೀ ದೇಶದಲ್ಲಿ ಬೇರೆ ಯಾವ ರಾಜ್ಯದಲ್ಲೂ ಯಾರೂ ಜಾರಿಗೆ ತರಲಿಲ್ಲ. ಅದರಿಂದಾಗಿ ಯಾವತ್ತೂ ಸ್ವಂತ ಜಮೀನಿನ ಕನಸೂ ಕಾಣೋಕೆ ಆಗದೆ ಇದ್ದಂಥ ಕೆಳವರ್ಗದವರು, ದಲಿತರು ತಮ್ಮದು ಅಂತ ಒಂದು ಚೂರು ಜಮೀನು ಹೊಂದೋ ಹಾಗಾಯ್ತು ಅಂತ. ಹಾಗೇ ಅವರ ಆಡಳಿತದಲ್ಲಿ ಜಾರಿಗೆ ಕೊಟ್ಟ ಹಾವನೂರರ 'ಹಿಂದುಳಿದ ವರ್ಗದ ಆಯೋಗದ ವರದಿ' ಅತ್ಯಂತ ವೈಜ್ಞಾನಿಕವಾದ ವರದಿ ಅಂತೆ." ವಸುಂಧರಾ – "ಅವರ ಮಾತು ಸರಿ ಅನ್ನಿಸುತ್ತೆ. ನನಗೆ ಅಷ್ಟೆಲ್ಲ ರಾಜಕೀಯ ಜ್ಞಾನ ಇಲ್ಲ. ಆದರೆ ಒಂದಂತೂ ಸತ್ಯ. ನಮ್ಮ ಬ್ರಾಹ್ಮಣರುಗಳು ಕೆಲವರು ಪಿತ್ರಾರ್ಜಿತವಾದ ಆಸ್ತಿ ಇದೆ ಅಂತ ಹೇಳಿಕೊಳ್ಳುತ್ತಿದ್ದರು ಅಷ್ಟೆ. ಒಂದು ದಿನವಾದರೂ ಆ ಜಮೀನಿನತ್ತ ತಲೆಹಾಕಿ ಮಲಗದೆ ಇದ್ದೋರೇ ಜಾಸ್ತಿ. ನಮ್ಮ ಅಪ್ಪನೇ, ಅವರ ಅಪ್ಪ ಅಂದರೆ ನಮ್ಮ ತಾತನ ಬಗ್ಗೆ ಹೇಳ್ತಾ ಇದ್ದರು– ನಮ್ಮ ಹೊಲಕ್ಕೆ ಗೊಬ್ಬರ ಹೊಡೆಸುತ್ತೀನಿ ಅಂತ ಹೋಗಿ ಅವರ ಅಪ್ಪ ಪಕ್ಕದ ಹೊಲಕ್ಕೆ ಗೊಬ್ಬರ ಹೊಡೆಸಿದ್ದರಂತೆ! ಅಷ್ಟರ ಮಟ್ಟಿಗೆ ಇವರಿಗೆ ತಮ್ಮ ಜಮೀನಿನ ಬಗ್ಗೆ ಇದ್ದ ಪರಿಜ್ಞಾನ, ಆಸೆ ಅಕರಾಸ್ಥೆ! ಯಾರೋ ಗೆಯ್ಯೋರು, ಯಾರೋ ಬೆಳಿಯೋರು. ಅವರು ಕಷ್ಟಪಟ್ಟು ಬೆಳೆದಿದ್ದರಲ್ಲಿ ಜಮೀನಿನ ಯಜಮಾನರು ಅಂತ ಕ್ರಿಯ ಇಟ್ಟುಕೊಂಡು ಇವರಿಗೂ ಅರ್ಧ ಭಾಗ ಮನೆಗೆ ತಂದು ಹಾಕೋರು. ತನ್ನದೇ ಜಮೀನು ಅಂತ ಅಂದುಕೊಂಡು ಇವರುಗಳ ಜಮೀನಿನಲ್ಲಿ ತಮ್ಮ ಬೆವರು ಹರಿಸಿ ದುಡೀತಾ ಇದ್ದರಲ್ಲ ಅಂಥವರದೇ ಆ ಜಮೀನು ಆಗೋದು, ಅವರೇ ನೆಲದ ಒಡೆಯರಾಗೋದು ಸಹಜ ನ್ಯಾಯ ತಾನೆ? ನಮ್ಮ ಜಮೀನು ಹೋಯ್ತು ಅಂತ ನಮಗೆ ಸ್ವಲ್ಪ ದುಃಖ ಆಗಿ ನಮ್ಮಲ್ಲಿ ಹಲವರು ಆಗ ಅರಸರಿಗೆ ಶಾಪ ಹಾಕಿದ್ದು ನಿಜ. ಅರಸರು ಮಾಡಿದ್ದೇ ಸರಿ. ಆದರೆ ಅದರಲ್ಲಿ ಒಂದು ಸ್ವಲ್ಪ ಮಟ್ಟಿನ ಮಾರ್ಪಾಟು ಮಾಡಬಹುದಾಗಿತ್ತೇನೋ. ಜೀವನ ಮಾಡಕ್ಕೆ ಬೇರೆ ಇನ್ನೇನು ರಹ ಇಲ್ಲದೆ ಇರೋ ವಿಧವೆಯರು, ತೀರಾ ಅಲ್ಪವಾದ ಜಮೀನಿಟ್ಟುಕೊಂಡಿದ್ದ, ಬೇರೆ ಏನೂ ಜೀವನದ ಮಾರ್ಗ ಇಲ್ಲದ ಕಡು

ಬಡವರಿಗೆ, ಯಾವುದೋ ಒಂದು ಮಿತಿ ಗೊತ್ತುಮಾಡಿ ಆ ಮಿತಿ ಒಳಗೆ ಜಮೀನು ಹೊಂದಿರೋವರನ್ನು ಈ ಕಾಯಿದೆಯಿಂದ ಹೊರಗೆ ಇಡಬಹುದಾಗಿತ್ತೇನೋ ಅಂತ ನಮ್ಮಲ್ಲಿ ಕೆಲವರು ನಮ್ಮಪ್ಪನ ಹತ್ತಿರ ಮಾತಾಡೋವಾಗ ಹೇಳೋದು ಕೇಳಿದ್ದೆ. ಯಾಕೆ ಅಂದರೆ ರಾಜಕೀಯವಾಗಿ ಪ್ರಬಲರಾಗಿದ್ದವರು, ಶ್ರೀಮಂತರು ನಮ್ಮ ಬ್ರಾಹ್ಮಣರ ಹಾಗೆನೇ ಜಮೀನಿನಲ್ಲಿ ಉತ್ತು ಬಿತ್ತು ಮಾಡಿದೋರೇನಲ್ಲ. ಆದರೆ ಅವರುಗಳಲ್ಲಿ ಜಮೀನು ಕಳಕೊಂಡೋರು ತುಂಬ ಕಡಮೆ. ಜಮೀನು ಕಳಕೊಂಡೋರೆಲ್ಲಾ ತುಂಡು ಜಮೀನಿಟುಕೊಂಡಿದ್ದ ಬಡ ಬ್ರಾಹ್ಮಣರು, ವಿಧವೆಯರು ಪಾಪಿ ಪರದೇಶಿಗಳು ಅಷ್ಟೆ ಅನ್ನೋದು ತೀರ ಸುಳ್ಳಲ್ಲ. ಸಾಮಾಜಿಕವಾಗಿ ಹಿಂದುಳಿದವರ್ಗದವರಿಗೆ ಸರ್ಕಾರೀ ನೌಕರಿಯಲ್ಲಿ ಮೀಸಲಾತಿಗೆ ಅವಕಾಶ ಮಾಡಿಕೊಡುವ ಹಾವನೂರು ಆಯೋಗದ ವರದಿ ಕೂಡ ಅತ್ಯಂತ ಪ್ರಗತಿಪರವಾದ ವರದೀನೆ. ಅದಿಲ್ಲದಿದ್ದರೆ ಬರೀ ಮೇಲ್ವರ್ಗದ ಪ್ರಬಲಜಾತಿಗಳವರೇ ಸರ್ಕಾರೀ ನೌಕರಿಯಲ್ಲಿ ಸಿಂಹಪಾಲು ಪಡೆದುಬಿಡುತ್ತಿದ್ದರು."

"ಇಷ್ಟು ಹೊತ್ತೂ ನಿನ್ನ ಜೊತೆ ವಾದ ಮಾಡಿ, ಜೊತೆಗೆ ಕಂಠಶೋಷಣೆ ಮಾಡಿಕೊಂಡು ಸಾಕಾಗಿದೆ. ಜೊತೆಗೆ ಹಿಂದಿನ ಪೀರಿಯಡ್ ನಮಗೆ ಅರ್ಥಶಾಸ್ತ್ರ ಪಾಠ ಮಾಡೋ ನೆವದಲ್ಲಿ ನಮಗೆಲ್ರಿಗೂ ಬೋರ್ ಹೊಡೆಸಿದರಲ್ಲ ಆ ಕೆ.ಕೆ ಮಾಸ್ಟರ್ ಅದರಿಂದ ತಲೆ ಕೆಟ್ಟೋದ ಹಾಗಾಗಿದೆ, ಕಾಫಿ ಕೊಡಿಸು ನಡಿ" ಅಂತ ಹೇಮಾಳನ್ನು ಕ್ಯಾಂಟೀನನತ್ತ ಎಳೆದುಕೊಂಡು ಹೋದಳು. ಆಗ ಮಧ್ಯಾಹ್ನ ಮೂರೂವರೆ. ಇವರು ಕ್ಯಾಂಟೀನಿನ ಒಳಕ್ಕೆ ಹೋಗುತ್ತಿದ್ದ ಹಾಗೇ ಒಳಗಿನಿಂದ ಹೊರಕ್ಕೆ ಬಂದ ಎನ್.ಎಸ್. ಮಾಸ್ಟರ್ – "ಓಹೋ ಏನು ಎಣೆವಕ್ಕಿಗಳು ಕಾಫಿಗೆ ಹೊರಟಿರಾ" ಅಂತ ನಗುತ್ತ ಕ್ಯಾಂಟೀನಿನ ಓನರ್ ಗೆ– "ಇವರ ಕಾಫಿ ದುಡ್ಡನ್ನು ನನ್ನ ಅಕೌಂಟಿಗೆ ಬರೆದುಕೊಂಡುಬಿಡ್ರಿ"– ಅಂತ ಹೇಳಿ ಪ್ರತಿ ಮಾತಿಗೆ ಅವಕಾಶ ಕೊಡದೆ ದಡದಡ ಅಂತ ಹೊರಟೇ ಹೋದರು.

ಅಧ್ಯಾಯ–3

ಸಾವಿತ್ರಮ್ಮನವರ ಚಿಕ್ಕಮ್ಮ ವಿಶಾಲಾಕ್ಷಮ್ಮನವರು ಹೆಸರಿಗೆ ಚಿಕ್ಕಮ್ಮ ಆದರೂ ಸಾವಿತ್ರಮ್ಮನವರಿಗಿಂತ ಒಂದು ಏಳೆಂಟು ವರ್ಷ ದೊಡ್ಡವರು ಅಷ್ಟೆ. ಸಾವಿತ್ರಮ್ಮನವರ ತಂದೆ ತುಂಬಾ ಬಡವರು. ಅವರೂ ವೈದಿಕ ಬ್ರಾಹ್ಮಣರೇ. ಅದರೆ ಆ ವೃತ್ತಿಯಿಂದ ನೆಮ್ಮದಿಯಾಗಿ ಸಂಸಾರ ತೂಗಿಸೋದೇ ಕಷ್ಟವಾಗಿತ್ತು. ಮದುವೆಯ ವಯಸ್ಸು ಮೀರಿದರೂ ಮಗಳ ಮದುವೆ ಆಗಲಿಲ್ಲವಲ್ಲಾ ಅನ್ನುವ ಚಿಂತೆಯಲ್ಲೇ ಅವರ ಹೆಂಡತಿ ತೀರಿಕೊಂಡಿದ್ದರು. ಇನ್ನು ಸಾವಿತ್ರಮ್ಮನವರ ತಮ್ಮ ಹಾಗೂ ಹೀಗೂ ಎಸ್.ಎಸ್.ಎಲ್.ಸಿ ಮಾಡಿದ್ದರಿಂದ ಪ್ರೈಮರಿ ಸ್ಕೂಲಿನ ಮೇಷ್ಟರ ಕೆಲಸ ಸಿಕ್ಕಿತ್ತು. ಮಗಳ ವಿದ್ಯಾಭ್ಯಾಸ ಎಂಟನೇ ತರಗತಿಗೆ ನಿಲ್ಲಿಸಿದ್ದರು. ಹಳ್ಳಿಗಳಲ್ಲಿ ಬ್ರಾಹ್ಮಣರ ಮನೆಗಳಲ್ಲಿ ಆಗೆಲ್ಲಾ ಹೆಣ್ಣುಮಕ್ಕಳಿಗೆ ಅಲ್ಲಿವರೆಗೆ ಓದಿಸುತ್ತಿದ್ದುದೇ ಹೆಚ್ಚಿನದಾಗಿತ್ತು. ಆದರೆ ಅಪ್ಪ ಅಮ್ಮನಿಗೆ ಇದ್ದ ಧೈರ್ಯವೆಂದರೆ ಮಗಳು ತುಂಬ ಲಕ್ಷಣವಾಗಿದ್ದ ಕಾರಣ ಮದುವೆಯಾಗಲು ಅಷ್ಟೇನೂ ಕಷ್ಟವಾಗಲಾರದು ಎಂದು. ಆದರೆ ಜಾತಕ ಕೂಡಿಬರಲಿಲ್ಲ ಎಂದೋ, ಗಂಡಿನ ಕಡೆಯವರು ಹೆಚ್ಚಿಗೆ ವರದಕ್ಷಿಣೆ ಕೇಳಿದರು ಎಂದೋ ಮಗಳ ಮದುವೆ ತಡವಾಗ್ತಾನೇ ಹೋಯ್ತು. ಆಕೆಯ ವಯಸ್ಸಿನ ಹುಡುಗಿಯರಿಗೆಲ್ಲಾ ಮದುವೆ ಆಗಿ ಆಗಲೇ ಎರಡೆರಡು ಮಕ್ಕಳಾದರೂ ಸಾವಿತ್ರಮ್ಮನಿಗೆ ಕಂಕಣಬಲ ಕೂಡಿಬಂದಿರಲಿಲ್ಲ. ಅವರ ತಾಯಿ ಮೊದಲಿನಿಂದಲೂ ಅಂಥ ಧಾಡಸ್ತ ಹೆಂಗಸೇನಾಗಿರಲಿಲ್ಲ. ಆಗಾಗ್ಗೆ ಕಾಡುತ್ತಿದ್ದ ಅಸ್ತಮಾ ಜೊತೆಗೆ ಈ ಮಗಳ ಮದುವೆಯ ಚಿಂತೆಯೂ ಸೇರಿಕೊಂಡು ಆಕೆ ತೀರಿಕೊಂಡರು. ಆಕೆ ತೀರಿಕೊಂಡ ಒಂದು ವರ್ಷಕ್ಕೇ ಸಾವಿತ್ರಮ್ಮನ ಮದುವೆ ನರಸಿಂಹ ಜೋಯಿಸರೊಂದಿಗೆ ನೆರವೇರಿತು. ಈ ಸಂಬಂಧವನ್ನು ಹೊಂದಿಸಿಕೊಟ್ಟವರು ಮೀನಾಕ್ಷಮ್ಮನವರು ಮತ್ತು ಅವರ ಯಜಮಾನರಾದ ಶ್ರೀಕಂಠಯ್ಯನವರೇ. ಇವರ ಮನೆಯ ಪೌರೋಹಿತ್ಯದ ಕೆಲಸಗಳಿಗೆ ಬರುತ್ತಿದ್ದ ನರಸಿಂಹ ಜೋಯಿಸರ ಪರಿಚಯ ಅವರಿಗೆ ಇತ್ತು. ತಂದೆ ತಾಯಿ ಇಲ್ಲದ ಅವರಿಗೆ ವಿಧವೆ ಅಕ್ಕ ಅದೆಲ್ಲೋ ದೂರದ ಊರಿನಲ್ಲಿ ಇದ್ದರು. ಜೋಯಿಸರು ಮದುವೆಯ ವಯಸ್ಸು ಮೀರಿಹೋಗಿದ್ದರೂ ಮುಂದೆ ನಿಂತು ಹೆಣ್ಣು ನೋಡಿ ಮದುವೆ ಮಾಡಿಸುವವರು ಯಾರೂ ಇಲ್ಲದ್ದರಿಂದಲೋ ಏನೋ ಮದುವೆಯ ಯೋಗ ಕೂಡಿಬಂದಿರಲಿಲ್ಲ. ಜೋಯಿಸರು ಆಗಲೇ 35ರ ಹತ್ತಿರದವರಾಗಿದ್ದರು. ಇತ್ತ ತನ್ನ ಅಕ್ಕನ ಮಗಳು ಸಾವಿತ್ರಮ್ಮನ ವಯಸ್ಸೂ ಆಗಲೇ 28ನ್ನು ಮೀರಿದ್ದ ಕಾರಣ ಜಾತಕಗಳು ಕೂಡಿಬಂದದ್ದರಿಂದ ಸಾವಿತ್ರಮ್ಮನ ತಂದೆಯವರನ್ನೊಪ್ಪಿಸಿ ಮದುವೆ ಮಾಡಿಸಿದರು. ಸಾವಿತ್ರಮ್ಮನ ತಾಯಿ ಇಲ್ಲವಾದ ಕಾರಣ ಸಾವಿತ್ರಮ್ಮನ ಚಿಕ್ಕಪ್ಪ ಚಿಕ್ಕಮ್ಮನೇ ಹಸೆಮಣೆಯ ಮೇಲೆ ಕುಳಿತು

ಧಾರೆಯೆರೆದು ಕೊಡುವ ಕೆಲಸ ಮಾಡಿದ್ದರು. ಹಾಗಾಗಿ ಸಾವಿತ್ರಮ್ಮ ತುಮಕೂರಿನ ನರಸಿಂಹ ಜೋಯಿಸರ ಕೈಹಿಡಿದು ಮನೆ ತುಂಬಿದರು. ಕೇವಲ ಜೋಯಿಸರ ಮನೆ ತುಂಬಿದ್ದಷ್ಟೇ ಅಲ್ಲ ಬಂದ ಕೆಲವೇ ತಿಂಗಳಲ್ಲಿ ಜೋಯಿಸರ ಮನಸ್ಸನ್ನೂ ತುಂಬಿದರು. ಜೋಯಿಸರು ಸ್ವಲ್ಪ ಮುಂಗೋಪಿ, ಕೆಲವೊಮ್ಮೆ ಉಚಾಯಿಸಿ ಮಾತನಾಡುವುದು ಬಿಟ್ಟರೆ ಮನುಷ್ಯನ ಸ್ವಭಾವ ಕೆಟ್ಟದ್ದಲ್ಲ. ಸಾವಿತ್ರಮ್ಮ ಸ್ವಭಾವತಃ ತುಂಬ ಸಮಾಧಾನಿ. ಅಲ್ಲದೆ ಕೆಳಮಧ್ಯಮ ವರ್ಗದಲ್ಲಿ ಬೆಳೆದುಬಂದ ಹೆಣ್ಣು ಮಗಳಾಗಿದ್ದರಿಂದ ಬಡತನದ ಕಷ್ಟಗಳ ಅರಿವಿತ್ತು. ಮರ್ಯಾದೆಯಿಂದ ಸಂಸಾರ ತೂಗಿಸಿಕೊಂಡುಹೋಗುವುದು ಹೇಗೆಂದು ತಾಯಿಯನ್ನು ನೋಡಿ ತಿಳಿದಿದ್ದರಿಂದ ಜೋಯಿಸರಿಗೆ ಮನೆ ನಡೆಸುವುದು ಒಂದು ಸಮಸ್ಯೆ ಎನಿಸಲಿಲ್ಲ.

ವಿಶಾಲಾಕ್ಷಮ್ಮನ ವಿಷಯಕ್ಕೆ ಆಕೆ ತನ್ನ ಮದುವೆ ಗೊತ್ತುಮಾಡಿ ನಡೆಸಿಕೊಟ್ಟ ಹಾಗೂ ವಯಸ್ಸಿನಲ್ಲಿ ಹೆಚ್ಚುಕಡಮೆ ತನ್ನ ವಾರಿಗೆಯವಳೇ ಎನಿಸಿದ ಚಿಕ್ಕಮ್ಮನ ವಿಷಯಕ್ಕೆ ಸಾವಿತ್ರಮ್ಮನವರಿಗೆ ವಿಶೇಷವಾದ ಮಮತೆ. ಆಕೆ ಜೋಯಿಸರ ಕೈಹಿಡಿದು ಈ ಊರಿಗೆ ಬಂದ ಎರಡು ವರ್ಷಕ್ಕೆ ಶಾಮು ಹುಟ್ಟಿದ್ದು. ವಿಶಾಲಾಕ್ಷಮ್ಮನ ಯಜಮಾನರ ಅಕ್ಕ ಬಂದು ಮೂರು ತಿಂಗಳು ಬಾಣಂತನ ಮಾಡಿದ್ದು. ಮುಂದೆ ವಾರಕ್ಕೊಂದು ಸಲವೋ ಎರಡು ಸಲವೋ ಚಿಕ್ಕಮ್ಮ ಹೇಳಿಕಳಿಸಿದಾಗಲೆಲ್ಲ ಸಾವಿತ್ರಮ್ಮ ಅವರ ನೆರವಿಗೆ ಧಾವಿಸಿ ಹೋಗುತ್ತಿದ್ದುದು ಉಂಟು. ವಸುಂಧರಾ ಹುಟ್ಟುವುದಕ್ಕೆ ಮುಂಚೆ ಜೋಯಿಸರಿಗೆ ಶಾಲೆಯ ಮತ್ತು ಪೌರೋಹಿತ್ಯದ ಕೆಲಸವಿಲ್ಲದೆ ಇದ್ದ ದಿನಗಳಲ್ಲಿ ವಿಶಾಲಾಕ್ಷಮ್ಮನ ಮನೆಗೇ ಹೋಗಿ ಅಲ್ಲೇ ಅಡುಗೆ ಮಾಡಿಕೊಟ್ಟು ಊಟವನ್ನೂ ಮುಗಿಸಿಕೊಂಡು ಬರುತ್ತಿದ್ದರು. ಒಟ್ಟಿನಲ್ಲಿ ಎರಡೂ ಮನೆಗಳಲ್ಲಿ ಪರಸ್ಪರ ಬಾಂಧವ್ಯ ಚೆನ್ನಾಗಿತ್ತು. ಶಾಮುವಿಗೆ ನಾಲ್ಕು ವರ್ಷವೋ ಐದು ವರ್ಷವೋ ಆಗಿದ್ದಾಗ ಸಾವಿತ್ರಮ್ಮ ವಸುಂಧರಾಳಿಗೆ ಗರ್ಭಿಣಿಯಾಗಿದ್ದು. ಆಕೆ ಗರ್ಭಿಣಿಯಾಗಿದ್ದಲ್ಲಿಂದ ತೊಡಗಿ ಆಕೆಗೆ ಮೂರು ನಾಲ್ಕು ತಿಂಗಳವರೆಗೂ ಬಾಣಂತನ ಮುಗಿಸಿಕೊಟ್ಟವರೇ ಈ ಚಿಕ್ಕಮ್ಮ. ಚಿಕ್ಕಿ ಚಿಕ್ಕಿ ಎಂದು ಯಾವಾಗಲೂ ಅಕ್ಕರೆಯಿಂದ ಕರೆಯುತ್ತಿದ್ದರು.

ಶಾಮೂ ವಸುಂಧರಾಗಿಂತ ನಾಲ್ಕೈದು ವರ್ಷ ಹಿರಿಯನಷ್ಟೆ. ಹಬ್ಬ ಹರಿದಿನಗಳಲ್ಲಿ ಎರಡೂ ಮನೆಗಳವರೂ ಪರಸ್ಪರ ಹೋಗಿ ಬಂದು ಮಾಡುತ್ತಿದ್ದರು. ಶಾಮೂನ ಬೆನ್ನ ಹಿಂದೆ ಹುಟ್ಟಿದ ಅವನ ತಂಗಿ ಸರೋಜ ವಸುಂಧರಾಳಿಗಿಂತ ಎರಡು ವರ್ಷ ದೊಡ್ಡವಳು. ವಸುಂಧರಾ ಸ್ವಲ್ಪ ದೊಡ್ಡವಳಾದ ಮೇಲೆ ಇವರ ಮನೆಗೆ ಬಂದಾಗ ಮೂವರೂ ಕೂಡಿ ಆಟವಾಡುತ್ತಿದ್ದರು. ಹೀಗೆ ಮಕ್ಕಳಲ್ಲಿ ಮೊದಲಿನಿಂದಲೂ ಅಕ್ಕರೆ, ಆತ್ಮೀಯತೆ ಬೆಳೆದು ಬಂದಿತ್ತು. ಅದರಲ್ಲೂ ಶಾಮೂ ಮತ್ತು ವಸಂಧರಾ ಯಾವಾಗಲೂ ಜೊತೆಯಾಗಿ ಆಟ ಆಡೋದು, ಓಡಾಡೋದು ಮಾಡುತ್ತಿದ್ದರು. ಜೋಯಿಸರ ಮನೆಗೆ ಶಾಮೂ ಮತ್ತು ಅವನ ತಂಗಿ ಆಗಾಗ್ಗೆ ಬಂದಾಗ ಅಂಗಡಿಯಿಂದ ಅಥವಾ ಪೇಟೆಯಿಂದ ಏನಾದರೂ ತರಬೇಕಿದ್ದರೆ, ಪ್ರದ್ಯುಮ್ನ ಇನ್ನೂ ತುಂಬಾ ಚಿಕ್ಕವನಾಗಿದ್ದರಿಂದ ಸಾವಿತ್ರಮ್ಮನವರು ವಸುಂಧರಾಗೆ ನೀನು ಶಾಮು ಜೊತೇಲಿ ಹೋಗಿ ತೆಗೆದುಕೊಂಡು ಬನ್ನಿ ಎಂದು

ಹೇಳುತ್ತಿದ್ದರು. ಸರೋಜಳನ್ನು ಕರೆದರೂ ಅವಳಿಗೆ ಒಂದು ರೀತಿಯ ಸೋಮಾರಿತನ. "ಅಯ್ಯೋ ನೀವೇ ಹೋಗಿರಪ್ಪ. ನಾನು ಮನೇಲೇ ಇರುತ್ತೀನಿ" ಎಂದುಬಿಡುತ್ತಿದ್ದಳು. ಶಾಮೂ ಪಾಲಿಟೆಕ್ನಿಕ್ ಓದುತ್ತಿದ್ದಾಗ ವಸುಂಧರಾ ಆಗಲೇ ಹೈಸ್ಕೂಲ್ ಸೆಕೆಂಡ್ ಇಯರ್ ಓದುತ್ತಿದ್ದು ಆಗತಾನೆ ಯೌವನಕ್ಕೆ ಕಾಲಿಟ್ಟಿದ್ದ ಚೆಲುವೆ. ಆಗಲೂ ಅವರಿಬ್ಬರೂ ಜೊತೆಯಾಗಿ ಹೋಗಿಬರುತ್ತಿದ್ದುದುಂಟು. ಶಾಮೂಗೆ ಆಗಿನಿಂದಲೂ ವಸುಂಧರಾಳ ಬಗ್ಗೆ ಪ್ರೀತಿ ಬೆಳೆದುಬಂದಿತ್ತು. ಅವಳ ಚೆಲುವಿಗೆ ಅವನು ಮನಸೋತಿದ್ದ. ಅದರೆ ಅದೇ ವಸುಂಧರಾಗೆ ಅವನ ಜೊತೆ ಸಲುಗೆ ಇತ್ತೇ ಹೊರತು ಬೇರೆ ರೀತಿಯ ಭಾವನೆ ಇರಲಿಲ್ಲ. ಅವರ ಅಮ್ಮ ಸಾವಿತ್ರಮ್ಮನವರ ಹತ್ತಿರ ಒಂದು ಸಲ ಮಾತಾಡುತ್ತ ಶಾಮೂ "ನಮ್ಮ ಬಳಗದಲ್ಲೇ ವಸೂನಷ್ಟು ಚೆನ್ನಾಗಿರೋರು ಯಾರೂ ಇಲ್ಲ" ಅಂದಿದ್ದ. ಅದಕ್ಕೆ ಅಲ್ಲೇ ಇದ್ದ ಸರೋಜ "ಓಹೋ! ಏನು ರಾಯರ ಕಣ್ಣು ಆಗಲೇ ಅವಳ ಮೇಲೆ ಬಿತ್ತಾ ಅಂತ" ಛೇಡಿಸಿದ್ದಳು. ಅವರಮ್ಮ–"ಬಿದ್ದರೇನು ತಪ್ಪು ಬಿಡು. ಬೇರೆ ಯಾರ ಮೇಲೋ ಬೀಳಲಿಲ್ಲವಲ್ಲ" ಅಂತ ನಕ್ಕಿದ್ದರು. ಆದರೆ ಶಾಮೂನ ಮಾತನ್ನು ಯಾರೂ ಆಗ ಗಂಭಿರವಾಗಿ ತೆಗೆದುಕೊಂಡಿರಲಿಲ್ಲ. ಯಾವಾಗಲಾದರೂ ಮಾತಿನ ಮಧ್ಯೆ ವಸುಂಧರಾಳ ಅಮ್ಮ ವಿಶಾಲಾಕ್ಷಮ್ಮನವರ ಬಳಿ ನಗುನಗುತ್ತಾ–"ಚಿಕ್ಕಿ ನನ್ನ ಮಗಳನ್ನು ನಿನ್ನ ಸೊಸೆ ಮಾಡಿಕೊಂಡುಬಿಡು. ಶಾಮೂ ಹೇಗೂ ವಾವೆಯಲ್ಲಿ ನನಗೆ ತಮ್ಮನೇ ಆಗಬೇಲ್ಲ, ವಸುಂಧರಾ ನಿಮ್ಮನೇಲೆ ಸದಾ ಇದ್ದುಬಿಡಬಹುದು. ನಮಗೂ ಹೊರಗಡೆ ಗಂಡು ಹುಡುಕೋದು ತಪ್ಪುತ್ತೆ" ಎನ್ನುತ್ತಿದ್ದಳು. ಅದಕ್ಕೆ ಅವರು – "ಅಯ್ಯೋ ಈಗ ಹೀಗಿವೆ ಇವು. ಮುಂದೆ ಯಾರು ಹೇಗೋ ಏನೋ ಯಾರಿಗೆ ಗೊತ್ತು. ದೇವರ ಆಶೀರ್ವಾದ ಇದ್ದರೆ, ಋಣಾನುಬಂಧ ಇದ್ದರೆ ಯಾಕಾಗಬಾರದು" ಎಂದಿದ್ದರು. ಶಾಮೂ ಎಸ್.ಎಸ್.ಎಲ್.ಸಿ. ನಂತರ ಪಾಲಿಟೆಕ್ನಿಕ್‌ಗೆ ಸೇರಿ ಅಲ್ಲಿ ಮೆಕ್ಯಾನಿಕಲ್ ಡಿಪ್ಲೊಮಾದಲ್ಲಿ ಪ್ರಥಮ ದರ್ಜೆ ಪಡೆದು ಬೆಂಗಳೂರಿನಲ್ಲಿ ಒಂದು ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ. ಆದರೆ ಅವನ ತಂಗಿ ಸರೋಜ ಕಷ್ಟಪಟ್ಟು ಪಿ.ಯು.ಸಿ ಪಾಸ್ ಮಾಡಿದ್ದೇ ಹೆಚ್ಚಾಯಿತು. ನಾನು ಮುಂದೆ ಕಾಲೇಜು ಓದಲ್ಲ ಅಂತ ಹೇಳಿಬಿಟ್ಟಳು. ಆದರೆ ಹೈಸ್ಕೂಲ್ ಓದುತ್ತ ಇರುವಾಗಲೇ ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗಳಿಗೆ ಕುಳಿತು ಪಿ.ಯು.ಸಿ ಮುಗಿಸೋ ಹೊತ್ತಿಗೆ ವಿಶಾರದದವರೆಗೂ ಪಾಸ್ ಮಾಡಿಬಿಟ್ಟಿದ್ದಳು. ಯಾವುದಾದರೂ ಸ್ಕೂಲಿನಲ್ಲಿ ಹಿಂದೀ ಮೇಡಮ್ ಆಗಿ ಕೆಲಸ ಸಿಗುತ್ತೇನೋ ಅಂತ ನೋಡುತ್ತಾ ಇದ್ದಳು.

ಅಧ್ಯಾಯ–4

ಕಾಲೇಜಿನ ಎನ್.ಎಸ್.ಎಸ್ ಘಟಕದ ಸಂಚಾಲಕನಾಗಿಯೂ ಶ್ರೀನಿವಾಸ್ ಕೆಲಸಮಾಡುತ್ತಿದ್ದನಷ್ಟೆ. ಕಾಲೇಜು ರೋಟರಿ ಕ್ಲಬ್ ಜೊತೆ ಸೇರಿ ರಕ್ತದಾನ ಶಿಬಿರವನ್ನು ಆ ವರ್ಷ ನಡೆಸಿತು. ಪ್ರಿನ್ಸಿಪಾಲರು ಉದ್ಘಾಟನೆ ಮಾಡಿದ ಮೇಲೆ ಶಿಬಿರ ಪ್ರಾರಂಭವಾಯಿತು. ಅಧ್ಯಾಪಕರ ಪೈಕಿ ಕನ್ನಡ ಮೇಡಮ್ ಮಮತಾ, ಸಮಾಜಶಾಸ್ತ್ರದ ಅಧ್ಯಾಪಕ ಎಸ್.ಆರ್. ಮಾಸ್ಟರ್ ಇಬ್ಬರೂ ಶಿಬಿರ ನಡೆಸಲು ನೆರವು ನೀಡಿದರು. ಎನ್.ಎಸ್.ಎಸ್ ವಿದ್ಯಾರ್ಥಿಗಳಲ್ಲದಿದ್ದರೂ ವಸುಂಧರಾ ಮತ್ತು ಹೇಮಾ ಆ ಶಿಬಿರದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ರೋಟರಿಯವರು ಗೊತ್ತುಪಡಿಸಿದ್ದ ಡಾಕ್ಟರರೊಬ್ಬರು ಒಂದು ದಿನ ಮುಂಚೆಯೇ ಬಂದು ರಕ್ತದಾನದ ಮಹತ್ವ ಕುರಿತು ಹೇಳಿ ಯಾರೆಲ್ಲರೂ ರಕ್ತದಾನ ಮಾಡಬಹುದೆಂದು ತಿಳಿಸಿದರು. ರಕ್ತದಾನ ಮಾಡಲು ಅರ್ಹರಾದವರನ್ನು ಪಟ್ಟಿಮಾಡಲು ತೊಡಗಿದರು. ವಿದ್ಯಾರ್ಥಿಗಳ ಬ್ಲಡ್ ಗ್ರೂಪ್ ಕೂಡ ತಿಳಿಸಿದರು. ರಕ್ತದಾನ ಮಾಡಲು ವಿದ್ಯಾರ್ಥಿ ವಿದ್ಯಾರ್ಥಿಯರೇನೋ ಉತ್ಸಾಹದಿಂದ ಮುಂದೆ ಬಂದರೂ ಹಾಗೆ ಬಂದವರೆಲ್ಲರನ್ನೂ ಆರಿಸಲಿಲ್ಲ. ಯಾರ ಎಚ್.ಬಿ. ಇರಬೇಕಾದದ್ದಕ್ಕಿಂತ ಕಡಿಮೆ ಇತ್ತೋ ಅವರನ್ನು ಆಯ್ಕೆ ಮಾಡಲಿಲ್ಲ. ಅವರಿಗೆ ಉತ್ಸಾಹಭಂಗವಾಯಿತು. ಬಹಳಷ್ಟು ಜನ ಹೆಣ್ಣುಮಕ್ಕಳು ರಕ್ತದಾನ ಮಾಡಲು ಅರ್ಹರಾಗಲಿಲ್ಲ. ಆಗ ಶ್ರೀನಿವಾಸ್– "ನೋಡಿ ನಮ್ಮ ದೇಶದ ಬಹಳಷ್ಟು ಜನ ಹೆಣ್ಣು ಮಕ್ಕಳು ವಿರಕ್ತೆಯರು ಅರ್ಥಾತ್ ರಕ್ತಹೀನರು" ಅಂತ ಒಂದು ಜೋಕ್ ಮಾಡಿದ. ಎಲ್ಲರೂ ನಕ್ಕರು. ಅಷ್ಟೇ ಅಲ್ಲ; ಸರಿಯಾದ ಪೌಷ್ಟಿಕ ಆಹಾರವಿಲ್ಲದೆ ನಮ್ಮ ಅನೇಕ ಹೆಣ್ಣು ಮಕ್ಕಳಿಗೆ ಕನಿಷ್ಠ ಮಟ್ಟದ ಎಚ್.ಬಿ. ಇರುವುದಿಲ್ಲ. ಅದರಿಂದ ಅವರಿಗೆ ಜೀವನೋತ್ಸಾಹವೂ ಇರುವುದಿಲ್ಲ. ಇದರ ಜೊತೆಗೆ ಮೊದಲಿನ ಹಾಗೆ ವರ್ಷ ವರ್ಷವೂ ಮಕ್ಕಳನ್ನು ಹೆರುತ್ತ ಹೋಗಿಬಿಟ್ಟರಂತೂ ಅಂಥವರಿಗೆ ರೋಗಗಳನ್ನು ಎದುರಿಸುವ ಶಕ್ತಿಯೂ ಇಲ್ಲವಾಗಿ ಚಿಕ್ಕ ವಯಸ್ಸಿಗೇ ಮೃತ್ಯುವಶರಾಗುತ್ತಾರೆ. ಸದ್ಯ ಈಗ ಆ ವಿಷಯದಲ್ಲಿ ಬಹತೇಕರಿಗೆ ಅರಿವು ಬಂದಂತಿದೆ" ಎಂದು ಹೇಳಿದ. ಆಮೇಲೆ "ಡಾಕ್ಟರ್ ಹೇಳಿದ್ದು ಕೇಳಿಸಿಕೊಂಡ್ರೀ ತಾನೆ? ಕೆಲವರು ಕನ್ನಡ ಅನ್ನೋದು ನಮ್ಮ ರಕ್ತದಲ್ಲೇ ಇದೆ. ಸಂಗೀತ ಇವರ ರಕ್ತದಲ್ಲಿದೆ ಅಂತೆಲ್ಲ ಹೇಳ್ತಾರಲ್ಲ ಅದೆಲ್ಲ ಬರೀ ಬೋಗಸ್ಸು! ರಕ್ತದಲ್ಲಿರೋದೇನಿದ್ದರೂ ಕೆಂಪು ರಕ್ತ ಕಣ, ಬಿಳಿ ರಕ್ತ ಕಣ, ಪ್ಲಾಸ್ಮ ಮತ್ತು ಪ್ಲೇಟ್‌ಲೆಟ್ಸ್ ಅಷ್ಟೇ! ಅಂದಾಗ ವಸುಂಧರಾ– "ಸರ್, ಅದೊಂದು ಫಿಗರೇಟಿವ್ ವೇ ಆಫ್ ಸೇಯಿಂಗ್ ಅಲ್ಲವಾ ಸರ್?" ಎಂದು ಕೇಳಿದಾಗ – "ನಮಸ್ಕಾರ ಕಂಡ್ರೀ ಪಂಡಿತರಿಗೆ!" ಎಂದು ನಕ್ಕ. ರಕ್ತದಾನ ಮಾಡಿದ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಮಂಚದ ಮೇಲೆ ಮಲಗಿಸಲು, ರಕ್ತ ನೀಡಿದ ನಂತರದಲ್ಲಿ ಅವರಿಗೆ ಜ್ಯೂಸ್

ನೀಡಲು ವಸುಂಧರಾ ಮತ್ತು ಹೇಮಾ ಸ್ವಯಂ ಸೇವಕರಾಗಿ ಕೆಲಸ ಮಾಡಿದರು. ಅವರಿಬ್ಬರಿಗೂ ರಕ್ತದಾನ ಮಾಡಬೇಕೆಂದು ಆಸೆಯಾದರೂ ಹಿಂಜರಿಯುತ್ತಾ ಇದ್ದರು. ಆಗ ಶ್ರೀನಿವಾಸ್– "ಮೊದಲು ಡಾಕ್ಟರ್ ಹತ್ತಿರ ಪರೀಕ್ಷಿಸಿಕೊಳ್ಳಿ. ಅರ್ಹರು ಅಂತ ಅನ್ನಿಸಿದರೆ ಧೈರ್ಯವಾಗಿ ರಕ್ತದಾನ ಮಾಡಿ. ನಮ್ಮ ರಕ್ತ ಕಡಿಮೆ ಆಗಿಬಿಟ್ಟೀತು ಅಂತ ಹೆದರಬೇಡಿ. 24 ಗಂಟೆಯೊಳಗೆ ಅದು ಕೂಡಿಕೊಳ್ಳುತ್ತೆ. ಅಂತ ಹುರಿದುಂಬಿಸಿದ. ಅವರಿಬ್ಬರೂ ಅರ್ಹರೆನಿಸಿದ್ದರಿಂದ ರಕ್ತ ನೀಡಿದರು.

ರಕ್ತದಾನ ಶಿಬಿರ ಅತ್ಯಂತ ಯಶಸ್ವಿಯಾಗಿ ನಡೆಯಿತು. ಮನೆಗೆ ಹೋಗುವುದಕ್ಕೆ ಮುಂಚೆ ಎನ್.ಎಸ್. ಮೇಷ್ಟ್ರಿಗೆ ಹೇಳಿಹೋಗೋಣವೆಂದು ಇಬ್ಬರೂ ಅವರ ಎನ್.ಎಸ್.ಎಸ್. ರೂಮಿಗೆ ಹೋದರು. ಶ್ರೀನಿವಾಸ್– "ಬನ್ನಿ ನೀವು ಎಲ್ಲರಿಗೂ ಜ್ಯೂಸ್ ನೀಡಿದ್ದೀರಿ. ನಾನು ನಿಮ್ಮಿಬ್ಬರಿಗೂ ಜ್ಯೂಸ್ ನೀಡುತ್ತೇನೆ" ಎಂದು ಆಹ್ವಾನಿಸಿದ. "ನಮ್ಮದು ಜ್ಯೂಸ್ ಕುಡಿದಾಗಿದೆ." ಅಂದರು. "ಪರವಾಗಿಲ್ಲ ಇನ್ನೊಂದು ಸಲ ಕುಡಿದರೆ ಇನ್ನೊಂದು ಸ್ವಲ್ಪ ಶಕ್ತಿ ಬರುತ್ತೆ, ಕುಡೀರಿ" ಎಂದು ಹೇಳಿ ಅಟೆಂಡರ್ ಕರೆದು ಜ್ಯೂಸ್ ತರಿಸಿ ಅವರಿಬ್ಬರಿಗೂ ನೀಡಿದ. ಆಮೇಲೆ– "ಹೌದು, ಕುತೂಹಲಕ್ಕೆ ಕೇಳುತ್ತಿದ್ದೀನಿ ನಿಮ್ಮಿಬ್ಬರದೂ ಯಾವ ಬ್ಲಡ್ ಗ್ರೂಪ್ ರೀ" ಎಂದು ಕೇಳಿದ. ಅದಕ್ಕೆ ವಸುಂಧರಾ – "ಸರ್ ನಂದು ಓ–(ಓ ನೆಗೆಟಿವ್). ಅವಳದ್ದು ಎಬಿ+" ಎಂದಳು. ಆಗ ಶ್ರೀನಿವಾಸ್– "ನೋಡ್ರೀ ವಸುಂಧರಾ ನೀವು ಯಾರಿಗೆ ಬೇಕಾದರೂ ರಕ್ತ ಕೊಡಬಹುದು. ಆದರೆ ನಿಮಗೆ ಮಾತ್ರ ನಿಮ್ಮ ರಕ್ತವೇ ಅಂದರೆ 'ಓ–' ರಕ್ತಾನೇ ಬೇಕು. ಏನು ಮಡಿವಂತರಪ್ಪಾ!. ಆದರೆ ಹೇಮಾ ನೀವು ಯಾರ ರಕ್ತ ಬೇಕಾದರೂ ಸ್ವೀಕರಿಸಬಹುದು. ಆದರೆ ನಿಮ್ಮ ರಕ್ತವನ್ನು ನಿಮ್ಮ ಗ್ರೂಪ್‌ನೋರನ್ನು ಬಿಟ್ಟು ಇನ್ನು ಬೇರೆ ಯಾವ ಗ್ರೂಪ್‌ನೋರಿಗೂ ಕೊಡಕ್ಕಾಗಲ್ರೀ. ಏನು ಸ್ವಾರ್ಥಿಗಳಪ್ಪಾ! ಅಂದರೆ ವಸುಂಧರಾ, ನಿಮ್ಮ ರಕ್ತ ಹೇಮಾಗೆ ಕೊಡಬಹುದು. ಆದರೆ ಹೇಮಾ ನಿಮ್ಮ ರಕ್ತವನ್ನು ವಸುಂಧರಾಗೆ ಕೊಡಕ್ಕಾಗಲ್ಲ. ಅದ್ಯಾವ ಸೀಮೆ ಗೆಳತಿಯರು ನೀವು?" ಅಂತ ತಮಾಶೆ ಮಾಡಿದ. "ಸರಿಯಾಗಿ ಮ್ಯಾಚ್ ಆಗದೆ ಇರೋ ಬ್ಲಡ್ ಯಾರಿಗಾದರೂ ಕೊಟ್ಟರೆ ಅವನ ಕತೆ ಅಷ್ಟೆ." ಎಂದ. ಕೂಡಲೇ– "ವಸುಂಧರಾ ಆದರೆ ಸರ್, ನಾವು ನೀವು ಎಲ್ಲಾ ಒಂದೇ ಗ್ರೂಪಿಗೆ ಸೇರಿದೋರು ಸರ್. ಅದು ಮನುಷ್ಯರ ಗ್ರೂಪು ಸರ್. ಅದರಲ್ಲಿ ಭೇದಭಾವ ಇಲ್ಲ ಅಲ್ಲವಾ ಸರ್." ಅಂತ ಮುಗ್ಧೆಯಾಗಿ ಕೇಳಿದಳು. "ಒಂದು ಅರ್ಥದಲ್ಲಿ ನೀವು ಹೇಳೋದು ಸರಿ. ಆದರೆ ಈ ಮನುಷ್ಯರಲ್ಲಿ ಇರೋಷ್ಟು ಭೇದಭಾವ ಇನ್ನು ಯಾವ ಪ್ರಾಣಿಜಾತೀಲೂ ಇಲ್ಲ ರೀ. ನಮ್ಮ ದೇಶದಲ್ಲೇ ತಗೊಳ್ಳಿ ಅದೆಷ್ಟು ಸಾವಿರ ಜಾತಿ! ಅದೆಷ್ಟು ಧರ್ಮಗಳು! ಧರ್ಮ ಕೂಡಿಸುತ್ತೆ, ಜಾತಿ ಒಡೆಯುತ್ತೆ ಅಂತ ಹೇಳ್ತಾರಲ್ಲ ಎಲ್ಲ ಹಸೀ ಸುಳ್ಳು ರೀ. ಧರ್ಮಗಳೂ ಮನುಷ್ಯರನ್ನು ಒಡೆದಿವೆ. ಒಂದು ಧರ್ಮದವರ ದೇವರ ವಿಗ್ರಹ ಕಿತ್ತು ಹಾಕಿ ಅಲ್ಲಿ ತಮ್ಮ ಧರ್ಮದ ದೇವರ ವಿಗ್ರಹ ಸ್ಥಾಪನೆ ಮಾಡಿರುವುದೂ ಇದೇರಿ. ಜಾತಿಗಳು ಅದರಲ್ಲೂ ನಮ್ಮ ದೇಶದಲ್ಲಿ ಮನುಷ್ಯ ಮನುಷ್ಯರ ಮಧ್ಯೆ ಅಭೇದ್ಯವಾದ ಅಡ್ಡಗೋಡೆಗಳನ್ನು ನಿರ್ಮಿಸಿಬಿಟ್ಟಿವೆ. ಎಲ್ಲಿ ಹೋದರೂ ಎಲ್ಲವುದಕ್ಕೂ ಜಾತಿಯನ್ನು

ತರುತ್ತಾರೆ. ಒಂದೊಂದು ಜಾತೀಲೂ ಅದೆಷ್ಟು ಒಳಪಂಗಡಗಳು, ಉಪ ಪಂಗಡಗಳು! ರಾಮ ರಾಮ ತಲೆ ಚಿಟ್ಟುಹಿಡಿಯುತ್ತೆ. ಇನ್ನು ಓಟಿಗೋಸ್ಕರ ನಮ್ಮ ರಾಜಕಾರಣಿಗಳು ಜಾತಿಗಳನ್ನು ಅದು ಯಾವ ಮಟ್ಟಕ್ಕೆ ಒಡೆದು ಕೂರಿಸಿದ್ದಾರೆ ಅಂದರೆ ಇನ್ನು ಯಾರೂ ಎಂದೂ ಸರಿಪಡಿಸೋದಕ್ಕೆ ಸಾಧ್ಯವೇ ಇಲ್ಲವೇನೋ ಅನ್ನುವಷ್ಟು! ಇಲ್ಲ ರೀ ನಮ್ಮ ನಿಮ್ಮಂಥ ವಿದ್ಯಾವಂತ ಯುವಕ ಯುವತಿಯರು ನಿಜವಾಗಿಯೂ ಮನಸ್ಸು ಮಾಡಿದರೆ ಮಾತ್ರ ನಾವು 'ಮನುಷ್ಯ ಜಾತಿ ತಾನೊಂದೆ ವಲಂ' ಅಂತ ಹೇಳಿದ ಆ ಆದಿಕವಿಯ ಮಾತನ್ನು ಮತ್ತು ನಮ್ಮ ಕಾಲದ ಮಹಾಕವಿ ಕುವೆಂಪು ಅವರ–

"ಆಮತದ ಈ ಮತದ ಹಳೆ ಮತದ ಸಹವಾಸ ಸಾಕಿನ್ನು ಸಾರಿರೈ ಮನುಜ ಮತಕೆ ಓ ಬನ್ನಿ ಸೋದರರೆ ವಿಶ್ವಪಥಕೆ! ಎಂಬ ಮಾತನ್ನು ನಿಜ ಮಾಡಬಹುದು. ಇರಲಿ ಇನ್ನು ಯಾವಾಗಲಾದರೂ ಇದರ ವಿಷಯ ಮಾತಾಡೋಣ. ಈಗ ರಕ್ತ ಕೊಟ್ಟು ನೀವು ಸುಸ್ತಾಗಿದ್ದೀರಿ. ನಿಮ್ಮನ್ನು ನನ್ನ ಮಾತಿನಿಂದ ಇನ್ನಷ್ಟು ಸುಸ್ತು ಮಾಡಿಸಲ್ಲ, ಮನೆಗೆ ಹೋಗಿ" ಅಂದ.

* * *

ಶ್ರೀನಿವಾಸ್ ಹಳ್ಳಿಯಲ್ಲಿ ಹುಟ್ಟಿ ಬೆಳೆದವನಾದರೂ ಅವರ ಮನೆತನ ಬೇಕಾದ ಹಾಗೆ ಜಮೀನು ಸಮೀನು ಇದ್ದ ಶ್ರೀಮಂತ ಮನೆತನವಾಗಿದ್ದರಿಂದ ಅವನಿಗೆ ಯಾವುದಕ್ಕೂ ಕೊರತೆ ಇರಲಿಲ್ಲ. ನಿಂಗೇಗೌಡರು ಎಸ್.ಎಸ್.ಎಲ್.ಸಿ.ಗೇ ವಿದ್ಯಾಭ್ಯಾಸಕ್ಕೆ ಶರಣು ಹೊಡೆದಿದ್ದವರಾದರೂ ವಿದ್ಯೆಯ ಮಹತ್ವ ಗೊತ್ತಿದ್ದರಿಂದ ಒಬ್ಬನೇ ಮಗ ಶ್ರೀನಿವಾಸ್ ಬಿ.ಎ. ಆದಮೇಲೆ ಎಂ.ಎ. ಓದುತ್ತೇನೆಂದು ಹಠ ಹಿಡಿದಾಗ ಹೆಚ್ಚು ಓದಿದ ಮಗ ಎಲ್ಲಿ ನೌಕರಿಯ ಬೆನ್ನು ಹತ್ತಿ ತಮ್ಮ ಮನೆತನದವರು ಸಂಪಾದಿಸಿ ರೂಢಿಸಿಕೊಂಡು ಬಂದಿರುವ ಇಷ್ಟೊಂದು ಜಮೀನು ಹಾಳಾಗಿ ಹೋಗುತ್ತದೋ ಎನ್ನುವ ಆತಂಕದಿಂದ ಮೊದಲು ಸಣ್ಣದಾಗಿ ವಿರೋಧಿಸಿದರೂ ಮಗ ಪ್ರಥಮ ದರ್ಜೆ ಬಂದಿರುವುದರಿಂದ ಮುಂದೆ ಓದಬೇಕೆಂಬ ಅವನ, ಓದಿಸಬೇಕೆಂಬ ಸ್ನೇಹಿತರ ಹಾಗೂ ಇನ್ನು ಕೆಲವು ಹಿತೈಷಿಗಳ ಒತ್ತಾಯವನ್ನು ಅವರಿಗೆ ತಳ್ಳಿ ಹಾಕಲಾಗಲಿಲ್ಲ. ಬಿ.ಎ. ಓದಲು ಊರಿನಿಂದಲೇ ಬಂದು ಹೋಗಲು ಸರ್ಕಾರೀ ಬಸ್ ಅನುಕೂಲ ಇದ್ದರೂ ಮಗನಿಗೆ ಮೋಟಾರ್ ಬೈಕು ಕೊಡಿಸಿದ್ದರು. ಏಳೆಂಟು ಕಿಲೋಮೀಟರ್‌ಗಳಷ್ಟು ಮಾತ್ರ ದೂರ ಇದ್ದದ್ದರಿಂದ ಆಗ ಏನೂ ಸಮಸ್ಯೆ ಆಗಲಿಲ್ಲ. ಆದರೆ ಈಗ ಹಾಗಾಗುವುದಿಲ್ಲ ಎಂದು ಅರಿತು ಮೈಸೂರಿನಲ್ಲಿ ಎಲ್ಲಕ್ಕೂ ಅನುಕೂಲವಾದ ಒಂದು ಸಣ್ಣ ಮನೆಯನ್ನೇ ಮಾಡಿಕೊಟ್ಟಿದ್ದರು. ವಕ್ಕಲಿಗರ ಸಂಘದ ಹಾಸ್ಟೆಲ್ ಇದ್ದರೂ ಏಕೋ ಅಲ್ಲಿಗೆ ಕಳಿಸಲು ಇಷ್ಟವಾಗದೆ ಹೇಗೆ ಮಾಡುವುದೆಂದು ಚಿಂತಿಸುತ್ತಿದ್ದಾಗ ನಿಂಗೇಗೌಡರ ಹೆಂಡತಿ ಕೆಂಪಮ್ಮನವರೇ ಅದಕ್ಕೆ ಪರಿಹಾರ ಸೂಚಿಸಿದರು. ಅದೆಂದರೆ ಅವರ ತವರು ಮನೆಯಲ್ಲಿ ಇದ್ದ ಮಕ್ಕಳಿಲ್ಲದ ಅವರ ವಿಧವೆ ಸೋದರತ್ತೆ ಅಂದರೆ ಅವರ ತಂದೆಯ ಅಕ್ಕ ಶ್ರೀನಿವಾಸ್ ಜೊತೆ ಇದ್ದರೆ ಅನುಕೂಲವಾಗುತ್ತದೆಂದು ತಾನು ಅತ್ತೆಯೊಂದಿಗೆ

ಮತ್ತು ಅಪ್ಪನೊಂದಿಗೆ ಮಾತನಾಡಿ ಒಪ್ಪಿಸುತ್ತೇನೆಂದು ಹೇಳಿದರು. ಅದೇ ರೀತಿ ಒಪ್ಪಿಸಿ ಏರ್ಪಾಟು ಮಾಡಿದ್ದರು. ಮಗುವಾಗಿದ್ದಾಗಿನಿಂದಲೂ ಸಾಕಿಬೆಳೆಸಿದ ಶ್ರೀನಿವಾಸ್ ಬಗ್ಗೆ ಸಹಜವಾಗಿಯೇ ಮಮತೆ ಹೊಂದಿದ್ದ ಕೆಂಪಮ್ಮನವರ ಸೋದರತ್ತೆ ಲಕ್ಷ್ಮಮ್ಮನವರು ಎರಡು ವರ್ಷ ತಾನೆ ಆಗಲಿ ಅದಕ್ಕೇನಂತೆ ಎಂದು ಸಂತೋಷದಿಂದ ಒಪ್ಪಿದ್ದರು. ಹಾಗಾಗಿ ಕಾಲಕಾಲಕ್ಕೆ ಮನೆಯ ಊಟ ತಿಂಡಿ ಮೊದಲುಗೊಂಡು ಎಲ್ಲ ಸೌಕರ್ಯ ಇದ್ದುದು ಓದಿನತ್ತ ಪೂರ್ತಿ ಗಮನ ವಹಿಸಲು ಶ್ರೀನಿವಾಸನಿಗೆ ಸಾಧ್ಯವಾಯಿತು.

ಹಣಕಾಸಿಗೆ ಯಾವುದೇ ಕೊರತೆ ಇಲ್ಲದೆ ಇದ್ದರೂ ಹಣವನ್ನು ವೃಥಾ ಪೋಲು ಮಾಡುವ, ಅಗತ್ಯವಿಲ್ಲದ್ದಕ್ಕೆ ವ್ಯರ್ಥವಾಗಿ ಹಣ ಖರ್ಚುಮಾಡುವ ಸ್ವಭಾವ ಶ್ರೀನಿವಾಸನದಾಗಿರಲಿಲ್ಲ. ಇದು ತಂದೆಯಿಂದ ಮಗ ಕಲಿತಿದ್ದ ಪಾಠ. ಹಾಗೆಂದು ಅವರ ತಂದೆ ಜಿಪುಣರಲ್ಲ. ಖರ್ಚುಮಾಡಬೇಕಾದದ್ದಕ್ಕೆ ಹಿಂದೆಮುಂದೆ ನೋಡದೆ ಲಾಭ ನಷ್ಟಗಳ ಎಣಿಕೆಯಿಲ್ಲದೆ ಖರ್ಚುಮಾಡುವುದು ಅವರಿಗೆ ಗೊತ್ತಿತ್ತು. ಬೇರಾವುದೇ ದುರಭ್ಯಾಸವಿರದ, ಒಳ್ಳೊಳ್ಳೆ ಸ್ನೇಹಿತರ ಸಹವಾಸ ಹೊಂದಿದ್ದ ಶ್ರೀನಿವಾಸ್ ಊರುಬಿಟ್ಟು ಬಂದಿದ್ದರೂ ಹಾದಿ ತಪ್ಪಲಿಲ್ಲ. ತಾನಾಯಿತು, ತನ್ನ ಓದಾಯಿತು. ಹೆಚ್ಚೆಂದರೆ ಮಿತ್ರರೊಂದಿಗೆ ಸಿನಿಮ, ಹರಟೆ, ವಾಕಿಂಗ್ ಇಷ್ಟೇ. ಅವನು ಬಿ.ಎ. ಓದುವಾಗ ಅವನದೇ ಕಾಲೇಜಿನ ಅವನ ಪರಿಚಯದ ವಲಯದಲ್ಲಿದ್ದ ಮೂರು ನಾಲ್ಕು ಜನ ಮಿತ್ರರೂ ಬೇರೆ ಬೇರೆ ವಿಷಯಗಳಲ್ಲಿ ಎಂ.ಎ. ಓದಲು ಮೈಸೂರಿಗೆ ಬಂದಿದ್ದು ಅವನಿಗೆ ಪರಸ್ಥಳ ಹೇಗೋ ಏನೋ ಎಂಬ ಭಾವ ಬರಲಿಲ್ಲ. ಅವರಲ್ಲಿ ಒಂದಿಬ್ಬರು ಅವರ ಸಮುದಾಯದ ಹಾಸ್ಟೆಲ್‌ಗಳಲ್ಲಿದ್ದರೆ ಇನ್ನೊಂದಿಬ್ಬರು ರೂಮ್ ಮಾಡಿಕೊಂಡು ಅಡಿಗೆ ಮಾಡಿಕೊಂಡಿದ್ದರು. ರಜಾದಿನಗಳಲ್ಲಿ ಎಲ್ಲರೂ ಪರಸ್ಪರ ಕಲೆತು ಹರಟೆ, ಚರ್ಚೆ, ಓದುಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಅವನ ಅಜ್ಜಿ ಅಂದರೆ ತಾಯಿಯ ಸೋದರತ್ತೆ ಎರಡು ತಿಂಗಳಿಗೋ ಮೂರು ತಿಂಗಳಿಗೋ ಒಮ್ಮೆ ಊರಿಗೆ ಹೋಗುವುದಿತ್ತು. ಅಂಥ ಸಂದರ್ಭದಲ್ಲಿ ರೂಮ್ ಮಾಡಿಕೊಂಡಿದ್ದ ಗೆಳೆಯರ ರೂಮಿಗೋ. ಇಲ್ಲ ಹಾಸ್ಟೆಲ್ ಮಿತ್ರರ ಅತಿಥಿಯಾಗಿ ಅವರ ಹಾಸ್ಟೆಲ್‌ಗೋ ಹೋಗಿಬಿಡುತ್ತಿದ್ದ. ಎರಡೂ ಇಲ್ಲ ಎಂದರೆ ಹೋಟೆಲ್‌ಗೆ ಹೇಗೂ ಬರವಿರಲಿಲ್ಲ. ಅವನೂ ಬೇಕೆನಿಸಿದಾಗ ಊರಿಗೆ ಹೋಗುತ್ತಿದ್ದ. ನಿಂಗೇಗೌಡರಿಗೆ ವ್ಯವಸಾಯದಿಂದ ಬಿಡುವಾದಾಗ ಯಾವಾಗಲಾದರೊಮ್ಮೆ ಹೆಂಡತಿಯ ಜೊತೆ ಬಂದು ಮಗನನ್ನು ಹೆಂಡತಿಯ ಸೋದರತ್ತೆಯನ್ನೂ ನೋಡಿಕೊಂಡು ಹೋಗುತ್ತಿದ್ದರು.

ಎಂ.ಎ. ತರಗತಿ ಪ್ರಾರಂಭವಾದ ಕೆಲವು ತಿಂಗಳಲ್ಲೇ ಶ್ರೀನಿವಾಸ್ ತನ್ನ ಸ್ನೇಹ ಸ್ವಭಾವ, ತಮಾಶೆಯ ಮಾತುಗಾರಿಕೆಯಿಂದ ಬಹುಬೇಗ ಎಲ್ಲರಿಗೂ ಹತ್ತಿರದವನಾದ. ನಲವತ್ತು ಜನರಿದ್ದ ತರಗತಿಯಲ್ಲಿ ಹದಿನೆಂಟು ಜನ ಹುಡುಗಿಯರೂ ಇದ್ದರು. ಕೆಲವರು ತಮ್ಮ ಆಕರ್ಷಕ ರೂಪಿನಿಂದ, ನಿರ್ಭಿಡೆಯ ಮಾತುಗಾರಿಕೆಯಿಂದ ಎಲ್ಲರ ಗಮನ ಸೆಳೆದಿದ್ದರು. ಶ್ರೀನಿವಾಸ್ ಎಲ್ಲರೊಂದಿಗೂ ನಗುನಗುತ್ತ ಮಾತನಾಡುತ್ತಿದ್ದನೇ ಹೊರತು ಯಾರೊಂದಿಗೂ ತೀರ ಆಪ್ತತೆ ಬೆಳೆಸಿಕೊಳ್ಳಲಿಲ್ಲ. ಎರಡನೇ ವರ್ಷದ ಎಂ.ಎ. ನಲ್ಲಿದ್ದಾಗ

ಸೆಮಿನಾರ್‌ನಲ್ಲಿ ಒಳ್ಳೆಯ ಪ್ರಬಂಧ ಮಂಡಿಸಿ ಸಹಪಾಠಿಗಳು ತಬ್ಬಿಬ್ಬಾಗಿಸಲೆಂದೇ ಕೇಳುತ್ತಿದ್ದ ಪ್ರಶ್ನೆಗಳೆಲ್ಲಕ್ಕೂ ಚಾಕಚಕ್ಯತೆಯಿಂದ ಉತ್ತರಿಸಿ ಅಧ್ಯಾಪಕರಿಂದಲೂ ಭೇಷ್ ಎನಿಸಿಕೊಂಡ ರಾಗಿಣಿ ಶ್ರೀನಿವಾಸನ ಒಲವಿಗೆ ಹಾತೊರೆದದ್ದು ನಿಜ. ಅದಕ್ಕೆ ಒಂದು ಹಿನ್ನೆಲೆಯೂ ಇತ್ತು. ಮೊದಲ ವರ್ಷದ ಎಂ.ಎ.ನಲ್ಲಿ ಮೊದಲ ಸೆಮಿನಾರ್‌ನಲ್ಲಿ ಪ್ರಬಂಧ ಮಂಡಿಸಿ ಎಲ್ಲರಿಂದಲೂ ಭೇಷ್ ಎನಿಸಿಕೊಂಡ ತರಗತಿಯ ಸ್ಮಾರ್ಟಿ ಎಂದೇ ಹೆಸರಾದ ಶ್ರೀನಿವಾಸನ ಬಗ್ಗೆ ಅವಳಿಗೆ ಅಂದೇ ಆಕರ್ಷಣೆ ಮೂಡಿತ್ತು. ಆಗಾಗ್ಗೆ ಮೇಷ್ಟ್ರು ಮಾಡಿದ ಪಾಠಗಳ ಬಗ್ಗೆ ಸಂದೇಹ ನಿವಾರಿಸಿಕೊಳ್ಳಲು, ಕೆಲವೊಂದು ವಿಷಯ ಚರ್ಚಿಸಲು ಶ್ರೀನಿವಾಸ್‌ನನ್ನು ಭೇಟಿಯಾಗುತ್ತಿದ್ದಳು. ಆ ವರ್ಷ ತಾನು ಪ್ರಬಂಧ ಮಂಡಿಸುವುದಕ್ಕೆ ಮುಂಚೆ ಕೆಲವರು ತನ್ನ ಗೆಳತಿಯರು, ಇನ್ನು ಕೆಲವು ಹುಡುಗರು ತನ್ನನ್ನು ತಬ್ಬಿಬ್ಬುಮಾಡಲು ಹೊಂಚು ಹಾಕುತ್ತಿದ್ದಾರೆಂದೂ ಅಂಥ ಸಮಯದಲ್ಲಿ ತನ್ನ ಸಮರ್ಥನೆಗೆ ಬರಬೇಕೆಂದೂ ಕೇಳಿಕೊಂಡಿದ್ದಳು. ಅದರಂತೆ ಶ್ರೀನಿವಾಸ್ ಅವಳಿಗೆ ಪೇಚಿನ ಸಂದರ್ಭ ಬಂದಾಗ ತನ್ನ ವಾಕ್ಚಾತುರ್ಯದಿಂದ ಅವಳನ್ನು ಪಾರು ಮಾಡಿದ್ದ. ಅಧ್ಯಾಪಕರು ರಾಗಿಣಿಗೆ "ಏನ್ರಿ ನಿಮ್ಮ ಸಪೋರ್ಟಿಗೆ ಒಳ್ಳೆ ಡಿಫೆನ್ಸ್ ಲಾಯರ್‌ನೇ ಹುಡುಕಿಕೊಂಡು ಬಿಟ್ಟಿದ್ದೀರಿ" ಎಂದು ತಮಾಶೆ ಮಾಡಿದ್ದರು. ಅವಳು ತಮ್ಮದೇ ಸಮುದಾಯಕ್ಕೆ ಸೇರಿದವಳೆಂದು ಆಮೇಲೆ ಗೊತ್ತಾಯಿತು. ತಾನು ಸೆಮಿನಾರಿನಲ್ಲಿ ಸಹಪಾಠಿಗಳ ಮೆಚ್ಚುಗೆ ಗಳಿಸಿದರೂ ಮೊದಲ ವರ್ಷದ ಪರೀಕ್ಷೆಯಲ್ಲಿ ಎಲ್ರಿಗಿಂತ ಹೆಚ್ಚು ಅಂಕ ಗಳಿಸಿ ಇಡೀ ತರಗತಿಗೇ ಪ್ರಥಮ ಎನಿಸಿಕೊಂಡ ಶ್ರೀನಿವಾಸ್ ಬಗ್ಗೆ ಅವಳಿಗೆ ಎಲ್ಲಿಲ್ಲದ ಆಕರ್ಷಣೆ ಹುಟ್ಟಿತ್ತು. ತರಗತಿಯ ವಿದ್ಯಾರ್ಥಿಗಳೆಲ್ಲ ಒಂದು ಸಲ ಅವರವರೇ ಹತ್ತಿರದ ಕೆ.ಆರ್.ಎಸ್.ಗೆ ಪ್ರವಾಸ ಹೋಗಿದ್ದ ಸಂದರ್ಭದಲ್ಲಿ ಒಂದು ಮರದ ಕೆಳಗೇ ಒಬ್ಬನೇ ನಿಂತಿದ್ದ ಶ್ರೀನಿವಾಸ್‌ನನ್ನು ನೋಡಿ ಹತ್ತಿರ ಬೇರೆ ಯಾರೂ ಇಲ್ಲವೆಂದು ಖಾತ್ರಿಪಡಿಸಿಕೊಂಡು ತನ್ನ ಪ್ರೇಮವನ್ನು ನಿವೇದಿಸಿಯೂ ಬಿಟ್ಟಿದ್ದಳು. ಆದರೆ ಶ್ರೀನಿವಾಸ್ ಉಪಾಯವಾಗಿ ತಾನು ಅವಳ ಬಗ್ಗೆ ಅಂಥ ಯೋಚನೆಯನ್ನೇ ಮಾಡಿಲ್ಲವೆಂದೂ ತನಗೆ ಅವಳ ಬಗ್ಗೆ ಆ ರೀತಿಯ ಭಾವನೆ ಇಲ್ಲವೆಂದೂ, ಸಾರಿ ಎಂದು ಉಪಾಯವಾಗಿ ತಳ್ಳಿ ಹಾಕಿದ್ದ. ಅವಳ ತಂದೆ ಒಬ್ಬ ಪ್ರಸಿದ್ಧ ರಾಜಕಾರಣಿಯೆಂದೂ ಭಾರಿ ಶ್ರೀಮಂತರೆಂದೂ ಶ್ರೀನಿವಾಸ್‌ಗೆ ಈ ಮುಂಚೆಯೇ ತಿಳಿದಿದ್ದು ಹಳ್ಳಿಗಾಡಿನಿಂದ ಬಂದಂಥ ತನಗೆ, ತನ್ನ ಮನೆಯವರಿಗೆ ಇಂಥ ಹುಡುಗಿ ಹೊಂದಿಕೆಯಾಗಲು ಸಾಧ್ಯವೇ ಇಲ್ಲವೆಂದು, ಆದ್ದರಿಂದ ಅವಳ ಸಹವಾಸ ಬೇಡವೆಂದು ಅವನು ಅವಳಿಂದ ದೂರವೇ ಇರುತ್ತಿದ್ದ. ತಮ್ಮ ಗೆಳೆತನ ಮುಂದುವರಿಯಲು ಇದರಿಂದ ಯಾವ ಅಡಚಣೆಯೂ ಆಗದೆಂದು ಸೂಚಿಸಿದ್ದ. ರಾಗಿಣಿ ನಿರಾಶಳಾದರೂ ಅವನ ಅಭಿಪ್ರಾಯವನ್ನು ಆರೋಗ್ಯಕರವಾಗಿ ಸ್ವೀಕರಿಸಿದ್ದಳು. ಶ್ರೀನಿವಾಸ್ ಯಾರೊಂದಿಗೂ ಅಪ್ಪಿ ತಪ್ಪಿಯೂ ರಾಗಿಣಿ ತನ್ನನ್ನು ಭೇಟಿಮಾಡಿ ಪ್ರೇಮ ನಿವೇದಿಸಿದ್ದನ್ನು ಹೇಳಲಿಲ್ಲ. ಮುಂದೆಯೂ ಅವರಿಬ್ಬರು ಒಳ್ಳೆಯ ಸ್ನೇಹಿತರಾಗಿ ಉಳಿದರು.

ಇಂಥ ಶ್ರೀನಿವಾಸ್ ಎಂ.ಎ. ಮುಗಿಸಿದ ನಂತರದಲ್ಲಿ ಮಂಡ್ಯದಲ್ಲಿ ಖಾಸಗಿ

ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾಗ ಇವನ ರೂಪು, ವ್ಯಕ್ತಿತ್ವ, ಮಾತುಗಾರಿಕೆಗೆ ಮರುಳಾಗಿ ಇವನ ಸಖ್ಯ ಬಯಸಿ ಬಂದ ಸಹ ಅಧ್ಯಾಪಿಕೆ ಇಂಗ್ಲಿಷ್ ವಿಭಾಗದ ಗೀತ ಕೂಡ ಇವನ ಗುಪ್ತ ಪ್ರೇಮಿ ಎಂಬುದು ಕೆಲವೇ ತಿಂಗಳಲ್ಲಿ ತಿಳಿದುಬಂತು. ಗೀತ ನೋಡಲು ಅಂಥ ಆಕರ್ಷಕ ವ್ಯಕ್ತಿತ್ವದವಳಲ್ಲ. ಬಣ್ಣವೂ ಶ್ಯಾಮಲ ವರ್ಣ. ಆದರೆ ತನ್ನ ಸಬ್ಜೆಕ್ಟ್‌ನಲ್ಲಿ ಬಹಳ ಬುದ್ಧಿವಂತೆ. ಕೆಲಸಕ್ಕೆ ಸೇರಿದ ಕೆಲವೇ ತಿಂಗಳಲ್ಲಿ ಇಡೀ ಕಾಲೇಜಿನಲ್ಲಿ ಅತ್ಯಂತ ಜನಪ್ರಿಯ ಅಧ್ಯಾಪಕಿಯಾಗಿಬಿಟ್ಟಿದ್ದಳು. ಹಳ್ಳಿಗಾಡಿನಿಂದ ಬಂದ ಮಕ್ಕಳಿಗೆ ಇಂಗ್ಲಿಷನ್ನು ಚೆನ್ನಾಗಿ ಬೋಧಿಸುತ್ತಿದ್ದಳು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಗೀತ ಮೇಡಮ್ ಅಂದರೆ ಪ್ರಾಣಬಿಡುತಿದ್ದರು. ಏನಾದರೂ ಸಮಾರಂಭಗಳಾದಾಗ ಅವಳನ್ನು ಮಾತಾಡಬೇಕೆಂದು ಪ್ರಿನ್ಸಿಪಾಲರು ಕೇಳಿದರೆ ಒಳ್ಳೆ ಸೊಗಸಾದ ಇಂಗ್ಲಿಷಿನಲ್ಲಿ ಆಕರ್ಷವಾಗಿ ಮಾತಾಡುತ್ತಿದ್ದಳು. ಅವಳು ಹಾಸನದ ಒಬ್ಬ ಅಯ್ಯಂಗಾರ್ ಜಾತಿಯವಳಂತೆ. ಏನೇನೋ ನೆವ ಮಾಡಿಕೊಂಡು ಶ್ರೀನಿವಾಸ್‌ನನ್ನು ಭೇಟಿಮಾಡಿ ಮಾತಾಡಿಸಲು ಪ್ರಯತ್ನಿಸುತ್ತಿದ್ದಳು. ಆದರೆ ಶ್ರೀನಿವಾಸ್ ಅದಕ್ಕೆಲ್ಲ ಆಸ್ಪದವೇ ಕೊಡಲಿಲ್ಲ. ಶ್ರೀನಿವಾಸನ ಇಂಗಿತವೇನೆಂದು ತಿಳಿಯಲು ಆಕೆ ಪರೋಕ್ಷವಾಗಿ ಒಬ್ಬ ಸಹೋದ್ಯೋಗಿಯ ಮೂಲಕ ಪ್ರಯತ್ನಿಸಿದಳು. ತನಗೆ ಅಂಥ ಯಾವ ಭಾವನೆಯೂ ಅವರ ಬಗ್ಗೆ ಇಲ್ಲವೆಂದು ಕಡ್ಡಿ ಎರಡು ತುಂಡುಮಾಡಿದಂತೆ ಹೇಳಿಬಿಟ್ಟಿದ್ದ. ಹಾಗಾಗಿ ಗೀತ ಆ ವಿಷಯದಲ್ಲಿ ಮುಂದುವರೆಯಲಾಗಲಿಲ್ಲ.

ಇಂಥ ಶ್ರೀನಿವಾಸನ ಮನಸ್ಸನ್ನು ಇದೀಗ ವಸುಂಧರಾ ಆಕ್ರಮಿಸಿಕೊಂಡು ಬಿಟ್ಟಿದ್ದಳು. ಆ ಬಗ್ಗೆ ಅದೆಷ್ಟೇ ಯೋಚಿಸಬಾರದೆಂದು ಕೊಂಡರೂ ಮತ್ತೆ ಮತ್ತೆ ವಸುಂಧರಾಳ ಸ್ನಿಗ್ಧ ಸುಂದರ ಆಕೃತಿ ಮನಸ್ಸಿನ ಪರದೆಯ ಮೇಲೆ ತೇಲಿ ಬರುತ್ತಲೇ ಇತ್ತು. ಅವಳ ಮಾತುಗಾರಿಕೆ, ಚುರುಕುತನ, ಬುದ್ಧಿವಂತಿಕೆ ಒಂದು ರೀತಿಯ ಮುಗ್ಧತೆ ಎಲ್ಲವೂ ಅವನ ಮೇಲೆ ಮೋಡಿಮಾಡಿಬಿಟ್ಟಿದ್ದುವು.

ಅಧ್ಯಾಯ–5

ಹೈಸ್ಕೂಲು ದಿನಗಳಿಂದಲೂ ವಸುಂಧರಾಳ ಆತ್ಮೀಯ ಗೆಳತಿಯಾಗಿ ಅವಳನ್ನು ಅತ್ಯಂತ ಹತ್ತಿರದಿಂದ ನೋಡುತ್ತ ಬಂದವಳು ಹೇಮಾ. ಅವಳ ಕುಟುಂಬದ ಪರಿಚಯ ಕೂಡ ಅವಳಿಗೆ ಚೆನ್ನಾಗಿಯೇ ಇತ್ತು. ಅವಳ ತಾಯಿ ಸಾವಿತ್ರಮ್ಮನವರು ತುಂಬಾ ಸಂಪ್ರದಾಯಸ್ಥರು, ಮಡಿ ಮೈಲಿಗೆ ವಿಚಾರದಲ್ಲಿ ತುಂಬಾ ಕಟ್ಟುನಿಟ್ಟು ಅನ್ನುವುದನ್ನು ಕಂಡುಕೊಂಡಿದ್ದಳು. ಆದರೆ ಅದೆಲ್ಲವನ್ನೂ ಮೀರಿ ತುಂಬಾ ಅಂತಃಕರಣವುಳ್ಳವರು ಎಂಬುದೂ ಅವಳಿಗೆ ಅನುಭವಕ್ಕೆ ಬಂದಿತ್ತು. ಎಷ್ಟೋ ಸಲ ಗಂಟೆಗಟ್ಟಲೆ ಮಾತಾಡುತ್ತಲೋ ಇಲ್ಲ ಏನಾದರೂ ಓದಿನ ವಿಷಯ ಚರ್ಚಿಸುತ್ತಲೋ ಕೂತುಬಿಟ್ಟಾಗ ಅವರ ಮನೆಯಲ್ಲೇ ಕಾಫಿ ತಿಂಡಿ ಆಗುತ್ತಾ ಇದ್ದದ್ದು ಮಾಮೂಲಿಯಾಗಿತ್ತು. ಒಂದು ವೇಳೆ ಹೇಮಾಳ ಮನೆಗೆ ಹೋಗಿ ಏನಾದರೂ ತಿಂದೋ ಕುಡಿದೋ ಬಂದರೆ ಸಾವಿತ್ರಮ್ಮನವರು ಆ ಬಗ್ಗೆ ಏನೂ ಪ್ರಶ್ನಿಸುತ್ತಿರಲಿಲ್ಲ. "ನೀವು ಈಗಿನ ಕಾಲದ ಹುಡುಗರು ಏನಾದರೂ ಮಾಡಿಕೊಳ್ಳಿ, ನಿಮ್ಮ ಅಪ್ಪನ ಕಿವಿಗೆ ಬೀಳದ ಹಾಗೆ ನೋಡ್ಕೋ. ಹೇಳಿಕೇಳಿ ಹೆಸರುವಾಸಿ ಜೋಯಿಸರು" ಎಂದು ಹೇಳಿ ಅಷ್ಟರ ಮಟ್ಟಿನ ಸ್ವಾತಂತ್ರ್ಯವನ್ನು ವಸುಂಧರಾಗೂ ಕೊಟ್ಟಿದ್ದರು ಎಂಬುದು ಹೇಮಾಗೆ ಗೊತ್ತಿತ್ತು. ಉಳಿದಂತೆ ಯಾವುದೇ ವಿಷಯದಲ್ಲಿ ಹದ್ದು ಮೀರದಂತೆ ಮಗಳನ್ನು ನೋಡಿಕೊಂಡಿದ್ದರು ಅನ್ನುವುದು ಹೇಮಾಗೆ ತಿಳಿದಿತ್ತು. ತಮ್ಮ ಮನೆಯಲ್ಲೂ ಅಪ್ಪ ಅಮ್ಮ ಹೆಚ್ಚು ಕಡಿಮೆ ವಸುಂಧರಾಳ ಮನೆಯಲ್ಲಿ ಬೆಳಸಿದ ರೀತಿಯಲ್ಲೇ ಬೆಳೆಸಿದ್ದರು ಅಂತಲೂ ಅವಳಿಗೆ ಗೊತ್ತಿತ್ತು. ಹಾಗೆ ನೋಡಿದರೆ ವಸುಂಧರಾ ರಿಸರ್ವ್ ಏನಲ್ಲ. ಅವಳ ತಾಯಿಯ ಚಿಕ್ಕಮ್ಮ ವಿಶಾಲಾಕ್ಷಮ್ಮನ ಮಗ ಶಾಮೂ ತನಗಿಂತ ವಯಸ್ಸಿನಲ್ಲಿ ದೊಡ್ಡೋನಾದರೂ ಮೊದಲಿನಿಂದ ಜೊತೆಯಲ್ಲೇ ಆಟ ಆಡುತ್ತಾ ಇದ್ದ ಕಾರಣ ಸಲಿಗೆ ಇತ್ತೇ ಹೊರತು ಅದೆಂದೂ ಒಂದು ಮಿತಿಯನ್ನು ಮೀರಿ ಹೋಗಿರಲಿಲ್ಲ. ತರಗತಿಯ ಸಹಪಾಠಿ ವಿದ್ಯಾರ್ಥಿಗಳನ್ನು ಯಾರನ್ನೂ ಅನಗತ್ಯವಾಗಿ ಮಾತಾಡಿಸಲು ಹೋಗುತ್ತಿರಲಿಲ್ಲ. ಅವರೇ ಯಾರಾದರೂ ಯಾವುದಾದರೂ ಕಾರಣಕ್ಕೆ ಮಾತಾಡಿಸಿದರೂ ಯಾವುದೇ ಬಿಗುಮಾನ ತೋರಿಸದೆ ಮಾತಾಡುತ್ತಾ ಇದ್ದರೂ ಎಷ್ಟು ಬೇಕೋ ಅಷ್ಟೇ ಮಾತು.

ಇಂಥ ವಸುಂಧರಾ ಈಗ್ಗೆ ಕೆಲವು ದಿನಗಳಿಂದ ಏನೋ ಅನ್ಯ ಮನಸ್ಕಳ ಹಾಗೆ ಇರುತ್ತಿದ್ದದನ್ನು ಹೇಮಾ ಗಮನಿಸಿದ್ದಳು. ಮನೆಯಲ್ಲಿ ಅವರ ಅಪ್ಪ ಏನಾದರೂ ಬಯ್ದು ಗಿಯ್ದು ಮಾಡಿರಬೇಕು ಅಂದುಕೊಂಡು ಆ ಬಗ್ಗೆ ಏನೂ ಕೇಳಿ ಮಾಡಿ ಮಾಡಿರಲಿಲ್ಲ. ಅವರ ತಾಯಿ ಹಾಗೆಲ್ಲ ಗದರಿಸುವಂಥವರಲ್ಲ. ಒಂದು ವೇಳೆ ಏನಾದರೂ

ಜೋರಾಗಿ ಹೇಳಿದರೂ ಅದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವವಳಲ್ಲ ವಸುಂಧರಾ ಅಂತಲೂ ಗೊತ್ತಿತ್ತು. ಈಗ ಏನಾಗಿದೆ ಇವಳಿಗೆ ಅಂತ ಹೇಮಾಳಿಗೆ ಸ್ವಲ್ಪ ಸೋಜಿಗವೇ ಆಗಿತ್ತು. ಎಂದಿದ್ದರೂ ಹಾವು ಹೊರಕ್ಕೆ ಬರಲೇ ಬೇಕು ಅಂದುಕೊಂಡು ಸಮಾಧಾನ ಮಾಡಿಕೊಂಡಳು.

ಹೇಮಾ ಯೋಚಿಸಿದಂತೆ ವಸುಂಧರಾಳ ಮನಸ್ಸು ಈಗ್ಗೆ ಕೆಲವು ದಿನಗಳಿಂದ ತುಂಬಾ ವಿಚಲಿತಗೊಂಡಿತ್ತು. ಎನ್.ಎಸ್. ಮೇಷ್ಟ್ರು ಅವಳ ಮನಸ್ಸನ್ನು ಇಡಿಯಾಗಿ ಆವರಿಸಿಕೊಂಡು ಬಿಟ್ಟಿದ್ದರು. ಕೇವಲ ಹೊರಗಿನ ರೂಪಿನಿಂದಲೇ ಅವಳು ಅವರಿಂದ ಆಕರ್ಷಿಸಲ್ಪಟ್ಟಿರಲಿಲ್ಲ. ಅದು ಅವಳನ್ನು ಆಕರ್ಷಿಸಿರಲಿಲ್ಲ ಅಂತ ಅಲ್ಲ. ಅದಕ್ಕಿಂತ ಹೆಚ್ಚಾಗಿ ಅವರ ಬುದ್ಧಿವಂತಿಕೆ, ಮನಸ್ಸನ್ನು ಸೆರೆ ಹಿಡಿಯುವಂತೆ ಪಾಠ ಮಾಡುತ್ತಿದ್ದ ರೀತಿ, ಇತಿಹಾಸ ವಿಷಯದ ಮೇಲಿನ ಅವರ ಪ್ರಭುತ್ವ ಎಲ್ಲವೂ ಕುಳಿತಲ್ಲಿ ನಿಂತಲ್ಲಿ ಅವಳ ಮುಂದೆ ಸುಳಿದಾಡುತ್ತಿದ್ದುವು. ಈ ಮಧ್ಯೆ ಇನ್ನೊಂದೆರಡು ಸಲ ಅವಳಿಗೆ ತರಗತಿ ಇಲ್ಲದೆ ಇದ್ದಾಗ ಹೇಮಾಳಿಗೆ ಗೊತ್ತಿಲ್ಲದಂತೆ ಅವರೊಬ್ಬರೇ ಇದ್ದ ಸಮಯ ನೋಡಿ ಡಿಪಾರ್ಟ್‌ಮೆಂಟಿನ ರೂಮಿನಲ್ಲೇ ಅವರನ್ನು ಭೇಟಿಮಾಡಿ ಪುಸ್ತಕಗಳನ್ನು ಈಸಿಕೊಂಡುಬಂದಿದ್ದಳು. ಆಗ ಸ್ವಲ್ಪ ಸಮಯದ ವರೆಗೂ ಎನ್. ಎಸ್. ಮಾಸ್ಟರ್ ಅವರೇ ಚರ್ಚಿಸುವ ನೆವದಿಂದ ಕೂರಲು ಹೇಳಿ ಮಾತಾಡಿಸಿ ಕಳಿಸಿದ್ದರು. ಕಳಿಸಿಕೊಡುವಾಗ– "ಪರವಾಗಿಲ್ಲ ರೀ ಇದರ ಬಗ್ಗೆ ಇಷ್ಟೆಲ್ಲ ವಿಷಯ ತಿಳಿದುಕೊಂಡಿದ್ದೀರಿ ಭೇಷ್" ಎಂದು ಹೇಳಿ ಒಮ್ಮೆಲೇ ಬೆನ್ನು ತಟ್ಟಿ "ಕೀಪ್ ಇಟ್ ಅಪ್" ಎಂದು ಹೇಳಿದ್ದರು. ಅವರು ತನ್ನ ಭುಜ ಹಿಡಿದು ಬೆನ್ನು ತಟ್ಟಿದಾಗ ದೇಹದಲ್ಲೆಲ್ಲಾ ವಿದ್ಯುತ್ ಸಂಚಾರವಾದಂತಾಗಿ ಮೈ ಪುಲಕಗೊಂಡಿತ್ತು. ಅವರ ಕೊಠಡಿಯಿಂದ ಬರುವಾಗ ಅವಳ ಮನಸ್ಸು ಈ ಲೋಕದಲ್ಲೇ ಇಲ್ಲವೇನೋ ಎನ್ನುವಂತೆ ಎನ್.ಎಸ್. ಮೇಷ್ಟರ ಬಗ್ಗೆಯೇ ಯೋಚಿಸಿಕೊಂಡು ಮೆಟ್ಟಲಿಳಿದು ಬರುತ್ತಾ ಇದ್ದವಳು ಒಮ್ಮೆಲೇ ಜಾರಿದಳು. ಅದನ್ನು ಗಮನಿಸಿದ ಬೇರೆ ಯಾರೋ ಗೆಳತಿ ಕೂಡಲೇ ಅವಳನ್ನು ಬೀಳದಂತೆ ಹಿಡಿದುಕೊಂಡಳು. ಆಮೇಲೆ – "ಅದೆಲ್ಲಿ ಹೋಗಿದ್ದೆ ವಸುಂಧರಾ, ನೋಡು ನಿನ್ನ ಜೀವದ ಗೆಳತಿ ಇಲ್ಲೇ ನಿನಗಾಗಿ ಕಾಯ್ತಾ ಇದ್ದಾಳೆ" ಎಂದಳು. ನೋಡಿದರೆ ಸಮಾಜ ಶಾಸ್ತ್ರದ ತರಗತಿ ಮುಗಿಸಿಕೊಂಡು ಮೇಷ್ಟ್ರು ಒಂದು ಹತ್ತು ನಿಮಿಷ ಮುಂಚೆ ಬಿಟ್ಟಿದ್ದರಿಂದ ವಿದ್ಯಾರ್ಥಿನಿಯರ ವೆಯಿಟಿಂಗ್ ರೂಮಿನಲ್ಲಿ ವಸುಂಧರಾ ಇದ್ದಾಳೇನೋ ಅಂತ ಹುಡುಕೋದಕ್ಕೆ ಹೋಗಿ ಅಲ್ಲಿ ಸಿಕ್ಕದೆ ರೀಡಿಂಗ್ ರೂಮಿಗೂ ಹೋಗಿ ಅಲ್ಲೂ ಕಾಣದೆ ಇದೆಲ್ಲಿ ಹೋದಳಪ್ಪಾ ಇವಳು ಎಂದು ಯೋಚಿಸುತ್ತಿರುವಷ್ಟರಲ್ಲಿ ಇನ್ನೊಬ್ಬ ಗೆಳತಿ ವಸುಂಧರಾಳನ್ನು ಹಿಡಿದುಕೊಂಡಿದ್ದನ್ನು ಹೇಮಾ ದೂರದಿಂದಲೇ ನೋಡಿದಳು. –"ಅದೆಲ್ಲಿ ಹೋಗಿಬಿಟ್ಟಿದ್ದೆ ಇಷ್ಟುಹೊತ್ತೂ" ಅಂತ ಕೂಗುತ್ತ ಬಂದಳು. – "ಕನ್ನಡ ಮೇಡಮ್ ಮಮತಾ ಅವರನ್ನು ಏನೋ ಪದ್ಯದ ಅರ್ಥ ಕೇಳಬೇಕಿತ್ತು ಅಂತ ಹೋಗಿದ್ದೆ" ಎಂದು ಸುಳ್ಳು ಹೇಳಿದಳು. ಎನ್.ಎಸ್. ಮೇಷ್ಟರ ಹತ್ತಿರ ಹೋಗಿದ್ದೆ ಎಂದು ಹೇಳಿದರೆ ಏನು? ಯಾಕೆ? ನಾನೂ ನೀನೂ ಆಮೇಲೆ ಒಟ್ಟಿಗೆ ಹೋಗಬಹುದಾಗಿತ್ತಲ್ಲಾ

ಅಂತೆಲ್ಲ ಅವಳು ಪ್ರಶ್ನೆ ಹಾಕುವುದನ್ನು ತಪ್ಪಿಸಲೆಂದೇ ಹಾಗೆ ಹೇಮಾಳ ಬಳಿ, ಎಂದೂ ಸುಳ್ಳು ಹೇಳದ ವಸುಂಧರಾ ಸುಳ್ಳು ಹೇಳಿದ್ದಳು. ಹಾಗೆ ಹೇಳುವಾಗ ವಸುಂಧರಾಳ ಮುಖವನ್ನು ಒಂದೇ ಸಮನೆ ನೋಡುತ್ತಿದ್ದ ಹೇಮಾಳಿಗೆ ಅವಳ ಮಾತಿನ ರೀತಿ ಯಾಕೋ ಬೇರೆ ಥರಾ ಇದೆಯಲ್ಲಾ ಅನ್ನಿಸಿದರೂ ಇರಬಹುದೋ ಏನೋ ಎಂದು ಸುಮ್ಮನಾದಳು.

ಇತ್ತ ಶ್ರೀನಿವಾಸನಿಗಾದರೂ ವಸುಂಧರಾಳ ಯೋಚನೆ ಮೇಲಿಂದ ಮೇಲೆ ತೇಲಿ ಬರುತ್ತಿತ್ತು. ವಸುಂಧರಾ ಈ ವರ್ಷ ಅಂತಿಮ ಬಿ.ಎ. ಯಲ್ಲಿದ್ದಳು. ಇನ್ನು ಕೆಲವು ತಿಂಗಳು ಕಳೆದರೆ ವಸುಂಧರಾ ಕಾಲೇಜಿಗೆ ಬರುವುದೇ ಕೊನೆಗೊಳ್ಳುತ್ತೆ. ಅಷ್ಟರಲ್ಲಿ ವಸುಂಧರಾಳ ಒಲವನ್ನು ಸಂಪಾದಿಸಬೇಕೆಂದು ಅವನ ಮನಸ್ಸು ಹೇಳುತ್ತಿತ್ತು. ಅದಕ್ಕೆ ತಕ್ಕಂತೆ ಆ ವರ್ಷ ಒಂದೆರಡು ಸಂದರ್ಭಗಳು ಅಯಾಚಿತವಾಗಿ ಒದಗಿ ಬಂದುವು.

ಅಂದು ಹೆಣ್ಣುಮಕ್ಕಳ ಹಬ್ಬವಾದ ಭೀಮನ ಅಮಾವಾಸ್ಯೆಯ ದಿನ. ಹಿಂದೆ ಅವರು ಓದಿದ್ದ ಹೆಣ್ಣು ಮಕ್ಕಳಿಗೇ ಮೀಸಲಾದ ಹೈಸ್ಕೂಲು, ಜೂನಿಯರ್ ಕಾಲೇಜುಗಳಲ್ಲಿ ಭೀಮನ ಅಮಾವಾಸ್ಯೆಗೂ ರಜೆ ಕೊಡುತ್ತಿದ್ದರು. ಆದರೆ ಇದು ಸಹ ಶಿಕ್ಷಣದ ಕಾಲೇಜಾಗಿದ್ದರಿಂದ ಇಲ್ಲಿ ರಜೆ ನೀಡುತ್ತಿರಲಿಲ್ಲ. ಕೆಲವು ಶಿಕ್ಷಕಿಯರು ನಿರ್ಬಂಧಿತ ರಜೆ ತೆಗೆದುಕೊಳ್ಳುತ್ತಿದ್ದರು. ಆದರೆ ಮಮತಾ ಮೇಡಮ್ ಮಾತ್ರ ಆ ದಿನ ಕ್ಲಾಸ್ ತೆಗೆದುಕೊಳ್ಳದೆ ಇರುತ್ತಿರಲಿಲ್ಲ. ಯಾರೋ ಕೆಲವು ಹುಡುಗಿಯರು– "ನಾಳೆ ಭೀಮನ ಅಮಾವಾಸ್ಯೆ ಹಬ್ಬ. ಕ್ಲಾಸ್ ತಗೊಳ್ತೀರಾ ಮೇಡಮ್" ಅಂತ ಕೇಳಲು ಹೋಗಿದ್ದಾಗ "ಅದೆಂಥೋದು ರೀ. ಗಂಡನ ಪೂಜೆ. ಈ ಗಂಡಸರು ಇಷ್ಟು ಶತಮಾನ ನಮ್ಮ ತಲೆಮೇಲೆ ಸವಾರಿ ಮಾಡಿದ್ದು ಸಾಲದು ಅಂತ ಈಗ ಅವರ ಪೂಜೆ ಬೇರೆ ಮಾಡಬೇಕೋ. ನಮ್ಮ ಹೆಣ್ಣು ಮಕ್ಕಳಿಗೆ ಅದು ಯಾವತ್ತು ಬುದ್ಧಿ ಬರುತ್ತೋ ಏನೋ!. ಹೆಣ್ಣು ಮಕ್ಕಳು ಗಂಡಸರಿಗಿಂತ ಏನು ಕಡಮೆ, ಯಾವುದರಲ್ಲಿ ಕಡಮೆ. ನ್ಯಾಯವಾಗಿ ಗಂಡು ಮಕ್ಕಳೇ ನಮಗೆ ಒಳ್ಳೆ ಹೆಂಡತಿ ಸಿಗಬೇಕು ಅಂತ ಪೂಜೆ ಮಾಡಬೇಕು. ನೀವು ಅದೆಲ್ಲ ನೆಪ ಹೇಳಿ ಕ್ಲಾಸಿಗೆ ತಪ್ಪಿಸಿಕೊಳ್ಳಬೇಡಿ" ಅಂತ ಹೇಳಿದ್ದರು. ಅದರ ಜೊತೆಗೆ ಇಂಗ್ಲಿಷ್ ಮತ್ತು ಇತಿಹಾಸದ ಕೆಲವು ಅಧ್ಯಾಪಕರು ತರಗತಿ ತೆಗೆದುಕೊಳ್ಳುವುದಾಗಿ ಹೇಳಿದ್ದರು. ಹಾಗಾಗಿ ವಸುಂಧರಾ ಬೇಗನೆ ಪೂಜೆಯ ಶಾಸ್ತ್ರ ಮುಗಿಸಿಕೊಂಡು ಕಾಲೇಜಿಗೆ ಹೋಗಲು ನಿರ್ಧರಿಸಿದ್ದಳು. ಹೇಮಾಳ ಮನೆಯಲ್ಲಿ ವ್ರತ ಅಂತ ಇಲ್ದೆ ಹೋದರೂ ಆ ಸಂಬಂಧದ ಪೂಜೆಯ ಸಂಪ್ರದಾಯವಿತ್ತು. ಸರಿ ಇಬ್ಬರೂ ಕಾಲೇಜಿಗೆ ಹೊರಟರು.

ಅಂದು ವಸುಂಧರಾ ಪೂಜೆಗೆ ಉಟ್ಟಿದ್ದ ಸೀರೆಯನ್ನು ಬದಲಾಯಿಸದೆ ಹಾಗೇ ಕಾಲೇಜಿಗೆ ಬಂದಿದ್ದಳು. ಸಾಮಾನ್ಯವಾಗಿ ಸ್ನೇಹಿತೆಯರಿಬ್ಬರೂ ಸೈಕಲ್‌ನಲ್ಲಿ ಹೋಗಲು ಅನುಕೂಲ ಎನ್ನುವ ಕಾರಣಕ್ಕೆ ಚೂಡಿದಾರ್ ಪೈಜಾಮ ಧರಿಸಿಯೇ ಹೋಗುತ್ತಿದ್ದರು. ಒಂದು ವೇಳೆ ಸೀರೆ ಧರಿಸಿ ಹೋಗುವುದಾದರೆ ಇಬ್ಬರೂ ಒಂದೇ ದಿನ ಧರಿಸಿ ಹೋಗುತ್ತಿರಲಿಲ್ಲ, ಸೀರೆ ಧರಿಸಿ ಹೋದವಳನ್ನು ಚೂಡಿದಾರ್ ಪೈಜಾಮಾ ಧರಿಸಿದವಳು

ಡಬ್ಬಲ್ ರೈಡಿಂಗ್ ಕರೆದೊಯ್ಯಬೇಕೆಂದು ಇಬ್ಬರ ನಡುವಿನ ಒಂದು ರೀತಿಯ ಅಲಿಖಿತ ಒಪ್ಪಂದವಾಗಿತ್ತು. ಅದರಂತೆ ಈ ಬಗ್ಗೆ ಹಿಂದಿನ ದಿನವೇ ಮಾತನಾಡಿಕೊಂಡಿದ್ದಂತೆ ಹೇಮಾ ವಸುಂಧರಾಳ ಮನೆಗೆ ಬಂದು ಅವಳನ್ನೂ ಸೈಕಲ್ ಮೇಲೆ ಕರೆದುಕೊಂಡು ಹೋದಳು.

ಅವಳನ್ನು ಸೀರೆಯ ಗೆಟಪ್‌ನಲ್ಲಿ ನೋಡಿದ ಕೆಲವು ಗೆಳತಿಯರು– "ಏನೇ ಯಾರನ್ನು ಮೆಚ್ಚಿಸೋಕೆ ಈ ಡ್ರೆಸ್ಸು, ನಮಗೆಲ್ಲಾ ಗೊತ್ತುಬಿಡು ನಿನ್ನ ಸೀಕ್ರೇಟು" ಎಂದು ಛೇಡಿಸಿದರು. ಅವರುಗಳು ಯಾರೂ ಬಾಯಿಬಿಟ್ಟು ಹೇಳದಿದ್ದರೂ ಇತ್ತೀಚೆಗೆ ಕ್ಲಾಸ್‌ನಲ್ಲಿ ಪಾಠ ಮಾಡುವಾಗ ಎನ್.ಎಸ್. ಮೇಷ್ಟರ ಕಣ್ಣು ವಸುಂಧರಾಳ ಕಡೆಗೆ ಮತ್ತೆ ಮತ್ತೆ ಹರಿದಾಡುತ್ತಿದ್ದುದನ್ನು ಗಮನಿಸಿದ್ದರು. ವಸುಂಧರಾ ಅದಕ್ಕೆ "ಅಯ್ಯೋ ಇವತ್ತು ಹಬ್ಬ, ಅದಕ್ಕೆ ಉಟ್ಟುಕೊಂಡಿದ್ದೆ. ಡ್ರೆಸ್ ಬದಲಾಯಿಸೋಕೆ ಟೈಮ್ ಆಗಲಿಲ್ಲ. ಅಷ್ಟರಲ್ಲಿ ಹೇಮಾ ಬೇರೆ ಬಂದುಬಿಟ್ಟಳು. ಏನಂತೀಗ ಅದಕ್ಕೆಲ್ಲಾ ನೀವು ನಿಮ್ಮ ಮನಸ್ಸಿಗೆ ಬಂದ ಹಾಗೆ ಏನೇನೋ ಹೇಳಿದರೆ ಹೇಳಿಕೊಳ್ಳಿ" ಎಂದು ದಬಾಯಿಸಿದಳು. ಹಾಗೆ ಹೇಳಿದರೂ ಒಳ ಮನಸ್ಸಿನಲ್ಲಿ ಈ ಡ್ರೆಸ್ಸಿನಲ್ಲಿ ಒಮ್ಮೆ ಎನ್.ಎಸ್. ಮೇಷ್ಟರನ್ನು ಭೇಟಿಮಾಡಿ ಬರಬೇಕು ಅಂತ ಅಂದುಕೊಂಡಳು. ಅದಕ್ಕೆ ತಕ್ಕಂತೆ ತಾನು ಕ್ಲಾಸ್‌ನಲ್ಲಿ ಮೇಷ್ಟರ ಲೆಕ್ಚರ್ ಕೇಳಿ ಇನ್ನು ಕೆಲವು ಪುಸ್ತಕಗಳನ್ನು ರೆಫರ್ ಮಾಡಿ ಬರೆದಿಟ್ಟಿದ್ದ ಇತಿಹಾಸ ವಿಷಯಕ್ಕೆ ಸಂಬಂಧಿಸಿದ ಕೆಲವು ಬರಹಗಳನ್ನು ನೋಡಿಕೊಡಲು ಅವರನ್ನು ಭೇಟಿಯಾಗುವ ನೆಪದಿಂದ ಅವರ ವಿಭಾಗದ ಕೊಠಡಿಗೆ ಹೋದಳು. ಹೇಮಾಳನ್ನು ಕರೆದದ್ದಕ್ಕೆ – "ಅಯ್ಯೋ ನಾನಿನ್ನೂ ಬರೆದಿಲ್ಲ; ಮೇಷ್ಟರನ್ನು ಭೇಟಯಾಗಲು ಒಂದು ಥರಾ ಅನ್ನಿಸುತ್ತೆ. ನೀನೇ ಹೋಗಿಬಂದುಬಿಡು" ಎಂದು ಹೇಳಿದ್ದರಿಂದ ಒಬ್ಬಳೇ ಹೋದಳು. ಅವಳು ಹೋದ ಹೊತ್ತಿಗೆ ಸರಿಯಾಗಿ ಬೇರೆ ಯಾರೂ ಸಹೋದ್ಯೋಗಿಗಳು ಇಲ್ಲದ್ದರಿಂದ ಬೀಗ ಹಾಕಿಕೊಂಡು ಅವರು ಕ್ಯಾಂಟೀನಿಗೆ ಹೊರಟಿದ್ದರು. ಇವಳನ್ನು ನೋಡಿದ ಕೂಡಲೇ ಸಂಭ್ರಮದಿಂದ–"ಬನ್ನಿ ಏನು ಸಮಾಚಾರ" ಎಂದು ಬೀಗ ತೆಗೆದು ಒಳಕ್ಕೆ ಹೋದರು. ವಸುಂಧರಾ ತಾನು ಬರೆದಿದ್ದ ಬರಹಗಳನ್ನು ಕೊಟ್ಟು ಇದನ್ನು ದಯವಿಟ್ಟು ಸ್ವಲ್ಪ ನೋಡಿ ಏನಾದರೂ ಬದಲಾವಣೆ ಮಾಡಬೇಕಿದ್ದರೆ ಹೇಳಿ ಸರ್ ಎಂದು ಕೈಗೆ ನೀಡಿದಳು. ಹಾಗೆ ನೀಡುವಾಗ ಉದ್ದೇಶಪೂರ್ವಕವಾಗೋ ಅನುದ್ದೇಶಪೂರ್ವಕವಾಗೋ ಅವಳ ಕೈ ಅವನ ಕೈಗಳನ್ನು ಸ್ಪರ್ಶಿಸಿತು. ಶ್ರೀನಿವಾಸ್ ಒಂದು ಕ್ಷಣ ಅಡಿಯಿಂದ ಮುಡಿಯವರೆಗೂ ಅವಳನ್ನು ನೋಡಿ– "ಏನ್ರೀ ಒಳ್ಳೆ ಮದುವೆ ಹೆಣ್ಣಿನ ಥರಾ ಕಾಣಿಸ್ತಿದ್ದೀರಿ. ಇದು ಬೇರೆ ಏನೋ ಕೈಗೆ ಕಟ್ಟಿಕೊಂಡಿದ್ದೀರಿ" ಎಂದು ಅವಳು ಕಟ್ಟಿಕೊಂಡಿದ್ದ ದಾರದ ಕಡೆ ತೋರಿಸಿ ಅದರ ಮೇಲೆ ಕೈಯಾಡಿಸುತ್ತ ಹೇಳಿದ. ತಕ್ಷಣ ಯಾರಾದರೂ ನೋಡಿಯಾರೆಂದು ತನ್ನ ಕೈ ಸರಿಸಿಕೊಂಡು– "ಹೌದು ಸರ್, ಈ ಹೊತ್ತು ಭೀಮನ ಅಮಾವಾಸ್ಯೆ ಹಬ್ಬ ಅಲ್ಲವಾ, ಅದಕ್ಕೇ ದಾರ ಕಟ್ಟಿಕೊಂಡಿದ್ದೀನಿ" ಎಂದಳು. "ಓ ಒಳ್ಳೆ ಗಂಡ ಸಿಗಲಿ ಅಂತ ಪೂಜೆ ಮಾಡಿಬಂದಿದ್ದೀರಿ ಅಲ್ಲವೇನ್ರೀ" ಎಂದು ನಗೆಯಾಡಿದ. ವಸುಂಧರಾ ಮುಗುಳ್ನಕ್ಕಳು. ಸುಂದರವಾದ ಸೀರೆಯ ಉಡುಪಿನಲ್ಲಿ ನಗೆ ಬೀರುತ್ತಾ ನಿಂತ ಆ ಚೆಲುವೆಯನ್ನು

ಶ್ರೀನಿವಾಸ್ ಗರಬಡಿದವನಂತೆ ಸಂಕೋಚ ಮರೆತು ನೋಡುತ್ತಲೇ ಇದ್ದ. ಶ್ರೀನಿವಾಸನ ಸುಂದರ ದಂತ ಪಂಕ್ತಿ, ಅವನ ನಗೆ ಅವಳನ್ನೂ ಸೆರೆಹಿಡಿದಿತ್ತು.

ವಸುಂಧರಾ– "ಪೂಜೆ ಮಾಡಿದಾಕ್ಷಣಕ್ಕೇ ಒಳ್ಳೇ ಗಂಡ ಸಿಕ್ಕಿಬಿಡುತ್ತಾನಾ ಸರ್" ಎಂದು ಪ್ರಶ್ನಿಸಿದಳು. "ಮತ್ತೆ ಹಾಗಿದ್ದ ಮೇಲೆ ಯಾಕೆ ಪೂಜೆ ಮಾಡ್ತೀರಿ?". "ಅದೊಂದು ಮೊದಲಿನಿಂದಲೂ ಬಂದಿರೋ ಸಂಪ್ರದಾಯ ಅಷ್ಟೆ. ಪೂಜೆ ಮಾಡಿದೋರಿಗೆಲ್ಲಾ ಒಳ್ಳೆ ಗಂಡ ಸಿಕ್ಕಿಬಿಡೋ ಹಾಗಿದ್ದಿದ್ದರೆ ಇಷ್ಟೊಂದೆಲ್ಲಾ ಡೈವರ್ಸ್‌ಗಳು, ಪತ್ನೀಪೀಡಕರು, ಇರಬರದಾಗಿತ್ತಲ್ಲವಾ ಸರ್?" "ನೀವು ಹೇಳೋದು ಸರಿ. ಬರೀ ಪತ್ನೀಪೀಡಕರು ಮಾತ್ರ ಇಲ್ಲರೀ. ಪತಿಯನ್ನು ಪೀಡಿಸೋಂಥ ಪತ್ನಿಯರೂ ಸಾಕಷ್ಟು ಜನ ಇದ್ದಾರೆ ರೀ. ಹಸುವಿನಂಥ ಸಾಧುಪ್ರಾಣಿಯಾದ ನಮ್ಮ ಮೇಷ್ಟರೊಬ್ಬರು ಪಾಪ ಹೆಂಡತಿ ಕಾಟ ತಡೆಯಲಾರದೆ ಡೈವರ್ಸ್‌ಗೆ ಹಾಕಿದಾರೆ. ಆದರೆ ಆಕೆ ಎಂಥವಳು ಅಂದರೆ ಇತ್ಲಾಗೆ ಡೈವರ್ಸೂ ಕೊಡ್ತಾ ಇಲ್ಲ, ನೆಮ್ಮದಿಯಾಗಿ ಜೊತೇಲಿ ಇರಕ್ಕೂ ಬಿಡ್ತಾ ಇಲ್ಲ. ಡೈವರ್ಸ್ ಕೇಸು ನಡೀತಾನೆ ಇದೆ ಅದೆಷ್ಟೋ ವರ್ಷಗಳಿಂದ. ಆಕೆನೂ ಕೆಲಸದಲ್ಲಿ ಬೇರೆ ಇದ್ದಾಳೆ. ಇಂಥದಕ್ಕೆ ಏನು ಹೇಳೋದು? ಆದರೆ ನಿಮ್ಮ ಸ್ತ್ರೀವಾದಿಗಳು ಮಾತ್ರ ಅಂಥವರ ಪರವಾಗೇ ಇರ್ತಾರೆ. ಏನು ಹೇಳ್ತೀರಿ ಇದಕ್ಕೆ?" "ಸ್ತ್ರೀವಾದಿಗಳನ್ನು ಅಷ್ಟು ಕೇವಲವಾಗಿ ನೋಡಬೇಡಿ ಸರ್." ಎಂದಳು. "ಅಯ್ಯೋ ಇಲ್ಲಮ್ಮಾ. ನನಗೆ ಸ್ತ್ರೀವಾದಿಗಳು ಅಂದರೇನೆ ಭಯ" ಎಂದು ನಕ್ಕ. ವಸುಂಧರಾಳೂ ನಕ್ಕು "ಆದರೆ ನಾನು ಭಯಪಡಿಸೋಂಥ ಸ್ತ್ರೀವಾದಿ ಅಲ್ಲ. ಬರ್ತೀನಿ ಸರ್" ಎಂದು ಹೊರಟಳು.

* * *

ಅಂತಿಮ ವರ್ಷದ ಇತಿಹಾಸದ ವಿದ್ಯಾರ್ಥಿಗಳು ಐತಿಹಾಸಿಕ ಮಹತ್ವದ ಬೇಲೂರು, ಹಳೇಬೀಡು ಮತ್ತು ಶ್ರವಣ ಬೆಳುಗೊಳಕ್ಕೆ ಟೂರ್ ಹೋಗುವುದೆಂದು ಗೊತ್ತಾಯಿತು. ಅದರಂತೆ ಆಸಕ್ತ ನಲವತ್ತೈದು ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರವಾಸಕ್ಕೆ ಸಿದ್ಧರಾದರು. ವಿದ್ಯಾರ್ಥಿಗಳ ನೇತೃತ್ವ ವಹಿಸಿಕೊಂಡವರು ಎನ್.ಎಸ್. ಮೇಷ್ಟ್ರು ಮತ್ತು ಮಮತಾ ಮೇಡಮ್. ಬೇರೆ ಊರಿಂದ ಕಾಲೇಜಿಗೆ ನಿತ್ಯ ಪ್ರಯಾಣಿಸುತ್ತಿದ್ದ ಕೆಲವು ಅಧ್ಯಾಪಕರು ಮತ್ತು ಮೇಡಮ್‌ಗಳಿಗೆ ಈ ನೆವದಲ್ಲಿ ದಿನ ನಿತ್ಯದ ಪ್ರಯಾಣ ತಪ್ಪಿದರೆ ಸಾಕೆಂದು, ತಮ್ಮ ಸಂಸಾರದ ಜವಾಬ್ದಾರಿಯ ನೆವ ಹೇಳಿ ಟೂರ್ ತಪ್ಪಿಸಿಕೊಂಡರು. ಇನ್ನು ತರುಣ ವಯಸ್ಸಿನ ಶ್ರೀನಿವಾಸನಿಗೆ ಸಂಸಾರದ ಜವಾಬ್ದಾರಿ ಇಲ್ಲದ್ದರಿಂದ ಅವನು ಕೂಡಲೇ ಒಪ್ಪಿದ. ಮಮತಾ ಮೇಡಮ್‌ಗೆ ಉಳಿದ ಮೇಡಮ್‌ಗಳಿಗೆ ಹೋಲಿಸಿದರೆ ಅಂಥದೇನೂ ಹೆಚ್ಚಿನ ಜವಾಬ್ದಾರಿ ಇರಲಿಲ್ಲವಾದ್ದರಿಂದ, ಜೊತೆಗೆ ಇತಿಹಾಸದ ವಿದ್ಯಾರ್ಥಿಗಳೊಂದಿಗೆ ಸಾಹಿತ್ಯದ ಒಬ್ಬ ಅಧ್ಯಾಪಕರೂ ಇದ್ದರೆ ವಿದ್ಯಾರ್ಥಿಗಳಿಗೆ ಗೈಡ್ ಮಾಡಲು ಅನುಕೂಲ ಎನಿಸಿ ಮೇಡಮ್ ವಿದ್ಯಾರ್ಥಿನಿಯರು ಕೇಳಿಕೊಂಡ ತಕ್ಷಣ ಒಪ್ಪಿದರು. ಟೂರ್ ಶುಕ್ರವಾರ, ಶನಿವಾರ ಮತ್ತು ಭಾನುವಾರ ಎಂದು ಮೂರೇ ದಿನಗಳ ಟೂರ್ ಆದ್ದರಿಂದ, ಜೊತೆಗೆ ಒಬ್ಬ ಮೇಡಮ್ ಕೂಡ ಇರುತ್ತಾರೆಂದು ಖಚಿತವಾದ

ಮೇಲೆ ವಿದ್ಯಾರ್ಥಿನಿಯರ ಮನೆಯವರೂ ಹೆಚ್ಚೇನೂ ತಕರಾರು ಮಾಡದೆ ಒಪ್ಪಿದರು. ಟೂರ್‌ಗೆ ವಿಶೇಷ ಆಸಕ್ತಿ ತೋರಿಸಿ ಎಲ್ಲರಿಗಿಂತ ಮುಂಚೆ ಹಣಕೊಟ್ಟು ರಿಜಿಸ್ಟರ್ ಮಾಡಿಸಿದ್ದವರೇ ಹೇಮಾ ಮತ್ತು ವಸುಂಧರಾ. ಇತಿಹಾಸದ ವಿದ್ಯಾರ್ಥಿಗಳಾಗಿ ಅಂಥ ಮಹತ್ವದ ಸ್ಥಳಗಳನ್ನು ನೋಡುವ ಅವಕಾಶ, ಅದರಲ್ಲೂ ಎನ್.ಎಸ್. ಮೇಷ್ಟ್ರು ಮತ್ತು ಮಮತಾ ಮೇಡಮ್ ಜೊತೆ ಇರುವ ಕಾರಣ ಶಾಸನಗಳ ಮತ್ತು ಕಲೆಯ ಮಹತ್ವದ ಬಗ್ಗೆ ಅವರಿಬ್ಬರೂ ಹೆಚ್ಚು ಬೆಳಕು ಬಿರುತ್ತಾರೆಂಬುದು ಇನ್ನೊಂದು ಆಕರ್ಷಣೆ. ವಸುಂಧರಾಳಿಗಂತೂ ತನ್ನ ನೆಚ್ಚಿನ ಎನ್.ಎಸ್. ಮೇಷ್ಟರಿಗೆ ಹತ್ತಿರವಾಗಲು ಇದೊಂದು ಒಳ್ಳೆಯ ಅವಕಾಶವೆನಿಸಿ ಮನಸ್ಸು ಹುಚ್ಚೆದ್ದು ಕುಣಿಯಿತು. ವಸುಂಧರಾ ಇಷ್ಟೊಂದು ಉತ್ಸಾಹ ಮತ್ತು ಸಂತೋಷದಿಂದಿರುವುದನ್ನು ನೋಡಿ ಹೇಮಾಳಿಗೆ ಎಲ್ಲಿಲ್ಲದ ಆಶ್ಚರ್ಯವಾಯಿತು.

ಶುಕ್ರವಾರ ರಾತ್ರಿ ಮತ್ತು ಶನಿವಾರ ರಾತ್ರಿ ಉಳಿದುಕೊಳ್ಳಲು ಮುಂಚೆಯೇ ಸಂಬಂಧಿಸಿದವರಿಗೆ ಬರೆದು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಿಸಿದ್ದರು. ಶುಕ್ರವಾರ ಪ್ರಯಾಣದ ದಿನವಾದ್ದರಿಂದ ಬೇಲೂರಿನ ದೇವಸ್ಥಾವನ್ನು ನೋಡಿಕೊಂಡು ಅಲ್ಲಿಯೇ ತಂಗುವುದೆಂದೂ ಮರುದಿನ ಬೆಳಿಗ್ಗೆ ಉಪಾಹಾರದ ನಂತರ ಹಳೇಬೀಡನ್ನು ನೋಡಿಕೊಂಡು ಬೇಗನೆ ಬಂದು ಶ್ರವಣ ಬೆಳುಗೊಳದ ಇಂದ್ರಗಿರಿ ಬೆಟ್ಟವೇರಿ ಗೊಮಟೇಶ್ವರ ಮೂರ್ತಿಯ ದರ್ಶನ ಮಾಡಿಕೊಂಡು ಕೆಳಗಿಳಿದು ಬಂದು ಊಟ ಮುಗಿಸಿ ಸಂಜೆ ಕೆಳಗಡೆ ಇರುವ ಜೈನ ಮಠ ಮತ್ತಿತರ ಸ್ಥಳಗಳನ್ನು ನೋಡಿ ಸ್ವಾಮೀಜಿಯವರ ದರ್ಶನ, ಅಲ್ಲಿಯ ಹಸ್ತಪ್ರತಿ ಭಂಡಾರದ ಪರಿಚಯ ಮಾಡಿಕೊಂಡು ಅಲ್ಲೇ ತಂಗಿ ಮರುದಿನ ಬೆಳಿಗ್ಗೆಯೇ ಚಿಕ್ಕಬೆಟ್ಟ ಹತ್ತಿ ವಿವರ ವಿವರವಾಗಿ ಅಲ್ಲಿಯ ಶಾಸನ, ದೇವಸ್ಥಾನಗಳನ್ನು ನೋಡುವುದೆಂದು ಗೊತ್ತಾಗಿತ್ತು.

ಅದರಂತೆ ಶುಕ್ರವಾರ ಬೆಳಿಗ್ಗೆಯೇ ತುಮಕೂರಿನಿಂದ ಬಹಳ ಸಂಭ್ರಮೋತ್ಸಾಹಗಳಿಂದ ವಿದ್ಯಾರ್ಥಿಗಳ ದಂಡು ಬಸ್ಸೇರಿ ಹೊರಟೇಬಿಟ್ಟಿತು. ಸಿನಿಮಾದ ಅಂತ್ಯಾಕ್ಷರಿಗಳನ್ನು ಹಾಡುವಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪೈಪೋಟಿಯ ಮೇಲೆ ಎರಡು ತಂಡಗಳನ್ನಾಗಿ ಮಾಡಿಕೊಂಡು ಹಾಡಿ ನಲಿದರು. ವಿದ್ಯಾರ್ಥಿಗಳ ಒತ್ತಾಯದ ಮೇರೆಗೆ ಶ್ರೀನಿವಾಸನೂ ತನಗಿಷ್ಟವಾದ ಹಳೆಯ ಹಿಂದೀ ಸಿನಿಮಾದ ಹಾಡೊಂದನ್ನು ಹಾಡಿದ. ಮಮತಾ ಮೇಡಮ್ ತಮಗೆ ಸಿನಿಮಾ ಹಾಡು ಯಾವುದೂ ಪೂರ್ತಿ ಜ್ಞಾಪಕ ಇಲ್ಲ ಆದರೆ ಒಂದೆರಡು ಸೊಗಸಾದ ವೃತ್ತ ಷಟ್ಪದಿಗಳನ್ನು ಹಾಡುತ್ತೇನೆ ಎಂದು ಹೇಳಿ ವಿದ್ಯಾರ್ಥಿಯೊಬ್ಬ ಕೊನೆಗಳಿಸಿದ ಅಕ್ಷರದಿಂದ ಪ್ರಾರಂಭಿಸಿ ಹಾಡಿದರು.

ಪ್ರಯಾಣದ ಮಧ್ಯೆ ಮುಂಚೆಯೇ ನಿರ್ಧರಿಸಿಕೊಂಡಿದ್ದ ಹೋಟೆಲ್‌ನಲ್ಲಿ ತಿಂಡಿ ಕಾಫಿ ಸಮಾರಾಧನೆಯಾಯಿತು. ಊಟದ ಸಮಯಕ್ಕೆ ಸರಿಯಾಗಿ ಬೇಲೂರು ತಲುಪಿ ಹೋಟೆಲ್‌ನಲ್ಲಿ ಊಟ ಮುಗಿಸಿ ತಾವು ರಾತ್ರಿ ತಂಗಲು ವ್ಯವಸ್ಥೆ ಮಾಡಿದ್ದ ಛತ್ರವೊಂದರಲ್ಲಿ ಅರ್ಧಗಂಟೆ ವಿಶ್ರಾಂತಿ ಪಡೆದು ಬೇಲೂರು ದೇವಸ್ಥಾನ ನೋಡಲು

ಹೊರಟರು. ಮೊದಲಿಗೆ ದೇವಸ್ಥಾನದ ಹೊರಭಾಗದಲ್ಲಿದ್ದ ಶಿಲಾಬಾಲಿಕೆಯರ ಶಿಲ್ಪಕಲಾ ಚಾತುರ್ಯವನ್ನು ಅದರ ಬಗ್ಗೆ ಒಳ್ಳೆಯ ಜ್ಞಾನವಿದ್ದ ಶ್ರೀನಿವಾಸ್, ಮಮತಾ ಮೇಡಮ್ ಮತ್ತು ಸ್ಥಳೀಯ ಗೈಡೊಬ್ಬನ ನೆರವಿನಿಂದ ಅರಿತು ಮುದತಾಳಿದರು. ಹೇಮಾ ಮುಂದೆ ಸಾಗುತ್ತಾ ವಸುಂಧರಾಳ ಕಿವಿಯಲ್ಲಿ –"ನೋಡು ವಸೂ ನಿನ್ನನ್ನೂ ಇಲ್ಲಿ ಒಬ್ಬ ಶಿಲಾಬಾಲಿಕೆಯ ಪಕ್ಕ ನಿಲ್ಲಿಸಿಬಿಟ್ಟರೆ ಎಲ್ಲರೂ ಆ ಶಿಲಾಬಾಲಿಕೆಯನ್ನು ಬಿಟ್ಟು ನಿನ್ನನ್ನೇ ನೋಡ್ತಾ ನಿಂತುಬಿಡ್ತಾರೆ ಕಣೇ" ಅಂತ ಸ್ವಲ್ಪ ಜೋರಾಗಿಯೇ ಪಿಸುಗುಟ್ಟಿದ್ದು ಹಿಂದೆಯೇ ಬರುತ್ತಿದ್ದ ಶ್ರೀನಿವಾಸನ ಕಿವಿಗೆ ಬಿದ್ದು –"ವಂಡರ್ ಫುಲ್! ಸರಿಯಾಗಿ ಹೇಳಿದಿರಿ ನೋಡಿ ಹೇಮಾ" ಅಂದಿದ್ದು ಕೇಳಿ ಗೆಳತಿಯರಿಬ್ಬರೂ ನಾಚಿ ನೀರಾದರು. "ಏನ್ಸಾರ್ ನಾನು ಇವಳ ಕಿವೀಲಿ ಹೇಳಿದ್ದು ನಿಮಗೂ ಕೇಳಿಸಿಬಿಟ್ಟಿತು ಅಂದರೆ ನಿಮ್ಮ ಕಿವಿ ತುಂಬಾ ಚುರುಕು ಸರ್" ಎಂದ ಹೇಮಾಳ ಮಾತಿಗೆ ಶ್ರೀನಿವಾಸ್ ಬರಿದೆ ಮುಗುಳ್ನಕ್ಕ. ವಸುಂಧರಾಳಿಗಂತೂ ನಾಚಿಕೆಯೊಂದಿಗೆ ಅತೀವ ಸಂತೋಷವೂ ಆಯಿತು. ಶ್ರೀನಿವಾಸ್, ಬೇಲೂರು ದೇವಸ್ಥಾನದ ನಿರ್ಮಾಣಕ್ಕೆ ಸಂಬಂಧಿಸಿದಂತೆ ಇದು ಒಂದು ತಲೆಮಾರಿನಲ್ಲಿ ನಿರ್ಮಾಣವಾದ ದೇವಾಲಯ ಅಲ್ಲ; ಮೂರು ತಲೆಮಾರಿನಲ್ಲಿ ನಿರ್ಮಾಣವಾದ ದೇವಾಲಯ ಎಂದು ಗೈಡ್ ಹೇಳದೆ ಬಿಟ್ಟ ಅನೇಕ ಐತಿಹಾಸಿಕ ಅಂಶಗಳನ್ನು ತಿಳಿಸಿಕೊಟ್ಟ. ಮಮತಾ ಮೇಡಮ್– "ನೋಡಿ ಈ ಬೇಲೂರು ಶಿಲಾಬಾಲಿಕೆಯರ ಸೌಂದರ್ಯಕ್ಕೆ ಮರುಳಾಗದವರೇ ಇಲ್ಲ. ಇವರ ಸೌಂದರ್ಯಕ್ಕೆ ಕನ್ನಡದ ಖ್ಯಾತ ಕವಿ ಡಿವಿಜಿ ಯವರು ತಮ್ಮ ಅತಃಪುರ ಗೀತೆಗಳಲ್ಲಿ ಕಾವ್ಯರೂಪ ನೀಡಿದ್ದಾರೆ. ಅದರಲ್ಲಿ ಕೆಲವನ್ನು ಖ್ಯಾತ ಸಂಗೀತ ವಿದುಷಿ ಎಂ.ಎಸ್ ಸುಬ್ಬಲಕ್ಷ್ಮಿ ಹಾಡಿದ್ದಾರೆ. ಕೆಲವರು ನೃತ್ಯ ರೂಪಕ್ಕೆ ಅಳವಡಿಸಿದ್ದಾರೆ ಎಂದರು. 'ಹೌದಾ ಮೇಡಮ್' ಎಂದು ವಿದ್ಯಾರ್ಥಿನಿಯರು ಆಶ್ಚರ್ಯ ವ್ಯಕ್ತಪಡಿಸಿದರು. "ಹೌದು ಈ ಸಲ ನಮ್ಮ ಕಾಲೇಜ್ ಡೇಗೆ ಆ ನೃತ್ಯ ರೂಪಕ ನಾವೂ ಮಾಡಿಸೋಣ. ಜೀವಂತ ಶಿಲಾಬಾಲಿಕೆಯರು ನೀವುಗಳೆಲ್ಲಾ ಹೇಗೂ ಇದ್ದೀರಲ್ಲ." ಎಂದರು.

ಅಂದು ಅಲ್ಲಿಯ ಛತ್ರದಲ್ಲಿ ತಂಗಿದ್ದು ಬೆಳಿಗ್ಗೆ ಅಲ್ಲಿಯೇ ಉಪಾಹಾರ ಮುಗಿಸಿ ಹಳೇಬೀಡಿಗೆ ತೆರಳಿ ಅಲ್ಲಿ ಶಾಂತಲೇಶ್ವರ ಹೊಯ್ಸಳೇಶ್ವರ ದೇವಾಲಯ ಮತ್ತು ಜೈನ ಬಸದಿಗಳನ್ನು ನೋಡಿದರು. ಹಳೇಬೀಡಿನಲ್ಲಿ ಬಹಳಷ್ಟು ವಿಗ್ರಹಗಳು ಮುಕ್ಕಾಗಿರುವ ಬಗ್ಗೆ ಎಲ್ಲರಲ್ಲೂ ವಿಷಾದ ಭಾವ ತುಂಬಿತ್ತು. ಶ್ರೀನಿವಾಸ್– "ಈಗ ಹಳೇಬೀಡು ಎಂದು ಕರೆಯಲ್ಪಡುವ ಇದು ಒಂದು ಕಾಲದಲ್ಲಿ ಹೊಯ್ಸಳರ ರಾಜಧಾನಿಯಾಗಿ ಮೆರೆದು ದ್ವಾರ ಸಮುದ್ರ ಎಂದು ಹೆಸರಾಗಿತ್ತು. ಮಲ್ಲಿಕಾಫರನ ದಂಡಯಾತ್ರೆಯಲ್ಲಿ ಇಲ್ಲಿಯ ಬಹಳಷ್ಟು ವಿಗ್ರಹಗಳು ವಿರೂಪಗೊಂಡುವು ಅಂತ ಹೇಳ್ತಾರೆ. ಅದೇ ರೀತಿ ಒಂದು ಕಾಲದಲ್ಲಿ ವಿಜಯ ನಗರದ ಅರಸರ ರಾಜಧಾನಿಯಾಗಿ ಮೆರೆದ ಹಂಪೆ ಇಂದು ಹಾಳುಹಂಪೆಯಾಗಿದೆ. ಒಂದೊಂದು ಊರಿಗೂ ಒಂದೊಂದು ಉಚ್ಛ್ರಾಯ ಕಾಲ ಇರುವ ಹಾಗೆಯೇ ಅವನತಿಯ ಕಾಲವೂ ಇರುತ್ತದೆ." ಎಂದು ಹೇಳಿದ. ಮಧ್ಯಾಹ್ನದವರೆಗೂ ಎಲ್ಲ ನೋಡಿಕೊಂಡು ಅಲ್ಲೇ ಊಟ ಮುಗಿಸಿ ಶ್ರವಣ ಬೆಳುಗೊಳದ

ಕಡೆಗೆ ಹೊರಟರು.

ಶ್ರವಣ ಬೆಳುಗೊಳ ತಲುಪಿದ ಕೂಡಲೇ ಕಾಫಿ ಮುಗಿಸಿ ಎಲ್ಲರೂ ಗೊಮಟೇಶ್ವರ ಸ್ವಾಮಿಯ ದರ್ಶನಕ್ಕೆ ಹೊರಟರು. ಬೆಟ್ಟ ಹತ್ತುವ ಮುಂಚೆ ಶ್ರೀನಿವಾಸ್– "ಇದು ಇಂದ್ರಗಿರಿ ಎಂಬ ಪ್ರಸಿದ್ಧವಾದ ಬೆಟ್ಟ. ವಿಂಧ್ಯಗಿರಿ ಎಂದೂ ಇದಕ್ಕೆ ಹೆಸರುಂಟು. ಇದನ್ನು ದೊಡ್ಡ ಬೆಟ್ಟ ಎಂದೂ ಕರೆಯುತ್ತಾರೆ. ಇಲ್ಲಿಯೇ 57 ಅಡಿಗಳ ಜಗತ್ಪ್ರಸಿದ್ಧ ಏಕಶಿಲಾ ವಿಗ್ರಹ ಗೊಮಟೇಶ್ವರ ಮೂರ್ತಿ ಇರುವುದು ಅಂತ ನೀವೆಲ್ಲಾ ಕೇಳಿಯೇ ಇದ್ದೀರಿ. 10–11ನೇ ಶತಮಾನದಲ್ಲಿದ್ದ ಗಂಗರ ದೊರೆ ರಾಚಮಲ್ಲನ ಮಂತ್ರಿ ಚಾವುಂಡರಾಯ ಇದನ್ನು ನಿರ್ಮಿಸಿದ. ನಿರ್ಮಿಸಿದ ಅಂದರೆ, ಇಲ್ಲಿಯ ಏಕಶಿಲೆಯ ಬೆಟ್ಟದಲ್ಲಿ ಅತನಿಗೆ ಗೊಮ್ಮಟನ ಬೃಹನ್ಮೂರ್ತಿಯನ್ನು ಕೆತ್ತಿಸಬಹುದೆಂದು ಹೊಳೆಯಿತಲ್ಲ, ನಿಜಕ್ಕೂ ಅದೊಂದು ಮಹಾದರ್ಶನ. ಇನ್ನು ಆತನ ಕಾಣ್ಕೆಗೆ ತೋರಿದ್ದನ್ನು ಕೃತಿಗಿಳಿಸಿದವನು ನಿಜಕ್ಕೂ ಮಹಾಶಿಲ್ಪಿ. ಆತನಿಗೆ ನೆರವಾಗಿ ಅತ್ಯಂತ ಪ್ರಮಾಣಬದ್ಧವಾಗಿ ಇದನ್ನು ಶಿಲೆಯಲ್ಲಿ ಒಡಮೂಡಿಸಿದರಲ್ಲ ಆ ಎಲ್ಲ ಶಿಲ್ಪಿವರೇಣ್ಯರೂ ತಮ್ಮ ಹೆಸರನ್ನು ಬಿಟ್ಟುಹೋಗದೆ ಅಜ್ಞಾತರಾಗಿ ಅದರೆ ಅಮರರಾಗಿ ಹೋಗಿದ್ದಾರೆ. ಸಾವಿರ ವರ್ಷ ಕಳೆದುಹೋದರೂ ಇಂದಿಗೂ ಅಚ್ಚಳಿಯದ ಈ ಮಹಾಮೂರ್ತಿ ಜಗತ್ತಿನ ಅದ್ಭುತಗಳಲ್ಲೊಂದು. ಇದನ್ನೆಲ್ಲ ವ್ಯವಸ್ಥೆಗೊಳಿಸಿದವನು ಚಾವುಂಡರಾಯ. ಇದರಿಂದ ಅವನ ಹೆಸರೂ ಇತಿಹಾಸದಲ್ಲಿ ಶಾಶ್ವತವಾಗಿಯೇ ಹೋಯಿತು. ಹೇಗೂ ನೀವೇ ಕಣ್ಣಾರೆ ಕಾಣಲಿದ್ದೀರಲ್ಲ" ಎಂದ. ಅದಕ್ಕೆ ಮಮತಾ ಮೇಡಮ್ "ನೋಡಿ ಇತಿಹಾಸದ ವ್ಯಂಗ್ಯ ಅಂದರೆ ಇದೇ. ಇದನ್ನು ನಿಜವಾಗಿ ಕೆತ್ತಿದ ಶಿಲ್ಪಿಗಳ ಹೆಸರು ಇತಿಹಾಸದಲ್ಲಿ ಎಲ್ಲೂ ದಾಖಲಾಗೋದೇ ಇಲ್ಲ. ದಾಖಲಾಗೋದು ಅದರ ವ್ಯವಸ್ಥೆಗೆ ಕಾರಣನಾದ ವ್ಯಕ್ತಿಯದು. ಅದೆ ರೀತಿ ಟಾಜ್ ಮಹಲ್ ಕಟ್ಟಿಸಿದವನು ಷಹಜಹಾನ್ ಅಂತ ದಾಖಲಾಗಿದೆಯೇ ಹೊರತು ನಿಜವಾಗಿ ಅದಕ್ಕೆ ತಮ್ಮ ಬೆವರು, ರಕ್ತ ಹರಿಸಿದ ಶ್ರಮಿಕವರ್ಗದವರು ಅಖ್ಯಾತರಾಗಿಯೇ ಉಳಿದುಬಿಡುತ್ತಾರೆ." ಎಂದರು. ಶ್ರೀನಿವಾಸ್– "ಮೇಲೆ ಹೋಗುತ್ತ ಹೋಗುತ್ತ ಬೆಟ್ಟ ತುಂಬ ಕಡಿದಾಗಿದೆ. ಹುಷಾರಾಗಿ ಹತ್ತಿ" ಎಂದು ಹೇಳಿದ. ಎಲ್ಲರೂ ಉತ್ಸಾಹದಿಂದ ಬೆಟ್ಟ ಹತ್ತತೊಡಗಿದರು.

ಎಲ್ಲರೂ ಮಾತಾಡಿಕೊಂಡು ಲಗುಬಗೆಯಿಂದ ಹತ್ತಿ ಮೇಲೆ ಹೋಗಿ ಆ ಮಹಾ ಮೂರ್ತಿಯನ್ನು ಕಂಡು ವಿಸ್ಮಯಭರಿತರಾದರು. ಈ ಮುಂಚೆಯೇ ಕೆಲವರು ನೋಡಿದ್ದರು. ಅದರ ವಿಶೇಷವೆಂದರೆ ಎಷ್ಟು ಸಲ ನೋಡಿದರೂ ಮತ್ತೊಮ್ಮೆ ನೋಡಬೇಕೆಂಬ ಅನಿಸಿಕೆ ಆಗದೆ ಇರುವವರೇ ಇಲ್ಲ. ಹುಟ್ಟುಡುಗೆಯಲ್ಲಿ ಮಂದಹಾಸ ಬೀರುತ್ತ ನಿಂತಿರುವ ಆ ಮಹಾನ್ ವೈರಾಗ್ಯ ಚಕ್ರವರ್ತಿಯನ್ನು ನೋಡುತ್ತಿದ್ದರೆ ಯಾವುದೇ ಅಲ್ಪ ಭಾವನೆ ಒಂದು ಕ್ಷಣವೂ ಸುಳಿಯುವುದಿಲ್ಲ.

ಮಮತಾ ಮೇಡಮ್ ಅವರು– "ಇದನ್ನು ಪ್ರತಿಮಾ ಯೋಗದಲ್ಲಿ ನಿಂತಿರುವ ಮೂರ್ತಿಯೆಂದು ಹೇಳುತ್ತಾರೆ. ಚಾವುಂಡರಾಯನಿಗೆ ಈ ಮೂರ್ತಿಯನ್ನು ಈ

ರೀತಿ ಕೆತ್ತಿಸಲು ಪ್ರೇರಣೆ ಪಂಪ ಕವಿಯ ಆದಿಪುರಾಣ ಮಹಾ ಕಾವ್ಯ. ಅಲ್ಲಿ ಭರತ ಬಾಹುಬಲಿಗೆ ಆದ ದೃಷ್ಟಿಯುದ್ಧ, ಜಲಯುದ್ಧ ಮತ್ತು ಮಲ್ಲಯುದ್ಧ ಎಂಬ ಮೂರು ದ್ವಂದ್ವ ಯುದ್ಧಗಳಲ್ಲಿ ಭರತ ಸೋತು ಕೊನೆಯ ಪ್ರಯತ್ನವಾಗಿ ತನ್ನ ಚಕ್ರರತ್ನವನ್ನು ಬಾಹುಬಲಿಯ ಮೇಲೆ ಎರಿಹೋಗಲು ಆದೇಶಿಸುತ್ತಾನೆ. ಆದರೆ ಅದು ಬಾಹುಬಲಿಗೆ ಮೂರು ಪ್ರದಕ್ಷಿಣೆ ಹಾಕಿ ನಿಂತುಬಿಡುತ್ತದೆ. ಭರತ ನಾಚಿಕೆಯಿಂದ ತಲೆತಗ್ಗಿಸಿ ನಿಲ್ಲುತ್ತಾನೆ. ವಿಜಯದ ಆ ತುತ್ತತುದಿಯಲ್ಲಿ ಬಾಹುಬಲಿಗೆ ವೈರಾಗ್ಯ ಬಂದುಬಿಡುತ್ತದೆ. ರಾಜ್ಯದ ಆಸೆ, ತಮ್ಮ ಎನ್ನುವ ಬಂಧುತ್ವವನ್ನೂ ನೆನೆಯಲು ಅವಕಾಶಕೊಡದೆ ಹೀಗೆ ಭರತ ಚಕ್ರವರ್ತಿಯನ್ನು ಮರುಳುಗೊಳಿಸುತಲ್ಲ ಎಂದು ಎಲ್ಲವನ್ನೂ ತ್ಯಾಗಮಾಡಿ ವೈರಾಗ್ಯಕ್ಕೆ ನಡೆದುಬಿಡುತ್ತಾನೆ. ಹಾಗೆ ಪ್ರತಿಮಾ ಯೋಗದಲ್ಲಿ ತಪಸ್ಸಿಗೆ ನಿಂತ ಬಾಹುಬಲಿಯ ಮೈಮೇಲೆ ಬಳ್ಳಿಗಳು ಹಬ್ಬಿಕೊಳ್ಳುತ್ತವೆ. ಅದನ್ನೇ ಮಹಾಶಿಲ್ಪಿ ಈ ಮೂರ್ತಿಯಲ್ಲಿ ಕಂಡರಿಸಿರುವುದು" ಎಂದು ಆ ಸಂದರ್ಭವನ್ನು ವಿವರವಿವರವಾಗಿ ಮಕ್ಕಳಿಗೆ ತಿಳಿಸಿಕೊಟ್ಟರು.

ಸಮಯದ ಪರಿವೆ ಇಲ್ಲದೆ ಅದಿನ್ನೆಷ್ಟು ಹೊತ್ತು ಎಲ್ಲರೂ ಹಾಗೆಯೇ ಮೈಮರೆತು ನೋಡುತ್ತಾ ನಿಂತಿರುತ್ತಿದ್ದರೋ ಏನೋ ಈ ತಂಡದ ನೇತೃತ್ವ ವಹಿಸಿದ್ದ ಎನ್.ಎಸ್. ಮಾಸ್ಟರ್ – "ನೋಡಿ ತೀರಾ ಸಂಜೆಯಾಗಲಿಕ್ಕೆ ಬಂತು. ಸೂರ್ಯ ಮುಳುಗುವ ಮುಂಚೆ ನಾವೆಲ್ಲ ಕೆಳಕ್ಕಿಳಿದಿರಬೇಕು" ಎಂದು ಹೇಳಿ ಎಲ್ಲರನ್ನೂ ಹೊರಡಿಸಿದರು. "ಇಳಿಯುವಾಗ ಹುಶಾರ್. ಜಾರುವ ಸಾಧ್ಯತೆ ಇರುತ್ತೆ" ಎಂದು ಎಚ್ಚರ ಹೇಳಿದರು.

ಹೆಚ್ಚು ಕಡಿಮೆ ಒಬ್ಬರ ಹಿಂದೊಬ್ಬರು ತೀರಾ ಸಮಿಪವಾಗಿಯೇ ಇಳಿಯತೊಡಗಿದರು. ಹಾಗೆ ಇಳಿಯುತ್ತಿರುವಾಗ ವಸುಂಧರಾ ಒಂದು ಕಡೆ ಅಯ ತಪ್ಪಿ ಇನ್ನೇನು ಜಾರುವುದರಲ್ಲಿದ್ದಳು. ಅವಳ ಹಿಂದುಗಡೆಯೇ ಸ್ವಲ್ಪ ದೂರದಲ್ಲಿದ್ದ ಶ್ರೀನಿವಾಸ್ ಕೂಡಲೇ ಮುನ್ನುಗ್ಗಿ ಅವಳನ್ನು ತಬ್ಬಿಹಿಡಿದ. ಆದರೆ ಆ ಪ್ರಯತ್ನದಲ್ಲಿ ಅವನೇ ಜಾರ ಹತ್ತಿದ. ಆಗ ಇವರ ಹಾಗೆಯೇ ಬೆಟ್ಟ ಇಳಿಯುತ್ತಿದ್ದ ಒಳ್ಳೆ ಕಟ್ಟುಮಸ್ತಾದ ವ್ಯಕ್ತಿಯೊಬ್ಬರು ಇಬ್ಬರಿಗೂ ಆಧಾರವಾಗಿ ಹಿಡಿದುಕೊಂಡರು. "ನೋಡಿ ಅವರು ಜಾರಿದರು ಅಂತ ಹೇಳಿ ನೀವು ಅವರನ್ನು ಹಿಡಿಯಲು ಹೋಗಿ ಅವರ ಸಮೇತ ನೀವೂ ಜಾರಿಬಿಡುತ್ತಿದ್ದಿರಿ. ಜೋಪಾನವಾಗಿ ಇಳಿಯಿರಿ. ಏರುವುದು ಕಷ್ಟ. ಆದರೆ ಜಾರುವುದು ಬಲು ಸುಲಭ" ಎಂದು ಹೇಳಿ ತಮ್ಮ ಪಾಡಿಗೆ ತಾವು ಮುನ್ನಡೆದರು.

ಎಲ್ಲರಿಗೂ ಕೆಳಕ್ಕಿಳಿಯುತ್ತಿದ್ದಂತೆ ಕಾಲು ನೋಯಲಾರಂಬಿಸಿತು. ಅದರಲ್ಲೂ ಅಭ್ಯಾಸವಿಲ್ಲದ ವಿದ್ಯಾರ್ಥಿನಿಯರಿಗೆ ಮತ್ತು ಕೆಲವು ವಿದ್ಯಾರ್ಥಿಗಳಿಗೆ ಹೆಜ್ಜೆ ಮುಂದಿಡುವುದೇ ಕಷ್ಟವೆನಿಸಿತು. ರಾತ್ರಿಗೆ ಏನಾದರೂ ನೋವು ನಿವಾರಕ ಮುಲಾಮೋ ಮತ್ತೊಂದೂ ಹಚ್ಚಿಕೊಳ್ಳುವಿರಂತೆ ಎಂದು ಶ್ರೀನಿವಾಸ್ ಹೇಳಿದ. ಮಮತಾ ಮೇಡಮ್ ಕೂಡ ನೋವು ಎನ್ನುತ್ತಿದ್ದರು. ಅಲ್ಲಿಯೇ ಹತ್ತಿರದ ಅಂಗಡಿಯಲ್ಲಿ ಅಯೋಡೆಕ್ಸ್. ಒಂದೆರಡು ಬಗೆಯ ಜೆಲ್‌ಗಳನ್ನು ಎಲ್ಲರಿಗೂ ಇರಲಿ ಎಂದು ಸ್ವಲ್ಪ ಹೆಚ್ಚಾಗಿಯೇ ಕೊಂಡುಕೊಂಡರು.

ಅಂದು ಅಲ್ಲಿಯ ಜೈನ ಮಠದಲ್ಲಿ ತಂಗಿದ್ದರು. ಊಟವೂ ಮಠದಿಂದಲೇ ಏರ್ಪಾಟಾಗಿತ್ತು. ಊಟದ ನಂತರ ಮಮತಾ ಮತ್ತು ಶ್ರೀನಿವಾಸ್ ಅವರು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಒಂದೆಡೆ ಸೇರಿಸಿ ಸಿನಿಮಾ ಹಾಡು, ಭಾವಗೀತೆಗಳನ್ನು ಹೇಳಿಸಿದರು. ವಸುಂಧರಾ ಬೇಂದ್ರೆ, ಕೆ.ಎಸ್.ನ. ಮತ್ತು ಕುವೆಂಪು ಕವನಗಳನ್ನು ಹಾಗೂ ಹೇಮಾ ಹಿಂದೂಸ್ತಾನಿ ಧಾಟಿಯಲ್ಲಿ ಅಕ್ಕಮಹಾದೇವಿ ಮತ್ತು ಬಸವಣ್ಣನವರ ಒಂದೆರಡು ವಚನಗಳನ್ನು ಸುಶ್ರಾವ್ಯವಾಗಿ ಹಾಡಿದರು. ಬೆಳಿಗ್ಗೆ ಬೇಗನೇ ಎದ್ದು ಜೈನ ಮಠದ ಸ್ವಾಮಿಗಳನ್ನು ಭೇಟಿಯಾಗಿ ನಮಸ್ಕಾರ ಮಾಡಿ ಅವರ ಆಶೀರ್ವಾದ ಪಡೆದರು. ಅನಂತರ ಚಂದ್ರಗಿರಿ ಬೆಟ್ಟವನ್ನು ಹತ್ತಿ ಅಲ್ಲಿರುವ ಕೆಲವು ಪ್ರಮುಖ ಶಾಸನಗಳನ್ನು ಶ್ರೀನಿವಾಸ್ ಮತ್ತು ಮಮತಾ ಮೇಡಮ್ ನೆರವಿನಿಂದ ಪರಿಚಯ ಮಾಡಿಕೊಂಡರು. ಶ್ರೀನಿವಾಸನು ಅಲ್ಲಯೇ ಇದ್ದ ಚಂದ್ರಗುಪ್ತ ಬಸದಿ, ಮತ್ತಿನ್ನಿತರ ಬಸದಿಗಳಿಗೆ ಕರೆದುಕೊಂಡುಹೋದ. ಉತ್ತರ ಹಿಂದೂ ಸ್ಥಾನದಲ್ಲಿ ಭೀಕರ ಕ್ಷಾಮ ಬಂದಾಗ ಭದ್ರಬಾಹು ಭಟಾರರ ಜೊತೆ ಅನೇಕ ಶ್ರಮಣರು ಮತ್ತು ಚಂದ್ರಗುಪ್ತ ಇಲ್ಲಿಗೆ ಪಯಣಿಸಿ ಇಲ್ಲಿಯೇ ತಪವಿದ್ದು ನಿಸಿದಿಗೆ ಸಂದದ್ದನ್ನು ಹೇಳಿದ. ಅಲ್ಲಿಯ ಕೆಲವು ಪ್ರಮುಖ ಶಾಸನಗಳನ್ನು ನಿಸಿದಿ ಶಾಸನಗಳನ್ನೂ ತೋರಿಸಿದ. ಇದಕ್ಕೆ ಚಿಕ್ಕ ಬೆಟ್ಟ ಎಂದೂ ಕರೆಯುತ್ತಾರೆ. ಇಂದ್ರಗಿರಿ ಅಥವಾ ದೊಡ್ಡ ಬೆಟ್ಟಕ್ಕಿಂತ ಬೇರೆಯಾದ್ದು ಎಂಬ ಅರ್ಥದಲ್ಲಷ್ಟೇ ಇದು ಚಿಕ್ಕಬೆಟ್ಟ. ಆದರೆ ಇಡೀ ಬೆಟ್ಟ ಶಾಸನಗಳಿಂದ ತುಂಬಿಹೋಗಿದೆ. ಮತ್ತು ಅವೆಲ್ಲ ಭಾಷೆ ಮತ್ತು ಇತಿಹಾಸದ ದೃಷ್ಟಿಯಿಂದ ಅತ್ಯಂತ ಪ್ರಮುಖ ಶಾಸನಗಳು. ಆ ಅರ್ಥದಲ್ಲಿ ಇದು ನಿಜಕ್ಕೂ ಹಿರಿಯ ಬೆಟ್ಟ ಎಂದ. ಜೈನರು ಸಲ್ಲೇಖನ ವಿಧಿಯಿಂದ ಮರಣವನ್ನು ಆಹ್ವಾಸಿಕೊಳ್ಳುವ ಬಗ್ಗೆಯೂ ತಿಳಿಸಿದ. ರನ್ನ ಕವಿಯ ಹಸ್ತಾಕ್ಷರ ಎಂದು ಹೇಳಲಾದ 'ಶ್ರೀಕವಿರತ್ನ' ಎಂಬ ಕೆತ್ತನೆ ಇದ್ದ ಕಡೆ ಕರೆದೊಯ್ದು ಇದು ಕವಿ ರನ್ನನೇ ಕೈಯಾರೆ ಕೆತ್ತಿದ ತನ್ನ ಹಸ್ತಾಕ್ಷರ ಎಂದು ಹೇಳಿದ. ವಿದ್ಯಾರ್ಥಿಗಳು ಅವನ್ನೆಲ್ಲ ನೋಡಿ ಪುಲಕಗೊಂಡರು. ಮಮತಾ ಮೇಡಮ್ ಅವರು ರನ್ನನು ಚಾವುಂಡರಾಯನ ಆಶ್ರಯದಲ್ಲಿದ್ದ ಸಂಗತಿ ದಾನಚಿಂತಾಮಣಿ ಅತ್ತಿಮಬ್ಬೆಯ ಬಗ್ಗೆ ಅವನಿಗಿದ್ದ ಭಕ್ತಿ ಗೌರವ, ಅವರಿಬ್ಬರ ಮೇಲಿನ ಗೌರವ ಮತ್ತು ನೆನಪಿಗಾಗಿ ತನ್ನ ಮಕ್ಕಳಿಗೆ ರಾಯ ಮತ್ತು ಅತ್ತಿಮಬ್ಬೆ ಎಂದು ಹೆಸರಿಟ್ಟ ಬಗ್ಗೆ ತನ್ನ ಅಜಿತನಾಥ ಪುರಾಣದಲ್ಲಿ ಹೇಳಿಕೊಂಡಿರುವ ಬಗ್ಗೆ ಮತ್ತು ಚಾವುಂಡರಾಯ ಸ್ವತಃ ಪ್ರಾಕೃತ, ಕನ್ನಡ, ಸಂಸ್ಕೃತಗಳಲ್ಲಿ ಪಂಡಿತನಾಗಿದ್ದು ಚಾವುಂಡರಾಯ ಪುರಾಣ ಅಥವಾ ತ್ರಿಷಷ್ಟಿ ಲಕ್ಷಣ ಮಹಾಪುರಾಣ ಎಂಬ ಗದ್ಯ ಗ್ರಂಥ ರಚಿಸಿರುವ ಬಗ್ಗೆ ತಿಳಿಸಿದರು,

ಕೆಳಕ್ಕಿಳಿದು ಬಂದು ಜೈನ ಮಠದ ಹಸ್ತಪ್ರತಿಗಳ ಭಂಡಾರವನ್ನು ವೀಕ್ಷಿಸಿದರು. ಶ್ರೀನಿವಾಸ್ ಶ್ರವಣ ಬೆಳುಗೊಳದ ಬಗ್ಗೆ ಹೇಳುತ್ತ "ಶತಶತಮಾನಗಳಿಂದಲೂ ಶ್ರವಣ ಬೆಳುಗೊಳ ಅತ್ಯಂತ ಐತಿಹಾಸಿಕ ಮಹತ್ವದ ಕ್ಷೇತ್ರ. ಮೊದಲಿಗೆ ಇದಕ್ಕೆ 'ಕಳ್ವಪ್ಪು' ಎಂಬ ಹೆಸರಿತ್ತು. ಭಾರತದ ಅತ್ಯಂತ ಪ್ರಸಿದ್ಧವಾದ ಜೈನ ಕ್ಷೇತ್ರ. ಬಹುಶಃ ಆದಿಕವಿ ಪಂಪನ ವಿದ್ಯಾಭ್ಯಾಸ ಕೂಡ ಇಲ್ಲಿಯೇ ಆಗಿತ್ತು" ಎಂದನು. ಮಧ್ಯಾಹ್ನ ಮಠದ ವತಿಯಿಂದ

ಸೊಗಸಾದ ಭೋಜನದ ಏರ್ಪಾಟಾಗಿತ್ತು. ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಂಡು ಊರಿನತ್ತ ಪಯಯಣ ಬೆಳೆಸಿದರು.

* * *

ಊರಿಗೆ ಬಂದ ನಂತರದಲ್ಲೂ ಕೆಲವು ದಿನಗಳ ಕಾಲ ವಿದ್ಯಾರ್ಥಿಗಳಲ್ಲಿ ತಾವು ಹೋಗಿಬಂದ ಪ್ರವಾಸದ ಕುರಿತಾದ ಮಾತೇ ನಡೆದಿತ್ತು. ಆನಂತರದಲ್ಲಿ ಕಾಲೇಜಿನ ದಿನನಿತ್ಯದ ಚಟುವಟಿಕೆಗಳಲ್ಲಿ ಆ ಕುರಿತಾದ ಮಾತು ಬೇರೆಯವರಲ್ಲೇನೋ ಕಡಮೆಯಾಯಿತು. ಆದರೆ ವಸುಂಧರಾಗೆ ಮಾತ್ರ ಶ್ರವಣ ಬೆಳುಗೊಳದ ನೆನಪು ಬಂದಿತೆಂದರೆ ಈಗಲೂ ಮೈಮೇಲೆ ಹಿಗ್ಗಿನ ಮುಳ್ಳೇಳುತ್ತಿತ್ತು. ಅಂದು ಶ್ರೀನಿವಾಸ್ ತನ್ನನ್ನು ತಬ್ಬಿಕೊಂಡದ್ದು ತೀರಾ ಅನಿರೀಕ್ಷಿತವಾಗಿ. ಕಣ್ಣುಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿ ಆ ಘಟನೆ ನಡೆದು ಹೋಗಿತ್ತು. ಉಳಿದವರು ಅದೊಂದು ಅತಿ ಅನಿವಾರ್ಯವಾದ ಆಕಸ್ಮಿಕ ಎಂದು ಅದಕ್ಕೆ ಅಷ್ಟೇನೂ ಮಹತ್ವ ನೀಡಿದಂತೆ ಕಾಣಲಿಲ್ಲ. ಆದರೆ ವಸುಂಧರಾ ಮಾತ್ರ ಅದನ್ನು ಒಂದು ಕ್ಷಣವೂ ಮರೆಯದಾದಳು. ಆ ಕ್ಷಣ, ಅತ್ಯಲ್ಪ ಕಾಲದ್ದು ಮಾತ್ರವೇ ಆದರೂ ಅತ್ಯಂತ ಜತನದಿಂದ ಅದನ್ನು ತನ್ನ ಹೃದಯದಲ್ಲಿ ಕಾಪಿಟ್ಟುಕೊಂಡಳು. ಮತ್ತೆ ಮತ್ತೆ ನೆನೆದು ಹೊಂಪುಳಿಹೋಗುತ್ತಿದ್ದಳು. ಹರೆಯದ ಹೆಣ್ಣೊಬ್ಬಳಿಗೆ ಆದ ಮೊದಲ ಪುರುಷ ಸ್ಪರ್ಶ. ಆ ತೆಕ್ಕೆ ತಂದ ಮುದ ಅವಳ ಪಾಲಿಗೆ ಯಾರಲ್ಲೂ ಹೇಳಿಕೊಳ್ಳಲಾಗದಂಥ, ಹೇಳಿಕೊಳ್ಳಲಿಷ್ಟಪಡದ, ಜಿಪುಣೆಯಂತೆ ತಾನೊಬ್ಬಳೇ ಇಟ್ಟುಕೊಂಡು ಸವಿಯ ಬಯಸಿದ ಜೇನಾಗಿತ್ತು. ಹೇಮಾ ಅದನ್ನು ಕಣ್ಣಾರೆ ನೋಡಿರಲಿಲ್ಲ. ಜಾರಿ ಹೋಗುತ್ತಿದ್ದ ವಸುಂಧರಾ, ಜಾರದಂತೆ ಧಾವಿಸಿ ಅವಳನ್ನು ತಬ್ಬಿ ಹಿಡಿದ ಎನ್.ಎಸ್. ಮೇಷ್ಟ್ರು, ಇಬ್ಬರೂ ಆ ಕ್ಷಣದಲ್ಲೇ ಧಾವಿಸಿ ಬಂದ ಅಪರಿಚಿತ ವ್ಯಕ್ತಿಯೊಬ್ಬನ ನೆರವಿಲ್ಲದೆ ಹೋಗಿದ್ದರೆ ತಳ ಸೇರಿಬಿಡುತ್ತಿದ್ದರು ಎಂಬುದು ಆ ಮೇಲೆ ಸಂಗಡಿಗರ ಮಾತಿನಿಂದ ತಿಳಿದುಬಂತು. ಎಲ್ಲರೂ ಬೆಟ್ಟದಿಂದ ಕೆಳಗಿಳಿದ ನಂತರದಲ್ಲಿ ಊಟಕ್ಕೆ ಹೋಗುವಾಗ ಏನಾಯಿತು, ಏನಾದರೂ ಏಟುಗೀಟು ಅಯಿತಾ ಎಂದು ವಸುಂಧರಾಳನ್ನು ವಿಚಾರಿಸಿಕೊಂಡಳು. "ಏಟೇನೂ ಅಗದೆ ಇದ್ದರೂ ಕಾಲು ಸ್ವಲ್ಪ ಹೊರಳಿದಂತಾಗಿ ಮಾಮೂಲಾಗಿ ಹೆಜ್ಜೆ ಹಾಕಲು ಕಷ್ಟವಾಗುತ್ತಿದೆ" ಅಂದಳು. ಹಾಗೆ ವಿಚಾರಿಸಿಕೊಳ್ಳುವಾಗಲೂ ಅವಳ ಮುಖದ ಮೇಲೊಂದು ತುಂಟ ನಗೆ ಸುಳಿದಾಡುತ್ತಿದ್ದುದು ವಸುಂಧರಾಳ ಗಮನಕ್ಕೆ ಬಂತು. "ಹೋಗಲಿಬಿಡು ಏನೂ ಅನಾಹುತ ಮಾಡದ ಅದು ಒಂದು ಥರದಲ್ಲಿ ನಿನ್ನ ಪಾಲಿಗೆ ಲಕೀ ಸ್ಲಿಪ್ಪೇ ಬಿಡು" ಅಂತ ಛೇಡಿಸಲು ಮರೆಯಲಿಲ್ಲ. ವಸುಂಧರಾ ಅವಳ ಬೆನ್ನಿಗೊಂದು ಗುದ್ದುಕೊಟ್ಟು "ನನ್ನ ಕಷ್ಟ ನನಗೆ. ಇಂಥದರಲ್ಲೂ ನಿನಗೆ ಮಾತ್ರ ತಮಾಶೆ" ಎಂದು ಹುಸಿ ಮುನಿಸು ತೋರಿದಳು. "ಅದು ಯಾವ ಥರದ ಕಷ್ಟ ಅಂತ ಯೋಚನೆ ಮಾಡಿ ನೋಡ್ತೀನಿ ತಾಳು" ಎಂದು ತನ್ನ ತುಂಟತನ ಬಿಟ್ಟುಕೊಡದೆ ಹೇಳಿದಳು. ಹೇಮಾಳ ಹತ್ತಿರ ಹೇಳಿದ 'ಕಷ್ಟ' ಎಂಬುದರ ಅರ್ಥ ಅವಳಿಗೆ ಅಗಹತ್ತಿತು.

ಇತ್ತ ಶ್ರೀನಿವಾಸನಿಗಾದರೂ ಅದನ್ನು ಮರೆಯಲು ಎಲ್ಲಿ ಸಾಧ್ಯವಾಗಿತ್ತು. ಸುಂದರವಾದೊಂದು ಹರೆಯದ ಹುಡುಗಿಯ ಅಷ್ಟೊಂದು ಸನಿಹ ಅವನಿಗೆಂದೂ ಅನುಭವಕ್ಕೆ ಬಂದಿರಲಿಲ್ಲ. ಊರಿಗೆ ಬಂದು ಮಾಮೂಲಿಯಂತೆ ಪಾಠ ಪ್ರವಚನಗಳಲ್ಲಿ ತೊಡಗಿಸಿಕೊಂಡರೂ ಮನಸ್ಸಿನ ಮೂಲೆಯಲ್ಲಿ ಆ ಕ್ಷಣದಲ್ಲಾದ ವಿದ್ಯುತ್ ಸಂಚಾರದಂಥ ಅನುಭವವನ್ನು ಮತ್ತೆ ಮತ್ತೆ ಮೆಲುಕು ಹಾಕತೊಡಗುತ್ತಿತ್ತು ಅವನ ತರುಣ ಮನಸ್ಸು. ಹಾಗಾದರೆ ಅವಳಲ್ಲಿ ತನಗೆ ಪ್ರೇಮವುಂಟಾಗಿದೆಯೆ? ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಿದ್ದ. ಮರು ಕ್ಷಣದಲ್ಲೇ ಇದರ ಪರ್ಯವಸಾನ ಹೇಗೆಂಬ ಬೃಹದಾಕಾರದ ಪ್ರಶ್ನೆ ಸುಳಿದು ಅವನ ಯೋಚನೆಗೆ ತಡೆ ಒಡ್ಡುತ್ತಿತ್ತು.

* * *

ಸಮಾಜ ಶಾಸ್ತ್ರದ ಅಧ್ಯಾಪಕರಾಗಿದ್ದ ಎಸ್.ಆರ್. ಮಾಸ್ಟರ್ ಅರ್ಥಾತ್ ಎಸ್. ರಾಮಸ್ವಾಮಿ ಮತ್ತು ಶ್ರೀನಿವಾಸ್ ಇಬ್ಬರೂ ಕಾಲೇಜಿಗೆ ಹತ್ತಿರದ ವಿದ್ಯಾನಗರದಲ್ಲಿ ಸಣ್ಣ ಮನೆಯೊಂದರಲ್ಲಿ ಒಟ್ಟಿಗೆ ವಾಸಿಸುತ್ತಿದ್ದರು. ಎಸ್.ಆರ್. ಮಾಸ್ಟರ್ ಅವರ ಹೆಂಡತಿ ಹಾಸನದಲ್ಲಿ ಒಂದು ಖಾಸಗಿ ಶಾಲೆಯಲ್ಲಿ ಮೇಡಮ್ ಆಗಿದ್ದರು. ಅವರಿಗೆ ನಾಲ್ಕು ವರ್ಷದ ಒಬ್ಬ ಮಗಳೂ ಇದ್ದಳು. ಜೊತೆಗೆ ಅವರ ತಂದೆ ತಾಯಿ. ಎಲ್ಲ ಜೊತೆಯಲ್ಲೇ ಇದ್ದುದರಿಂದ ಅವರು ತಮ್ಮ ಸಂಸಾರವನ್ನು ತುಮಕೂರಿಗೆ ಶಿಫ್ಟ್ ಮಾಡಲು ಸಾಧ್ಯವಾಗಿರಲಿಲ್ಲ. ಶ್ರೀನಿವಾಸ್ ಬರುವುದಕ್ಕೆ ಒಂದೆರಡು ತಿಂಗಳು ಮುಂಚೆಯೇ ವರ್ಗವಾಗಿ ಬಂದಿದ್ದು ಸಣ್ಣ ಮನೆ ಹಿಡಿದಿದ್ದರು. ಅಡಿಗೆಯನ್ನು ತಾವೇ ಮಾಡಿಕೊಂಡು, ಅದು ಬೇಜಾರಾದರೆ ಎಲ್ಲಾದರೂ ಹೋಟೆಲ್‌ನಲ್ಲಿ ಊಟ ಮಾಡುತ್ತಿದ್ದರು. ತೀರಾ ಅಗತ್ಯವಾದಷ್ಟು ಸಾಮಾನುಗಳನ್ನು ಮಾತ್ರ ಇಟ್ಟುಕೊಂಡಿದ್ದರು. ಒಂದೆರಡು ವರ್ಷ ಇಲ್ಲಿದ್ದು ಮತ್ತೆ ತಮ್ಮ ಊರಿಗೆ ವರ್ಗ ಮಾಡಿಸಿಕೊಂಡು ಹೋಗುವ ಇರಾದೆ ಅವರದ್ದು. ಶ್ರೀನಿವಾಸ್ ಈ ಕಾಲೇಜಿಗೆ ನೇಮಕವಾಗಿ ಬಂದಾಗ ಒಂದೆರಡು ತಿಂಗಳ ಮಟ್ಟಿಗೆ ಕಾಲೇಜಿಗೆ ಹತ್ತಿರವಿದ್ದ ಅಟ್ಯಾಚ್ಡ್ ಬಾತ್ ರೂಮ್ ಅನುಕೂಲವುಳ್ಳ ಒಂದು ಸಣ್ಣ ರೂಮ್‌ನಲ್ಲಿದ್ದ.

ಅವನ ಪರಿಚಯವಾದ ಮೇಲೆ ತಮಗಿಂತ ನಾಲ್ಕೈದು ವರ್ಷ ಚಿಕ್ಕವನಾದರೂ ಅವನ ಸ್ವಭಾವ ಹಿಡಿಸಿದ್ದರಿಂದ ತಾನು ಒಬ್ಬನೇ ಇರುವುದಾಗಿಯೂ ಬೇಕಾದರೆ ತನ್ನ ಜೊತೆ ಇರಲು ಅಭ್ಯಂತರವಿಲ್ಲವೆಂದು ಹೇಳಿ ಎಸ್.ಆರ್. ಮಾಸ್ಟರ್ ಅವರೇ ತಮ್ಮ ಮನೆಯಲ್ಲೇ ಬಂದು ಇರಲು ಅವನನ್ನು ಆಹ್ವಾನಿಸಿದರು. ಇಬ್ಬರೂ ಷೇರ್ ಮಾಡಿಕೊಳ್ಳೋಣ ಎಂದು ಅವರೇ ಹೇಳಿದ್ದರು. ಇದರಿಂದ ಶ್ರೀನಿವಾಸ್‌ಗೆ ಒಂದು ದೊಡ್ಡ ಸಮಸ್ಯೆ ಬಗೆಹರಿದಂತಾಯಿತು. ಶ್ರೀನಿವಾಸ್‌ಗೆ ಅಡಿಗೆ ಮಾಡಿಕೊಳ್ಳುವ ಅಭ್ಯಾಸವಿಲ್ಲದಿದ್ದರೂ ಎಸ್.ಆರ್ ಮಾಸ್ಟರ್ ಅವರ ಜೊತೆ ಸೇರಿದ ಮೇಲೆ ಅವರು ಮಾಡುತ್ತಾ ಇದ್ದದ್ದು ನೋಡಿ ಕಲಿತುಕೊಂಡ. ಎಸ್.ಆರ್. ಮಾಸ್ಟರ್ ಶನಿ ಭಾನುವಾರಗಳ ಜೊತೆ ಒಂದೆರಡು ದಿನ ಸಿ.ಎಲ್. ಹಾಕಿ ಬರದೆ ಇದ್ದಾಗ ತನ್ನ ಪಾಕ

ಪ್ರಯೋಗಕ್ಕೆ ಮುಂದಾಗುತ್ತಿದ್ದ. ಸಂದರ್ಭ ಬಂದರೆ ಅಡಿಗೆ ಮಾಡಿಕೊಳ್ಳಬಲ್ಲೆನೆಂಬ ವಿಶ್ವಾಸ ಹುಟ್ಟಿತು. ಅವರ ಮನೆಯ ಓನರ್ ಅದೇ ಊರಿನಲ್ಲೇ ಬೇರೆ ಕಡೆ ಇದ್ದು ಇದನ್ನು ಬಾಡಿಗೆ ಕೊಡುವುದಕ್ಕೋಸ್ಕರವೇ ಕಟ್ಟಿಸಿದ್ದರು. ಎಸ್. ಆರ್. ಮಾಸ್ಟರ್ ಒಬ್ಬ ಜಾಲಿಯಾದ ಉದಾರ ವ್ಯಕ್ತಿ. ಜಾತಿಯಿಂದ ಬ್ರಾಹ್ಮಣರಾದರೂ ಮಡಿವಂತರಲ್ಲವೇ ಅಲ್ಲ. ನಾನು ತಿನ್ನೋದು ಸಸ್ಯಾಹಾರ. ಅದನ್ನು ಯಾರ ಮನೆಯಲ್ಲಿ ಬೇಕಾದರೂ ಹೋಗಿ ತಿನ್ನೋದಕ್ಕೆ ತನ್ನದು ಯಾವ ಅಭ್ಯಂತರವೂ ಇಲ್ಲ ಎಂದೇ ಹೇಳುತ್ತಿದ್ದರು. ಅಷ್ಟೇ ಅಲ್ಲ; ಯಾವುದೋ ಒಂದೆರಡು ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಅಂತರ್ಜಾತೀಯ ವಿವಾಹಗಳು ಹೆಚ್ಚು ಹೆಚ್ಚು ಆದರೆ ಮಾತ್ರ ಈ ಜಾತೀಯ ಮೇಲು ಕೀಳು ಹೋಗಬಹುದೇನೋ ಎನ್ನುತ್ತಿದ್ದರು. ಒಂದು ವೇಳೆ ಜಾತಿ ಇಟ್ಟುಕೊಂಡರೂ ಅದನ್ನು ತಮ್ಮ ಅಡುಗೆ ಮನೆಗಳಿಗೆ ಸೀಮಿತಗೊಳಿಸಿ ಎಲ್ಲರೊಂದಿಗೆ ಸೌಹಾರ್ದದಿಂದ ಇದ್ದರೆ ಮಾತ್ರ ಮನುಷ್ಯತ್ವಕ್ಕೇನಾದರೂ ಅರ್ಥವಿರುತ್ತೆ ಎಂಬ ಧೋರಣೆಯವರು. ಶ್ರೀನಿವಾಸ್‌ಗೆ ಅವರ ಈ ಸ್ವಭಾವ, ಧೋರಣೆ ತುಂಬ ಇಷ್ಟವಾಗಿತ್ತು. ಒಂದೆರಡು ಸಲ ಏನೋ ಮಾತಿಗೆ ಬಂದಾಗ – "ಹೌದು, ನೀವು ಈಗ ಕೆಲಸದಲ್ಲಿ ಸೆಟ್ಲ್ ಆಗಿದ್ದೀರಿ. ನಿಮ್ಮ ವಯಸ್ಸೂ ಈಗ 26–27 ರ ಸನಿಹದಲ್ಲಿರಬೇಕು. ನೀವು ಯಾಕೆ ಬೇಗನೆ ಒಳ್ಳೆ ಹೆಣ್ಣು ನೋಡಿ ಚತುರ್ಭುಜರಾಗಿ ನಮಗೆಲ್ಲಾ ಊಟ ಹಾಕಿಸಬಾರದು" ಎನ್ನುತ್ತಿದ್ದರು. ಅದಕ್ಕೆ ಶ್ರೀನಿವಾಸ್– "ಒಳ್ಳೇ ಹೆಣ್ಣು ಅಂತ ನೀವು ಹೇಳಿದಿರಲ್ಲಾ ಸರ್. ಅದೇ ಪ್ರಾಬ್ಲಮ್ ಆಗಿರೋದು ಅಂದಿದ್ದ". "ಏನು ನಿಮ್ಮ ಊರು ಕಡೆಯ ನಿಮ್ಮ ಸಂಬಂಧದಲ್ಲಿ ನೋಡಬೇಕು ಅಂತ ಇದ್ದೀರಾ? ಹೇಗೆ" ಅಂತ ಕೇಳಿದ್ದರು. "ಹಾಗೇನಿಲ್ಲಾ ಸರ್". ಎಂದೇನೋ ಹಾರಿಕೆಯ ಉತ್ತರ ಕೊಟ್ಟಿದ್ದ. "ನಿವು ಹೂಂ ಅನ್ನಿ. ನಮ್ಮ ಹಾಸನದ ಕಡೆ ನಿಮ್ಮ ಜಾತಿ ಪೈಕಿಯ ಒಳ್ಳೊಳ್ಳೆ ಹುಡುಗೀರಿದ್ದಾರೆ. ವಾಲಗ ಊದಿಸಿಬಿಡೋಣ" ಎಂದಿದ್ದರು. ಕಾಲೇಜಿನಲ್ಲಿ ಒಂದೆರಡು ಸಲ ಶ್ರೀನಿವಾಸ್ ವಸುಂಧರಾಳ ಕಡೆ ನೋಟ ಹರಿಸುವ ಸಂದರ್ಭ ಗಮನಿಸಿದ್ದರು. ಆದರೆ ಕೇಳಲು ಹೋಗಿರಲಿಲ್ಲ. ಏನೋ ಯಾರಿಗೆ ಗೊತ್ತು ಲವ್ ಗಿವ್ ಏನಾದರೂ ಇದೆಯೋ ಏನೋ ಅವನ ಕಡೆಯಿಂದಲೇ ಬರ್ಲಿ ಅಂತ ಆ ವಿಷಯದಲ್ಲಿ ತಟಸ್ಥರಾಗಿದ್ದರು.

ತಮ್ಮ ಕಾಲೇಜಿನಲ್ಲೇ ಕೆಲವರು ಸಹೋದ್ಯೋಗಿಗಳು ಹಾಗೆ ಬಹಳ ಕ್ಲೋಸ್ ಆಗಿ ಓಡಾಡುವುದನ್ನು ನೋಡಿದ್ದರು. ಅದರಲ್ಲೂ ಅದೇ ಕಟ್ಟಡದಲ್ಲಿದ್ದ ವಿಜ್ಞಾನ ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗದ ಇಬ್ಬರು ಸಹೋದ್ಯೋಗಿಗಳ ಲವ್‌ಅಫೇರ್ ಬಗ್ಗೆ ಮೇಷ್ಟರುಗಳು ಆಗಾಗ್ಗೆ ಮೆಲುದನಿಯಲ್ಲಿ ಮತಾಡಿಕೊಳ್ಳುವುದು ನಡೆದಿತ್ತು. ಅದರಲ್ಲಿ ಆತ ಅಲ್ಪ ಸಂಖ್ಯಾತ ಕೋಮಿಗೆ ಸೇರಿದವನಾಗಿದ್ದರೆ ಆಕೆ ಮೈಸೂರು ಕಡೆಯ ಮೇಲ್ವರ್ಗಕ್ಕೆ ಸೇರಿದವಳಾಗಿದ್ದಳು. ಬೇರೆಯವರು ತಮ್ಮ ಬಗ್ಗೆ ಏನೆಂದುಕೊಳ್ಳುತ್ತಾರೆ ಎನ್ನುವ ಬಗ್ಗೆ ಕಿಂಚಿತ್ತೂ ಲಕ್ಷ್ಯ ಕೊಡದೆ ತುಂಬಾ ನಿಸ್ಸಂಕೋಚವಾಗಿ ನಡೆದುಕೊಳ್ಳುತ್ತಿದ್ದರು. ಇಬ್ಬರೂ ಒಟ್ಟಿಗೇ ಪ್ರಾಯೋಗಿಕ ತರಗತಿ ನಡೆಸುವ ಸಂದರ್ಭವಿದ್ದರಂತೂ ಅವರ ಸಲಿಗೆಯ ನಡೆವಳಿಕೆಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಗುಲ್ಲೆದ್ದಿತ್ತು. ಪ್ರಿನ್ಸಿಪಾಲರು ಸ್ಟಾಫ್ ಮೀಟಿಂಗ್

ಕರೆದಿದ್ದಾಗ ಮಧ್ಯದಲ್ಲಿ ಇವರಿಬ್ಬರೇ ಬಾತ್ ರೂಮ್‌ಗೆ ಹೋಗುವ ನೆವದಲ್ಲಿ ಒಟ್ಟಿಗೇ ತಮ್ಮ ವಿಭಾಗದ ರೂಮಿಗೆ ಹೋಗಿ ಬಾಗಿಲು ಹಾಕಿಕೊಳ್ಳುತ್ತಿದ್ದುದನ್ನು ಅನೇಕರು ಗಮನಿಸಿದ್ದರು. ತಿಂಗಳೆರಡು ತಿಂಗಳಿಗೊಮ್ಮೆ ಏನಾದರೂ ನೆವದಿಂದ ಇಬ್ಬರೂ ಒಟ್ಟೊಟ್ಟಿಗೇ ಬೇರೆ ಊರಿಗೆ ಹೋಗಿ ಹೋಟೆಲ್‌ನಲ್ಲಿ ತಂಗುವ ಮಟ್ಟಕ್ಕೂ ಅದು ಬಂದಿತ್ತು ಎಂದು ಅವರ ಡಿಪಾರ್ಟ್‌ಮೆಂಟಿನವರು ಪಿಸುಗುಟ್ಟಿಕೊಳ್ಳುತ್ತಿದ್ದರು.

ಈ ಮಧ್ಯೆ ಇತಿಹಾಸ, ಸಮಾಜ ಶಾಸ್ತ್ರದ ವಿದ್ಯಾರ್ಥಿಗಳು ಬೇಲೂರು, ಶ್ರವಣ ಬೆಳುಗೊಳದ ಕಡೆ ಟೂರ್ ಹೋಗಿ ಬಂದದ್ದು ಎಸ್.ಆರ್. ಮಾಸ್ಟರ್ ಅವರಿಗೆ ಹೇಗೂ ಗೊತ್ತೇ ಇತ್ತು. ಅವರನ್ನು ಕರೆದಿದ್ದರೂ ಅವರು ಅಯ್ಯೋ ನಾನು ಬೇಕಾದಷ್ಟು ಸಲ ಹೋಗಿ ಅಗಿದೆಯಪ್ಪ, ನೀವೆಲ್ಲಾ ಹೋಗಿಬಿಟ್ಟು ಬನ್ನಿ. ನಾನು ಪ್ರಿನ್ಸಿಪಾಲರ ಅನುಮತಿ ಪಡೆದುಕೊಂಡು ಎರಡು ದಿನ ಊರಿನಲ್ಲಿದ್ದು ಕುಟುಂಬದ ಜೊತೆ ಕಳೀತೀನಿ ಅಂದಿದ್ದರು.

ಟೂರಿನಿಂದ ಬಂದ ನಂತರದಲ್ಲಿ ಶ್ರೀನಿವಾಸನ ನಡವಳಿಕೆಯಲ್ಲಿ ಏನೋ ಒಂದು ಬದಲಾವಣೆಯಾದಂತೆ ಗಮನಿಸಿದರು. ಈಗ ಮೊದಲಿಗಿಂತ ಬಹಳ ಉತ್ಸಾಹದಲ್ಲಿದ್ದದ್ದು, ಊರಿಗೆ ಹೋಗದೆ ಇದ್ದಾಗ ಯಾವಾಗಲಾದರೊಂದು ಶನಿವಾರ ಮಧ್ಯಾಹ್ನದ ಹೊತ್ತು ಸುಮ್ಮನೆ ಮಂಚದ ಮೇಲೆ ಮಲಗಿದ್ದರೆ ಅಲ್ಲೇ ಪಕ್ಕದ ರೂಮಿನಿಂದ ಶ್ರೀನಿವಾಸ್ ಮೆಲ್ಲಗೆ ನಕ್ಕದ್ದು ಕೇಳಿಸಿ ಎದ್ದಿದ್ದಾನೇನೋ ಅಂತ ನೋಡಿದರೆ ಅವನು ನಕ್ಕದ್ದು ನಿದ್ದೆಗಣ್ಣಲ್ಲಿ ಅಂತ ಗೊತ್ತಾಗಿ ಆ ಮೇಲೆ ಸಂಜೆ ವಾಕ್ ಹೋದಾಗ "ಏನ್ರೀ ಶ್ರೀನಿವಾಸ್ ಮಧ್ಯಾಹ್ನದ ಕನಸಿನಲ್ಲಿ ನಿಮ್ಮಷ್ಟಕ್ಕೆ ನೀವೇ ನಗುತ್ತಾ ಇದ್ದಿರಿ. ಏನು ನಿಮ್ಮ ಕನಸಿನ ರಾಜಕುಮಾರಿ ಜೊತೆ ಪ್ರೇಮ ಸಲ್ಲಾಪವೋ ಹೇಗೆ" ಎಂದು ನಗುತ್ತ ಛೇಡಿಸಿದರು. ಶ್ರೀನಿವಾಸ್ "ಏನಿಲ್ಲ ಸರ್, ನೀವು ಸುಮ್ಮನೆ ತಮಾಶೆ ಮಾಡ್ತೀರಿ." "ಇಲ್ಲರೀ ನೀವು ಖಂಡಿತಾ ನಗುತ್ತಿದ್ದಿರಿ. ನಾನು ನಿಮ್ಮ ಸಿಹಿ ಕನಸಿಗೆ ಭಂಗ ತರುವುದು ಬೇಡ ಅಂತ ನಿಮ್ಮನ್ನು ಎಚ್ಚರಮಾಡಲಿಲ್ಲ." ಅಂದರು. "ಏನೋ ಸರ್. ಏನೋ ಒಂದು ತಲೇಲಿ ಹೊಕ್ಕಿದೆ. ದೇವರ ದಯೆ ಇದ್ದರೆ ಏನಾದರೂ ಆದೀತೇನೋ" ಎಂದು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಮಾತಾಡಿದ. ಕರ್ಣಾಕರ್ಣಿಕೆಯಾಗಿ ಅವರಿಗೆ ಶ್ರೀನಿವಾಸ್ ವಸುಂಧರಾಳನ್ನು ತಬ್ಬಿ ಹಿಡಿದುಕೊಂಡದ್ದು ಕಿವಿಗೆ ಬಿದ್ದಿತ್ತು. ಆದರೆ ಇವರ ಕಿವಿಗೆ ಹಾಕಿದವರು –ಅಪರಿಚಿತರೊಬ್ಬರು ಅವತ್ತು ಅವರಿಬ್ಬರನ್ನು ಭದ್ರವಾಗಿ ಹಿಡಿದುಕೊಳ್ಳದೆ ಹೋಗಿದ್ದರೆ ಇಬ್ಬರೂ ಜಾರಿ ಕೆಳಗೆ ಬಿದ್ದು ಏನಾದರೂ ಭಾರೀ ಅನಾಹುತವೇ ಆಗುತ್ತಿತ್ತು ಎಂದು ತಿಳಿಸಿದ್ದರಿಂದ ಅದೊಂದು ಆಕಸ್ಮಿಕ ಎಂದು ತಲೆಕೆಡಿಸಿಕೊಂಡಿರಲಿಲ್ಲ. ಈಚಿನ ಅವನ ನಡವಳಿಕೆ ಮತ್ತು ಈಗ ಅವನು ಮಾತಾಡಿದ್ದು ಎಲ್ಲ ಒಂದಕ್ಕೊಂದಕ್ಕೆ ತಾಳೆಹಾಕಿ ನೋಡಿದರೆ ಬಹುಶಃ ಇದರಲ್ಲಿ ತಾನು ಅಂದುಕೊಂಡಿದ್ದಕ್ಕಿಂತ ಹೆಚ್ಚು ಸತ್ಯ ಇರಬೇಕು ಎಂದು ಭಾವಿಸಿದರು.

* * *

ನೋಡನೋಡುತ್ತ ಶೈಕ್ಷಣಿಕ ವರ್ಷ ಮುಗಿಯುವ ಸಮಯ ಹತ್ತಿರ ಬರುತ್ತಾ ಇತ್ತು. ಇನ್ನೇನು ಜನವರಿ ಆಗಲೇ ಮುಗಿಯುತ್ತಾ ಬಂದಿತ್ತು. ಫೆಬ್ರುವರಿ ಮಾರ್ಚ್ ತಿಂಗಳು ಬಂತು ಅಂದರೆ ಕಾಲೇಜಿನಲ್ಲಿ ಪಾಠಗಳು ಮುಗಿಯದೆ ಇದ್ದ ತರಗತಿಗಳಿಗೆ ಮೇಷ್ಟರುಗಳು ಸ್ಪೆಷಲ್ ಕ್ಲಾಸ್‌ಗಳನ್ನು ತೆಗೆದುಕೊಳ್ಳುವ ಮತ್ತು ಅಂತಿಮ ಪದವಿ ತರಗತಿಗಳ ಹುಡುಗರು ಕ್ಲಾಸ್ ಸೋಷಿಯಲ್ಸ್‌ಗಳನ್ನು ನಡೆಸುವ ಸಮಯ. ವಸುಂಧರಾ ಅವರ ತರಗತಿಗೂ ಕೆಲವೊಂದು ಸಬ್ಜೆಕ್ಟ್‌ಗಳ ಪಾಠಗಳು ಮುಗಿಯದೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವುದು ಆರಂಭವಾಗಿತ್ತು. ಸುಮಾರು ಜನ ಈಗಾಗಲೇ ಪಾಠಗಳು ಮುಗಿದಿರುವ ತರಗತಿಗಳ ಸಮಯದಲ್ಲಿ ಮುಗಿಯದೆ ಇರುವ ಅಧ್ಯಾಪಕರು ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಹಾಗೂ ಹೊಂದಿಕೆ ಆಗದೆ ಇದ್ದಾಗ ಭಾನುವಾರಗಳಂದೂ ತರಗತಿಗಳನ್ನು ಕೆಲವರು ತೆಗೆದುಕೊಳ್ಳುತ್ತಿದ್ದರು. ಅದೊಂದು ಭಾನುವಾರ ಶ್ರೀನಿವಾಸ್ ಎರಡನೇ ಪದವಿ ತರಗತಿಯವರಿಗೆ ಸ್ಪೆಷಲ್ ಕ್ಲಾಸ್ ತೆಗೆದುಕೊಳ್ಳುವುದಾಗಿ ಹೇಳಿದ್ದರಿಂದ ಕಾಲೇಜಿಗೆ ಬಂದಿದ್ದ. ವಸುಂಧರಾಗೆ ರಾಜ್ಯ ಶಾಸ್ತ್ರದ ಅಧ್ಯಾಪಕರು ವಿಶೇಷ ತರಗತಿ ಹೇಳಿದ್ದರಿಂದ ಹೇಮಾ ಬರದೆ ಇದ್ದರೂ ಅವಳು ಮಾತ್ರ ಭಾನುವಾರವಾದರೂ ಕಾಲೇಜಿಗೆ ಬಂದಿದ್ದಳು. ಶ್ರೀನಿವಾಸ್ ತನ್ನ ವಿಶೇಷ ತರಗತಿ ಮುಗಿಸಿ ತನ್ನ ಇಲಾಖೆಯ ಕೊಠಡಿಯಲ್ಲಿ ಭಾನುವಾರದ ಪೇಪರ್ ಓದಿಕೊಂಡು ಹಾಗೇ ಕುಳಿತಿದ್ದ. ವಸುಂಧರಾಳ ಅಧ್ಯಾಪಕರು ಅಂದು ನಿರಂತರವಾಗಿ ಎರಡು ಗಂಟೆ ಪಾಠ ಮಾಡಿ ತರಗತಿ ಬಿಟ್ಟಿದ್ದರು. ಹೆಚ್ಚು ಕಡಮೆ ಎಲ್ಲ ವಿದ್ಯಾರ್ಥಿಗಳೂ ಮನೆಕಡೆ ಹೊರಡುತ್ತಾ ಇದ್ದ ಸಮಯ. ವಸುಂಧರಾ ಕೂಡ ಹೋಗುತ್ತಿರಬೇಕಾದರೆ ಶ್ರೀನಿವಾಸನ ಇಲಾಖೆಯ ಕೊಠಡಿ ತೆಗೆದಿದ್ದರಿಂದ ಕುತೂಹಲಕ್ಕಾಗಿ ಸುಮ್ಮನೆ ಇಣುಕಿ ನೋಡಿದಳು. ಬಳೆಯ ಸದ್ದಾದದ್ದು ಕೇಳಿ ಶ್ರೀನಿವಾಸ್ ತಲೆ ಎತ್ತಿ ನೋಡಿ ಆಶ್ಚರ್ಯದಿಂದ – "ಏನ್ರೀ ಸ್ಪೆಷಲ್ ಕ್ಲಾಸ್ ಇತ್ತಾ" ಎಂದು ಕೇಳಿದ. "ಹೌದು ಸರ್" ಎಂದು ಹೇಳಿ ಹೊರಡಲಿದ್ದವಳನ್ನು– "ಹೌದು ನೀವು ಒಂದಷ್ಟೆಲ್ಲ ಬರೆದು ಕೊಟ್ಟಿದ್ದರಲ್ಲಾ ಅದನ್ನೆಲ್ಲ ನೋಡಿಟ್ಟಿದ್ದೀನಿ. ನೀವು ಈ ಹೊತ್ತು ಬರುತ್ತೀರಿ ಅಂತ ಗೊತ್ತಿದ್ದರೆ ತಂದಿರುತ್ತಿದ್ದೆ." ಅಂದ. ಮರುದಿನ ಅವಳಿಗೆ ಬೇರೆ ಯಾವ ತರಗತಿಗಳೂ ಇಲ್ಲದೆ ಇದ್ದದ್ದರಿಂದ ಕಾಲೇಜಿಗೆ ಹೋಗುವುದು ಬೇಡವೆಂದು ಕೊಂಡಿದ್ದಳು. ಹಾಗೆಂದು ಎನ್.ಎಸ್. ಸರ್‌ಗೆ ಹೇಳಿದಳು. "ಹಾಗಾದರೆ ಒಂದು ಕೆಲಸ ಮಾಡಿ. ನನ್ನ ಮನೆ ಇಲ್ಲೇ ಹತ್ತಿರದಲ್ಲೇ ಇದೆ. ಒಂದು ಹತ್ತು ಹದಿನೈದು ನಿಮಿಷದ ವಾಕ್. ನನ್ನ ಜೊತೆ ಬಂದರೆ ಕೊಟ್ಟೇ ಬಿಡ್ತೀನಿ. ರಜಾದಲ್ಲಿ ನೀವು ಓದಿಕೊಳ್ಳಬಹುದು" ಎಂದ. ಮೊದಲು ವಸುಂಧರಾ ಸ್ವಲ್ಪ ಹಿಂದೆಮುಂದೆ ನೋಡುವಂತೆ ಕಂಡರೂ – "ಆಯಿತು ಬರುತ್ತೀನಿ ಸರ್" ಅಂದಳು. ನೀವು ಕಾಲೇಜ್ ಗೇಟ್ ಹತ್ತಿರ ಇರಿ. ನಾನು ಒಂದೈದು ನಿಮಿಷದಲ್ಲಿ ಬರುತ್ತೀನಿ" ಎಂದು ಹೇಳಿ ಅವಳನ್ನು ಕಳಿಸಿ ಆಂಟಿ ರೂಮಿಗೆ ಹೋಗಿ ನಿಧಾನವಾಗಿ ನಡೆದು ಗೇಟಿನ ಹತ್ತಿರ ಬಂದ. ವಸುಂಧರಾ ಕಾಯುತ್ತಾ ಇದ್ದದ್ದನ್ನು ನೋಡಿ "ಬನ್ನಿ" ಎಂದು ಹೇಳಿ ಹೆಜ್ಜೆ ಹಾಕಿದ.

ಹತ್ತು ಹದಿನೈದು ನಿಮಿಷದಲ್ಲಿ ಶ್ರೀನಿವಾಸನ ಮನೆ ತಲುಪಿದರು. ಅದು ಮೊದಲ ಮಹಡಿಯಲ್ಲಿದ್ದ ಒಂದು ಸಣ್ಣ ಮನೆ. ಕೆಳಗಡೆಯ ಭಾಗದಲ್ಲಿ ಎರಡು ಅಂಗಡಿಗಳಿದ್ದಂತಿತ್ತು. ಆದರೆ ಭಾನುವಾರವಾದದ್ದರಿಂದಲೋ ಏನೋ ಅವು ತೆರೆದಿರಲಿಲ್ಲ. "ಬನ್ನಿ ನಮ್ಮ ಬಡ ಬ್ರಹ್ಮಚಾರಿ ಕುಟೀರಕ್ಕೆ ಸ್ವಾಗತ" ಎಂದು ನಗುತ್ತಾ ಹೇಳಿ ಬೀಗ ತೆರೆದು ಪ್ರವೇಶಿಸಿದ. ವಸುಂಧರಾ ಒಂದು ಛೇರಿನಲ್ಲಿ ಕುಳಿತಳು. ಮಾತು ಪ್ರಾರಂಭಿಸಲು, ವಿಷಯ ಗೊತ್ತಿದ್ದರೂ "ಈ ಮನೇಲಿ ನೀವೊಬ್ಬರೇ ಇದ್ದೀರಾ ಸರ್" ಎಂದು ಕೇಳಿದಳು. "ಇಲ್ಲ ರೀ, ನನ್ನ ಜೊತೆ ಎಸ್.ಆರ್. ಮಾಸ್ಟರೂ ಇದ್ದಾರೆ. ಈ ಹೊತ್ತು ರಜಾ ಅಲ್ಲವಾ. ನಾಳೆಗೂ ರಜೆ ಹಾಕಿ ನಿನ್ನೇನೇ ಅವರೂರಾದ ಹಾಸನಕ್ಕೆ ಹೋದರು. ನಾನೂ ಮುಂದಿನ ವಾರ ಹೋಗೋದು ಅಂತ ತೀರ್ಮಾನಿಸಿ ಈ ಕ್ಲಾಸ್‌ಗೋಸ್ಕರ ಈ ಭಾನುವಾರ ಇಲ್ಲೇ ಉಳಿದುಕೊಂಡೆ" ಎಂದು ಹೇಳಿದ. ಹಾಗೆ ಹೇಳುತ್ತಲೇ –"ಈ ಹೊತ್ತು ಒಂದು ಲೋಟ ಟೀ ಕುಡಿಯೋಣ ಅಂದರೆ ಕಾಲೇಜ್ ಕ್ಯಾಂಟೀನ್ ಬಾಗಿಲು ಹಾಕಿತ್ತು. ಎರಡು ನಿಮಿಷದಲ್ಲಿ ಒಳ್ಳೆ ಟೀ ಮಾಡಿಕೊಡ್ತೀನಿ ತಾಳಿ" ಎಂದು ಹೇಳಿ ಅಡಿಗೆ ಕೋಣೆಗೆ ಹೋಗಿ ಎರಡು ಲೋಟ ಟೀಗೆ ಆಗುವಷ್ಟು ಹಾಲು ಮತ್ತು ಟೀ ಸೊಪ್ಪು ಸಕ್ಕರೆ ಸ್ವಲ್ಪ ನೀರು ಎಲ್ಲ ಬೆರೆಸಿ ಗ್ಯಾಸ್ ಸ್ಟೋವ್ ಮೇಲೆ ಇಟ್ಟು ಗ್ಯಾಸ್ ಆನ್ ಮಾಡಿ – "ನೀವು ಬರೆದುಕೊಟ್ಟದ್ದು ಕೊಡ್ತೀನಿ ಇಲ್ಲೇ ಇದೆ" ಎಂದು ಶೆಲ್ಫ್ ತೆರೆದು ಹುಡುಕುತ್ತಾ ಇದ್ದ. ಅಷ್ಟರಲ್ಲಿ ಒಲೆಮೇಲೆ ಇಟ್ಟಿದ್ದ ಹಾಲು ಉಕ್ಕಿದ್ದನ್ನು ಹಾಲ್‌ನಿಂದಲೇ ನೋಡುತ್ತಿದ್ದ ವಸುಂಧರಾ ಒಲೆ ಉರಿ ತಗ್ಗಿಸಲು ತಕ್ಷಣ ಅಡಿಗೆ ಮನೆಗೆ ಧಾವಿಸಿದಳು. ಅವಳು ಧಾವಿಸಿದ್ದು ನೋಡಿ ಶ್ರೀನಿವಾಸ್‌ನೂ ಹಿಂದೇಲೇ ಧಾವಿಸಿದ. ತಕ್ಷಣ ಹಾಲು ಉಕ್ಕುತ್ತಿದ್ದುದನ್ನು ನಿಲ್ಲಿಸಲೂ ಇಬ್ಬರೂ ಒಮ್ಮೆಗೇ ಸ್ಟವ್ ನಾಬ್‌ಗೆ ಕೈ ಹಾಕಿದರು. ಪರಸ್ಪರ ಕೈಗಳು ಬೆಸೆದುಕೊಂಡುವು. ಒಂದು ಕ್ಷಣದಲ್ಲಿ ಶ್ರೀನಿವಾಸ್ ಉದ್ವೇಗದಲ್ಲಿ ಅವಳನ್ನು ತಬ್ಬಿ ಮುತ್ತಿಟ್ಟ. ವಸುಂಧರಾ ಕೊಸರಿ ದೂರ ಸರಿಯಲು ಯತ್ನಿಸಿದರೂ ಸಫಲಳಾಗಲಿಲ್ಲ. ಅವಳೂ ಸೋತು ಅವನೆದೆಗೊರಗಿದಳು. ಮರುಕ್ಷಣದಲ್ಲೇ ಸಾವರಿಸಿಕೊಂಡು ಹಾಲ್‌ಗೆ ಧಾವಿಸಿದಳು. ಶ್ರೀನಿವಾಸ್ ಬಾಗಿಲು ಮುಂದೆ ಮಾಡಿ "ಸಾರಿ, ಕ್ಷಮಿಸಿ. ಆದರೆ ಐ ಲವ್ ಯೂ" ಎಂದು ಬಹಳ ದಿನಗಳಿಂದ ತನ್ನ ಹೃದಯದಲ್ಲೇ ಬಚ್ಚಿಟ್ಟುಕೊಂಡಿದ್ದನ್ನು ಹೇಳಿಬಿಟ್ಟ. "ನಾನು ನಿಮ್ಮನ್ನು ತುಂಬ ಇಷ್ಟ ಪಟ್ಟಿದ್ದೀನಿ. ನೀವೂ ಇಷ್ಟ ಪಡೋದಾದರೆ ನಾವು ಈ ವಿಷಯದಲ್ಲಿ ಮುಂದುವರಿಯಬಹುದು" ಎಂದು ಬಡಬಡಿಸಿದ.

ಅನಿರೀಕ್ಷಿತವಾಗಿ ಆಗಿಹೋದ ಘಟನೆಗಳ ಆಘಾತದಿಂದ ವಸುಂಧರಾಳಿಗೆ ಇನ್ನೂ ಹೊರಬರಲಾಗಿರಲಿಲ್ಲ. ತಕ್ಷಣ ತನ್ನ ಉಡುಗೆ ಸರಿಪಡಿಸಿಕೊಂಡು ಮೇಜಿನ ಮೇಲಿಟ್ಟಿದ್ದ ತಾನು ತಂದ ಪುಸ್ತಕಗಳು ಮತ್ತು ಶ್ರೀನಿವಾಸ್ ಅಡಿಗೆ ಮನೆಗೆ ಓಡುವಾಗ ಕೈಯಲ್ಲಿ ಹಿಡಿದಿದ್ದ ಅವಳು ಬರೆದುಕೊಟ್ಟ ಹಾಳೆಗಳು ಕೆಳಗೆ ಬಿದ್ದಿದ್ದವನ್ನು ಹೆಕ್ಕಿಕೊಂಡು ಶ್ರೀನಿವಾಸನ ಕಡೆಗೊಮ್ಮೆ ನಾಚಿಕೆಯ ನೋಟ ಬೀರಿ ಹೊರಟುಬಿಟ್ಟಳು. ಆ ನೋಟದಲ್ಲಿ ಅವನ ಕೃತ್ಯಕ್ಕೆ ಅಸಮಾಧಾನವೇನೂ ಇದ್ದಂತಿರಲಿಲ್ಲ. ಶ್ರೀನಿವಾಸ್ ನೆಮ್ಮದಿಯ

ನಿಟ್ಟುಸಿರು ಬಿಟ್ಟ.

*   *   *

ವಸುಂಧರಾ ಮತ್ತು ಶ್ರೀನಿವಾಸ್ ಇಬ್ಬರಿಗೂ ಪರಸ್ಪರರನ್ನು ಕುರಿತಾದ ಆಕರ್ಷಣೆ ಆರಂಭವಾಗಿ ಬಹಳಷ್ಟು ದಿವಸಗಳೇ ಆಗಿದ್ದುವು. ಆಕರ್ಷಣೆಯ ಹಂತದಿಂದ ಅದು ಪರಸ್ಪರರನ್ನು ಬಯಸುವ, ಪ್ರೀತಿಸುವ ಹಂತಕ್ಕೆ ಹೋಗಲು ಈ ಮಧ್ಯೆ ನಡೆದ ಒಂದೆರಡು ಘಟನೆಗಳ ಜೊತೆಗೆ ವಯೋ ಸಹಜವಾದ ಕಾಮನೆಯೂ ಸೇರಿಕೊಂಡು ಬಲಗೊಳ್ಳಲಾರಂಭಿಸಿತ್ತು. ಇಂದಿನ ಘಟನೆಯಿಂದ ಅವರಿಬ್ಬರಿಗೂ ಅದು ದೃಢಪಟ್ಟಿತು. ಈ ಬಗ್ಗೆ ಮನೆಯಲ್ಲಿ ಯಾರ ಕೈಯಲ್ಲಿ ತಾನೆ ಹೇಳಿಕೊಳ್ಳಬಲ್ಲಳು? ಮೊದಲೇ ತಮ್ಮದು ಅತ್ಯಂತ ಸಂಪ್ರದಾಯಬದ್ಧ ಜೋಯಿಸರ ಮನೆತನ. ಎನ್.ಎಸ್. ಮೇಷ್ಟರು ಮಂಡ್ಯ ಕಡೆಯ ಗೌಡರೆಂಬುದು ತಿಳಿದಿದ್ದ ಸಂಗತಿಯೇ. ಇದೇ ಯೋಚನೆಯಲ್ಲಿ ಅವಳು ಬಳಲಿ ಬೆಂಡಾದಳು. ಏನೂ ಮಾರ್ಗ ಹೊಳೆಯದೆ ಇದ್ದಾಗ ತನ್ನ ಪ್ರಾಣ ಸ್ನೇಹಿತೆ ಹೇಮಾಳ ಹತ್ತಿರ ಈ ಬಗ್ಗೆ ಪ್ರಸ್ತಾಪಿಸಿದರೆ ಹೇಗೆ ಎನಿಸಿ ಅದೇ ಸರಿ ಎಂದು ತೀರ್ಮಾನಿಸಿದಳು. ಕಾಲೇಜಿನಲ್ಲಿ ಪಾಠಗಳೆಲ್ಲಾ ಹೆಚ್ಚು ಕಡಮೆ ಮುಗಿದು ಮನೆಯಲ್ಲೇ ವಿದ್ಯಾರ್ಥಿಗಳು ಪರೀಕ್ಷೆಗೆ ಓದಿಕೊಳ್ಳುತ್ತಿದ್ದ ಸಮಯ ಅದು. ಹಾಗೆ ಒಂದು ಮಧ್ಯಾಹ್ನ ಊಟದ ನಂತರ ತಮ್ಮ ಮನೆಯಲ್ಲಿ ಜೊತೆಯಲ್ಲಿ ಓದಿಕೊಳ್ಳೋಣ (ಕಂಬೈನ್ಡ್ ಸ್ಟಡಿ) ಎಂದು ಎರಡು ದಿನದ ಹಿಂದೆ ಹೇಮಾಗೆ ಹೇಳಿದ್ದಳು. ಹೇಮಾ ಬಂದ ಮೇಲೆ ಸುಮಾರು ಹೊತ್ತು ಪಾಠಗಳ ಬಗ್ಗೆ ಪರಸ್ಪರ ಚರ್ಚಿಸಿ, ಸಂಶಯಗಳನ್ನು ಬಗೆಹರಿಸಿಕೊಳ್ಳುವ ಹೊತ್ತಿಗೆ ಸಂಜೆ ಐದು ಗಂಟೆಯಾಗುತ್ತ ಬಂತು. ವಸುಂಧರಾಳ ಅಮ್ಮ ಇಬ್ಬರಿಗೂ ಕಾಫಿ ಮಾಡಿಕೊಟ್ಟರು. ಅದನ್ನು ಕುಡಿದ ಮೇಲೆ ಇವತ್ತಿಗೆ ಇಷ್ಟು ಸಾಕು, ನಿನ್ನನ್ನು ಒಂದಷ್ಟು ದೂರ ಕಳಿಸಿಕೊಟ್ಟು ಬರ್ತೀನಿ. ನನಗೂ ಮನೇಲೇ ಕೂತು ಬೇಜಾರಾಗಿದೆ ಎಂದು ಅಮ್ಮನಿಗೆ ಹೇಳಿ ಸ್ವಲ್ಪ ದೂರ ಹೋದಮೇಲೆ "ಸ್ವಲ್ಪ ಹೊತ್ತು ಪಾರ್ಕ್‌ನಲ್ಲಿ ಕೂತಿದ್ದು ಬರೋಣವಾ. ನಿನ್ನ ಹತ್ತಿರ ಸ್ವಲ್ಪ ಮಾತನಾಡೋದಿದೆ ಎಂದು ಹೇಳಿ" ಪಾರ್ಕಿನ ಕಡಗೆ ಇಬ್ಬರೂ ಹೆಜ್ಜೆ ಹಾಕಿದರು.

ಪಾರ್ಕಿಗೆ ಹೋಗಿ ಯಾರೂ ಇಲ್ಲದ ಏಕಾಂತ ಸ್ಥಳದಲ್ಲಿ ಕುಳಿತರು. ಏನೋ ಮಾತಾಡೋದಿದೆ ಎಂದು ಹೇಳಿದ ವಸುಂಧರಾ ಎಷ್ಟು ಹೊತ್ತಾದರೂ ಬಾಯೇ ತೆರೆಯದೆ ಮೌನಗೌರಿಯಾದಳು. ಆಗ ಹೇಮಾಳೇ – "ಹೌದು, ಅದೇನೋ ಮಾತಾಡಬೇಕು ಅಂತ ಇದ್ದೆಯಲ್ಲ, ಯಾಕೆ ಸುಮ್ಮನೇನೇ ಕೂತುಬಿಟ್ಟೆ" ಎಂದಳು. ಆಗ ವಸುಂಧರಾ ಬಹಳ ಸಂಕೋಚದಿಂದ ಎನ್.ಎಸ್. ಮೇಷ್ಟರ ಬಗೆಗಿನ ತನ್ನ ಒಲವಿನ ವಿಚಾರ ಹೇಳಿಕೊಂಡಳು. ಅವರ ರೂಮಿಗೆ ತಾನು ಹೋಗಿದ್ದ ವಿಚಾರ ಹೇಳದೆ ಹೋದರೂ ಅವರೂ ತನ್ನನ್ನು ಪ್ರೀತಿಸುತ್ತಿರುವ ವಿಷಯವನ್ನು ಅವರ ವಿಭಾಗದ ಕೊಠಡಿಗೆ ಒಬ್ಬರೇ ಇದ್ದಾಗ ಹೋಗಿದ್ದಾಗ ಹೇಳಿದರು ಎಂದಳು. "ಅವರನ್ನೇ ಜೀವನ ಸಂಗಾತಿ ಮಾಡಿಕೊಳ್ಳುವ ನಿರ್ಧಾರ ಮಾಡಿದ್ದೀನಿ. ನೀನು ಏನು ಹೇಳುತ್ತೀಯಾ? ನನ್ನ

ನಿರ್ಧಾರ ತಪ್ಪಾ? ನನಗೆ ನಿನ್ನ ಅಭಿಪ್ರಾಯ ಬಹಳ ಮುಖ್ಯ. ನನಗೆ ನಿನ್ನನ್ನು ಬಿಟ್ಟರೆ ಇಂಥದನ್ನು ಹೇಳಿಕೊಳ್ಳಲು ಬೇರೆ ಯಾರಿದ್ದಾರೆ ಹೇಳು" ಅಂದಳು.

ವಸುಂಧರಾಳಿಗೆ ಎನ್.ಎಸ್. ಮೇಷ್ಟರ ಬಗ್ಗೆ ಬಲವಾದ ಆಕರ್ಷಣೆ ಇರುವ ಬಗ್ಗೆ ಅವಳಿಗೆ ಸುಳಿವು ಸಿಕ್ಕಿತ್ತು. ಅಂದು ಶ್ರವಣಬೆಳುಗೊಳದ ಟೂರ್ ಸಂದರ್ಭದಲ್ಲಿ ವಸುಂಧರಾ ಮತ್ತು ಶ್ರೀನಿವಾಸ್‌ರ ನಡುವೆ ಆದ ಘಟನೆ ಆಕಸ್ಮಿಕವೇ ಆದರೂ ಅವಳನ್ನು ತಾನು ಛೇಡಿಸಿದ ಮಾತುಗಳಲ್ಲೇ ಹೇಮಾಳಿಗೆ ಅವಳ ಊಹೆ ಹೆಚ್ಚು ಕಡಮೆ ದೃಢಪಟ್ಟ ಭಾವ ಇತ್ತು. ಆದರೆ ಅದು ಕೇವಲ ಒನ್‌ವೇ ಟ್ರಾಫಿಕ್ ಇರಬಹುದು ಅಂತಲೂ ಅನ್ನಿಸಿತ್ತು. ಕಾರಣ ಸ್ಪಷ್ಟವೇ ಇತ್ತು. ಅವರು ನೋಡಿದರೆ ಮಂಡ್ಯ ಕಡೆಯ ಗೌಡರು. ಇವಳಾದರೋ ಸಂಪ್ರದಾಯಸ್ಥ ಪುರೋಹಿತರ ಮನೆಯವಳು. ಆದರೆ ಇದೀಗ ವಸುಂಧರಾ ಹೇಳುತ್ತಿರುವುದು ನೋಡಿದರೆ ಎನ್.ಎಸ್. ಮೇಷ್ಟರಿಗೂ ಕೂಡ ಇವಳ ಬಗ್ಗೆ ಪ್ರೀತಿ ಇದೆ ಅನ್ನುವುದು ನಿಜವಾಯಿತು. ತನ್ನ ಆತ್ಮೀಯ ಗೆಳತಿ ತನ್ನ ಆಂತರ್ಯವನ್ನು ಅದರಲ್ಲೂ ಪ್ರೀತಿಯಂಥ ತೀರ ವೈಯಕ್ತಿಕ ವಿಚಾರವನ್ನು ತನ್ನಲ್ಲಿ ಪ್ರಸ್ತಾಪಿಸಿ ಸಲಹೆ, ಅಭಿಪ್ರಾಯ ಕೇಳಿದಾಗ ಈಗ ಛೇಡಿಸುವುದು ಸರಿಯಲ್ಲವೇ ಅಲ್ಲ ಅನ್ನಿಸಿ– "ಸರಿ. ಆದರೆ ಈ ಜಾತಿ ಒಂದು ಬಹಳ ದೊಡ್ಡ ಗೋಡೆಯಾಗಿ ನಿಂತು ಬಿಟ್ಟಿದೆಯಲ್ಲಾ. ಎನ್.ಎಸ್. ಮೇಷ್ಟರಂಥವರನ್ನು ಜೀವನ ಸಂಗಾತಿಯಾಗಿ ಪಡೆಯುವುದು ಅಂದರೆ ಅದು ನಿಜಕ್ಕೂ ಅದೃಷ್ಟವೇ. ಅವರಿಗೆ ಏನುತಾನೆ ಕಡಮೆಯಾಗಿದೆ. ಅವರ ಜಾತಿಯಲ್ಲೇ ಓದಿದ, ಒಳ್ಳೆ ರೂಪವಂತ ಹುಡುಗಿಯರಿಗೇನೂ ಕೊರತೆ ಇಲ್ಲ. ಅಂಥದರಲ್ಲಿ ಅವರು ನಿನ್ನನ್ನು ಪ್ರೀತಿಸುತ್ತಿದ್ದಾರೆ ಅಂದರೆ ಅದು ಕೇವಲ ಸೌಂದರ್ಯದ ಆಕರ್ಷಣೆ ಅಲ್ಲವೇ ಅಲ್ಲ. ಈ ವಿಷಯದಲ್ಲಿ ಯಾರ ಕಡೆಯ ತಂದೆ ತಾಯಿಗಳೂ ಬಡಪೆಟ್ಟಿಗೆ ಒಪ್ಪುವುದೇ ಇಲ್ಲ. ಎಲ್ಲ ರೀತಿಯಲ್ಲೂ ಇದನ್ನು ಇಲ್ಲಿಗೇ ತಡೆಯೋದಕ್ಕೇ ನೋಡ್ತಾರೆ. ಆದರೆ ಇದರಲ್ಲಿ ನಿಮ್ಮಿಬ್ಬರ ನಿರ್ಧಾರ ಕೊನೆಯ ತನಕ ದೃಢವಾಗಿತ್ತು ಅಂದರೆ ಇಡೀ ಜಗತ್ತೇ ವಿರುದ್ಧವಾಗಿ ನಿಂತರೂ ಏನೂ ಮಾಡಕ್ಕಾಗಲ್ಲ. ಇಬ್ಬರೂ ಮೆಜಾರಿಟಿಗೆ ಬಂದಿದ್ದೀರಿ. ಅವರಿಗೆ ಒಳ್ಳೆಯ ಸಕಾರಿ ಕೆಲಸ ಇದೆ. ಆದರೆ ಇದು ಸುಲಭದ ದಾರಿ ಏನಲ್ಲ. ತುಂಬ ಕಠಿಣವಾದ ಕಲ್ಲುಮುಳ್ಳಿನ ಹಾದಿ. ಹಾಗಂತ ಅಸಾಧ್ಯವೂ ಅಲ್ಲ. ಬೆಸ್ಟ್ ಆಫ್ ಲಕ್. ಕಂಗ್ರಾಟ್ಸ್ ಕಣೇ. ಅಂತೂ ಹೊಡೆದೆಯಲ್ಲಾ ಛಾನ್ಸ್. ಯಾಕೆ ಸೊಗಡು ಮುಖ ಹಾಕಿಕೊಂಡಿದ್ದೀ. ಚೀರ್ ಅಪ್" ಎಂದು ಹುರಿದುಂಬಿಸಿದಳು. ವಸುಂಧರಾಳ ಮನಸ್ಸು ಗೆಲುವಾಯಿತು. ಯಾರೂ ನೋಡುತ್ತಿಲ್ಲ ಎಂದು ಖಚಿತಪಡಿಸಿಕೊಂಡು ಗೆಳತಿಗೆ ಒಂದು ಕಿಸ್ ಕೊಟ್ಟಳು. "ಅಯ್ಯೋ ಇದೆಲ್ಲಾ ಯಾರಿಗೆ ಕೊಡಬೇಕೋ ಅವರಿಗೆ ಕೊಟ್ಟರೆ ಕೊಟ್ಟದ್ದಕ್ಕೂ ಸಾರ್ಥಕ. ನನಗೆ ಕೊಟ್ಟರೆ ವೇಸ್ಟ್ ಆಗಿಬಿಡುತ್ತೆ. ಹಾಗೆಲ್ಲಾ ವೇಸ್ಟ್ ಮಾಡಬೇಡ. ಮುಂದೆ ಎಷ್ಟಿದ್ದರೂ ಸಾಲಲ್ಲ." ಎಂದು ಹೇಳಿ ವಸುಂಧರಾಳನ್ನು ಬಾಯಿತುಂಬಾ ನಗಿಸಿದಳು.

* * *

ಆ ಮುಂದಿನ ದಿನಗಳಲ್ಲಿ ವಸುಂಧರಾ ತನ್ನ ಪರೀಕ್ಷೆ ಕಡೆ ಮೊದಲಿನಷ್ಟು ಆಸಕ್ತಿ ಕೊಡೋಕೆ ಆಗಲಿಲ್ಲ. ಓದಿನ ಮೇಲೆ ಮನಸ್ಸನ್ನು ಕೇಂದ್ರೀಕರಿಸಲು ಮೊದ ಮೊದಲು ಇನ್ನಿಲ್ಲದ ಕಸರತ್ತು ನಡೆಸಿದಳು. ಆದರೆ ಅದು ತೀರಾ ಕಷ್ಟ ಸಾಧ್ಯ, ಇಲ್ಲವೆ ಅಸಾಧ್ಯವೆನಿಸಿತು. ಮನಸ್ಸಿನ ಮುಂದೆ ಶ್ರೀನಿವಾಸನ ಮುಖವೇ ಬಂದು ನಿಲ್ಲುತ್ತಿತ್ತು. ಮತ್ತು ತಾನು ಅವರ ಬಾಳಸಂಗಾತಿಯಾಗುವುದು ಹೇಗೆ ಎಂಬುದರ ಯೋಚನೆಯೇ ಗುಂಗೆಯ ಹುಳದಂತೆ ಕೊರೆಯತೊಡಗಿತು. ಹೇಗೋ ಪರೀಕ್ಷೆ ಒಂದು ಆಗಿ ಹೋಗಲಿ. ಆ ಮೇಲೆ ಮೊದಲು ಅಮ್ಮನ ಬಳಿ ಈ ವಿಷಯ ಹೇಗಾದರೂ ಪ್ರಸ್ತಾಪಿಸಿ ಮುಂದುವರಿಯುವುದು ಎಂದು ಸ್ವಲ್ಪ ಸಮಾಧಾನ ತಂದುಕೊಂಡಳು. ಹೇಮಾಳೂ ಅದೇ ಸರಿ ಎಂದಳು. ಈ ಮಧ್ಯೆ ಶ್ರೀನಿವಾಸ್‌ನನ್ನು ಇನ್ನೊಮ್ಮೆ ಅವನೊಬ್ಬನೇ ಇದ್ದಾಗ ಸಮಯ ಸಾಧಿಸಿ ಲೈಬ್ರರಿಯಲ್ಲಿ ಭೇಟಿಮಾಡಿದಳು. ಆಗ ಅವಳಿಗೆ ಒಂದು ಪುಸ್ತಕ ತೆಗೆದುಕೊಡುವ ನೆವದಲ್ಲಿ ಒಂದು ಚೀಟಿಯನ್ನೂ ಅವಳಿಗೆ ಕಾಣುವಂತೆಯೇ ಅದರಲ್ಲಿ ಸೇರಿಸಿಕೊಟ್ಟಿದ್ದ. ಅದರಲ್ಲಿ ಆ ವಾರದಲ್ಲಿ ಗುರುವಾರ 11 ಗಂಟೆಯ ಸುಮಾರಿಗೆ ಬಸ್ ಸ್ಟ್ಯಾಂಡಿಗೆ ಬರಬೇಕೆಂದೂ ತಾನು ಅಲ್ಲೇ ಕಾಯುವುದಾಗಿಯೂ ತಿಳಿಸಿದ್ದ. ಅಲ್ಲಿಂದ ಶಿವಗಂಗೆಗೆ ಹೋಗುವುದೆಂದೂ ಸೂಚಿಸಿದ್ದ. ಅದರಂತೆ ವಸುಂಧರಾ ಹೇಮಾಳ ಮನೆಗೆ ಓದಿಕೊಳ್ಳಲು ಹೋಗುವುದಾಗಿ ಅಮ್ಮನಿಗೆ ಹೇಳಿ ಬಸ್ ಸ್ಟ್ಯಾಂಡಿಗೆ ಹೋಗಿ ಅಲ್ಲೇ ಸೈಕಲ್ ನಿಲ್ಲಿಸಿ ಶ್ರೀನಿವಾಸನಿಗಾಗಿ ಅತ್ತ ಇತ್ತ ಕಣ್ಣು ಹಾಯಿಸಿದಳು. ಶ್ರೀನಿವಾಸ್ ಅಲ್ಲೇ ಶಿವಗಂಗೆಗೆ ಹೋಗುವ ಬಸ್ ಬಳಿ ಇದ್ದದ್ದು ಕಾಣಿಸಿತು. ವಸುಂಧರಾ ಹೋಗಿ ಬಸ್ ಹತ್ತಿ ಕೂತಳು. ತನ್ನ ಪಾಡಿಗೆ ತಾನೂ ಶಿವಗಂಗೆಗೆ ಟಿಕೆಟ್ ತೆಗೆದುಕೊಂಡಳು. ಶ್ರೀನಿವಾಸ್ ಕೂಡ ಟಿಕೆಟ್ ತೆಗೆದುಕೊಂಡು ಯಾರಿಗೂ ಅನುಮಾನ ಬಾರದಿರಲೆಂದು ಬಸ್‌ನಲ್ಲಿ ಅವಳಿಗಿಂತ ಐದಾರು ಸೀಟ್ ದೂರದಲ್ಲಿ ಕುಳಿತ. ಶಿವಗಂಗೆಗೆ ಹೋದಮೇಲೆ ಬಸ್ಸಿಳಿದು ಬೆಟ್ಟದ ಮಾರ್ಗ ಹಿಡಿಯದೆ ಇಬ್ಬರೂ ಬೇರೊಂದು ದಾರಿಯಲ್ಲಿ ನಡೆದು ಜನಸಂಚಾರವಿಲ್ಲದ ರಸ್ತೆಯಿಂದ ಹೊರಚ್ಚಾದ ಒಂದು ಮರದ ಕೆಳಗೆ ಕುಳಿತರು. ವಸುಂಧರಾಳ ಮುಖದಲ್ಲಿ ಆತಂಕ ಮನೆಮಾಡಿದ್ದನ್ನು ಗಮನಿಸಿದ ಶ್ರೀನಿವಾಸ್ ಅವಳ ಎರಡೂ ಭುಜಗಳನ್ನು ಹಿಡಿದು– "ಏನೂ ಆತಂಕ ಬೇಡ. ಮನೆಯಲ್ಲಿ ನಾನು ಈಗಾಗಲೇ ಅಪ್ಪನ ಬಳಿ ಮಾತನಾಡಿದ್ದೇನೆ. ಅಪ್ಪ ಮೊದಲೆಲ್ಲ ವಿರೋಧಿಸಿದರೂ 'ಬಾಳ್ವೆ ಮಾಡಬೇಕಾದವರು ನೀವು ತಾನೆ. ನಮ್ಮದು ಹೇಗೋ ನಡೆಯುತ್ತೆ. ಮುಖ್ಯವಾಗಿ ಹುಡುಗಿಯ ಅಪ್ಪ ಅಮ್ಮನನ್ನು ಒಪ್ಪಿಸುವುದು ನಿಮ್ಮಿಬ್ಬರ ಜವಾಬ್ದಾರಿ. ಅವರು ಹೇಳಿಕೇಳಿ ಬ್ರಾಹ್ಮಣರು ಅಂತೀಯಾ' ಎಂದರು. ಆದರೆ ನಮ್ಮ ಅಮ್ಮನದೇ ಕಷ್ಟ. ಅವಳ ಹತ್ತಿರ ಪ್ರಸ್ತಾಪಿಸಿದ್ದೇನೆ. ಅವಳು ಒಪ್ಪುತ್ತಿಲ್ಲ. ಆದರೆ ಒಪ್ಪಿಸುವ ನಂಬಿಕೆ ನೂರಕ್ಕೆ ನೂರರಷ್ಟಿದೆ. ನಿಮ್ಮ ಮನೆಯಲ್ಲಿ ವಿಷಯ ಪ್ರಸ್ತಾಪಿಸಿದಿರಾ ಹೇಗೆ" ಎಂದು ಕೇಳಿದ. ವಸುಂಧರಾ– "ನಾನಿನ್ನೂ ಪ್ರಸ್ತಾಪಿಸುವ ಧೈರ್ಯ ಮಾಡಿಲ್ಲ. ಈ ಪರೀಕ್ಷೆ ಒಂದು ಮುಗಿದು ಹೋಗಲಿ. ಆಮೇಲೆ ಪ್ರಸ್ತಾಪಿಸೋಣವೆಂದಿದ್ದೇನೆ. ಹೇಮಾಳ ಮೂಲಕ ಅಮ್ಮನ ಕಿವಿಗೆ ಹಾಕಿ ಆಮೇಲೆ ಮುಂದುವರಿಯುವ ಯೋಚನೆ ಇದೆ."

ಎಂದಳು. ಶ್ರೀನಿವಾಸ್– "ನೀವು ಹೇಳೋದೂ ಸರಿ. ಪರೀಕ್ಷೆ ಮುಗಿಯಲಿ" ಎಂದ. ಆ ಮೇಲೆ ಸ್ವಲ್ಪ ಹೊತ್ತು ಅದೂ ಇದೂ ಮಾತಾಡುತ್ತಿದ್ದರು. ಅಲ್ಲಿಂದ ಹೊರಡುವ ಮುನ್ನ, ಸುತ್ತ ಯಾರ ಸುಳಿವೂ ಇಲ್ಲದ್ದನ್ನು ಖಚಿತಪಡಿಸಿಕೊಂಡು ಶ್ರೀನಿವಾಸನೇ ಮುಂದುವರಿದು ಎರಡೂ ಕೈಯಲ್ಲಿ ಅವಳ ಮುಖ ಹಿಡಿದುಕೊಂಡು ಚುಂಬಿಸಿದ. ವಸುಂಧರಾಳ ಮೊದಲೇ ಕೆಂಪಗಿದ್ದ ಮುಖ ನಾಚಿಕೆಯಿಂದ ಮತ್ತಷ್ಟು ಕೆಂಪಾಯಿತು. ಬಸ್ ಸ್ಟ್ಯಾಂಡಿಗೆ ಬಂದು ಅಲ್ಲೇ ಎಳನೀರು ಮಾರುತ್ತಿದ್ದಲ್ಲಿಗೆ ಹೋಗಿ ಶ್ರೀನಿವಾಸ್ ಇಬ್ಬರಿಗೂ ಎಳನೀರು ತೆಗೆದುಕೊಂಡ. ಸ್ವಲ್ಪ ಹೊತ್ತಿನಲ್ಲಿ ಬಂದ ಬಸ್ಸೇರಿ ತುಮಕೂರಿಗೆ ಬಂದರು. ವಸುಂಧರಾ ಊಟದ ಹೊತ್ತಿಗೆಲ್ಲಾ ಮನೆ ಸೇರಿಕೊಂಡಳು.

ಅಧ್ಯಾಯ–6

ಕಾಲೇಜಿನ ವಾರ್ಷಿಕ ಪರೀಕ್ಷೆಗಳು ಮಾರ್ಚ್ ಕೊನೇ ವಾರದಲ್ಲಿ ಪ್ರಾರಂಭವಾದುವು. ಪರೀಕ್ಷೆಗಳೇನೋ ಪ್ರಾರಂಭವಾದುವು. ಆದರೆ ತನ್ನನ್ನು ಕಾಡುತ್ತಿದ್ದ ಯೋಚನೆಗಳ ಭಾರದಿಂದ ವಸುಂಧರಾಳಿಗೆ ಮನಸ್ಸು ಕೊಟ್ಟು ಓದಲು ಸಾಧ್ಯವಾಗಲೇ ಇಲ್ಲ. ಓದಿದ್ದೆಲ್ಲಾ ಮರೆತು ಹೋದಂತಾಗುತ್ತಿತ್ತು. ಮಗಳು ಮೊದಲಿನ ಹಾಗೆ ಲವಲವಿಕೆಯಿಂದಿರದೆ ಒಬ್ಬಳೇ ಕಳೆದು ಹೋದಂತೆ ಯೋಚಿಸುತ್ತಾ ಕೂರುವುದನ್ನು ನೋಡಿದ ಸಾವಿತ್ರಮ್ಮನವರು ಒಂದೆರಡು ಸಲ ಅವಳಿಗೆ "ಏನಾಗಿದೆ ನಿನಗೆ. ಯಾಕೆ ಹಾಗೆ ಆಕಾಶಾನೇ ತಲೆ ಮೇಲೆ ಕಳಚಿಬಿದ್ದವಳ ಹಾಗೆ ಕೂತಿರುತ್ತೀಯಾ?" ಎಂದು ಕೇಳಿದರೂ "ಏನೂ ಇಲ್ಲಮ್ಮ ಏನೋ ಎಷ್ಟೊಂದೆಲ್ಲ ಓದಬೇಕಾಗಿದೆ ಅಂತ ಯೋಚನೆ ಬಂದು ಹಾಗೆ ಕೂತಿದ್ದೆ ಅಷ್ಟೆ" ಎಂದು ಹಾರಿಕೆಯ ಉತ್ತರ ನೀಡುತ್ತಿದ್ದಳು. ಇರಬಹುದೋ ಏನೋ ಎಂದು ಅವರು ಸುಮ್ಮನಾಗುತ್ತಿದ್ದರು. ಪರೀಕ್ಷೆಯಲ್ಲಿ ತಾನು ಅಂದುಕೊಂಡಷ್ಟು ಚೆನ್ನಾಗಿ ಮಾಡಲು ಆಗುತ್ತಿಲ್ಲವಲ್ಲ ಎಂದು ಪರೀಕ್ಷೆ ಪ್ರಾರಂಭವಾದ ದಿನದಿಂದಲೂ ಅನಿಸಿತ್ತು. ಸದ್ಯ ಹೇಗೋ ಈ ಪರೀಕ್ಷೆ ಒಂದು ಮುಗಿದುಹೋದರೆ ಸಾಕೆನಿಸಿಬಿಟ್ಟಿತ್ತು. ಗೆಳತಿ ಹೇಮಾಳಲ್ಲಿ ಈ ಬಗ್ಗೆ ಹೇಳಿಕೊಂಡಾಗ–"ಹೂಂ. ನಮಗೆಲ್ಲಾ ಪರೀಕ್ಷೆ ಜ್ವರ ಆದರೆ ನಿನಗೆ ಪ್ರೇಮಜ್ವರ ಅಂತ ಹೇಳುತ್ತಾರಲ್ಲ ಅದು ಶುರುವಾಗಿಬಿಟ್ಟಿರಬೇಕು. ಅದರ ಪರಿಣಾಮವೇ ಇದು" ಅಂತ ಛೇಡಿಸಿದರೂ– "ನೀನು ಚೆನ್ನಾಗಿ ಓದಿದರೆ ರ್‍ಯಾಂಕ್ ಬರ್ತೀಯಾ. ಈಗ ಓದದೆ ಇದ್ದರೂ ಇದುವರೆಗೆ ಓದಿರೋ ಓದಿನಿಂದ ಫಸ್ಟ್ ಕ್ಲಾಸ್ ಗ್ಯಾರಂಟಿ ಬಿಡು. ಯಾಕೆ ಯೋಚನೆ ಮಾಡ್ತೀಯಾ. ಹೇಗೂ ಭಾರೀ ಗೌಡ್ತಿ ಆಗೋಳು. ನೀನೇನು ಕೆಲಸಕ್ಕೆ ಹೋಗಬೇಕಾ? ಪರೀಕ್ಷೆ ಗಿರೀಕ್ಷೆ ಅಂತ ಹೆಚ್ಚು ತಲೆಕೆಡಿಸಿಕೊಳ್ಳಬೇಡ ಮುಂದಿನ ಭಾರೀ ಪರೀಕ್ಷೇಲಿ ತೇರ್ಗಡೆಯಾಗೋದರ ಕಡೆ ಗಮನ ನೀಡು" ಎಂದು ನಗುತ್ತಲೇ ಅವಳನ್ನು ಛೇಡಿಸಿ ಧೈರ್ಯ ತುಂಬಿದಳು.

ಅಂತೂ ಪರೀಕೆಗಳು ಮುಗಿದವು. ಪರೀಕ್ಷೆ ಸಮಯದಲ್ಲಿ ಭೇಟಿ ಮಾಡಿ ಮಾತಾಡಿಸಿ ವಸುಂಧರಾಳ ಮನಸ್ಸಿಗೆ ಕಸಿವಿಸಿ ಉಂಟು ಮಾಡಬಾರದೆಂದು ಶ್ರೀನಿವಾಸ್ ಸುಮಾರು ದಿನಗಳಿಂದ ದೂರವೇ ಉಳಿದಿದ್ದ. ಆದರೆ ಅವಳ ಪರೀಕ್ಷೆಯ ಕೊನೆಯ ದಿನ ಪೇಪರ್ ಕೊಟ್ಟು ಮನೆಗೆ ಹೋಗುವ ಮುಂಚೆ ತನ್ನನ್ನು ಡಿಪಾರ್ಟ್‌ಮೆಂಟಿನ ರೂಮಿನಲ್ಲಿ ಭೇಟಿಯಾಗಬೇಕೆಂದು ಅಟೆಂಡರ್ ಮೂಲಕ ಹೇಳಿಕಳಿಸಿದ್ದ. ಅದರಂತೆ ಬಂದು ಮೌನವಾಗಿ ಅವನೆದುರು ತಲೆ ತಗ್ಗಿಸಿಕೊಂಡು ನಿಂತಳು. "ಪರೀಕ್ಷೆಯಲ್ಲಿ ಹೇಗೆ ಮಾಡಿದಿರಿ?" ಎಂದು ಕೇಳಿದ. "ಪರವಾಗಿಲ್ಲ, ಸುಮಾರಾಗಿ ಮಾಡಿದ್ದೀನಿ" ಎಂದು ತಲೆ ಎತ್ತದೆ ಉತ್ತರಿಸಿದಳು. ಅವಳ ದನಿಯಲ್ಲಿ ಏನೋ ಆತಂಕ ಮನೆಮಾಡಿರುವುದರ

ಸುಳಿವು ಅವನಿಗೆ ಸಿಕ್ಕಿತು. ಸ್ವಲ್ಪ ಮುಂದೆ ಬಂದು ಅವಳ ಗಲ್ಲ ಹಿಡಿದು ಮುಖ ಮೇಲೆ ಮಾಡಿ "ನೋಡಿ ನೀವು ನಗುತ್ತಾ ಇದ್ದರೆ ನಿಮ್ಮ ಮುಖ ನೋಡೋದಕ್ಕೆ ಚೆನ್ನ. ಆದರೆ ಹೀಗೆ ಮುಖ ಕೆಳಗೆ ಹಾಕಿ ನಿಂತುಕೊಂಡರೆ ಒಂದು ಥರಾ ಅನ್ನಿಸುತ್ತೆ. ತಲೆ ತಗ್ಗಿಸುವಂಥ ಕೆಲಸ ನೀವೇನೂ ಮಾಡಿಲ್ಲ. ಮುಖ ಬಾಡಿಸಿಕೊಳ್ಳ ಬೇಡಿ. ಯಾವಾಗಲೂ ನೀವು ಕಳೆಕಳೆಯಾಗಿ ಇರಬೇಕು" ಎಂದು ಮೆಲ್ಲಗೆ ಅವಳ ಕೆನ್ನೆ ತಟ್ಟಿದ. "ಇನ್ನೊಂದೆರಡು ದಿನದಲ್ಲಿ ನಿಮ್ಮ ಮನೇಲಿ ಮಾತಾಡಿ. ಆಮೇಲೆ ನನಗೆ ತಿಳಿಸಿ. ನನಗೆ ಇನ್ನೊಂದೆರಡು ದಿನ ಇನ್ವಿಜಿಲೇಷನ್ ಕೆಲಸ ಇದೆ. ಮುಗಿಸಿಕೊಂಡು ಊರಿಗೆ ಹೋಗಿ ಮತ್ತೆ ಒಂದು ವಾರದ ನಂತರ ಬರುತ್ತೇನೆ. ಆಗಲೂ ಒಂದೈದಾರು ದಿನ ಪರೀಕ್ಷೆ ಕೆಲಸ ಇದೆ. ಈ ಸಲ ಅಮ್ಮನನ್ನು ಒಪ್ಪಿಸಿಯೇ ತೀರುತ್ತೇನೆ" ಎಂದು ಹೇಳಿದ.

ವಸುಂಧರಾ ಮನೆಗೆ ಹಿಂತಿರುಗಿದಳು. "ಸದ್ಯ ಪರೀಕ್ಷೆ ಮುಗಿಯಿತಲ್ಲ, ಇನ್ನು ಯಾವ ಚಿಂತೇನೂ ಹಚ್ಚಿಸಿಕೊಳ್ಳದೆ ಹಾಯಾಗಿರು" ಎಂದು ಅಮ್ಮ ಹೇಳಿದರು. ಅಮ್ಮ ಹೇಳಿದ ಹಾಗೆ ಇರಲು ಸಾಧ್ಯವೇ ಇಲ್ಲ ಅನ್ನುವುದು ಅವಳೊಬ್ಬಳಿಗೆ ಮಾತ್ರ ಗೊತ್ತಿತ್ತು. ಒಂದೆರಡು ದಿನ ಬಿಟ್ಟು – "ಹೇಮಾಳ ಮನೆಗೆ ಹೋಗಿ ಬರುತ್ತೇನೆ. ಪರೀಕ್ಷೆ ಆದ ಮೇಲೆ ನನಗೆ ಅವಳು ಸಿಕ್ಕೇ ಇಲ್ಲ ಎಂದು ಹೇಳಿ ಅವಳ ಮನೆಗೆ ಹೋದಳು. ಇವಳ ಮುಖ ನೋಡಿದ ಕೂಡಲೇ ಹೇಮಾಳಿಗೂ ಅವರಮ್ಮನಿಗೂ ತುಂಬಾ ಸಂತೋಷವಾಯಿತು. ಇಬ್ಬರೂ ರೂಮ್ ಸೇರಿ ಗಂಟೆಗಟ್ಟಲೆ ಪರೀಕ್ಷೆಯಲ್ಲಿ ಫರ್ಮಾರೆನ್ಸ್ ಹೇಗಾಯಿತು ಅನ್ನುವ ವಿಚಾರ ಮೊದಲುಗೊಂಡು ಅದೂ ಇದೂ ಎಲ್ಲ ಮಾತಾಡಿ ಮಾತಿನ ಬರ ತೀರಿಸಿಕೊಂಡರು. ವಸುಂಧರಾ ತನ್ನಲ್ಲಿ ಪ್ರಸ್ತಾಪಿಸಬೇಕಾದ ಮುಖ್ಯ ವಿಷಯ ಪ್ರಸ್ತಾಪಿಸಲು ಇದು ಸ್ಥಳವಲ್ಲ ಎಂಬುದನ್ನು ಅರಿತ ಹೇಮಾ– "ನಾನು ವಸುಂಧರಾಳನ್ನು ಸ್ವಲ್ಪ ದೂರ ಕಳಿಸಿಕೊಟ್ಟು ಬರ್ತೀನಿ" ಎಂದು ಅಮ್ಮನಿಗೆ ಹೇಳಿ ಹೋಗಿ ಪಾರ್ಕ್ ಕಡೆ ಹೊರಟಳು. ಪರೀಕ್ಷೆಯ ಕೊನೆಯ ದಿನ ಎನ್.ಎಸ್. ಮೇಷ್ಟ್ರು ತನ್ನನ್ನು ಭೇಟಿಯಾಗಿ ಹೇಳಿದ ಮಾತುಗಳನ್ನು ತಿಳಿಸಿದಳು. "ನನಗೆ ಅಮ್ಮನ ಹತ್ತಿರ ಹೇಗೆ ಇದನ್ನು ಪ್ರಸ್ತಾಪಿಸುವುದು ಅಂತ ತೋಚುತ್ತಿಲ್ಲ. ಯಾರ ಒಪ್ಪಿಗೆಯನ್ನೂ ಪಡೆಯದೆ ಅಥವಾ ಅವರಿಗೆ ತಿಳಿಸದೆಯೆ ನಾವು ಸಂಸಾರಸ್ಥರಾಗುವುದು ನಮ್ಮಿಬ್ಬರಿಗೂ ಇಷ್ಟವಿಲ್ಲ. ಹಾಗಾಗಿ ಈ ವಿಷಯದಲ್ಲಿ ನೀನೇ ಸಹಾಯ ಮಾಡಬೇಕು" ಎಂದು ಕೇಳಿದಳು. ಅದಕ್ಕೆ ಹೇಮಾ ಒಪ್ಪಿ ನಿಮ್ಮ ಅಪ್ಪ ಮನೆಯಲ್ಲಿ ಇಲ್ಲದೆ ಇರುವ ದಿನ ಅಂದರೆ ಅವರು ಎಲ್ಲಾದರೂ ಊರಿಗೆ ಹೋದ ಸಂದರ್ಭ ನೋಡಿ ನನಗೆ ತಿಳಿಸು. ನಿಮ್ಮ ಅಮ್ಮನ ಹತ್ತಿರ ಬಂದು ನಾನು ವಿಷಯ ಪ್ರಸ್ತಾಪಿಸುತ್ತೇನೆ. ನೀನು ಅದರ ಸಂದರ್ಭ, ನಿನ್ನ ನಿರ್ಧಾರ ಎಲ್ಲ ತಿಳಿಸಿ ಹೇಳು. ನಿಮ್ಮ ತಂದೆಯ ಹತ್ತಿರ ನಿಮ್ಮ ಅಮ್ಮನೇ ನಂತರ ಪ್ರಸ್ತಾಪಿಸಲಿ" ಎಂದು ಹೇಳಿದಳು. ಅದರಂತೆ ಆಚೆಗೆ ನಾಲ್ಕೈದು ದಿನ ಕಳೆದ ಮೇಲೆ ಅವರ ತಂದೆ ಹತ್ತಿರದ ಒಂದು ಊರಿಗೆ ಯಾವುದೋ ಅಪರ ಕರ್ಮ ಮಾಡಿಸಲು ಹೋದರು. ಬರುವುದು ನಾಲ್ಕೈದು ದಿನಗಳಾಗುತ್ತವೆ ಎಂದು ಹೇಳಿದ್ದರು. ಇದೇ ಸರಿಯಾದ ಸಮಯ ಎಂದು ವಸುಂಧರಾ ತನ್ನ ತಮ್ಮನಿಗೆ

ಸೈಕಲ್ ತೆಗೆದುಕೊಂಡು ಹೋಗಿ ಹೇಮಾಳಿಗೆ ಮನೆಗೆ ಬಂದು ಹೋಗಲು ನಾನು ಹೇಳಿದೆನೆಂದು ತಿಳಿಸು ಎಂದು ಕಳಿಸಿದಳು. ಹೇಮಾ ನಾಲ್ಕು ಗಂಟೆಯ ಸುಮಾರಿಗೆ ಬಂದಳು. ಆಗ ಮನೆಯಲ್ಲಿ ತಾಯಿ ಮಗಳು ಇಬ್ಬರೇ ಇದ್ದರು.

ಹೇಮಾಳನ್ನು ನೋಡಿ ಸಾವಿತ್ರಮ್ಮನವರಿಗೆ ಖುಶಿಯಾಯಿತು. "ಏನಮ್ಮ ಪರೀಕ್ಷೆಯಲ್ಲಿ ಹೇಗೆ ಮಾಡಿದ್ದೀ. ಪರೀಕ್ಷೆ ಮುಗಿದ ಮೇಲೆ ನೀನು ಈ ಕಡೆ ಬರಲೇ ಇಲ್ಲ" ಎಂದರು. "ಚೆನ್ನಾಗಿ ಮಾಡಿದ್ದೀನಿ ಆಂಟಿ. ರಿಸಲ್ಟ್ ಏನಾಗುತ್ತೋ ನೋಡಬೇಕು" ಅಂದಳು. ರಿಸಲ್ಟ್ ಏನಾಗೋದೇನು. ನೀನು ಫಸ್ಟ್ ಕ್ಲಾಸ್ ಬಂದೇ ಬರುತ್ತೀಯಾ. ಹೌದು ಫಸ್ಟ್ ಕ್ಲಾಸ್ ಬಂದರೆ ನಿಮ್ಮ ಮನೆಯಲ್ಲಿ ಮುಂದಕ್ಕೆ ಓದಿಸುತ್ತಾರೇನೆ" ಎಂದು ಕೇಳಿದರು. "ಫಸ್ಟ್ ಕ್ಲಾಸ್ ಬರಲಿ ತಾಳಿ ನೋಡೋಣ. ಮನೆಯವರಿಗೆ ಬೇರೆ ಊರಿಗೆ ಕಳಿಸಿ ಓದಿಸುವುದು ಕಷ್ಟವಾಗುತ್ತೆ. ಇಷ್ಟವೂ ಇದ್ದಂತಿಲ್ಲ. ಆದರೆ ಫಸ್ಟ್ ಕ್ಲಾಸ್ ಬಂದರೆ ನನ್ನನ್ನು ಮುಂದಕ್ಕೆ ಎಂ.ಎ. ಗೆ ಕಳಿಸಲೇಬೇಕು ಅಂತ ನಾನು ಹಠ ಹಿಡಿದಿದ್ದೀನಿ. ಒಂದು ವೇಳೆ ನಾನು ಎಂ.ಎ. ಗೆ ಹೋದರೆ ವಸುಂಧರಾನೂ ಕಳಿಸುತ್ತೀರಾ ಆಂಟಿ?" ಎಂದು ಕೇಳಿದಳು. ಅದಕ್ಕೆ ಅವರಮ್ಮ "ಮೊದಲನೇದಾಗಿ ತನ್ನದು ಫಸ್ಟ್ ಕ್ಲಾಸ್ ಖಂಡಿತಾ ಬರಲ್ಲ ಅಂತ ವಸುಂಧರಾ ಪರೀಕ್ಷೆ ಮುಗಿದ ಕೊನೇ ದಿವಸಾನೇ ಹೇಳಿಬಿಟ್ಟಳು. ಅದೇನೋ ಅವಳಿಗೆ ಪರೀಕ್ಷೇಲಿ ಚೆನ್ನಾಗಿ ಮಾಡಕ್ಕೆ ಆಗಲಿಲ್ಲವಂತೆ. ಒಂದು ವೇಳೆ ಫಸ್ಟ್ ಕ್ಲಾಸ್ ಬಂದರೂ ನಾವು ಮುಂದಕ್ಕೆ ಕಳಿಸಕ್ಕಾಗಲ್ಲ ಕಣೇ ಹುಡುಗಿ" ಅಂದರು. "ಹಾಗಾದರೆ ಮನೇಲಿ ಕೂಡಿಸಿಕೊಂಡು ಏನು ಮಾಡ್ತೀರಿ ಆಂಟಿ. ಮದುವೆ ಮಾಡ್ತೀರಾ ಹೇಗೆ?" ಎಂದು ಮೆಲ್ಲಗೆ ಪೀಠಿಕೆ ಹಾಕಿದಳು. "ಹೂನಮ್ಮ ಅದೇ ಮಾಡೋದು. ಇನ್ನೇನು. ಆದರೆ ಅದಕ್ಕೂ ಕಾಲ ಕೂಡಿಬರಬೇಕಲ್ಲಾ. ಒಳ್ಳೆ ಕಡೆ ಸಂಬಂಧ ಕೂಡಿ ಬಂದರೆ ಮಾಡೇ ಬಿಡೋಣ ಅಂತ ಹೇಳಿದ್ದಾರೆ ನಮ್ಮ ಯಜಮಾನರು". ಎಂದರು. ಅವರ ಮಾತನ್ನು ಬಳಸಿಕೊಂಡು "ಒಳ್ಳೇ ಕಡೆ ಅಂದರೆ ಯಾವ ಥರ ಆಂಟಿ." ಎಂದು ಪ್ರಶ್ನಿಸಿದಳು. "ಇದೇನೇ ಬೆಳಗಾದರೆ ನೀನೂ ಮದುವೆ ಆಗೋ ಹುಡುಗಿ. ಹಾಗೆ ಕೇಳ್ತೀ. ಒಳ್ಳೆ ವಿದ್ಯಾವಂತನಾಗಿದ್ದು ಒಂದು ಒಳ್ಳೆ ಕೆಲಸದಲ್ಲಿ ಇರೋನಾಗಿರಬೇಕು ಅನ್ನೋದು ತಾನೆ ಎಲ್ಲ ಅಪ್ಪ ಅಮ್ಮಂದಿರ ಆಸೆ" ಎಂದರು. ಹೇಮಾ – "ಅಷ್ಟೇ ಅಲ್ಲ ಆಂಟಿ. ಅವನು ನೋಡೋಕೂ ತುಂಬಾ ಚೆನ್ನಾಗಿರಬೇಕು ಮತ್ತು ಒಳ್ಳೇ ಗುಣವಂತನಾಗಿರಬೇಕು. ನಮ್ಮ ವಸೂ ನೋಡಿ ಹೇಗಿದ್ದಾಳೆ. ಒಳ್ಳೇ ದಸರಾ ಬೊಂಬೆ ಥರಾ ಮುದ್ದು ಮುದ್ದಾದ ಚೆಂದುಳ್ಳಿ ಚೆಲುವೆ. ಇಂಥವಳನ್ನು ಒಳ್ಳೇ ಕೆಲಸದಲ್ಲಿದ್ದಾನೆ ಅನ್ನುವ ಒಂದೇ ಕಾರಣಕ್ಕೆ ಎಂಥೆಂಥೋರಿಗೋ ಕೊಡೋದು ಸರಿಹೋಗಲ್ಲಾ ಆಂಟಿ. ನೀವು ಒಂದು ಹತ್ತು ನಿಮಿಷ ನನ್ನ ಮಾತನ್ನು ದಯವಿಟ್ಟು ಸುಮ್ಮನೆ ಕೇಳಿಸಿಕೊಳ್ಳಿ." ಎಂದು ಹೇಳಿ ಶ್ರೀನಿವಾಸ್ ಮತ್ತು ವಸುಂಧರಾ ಪರಸ್ಪರ ಪ್ರೀತಿಸುತ್ತಿರುವ ಬಗ್ಗೆ ಸೂಕ್ಷ್ಮವಾಗಿ ಹೇಳಿದಳು. "ಎನ್.ಎಸ್. ಮೇಷ್ಟ್ರು ಅಂತ ನಾವು ಕರೆಯುವ ಅವರು ಜಾತಿಯಿಂದ ನಿಮ್ಮೋರಲ್ಲಾ ಅನ್ನೋದೊಂದು ಬಿಟ್ಟರೆ ಅವರಲ್ಲಿ ಯಾವುದೊಂದು ಕೊರತೇನೂ ಇಲ್ಲ. ತುಂಬಾ ಬುದ್ಧಿವಂತರು. ನೋಡೋದಕ್ಕೆ ತುಂಬಾ ಚೆನ್ನಾಗಿದ್ದಾರೆ.

ವಸುಂಧರಾಳಿಗೆ ಅನುರೂಪನಾದ ವರ. ಅದಕ್ಕಿಂತ ಹೆಚ್ಚಾಗಿ ಒಳ್ಳೇ ಗುಣವಂತರು. ಅವರಿಗೆ ಅವರ ಜಾತಿಯಲ್ಲಿ, ಬಯಸಿದರೆ ಅವರ ಬಂಧುಗಳಲ್ಲೇ ಲಕ್ಷಣವಾಗಿರುವ ಓದಿದ ಶ್ರೀಮಂತ ಹೆಣ್ಣುಗಳಿಗೇನೂ ಕೊರತೆ ಇಲ್ಲ. ಆದರೆ ಅವರಿಗೇನೋ ಇವಳ ಮೇಲೆ ಮನಸ್ಸಾಗಿದೆ. ವಸೂಗೂ ಅವರು ತುಂಬ ಮನಸ್ಸಿಗೆ ಬಂದಿದ್ದಾರೆ. ನೀವಿಬ್ಬರೂ ದೊಡ್ಡ ಮನಸ್ಸು ಮಾಡಿದರೆ ಅವರು ಸಂಸಾರದಲ್ಲಿ ನೆಲೆ ನಿಲ್ಲಬಹುದು." ಎಂದಳು. ಹೇಮಾ ಆಮೇಲೂ ಸ್ವಲ್ಪ ಹೊತ್ತು ಕುಳಿತಿದ್ದು ಹೊರಟಳು. ಹೋಗುವಾಗ– "ವಸುಂಧರಾಳನ್ನು ಏನೂ ಅಂದು ಆಡಿ ಮಾಡಬೇಡಿ ಆಂಟಿ. ಅವಳು ತುಂಬಾ ಸೂಕ್ಷ್ಮ ಮನಸ್ಸಿನ ಹುಡುಗಿ. ನೀವು ಏನೇನೇನೋ ಲೆಕ್ಕ ಹಾಕಿಬಿಡಬೇಡಿ. ನಿಮ್ಮ ಮನೆಯ ಮರ್ಯಾದೆ ತೆಗೆಯುವಂಥ ಕೆಲಸವನ್ನೇನೂ ಅವಳು ಮಾಡಿಲ್ಲ. ಇಷ್ಟು ಒಳ್ಳೇ ಲಕ್ಷಣವಾಗಿರುವ, ಗುಣವಂತೆಯೂ ಬುದ್ಧಿವಂತೆಯೂ ಆದ ಅವಳಿಗೆ ಎನ್.ಎಸ್. ಮೇಷ್ಟ್ರು ತಕ್ಕ ಜೊತೆ ಆಗ್ತಾರೆ ಅನ್ನುವ ಕಾರಣಕ್ಕೆ ಇದರ ಬಗ್ಗೆ ತಿಳಿದಿದ್ದ ನಾನು ನಿಮ್ಮ ಹತ್ತಿರ ಹೇಳುವ ಧೈರ್ಯ ಮಾಡಿದ್ದೀನಿ. ಎನ್.ಎಸ್. ಮೇಷ್ಟರ ತಂದೆ ಒಪ್ಪಿದ್ದರೂ ತಾಯಿ ಇನ್ನೂ ಒಪ್ಪಿಗೆ ಕೊಟ್ಟಿಲ್ಲ. ಆದರೆ ಒಪ್ಪಿಸುತ್ತಾರಂತೆ. ಈಗ ನಿಮ್ಮ ಕಡೆಯಿಂದ ನಿಮ್ಮ ಮಗಳ ಭವಿಷ್ಯ ಹಾಳಾಗಬಾರದು. ಯೋಚನೆ ಮಾಡಿನೋಡಿ. ನಿಮ್ಮ ಯಜಮಾನರ ಹತ್ತಿರ ನಿಧಾನವಾಗಿ ನೀವೇ ಸಮಯ ನೊಡಿಕೊಂಡು ಪ್ರಸ್ತಾಪಿಸಿ." ಎಂದು ಹೇಳಿ ಹೊರಟಳು.

ಹೇಮಾಳೇನೋ ಹೊರಟುಹೋದಳು. ಹೇಮಾ ಹೇಳಿದ್ದು ಕೇಳಿ ಸಾವಿತ್ರಮ್ಮನವರಿಗೆ ಸಿಡಿಲು ಹೊಡೆದಂತಾಯಿತು. ತಮ್ಮದು ಹೇಳಿಕೇಳಿ ವೈದಿಕರ ಮನೆತನ. ಇದಕ್ಕೆ ನಾವು ಒಪ್ಪಿಗೆ ಕೊಡಲು ಸಾಧ್ಯವೇ ಇಲ್ಲ. ಬಂಧು ಬಳಗದಲ್ಲಿ ನಮ್ಮ ಮರ್ಯಾದೆ ಗತಿ ಏನು ಅನ್ನುವ ಪ್ರಶ್ನೆ ಬೃಹದಾಕಾರವಾಗಿ ನಿಂತಿತು. ಆಗ ಅವರಿಗೆ ತಮ್ಮ ಮಗಳು ಪರೀಕ್ಷೆಗೆ ಏಕೆ ಮನಸ್ಸುಕೊಟ್ಟು ಓದಕ್ಕಾಗಲಿಲ್ಲ ಮತು ಪರೀಕ್ಷೆಯಲ್ಲಿ ಏತಕ್ಕೆ ಚೆನ್ನಾಗಿ ಮಾಡಕ್ಕಾಗಲಿಲ್ಲ ಅನ್ನುವುದರ ಅರ್ಥ ಆಗತೊಡಗಿತು. ನೋಡಲು ಏನೂ ಗೊತ್ತಿಲ್ಲದಂತೆ ಮುಗ್ಧವಾಗಿರುತ್ತಿದ್ದ ಮಗಳು ಇಷ್ಟೆಲ್ಲಾ ಮುಂದುವರಿದಿದ್ದಾಳಾ ಎಂದು ಅವರಿಗೆ ತುಂಬಾ ಸೋಜಿಗವೇ ಆಯಿತು. ಆದರೆ ಈಗ್ಗೆ ಕೆಲವು ದಿನಗಳಿಂದ ಅವಳು ಮೊದಲಿನಷ್ಟು ಗೆಲುವಿನಿಂದಿರಲಿಲ್ಲವೆಂಬುದನ್ನು ಗಮನಿಸಿದ್ದರು. ಪರೀಕ್ಷೆಯಲ್ಲಿ ಚೆನ್ನಾಗಿ ಮಾಡದೆ ಇದ್ದುದನ್ನೇ ಮನಸ್ಸಿಗೆ ಹಚ್ಚಿಕೊಂಡು ಹಾಗಾಗಿರಬೇಕು. ನಾಲ್ಕು ದಿನ ಕಳೆದರೆ ಸರಿಹೋಗುತ್ತೆ ಅಂದುಕೊಂಡು ಅವರು ಏನನ್ನೂ ವಿಚಾರಿಸಲು ಹೋಗಿರಲಿಲ್ಲ. ಆದರೆ ಈಗ ನೊಡಿದರೆ ಮಗಳು ಬಹಳಷ್ಟು ಮುಂದುವರಿದಿರುವುದು ಹೇಮಾಳ ಮಾತಿನಿಂದ ಸ್ಪಷ್ಟವಾಯಿತು. ಆದರೆ ಹೇಮಾ ಕೊನೆಯಲ್ಲಿ ಹೇಳಿದ– 'ನಿಮ್ಮ ಮನೆಯ ಮರ್ಯಾದೆ ತೆಗೆಯುವಂಥದೇನನ್ನೂ ಅವಳು ಮಾಡಿಲ್ಲ' ಎಂಬ ಮಾತಿನಿಂದ ಸ್ವಲ್ಪ ಧೈರ್ಯ ಬಂತು. ವಸುಂಧರಾಗೆ ಈಗಲೇ ಏನೂ ಹೇಳೋದು ಬೇಡ. ನಾಳೆ ಈ ಬಗ್ಗೆ ಮಾತಾಡಿದರಾಯಿತು ಎಂದು ಸುಮ್ಮನಾದರು. ರಾತ್ರಿಯೆಲ್ಲಾ ನಿದ್ರೆಯಿಲ್ಲದೆ ಇದೇ ಚಿಂತೆಯಲ್ಲೇ ಹೊರಳಾಡುತ್ತ ಕಳೆದರು. ಮಗಳಿಗೆ ಅಮ್ಮನ ಚಿಂತೆ ಅರ್ಥವಾಯಿತು.

ಮಾರನೇ ದಿನ ಮಗ ಮನೆಯಿಂದ ಹೊರಕ್ಕೆ ಹೋದ ಮೇಲೆ ಸಾವಿತ್ರಮ್ಮನವರು

ಕಣ್ಣೀರು ಸುರಿಸುತ್ತ ಮಗಳನ್ನು ಕುರಿತು– "ಯಾಕೆ ಹೀಗೆ ನೀನು ನಾವು ಮದುವೆ ಮಾಡೋದಿಲ್ಲ ಅಥವಾ ಮಾಡೋಕೆ ಶಕ್ತಿಯಿಲ್ಲ ಅಂತ ತೀರ್ಮಾನಿಸಿ ನೀನೇ ನಿನ್ನ ಮದುವೆ ತೀರ್ಮಾನ ತೆಗೆದುಕೊಂಡುಬಿಟ್ಟೆಯಾ?" ಎಂದು ತುಂಬಾ ನೊಂದುಕೊಂಡು ಕೇಳಿದರು. ಅದಕ್ಕೆ ವಸುಂಧರಾ "ಹಾಗಂತ ಅಲ್ಲಮ್ಮ. ಮದುವೆಯ ಬಗೆಗಿನ ಯೋಚನೆ ಬರಲಿಲ್ಲ. ಆದರೆ ಎನ್.ಎಸ್. ಮೇಷ್ಟರ ವ್ಯಕ್ತಿತ್ವ ಗುಣ ಅವರ ಬುದ್ಧಿವಂತಿಕೆಗಳು ನನ್ನನ್ನು ಅವರತ್ತ ಸೆಳೆದುವು. ಈಗ ಆ ಕಡೆಯಿಂದ ಹೊರಕ್ಕೆ ಬರಲಾರದಂತಾಗಿದ್ದೇನೆ. ಅದು ನಿನಗೆ ಹೇಳಿದರೆ ಅರ್ಥವಾಗಲ್ಲ. ಇನ್ನು ಹೆಚ್ಚಿಗೆ ಏನೂ ಕೇಳಬೇಡ. ನೀನು ಕಣ್ಣೀರು ಹಾಕಬೇಡ. ಕಣ್ಣೀರು ಹಾಕೋಂಥ ಕೆಲಸಾನೂ ನಾನು ಏನೂ ಮಾಡಿಲ್ಲ. ಒಂದು ವೇಳೆ ನಿಮಗೆ ಇಷ್ಟವಿಲ್ಲದೆ ಹೋದರೆ ನಾನು ಈ ಮದುವೆ ನಡೆಯಲ್ಲ ಅಂತ ಹೇಳಿಬಿಡ್ತೀನಿ. ಆದರೆ ಬೇರೆ ಇನ್ನು ಯಾರ ಜೊತೆಗೂ ನಾನು ಮದುವೆ ಆಗಲ್ಲ. ನಿಮಗೆ ಮತ್ತೆ ಗಂಡು ಹುಡುಕುವ ಕಷ್ಟವೇ ಬೇಡ" ಎಂದು ಕಡ್ಡಿ ಎರಡು ತುಂಡುಮಾಡಿದಂತೆ ಹೇಳಿಬಿಟ್ಟಳು.

ಇನ್ನು ಅಪ್ಪ ಬಂದಮೇಲೆ ಏನೇನು ಮಾತು ಕೇಳಬೇಕಾಗುತ್ತೋ ಎಂದು ವಸುಂಧರಾ ಚಿಂತೆಗೀಡಾದಳು. ಹೇಗೂ ಮುಂದಕ್ಕೆ ಹೊರಟಾಗಿದೆ. ಮತ್ತೆ ಹಿಂತಿರುಗಿ ನೋಡುವುದು ಬೇಡವೆಂದು ತೀರ್ಮಾನಿಸಿದಳು. ಈ ಮಧ್ಯೆ ಒಂದು ವಾರದ ನಂತರ ತನ್ನನ್ನು ಭೇಟಿಮಾಡಲು ತಿಳಿಸಿದ ಶ್ರೀನಿವಾಸ್ ಮಾತು ನೆನಪಾಯಿತು. ಅದರ ಜೊತೆಗೇ ಅಲ್ಲಿ ಅವರ ಅಮ್ಮನನ್ನು ಒಪ್ಪಿಸಲು ಅವರಿಗೆ ಸಾಧ್ಯವಾಯಿತೋ ಇಲ್ಲವೋ ಎಂಬ ಚಿಂತೆಯೂ ಸೇರಿಕೊಂಡಿತು. ಒಂದು ವೇಳೆ ಅವರು ಒಪ್ಪದಿದ್ದರೆ ಇವರು ಏನು ತೀರ್ಮಾನ ತೆಗೆದುಕೊಳ್ಳಬಹುದು? ಧೈರ್ಯ ಮಾಡಿ ತಾವಿಬ್ಬರೇ ರಿಜಿಸ್ಟರ್ ಮದುವೆ ಮಾಡಿಕೊಂಡುಬಿಡುವುದೆ? ಹೀಗೆ ಮನಸ್ಸು ನಾನಾ ಯೋಚನೆಗಳಿಂದ ಭಾರವಾಯಿತು.

* * *

ನರಸಿಂಹ ಜೋಯಿಸರು ಊರಿನಿಂದ ಬೆಳಿಗ್ಗೆ ಬೆಳಿಗ್ಗೆಯೇ ಹಿಂತಿರುಗಿದರು. ವಾಸ್ತವವಾಗಿ ಅವರು ಹಿಂದಿನ ದಿನ ಸಂಜೆಯೇ ಬರಬೇಕಿತ್ತು. ಆದರೆ ಹೊರಡುವುದು ಸ್ವಲ್ಪ ತಡವಾದ್ದರಿಂದ ಬಸ್ ತಪ್ಪಿಹೋಗಿ ಮರುದಿನ ಬೆಳಿಗ್ಗೆ ಮೊದಲ ಬಸ್ಸಿಗೇ ಹೊರಟು ಒಂಬತ್ತು ಗಂಟೆಯ ಹೊತ್ತಿಗೆಲ್ಲಾ ಮನೆಗೆ ಬಂದಿದ್ದರು. ಶಾಲೆಗೆ ಹೋಗುವ ಗಡಿಬಿಡಿಯಲ್ಲಿ ಹೆಂಡತಿಯ ಹತ್ತಿರ ಬೇರೆ ಇನ್ಯಾವ ವಿಷಯವನ್ನೂ ಮಾತಾಡಲಿಲ್ಲ. ಮಗಳು ಧಾವಂತವಿಲ್ಲದೆ ಇರುವುದನ್ನು ನೋಡಿ ಪರೀಕ್ಷೆ ಮುಗಿದಿರಬೇಕೆಂದು ಭಾವಿಸಿದರು. ಸಂಜೆ ಬಂದಾಗ ಪರೀಕ್ಷೆಯ ಬಗ್ಗೆ ಕೇಳಿದರಾಯಿತೆಂದು ಕೊಂಡರು. ಮಗಳು ಇದುವರೆಗಿನ ಎಲ್ಲ ಪರೀಕ್ಷೆಗಳಲ್ಲಿ ಚೆನ್ನಾಗಿಯೇ ಪಾಸಾಗುತ್ತ ಬಂದಿದ್ದರಿಂದ ಜೋಯಿಸರಿಗೆ ಆ ವಿಷಯದಲ್ಲಿ ಚಿಂತೆಗೆ ಕಾರಣವೇ ಇರಲಿಲ್ಲ. ಆದರೂ ವಾಡಿಕೆಯ ಮೇರೆಗೆ ಪರೀಕ್ಷೆಯಲ್ಲಿ ಹೇಗೆ ಮಾಡಿದ್ದೀ ಎಂದು ಕೇಳುವುದನ್ನು ಮರೆಯುತ್ತಿರಲಿಲ್ಲ.

ಶನಿವಾರ ಭಾನುವಾರ ಸೇರಿಸಿಕೊಂಡು ಶಾಲೆಗೆ ಹೋಗದೆ ಐದು ದಿನಗಳಾಗಿದ್ದರಿಂದ ಊರಿನಿಂದ ಹೊರಡುವಾಗಲೇ ಆತಿಥೇಯರ ಮನೆಯಲ್ಲೇ ಸ್ನಾನ ಮುಗಿಸಿಕೊಂಡು ಬಂದಿದ್ದರಿಂದ ಬಂದ ಕೂಡಲೇ ಕೈಕಾಲು ತೊಳೆದುಕೊಂಡು ದೇವರ ಪೂಜೆಯ ಶಾಸ್ತ್ರ ಮುಗಿಸಿಕೊಂಡು ಹೆಂಡತಿ ತಂದು ಕೊಟ್ಟ ತಿಂಡಿ ತಿಂದು ಹೊರಟುಬಿಟ್ಟರು. ಸಂಜೆ ಮನೆಗೆ ಬಂದ ಮೇಲೆ ಕಾಫಿ ಕುಡಿದು ಬೆಳಿಗ್ಗೆ ಓದಿರದೆ ಇದ್ದ ಪೇಪರ್ ಓದುತ್ತ ಕುಳಿತಿದ್ದರು. ವಸುಂಧರಾ ಹೇಮಾಳ ಮನೆಗೆ ಹೋಗಿ ಬರುವುದಾಗಿ ಹೇಳಿ ಹೋಗಿದ್ದಳು. ಇದೇ ಸಮಯವೆಂದುಕೊಂಡು ಸಾವಿತ್ರಮ್ಮನವರು ಹೆದರುತ್ತಲೇ ವಿಷಯವನ್ನು ಗಂಡನ ಕಿವಿಗೆ ಹಾಕಿದರು. ಜೋಯಿಸರು ಗರಬಡಿದವರಂತೆ ಒಂದೈದು ನಿಮಿಷ ಹೆಂಡತಿಯ ಮುಖವನ್ನೇ ನೋಡುತ್ತಿದ್ದು ಆ ಮೇಲೆ ರೌದ್ರಾವತಾರ ತಾಳಿದರು. "ಇದು ನೀನು ಅವಳಿಗೆ ಕೊಟ್ಟುಕೊಂಡು ಬಂದ ಅತಿಯಾದ ಸಲುಗೆಯಿಂದಲೇ ಅವಳು ಈ ಮಟ್ಟಕ್ಕೆ ಬಂದಿರೋದು. ಮಗಳನ್ನು ನೀನು ಕಟ್ಟಿನಲ್ಲಿ ಬೆಳೆಸಲಿಲ್ಲ. ಹೆಣ್ಣು ಮಗಳ ಮೇಲೆ ನಾನು ಸಿಟ್ಟು ಮಾಡಿಕೊಳ್ಳಬಾರದು ಅನ್ನುವ ಕಾರಣಕ್ಕೆ ಯಾರ ಮೇಲೆ ಕೋಪ ಮಾಡಿಕೊಂಡರೂ ಅವಳ ಮೇಲೆ ಯಾವತ್ತೂ ಕೋಪ ತೋರಿಸುತ್ತಿರಲಿಲ್ಲ. ಇದೆಲ್ಲದರ ಫಲವನ್ನು ಈ ಹೊತ್ತು ನಾವು ಅನುಭವಿಸಬೇಕಾಗಿ ಬಂದಿದೆ. ಹೇಳಿಕೇಳಿ ನಮ್ಮದು ಪ್ರಸಿದ್ಧವಾದ ವೈದಿಕ ಮನೆತನ. ಅದರ ಪ್ರಜ್ಞೆನೇ ಇಲ್ಲದೆ ಇವಳು ಆ ಒಕ್ಕಲಿಗರ ಹುಡುಗನನ್ನು ಕಟ್ಟಿಕೊಳ್ಳುವ ತೀರ್ಮಾನ ಹೇಗೆ ಮಾಡಿದಳು. ನನಗೆ ಎಂಥ ಹೆಸರಿದೆ. ಈ ವಿಷಯ ಗೊತ್ತಾಯಿತು ಅಂದರೆ ನಾವುಗಳು ಮುಖ ಎತ್ತಿ ತಿರುಗಾಡಕ್ಕೆ ಆಗುತ್ತಾ? ನಮ್ಮ ಪಿತೃಗಳನ್ನೆಲಾ ಏಳೇಳು ನರಕದಲ್ಲಿ ಮಳುಗಿಸೋ ಕೆಲಸ ಇದು" ಎಂದೆಲ್ಲಾ ವಾಚಾಮಗೋಚರವಾಗಿ ಆಡುತ್ತಾ ಹೋದರು.

ಸಾವಿತ್ರಮ್ಮನವರು – "ಇದು ಅವಳ ಫ್ರೆಂಡು ಹೇಮಾಳನ್ನು ಬಿಟ್ಟರೆ ಬೇರೆ ಯಾರಿಗೂ ಗೊತ್ತಿಲ್ಲ. ನೀವಿಬ್ಬರೂ ಒಪ್ಪದೆ ನಾನು ಮುಂದುವರಿಯಲ್ಲ ಅಂತ ಹೇಳಿದ್ದಾಳೆ. ಅವಳು ಮನೆಗೆ ಬಂದ ಮೇಲೆ ಸಮಾಧಾನವಾಗಿ ಅವಳಿಗೆ ತಿಳಿಯ ಹೇಳಿ. ಏಕ್‌ದಂ ಅವಳ ಮೇಲೆ ರೇಗಾಡಬೇಡಿ. ಒಂದು ಹೋಗಿ ಇನ್ನೊಂದಾದೀತು. ಹೆಣ್ಣುಮಕ್ಕಳ ಮನಸ್ಸು ತುಂಬಾ ಸೂಕ್ಷ್ಮ." ಎಂದು ಹೇಳಿದ ಮೇಲೆ ಜೋಯಿಸರು ಸ್ವಲ್ಪ ತಣ್ಣಗಾದರು. ಆದರೂ ಮತ್ತೆ ಮತ್ತೆ ನಿಟ್ಟುಸಿರು ಬಿಡುವುದು, ಲೊಚಗುಟ್ಟುವುದು ನಿಲ್ಲಲೇ ಇಲ್ಲ.

ವಸುಂಧರಾ ಹೇಮಾಳ ಮನೆಗೆ ಹೋಗಿದ್ದು ಕಾಲೇಜಿಗೇನಾದರೂ ಅವಳು ಹೋಗಿದ್ದಳೆ, ಎನ್.ಎಸ್. ಮೇಷ್ಟರನ್ನೇನಾದರೂ ನೋಡಿದಳೆ ಎಂದು ಕೇಳಲು. ವಸುಂಧರಾಳ ಪರೀಕ್ಷೆ ಮುಗಿದಿದ್ದರೂ ಹೇಮಾಳ ಸಮಾಜ ಶಾಸ್ತ್ರದ ಒಂದು ಪೇಪರ್‌ನ ಪರೀಕ್ಷೆ ಇನ್ನೂ ಆಗಿರಲಿಲ್ಲ. ಇವಳು ಹೋಗುವ ಎರಡು ದಿನಕ್ಕೆ ಮುಂಚೆ ಅದರ ಪರೀಕ್ಷೆ ಇತ್ತು. ಪರೀಕ್ಷೆ ಮುಗಿದ ಮರುದಿನವೇ ಹೋಗಬೇಕೆಂದು ಅಂದುಕೊಂಡಿದ್ದರೂ ಆ ಮೇಲೆ ಒಂದು ದಿವಸ ರೆಸ್ಟ್ ತಗೆದುಕೊಂಡು ನಿರಾಳವಾದ ಮೇಲೆ ಹೋಗುವುದೆಂದು ತೀರ್ಮಾನಿಸಿ ಅದರಂತೆ ಇಂದು ಹೋಗಿದ್ದಳು. ವಸುಂಧರಾಳ ಪ್ರಶ್ನೆಗೆ– "ಹೌದು

ಎನ್.ಎಸ್. ಮೇಷ್ಟರು ಸಿಕ್ಕಿದ್ದರು. ಇನ್ನೂ ಮೂರು ನಾಲ್ಕು ದಿನ ಅವರಿಗೆ ಪರೀಕ್ಷೆಯ ಕೆಲಸ ಇದೆಯಂತೆ. ನಿನ್ನನ್ನು ಕೇಳಿದರು. ನಿಮ್ಮನ್ನು ಭೇಟಿ ಮಾಡಲು ಬರಬಹುದು ಸರ್ ಎಂದು ಹೇಳಿದೆ. ಆದರೆ ಏಕೋ ಅಷ್ಟು ಗೆಲುವಿನಿಂದ ಇದ್ದಂತಿರಲಿಲ್ಲ. ವಿರಹದ ನೋವೇನೋ" ಎಂದು ಎಂದಿನ ತನ್ನ ಮಾತಿನ ಬಾಣವನ್ನು ಬಿಟ್ಟಳು. "ಆಯಿತು ಬರುತ್ತೀನಿ. ಈ ಹೊತ್ತು ಊರಿಗೆ ಹೋದ ಅಪ್ಪ ಬಂದಿದ್ದಾರೆ. ಇನ್ನು ಮನೆಗೆ ಹೋದ ಮೇಲೆ ಅಮ್ಮನಿಂದ ವಿಷಯ ತಿಳಿದ ಅವರನ್ನು ಹೇಗೆ ಎದುರಿಸುವುದು ಅಂತ ಚಿಂತೆಯಾಗಿದೆ" ಎಂದಳು. ಹೇಮಾ– "ಈ ಬಗ್ಗೆ ಈಗಲೇ ನಿನ್ನ ಮನಸ್ಸನ್ನು ಸ್ವಲ್ಪ ಸಿದ್ಧ ಮಾಡಿಕೋ. ಅವರ ಮಾತಿಗೆ ಎದುರು ವಾದಿಸಲು ಹೋಗಬೇಡ. ಅವರು ಹತ್ತು ಮಾತಾಡಿದರೆ ನೀನು ಒಂದು ಮಾತಾಡು. ಅವರ ಪ್ರಬಲವಾದ ವಿರೋಧ ಇದ್ದೇ ಇರುತ್ತೆ. ಅದಕ್ಕೆ ಸೊಪ್ಪು ಹಾಕದೆ ಹೆಜ್ಜೆ ಮುಂದಿಡುವ ನಿರ್ಧಾರ ನಿನ್ನದಾಗಿದ್ದರೆ ಮಾತ್ರ ಈ ವಿಷಯದಲ್ಲಿ ನೀನು ಯಶಸ್ವಿಯಾಗುತ್ತೀ." ಎಂದು ಹೇಳಿದಳು.

ನರಸಿಂಹ ಜೋಯಿಸರು ಯೋಚಿಸಿ ಸುಸ್ತಾದರು. ಇಂಥ ವಿಚಾರ ಇವಳ ತಲೆಗೆ ಹೇಗೆ ಹೊಕ್ಕಿತು? ಒಬ್ಬಳೇ ಮಗಳು ಅಂತ ನಾವು ಮುಚ್ಚಟೆಯಿಂದ ಸಾಕಿದ್ದೇ ತಪ್ಪಾಯಿತಾ? ಬೇರೆ ಯಾರ ಮೇಲೆ ರೇಗಿ ಏನೇ ಮಾತಾಡಿದರೂ ಈ ಮಗಳ ಮೇಲೆ ಅವರು ಕೋಪ ಮಾಡಿಕೊಳ್ಳುತ್ತಿರಲಿಲ್ಲ. ಮಗನ ಮೇಲೆ ಚಿಕ್ಕ ಹುಡುಗನಾಗಿದ್ದಾಗ ಕೈ ಮಾಡಿದ್ದೂ ಇತ್ತು. ಆದರೆ ಎಷ್ಟೇ ಕೋಪ ಬಂದರೂ ಮಗಳನ್ನು ಬೈಯುವುದಕ್ಕೆ ಹೋಗುತ್ತಿರಲಿಲ್ಲ. ಅವಳ ಬುದ್ಧಿವಂತಿಕೆಯ ಬಗ್ಗೆ ಅವರಿಗೆ ಸಂತೋಷ, ಹೆಮ್ಮೆ ಎರಡೂ ಇತ್ತು. ಅವರ ವೈದಿಕ ಮಿತ್ರರ ಜೊತೆ ಮಾತಾಡುವಾಗಲೋ, ಅಥವಾ ಕೆಲಸ ಮಾಡುವ ಶಾಲೆಯಲ್ಲಿ ಮಾತಾಡುವಾಗಲೋ ಮಕ್ಕಳ ಮದುವೆಯ ವಿಷಯ ಬಂದರೆ ತಾವೂ ಇನ್ನೊಂದೆರಡು ವರ್ಷದಲ್ಲಿ ಮದುವೆ ಮಾಡಬೇಕಾಗಿದೆ ಎಂದು ಹೇಳಿದರೆ ಅವರುಗಳು ನಿಮ್ಮ ಮಗಳ ಬಗ್ಗೆ ಯೋಚನೆ ಮಾಡೋದಕ್ಕೆ ಏನಿದೆ ಜೋಯಿಸರೆ? ಓದಿರುವ, ಅಪ್ಸರೆಯಂಥ ನಿಮ್ಮ ಮಗಳನ್ನು ಯಾರು ಬೇಕಾದರೂ ಮದುವೆಯಾಗುತ್ತಾರೆ. ಗಂಡು ಹುಡುಕೋದಕ್ಕೆ ನೀವೇನೂ ಹೆಚ್ಚು ಕಷ್ಟ ಪಡಬೇಕಾಗಿಲ್ಲ ಎಂದು ಹೇಳುತ್ತಿದ್ದರು. ಜೋಯಿಸರಿಗೂ ಅದು ಸರಿ ಅನ್ನಿಸುತ್ತಿತ್ತು. ಆದರೆ ಈಗ ನೋಡಿದರೆ ಮಗಳು ಅಪ್ಪನಿಗೆ ಆ ಕಷ್ಟವೇ ಬೇಡ ಅಂತ ತಾನೇ ಗಂಡನ್ನು ಹುಡುಕಿಕೊಳ್ಳೋ ಮಟ್ಟಕ್ಕೆ ಹೋಗಿಬಿಟ್ಟಳಲ್ಲ ಅನ್ನುವ ಸಂಕಟ ಕ್ಷಣಕ್ಷಣವೂ ಕಾಡುತ್ತಿತ್ತು.

ಅಷ್ಟು ಹೊತ್ತಿಗೆ ವಸುಂಧರಾ ಮನೆಗೆ ಬಂದಳು. ಮನೆಯಲ್ಲಿ ಯಾರ ಮುಖದಲ್ಲೂ ಸಮಾಧಾನವಿಲ್ಲ. ಈ ವಿಷಯ ಇನ್ನೂ ಸರಿಯಾಗಿ ಗೊತ್ತಿಲ್ಲದ ಪ್ರದ್ಯುಮ್ನ ಎಂದಿನ ಹಾಗೆ ಇದ್ದಾನೆ. ಒಬ್ಬಳೇ ರೂಮಿನಲ್ಲಿ ನೆಪ ಮಾತ್ರಕ್ಕೆ ಏನೋ ಪುಸ್ತಕ ಹಿಡಿದುಕೊಂಡು ಕೂತಿದ್ದ ಮಗಳನ್ನು ಅಮ್ಮ ಊಟಕ್ಕೆ ಕರೆದರು. ಮಗಳು ಹೋಗಿ ಊಟದ ಶಾಸ್ತ್ರ ಮುಗಿಸಿದಳು. ಆಮೇಲೆ ಅಪ್ಪ ಅಮ್ಮ ಕೂಡ ಊಟದ ಶಾಸ್ತ್ರ ಮುಗಿಸಿದರು. ಆ ನಂತರ ಜೋಯಿಸರು ಅವಳ ರೂಮಿಗೇ ಹೋಗಿ ಬಾಗಿಲು ಮುಂದೆ ಮಾಡಿ – "ವಸೂ ನೀನು ಹೀಗೆ ಮಾಡಬಹುದಾ? ನಾನು ನಿನ್ನ ಮೇಲೆ ಬೆಟ್ಟದಷ್ಟು ಆಸೆ ಇಟ್ಟುಕೊಂಡಿದ್ದೆ.

ಇರೋ ಒಬ್ಬ ಮಗಳ ಮದುವೆಯನ್ನು ಶಾಸ್ತ್ರೋಕ್ತವಾಗಿ ಅದ್ದೂರಿಯಾಗಿ ಮಾಡಬೇಕು ಅಂತ ಅಂದುಕೊಂಡಿದ್ದ ನಮ್ಮ ಆಸೆಯನ್ನು ನೀನು ಪೂರ್ತಿ ನಾಶ ಮಾಡಿದೆ. ನಾನು ಮಾತ್ರ ಇದಕ್ಕೆ ಯಾವತ್ತೂ ಒಪ್ಪಿಗೆ ಕೊಡೋದಕ್ಕೆ ಸಾಧ್ಯವೇ ಇಲ್ಲ. ನೀನು ಆ ಮನುಷ್ಯನನ್ನು ಇನ್ನು ಯಾವ ಕಾರಣಕ್ಕೂ ಭೇಟಿ ಆಗಕೂಡದು. ನನ್ನ ಮಾತನ್ನು ನೀನು ಮೀರೋ ಹಾಗಿಲ್ಲ. ಇದು ನಮ್ಮ ಪಿತೃಗಳನ್ನೆಲ್ಲಾ ಏಳೇಳು ನರಕದಲ್ಲಿ ಮುಳುಗಿಸೋ ಅಂಥ ಕೆಲಸ. ನಾನು ಸರೀಕರೆದುರು ತಲೆ ಎತ್ತಿಕೊಂಡು ತಿರುಗಾಡೋಕ್ಕೆ ಸಾಧ್ಯ ಇಲ್ಲ. ಊರೋರೆಲ್ಲರಿಗೂ ಆಚಾರ, ನೀತಿ ಹೇಳೋ ನನ್ನ ಮನೆಯಲ್ಲೇ ಹೀಗಾಗಿದೆ ಅಂದರೆ ನನಗೆ ಚಿಕ್ಕಾಸಿನ ಮರ್ಯಾದೆ ಇರಲ್ಲ." ಎಂದೆಲ್ಲಾ ಜೋಯಿಸರು ತಮ್ಮ ನೋವು ಸಿಟ್ಟು ಬೇಸರ ಎಲ್ಲವನ್ನೂ ಕಕ್ಕಿಕೊಂಡರು. ಮಗಳು ಏನೂ ಮಾತಾಡಲಿಲ್ಲ. ಅಪ್ಪನ ಹತ್ತಿರ ಅವಳು ಮೊದಲಿನಿಂದಲೂ ಎಷ್ಟು ಬೇಕೋ ಅಷ್ಟೇ ಮಾತಾಡುತ್ತಿದ್ದವಳು. ಅವಳು ಹೇಳಿದ್ದು ಒಂದೇ ಮಾತು. "ನನ್ನ ನಡವಳಿಕೆಯಿಂದ ನಿಮಗೆ ತುಂಬಾ ನೋವಾಗಿದೆ ಅಂತ ಗೊತ್ತು ಅಪ್ಪ. ನಿಮಗೆ ನೋವು ಉಂಟು ಮಾಡಬೇಕು ಅನ್ನೋದು ನನ್ನ ಕನಸು ಮನಸ್ಸಿನಲ್ಲೂ ಇಲ್ಲ. ಆದರೆ ನನಗೂ ನನ್ನದೇ ಆದ ಒಂದು ಹೃದಯ, ಮನಸ್ಸು ಅಂತ ಇದೆ ಅಲ್ಲವಾ? ಅದಕ್ಕೂ ಆಸೆ ಆಕಾಂಕ್ಷೆ ಅನ್ನೋದು ಇರುತ್ತೆ ಅಲ್ಲವಾ. ನಾನು ಒಬ್ಬರಿಗೆ ಈಗ ಮನಸ್ಸು ಕೊಟ್ಟಾಗಿದೆ. ನಿಮಗೆ ಇಷ್ಟವಿಲ್ಲದೆ ಹೋದರೆ ಬಿಡಿ ನನ್ನ ಹಣೆಯಲ್ಲಿ ಬರೆದ ಹಾಗಾಗಲಿ." ಎಂದು ಕಣ್ಣೀರು ಸುರಿಸುತ್ತ ಅಲ್ಲಿ ನಿಲ್ಲದೆ ಎದ್ದುಹೋದಳು. ಹಾಲ್‌ನಲ್ಲಿ ಕೂತು ರೇಡಿಯೋದಲ್ಲಿ ಕ್ರಿಕೆಟ್ ಕಾಮೆಂಟರಿ ಕೇಳುತ್ತಿದ್ದ ಪ್ರದ್ಯುಮ್ನನಿಗೆ ಅಪ್ಪ ಆಡಿದ ಮಾತು, ಅದಕ್ಕೆ ಪ್ರತಿಯಾಗಿ ಅಕ್ಕ ಆಡಿದ ಮಾತು ಸ್ವಲ್ಪ ಅಸ್ಪಷ್ಟವಾಗಿ ಕೇಳಿಸಿದರೂ ಅವಳು ಅಳುತ್ತ ಆ ಜಾಗ ಬಿಟ್ಟು ಎದ್ದು ಹೋದದ್ದು ನೋಡಿ ಏನು ನಡೀತಾ ಇದೆ ಮನೆಯಲ್ಲಿ ಎಂಬುದು ಅವನಿಗೆ ಪ್ರಶ್ನೆಯಾಯಿತು. ಇರಲಿ ಅಮ್ಮನನ್ನು ನಾಳೆ ಕೇಳಿದರೆ ಗೊತ್ತಾಗುತ್ತೆ ಎಂದು ಸುಮ್ಮನಾದ.

ಅಧ್ಯಾಯ–7

ಪರೀಕ್ಷೆಯ ಕೆಲಸ ಮುಗಿಸಿಕೊಂಡು ಊರಿಗೆ ಹೋದ ಶ್ರೀನಿವಾಸನಿಗೆ ಅಮ್ಮನನ್ನು ಏನಾದರೂ ಮಾಡಿ ತನ್ನ ಮತ್ತು ವಸುಂಧರಾಳ ಮದುವೆಗೆ ಒಪ್ಪಿಸಿಯೇ ಒಪ್ಪಿಸುತ್ತೇನೆ ಎಂಬ ಭರವಸೆ ಇತ್ತು. ಶ್ರೀನಿವಾಸ್ ಅಪ್ಪನಿಗಿಂತ ಹೆಚ್ಚಾಗಿ ಅಮ್ಮನ ಮಗ. ನಿಂಗೇಗೌಡ ದಂಪತಿಗಳಿಗೆ ಮದುವೆಯಾದ ಏಳೆಂಟು ವರ್ಷ ಮಕ್ಕಳಿರಲಿಲ್ಲ. ಗೌಡರು ತೋಟ ತುಡಿಕೆಯ ಕೆಲಸಗಳಲ್ಲಿ ಮತ್ತು ಊರಿನ ಪಂಚಾಯಿತಿ ರಾಜಕೀಯದಲ್ಲಿ ತೊಡಗಿಸಿಕೊಂಡು ಕಾಲ ಕಳೆಯುತ್ತ ತಮ್ಮ ಬೇಸರ, ನೋವನ್ನು ನೀಗಿಕೊಳುತ್ತಿದ್ದರು. ಆದರೆ ಮೂರು ಹೊತ್ತೂ ಮನೆಯಲ್ಲೇ ಇರುವ ಅವರ ಹೆಂಡತಿಗೆ ಮನೆಯಲ್ಲಿ ಬೇಸರದ ಜೊತೆಗೆ ಮಕ್ಕಳಾಗಲಿಲ್ಲವಲ್ಲ ಎಂಬ ಕೊರಗು ಕಾಡುತ್ತಿತ್ತು. ಆ ಮೇಲೆ ಮೈಸೂರಿನ ನುರಿತ ಹೋಮಿಯೋ ವೈದ್ಯರೊಬ್ಬರ ಚಿಕಿತ್ಸೆಯ ಜೊತೆಗೆ ತಿರುಪತಿಯ ತಿಮ್ಮಪ್ಪನಿಗೆ ಹರಕೆ ಹೊತ್ತುಕೊಂಡರು. ಗಂಡೋ ಹೆಣ್ಣೋ ಒಟ್ಟಿನಲ್ಲಿ ಮಗುವಾದರೆ ಸಾಕು ಎಂದು ಹಂಬಲಿಸುತ್ತಿದ್ದ ಕಾಲದಲ್ಲಿ ಅವರ ಅದೃಷ್ಟಕ್ಕೆ ಮಗನೇ ಹುಟ್ಟಿದ. ದಂಪತಿಗಳ ಸಂತೋಷಕ್ಕೆ ಪಾರವೇ ಇರಲಿಲ್ಲ. ಮಗು ಬಹಳ ಮುದ್ದಾಗಿ ರೂಪ ಮತ್ತು ಬಣ್ಣದಲ್ಲಿ ತಾಯಿಯನ್ನೇ ಹೋಲುತ್ತಿತ್ತು. ಮಗುವನ್ನು ನೋಡಿದ ಅವರ ಬಂಧುಗಳೆಲ್ಲ ಅಮ್ಮನ ಮಗ ಎಂದೇ ಹೇಳುತ್ತಿದ್ದರು. ತಿಮ್ಮಪ್ಪನಿಗೆ ಹರಕೆ ಹೊತ್ತಿದ್ದರಿಂದ ಹುಟ್ಟಿದ ಮಗನಾದ ಕಾರಣ ನಿಂಗೇಗೌಡರು ಆ ಅರ್ಥವೇ ಬರುವ ಹಾಗೆ ಜೊತೆಗೆ ತಮ್ಮ ತಂದೆಯ ಹೆಸರಾದ ತಿಮ್ಮಪ್ಪ ಗೌಡರ ಹೆಸರನ್ನೂ ಸೂಚಿಸುವ ಹಾಗೆ ಮಗನಿಗೆ ಶ್ರೀನಿವಾಸಗೌಡ ಹೆಸರಿಟ್ಟಿದ್ದರು.

ಬಹಳ ವರ್ಷಕ್ಕೆ ಹುಟ್ಟಿದ ಮಗನಾದ್ದರಿಂದ ತಾಯಿಗೆ ಮಗನ ಮೇಲೆ ಎಲ್ಲಿಲ್ಲದ ಅಕ್ಕರೆ, ಮಮತೆ. ಜೊತೆಗೆ ಅವನ ನಂತರ ಬೇರೆ ಮಕ್ಕಳಾಗದೆ ಇದ್ದದ್ದರಿಂದ ಅದು ಬಲವಾದ ವ್ಯಾಮೋಹಕ್ಕೆ ತಿರುಗಿತ್ತು. ಏಳೆಂಟು ವರ್ಷದ ಹುಡುಗನಾಗುವವರೆಗೂ ತಮ್ಮ ಬಳಿಯೇ ಮಲಗಿಸಿಕೊಳ್ಳುತ್ತಿದ್ದರು. ಅವನು ಬೆಳೆದು ದೊಡ್ಡವನಾಗಿ ಶಾಲೆ ಕಾಲೇಜಿಗೆ ಹೋಗುವಂತಾದ ಮೇಲೂ ಮನೆಗೆ ಹಿಂತಿರುಗುವುದು ಸ್ವಲ್ಪ ತಡವಾದರೆ ಚಡಪಡಿಸುತ್ತಿದ್ದರು. ಯಾವಾಗ ಬರುತ್ತಾನೋ ಎಂದು ಅವನ ಹಾದಿ ಕಾಯುತ್ತ ಕೂತುಬಿಡುತ್ತಿದ್ದರು. ಬಿ.ಎ. ಓದುವಾಗ ಹತ್ತಿರದಲ್ಲೇ ಇದ್ದ ಮಂಡ್ಯಕ್ಕೆ ದಿನವೂ ಮೋಟಾರ್ ಬೈಕ್‌ನಲ್ಲಿ ಹೋಗಿಬಂದು ಮಾಡುತ್ತಿದ್ದುದರಿಂದ ಯೋಚನೆ ಇರಲಿಲ್ಲ. ಆದರೆ ಎಂ.ಎ. ಓದುವ ಸಂದರ್ಭದಲ್ಲಿ ಮಗನೊಬ್ಬನನ್ನೇ ಕಳಿಸಿಕೊಡಲು, ಅವನಿಂದ ದೂರ ಇರಲು ಆ ತಾಯಿಗೆ ಕಿಂಚಿತ್ತೂ ಇಷ್ಟವಿರಲಿಲ್ಲ. ಆದರೆ ಅವನ ಜೊತೆ ಅವರೇ

ಹೋಗಿ ಇರಲೂ ಆಗುತ್ತಿರಲಿಲ್ಲ. ಕಾರಣ ಊರಿನಲ್ಲಿ ಗಂಡನಿಗೆ ಅಡಿಗೆ ತಿಂಡಿ ಮಾಡುವುದು, ವ್ಯವಸಾಯದ ಕೆಲಸಗಳಿಗೆ ಬರುವ ಜನರ ಊಟ ತಿಂಡಿಯ ವ್ಯವಸ್ಥೆ ನೋಡಿಕೊಳ್ಳುವುದು ಇವನ್ನೆಲ್ಲ ಬೇರೆಯವರ ಮೇಲೆ ಬಿಟ್ಟುಬರಲು ಆಗುತ್ತಿರಲಿಲ್ಲ. ಹಾಗಾಗಿ ವಿಧಿಯಿಲ್ಲದೆ ಆಗ ಊರಿನಲ್ಲಿದ್ದ ತಮ್ಮ ಸೋದರತ್ತೆಯನ್ನು ಕರೆಸಿಕೊಂಡು ಶ್ರೀನಿವಾಸನ ಜೊತೆ ಕಳಿಸಿಕೊಟ್ಟಿದ್ದರು. ಒಮ್ಮೆಗೆ ಅವನ ಓದು ಮುಗಿದು ಊರಿಗೆ ಹಿಂತಿರುಗಿದ ಮೇಲೆ ಮಂಡ್ಯದ ಖಾಸಗಿ ಕಾಲೇಜಿನಲ್ಲಿ ಕೆಲಸ ಸಿಕ್ಕಿದರೂ ಮೊದಲಿನಂತೆ ಊರಿನಿಂದಲೇ ಹೋಗಿ ಬಂದು ಮಾಡುತ್ತಿದ್ದದರಿಂದ ಮಗನಿಂದ ದೂರವಾಗುವ ಸಂದರ್ಭವಿರಲಿಲ್ಲ.

ಮಗನಿಗೆ ತಮ್ಮ ತವರು ಮನೆಯ ಕಡೆಯದೇ ಹೆಣ್ಣನ್ನು ಅಂದರೆ ಅವರ ತಮ್ಮನ ಮಗಳನ್ನು ತಂದುಕೊಳ್ಳುವ ಆಲೋಚನೆ ಇತ್ತು ಅವರಿಗೆ. ಅವಳು ಗೊತ್ತಿರುವ ಹುಡುಗಿಯಾದ್ದರಿಂದ ರಕ್ತ ಸಂಬಂಧದ ಅನ್ಯೋನ್ಯತೆಯಿಂದಾಗಿ ಮುಂದೆ ತಮ್ಮಿಬ್ಬರನ್ನೂ ಚೆನ್ನಾಗಿ ನೋಡಿಕೊಳ್ಳುವುದಲ್ಲದೆ ತಮ್ಮ ತೋಟ ತುಡಿಕೆಗಳ ಕಡೆ ನಿಗಾ ವಹಿಸುವುದೂ ಸಾಧ್ಯವಾಗುತ್ತದೆಂಬುದು ಅವರ ಲೆಕ್ಕಾಚಾರ. ಆ ಹುಡುಗಿ ನೋಡಲು ತುಂಬ ಸುಂದರಿಯಲ್ಲದಿದ್ದರೂ ಲಕ್ಷಣವಾಗಿದ್ದಳು. ಆದರೆ ಆ ಹುಡುಗಿ ಓದಿದ್ದು ಪಿ.ಯು. ವರೆಗೆ ಮಾತ್ರ. ಪಿ.ಯು. ಪರೀಕ್ಷೆಯಲ್ಲಿ ಒಂದೆರಡು ಸಲ ಫೇಲಾದ್ದರಿಂದ ಮುಂದೆ ಪರೀಕ್ಷೆಗೆ ಕಟ್ಟುವುದಿಲ್ಲವೆಂದು ಹೇಳಿಬಿಟ್ಟದ್ದರಿಂದ ಅವಳ ವಿದ್ಯಾಭ್ಯಾಸ ಅಷ್ಟಕ್ಕೇ ನಿಂತಿತ್ತು. ಮಗನಿಗೆ ತುಮಕೂರಿನಲ್ಲಿ ಕೆಲಸ ಸಿಕ್ಕಿ ಅಲ್ಲಿಗೆ ಹೋಗಬೇಕಾಗಿ ಬಂದಾಗ ಅವರು ಪಟ್ಟ ಸಂಕಟ ಅಷ್ಟಿಷ್ಟಲ್ಲ. ಆದರೆ ಪ್ರತಿವಾರವೂ ಊರಿಗೆ ಬಂದು ಹೋಗಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಿದ್ದು ಸಾಮಾನ್ಯವಾಗಿ ಅದನ್ನು ಪಾಲಿಸುತ್ತಿದ್ದ. ಕೆಲವೊಮ್ಮೆ ಸಾಧ್ಯವಾಗದಿದ್ದರೆ ಅದರ ಮುಂದಿನ ವಾರವಂತೂ ಹೋಗಿಯೇ ಹೋಗುತ್ತಿದ್ದುದರಿಂದ ಅಷ್ಟರ ಮಟ್ಟಿಗೆ ಸಮಾಧಾನ ಮಾಡಿಕೊಂಡಿದ್ದರು.

ತಮ್ಮ ತಾಯಿಗೆ ತನ್ನ ತಮ್ಮನ ಮಗಳನ್ನು ಸೊಸೆಯಾಗಿ ತಂದುಕೊಳ್ಳಬೇಕೆಂಬ ಆಸೆಯಿರುವುದು ಶ್ರೀನಿವಾಸನಿಗೆ ಗೊತ್ತಿಲ್ಲದ ವಿಚಾರವೇನಲ್ಲ. ಆದರೆ ಆ ಬಗ್ಗೆ ಅವನು ಎಂದೂ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿರಲಿಲ್ಲ. ಅವಳ ಬಗ್ಗೆ ಅಂಥ ಭಾವನೆ ಇರಲಿಲ್ಲ. ಮತ್ತು ಇಷ್ಟವೂ ಇರಲಿಲ್ಲ. ಅದಕ್ಕೆ ಅವಳು ಡಿಗ್ರಿಯನ್ನು ಮುಗಿಸಿರಲಿಲ್ಲವೆಂಬುದು ಒಂದು ಕಾರಣವಾದರೆ ಬಾಂಧವ್ಯದಲ್ಲಿ ವೈವಾಹಿಕ ಸಂಬಂಧ ಬೆಳೆಸುವುದು ಮುಂದೆ ಹುಟ್ಟುವ ಮಕ್ಕಳ ದೃಷ್ಟಿಯಿಂದ ಅಷ್ಟೇನೂ ಒಳ್ಳೆಯದಲ್ಲ ಎಂಬದು ಇನ್ನೊಂದು ಮುಖ್ಯ ಕಾರಣವಾಗಿತ್ತು. ಅದೂ ಅಲ್ಲದೆ ತಮ್ಮ ತಾಯಿ ತಂದುಕೊಳ್ಳಬೇಕೆಂದಿದ್ದ ಹುಡುಗಿ ತನಗೆ ಹೋಲಿಸಿದರೆ ತೀರ ಕುಳ್ಳಗಿದ್ದುದೂ ಸೇರಿತ್ತು. ಒಂದು ವೇಳೆ ಆ ಹುಡುಗಿಯನ್ನು ಮದುವೆಯಾಗು ಎಂಬ ಪ್ರಸ್ತಾಪ ಬಂದಾಗ ತನ್ನ ಅಭಿಪ್ರಾಯ ಹೇಳಿದರಾಯಿತೆಂದು ಸುಮ್ಮನಿದ್ದ. ನಿಂಗೇಗೌಡರು ಈ ವಿಷಯದಲ್ಲಿ ತೆರೆದ ಮನಸ್ಸಿನವರಾಗಿದ್ದರು. ಮಗ ಒಪ್ಪಿದರೆ ಆಗಲಿ. ಒತ್ತಾಯ ಮಾಡುವುದು ಬೇಡ ಎಂಬುದು ಅವರ ಇರಾದೆ.

ಇದೀಗ ಮಗ ತಾನು ಕೆಲಸ ಮಾಡುತ್ತಿದ್ದ ಕಾಲೇಜಿನಲ್ಲಿ ಓದುತ್ತಿದ್ದ ತನ್ನ ವಿದ್ಯಾರ್ಥಿನಿಯನ್ನೇ, ಅದರಲ್ಲೂ ತಮ್ಮದಲ್ಲದ ಜಾತಿಯ, ಬ್ರಾಹ್ಮಣರ ಹುಡುಗಿಯನ್ನು ಇಷ್ಟಪಟ್ಟಿದ್ದಾನೆಂದು ತಿಳಿದಾಗ ನಿಂಗೇಗೌಡರಿಗೆ ಅದನ್ನು ಒಪ್ಪಿಕೊಳ್ಳುವುದು ತೀರಾ ಕಷ್ಟವಾಯಿತು. ಇದು ಅನೇಕ ಸಮಸ್ಯೆಗಳನ್ನು ತಂದೊಡ್ಡುತ್ತದೆಂಬುದು ಅವರ ವಿಚಾರವಾಗಿತ್ತು. ಅದು ವಾಸ್ತವವೂ ಹೌದು. ಅದು ಶ್ರೀನಿವಾಸ್‌ಗೂ ಗೊತ್ತಿದ್ದದ್ದೇ. ಆದರೆ ಇದಕ್ಕೆ ದೊಡ್ಡ ವಿರೋಧ ನಿಮ್ಮ ಅಮ್ಮನಿಂದಲೇ ಬರುತ್ತದೆ ಎಂದು ಗೌಡರು ಅವನಿಗೆ ಹೇಳಿಯೇಬಿಟ್ಟಿದ್ದರು. ನಿಮ್ಮ ಅಮ್ಮ ಒಪ್ಪಿದರೆ ಹುಡುಗಿಯ ಮನೆಯವರೂ ಒಪ್ಪಿದರೆ ನನ್ನ ಅಭ್ಯಂತರವಿಲ್ಲ ಎನ್ನುವುದು ಅವರ ಸ್ಪಷ್ಟ ನುಡಿಯಾಗಿತ್ತು.

ಶ್ರೀನಿವಾಸ್ ಈ ವಿಚಾರವನ್ನು ಈಗಾಗಲೇ ಅಮ್ಮನ ಬಳಿ ಪ್ರಸ್ತಾಪಿಸಿದ್ದ. ಅವರು ಇದು ಬಿಲ್ಕುಲ್ ಆಗಕೂಡದೆಂದು ಹೇಳಿಬಿಟ್ಟಿದ್ದರು. "ನಿನ್ನ ಮೇಲೆ ನಾನು ಪ್ರಾಣಾನೇ ಇಟ್ಟುಕೊಂಡಿದ್ದೀನಿ. ಈಗ ನೀನು ಹೀಗೆ ನಮ್ಮ ಪೈಕಿಯಲ್ಲದ, ಅದೂ ಯಾವುದೋ ಊರಿನ, ಇನ್ಯಾವುದೋ ಜಾತಿಯ ಅದರಲ್ಲೂ ಪ್ರತಿಷ್ಠೆಯ ಜೋಯಿಸರ ಮನೆಯ ಹುಡುಗಿಯನ್ನು ಸೊಸೆಯನ್ನಾಗಿ ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ" ಎಂದು ಹೇಳಿದ್ದರು. ಒಂದು ವೇಳೆ ನನ್ನ ತಮ್ಮನ ಮಗಳನ್ನು ಮದುವೆಯಾಗಲು ನಿನಗೆ ಇಷ್ಟವಿಲ್ಲ ಅಂತ ಆದರೆ ನಮ್ಮ ಜನದಲ್ಲೇ ಬೇರೆ ಯಾವುದಾದರೂ ಹುಡುಗಿಯನ್ನು ನೋಡೋಣ ಎಂದಿದ್ದರು. ಶ್ರೀನಿವಾಸ್ ಏನೂ ಹೇಳದೆ ಮರುದಿನ ಪರೀಕ್ಷೆಯ ಕೆಲಸ ಇದೆ ಎಂದು ಹಿಂದಿನ ದಿನ ಮಧ್ಯಾಹ್ನ ಮನೆಯಿಂದ ಹೊರಡುವಾಗ ಮನೆಯಲ್ಲಿ ಅಮ್ಮ ಬಡಿಸಿದ್ದ ಊಟವನ್ನೂ ಮಾಡದೆ ಮುನಿಸಿಕೊಂಡೇ ಹೊರಟುಬಂದಿದ್ದ.

ಅದು ಆಗಿ ಹೆಚ್ಚುಕಡಿಮೆ ಒಂದು ವಾರದ ಬಳಿಕ ಶ್ರೀನಿವಾಸ್ "ನಿಮ್ಮ ಮನೆಯಲ್ಲಿ ನಿಮ್ಮ ತಂದೆತಾಯಿಗೆ ಹೇಳಿ ಒಪ್ಪಿಸು. ನಾನು ಹೇಗಾದರೂ ಮಾಡಿ ಅಮ್ಮನನ್ನು ಒಪ್ಪಿಸುತ್ತೇನೆ, ಮುಂದಿನ ವಾರ ಸಿಗುತ್ತೇನೆ" ಎಂದು ವಸುಂಧರಾಳಿಗೆ ಹೇಳಿ ಊರಿಗೆ ಬಂದಿದ್ದ ಸಂದರ್ಭ ಅದು. ಮನೆಗೆ ಬಂದು ಅರ್ಧ ದಿನ ಕಳೆದರೂ ಅಮ್ಮ ಎಂದಿನಂತೆ ಮಗನನ್ನು ಮಾತಾಡಿಸಲಿಲ್ಲ. ತನ್ನ ಪಾಡಿಗೆ ತಾನು ಒಳಕೋಣೆಯಲ್ಲಿ ಆಕಾಶ ತಲೆಮೇಲೆ ಕಳಚಿಬಿದ್ದವರಂತೆ ಗೋಡೆ ಕಡೆ ತಿರುಗಿ ಮಲಗಿಬಿಟ್ಟಿದ್ದರು. ಅಪ್ಪನನ್ನು ಕೇಳಿದ್ದಕ್ಕೆ ಅವಳು ಮೊದಲಿನಂತೆ ಸರಿಯಾಗಿ ಕಾಲಕಾಲಕ್ಕೆ ಊಟ ತಿಂಡಿ ಮಾಡ್ತಾ ಇಲ್ಲ. ಅದರ ಪರಿಣಾಮ ಇದುವರೆಗೆ ಹತೋಟಿಯಲ್ಲಿದ್ದ ರಕ್ತ ಸಕ್ಕರೆ ಮತ್ತು ರಕ್ತದ ಒತ್ತಡ ಇದೀಗ ತುಂಬಾ ಹೆಚ್ಚಾಗಿದೆ ಅಂತ ಮಂಡ್ಯಾದ ಡಾಕ್ಟರ್ ಹೇಳಿದ್ದಾರೆ. ಔಷಧಿಯನ್ನೂ ಸರಿಯಾಗಿ ತೆಗೆದುಕೊಳ್ಳುತ್ತಾ ಇಲ್ಲ ಎಂದೂ ಹೇಳಿದರು. ಶ್ರೀನಿವಾಸ್‌ಗೆ ತಲೆ ಕೆಟ್ಟುಹೋಯಿತು. ಏನು ಮಾಡುವುದು ಎಂದು ತೋರಲಿಲ್ಲ. ಅಮ್ಮನ ಬಳಿ ಹೋಗಿ ಪರಿಪರಿಯಾಗಿ ಕೇಳಿಕೊಂಡು ಪುಸಲಾಯಿಸಿದ ಮೇಲೆ ಏನೋ ಒಂದು ತುತ್ತು ತಿಂದು ಊಟದ ಶಾಸ್ತ್ರ ಮಾಡಿದರು. ಇದು ತಾಯಿಗೆ ಉಂಟಾಗಿರುವ ಅಸಂತೋಷದ ಜೊತೆಗೆ ತನ್ನ ಮೇಲೆ ಒತ್ತಡ ಹಾಕುವ ತಂತ್ರವೂ ಇರಬಹುದೆ ಎನಿಸಿತು.

ಆ ಮುಂದಿನ ಮೂರು ನಾಲ್ಕು ದಿನಗಳಲ್ಲೂ ಅಮ್ಮ ಎದ್ದು ಮೊದಲಿನಂತೆ

ಓಡಾಡುವುದು, ಅಡಿಗೆ ಮಾಡುವುದು ಇದು ಯಾವುದೂ ಮಾಡಲಿಲ್ಲ. ಮನೆಯಲ್ಲಿ ಮೌನದ್ದೇ ಸಾಮ್ರಾಜ್ಯ. ಶ್ರೀನಿವಾಸನೇ ಅಡಿಗೆ ಮಾಡುವುದನ್ನು ಅಲ್ಪ ಸ್ವಲ್ಪ ಹೇಗೂ ಕಲಿತಿದ್ದರಿಂದ ಅಡಿಗೆ ಮಾಡಿದ. ಅಮ್ಮನನ್ನು ಒತ್ತಾಯದಿಂದ ಎಬ್ಬಿಸಿ ಊಟ ಮಾಡಿಸಿದ. ಮಗನ ಕೈಯಲ್ಲಿ ಹೀಗೆ ಸೇವೆ ಮಾಡಿಸಿಕೊಳ್ಳುವುದೆಂದರೆ ಆಕೆಗೆ ಕರುಳು ಕಿತ್ತುಬರುವಂತೆ ಆಗುತ್ತಿತ್ತು. ಶ್ರೀನಿವಾಸನಿಗೆ ಏನೂ ತೋಚದಂತಾಗಿತ್ತು. ಇದರ ಕೊನೆ ಹೇಗೆ ಎಂಬ ಪ್ರಶ್ನೆ ಅವನ ಮುಂದೆ ಬೃಹದಾಕಾರವಾಗಿ ನಿಂತು ಕಾಡುತ್ತಿತ್ತು.

ಇನ್ನೆರಡು ದಿನಕ್ಕೆ ಅವನು ತುಮಕೂರಿಗೆ ಹೋಗಬೇಕಾಗಿತ್ತು. ಅಂದು ಮಧ್ಯಾಹ್ನ ಶ್ರೀನಿವಾಸ್ ತನ್ನ ರೂಮಿನಲ್ಲಿ ಏನೋ ಯೋಚನೆ ಮಾಡಿಕೊಂಡು ಕೂತಿದ್ದ. ತಾಯಿ ಅವನು ಕೂತಿದ್ದಲ್ಲಿಗೇ ಬಂದರು. ಮಗನಿಗೆ– "ನನಗೋಸ್ಕರ ನೀನು ಆ ಹುಡುಗಿಯನ್ನು ಕಟ್ಟಿಕೊಳ್ಳುವ ಯೋಚನೆ ಬಿಟ್ಟುಬಿಡು. ನೀನಿಲ್ಲದೆ ನನಗೆ ಜೀವನ ಇಲ್ಲ. ಹೆತ್ತು ಹೊತ್ತು ಮುದ್ದಿನಿಂದ ಸಾಕಿರುವ ನನ್ನ ಕಷ್ಟ ನಿನಗೆ ಹೇಗೆ ತಾನೆ ಗೊತ್ತಾದೀತು? ಬೇರೆ ಯಾರೋ ಬಂದು ನಿನ್ನ ಸುತ್ತ ಬಲೆ ಹೆಣೆದು ನನ್ನಿಂದ ಕಸಿದುಕೊಳ್ಳೊದು ನನಗೆ ಸುತರಾಂ ಇಷ್ಟವಿಲ್ಲ." ಎಂದು ಒಂದೇ ಸಮನೆ ಕಣ್ಣೀರು ಸುರಿಸುತ್ತ ನಿಂತರು. ಶ್ರೀನಿವಾಸ್ "ನಾನು ಆ ಹುಡುಗಿಯನ್ನು ಬಿಡಲು ಸಾಧ್ಯವೇ ಇಲ್ಲ. ಅವಳಿಗೆ ಮಾತು ಕೊಟ್ಟಾಗಿದೆ. ನಾಡಿದ್ದು ನಾನು ಅಲ್ಲಿಗೆ ಹೋದ ಕೂಡಲೇ ನನ್ನ ಉತ್ತರಕ್ಕಾಗೇ ಕಾಯ್ದು ಕೊಂಡು ಕುಳಿತಿರೋ ಅವಳಿಗೆ ನಾನು ಇಲ್ಲ ಅಂತ ಹೇಳಕ್ಕಾಗಲ್ಲ. ಅವಳಿಲ್ಲದೆ ನನ್ನ ಜೀವನ ಇಲ್ಲ. ಸ್ವಲ್ಪ ನನ್ನ ಮನಸ್ಸನ್ನೂ ಅರ್ಥಮಾಡಿಕೋ" ಎಂದು ಅವನೂ ಜೋರಾಗಿಯೇ ಹೇಳಿದ. ಮಗನ ಮಾತು ಕೇಳಿ ಆಕೆಗೆ ತಲೆ ಸುತ್ತುಬಂದು ಬಿದ್ದುಬಿಟ್ಟಳು. ತಕ್ಷಣ ಶ್ರೀನಿವಾಸ್ ಅವರನ್ನು ಹಾಸಿಗೆಯ ಮೇಲೆ ಮಲಗಿಸಿದ. ಮನೆಯಲ್ಲಿದ್ದ ಒಬ್ಬ ಆಳಿನ ಕೈಲಿ ಅಪ್ಪನಿಗೆ ಹೇಳಿಕಳಿಸಿದ. ಅವರು ಕೂಡಲೇ ಬಂದರು. ಒಂದು ಕಾರು ಮಾಡಿಕೊಂಡು ಮಂಡ್ಯಕ್ಕೆ ತಮ್ಮ ಕುಟುಂಬದ ಡಾಕ್ಟರ್ ಅವರ ಮನೆಗೇ ಹೋದರು. ಡಾಕ್ಟರ್ ಅವರು ಅವರ ಬಿ.ಪಿ. ಚೆಕ್ ಮಾಡಿ ಬಿ.ಪಿ. ತುಂಬಾ ಜಾಸ್ತಿಯಾಗಿಬಿಟ್ಟಿದೆ. ಹೀಗೇ ಆದರೆ ಇವರು ಬದುಕೋದು ಕಷ್ಟ. ಶುಗರ್ ಟೆಸ್ಟ್ ಕೂಡ ಮಾಡಿಸೋದು ಒಳ್ಳೇದು ಎಂದು ಹೇಳಿ ಒಂದು ಡಯಾಗ್ನಿಸ್ಟಿಕ್ ಸೆಂಟರ್‌ಗೆ ಫೋನ್ ಮಾಡಿ ಅಲ್ಲಿಗೆ ಕೂಡಲೇ ಬಂದು ರಕ್ತದ ಸ್ಯಾಂಪಲ್ ತೆಗೆದುಕೊಂಡು ಕೂಡಲೇ ರಿಸಲ್ಟ್ ಕೊಡಬೇಕು ಎಂದು ಹೇಳಿದರು. ವೈದ್ಯರು ನಿರೀಕ್ಷಿಸಿದ್ದಂತೆ ಅದು ಅತಿ ಹೆಚ್ಚಾಗಿತ್ತು. ನೀವು ಇವರ ಬಗ್ಗೆ ಹೆಚ್ಚು ನಿಗಾ ವಹಿಸದೆ ಹೋದರೆ ಅವರನ್ನು ಉಳಿಸಿಕೊಳ್ಳೊದು ಕಷ್ಟ. ಇದು ಹೀಗೇಕಾಯಿತು ಅಂತ ಕೇಳಿದರು. ನಿಂಗೇಗೌಡರು ಸಮಸ್ಯೆಯ ಬಗ್ಗೆ ತಾಯಿ ಮಗನ ಮಧ್ಯದ ಶೀತಲ ಯುದ್ಧದ ಬಗ್ಗೆ ಸೂಕ್ಷ್ಮವಾಗಿ ತಿಳಿಸಿದರು. ವೈದ್ಯರು ಏನೇ ಆದರೂ ಇವರ ಬಿ.ಪಿ. ಕೆರಳದಂತೆ ರಕ್ತ ಸಕ್ಕರೆ ಪ್ರಮಾಣ ಹೆಚ್ಚದಂತೆ ನೋಡಿಕೊಳ್ಳುವ ಜವಾಬ್ದಾರಿ ನಿಮ್ಮದು. ಅವರಿಗೆ ಅಸಂತೋಷವಾದದ್ದೇನನ್ನೂ ಮಾಡಲು ಹೋಗಬೇಡಿ, ಉಪಾಯವಾಗಿ ಸಂದರ್ಭವನ್ನು ನಿರ್ವಹಿಸಿ ಎಂದು ತಂದೆ ಮಗನಿಗೆ ತಾಕೀತು ಮಾಡಿದರು.

* * *

ಇತ್ತ ವಸುಂಧರಾಳ ಮನೆಯಲ್ಲೂ ಶ್ಮಶಾನ ಮೌನ. ಅಮ್ಮನಿಂದ ವಿಷಯ ತಿಳಿದ ಪ್ರದ್ಯುಮ್ನ ಕೂಡ ಅಕ್ಕ ಇದು ಯಾಕೆ ಹೀಗೆ ಮಾಡಿದಳು ಅಂತ ಅನ್ನಿಸಿದರೂ ಅವನ ಹುಡುಗು ವಯಸ್ಸು ಅದರ ಬಗ್ಗೆ ಅಷ್ಟೆಲ್ಲಾ ತಲೆ ಕೆಡಿಸಿಕೊಳ್ಳಲು ಹೋಗಲಿಲ್ಲ. ಎರಡು ದಿನದ ನಂತರ ನರಸಿಂಹ ಜೋಯಿಸರು ವಸುಂಧರಾ ಇನ್ನೂ ಏಳುವ ಮುಂಚೆಯೇ ಎದ್ದು ಸಾವಿತ್ರಮ್ಮನವರ ಹತ್ತಿರ "ನಿನ್ನ ಮಗಳಿಗೆ ಕಟ್ಟುನಿಟ್ಟಾಗಿ ಹೇಳಿಬಿಡು. ಇದು ಆಗದ ಹೋಗದ ಕೆಲಸ. ಅವಳೇನಾದರೂ ಅವನ ಆಸೆ ಬಿಡದೆ ಅವನನ್ನೇ ಮದುವೆ ಆಗ್ತೀನಿ ಅಂತ ಕೂತರೆ ನಾನಂತೂ ಯಾರಿಗೂ ಮುಖ ತೋರಿಸದ ಹಾಗೆ ಎಲ್ಲಾದರೂ ಹೋಗಿಬಿಡ್ತೀನಿ. ಆತ್ಮಹತ್ಯೆ ಮಹಾ ಪಾಪ ಅಂತ ಹೇಳ್ತಾರೆ. ಜೊತೆಗೆ ಪಿತೃಗಳಿಗೆ ಎಳ್ಳು ನೀರು ಕಾಣಿಸೋರು ನನ್ನನ್ನು ಬಿಟ್ಟರೆ ಯಾರಿದ್ದಾರೆ. ಹಾಗಾಗಿ ನಾನು ಇಲ್ಲಿದ್ದು ಅವರಿವರು ಕೇಳೋ ಪ್ರಶ್ನೆಗಳಿಗೆ ಉತ್ತರ ಹೇಳ್ತಾ ಕೂತುಕೊಳ್ಳೋಕೆ ಆಗಲ್ಲ. ಎಲ್ಲಾದರೂ ಕಾಣದ ಕಣ್ಮರೆಗೆ ಹೋಗಿಬಿಡ್ತೀನಿ" ಎಂದು ಹೇಳಿಬಿಟ್ಟಿದ್ದರು. ಅಮ್ಮ ಆ ಹೊತ್ತು ಮಧ್ಯಾಹ್ನ ಜೋಯಿಸರು ಹೇಳಿದ ಮಾತುಗಳನ್ನು ಅವಳ ಕಿವಿಯಲ್ಲಿ ಹಾಕಿ ಏನೇ ಆಗಲಿ ನಾವು ನಿನಗೆ ಬೇಕು ಅಂತ ಆದರೆ ಈ ವಿಷಯದಲ್ಲಿ ಮುಂದುವರಿಯಬೇಡ ಅಂತ ಕಣ್ಣೀರು ಸುರಿಸುತ್ತ ಹೇಳಿದ್ದರು. ಆದರೆ ವಸುಂಧರಾ "ನನಗೆ ನೀವು ಜನ್ಮ ಕೊಟ್ಟೋರು ಸರಿಯೆ. ಹಾಗಂತ ನನ್ನ ಬದುಕನ್ನು ಕಿತ್ತುಕೊಳ್ಳೋದಕ್ಕೆ ನಿಮಗೆ ಯಾವ ಹಕ್ಕು ಇದೆ. ನಾನು ಜೀವಮಾನ ಪರ್ಯಂತ ಮದುವೆ ಆಗದೆ ಹಾಗೇ ಉಳಿದರೆ ಅದು ನಿಮಗೆ ಸಂತೋಷಾನ?" ಎಂದಳು. ಅವಳ ಮಾತಿಗೆ ಆ ತಾಯಿ ಏನು ತಾನೆ ಹೇಳಿಯಾರು? "ಆಯಿತು ಆ ಮನುಷ್ಯನ ಅಮ್ಮನೂ ಒಪ್ಪಿದರೆ ನಿನಗೆ ಹೇಗೆ ತೋಚುತ್ತೋ ಹಾಗೆ ಮಾಡು. ನನ್ನ ಮಗಳು ಮದುವೆ ಇಲ್ಲದೆ ವಿಧವೆಯ ಹಾಗೆ ಜೀವನ ಸವೆಸೋದನ್ನು ನೋಡಿಕೊಂಡು ಕೂತಿರಲು ನನ್ನ ಕೈಯಲ್ಲಿ ಸಾಧ್ಯವಿಲ್ಲ. ನಿಮ್ಮ ಅಪ್ಪ ಪ್ರಾಣ ಕಳೆದುಕೊಳ್ಳೋಲ್ಲ ಅಂತ ಹೇಗೂ ಹೇಳಿಯೇ ಇದ್ದಾರೆ. ಇದೆಲ್ಲ ರಗಳೆ ಮುಗಿದು ಒಂದಷ್ಟು ದಿನ ಆದ ಮೇಲೆ ವಾಪಸ್ ಬಂದೇ ಬರ್ತಾರೆ ಅನ್ನುವ ನಂಬಿಕೆ ನನಗಿದೆ. ಬಂದದ್ದನ್ನು ಹೇಗೋ ಎದುರಿಸುತ್ತೀವಿ." ಎಂದು ಕಣ್ಣೊರೆಸಿಕೊಳ್ಳುತ್ತ ಹೆಚ್ಚು ಕಡಿಮೆ ತಮ್ಮ ಸಮ್ಮತಿ ತಿಳಿಸಿದರು.

ಇಷ್ಟೆಲ್ಲ ಆದ ಮೇಲೆ ಎರಡು ದಿನ ಬಿಟ್ಟು ಅಪ್ಪ ಸ್ಕೂಲಿಗೆ ಹೋದ ಮೇಲೆ ಮಧ್ಯಾಹ್ನ ಸುಮಾರು ಮೂರು ಗಂಟೆಯ ಸುಮಾರಿಗೆ ಒಂದೆರಡು ಪುಸ್ತಕಗಳನ್ನು ತೆಗೆದುಕೊಂಡು ಸೈಕಲ್ ಬುಟ್ಟಿಯಲ್ಲಿಟ್ಟುಕೊಂಡು ಕಾಲೇಜಿಗೆ ಹೋದಳು. ಎನ್.ಎಸ್. ಮೇಷ್ಟರರ ವಿಭಾಗದ ಕೊಠಡಿಯ ಹತ್ತಿರ ಹೋಗಿ ನೋಡಿದಳು. ಕೊಠಡಿಗೆ ಬೀಗ ಹಾಕಿತ್ತು. ಲೈಬ್ರರಿ ರೀಡಿಂಗ್ ರೂಮ್ ಎಲ್ಲವೂ ಪರೀಕ್ಷೆಯ ಕಾಲ ಆದದ್ದರಿಂದ ಮುಚ್ಚಿತ್ತು. ಯಾರನ್ನು ಕೇಳುವುದು ಅಂತ ಯೋಚನೆ ಮಾಡಿ ಕಾಲೇಜಿನ ಕೆಲಸದ ದಿನಗಳಲ್ಲಿ ಅವರ ಡಿಪಾರ್ಟ್‌ಮೆಂಟ್ ಹತ್ತಿರ ಇರುತ್ತಿದ್ದ ಅಟೆಂಡರ್‌ನನ್ನು ಎನ್.ಎಸ್. ಮೇಷ್ಟ್ರು ಊರಿನಿಂದ ಬಂದಿದ್ದಾರಾ? ಅವರಿಗೆ ಈ ಪುಸ್ತಕಗಳನ್ನು ಕೊಡಬೇಕಿತ್ತು" ಎಂದಳು. ಅವನು "ಹೌದು ಬೆಳಿಗ್ಗೆ ಅವರಿಗೂ ಎಸ್.ಆರ್. ಮೇಷ್ಟ್ರು ಇಬ್ಬರಿಗೂ

ಒಂದೇ ರೂಮಿನಲ್ಲಿ ಪರೀಕ್ಷೆ ಕೆಲಸ ಇತ್ತು. ಬಂದಿದ್ದರು. ಎಸ್.ಆರ್ ಮೇಷ್ಟ್ರಿಗೆ ಇವತ್ತೇ ಕೊನೇ ದಿನ. ಅವರು ಹೀಗಿಂದ ಹೀಗೇ ಬಸ್ ಸ್ಟ್ಯಾಂಡಿಗೆ ಹೋದರು. ನಾನೇ ಆಟೋ ತಂದುಕೊಟ್ಟೆ ಎನ್.ಎಸ್. ಮೇಷ್ಟರು ಮಾತ್ರ ನಾಳೆ ಕೂಡ ಪರೀಕ್ಷೆಯ ಕೆಲಸ ಇದೆ ಅಂತ ಅವರ ಹತ್ತಿರ ಹೇಳುತ್ತಾ ಇದ್ದರು." ಎಂದು ಹೇಳಿದ. ಹಾಗಾದರೆ ಅವರ ಮನೆಗೆ ಹೋದರೆ ಸಿಕ್ಕೇ ಸಿಗುತ್ತಾರೆ ಎನ್ನುವುದು ಅವನ ಮಾತಿನಿಂದ ಖಚಿತವಾಯಿತು.

ಐದಾರು ನಿಮಿಷಗಳಲ್ಲೇ ಅವರ ಮನೆ ಹತ್ತಿರ ಹೋಗಿ ಬೆಲ್ ಮಾಡದೆ ಮೆಲ್ಲಗೆ ಬಾಗಿಲು ತಟ್ಟಿದಳು. ಒಳಗಡೆ ಪಂಚೆ ಬನಿಯನ್‌ನಲ್ಲಿದ್ದ ಶ್ರೀನಿವಾಸ್ ಬಂದು ಬಾಗಿಲು ತೆಗೆದ. ವಸುಂಧರಾಳನ್ನು ನೋಡಿ ಮುಖದಲ್ಲಿ ಕಷ್ಟದಿಂದ ನಗೆಯನ್ನು ತಂದುಕೊಂಡ. ಒಳಗೆ ಬರಲು ಹೇಳಿ ಬಾಗಿಲು ಮುಂದೆ ಮಾಡಿದ. ವಸುಂಧರಾ ಬಂದು ಪುಸ್ತಕ ಮೇಜಿನ ಮೇಲಿಟ್ಟು ಕುಳಿತಳು. ಹತ್ತು ನಿಮಿಷಗಳ ಕಾಲ ಇಬ್ಬರೂ ಮೌನವಾಗಿಯೇ ಕುಳಿತಿದ್ದರು. ವಸುಂಧರಾಳೇ ಮೌನ ಮುರಿದು ಅಮ್ಮನ ಕಣ್ಣೀರು, ಅಪ್ಪನ ಕೋಪ ಮತ್ತು ಅಸಂತೋಷ, ಎಲ್ಲವನ್ನೂ ಹೇಳಿದಳು. ಆಮೇಲೆ ನಿಮ್ಮ ಮನೆಯಲ್ಲಿ ಅಪ್ಪ ಅಮ್ಮ ಒಪ್ಪಿದರೆ ಎಂದು ಕೇಳಿದಳು. ಶ್ರೀನಿವಾಸ್ "ಅಪ್ಪ ಯಾವತ್ತೋ ಒಪ್ಪಿಗೆ ಕೊಟ್ಟಿದ್ದಾರೆ. ಆದರೆ ಅಮ್ಮನದೇ ಕಷ್ಟ" ಎಂದು ಅದುವರೆಗೆ ಮನೆಯಲ್ಲಿ ನಡೆದ ಯಾವತ್ತೂ ವಿದ್ಯಮಾನಗಳು, ಅಮ್ಮನ ಅನಾರೋಗ್ಯದ ಸಂಗತಿ, ವೈದ್ಯರು ಹೇಳಿದ ಮಾತುಗಳು ಯಾವುದನ್ನೂ ಮುಚ್ಚಿಡದೆ ಎಲ್ಲವನ್ನೂ ಹೇಳಿ ಮುಗಿಸಿದ. ಅವನ ಮಾತುಗಳನ್ನು ಕೇಳುತ್ತ ಕೇಳುತ್ತ ವಸುಂಧರಾಳ ಮುಖ ತೀರ ಮ್ಲಾನವಾಯಿತು. ಧೈರ್ಯ ಕುಸಿಯುತ್ತ ಹೋಯಿತು. ಚಿಂತೆ ಮತ್ತು ದುಗುಡದ ಕಾರ್ಮೋಡಗಳು ಅವಳ ಮುಖದ ತುಂಬ ವ್ಯಾಪಿಸಿಕೊಂಡವು. ಕಣ್ಣಿನಿಂದ ತನಗೆತಾನೇ ನೀರು ಹರಿಯತೊಡಗಿತು. "ಹಾಗಾದರೆ ಈಗ ನನ್ನ ಕೈಬಿಡುತ್ತೀರಾ?" ಎಂದು ಹೇಳುತ್ತಾ ಶ್ರೀನಿವಾಸನಿಗೆ ತೆಕ್ಕೆಬಿದ್ದು ಅವನ ಕಣ್ಣಲ್ಲಿ ಕಣ್ಣಿಟ್ಟು "ಇಷ್ಟೆಲ್ಲಾ ಮುಂದುವರಿದ ಮೇಲೆ ಈಗ ನೀವು ಅಮ್ಮನನ್ನು ಮೆಚ್ಚಿಸಲು ನನ್ನ ಕೈಬಿಟ್ಟರೆ ನಾನೆಲ್ಲಿ ಹೋಗಲಿ? ನನ್ನ ಅಮ್ಮ ಹೇಗೂ ಒಪ್ಪಿಗೆ ಕೊಟ್ಟಿದ್ದಾಳೆ. ಅಪ್ಪ ಒಪ್ಪಿಗೆ ಕೊಡದೆ ಇದ್ದರೂ ನಾನು ನಿಮ್ಮ ಜೊತೆ ಬರೋದಕ್ಕೆ ಗಟ್ಟಿ ಮನಸ್ಸು ಮಾಡಿಬಿಟ್ಟಿದ್ದೀನಿ. ನಾವು ರಿಜಿಸ್ಟರ್ ಮ್ಯಾರೇಜ್ ಮಾಡಿಕೊಂಡುಬಿಡೋಣ. ಸ್ವಲ್ಪ ದಿನ ಆದ ಮೇಲೆ ನಿಮ್ಮ ತಾಯಿ ಕೂಡ ಒಪ್ಪಿಕೊಂಡೇ ಒಪ್ಪಿಕೊಳ್ಳುತ್ತಾರೆ. ಹೇಗೂ ನೀವು ಒಬ್ಬರೇ ಮಗ ಅವರಿಗೆ. ನಾನು ನಮ್ಮ ಅಪ್ಪ ಬಂಧು ಬಳಗ ಎಲ್ಲ ಎದುರು ಹಾಕಿಕೊಂಡು ನಿಮ್ಮ ಜೊತೆ ಬರೋದಕ್ಕೆ ರೆಡಿಯಾಗಿದ್ದೀನಿ. ನೀವು ಇಲ್ಲಿಂದ ಬೇರೆ ಯಾವುದಾದರೂ ಊರಿಗೆ ಟ್ರಾನ್ಸ್ ಫರ್ ಮಾಡಿಸಿಕೊಂಡರೆ ಎಲ್ಲ ಸರಿಹೋಗುತ್ತೆ. ನೀವು ನಿಮ್ಮ ನಿರ್ಧಾರ ಸಡಿಲಿಸಬೇಡಿ" ಎಂದು ಒಂದೇ ಉಸಿರಿಗೆ ಆರ್ತಳಾಗಿ ಹೇಳಿ ಕುರ್ಚಿಯ ಮೇಲೆ ಕುಸಿದು ಕುಳಿತಳು.

ಶ್ರೀನಿವಾಸ್ ಪಕ್ಕದಲ್ಲಿ ಕುಳಿತು ಅವಳ ಬೆನ್ನ ಮೇಲೆ ನಿಧಾನವಾಗಿ ಕೈಯಾಡಿಸುತ್ತ "ಆತಂಕಪಡಬೇಡಿ. ಈಗಲೇ ಏನು ಪ್ರಪಂಚ ಮುಳುಗಿ ಹೋಗಲಿಲ್ಲ. ಅಮ್ಮನ ಆರೋಗ್ಯ ವಿಷಮಿಸಿ ಮಾತನಾಡದ ಸ್ಥಿತಿಯಲ್ಲಿ ಇದ್ದದ್ದರಿಂದ ಜೊತೆಗೆ ಪರೀಕ್ಷೆ ಕೆಲಸಕ್ಕೆ

ಬರಲೇ ಬೇಕಾಗಿದ್ದರಿಂದ ಎಲ್ಲವನ್ನೂ ಅಪ್ಪನ ಸುಪರ್ದಿಗೆ ಬಿಟ್ಟು ಬಂದುಬಿಟ್ಟೆ. ಈಗ ಹೋದ ಮೇಲೆ ಅವಳ ಆರೋಗ್ಯ ಸ್ವಲ್ಪ ತಹಬಂದಿಗೆ ಬಂದಮೇಲೆ ನಿಧಾನವಾಗಿ ಅವಳನ್ನು ಒಪ್ಪಿಸಿ ಮುಂದುವರಿಯ ಬೇಕೆಂದಿದ್ದೇನೆ." ಎಂದು ಹೇಳಿ ಟೀ ಮಾಡಿಕೊಟ್ಟು ಸಮಾಧಾನವಾಗಿ ಇರಲು ತಿಳಿಸಿ ನಂಬಿಕೆ ಉಂಟುಮಾಡಲು ತನ್ನ ಕೈ ಬೆರಳಿನಲ್ಲಿದ್ದ ತನ್ನ ಹೆಸರಿನ ಮೊದಲ ಅಕ್ಷರವಾದ 'S' ಅಕ್ಷರವಿರುವ ಉಂಗುರವನ್ನು ಅವಳ ಕೈಬೆರಳಿಗೆ ತೊಡಿಸಿ ಯಾರ ಹತ್ತಿರವೂ ಈ ವಿಷಯ ಹೇಳದೆ ಗುಟ್ಟಾಗಿಟ್ಟಿರಲು ಹೇಳಿದ. ತಾನು ನಾಳೆ ಪರೀಕ್ಷೆ ಕೆಲಸ ಮುಗಿಸಿಕೊಂಡು ಮಧ್ಯಾಹ್ನವೇ ಊರಿಗೆ ಹೊರಡುವುದಾಗಿ ಹೇಳಿದ. ಮತ್ತೊಮ್ಮೆ ಆತಂಕ ಪಡಬೇಡವೆಂದು ಹೇಳಿ ಭುಜ ತಟ್ಟಿದ.

* * *

ವಸುಂಧರಾ ಮನೆಗೆ ಬಂದಳು. ಆದರೆ ಮುಖದಲ್ಲಿ ಚಿಂತೆಯ ಕಾರ್ಮೋಡವನ್ನು ಹೊತ್ತೇ ಬಂದಳು. ಹೇಮಾಳೊಂದಿಗೆ ತನ್ನೆಲ್ಲ ಎದೆಯ ದುಗುಡವನ್ನು ಹೇಳಿಕೊಂಡು ಹಗುರಾಗಬೇಕೆಂದರೂ ಏಕೋ ಮನಸ್ಸಾಗಲಿಲ್ಲ. ಮನೆಯಲ್ಲಿ ಮೌನವೇ ಮೌನ. ವಸುಂಧರಾಳ ತಮ್ಮ ಪ್ರದ್ಯುಮ್ನನಿಗೆ ವಿಷಯ ಏನೆಂದು ಇನ್ನೂ ಸ್ಪಷ್ಟವಾಗಿರಲಿಲ್ಲ. ತಾಯಿಯನ್ನು ಕೇಳಿದರೂ ಅವರು ಏನೂ ಹೇಳದೆ ಅದೆಲ್ಲ ನಿನಗ್ಯಾಕೆ ಏನೋ ದೊಡ್ಡವರ ವಿಷಯ. ಸಮಯ ಬಂದಾಗ ನಿನಗೇ ಗೊತ್ತಾಗುತ್ತೆ ಎಂದು ಸುಮ್ಮನಾಗಿಸಿದ್ದರು. ಜೋಯಿಸರಿಗಂತೂ ಇದನ್ನು ಏನು ಮಾಡಿದರೂ ಅರಗಿಸಿಕೊಳ್ಳಲು ಆಗಲೇ ಇಲ್ಲ. ಇನ್ನೂ ಇದೆಲ್ಲ ಎಲ್ಲಿಗೆ ಹೋಗಿ ಮುಟ್ಟುತ್ತದೋ ಎಂಬ ಚಿಂತೆ ಹೆಚ್ಚಾಗುತ್ತ ಹೋಯಿತು. ಶಾಲೆಯ ತಮ್ಮ ಕಛೇರಿಯ ಕೆಲಸದಲ್ಲೂ ಮನಸ್ಸುಕೊಟ್ಟು ಕೆಲಸಮಾಡುವುದು ಕಷ್ಟವಾಯಿತು. ಏನಾದರೂ ಮಾಡಿ ಇದನ್ನು ತಪ್ಪಿಸಬೇಕೆಂಬುದೇ ಅವರ ಧ್ಯೇಯವಾಯಿತು. ಶಾಲೆಯಲ್ಲಿ ತಮ್ಮ ಆಪ್ತ ಮಿತ್ರ ರಾಮಯ್ಯನವರೊಬ್ಬರಿಗೆ ಆ ದಿನ ಶಾಲೆಯ ಕೆಲಸ ಮುಗಿದ ಮೇಲೆ ನಿಮ್ಮ ಹತ್ತಿರ ಸ್ವಲ್ಪ ಮಾತಾಡುವುದಿದೆ ಒಂದು ಸ್ವಲ್ಪ ಹೊತ್ತು ನನ್ನ ಜೊತೆ ಬನ್ನಿ ಎಂದು ಹೇಳಿ ಶಾಲೆಯಿಂದ ಸ್ವಲ್ಪ ದೂರದಲ್ಲಿದ್ದ ಪಾರ್ಕೊಂದಕ್ಕೆ ಕರೆದುಕೊಂಡುಹೋಗಿ ಅವರ ಹತ್ತಿರ ತಡೆಯಲಾರದೆ ಹೇಳಿಕೊಂಡು ಕಣ್ಣಲ್ಲಿ ನೀರು ಹಾಕಿದರು. ಜೋಯಿಸರ ನಿಷ್ಠುರ ಮತ್ತು ಗಡಸು ಸ್ವಭಾವದ ಪರಿಚಯವಿದ್ದ ರಾಮಯ್ಯನವರಿಗೆ ಅವರ ಕಣ್ಣಲ್ಲಿ ನೀರು ನೋಡಿ ಆಶ್ಚರ್ಯದ ಜೊತೆ ವ್ಯಸನವೂ ಆಯಿತು. ಮನೆಯ ಮರ್ಯಾದೆ ನೀರುಪಾಲಾಗುವ ಇಂಥ ಸನ್ನಿವೇಶ ಎಂಥವನನ್ನೂ ಹಣ್ಣುಮಾಡಿಬಿಡುತ್ತದೆ ಎನಿಸಿತು. ಅವರು ಜೋಯಿಸರಿಗೆ ಸಮಾಧಾನಮಾಡಿ "ಚಿಂತಿಸಬೇಡಿ. ಧೈರ್ಯವಾಗಿ ಸಮಸ್ಯೆಯನ್ನು ಎದುರಿಸಬೇಕು. ಇದನ್ನು ತಡೆಯೋದಕ್ಕೆ ಏನು ಬೇಕೋ ಅದನ್ನು ನಮ್ಮ ಕಡೆಯಿಂದ ಪ್ರಯತ್ನಿಸೋಣ. ಒಂದು ವೇಳೆ ಆಗೋದೇ ಇಲ್ಲ ಅಂತ ಆದರೆ ಆದರೆ ಆಗ ಎಲ್ಲವೂ ನಮ್ಮ ಅದೃಷ್ಟ ಮತ್ತು ಅವಳ ಹಣೆಯಲ್ಲಿ ಬರೆದ ಹಾಗೆ ಆಗುತ್ತೆ ಅಂದುಕೊಂಡು ಸುಮ್ಮನಿದ್ದುಬಿಡೋಣ. ಈಗ ಕಾಲೇಜಿನ ಪ್ರಿನ್ಸಿಪಾಲರ ಹತ್ತಿರ ಹೋಗಿ ನಿಮ್ಮ ಕಾಲೇಜಿನ

ಒಬ್ಬ ಅಧ್ಯಾಪಕ ಹೀಗೆ ಹೆಣ್ಣು ಮಗಳ ತಲೆ ಕೆಡಿಸಿ ಅವಳನ್ನು ಬುಟ್ಟಿಗೆ ಹಾಕಿಕೊಳ್ಳುವ ಕೆಲಸಮಾಡಿದ್ದಾನೆ, ಇದನ್ನು ಈ ಹಂತದಲ್ಲೇ ತಡೆಯಿರಿ ಎಂದು ಕೇಳಿಕೊಳ್ಳೋಣ. ಒಂದು ವೇಳೆ ಪ್ರಿನ್ಸಿಪಾಲರು ಕರೆಸಿ ಹೇಳಿದರೆ ಅವನೇ ಹಿಂದೆ ಸರಿಯಬಹುದು. ಆಗ ಅವಳು ಅನಿವಾರ್ಯವಾಗಿ ಅವನ ಆಸೆ ಬಿಟ್ಟುಬಿಡುತ್ತಾಳೆ. ಬೇಕಾದರೆ ನಾನೂ ನಿಮ್ಮ ಜೊತೆ ಬರುತ್ತೇನೆ" ಎಂದು ಸಲಹೆ ಕೊಟ್ಟರು. ಜೋಯಿಸರಿಗೆ ಆ ಕ್ಷಣಕ್ಕೆ ಅದೇ ಸರಿ ಅಂತ ಅನ್ನಿಸಿತು. ಸರಿ ಈ ವಿಷಯದಲ್ಲಿ ತಡಮಾಡುವುದು ಬೇಡ ಎಂದು ಹೇಳಿ ನಾಳೆ ಮಧ್ಯಾಹ್ನ ಅರ್ಧ ದಿನ ರಜೆ ಹಾಕಿ ಇಬ್ಬರೂ ಹೋಗುವುದೆಂದು ತೀರ್ಮಾನಿಸಿದರು.

ಅಂದುಕೊಂಡಂತೆ ಮರುದಿನವೇ ಅಂದರೆ ವಸುಂಧರಾ ಕಾಲೇಜಿಗೆ ಹೋಗಿ ಶ್ರೀನಿವಾಸ್‌ನನ್ನು ಭೇಟಿಯಾಗಿ ಬಂದ ಮರುದಿನವಲ್ಲ ಅದರ ಮರುದಿನ ಮಧ್ಯಾಹ್ನ ಜೋಯಿಸರೂ ಅವರ ಮಿತ್ರ ರಾಮಯ್ಯನವರೂ ಕಾಲೇಜಿಗೆ ಹೋಗಿ ಪ್ರಿನ್ಸಿಪಾಲರನ್ನು ಕಂಡು ತಮ್ಮಲ್ಲಿ ವೈಯಕ್ತಿಕವಾಗಿ ಮಾತನಾಡಬೇಕೆಂದು ವಿನಂತಿಸಿದರು. ಪರೀಕ್ಷೆಗಳೆಲ್ಲಾ ಮುಗಿದು ಇವರು ಹೋದಾಗ ಅಕೌಂಟ್ಸ್ ಸೂಪರಿಡೆಂಟರ ಹತ್ತಿರ ಏನೋ ಮಾತನಾಡುತ್ತಿದ್ದ ಪ್ರಿನ್ಸಿಪಾಲರು ಅವರನ್ನು ಕಳಿಸಿ ತಮ್ಮ ಛೇಂಬರಿನ ಬಾಗಿಲು ಹಾಕಿ ಅಟೆಂಡರ್‌ಗೆ ನಾನು ಹೇಳುವವರೆಗೂ ಯಾರನ್ನೂ ಒಳಕ್ಕೆ ಬಿಡಬಾರದೆಂದು ತಾಕೀತು ಮಾಡಿ ಇವರಿಗೆ ಕುಳಿತುಕೊಳ್ಳಲು ಹೇಳಿದರು.

ಜೋಯಿಸರು ತಮ್ಮ ಹೆಸರು ಮತ್ತು ರಾಮಯ್ಯನವರ ಹೆಸರು ಹೇಳಿ ತಾವು ಅಂತಿಮ ಎಚ್.ಇ.ಪಿ.ಯಲ್ಲಿ ಓದುತ್ತಿರುವ ವಸುಂಧರಾಳ ತಂದೆ ಎಂದು ಪರಿಚಯಿಸಿಕೊಂಡರು. ವಸುಂಧರಾಳ ಹೆಸರು ಹೇಳಿದ ಕೂಡಲೇ ಪ್ರಿನ್ಸಿಪಾಲರಿಗೆ ಅವಳ ಮುಖ ನೆನಪಾಯಿತು. ಕಾಲೇಜಿನಲ್ಲಿ ಭಾಷಣ ಸ್ಪರ್ಧೆ, ಭಾವಗೀತೆ ಸ್ಪರ್ಧೆಗಳಲ್ಲಿ ಸದಾ ಭಾಗವಹಿಸಿ ಅನೇಕ ಬಹುಮಾನಗಳನ್ನು ಗೆದ್ದುಕೊಂಡು ಬರುತ್ತಿದ್ದವಳಲ್ಲವೆ ಎನಿಸಿತು. ಅದೂ ಅಲ್ಲದೆ ಈ ಸಲದ ಕಾಲೇಜು ವಾರ್ಷಿಕೋತ್ಸವದಲ್ಲಿ 'ಅಂತಃಪುರ' ಗೀತೆಯ ನೃತ್ಯ ಪ್ರದರ್ಶನದಲ್ಲಿ ಭಾಗವಹಿಸಿದ್ದಲ್ಲದೆ ವೀಣೆ ನುಡಿಸಿ ಎಲ್ಲರ ಮೆಚ್ಚಿಗೆ ಗಳಿಸಿದ್ದವಳು ಎಂದು ನೆನಪಾಯಿತು. ಏನು ವಿಷಯ ಎಂದು ಕೇಳಿದಾಗ ಜೋಯಿಸರು ವಸುಂಧರಾ ಮತ್ತು ಶ್ರೀನಿವಾಸ್‌ರ ಪ್ರೇಮ ಪ್ರಕರಣವನ್ನು ವಿವರಿಸಿ ಹೇಳಿ– "ನೋಡಿ ಸರ್ ಇದು ನಮ್ಮ ಮನೆತನದ ಮರ್ಯಾದೆಯ ಪ್ರಶ್ನೆ. ನಾವು ಯಾವುದೋ ಒಂದು ನಂಬಿಕೆಯ ಮೇಲೆ ಮಕ್ಕಳನ್ನು ಕಾಲೇಜಿಗೆ ಕಳಿಸುತ್ತೇವೆ. ಆದರೆ ಇಲ್ಲಿ ಅವರಿಗೆ ಪಾಠ ಮಾಡಿ ಅವರನ್ನು ಒಳ್ಳೆಯ ನಾಗರಿಕರಾಗಿ ರೂಪಿಸಬೇಕಾದ ಅಧ್ಯಾಪಕರೇ ಹೀಗೆ ಪ್ರೀತಿ ಪ್ರೇಮ ಅಂತ ಮಕ್ಕಳ ತಲೆ ಕೆಡಿಸಿದರೆ ನಾವು ಎಲ್ಲಿ ಹೋಗಬೇಕು. ಅವರು ಹೇಳಿದರು ಅಂತ ಇವಳು ಈಗ ನಾನು ಮದುವೆ ಆಗುವುದಾದರೆ ಅವರನ್ನೇ ಅಂತ ಹಠ ಹಿಡಿದು ಕೂತುಬಿಟ್ಟಿದ್ದಾಳೆ. ಹಾಗೇನಾದರೂ ಆದರೆ ನಮ್ಮ ನೆಂಟರು ಇಷ್ಟರ ಎದುರು ತಲೆ ಎತ್ತಿಕೊಂಡು ತಿರುಗಾಡಲಾಗುವುದಿಲ್ಲ. ಇದಕ್ಕೆ ನಮ್ಮ ಪೂರ್ತಿ ವಿರೋಧವಿದೆ. ನೀವು ಅವರನ್ನು ಕರೆಸಿ ತಿಳಿಯ ಹೇಳಿ ಇದು ನಿಲ್ಲುವಂತೆ ಮಾಡಬೇಕು" ಎಂದು ಕೇಳಿಕೊಂಡರು. ಪ್ರಿನ್ಸಿಪಾಲರಿಗೆ ಇದು ಈ ಹಂತಕ್ಕೆ ಬಂದಿರುವುದು ಕೇಳಿ

ಆಶ್ಚರ್ಯದ ಜೊತೆಗೆ ಬೇಸರವೂ ಆಯಿತು. ಅವರು ಸಮಾಧಾನದಿಂದ – "ನೋಡಿ ಎರಡು ಕೈ ಸೇರಿದರೆ ಮಾತ್ರ ಚಪ್ಪಾಳೆ ಅಂತ ನೀವು ಕೇಳಿಯೇ ಇದ್ದೀರಿ. ಇದಕ್ಕೆ ಅಧ್ಯಾಪಕರೊಬ್ಬರನ್ನೇ ಹೊಣೆ ಮಾಡಕ್ಕಾಗಲ್ಲ. ನಿಮ್ಮ ಹುಡುಗಿಯ ಕಡೆಯಿಂದ ಪೂರಕವಾದ ಪ್ರತಿಕ್ರಿಯೆ ಬಂದಿರಲೇ ಬೇಕು. ಇಲ್ಲದಿದ್ದರೆ ಇದು ಈ ಹಂತಕ್ಕೆ ಬರೋದಕ್ಕೆ ಸಾಧ್ಯವಿಲ್ಲ. ಇಬ್ಬರೂ ಮೆಜಾರಿಟಿಗೆ ಬಂದಿದ್ದಾರೆ. ನಾವು ಆತನನ್ನು ಕರೆಸಿ ಹೇಳಬಹುದು. ಕೇಳಿದರೆ ಸರಿ. ಇಲ್ಲದಿದ್ದರೆ ಹೆಚ್ಚು ಅಂದರೆ ಕಂಪ್ಲೇಂಟ್ ಮೇಲೆ ಬೇರೆ ಊರಿಗೆ ಟ್ರಾನ್ಸ್‌ಫರ್ ಮಾಡಿಸಬಹುದು. ಅದು ಬಿಟ್ಟು ನಾವು ಬೇರೆ ಏನೂ ಮಾಡಕ್ಕಾಗಲ್ಲ. ಹೇಗೂ ಇನ್ನೊಂದು ವಾರ ಕಳೆದರೆ ಮುಂದಿನ ತಿಂಗಳೇ ಟ್ರಾನ್ಸ್‌ಫರ್ ಸೀಸನ್ ಶುರುವಾಗುತ್ತೆ. ನೋಡೋಣ" ಎಂದು ಕೈಚೆಲ್ಲಿದರು. "ಸದ್ಯ ಬೇರೆ ರೀತಿಯಲ್ಲಿ ಅವರು ಹೆಚ್ಚಿಗೆ ಮುಂದುವರೆದಿಲ್ಲವಲ್ಲ; ಅದಕ್ಕೆ ಸಮಾಧಾನ ಪಟ್ಟುಕೊಳ್ಳಿ" ಎಂದು ನಿಲ್ಲಿಸಿದರು. ಬೇರೆ ರೀತಿಯಲ್ಲಿ ಮುಂದುವರೆದಿಲ್ಲ ಎಂಬುದರ ಅರ್ಥ ಜೋಯಿಸರಿಗೆ ಆಯಿತು. ಸದ್ಯ ಅಂಥದ್ದೇನೂ ಆಗಿಲ್ಲವಲ್ಲ ಎಂದು ಸಮಾಧಾನ ತಾಳಿ ಪ್ರಿನ್ಸಿಪಾಲರಿಗೆ ಥ್ಯಾಂಕ್ಸ್ ಹೇಳಿ ಹೊರಬಂದರು.

ಅಧ್ಯಾಯ-8

ಶ್ರೀನಿವಾಸ್ ಅಮ್ಮನನ್ನು ಏನಾದರೂ ಮಾಡಿ ಒಪ್ಪಿಸಬೇಕೆಂದು ತೀರ್ಮಾನಿಸಿ ಊರಿಗೇನೋ ಬಂದ. ಆದರೆ ಇವನು ಬಂದ ಹೊತ್ತಿನಲ್ಲೂ ಅವರ ಆರೋಗ್ಯದಲ್ಲಿ ಹೆಚ್ಚಿನ ಸುಧಾರಣೆಯೇನೂ ಕಂಡುಬಂದಿರಲಿಲ್ಲ. ಅವರನ್ನು ನೋಡಿಕೊಳ್ಳಲು ಅವರ ತೌರೂರಿನಿಂದ ಸೋದರತ್ತೆ ಬಂದಿದ್ದರು. ವೈದ್ಯರು ಹೇಳಿದಂತೆ ಚಿಕಿತ್ಸೆಯನ್ನೇನೋ ಮುಂದುವರಿಸಿದ್ದರು. ನಿಂಗೇಗೌಡರು ಅವಳ ಆರೋಗ್ಯ ಸುಧಾರಿಸುವವರೆಗೂ ಅವಳ ಆತಂಕವನ್ನು ಹೆಚ್ಚಿಸುವಂಥ ಮಾತನಾಡಬೇಡವೆಂದು ಮಗನಿಗೆ ಹೇಳಿದ್ದರು. ತನ್ನ ಸೋದರ ಸೊಸೆಯ ಆರೋಗ್ಯ ಹೀಗೆ ವಿಷಮಿಸಲು ಕಾರಣವೇನೆಂಬುದು ತೌರಿನಿಂದ ಬಂದ ಆಕೆಗೆ ಗೊತ್ತಾಯಿತು. ಅವರೂ ಮೊಮ್ಮಗನಿಗೆ "ಯಾಕೆ ನೀನು ನಿಮ್ಮ ಅಮ್ಮನ ಇಷ್ಟಕ್ಕೆ ವಿರುದ್ಧವಾಗಿ ನಮ್ಮವರ ಪೈಕಿ ಹೆಣ್ಣನ್ನು ಬಿಟ್ಟು ಬ್ರಾಹ್ಮಣರ ಮನೆ ಹುಡುಗಿಯನ್ನು ಮದುವೆಯಾಗಲು ಹಠ ಹಿಡಿದಿರೋದು. ಅವಳು ನಿನ್ನಲ್ಲೇ ಜೀವ ಇಟ್ಟುಕೊಂಡಿದ್ದಾಳೆ. ಅವಳ ಮಾತನ್ನು ತೆಗೆದುಹಾಕಬೇಡ" ಎಂದು ಆಗ್ರಹದಿಂದ ಹೇಳಿದರು. ಶ್ರೀನಿವಾಸ್ ಅವರಿಗೆ ಏನೂ ಹೇಳಲಿಲ್ಲ. ಆದರೆ ಶ್ರೀನಿವಾಸನಿಗೆ ಎಲ್ಲಿಲ್ಲದ ಚಿಂತೆಗಿಟ್ಟುಕೊಂಡಿತು. ಈ ಅಮ್ಮ ಇಷ್ಟೊಂದು ಯಾಕೆ ಹೀಗೆ ಹಠ ಮಾಡ್ತಾಳೆ. ಜೀವಮಾನ ಪರ್ಯಂತ ಒಂದು ಹೆಣ್ಣಿನ ಜೊತೆ ಬಾಳ್ವೆ ನಡೆಸಬೇಕಾಗಿರೋದು ನಾನು. ಇದನ್ನು ನನ್ನ ನಿರ್ಧಾರಕ್ಕೆ ಬಿಡದೆ ತಾವೆಲ್ಲರೂ ತಂದೆತಾಯಿ ಗೊತ್ತು ಮಾಡಿದ ಹೆಣ್ಣನ್ನೇ ಮದುವೆ ಮಾಡಿಕೊಂಡು ಇಷ್ಟು ವರ್ಷ ಸಂಸಾರ ಮಾಡಿಲ್ಲವೆ ಎಂಬ ಒಂದೇ ವಾದವನ್ನು ಮುಂದಿಡುತ್ತಿದ್ದಾರಲ್ಲ. ಇಲ್ಲಿ ನನ್ನ ಆಸೆ ಆಕಾಂಕ್ಷೆಗೆ ಏನೂ ಕಿಮ್ಮತ್ತೇ ಇಲ್ಲ ಅಂದರೆ ಹೇಗೆ ಎಂದೆಲ್ಲ ಯೋಚಿಸಿ ಸುಸ್ತಾದ. ಅಲ್ಲಿ ನೋಡಿದರೆ ತನ್ನ ಪಾಡಿಗೆ ತಾನು ಇದ್ದ ಹುಡುಗಿ ವಸುಂಧರಾಳ ಮನಸ್ಸಿನಲ್ಲಿ ಬಯಕೆಯ ಕಿಡಿ ಹೊತ್ತಿಸಿದವನು ನಾನೇ. ನನಗೋಸ್ಕರ ತನ್ನ ತಂದೆ ತಾಯಿ ಬಂಧು ಬಳಗ ಎಲ್ಲ ಬಿಟ್ಟು ಬರೋದಕ್ಕೆ ಅವಳು ಸಿದ್ಧವಾಗಿದ್ದಾಳೆ. ನನಗೇ ಅವಳಂಥ ಗಟ್ಟಿ ನಿರ್ಧಾರ ತೆಗೆದುಕೊಳ್ಳೋದಕ್ಕೆ ಆಗುತ್ತಾ ಇಲ್ಲವಲ್ಲ ಎನಿಸಿ ತನ್ನ ಬಗ್ಗೆಯೇ ಅವನಿಗೆ ಸಿಟ್ಟುಬಂತು.

ಒಂದು ವಾರದ ನಂತರ ಕೆಂಪಮ್ಮನವರು ಎದ್ದು ಒಳಕ್ಕೆ ಹೊರಕ್ಕೆ ಓಡಾಡುವ ಸ್ಥಿತಿಗೆ ಬಂದರು. ಆದರೆ ತಮ್ಮ ಸೋದರತ್ತೆ ಹತ್ತಿರ ಮಾತಾಡುತ್ತ ಇದ್ದದ್ದು ಬಿಟ್ಟರೆ ಗಂಡನ ಕೈಯಲ್ಲಾಗಲಿ, ಮಗನ ಕೈಯಲ್ಲಾಗಲಿ ಮಾತೇ ಆಡುತ್ತಿರಲಿಲ್ಲ. ಮಗನ ಪರವಾಗಿದ್ದಾರೆಂದು, ಅವರ ಸಲಿಗೆಯಿಂದಲೇ ಇವನು ಹೀಗೆ ಹಠ ಹಿಡಿದಿದ್ದಾನೆಂದು ಅವರಿಗೆ ಗಂಡನ ಮೇಲೂ ಕೋಪವೇ. ಇತ್ತ ಶ್ರೀನಿವಾಸ್ ಚಡಪಡಿಸ ಹತ್ತಿದ. ಅಲ್ಲಿ

ತುಮಕೂರಿನಲ್ಲಿ ತನ್ನ ನಿರ್ಧಾರಕ್ಕಾಗಿಯೇ ಕಾದುಕುಳಿತಿರುವ ವಸುಂಧರಾಳನ್ನು ಹೋಗಿ ಕಾಣಬೇಕೆಂದು ಬಲವಾಗಿ ಅನಿಸುತ್ತಿತ್ತು. ಆದರೆ ಹೋಗಿ ಏನೆಂದು ಹೇಳುವುದು. ಇನ್ನೂ ಯಾವ ನಿರ್ಧಾರಕ್ಕೂ ಬರಲಿಲ್ಲವೆಂದು ಯಾವ ಮುಖದಿಂದ ಹೇಳುವುದು. ಇದು ತಮ್ಮಿಬ್ಬರಲ್ಲಿಯೇ ಇದ್ದಿದ್ದರೆ ಅಷ್ಟೇನೂ ಯೋಚನೆ ಮಾಡಬೇಕಿರಲಿಲ್ಲವೇನೋ. ಆದರೆ ವಸುಂಧರಾಳ ಅಪ್ಪ ಅಮ್ಮನಿಗೆ, ಹೇಮಾಳಿಗೆ ಗೊತ್ತಿದೆ. ಬರುವ ಹಿಂದಿನ ದಿನ ಎಸ್.ಆರ್. ಮಾಸ್ಟರ್ ತನ್ನನ್ನು "ಯಾಕೆ ಮೊದಲಿನ ಲವಲವಿಕೆ ಕಾಣುತ್ತಾ ಇಲ್ಲವಲ್ಲ ಏನು ಸಮಾಚಾರ" ಎಂದು ಒತ್ತಾಯಿಸಿ ಕೇಳಿದಾಗ ಅವರ ಕಿವಿಗೂ ವಿಷಯ ಹಾಕಿದ್ದಾಗಿದೆ. ಅವರು – "ಮುಂದೆ ಹೋಗಿಬಿಟ್ಟಿದ್ದೀರಿ. ಹಿಂದಕ್ಕೆ ಹೋಗಬೇಡಿ. ಹಾಗೆ ಹಿಂದೆ ಹೆಜ್ಜೆ ಇಟ್ರೆ ನೀವು ಹೇಗೋ ನಿಭಾಯಿಸಿಕೊಂಡುಬಿಡಬಹುದು. ಆದರೆ ಆ ಹೆಣ್ಣು ಮಗಳು ತನ್ನ ಮನೆಯಲ್ಲಿ, ಸಮಾಜದಲ್ಲಿ ತಲೆ ಎತ್ತಿಕೊಂಡು ಹೇಗೆ ಬದುಕಬೇಕು ಎನ್ನುವುದನ್ನು ಯೋಚಿಸಿ" ಎಂದು ಹೇಳಿದ್ದರು.

ಇದನ್ನೆಲ್ಲ ಯೋಚಿಸಿ ಅವನ ಮಾನಸಿಕ ಒತ್ತಡ ಹೆಚ್ಚುತ್ತ ಹೋಯಿತು. ಮತ್ತೂ ಒಂದು ವಾರ ಕಳೆಯಿತು. ಅಷ್ಟುಹೊತ್ತಿಗೆ ಕೆಂಪಮ್ಮನವರು ಪೂರ್ತಿ ಚೇತರಿಸಿಕೊಂಡಂತೆ ಕಂಡುಬಂದರು. ಅವರ ಸೋದರತ್ತೆ ಇನ್ನೇನೂ ಯೋಚನೆ ಇಲ್ಲವೆಂದು ಊರಿಗೆ ಹೋದರು. ಅವರು ಊರಿಗೆ ಹೋಗಿ ನಾಲ್ಕೈದು ದಿನ ಕಳೆದ ಮೇಲೆ ಶ್ರೀನಿವಾಸ್ ಅಡಿಗೆ ಮನೆಯಲ್ಲಿ ಕುಳಿತು ತರಕಾರಿ ಹೆಚ್ಚಿಕೊಡುತ್ತ ಅಡಿಗೆ ಕೆಲಸದಲ್ಲಿ ಅಮ್ಮನಿಗೆ ಸಹಾಯ ಮಾಡುತ್ತಿದ್ದಾಗ ಮೆಲ್ಲಗೆ ಮದುವೆಯ ಪ್ರಸ್ತಾಪ ತೆಗೆದ. ಅವನ ಮಾತುಗಳನ್ನು ಕೇಳಿಯೂ ಕೇಳದವರಂತೆ ಇದ್ದು ಕೊನೆಗೆ – "ನಾನು ಇನ್ನೂ ನಾಲ್ಕು ದಿನ ಬದುಕಿರಬೇಕು ಅಂತ ನಿನಗೆ ಆಸೆ ಇದ್ದರೆ ನೀನು ಆ ಹುಡುಗಿಯ ಯೋಚನೆ ಬಿಟ್ಟುಬಿಡು" ಎಂದು ನಿರ್ಧಾರ ಪೂರ್ವಕವಾಗಿ ಕಡ್ಡಿ ಎರಡು ತುಂಡು ಮಾಡಿದಂತೆ ಹೇಳಿಬಿಟ್ಟರು. ಅಮ್ಮನ ಹಠದ ಸ್ವಭಾವ ಗೊತ್ತಿದ್ದ ಶ್ರೀನಿವಾಸನಿಗೆ ಅವಳು ಜೀವ ಕಳೆದುಕೊಳ್ಳಲೂ ಹಿಂದೆಗೆಯುವವಳಲ್ಲ ಎಂದು ಅನ್ನಿಸಿ ನಿಂತ ನೆಲ ಕುಸಿದಂತಾಗಿ ಕೂಡಲೇ ಅಲ್ಲಿಂದ ಎದ್ದು ಹೊರಟುಬಿಟ್ಟ.

ಇತ್ತ ಶ್ರೀನಿವಾಸ್‌ನಿಂದ ಏನಾದರೂ ಸುದ್ದಿ ಬರುತ್ತೇನೋ ಎಂದು ಕಾದುಕುಳಿತಿದ್ದ ವಸುಂಧರಾಗೆ ಏನೂ ಸುದ್ದಿ ಬರದೆ ಸುಮ್ಮನೆ ದಿನಗಳು ಸರಿಯುತ್ತ ಹೋದವು. ಆದರೆ ಅವಳಿಗೆ ಒಂದೊಂದು ಕ್ಷಣವೂ ಒಂದೊಂದು ಯುಗವೆನಿಸತೊಡಗಿತು. ಒಳಗೊಳಗೇ ಭಾರೀ ಅಳುಕು ಶುರುವಾಯಿತು. ತಾನು ತಪ್ಪಿದೆನೆ, ದುಡುಕಿದೆನೆ ಎಂಬ ಯೋಚನೆ ಬಂದದ್ದು ಅದೆಷ್ಟು ಸಲವೋ! ಹೇಮಾಳನ್ನು ಭೇಟಿಯಾಗಿ ತನ್ನ ದುಗುಡ ಸಂಕಟಗಳನ್ನೆಲ್ಲ ತೋಡಿಕೊಂಡಳು. ಅವಳಿಗೂ ಕೂಡ ಎಸ್.ಎಸ್. ಮಾಸ್ಟರ್ ಅವರು ಹೀಗೇಕೆ ಮಾಡಿದರು ಎಂದು ಬೇಸರ ಸಿಟ್ಟು ಎಲ್ಲ ಬಂತು. ಆದರೂ ತನ್ನ ಬೇಸರ ತೋರಿಸಿಕೊಳ್ಳದೆ ಗೆಳತಿಗೆ ಧೈರ್ಯ ಹೇಳುತ್ತಿದ್ದಳು. ಮನೆಯಲ್ಲಿ ಯಾವಾಗಲೂ ಅನ್ಯಮನಸ್ಕಳಂತೆ ಕುಳಿತಿರುತ್ತಿದ್ದ ವಸುಂಧರಾಳ ಮನಸ್ಥಿತಿ ತಾಯಿಗೆ ಅರ್ಥವಾಯಿತು. ನರಸಿಂಹ ಜೋಯಿಸರು ತಾನು ಪ್ರಿನ್ಸಿಪಾಲರನ್ನು ಭೇಟಿಯಾಗಿ ಬಂದಿದ್ದ

ಸಂಗತಿಯನ್ನು ಹೆಂಡತಿಗೆ ಹೇಳಿದ್ದರು. ಜೊತೆಗೆ ವಸುಂಧರಾಳಿಗೂ ಬೇರೆ ಯಾರಿಗೂ ಇದನ್ನು ತಿಳಿಸ ಕೂಡದೆಂದು ಕಟ್ಟಪ್ಪಣೆ ಮಾಡಿದ್ದರು. ಬಹುಶಃ ಪ್ರಿನ್ಸಿಪಾಲರು ಕರೆಸಿ ಎಚ್ಚರಿಕೆ ಕೊಟ್ಟಿದ್ದರಿಂದ ಶ್ರೀನಿವಾಸ್ ಕಾಲೇಜಿನತ್ತ ತಲೆಹಾಕಿರಲಿಕ್ಕಿಲ್ಲವೆಂದು ಅವರು ಭಾವಿಸಿದರು.

ಹೀಗಿರುವಾಗ ಅಂತಿಮ ಬಿ.ಎ. ಪರೀಕ್ಷೆಯ ಫಲಿತಾಂಶ ಬಂದಿದೆ ಎಂದು ಯಾರೋ ಸುದ್ದಿ ತಂದಿದ್ದರಿಂದ ಕಾಲೇಜು ಕಡೆ ಹೋಗಿ ಫಲಿತಾಂಶ ತಿಳಿದುಕೊಂಡು ಬರೋಣ ಬಾ ಎಂದು ಹೇಮಾ ಕರೆದಳು. ವಸುಂಧರಾ ಮಾತ್ರ ನನಗೆ ಫಲಿತಾಂಶವೂ ಬೇಡ ಏನೂ ಬೇಡ. ನೀನೇ ಹೋಗಿ ನನ್ನದೂ ಏನಾಗಿದೆಯೋ ತಿಳಿದುಕೊಂಡು ಬಂದುಬಿಡು ಎಂದು ನಿರ್ಲಿಪ್ತಳಂತೆ ಹೇಳಿಬಿಟ್ಟಳು. ಅವಳ ಮನಸ್ಥಿತಿ ಅರಿತ ಹೇಮಾ ಹೆಚ್ಚು ಒತ್ತಾಯಿಸದೆ ಕಾಲೇಜಿಗೆ ಹೋದಳು. ಅವಳು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಳು. ವಸುಂಧರಾ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಳು. ಈ ಪ್ರೇಮ ಪ್ರಕರಣದಿಂದಾಗಿಯೇ ಮನಸ್ಸು ಕೊಟ್ಟು ಓದಲು ಸಾಧ್ಯವಾಗದಿದ್ದ ಕಾರಣ ವಸುಂಧರಾ ಸೆಕೆಂಡ್ ಕ್ಲಾಸ್‌ನಲ್ಲಿ ಪಾಸಾಗಿದ್ದಾಳೆಂದು ಅವಳಿಗೆ ಅರ್ಥವಾಯಿತು. ಇಲ್ಲದಿದ್ದರೆ ಯಾವಾಗಲೂ ಫಸ್ಟ್ ಕ್ಲಾಸ್ ಬರುತ್ತಿದ್ದ, ತನಗಿಂತ ತುಂಬ ಬುದ್ಧಿವಂತೆಯಾದ ಅವಳು ಈ ಸಲ ಸೆಕೆಂಡ್ ಕ್ಲಾಸ್‌ನಲ್ಲಿ ತೇರ್ಗಡೆಯಾಗಿ ತಾನು ಫಸ್ಟ್ ಕ್ಲಾಸ್‌ನಲ್ಲಿ ತೇರ್ಗಡೆಯಾಗಲು ಸಾಧ್ಯವೇ ಇರುತ್ತಿರಲಿಲ್ಲ ಎಂದು ಅಂದುಕೊಂಡಳು. ಕಾಲೇಜಿನಲ್ಲಿ ಗೊತ್ತಾದ ಇನ್ನೊಂದು ಸಮಚಾರವೆಂದರೆ ಆ ವರ್ಷದ ಅಧ್ಯಾಪಕರ ವರ್ಗಾವರ್ಗಿಗಳು ಪ್ರಕಟವಾಗಿದ್ದು ಕೆಲವರಿಗೆ ಅಲ್ಲಿಂದ ವರ್ಗ ಆಗಿರುವ ವಿಷಯ. ಬಹಳ ಮುಖ್ಯವಾಗಿ ಎನ್.ಎಸ್. ಮೇಷ್ಟ್ರಿಗೆ ಅಲ್ಲಿಂದ ಹಾಸನಕ್ಕೆ ವರ್ಗವಾಗಿದ್ದ ವಿಚಾರ ತಿಳಿದು ಅವಳಿಗೆ ಆಶ್ಚರ್ಯದ ಜೊತೆಗೆ ಗಾಬರಿಯೂ ಆಯಿತು. ಆಶ್ಚರ್ಯ ಏಕೆಂದರೆ ಅವರು ಈ ಕಾಲೇಜಿಗೆ ಬಂದು ಹೆಚ್ಚು ವರ್ಷಗಳೇನೂ ಆಗಿರಲಿಲ್ಲ. ಅವರಿಗಿಂತ ಇಲ್ಲಿಗೆ ಬಂದು ಹೆಚ್ಚು ವರ್ಷಗಳಾಗಿದ್ದ ಅವರ ವಿಭಾಗದ ಇನ್ನೂ ಒಂದಿಬ್ಬರಿಗೆ ವರ್ಗವಾಗದೆ ಇವರಿಗೆ ಅಗಿದ್ದು ಹೇಗೆ ಎಂಬುದೇ ಅವಳಿಗೆ ಅರ್ಥವಾಗದಿದ್ದುದು. ಇನ್ನು ಗಾಬರಿ, ತನ್ನ ಗೆಳತಿ ವಸುಂಧರಾಳ ಕುರಿತಾಗಿ. ಬೆಟ್ಟದಷ್ಟು ಆಸೆ ಇಟ್ಟುಕೊಂಡು ಅವರ ಕೈಹಿಡಿಯಬೇಕೆಂದಿದ್ದ ಅವಳ ಗತಿ ಹೇಗೆ ಎಂಬುದು.

ಫಲಿತಾಂಶದ ವಿಚಾರ ತಿಳಿದು ವಸುಂಧರಾಗೆ ಆಶ್ಚರ್ಯವೇನೂ ಆಗಲಿಲ್ಲ. ಪರೀಕ್ಷೆಯ ಸಮಯದಲ್ಲಿ ತನಗೆ ಮನಸ್ಸನ್ನು ಕೇಂದ್ರೀಕರಿಸಿ ಓದಲು ಅಗದೆ ಇದ್ದರೂ ಅದುವರೆಗೆ ಓದಿಕೊಂಡಿದ್ದಷ್ಟರ ನೆನಪಿನ ಮೇಲೆ ಉತ್ತರ ಬರೆದಿದ್ದು ಸೆಕೆಂಡ್ ಕ್ಲಾಸ್ ಬಂದಿದ್ದೇ ಹೆಚ್ಚೆಂದು ಆ ಬಗ್ಗೆ ಅವಳು ತಲೆ ಕೆಡಿಸಿಕೊಳ್ಳಲೇ ಇಲ್ಲ. ತಾನು ಹೇಗೂ ಎಂ.ಎ.ಗೆ ಹೋಗುವುದಿಲ್ಲವೆಂದು ಮುಂಚೆಯೇ ನಿರ್ಧರಿಸಿದ್ದರಿಂದಲೂ ಅವಳು ಆ ವಿಷಯಕ್ಕೆ ತೃಪ್ತಳಾಗಿಯೇ ಇದ್ದಳು.

ಎನ್.ಎಸ್. ಮೇಷ್ಟರ ಟ್ರಾನ್ಸ್‌ಫರ್ ವಿಷಯ ತಿಳಿದು ಅವಳಿಗೆ ಆಕಾಶವೇ ತಲೆಯ ಮೇಲೆ ಕಳಚಿ ಬಿದ್ದಂತಾಗಿತ್ತು. ಹಾಗಾದರೆ ತಾನು ಅಂದುಕೊಂಡಿದ್ದೆಲ್ಲವೂ

ಬರಿಯ ಗಾಳಿಗೋಪುರವಾಗಿಬಿಟ್ಟಿತೆ? ಬರಿಯ ಹಗಲುಗನಸಾಯಿತೆ ಎಂದು ಪರಿಪರಿಯಾಗಿ ಚಿಂತಿಸಿ ಬಳಲಿದಳು. ಅಂದರೆ ಅವರ ತಾಯಿ ತಮ್ಮ ಮದುವೆಗೆ ಬಿಲ್ಕುಲ್ ಒಪ್ಪಿಲ್ಲ. ತಾಯಿಯ ಮಾತನ್ನು ಮೀರಲಾರದೆ ಇವರು ತನ್ನ ಕೈಬಿಟ್ಟದ್ದೇ ನಿಜ. ಇದನ್ನೆಲ್ಲ ಯೋಚಿಸಿ ಅವಳ ಎಳೆಯ ಮನಸ್ಸಿಗೆ ಆದ ಆಘಾತ ಅಷ್ಟಿಷ್ಟಲ್ಲ. ಹೋಗಲಿ ಅದನ್ನಾದರೂ ತನಗೆ ಹೇಳಿದರೆ? ತನ್ನನ್ನು ಮುಖತಃ ಎದುರಿಸಲಾರದೆ ಹೇಡಿಯಂತೆ ಟ್ರಾನ್ಸ್‌ಫರ್ ಮಾಡಿಸಿಕೊಂಡುಬಿಟ್ಟಿದ್ದಾರೆ. ತಾನು ಅವರ ಬಗ್ಗೆ ಅದೆಷ್ಟು ವಿಶ್ವಾಸವಿಟ್ಟಿದ್ದೆ. ಕೊನೆಗೂ ನನ್ನ ನಂಬಿಕೆಗೆ, ಪ್ರೀತಿಗೆ ದ್ರೋಹ ಬಗೆದರೆ? ಅದಕ್ಕೆ ಏನೂ ಬೆಲೆಯೇ ಇಲ್ಲದಾಯಿತೆ? ಎಂದು ಒಬ್ಬಳೇ ಪರಿತಪಿಸಿದಳು. ಅವರ ತಾಯಿಯೇನೋ ವಿಚಾರ ತಿಳಿದು ಅವಳಿಗೆ ಬಗೆಬಗೆಯಾಗಿ ಸಮಾಧಾನ ಮಾಡಿದರು. ಆಗಿದ್ದೆಲ್ಲ ಒಳ್ಳೆಯದಕ್ಕೆ ಅಂದುಕೋ. ನಿನಗೇನು ಕಡಿಮೆಯಾಗಿದೆ. ಯಾರು ಬೇಕಾದರೂ ನಾನು ತಾನು ಅಂತ ಮುಂದೆ ಬಂದು ನಿನ್ನನ್ನು ಮದುವೆ ಮಾಡಿಕೊಂಡು ಹೋಗುತ್ತಾರೆ ಎಂದೆಲ್ಲ ಹೇಳಿ ಸಂತೈಸಲೆತ್ನಿಸಿದರು. ನರಸಿಂಹ ಜೋಯಿಸರಂತೂ ಒಳಗೊಳಗೇ ತಮ್ಮ ಪ್ರಯತ್ನ ಕೈಗೂಡಿತು. ಅವನು ಇತ್ತ ಇನ್ನು ಮುಖ ಹಾಕುವುದಿಲ್ಲ ಎಂದು ಸಮಾಧಾನ ಪಟ್ಟುಕೊಂಡರು. ಹೇಮಾ ಏನು ತಾನೆ ಹೇಳಿಯಾಳು? ಗೆಳತಿಯ ಹೃದಯದ ಬೇನೆ ಯಾವ ಬಗೆಯದೆಂದು ತಿಳಿದಿದ್ದು ಅವಳಿಗೆ ಈಗ ಒಳಗಿನಿಂದಲೇ ಸಮಾಧಾನ ಬರಲೆಂದು ಹೆಚ್ಚು ಹೇಳಲು ಹೋಗಲಿಲ್ಲ. ಆದರೆ ಅವಳಿಗೆ ಒಗಟಾಗಿದ್ದು ತಾವೆಲ್ಲಾ ತುಂಬಾ ಸಂಭಾವಿತರೆಂದು ತಿಳಿದಿದ್ದ ಎನ್.ಎಸ್. ಮೇಷ್ಟ್ರು ವಸುಂಧರಾಳನ್ನು ಭೇಟಿಯಾಗದೆ ಮೌನ ತಾಳಿದ್ದು.

ಇನ್ನು ಇಂಥ ವಿಷಯ ಎಷ್ಟು ದಿನ ತಾನೆ ಗುಟ್ಟಾಗಿ ಉಳಿದಿದ್ದೀತು. ಯಾವುದೇ ವಿಷಯ ಒಬ್ಬನಲ್ಲಿ ಮಾತ್ರ ಉಳಿದಿದ್ದರೆ ಗುಟ್ಟು. ಇನ್ನೊಂದು ವ್ಯಕ್ತಿಗೆ ಗೊತ್ತಾದ ಕೂಡಲೇ ಅದು ಪ್ರಪಂಚಕ್ಕೆ ಗೊತ್ತಾಗಲು ಹೆಚ್ಚು ಸಮಯ ಹಿಡಿಯುವುದಿಲ್ಲ. ಪ್ರಿನ್ಸಿಪಾಲರ ಕಡೆಯಿಂದ ಬೇರೆ ಮೇಷ್ಟ್ರುಗಳಿಗೆ, ಜೋಯಿಸರ ಮಿತ್ರ ರಾಮಯ್ಯನವರ ಕಡೆಯಿಂದ ಜೋಯಿಸರ ಶಾಲೆ, ಅವರ ಬಂಧು ಬಳಗ ಅಕ್ಕಪಕ್ಕದವರಿಗೂ ಗೊತ್ತಾಗಲು ಹೆಚ್ಚು ಸಮಯವೇನೂ ಹಿಡಿಯಲಿಲ್ಲ. ಕಾಲೇಜು ತೆರೆದ ಮೇಲೆ ಬೇರೆ ವಿದ್ಯಾರ್ಥಿಗಳಿಗೂ ಅದರ ಸುಳಿವು ಸಿಕ್ಕಿತು. ವಸುಂಧರಾಗೆ ಹೊರಗಡೆ ಮುಖ ತೋರಿಸುವುದೇ ಬೇಡವೆನಿಸಿ ಒಂದಷ್ಟು ಕಾಲ ಮನೆಬಿಟ್ಟು ಕದಲಲಿಲ್ಲ., ಅವಳ ಮನಸ್ಸು ತೀರ ಸೂಕ್ಷ್ಮವಾಗಿರುತ್ತದೆಂಬ ಅರಿವಿದ್ದ ಅಪ್ಪ ಅಮ್ಮ ಅವಳೇ ನಿಧಾನವಾಗಿ ಸಮಾಧಾನ ಹೊಂದಲು ಅವಳ ಪಾಡಿಗೆ ಅವಳನ್ನು ಬಿಟ್ಟುಬಿಟ್ಟರು.

ಟ್ರಾನ್ಸ್‌ಫರ್ ಆದಮೇಲೆ ಶ್ರೀನಿವಾಸ್ ಮನಸ್ಸಿಗಾದ ಬೇಸರದಿಂದ ಒಂದು ಶನಿವಾರ ಮಧ್ಯಾಹ್ನ ಕಾಲೇಜಿಗೆ ಬಂದು ಪ್ರಿನ್ಸಿಪಾಲರನ್ನು ಭೇಟಿಮಾಡಿ ರಿಲೀವ್ ಮಾಡಿಸಿಕೊಂಡು ಹೋಗಿಬಿಟ್ಟ. ಹೊರಡುವಾಗ ಪ್ರಿನ್ಸಿಪಾಲರು: "ನಿಮ್ಮಂಥ ಒಳ್ಳೆಯ ಅಧ್ಯಾಪಕರನ್ನು ನಮ್ಮ ಕಾಲೇಜಿನಲ್ಲಿ ಉಳಿಸಿಕೊಳ್ಳಲಾಗಲಿಲ್ಲ; ಅದಕ್ಕೆ ನೀವೇ ಕಾರಣ. ಬೇರೆ ಊರಿನಲ್ಲಿ ಹುಷಾರಾಗಿರಿ. ಬೇಗ ಸಂಸಾರಸ್ಥರಾಗಿ" ಎಂದು ಸೂಕ್ಷ್ಮವಾಗಿ

ಹೇಳಿದರು. ಪ್ರಿನ್ಸಿಪಾಲರು ಹೀಗೇಕೆ ಹೇಳಿದರೆಂದು ಆಮೇಲೆ ರಿಲೀವಿಂಗ್ ಆದೇಶ ತೆಗೆದುಕೊಳ್ಳಲು ಹೋದಾಗ ಆಫೀಸ್ ಮ್ಯಾನೇಜರ್ ವಸುಂಧರಾಳ ಅಪ್ಪ ಪ್ರಿನ್ಸಿಪಾಲರನ್ನು ಭೇಟಿಮಾಡಿದ್ದ ಸಂಗತಿ ತಿಳಿಸಿದರು. ತನ್ನ ಉಳಿದ ಸಹೋದ್ಯೋಗಿಗಳಾರನ್ನೂ ಭೇಟಿಮಾಡಲಿಚ್ಛಿಸದೆ ಎಸ್.ಆರ್. ಮೇಷ್ಟ್ರಿಗೆ ಮಾತ್ರ ಹೇಗೂ ನಿಮ್ಮೂರಿಗೇ ಹೋಗುತ್ತಿದ್ದೀನಲ್ಲ ಅಲ್ಲೇ ಸಿಕ್ಕಿ ವಿವರವಾಗಿ ಮಾತಾಡ್ತೀನಿ ಎಂದು ಹೇಳಿ ತನ್ನ ಅಲ್ಪ ಸ್ವಲ್ಪ ಸಾಮಾನನ್ನು ಒಂದು ಟ್ರಾನ್ಸ್ ಪೋರ್ಟಿಗೆ ಬುಕ್ ಮಾಡಿಸಿ ಹೊರಟುಬಿಟ್ಟ. ಅವನ ಟ್ರಾನ್ಸ್‌ಫರ್ ಹಿನ್ನೆಲೆ ಗೊತ್ತಿದ್ದ ಎಸ್.ಆರ್. ಮೇಷ್ಟ್ರು ಹೆಚ್ಚಿಗೆ ಏನನ್ನೂ ಕೆದಕಲಿಲ್ಲ.

ತನ್ನ ಮಾರ್ಕ್ಸ್‌ಕಾರ್ಡ್ ತೆಗೆದುಕೊಳ್ಳಲು ಕಾಲೇಜಿಗೆ ಹೋದಾಗ ಹೇಮಾಳಿಗೆ ಎನ್.ಎಸ್. ಮೇಷ್ಟ್ರು ರಿಲೀವ್ ಆದ ವಿಷಯ ಗೊತ್ತಾಗಿ ಅವರ ಬಗೆಗೆ ಎಲ್ಲಿಲ್ಲದ ಕೋಪ ಬಂತು. ಗಂಡಸು ಇಷ್ಟು ಹೇಡಿಯಾಗಿಬಿಡುವನೆ, ವಿಶ್ವಾಸ ದ್ರೋಹ ಮಾಡುವನೆ ಎಂದು ಅವನ ವಿಷಯಕ್ಕೆ ಅವಳ ಮನಸ್ಸು ಕಲ್ಲಾಯಿತು. ಅವಳೇ ವಸುಂಧರಾಗೆ ವಿಷಯ ತಿಳಿಸಿದಳು. ಕೇಳಿದ ವಸುಂಧರಾ ತಾನು ಅದೃಷ್ಟಹೀನೆ ಎಂದು ಹೇಳುತ್ತ ಒಂದೇ ಸಮನೆ ಕಣ್ಣೀರು ಹಾಕಿದಳು. "ಏ ವಸೂ ನೀನು ಯಾಕೆ ಅದೃಷ್ಟ ಹೀನೆ ಅಂತ ಪರಿತಪಿಸುತ್ತೀ. ನಿನ್ನಂಥ ಹುಡುಗಿಯ ಕೈಹಿಡಿಯುವ ಅದೃಷ್ಟವಿಲ್ಲದ ಆತ ಅದೃಷ್ಟಹೀನ. ಇಲ್ಲಿಗೇ ಜೀವನ ಮುಗಿದು ಹೋಯಿತು ಅಂತ ಅಂದುಕೊಂಡು ದುಃಖಿಸುತ್ತ ಕೂರಬೇಡ. ಏನಾದರೂ ಪುಸ್ತಕಗಳನ್ನು ಓದು. ಅದನ್ನು ನಾನು ನಿನಗೆ ಹೇಳಬೇಕಾದ್ದೇ ಇಲ್ಲ. ನಮ್ಮೆಲ್ಲರಿಗಿಂತ ಹೆಚ್ಚು ಪುಸ್ತಕ ಓದುತ್ತಾ ಇದ್ದವಳೇ ನೀನು" ಎಂದೆಲ್ಲ ಅವಳನ್ನು ಹುರಿದುಂಬಿಸಲು ಯತ್ನಿಸಿದಳು. ತಾನು ಸಮಾಜಶಾಸ್ತ್ರದ ವಿಷಯದಲ್ಲಿ ಎಂ.ಎ. ಮಾಡಲು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅರ್ಜಿ ಹಾಕುವುದಾಗಿ ಹೇಳಿದಳು. ವಸುಂಧರಾ ಗೆಳತಿಯನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದಳು. ಅಲ್ಲಿಗೆ ಓದಲು ಹೋದರೂ ಇಲ್ಲಿಗೆ ಬಂದಾಗಲೆಲ್ಲ ಮರೆಯದೆ ತನ್ನನ್ನು ಭೇಟಿಯಾಗಬೇಕೆಂದು ಕೇಳಿಕೊಂಡಳು.

ಅಧ್ಯಾಯ-9

ತಾನಾಯಿತು ತನ್ನ ಓದಾಯಿತು ಎಂದು ಇದ್ದ ತನಗೆ ಹೀಗೇಕಾಗಬೇಕು ಎಂದು ವಸುಂಧರಾ ಹಲವು ಬಗೆಯಾಗಿ ಯೋಚಿಸಿ ಕಂಗೆಟ್ಟಳು. ಯಾವುದೋ ಒಂದು ದುರ್ಬಲ ಕ್ಷಣದಲ್ಲಿ ಶ್ರೀನಿವಾಸನ ವ್ಯಕ್ತಿತ್ವ, ಮಾತುಗಾರಿಕೆಗಳಿಗೆ ಮರುಳಾದ ತಾನೇ ತಪ್ಪು ಮಾಡಿದೆನೆಂದು ತನ್ನ ಬಗ್ಗೆಯೇ ಬೇಸರವೆನಿಸಿತು. ಜಾತಿ. ಸಮುದಾಯಗಳನ್ನು ಮೀರಿ ಮದುವೆಯಾದವರ ನಿದರ್ಶನಗಳನ್ನು ಎಲ್ಲೋ ಅಲ್ಲೊಂದು ಇಲ್ಲೊಂದು ಅವರಿವರಿಂದ ಕೇಳಿದ್ದಳಾದರೂ, ಕಥೆ ಕಾದಂಬರಿಗಳಲ್ಲಿ, ಮತ್ತು ಅಪರೂಪಕ್ಕೆ ಪತ್ರಿಕೆಗಳಲ್ಲಿ ಓದಿದ್ದಳಾದರೂ ಅದು ತಾನೆಣಿಸಿದಷ್ಟು ಸುಲಭವಲ್ಲವೆಂಬುದು ಅನುಭವಕ್ಕೆ ಬಂದು ನಿರಾಶಳಾದಳು. ಒಂದೊಂದು ಸಲ ಹೆಣ್ಣಾದ ತಾನು ತನ್ನ ಕುಟುಂಬವನ್ನೇ ತೊರೆದು ಬರುವುದಕ್ಕೆ ಸಿದ್ಧಳಾದಾಗ ಗಂಡುಸಾದ ಶ್ರೀನಿವಾಸನಿಗೂ ಹಾಗೆ ಬರುವುದು ಸಾಧ್ಯವಾಗ ಬೇಕಿತ್ತಲ್ಲವೆ ಎನಿಸಿ ಅವನ ಬಗ್ಗೆ ಅತಿಯಾದ ಜುಗುಪ್ಸೆ ಮತ್ತು ತಿರಸ್ಕಾರವುಂಟಾಗುತ್ತಿತ್ತು. ಇನ್ನು ಎಷ್ಟು ಯೋಚಿಸಿದರೂ ಅಷ್ಟೆ. ಅದು ಮುಗಿದ ಅಧ್ಯಾಯ ಎನಿಸಿ ಸಮಾಧಾನ ತಂದುಕೊಳ್ಳಲು ಪ್ರಯತ್ನಿಸುತ್ತಿದ್ದಳು. ಶ್ರೀನಿವಾಸನಿಗೆ ವರ್ಗವಾಗಿ ಹೋದನೆಂದು ತಿಳಿದ ಮೇಲೆ ನರಸಿಂಹ ಜೋಯಿಸರು ಮತ್ತು ಸಾವಿತ್ರಮ್ಮ ಒಂದು ದಿನ ಮಗಳನ್ನು ಕೂಡಿಸಿಕೊಂಡು ನೋಡು "ನೀನು ನಂಬಿದ ಆ ಮನುಷ್ಯ ಅದೆಷ್ಟು ಸುಲಭನಾಗಿ ಹೇಳದೆ ಕೇಳದೆ ತಪ್ಪಿಸಿಕೊಂಡು ಹೋಗಿಬಿಟ್ಟ. ಇದರಿಂದ ಮರ್ಯಾದೆಯಿಂದ ಇದ್ದ ನಾವುಗಳು ನಾಲ್ಕು ಜನರ ಬಾಯಿಗೆ ಬೀಳುವಂತಾದದ್ದು ಬಿಟ್ಟರೆ ನಿನಗಾಗಲಿ ನಮಗಾಗಲಿ ಏನೊಂದೂ ಪ್ರಯೋಜನವಾಗಲಿಲ್ಲ. ಇನ್ನು ಮೇಲೆ ಅದನ್ನೇ ಕುರಿತು ಯೋಚಿಸುವುದನ್ನು ಬಿಟ್ಟು ಓದುವುದೋ ಇಲ್ಲ ಏನಾದರೂ ಕೆಲಸಕ್ಕೆ ಪ್ರಯತ್ನಿಸುವುದೋ ಮಾಡು." ಎಂದು ಹೇಳಿದರು. ಅವಳಿಗೂ ಅದೇ ಸರಿಯೆನ್ನಿಸಿತು. ಇದೆಲ್ಲವೂ ಮರೆಯುವವರೆಗೂ ಮದುವೆಯ ಪ್ರಯತ್ನ ಬೇಡವೆಂದು ತೀರ್ಮಾನಿಸಿ ಮಗಳನ್ನು ಈ ಸ್ಥಿತಿಯಿಂದ ಹೇಗಾದರೂ ಹೊರತರಬೇಕೆಂದು ಗಂಡ ಹೆಂಡತಿ ಯೋಚಿಸುತ್ತಿದ್ದರು. ನರಸಿಂಹ ಜೋಯಿಸರು ತಮ್ಮ ಕೆಲವು ಸ್ನೇಹಿತರಿಗೆ ಉನ್ನತ ಎರಡನೇ ದರ್ಜೆಯಲ್ಲಿ ತೇರ್ಗಡೆಯಾದ ತಮ್ಮ ಮಗಳಿಗೆ ಯಾವುದಾದರೂ ಹೈಸ್ಕೂಲಿನಲ್ಲಿ ಮೇಡಂ ಕೆಲಸವೇನಾದರೂ ಸಿಗುವಂತಿದ್ದರೆ ತಿಳಿಸಿ ಎಂದು ಹೇಳಿದ್ದರು. ಅವರ ಪ್ರಯತ್ನದ ಫಲವಾಗಿ ತುಮಕೂರಿನಲ್ಲೇ ಒಂದು ಖಾಸಗಿ ಪ್ರೌಢಶಾಲೆಯಲ್ಲಿ ತಾತ್ಕಾಲಿಕವಾಗಿ ಅಧ್ಯಾಪಕಿಯ ಕೆಲಸ ಸಿಕ್ಕಿತು. ಅದು ಇನ್ನೂ ಗ್ರಾಂಟಿಗೆ ಒಳಪಡದ ಶಾಲೆಯಾಗಿದ್ದರಿಂದ ಸರ್ಕಾರೀ ಶಾಲೆಗಳಲ್ಲಿ ಸಿಗುತ್ತಿದ್ದಷ್ಟು ವೇತನ ಸಿಗುತ್ತಿರಲಿಲ್ಲ. ಆ ಬಗ್ಗೆ ಅವರಿಗೇನೂ ಯೋಚನೆಯಿರಲಿಲ್ಲ. ಸದ್ಯ ಏನೂ ಕೆಲಸವಿಲ್ಲದೆ ಹಾಳು

ಯೋಚನೆಗಳಲ್ಲಿ ಮುಳುಗಿ ಮನಸ್ಸು ಹುತ್ತವಾಗುವ ಬದಲು ಒಂದು ಕೆಲಸ ಅಂತ ಇದ್ದರೆ ಒಳ್ಳೆಯದೆಂಬುದೇ ಮೂರೂ ಜನರ ಹಾರೈಕೆಯಾಗಿತ್ತು.

ಶಾಲೆಯಲ್ಲಿ ಕೆಲಸಕ್ಕೆ ಸೇರಿಕೊಂಡದ್ದೆಂಬುದು ವಸುಂಧರಾಗೆ ಎಲ್ಲಿಲ್ಲದ ನೆಮ್ಮದಿಯನ್ನು ತಂದುಕೊಟ್ಟಿತು. ಮಕ್ಕಳ ಮಧ್ಯೆ ಕೆಲಸ ಮಾಡುತ್ತ ತನ್ನೆಲ್ಲ ಮನಸ್ಸಿನ ನೋವು ವ್ಯಥೆಗಳನ್ನು ನೀಗಿಕೊಂಡು ಒಂದು ರೀತಿಯಲ್ಲಿ ಹೊಸ ಮನುಷ್ಯಳಾದಳು. ಸಹಜವಾಗಿಯೇ ಬುದ್ಧಿವಂತೆಯಾಗಿದ್ದರಿಂದ ಮತ್ತು ಸಂತೋಷದಿಂದ ಪ್ರಾಮಾಣಿಕವಾಗಿ ಕೆಲಸದಲ್ಲಿ ತೊಡಗಿಸಿಕೊಂಡದ್ದರಿಂದ ಹೆಡ್ಮಾಸ್ಟರರ ಮತ್ತು ಸಹೋದ್ಯೋಗಿಗಳ ಸ್ನೇಹ, ಮೆಚ್ಚುಗೆ ಅವಳಿಗೆ ಲಭಿಸಿತು. ಪಾಠ ಪ್ರವಚನಗಳ ಮಧ್ಯೆ ಸಾಹಿತ್ಯ ಕೃತಿಗಳ ಮತ್ತು ತನ್ನ ಪ್ರೀತಿಯ ಇತಿಹಾಸದ ಓದನ್ನು ಬಿಡದೆ ಉಳಿಸಿಕೊಂಡಿದ್ದು ಅವಳಿಗೆ ಹೆಚ್ಚಿನ ಸಂತಸವನ್ನು ನೀಡಿತು. ಬಿ.ಎ. ಪರೀಕ್ಷೆಯ ತಯಾರಿಗೆಂದು ವೀಣೆಗೆ ಸಂಬಂಧಿಸಿದ ಒಂದು ಪರೀಕ್ಷೆ ತೆಗೆದುಕೊಳ್ಳುವುದನ್ನು ಸ್ಥಗಿತಗೊಳಿಸಿದ್ದನ್ನು ಈಗ ಬಿಡುವು ದೊರೆತದ್ದರಿಂದಾಗಿ ಮತ್ತೆ ತೆಗೆದುಕೊಳ್ಳುವುದೆಂದು ನಿರ್ಧರಿಸಿ ಅದರ ಸಿದ್ಧತೆಗೆ ತೊಡಗಿಸಿಕೊಂಡದ್ದೂ ಅವಳಿಗೆ ಅಪಾರ ನೆಮ್ಮದಿ ನೀಡಿತು.

ಅವಳ ಆತ್ಮೀಯ ಗೆಳತಿ ಹೇಮಾ ಬೆಂಗಳೂರಿನಲ್ಲಿ ಎಂ.ಎ. ತರತಿಗೆ ಸೇರಿಕೊಂಡು ಅವರದೇ ಸಮುದಾಯದ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ದೊರಕಿಸಿಕೊಂಡದ್ದರಿಂದ ಅಷ್ಟರ ಮಟ್ಟಿಗೆ ಅವಳ ಸಮಸ್ಯೆ ಬಗೆಹರಿಯಿತು. ತಿಂಗಳಿಗೋ ಎರಡು ತಿಂಗಳಿಗೋ ಒಮ್ಮೆ ಬಂದಾಗ ತಪ್ಪದೆ ವಸುಂಧರಾಳನ್ನು ಭೇಟಿಮಾಡಿ ಒಂದೆರಡು ಗಂಟೆ ಅದೂ ಇದೂ ಹರಟೆ ಹೊಡೆದು ಹೋಗುತ್ತಿದ್ದಳು.

ಒಮ್ಮೆ ಊರಿಗೆ ಹೋದಾಗ ತಾನು ಓದಿದ ಕಾಲೇಜಿಗೆ ಹೋಗಿ ಹಳೆಯ ಮೇಷ್ಟ್ರುಗಳನ್ನು ಅದರಲ್ಲೂ ಮುಖ್ಯವಾಗಿ ಸಮಾಜಶಾಸ್ತ್ರದ ಎಸ್.ಅರ್. ಮೇಷ್ಟ್ರನ್ನು ಮಾತಾಡಿಸಿಕೊಂಡು ಬರಬೇಕೆಂದು ತೀರ್ಮಾನಿಸಿ ಆ ಸಲ ಮೂರನೇ ಶನಿವಾರ ತರಗತಿಯಿಲ್ಲದ್ದರಿಂದ ಶುಕ್ರವಾರವೇ ಬೆಂಗಳೂರಿನಿಂದ ಹೊರಟು ಬಂದಿದ್ದಳು. ಅಂದುಕೊಂಡಂತೆ ಮರುದಿನ ಕಾಲೇಜಿಗೆ ಹೋಗಿ ವಿಭಾಗದ ರೂಮಿನಲ್ಲಿ ಎಸ್.ಆರ್. ಮೇಷ್ಟರನ್ನು ಭೇಟಿಮಾಡಿದಳು. ತಮ್ಮ ಹಳೆಯ ವಿದ್ಯಾರ್ಥಿನಿಯನ್ನು ನೋಡಿ ಅವರಿಗೆ ತುಂಬಾ ಸಂತೋಷವಾಯಿತು. ತಾನು ಸೆಮಿನಾರ್‌ಗೆ ಆರಿಸಿಕೊಂಡಿದ್ದ 'ವಚನ ಸಾಹಿತ್ಯದಲ್ಲಿ ಸ್ತ್ರೀ' ಎಂಬ ವಿಷಯದಲ್ಲಿ ಸಾಮಾಜಿಕವಾಗಿ ಆ ಕಾಲದಲ್ಲಿನ ಹೆಣ್ಣಿನ ಸ್ಥಿತಿಗತಿಗಳ ಬಗ್ಗೆ ಕೆಲವೊಂದು ಸಂಗತಿ ಚರ್ಚಿಸುವುದು ಅವಳ ಉದ್ದೇಶವಾಗಿತ್ತು. ಅವರ ನಂತರ ಇದೇ ವಿಷಯವಾಗಿ ಕನ್ನಡ ಮೇಡಮ್ ಮಮತ ಅವರನ್ನೂ ಭೇಟಿಮಾಡುವುದೆಂದು ಕೊಂಡಿದ್ದಳು. ಚರ್ಚೆ ಮುಗಿದ ನಂತರದಲ್ಲಿ "ಏನು ನಿಮ್ಮ ಗೆಳತಿ ಹೇಗಿದ್ದಾರೆ, ಏನು ಮಾಡುತ್ತಾ ಇದ್ದಾರೆ ಎಂದು ವಸುಂಧರಾಳ ಬಗ್ಗೆ ಕೇಳಿದರು. ವಸುಂಧರಾಳ ವಿಷಯ ಈಗಾಗಲೇ ಬಹಳಷ್ಟು ಮಟ್ಟಿಗೆ ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆಗಿದ್ದರಿಂದ ಅಷ್ಟೊಂದು ಗಾಢವಾಗಿ ಪ್ರೀತಿಸಿದ್ದ ಎನ್.ಎಸ್. ಮೇಷ್ಟ್ರು ಒಂದು ಮಾತೂ ಹೇಳದೆ ಮುಖ ಕೂಡ ತೋರಿಸದೆ ಹೋದ ಬಗ್ಗೆ ವಸುಂಧರಾಗೆ

ಆಗಿರುವ ನೋವು, ವ್ಯಥೆ, ಎಲ್ಲವನ್ನೂ ತಿಳಿಸಿ "ಅವರಂಥೋರು ಹೀಗೆ ಮಾಡ್ತಾರೆ ಅಂತ ಅನ್ನಿಸಿರಲಿಲ್ಲ ಸರ್" ಎಂದಳು. ಅಗ ಎನ್.ಎಸ್. ಮೇಷ್ಟ್ರು ಹಾಸನದಲ್ಲಿ ತಮ್ಮ ಮನೆಗೇ ಬಂದು ತಮ್ಮನ್ನು ಭೇಟಿಮಾಡಿ ತಮಗೆ ಬಂದ ಇಕ್ಕಟ್ಟಿನ ಪರಿಸ್ಥಿತಿಯನ್ನು ಮನದಟ್ಟು ಮಾಡಿಕೊಟ್ಟದ್ದನ್ನು ಹೇಳಿದರು. ಅದು ಅವರ ತಾಯಿಯ ಸಾವು ಬದುಕಿನ ಸಮಸ್ಯೆಯಾಗಿ ಬಿಟ್ಟಿದ್ದರಿಂದ ಶ್ರೀನಿವಾಸ್ ಅಡಕತ್ತರಿಗೆ ಸಿಕ್ಕಿದಂತಾಗಿ ವಿಲವಿಲ ಒದ್ದಾಡಿದ ಬಗ್ಗೆ ಹೇಳಿದರು. ತನ್ನನ್ನೇ ನೆಚ್ಚಿಕೊಂಡಿದ್ದ ಒಬ್ಬ ಸಭ್ಯ ಮುಗ್ಧ ಹುಡುಗಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲಾರದ್ದಕ್ಕೆ ಅದೆಷ್ಟು ತೀವ್ರವಾದ ಅಪರಾಧಿ ಭಾವ ಕಾಡಿತ್ತೆಂದರೆ ಅವನಿಗೆ ವಸುಂಧರಾಗೆ ಮುಖ ತೋರಿಸುವ ಧೈರ್ಯವಾಗಲಿಲ್ಲ ಎಂದು ಹೇಳಿದರು. ವಸುಂಧರಾ ಪ್ರೌಢಶಾಲೆಗೆ ಕೆಲಸಕ್ಕೆ ಹೋಗುತ್ತಿರುವುದನ್ನು ತಿಳಿದು ತುಂಬಾ ಒಳ್ಳೆಯದಾಯಿತೆಂದು ಸಂತೋಷ ಪಟ್ಟಿದ್ದರು. ಅದನ್ನು ಕೇಳಿದಮೇಲೂ ಹೇಮಾಳಿಗೆ ಹೆಚ್ಚೇನೂ ಸಮಾಧಾನವಾಗಲಿಲ್ಲ. ವಸುಂಧರಾಳನ್ನು ಮರುದಿನ ಭೇಟಿಮಾಡಿದಾಗ ಎಸ್.ಅರ್. ಮಾಸ್ಟರನ್ನು ತಾನು ಭೇಟಿಮಾಡಿದ ಮತ್ತು ಅವರಿಂದ ತಿಳಿದುಬಂದ ಸಂಗತಿ ಹೇಳಿದಳು.

ಹೇಮಾ ಹೇಳಿದ ಮಾತು ಕೇಳಿ ವಸುಂಧರಾಗೆ ಶ್ರೀನಿವಾಸನ ಬಗ್ಗೆ ಉಂಟಾಗಿದ್ದ ಕೋಪ, ತಿರಸ್ಕಾರ ಸ್ವಲ್ಪ ಮಟ್ಟಿಗೆ ತಗ್ಗಿತು. ತಾಯಿಯ ಜೀವನ್ಮರಣದ ಪ್ರಶ್ನೆಯಾಗಿಬಿಟ್ಟದ್ದರಿಂದ ಅವರ ಜಾಗದಲ್ಲಿ ತೀರ್ಮಾನ ತೆಗೆದುಕೊಳ್ಳುವುದು ತೀರಾ ಕಷ್ಟವೇ ಎಂದುಕೊಂಡಳು. ಏನೇ ಆದರೂ ಅದರ ಬಲಿಪಶು ತಾನಾಗಬೇಕಾಗಿ ಬಂದದ್ದಕ್ಕೆ ತನ್ನ ವಿಧಿಯನ್ನೇ ಹಳಿದುಕೊಂಡಳು.

ಅಧ್ಯಾಪನ, ಅಧ್ಯಯನಗಳಲ್ಲಿ ತನ್ನನ್ನು ಹೆಚ್ಚು ಹೆಚ್ಚು ತೊಡಗಿಸಿಕೊಳ್ಳತೊಡಗಿದ ಪರಿಣಾಮವಾಗಿ ತನ್ನ ಬದುಕಿನಲ್ಲಿ ಘಟಿಸಿದ ಶ್ರೀನಿವಾಸನ ಕುರಿತಾದ ಪ್ರೇಮ ಪ್ರಕರಣವನ್ನು ಕ್ರಮೇಣ ಮರೆಯುತ್ತ ಬಂದಳು. ಶಾಲೆಯಲ್ಲಿ ಮಕ್ಕಳ ಮಧ್ಯೆ ಅವಳಿಗೆ ಇನ್ನಿಲ್ಲದ ನೆಮ್ಮದಿ ದೊರೆಯುತ್ತಿತ್ತು. ಬಿಡುವು ದೊರೆತಾಗಲೆಲ್ಲ ವಾರ ಪತ್ರಿಕೆಗಳಿಗೆ ಸಾಹಿತ್ಯ ವಿಚಾರಗಳು, ಇತಿಹಾಸ ವಿಷಯಗಳಿಗೆ ಸಂಬಂಧಿಸಿದ ಸಣ್ಣ ಪುಟ್ಟ ಬರಹಗಳನ್ನು ಕಳಿಸುತ್ತಿದ್ದಳು. ಕೆಲವು ಪ್ರಕಟವಾಗುತ್ತಿದ್ದುವು. ಜೊತೆಗೆ ಸಾರ್ವಜನಿಕ ವಿಚಾರಗಳ ಬಗ್ಗೆ 'ವಾಚಕರ ವಾಣಿ' ವಿಭಾಗಕ್ಕೆ ಆಗಾಗ್ಗೆ ಪತ್ರಗಳನ್ನು ಬರಯತೊಡಗಿದಳು. ಆಡಾಡುತ್ತಲೇ ಹೀಗೆ ಎರಡು ಶೈಕ್ಷಣಿಕ ವರ್ಷಗಳು ಸರಿದುಹೋದುವು. ವಸುಂಧರಾ ಕೆಲಸ ಮಾಡುತ್ತಿದ್ದ ಶಾಲೆ ಇವಳು ಕೆಲಸಕ್ಕೆ ಸೇರಿದ ಎರಡನೇ ವರ್ಷ ಗ್ರಾಂಟಿಗೆ ಒಳಪಟ್ಟಿತು. ಅದರ ಪರಿಣಾಮವಾಗಿ ಅವಳು ಬಿ.ಇಡಿ. ಮಾಡಲೇಬೇಕಾಗಿ ಬಂತು. ಶಾಲೆಯ ಮ್ಯಾನೇಜ್‌ಮೆಂಟ್ ಮುಂದಿನ ಶೈಕ್ಷಣಿಕ ವರ್ಷವೇ ಬೆಂಗಳೂರಿನ ಸರ್ಕಾರಿ ಬಿ.ಇಡಿ. ಕಾಲೇಜಿಗೆ ಬಿ.ಎಡ್. ಮಾಡಲು ನಿಯೋಜನೆ ಮಾಡಿಯೇ ಬಿಟ್ಟಿತು.

* * *

ಸಾವಿತ್ರಮ್ಮನವರ ಚಿಕ್ಕಮ್ಮನ ಮಗ ಶಾಮು ಬೆಂಗಳೂರಿನ ಒಂದು ಕಂಪೆನಿಯಲ್ಲಿ ಕೆಲಸಕ್ಕೆ ಸೇರಿಕೊಂಡು ದಿನವೂ ಟ್ರೈನಿನಲ್ಲಿ ಸೀಸನ್ ಟಿಕೆಟ್ ತೆಗೆದುಕೊಂಡು ಓಡಾಡುತ್ತಿದ್ದ. ಅವನಿಗೆ ಓಡಾಟ ಸಾಕೆನಿಸಿತ್ತು. ಅವನ ಅದೃಷ್ಟಕ್ಕೆ ಅವನು ಕೆಲಸ ಮಾಡುತ್ತಿದ್ದ ಕಂಪೆನಿ ಯಶವಂತ ಪುರದಲ್ಲೇ ಇದ್ದುದರಿಂದ ಪ್ರಯಾಣ ಅಷ್ಟೊಂದು ಪ್ರಯಾಸಕರವಾಗುತ್ತಿರಲಿಲ್ಲ. ಯಶವಂತ ಪುರದಲ್ಲೇ ಟ್ರೈನಿಳಿದು ಕಂಪೆನಿಗೆ ಹೋಗಲು ಮತ್ತೆ ಬೇರೆ ಬಸ್ ಹಿಡಿಯ ಬೇಕಾಗುತ್ತಿತ್ತು. ಕಾರಣ ಟ್ರೈನು ಯಶವಂತಪುರ ತಲುಪುವ ಸಮಯಕ್ಕಿಂತ ಮುನ್ನವೇ ಕಂಪೆನಿ ಬಸ್ ಹೋಗಿರುತ್ತಿತ್ತು. ಬೆಳಿಗ್ಗೆ ಬೇಗನೆ ಎದ್ದು ಹೊರಡುವುದು, ರಾತ್ರಿ ತಡವಾಗಿ ಮನೆಗೆ ಬರುವುದು ಇದರಿಂದ ಅವನ ಆರೋಗ್ಯವೂ ಆಗಾಗ್ಗೆ ಏರುಪೇರಾಗುತ್ತಿತ್ತು. ಮದುವೆಯ ವಯಸ್ಸಿಗೆ ಬಂದಿದ್ದರೂ ಅವನ ಮದುವೆಗೆ ಅಡ್ಡಿಯಾಗಿದ್ದದು ಅವನ ತಂಗಿ. ಮದುವೆಯ ವಯಸ್ಸಿಗೆ ಇರುವ ಹೆಣ್ಣು ಮಗಳು ಮನೆಯಲ್ಲಿರುವಾಗ ಯಾವ ತಂದೆತಾಯಿ ತಾನೆ ಗಂಡು ಮಗನಿಗೆ ಮದುವೆ ಮಾಡುವ ಯೋಚನೆ ಮಾಡಲು ಸಾಧ್ಯ? ಅವಳಿಗೆ ಗಂಡು ಹುಡುಕಿ ತಂದೆ ತಾಯಿ ಸುಸ್ತಾಗಿದ್ದರು. ಅವಳು ನೋಡಲು ಕುರೂಪಿಯಲ್ಲದಿದ್ದರೂ ತೀರಾ ಸುಮಾರಾಗಿದ್ದುದು ಮತ್ತು ಗ್ರಾಜುಯೇಟ್ ಅಲ್ಲದಿದ್ದುದು ಅವಳ ಮದುವೆ ತಡವಾಗಲು ಕಾರಣವಾಗಿತ್ತು. ಮೊದಮೊದಲು ಜಾತಕ ಕೂಡಿಬರಲಿಲ್ಲವೆಂಬ ಕಾರಣಕ್ಕೆ ಕೆಲವು ಗಂಡುಗಳನ್ನು ಮನೆಯವರೇ ಬೇಡವೆಂದರು. ಆಮೇಲೆ ಹುಡುಗ ಹುಡುಗಿ ಒಪ್ಪಿಗೆಯಾದರೆ ಸಾಕು, ಜಾತಕ ನೋಡುವುದೇ ಬೇಡ ಎಂಬ ಹಂತಕ್ಕೆ ಬಂದರು. ಆಮೇಲೂ ಅವಳ ಮದುವೆ ನಿಶ್ಚಯವಾಗದೆ ಮನೆಯಲ್ಲಿ ಎಲ್ಲರಿಗೂ ಆತಂಕಕ್ಕೆ ಕಾರಣವಾಗಿತ್ತು.

ಶಾಮೂಗೆ ವಸುಂಧರಾಳ ಮೇಲೆ ಮೊದಲಿಂದಲೂ ತುಂಬ ಆಸೆ ಇತ್ತು. ಶ್ಯಾಮೂ ನೋಡಲು ತುಂಬ ಲಕ್ಷಣವಾಗೇ ಇದ್ದ ಹುಡುಗ. ಒಂದೆರಡು ತರಗತಿಗಳಲ್ಲಿ ಶಾಮೂ ಡುಂಕಿ ಹೊಡೆದು ಮುಂದೆ ಸಾಗಿದ್ದರೆ ವಸುಂಧರಾ ಎಲ್ಲಿಯೂ ನಿಲ್ಲದೆ ಎಲ್ಲ ತರಗತಿಗಳಲ್ಲೂ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದುತ್ತ ನಡೆದಿದ್ದುದು ಅವನಿಗೆ ತನ್ನ ಬಗ್ಗೆ ಒಂದು ರೀತಿಯ ಕೀಳರಿಮೆಗೆ ಕಾರಣವಾಗಿತ್ತು. ಆದರೂ ವಸುಂಧರಾಳ ಮೇಲಿನ ಆಸೆಯಿಂದ ತಂಗಿಯ ಮದುವೆ ಒಂದು ಸೆಟಲ್ ಆದರೆ ವಸುಂಧರಾಳನ್ನೇ ಒಮ್ಮೆ ಈ ಬಗ್ಗೆ ತಾನೆ ಕೇಳಿನೋಡಬೇಕೆಂದೂ ಇದ್ದ. ಅದರೆ ಏಕೋ ಏನೋ ವಸುಂಧರಾಗೆ ಅವನ ವಿಚಾರಕ್ಕೆ ಅಂಥ ಆಸಕ್ತಿ ಏನಿರಲಿಲ್ಲ. ಅದಕ್ಕಿಂತ ಹೆಚ್ಚಾಗಿ ಆ ದೃಷ್ಟಿಯಿಂದ ಅವನನ್ನು ನೋಡಿರಲಿಲ್ಲ. ಸಮೀಪದ ಬಂಧುಗಳಾದದ್ದರಿಂದ ಏಕವಚನದ ಸಲುಗೆ ಹುಡುಗರಾಗಿದ್ದಾಗಿನಿಂದಲೂ ಇತ್ತು. ಆದರೆ ಮಗಳ ಮದುವೆ ವಿಷಯಕ್ಕೆ ವಿಶಾಲಾಕ್ಷಮ್ಮನವರು ಮತ್ತು ಅವರ ಯಜಮಾನರು ತಲೆಚಿಟ್ಟು ಹಿಡಿಸಿಕೊಂಡು ಕೂತಿದ್ದಾಗ ಶಾಮೂನ ಇಷ್ಟಾನಿಷ್ಟದ ಬಗ್ಗೆ ಅವರು ಯಾಕೆ ತಲೆಕೆಡಿಸಿಕೊಳ್ಳಲು ಹೋದಾರು? ಅಲ್ಲದೆ ಏಳೆಂಟು ತಿಂಗಳ ಮುಂಚೆ ಘಟಿಸಿ ಹೋದ ವಸುಂಧರಾ-ಶ್ರೀನಿವಾಸ್‌ರ ಪ್ರಸಂಗ ಬಂಧು ಬಳಗದ ವಲಯದಲ್ಲಿ ಎಲ್ಲರೂ ಮಾತಾಡಿಕೊಳ್ಳುವಂತಾಗಿದ್ದು ವಸುಂಧರಾಳನ್ನು ಸೊಸೆ ಮಾಡಿಕೊಳ್ಳುವ ವಿಷಯಕ್ಕೆ

ಅವರು ಮನಸ್ಸಿನಲ್ಲೇ ಎಳ್ಳು ನೀರು ಬಿಟ್ಟಿದ್ದರು. ಒಂದು ರೀತಿಯಲ್ಲಿ ಅವಳೀಗ ಕಳಂಕಿತಳು. ಅದಕ್ಕೆ ತಕ್ಕಂತೆ ಶಾಮೂ ಮತ್ತು ಶ್ಯಾಮೂನ ತಂಗಿ ಇಬ್ಬರಿಗೂ ಒಂದು ಮದುವೆ ಪ್ರಸ್ತಾಪ ಬಂತು. ಅದು ತಿಪಟೂರಿನಲ್ಲಿದ್ದ ವಿಶಾಲಾಕ್ಷಮ್ಮನವರ ಮೊದಲ ಮಗಳು ಶಾರದಾಳ ಕಡೆಯ ಬಂಧುಗಳಿಂದ ಬಂದ ಪ್ರಸ್ತಾಪ. ಆ ಕುಟುಂಬದಲ್ಲೂ ಮದುವೆಗೆ ಇದ್ದ ಅಣ್ಣ ತಂಗಿ ಇದ್ದರು. ಅಲ್ಲಿಯೂ ಅಣ್ಣ ತಂಗಿಯ ಮದುವೆ ಸೆಟಲ್ ಆಗದೆ ಮದುವೆಯ ವಯಸ್ಸು ಮೀರುತ್ತ ಬಂದಿತ್ತು. ಹಾಗಾಗಿ ಇದು ಪರಸ್ಪರ ಕೊಟ್ಟು ತಂದು ಕೊಳ್ಳುವ ಪ್ರಸ್ತಾಪ. ಅಂದರೆ ಶಾಮೂನ ತಂಗಿಯನ್ನು ಆ ಕುಟುಂಬದ ಅಣ್ಣ ಮದುವೆಯಾಗುವುದು; ಹಾಗೆಯೇ ಶಾಮೂ ಆ ಹುಡುಗನ ತಂಗಿಯನ್ನು ಮದುವೆಯಾಗುವುದು. ಆ ಹುಡುಗನಿಗೆ ತಾಲ್ಲೂಕು ಕಛೇರಿಯಲ್ಲಿ ಮೊದಲ ದರ್ಜೆ ಸಹಾಯಕ ಹುದ್ದೆ ಇದ್ದುದರಿಂದ ಮತ್ತು ತಿಪಟೂರಿಗೆ ಸಮೀಪದ ಹಳ್ಳಿಯಲ್ಲಿ ಸ್ವಲ್ಪ ಜಮೀನು ಇದ್ದದ್ದರಿಂದ ಜೀವನಕ್ಕೇನೂ ಯೋಚನೆಯಿಲ್ಲ ಎಂಬ ಕಾರಣದಿಂದ ಮತ್ತು ಶಾಮೂ ಕೂಡ ಒಳ್ಳೆ ಕಂಪೆನಿಯಲ್ಲಿ ಬೆಂಗಳೂರಿನಲ್ಲಿ ಕೆಲಸದಲ್ಲಿದ್ದುದರಿಂದ ಎರಡೂ ಕುಟುಂಬಗಳೂ ಮೊದಲ ಹಂತದಲ್ಲಿ ಒಪ್ಪಿದುವು. ಇನ್ನು ಪರಸ್ಪರ ಗಂಡು ಹೆಣ್ಣು ನೋಡುವ ಪ್ರಕ್ರಿಯೆಯೂ ನಡೆಯಿತು. ಶಾಮೂನ ತಂಗಿಯನ್ನು ಮದುವೆಯಾಗಲಿರುವ ಹುಡುಗ ಲಕ್ಷಣವಾಗಿಯೇ ಇದ್ದ. ಹಾಗಾಗಿ ಸರೋಜಳ ಮದುವೆ ತಡವಾದರೂ ಒಳ್ಳೆಯ ಕಡೆಯೇ ಕೂಡಿಬಂತು ಎಂಬ ಸಂತಸ ಒಂದು ಕಡೆ ಆದರೆ ಶಾಮೂ ಮದುವೆಯಾಗಬೇಕಾಗಿದ್ದ ಹುಡುಗಿ ಶಾಮೂಗೆ ಹೋಲಿಸಿದರೆ ತುಂಬ ಲಕ್ಷಣವಾಗಿದ್ದ ಹುಡುಗಿ ಎಂದು ಹೇಳುವಂತಿರಲಿಲ್ಲ. ಶಾಮೂ ಅನಿವಾರ್ಯವಾಗಿ ಈ ವಿಷಯದಲ್ಲಿ ಸ್ವಲ್ಪ ಮಟ್ಟಿನ ಹೊಂದಾಣಿಕೆ ಮಾಡಿಕೊಳ್ಳಲೇಬೇಕಾಯಿತು. ಎರಡೂ ಕುಟುಂಬಗಳಿಗೆ ಈ ಮದುವೆಗಳನ್ನು ನಡೆಸಬೇಕಾದ ಅನಿವಾರ್ಯತೆ ಇದ್ದದ್ದರಿಂದ ಹೆಚ್ಚೇನೂ ಚರ್ಚೆಯಿಲ್ಲದೆ ಒಪ್ಪಿಗೆ ಮತ್ತು ಅದರ ಹಿಂದೆಯೇ ನಿಶ್ಚಿತಾರ್ಥ ಕೂಡ ನಡೆದೇ ಹೋಯಿತು. ಎರಡೂ ಮದುವೆಗಳೂ ಒಂದೇ ದಿನ ಒಂದೇ ಕಡೆ ನೆರವೇರುವುದೆಂದು ನಿಶ್ಚಯಿಸಿದರು. ಅಷ್ಟರ ಮಟ್ಟಿಗೆ ಎರಡೂ ಕಡೆಯ ಬಂಧುಗಳ ಊಟೋಪಚಾರಕ್ಕೆ ಸಂಬಂಧಿಸಿದ ಖರ್ಚುವೆಚ್ಚ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತಿತ್ತು.

ವಿಶಾಲಾಕ್ಷಮ್ಮನವರಿಗೆ ಹತ್ತಿರದ ಬಂಧುಗಳೆಂದರೆ ವಸುಂಧರಾಳ ಕುಟುಂಬದವರೇ. ಅಣ್ಣತಂಗಿ ಇಬ್ಬರ ಮದುವೆಯೂ ಒಟ್ಟಿಗೆ ನಡೆಯುತ್ತಿದ್ದುದರಿಂದ ಜೋಯಿಸರಾದಿಯಾಗಿ ಮನೆಯವರೆಲ್ಲರೂ ಮದುವೆಯ ಸಿದ್ಧತೆಗೆ ಸಹಕರಿಸಬೇಕಾಗಿತ್ತು. ನರಸಿಂಹ ಜೋಯಿಸರು ಶಾಮೂನ ಕುಟುಂಬದ ಕಡೆಯ ಮುಖ್ಯ ಪುರೋಹಿತರೂ ಆಗಿರಬೇಕೆಂದು ಕೇಳಿಕೊಂಡರು. ಸಾವಿತ್ರಮ್ಮನವರು ಎರಡು ದಿನಕ್ಕೊಮ್ಮೆ ಅವರ ಮನೆಗೆ ಹೋಗಿ ಬೆಳಗಿನಿಂದ ಸಂಜೆಯವರೆಗೆ ಆಗಬೇಕಾದ ಕೆಲಸಗಳಿಗೆ ನೆರವಾಗಿ ನಿಂತರು. ವಸುಂಧರಾ ಕೂಡ ಶನಿವಾರ ಮತ್ತು ಭಾನುವಾರ ಹಾಗೂ ಉಳಿದಂತೆ ರಜಾ ಇದ್ದ ದಿನ ಅವರ ಮನೆಗೆ ಹೋಗಿ ನೆರವಾಗತೊಡಗಿದಳು. ಅಂತೂ ಆ ವರ್ಷದ ಶ್ರಾವಣದಲ್ಲಿ ಮದುವೆಗಳು ನಡೆದೇ ಹೋದುವು.

ಅಧ್ಯಾಯ–10

ವಸುಂಧರಾ ಶಾಲೆಯಲ್ಲಿ ಕೆಲಸಕ್ಕೆ ಸೇರಿ ಎರಡು ವರ್ಷ ಮುಗಿಯುವ ಹೊತ್ತಿಗೆ ಹೇಮಾಳ ಎಂ.ಎ. ವ್ಯಾಸಂಗ ಮುಗಿದು ಅವಳು ಉನ್ನತ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾದಳು. ತನ್ನ ಆಪ್ತ ಗೆಳತಿ ಎಂ.ಎ. ಪದವೀಧರೆಯಾದದ್ದು ವಸುಂಧರಾಗೆ ಎಲ್ಲಿಲ್ಲದ ಸಂತಸ ನೀಡಿತು. ಅದಕ್ಕಾಗಿ ಒಂದು ದಿನ ತನ್ನ ಅಮ್ಮನಿಗೂ ಹೇಳಿ ಮನೆಗೇ ಕರೆದು ಜಾಮೂನು, ಬೋಂಡ ಮಾಡಿಸಿ ಭರ್ಜರಿಯಾಗಿ ಸತ್ಕರಿಸಿದಳು. ಗೆಳತಿಯರಿಬ್ಬರೂ ತಮ್ಮ ಕಾಲೇಜು ದಿನಗಳನ್ನು ನೆನಪಿಸಿಕೊಂಡು ಬಹಳಷ್ಟು ಹರಟೆ ಕೊಚ್ಚಿದರು. ಮಾತಿನ ಮಧ್ಯೆ ಮಮತಾ ಮೇಡಮ್‌ಗೆ ಈಗ ಬೆಂಗಳೂರಿಗೇ ವರ್ಗವಾಗಿದ್ದು ಒಂದು ದಿನ ಸಿಟಿ ಬಸಿನಲ್ಲಿ ಪ್ರಯಾಣಿಸುತ್ತಿರಬೇಕಾದರೆ ಅವರು ಸಿಕ್ಕಿದ ಸಂಗತಿ ಹಾಗೂ ಮನೆಗೆ ಬರುವಂತೆ ಹೇಳಿದ್ದನ್ನು ತಿಳಿಸಿದಳು. ಒಂದು ಭಾನುವಾರ ಕುಮಾರಾ ಪಾರ್ಕ್‌ನಲ್ಲಿದ್ದ ಅವರ ಮನೆಯನ್ನು ಹುಡುಕಿಕೊಂಡು ಹೋಗಿದ್ದು ಅವರಿಗೆ ಮಿಡಲ್ ಸ್ಕೂಲ್‌ನಲ್ಲಿ ಓದುತ್ತಿರುವ ಸುಮಾರು ಹತ್ತು ವರ್ಷದ ಒಬ್ಬ ಮಗ ಇರುವ ಸಂಗತಿ ತಿಳಿಸಿದಳು. ಅವರ ಮನೆಯಲ್ಲಿ ಮಮತಾ ಮೇಡಮ್ ಜೊತೆ ತಂದೆ ತಾಯಿ ಕೂಡ ಇರುವುದು ತನಗೆ ಸೋಜಿಗವುಂಟುಮಾಡಿತು ಎಂದು ತಿಳಿಸಿದಳು. ಅವರ ಯಜಮಾನರು ಮನೆಯಲ್ಲಿ ಎಲ್ಲೂ ಕಾಣಲಿಲ್ಲ ಎಂದು ತಿಳಿಸಿದಳು. ಬಹುಶಃ ಅವರ ಯಜಮಾನರು ಬೇರೆ ಊರಿನಲ್ಲಿ ಕೆಲಸ ಮಾಡುತ್ತಿರಬೇಕೇನೋ ಎಂದಳು.

ವಸುಂಧರಾಳ ತಾಯಿ ಹೇಮಾಳನ್ನು "ಏನು ಮದುವೆ ಮಾಡಿಕೊಂಡು ಗಂಡನ ಮನೆಗೆ ಹೋಗೋದೋ ಇಲ್ಲ ಕೆಲಸಕ್ಕೆ ಸೇರೋದೋ ಯಾವುದು ನಿನ್ನ ಪ್ಲಾನ್ ಎಂದು ಕೇಳಿದರು. ಅದಕ್ಕೆ ಹೇಮಾ "ನಮ್ಮ ಮನೆಯಲ್ಲಿ ಮದುವೆ ಮಾಡುವ ಹಂಚಿಕೆಯಲ್ಲಿದ್ದಾರೆ. ಅದಕ್ಕೆ ತಕ್ಕಂತೆ ನಮ್ಮ ದೂರದ ಸಂಬಂಧಿ ದಾವಣಗೆರೆಯಲ್ಲಿ ಸಿ.ಎ. ಮಾಡಿ ಪ್ರಾಕ್ಟೀಸ್ ಮಾಡುತ್ತಾ ಇರುವವರೊಬ್ಬರು ಇದ್ದಾರೆ. ಯಾವುದೋ ಮದುವೆಯ ಸಂದರ್ಭದಲ್ಲಿ ನನ್ನನ್ನು ನೋಡಿದ್ದ ಅವರ ಅಪ್ಪ ಅಮ್ಮ ನನ್ನನ್ನೇ ಸೊಸೆಯಾಗಿ ತಂದುಕೊಳ್ಳಲು ತುಂಬಾ ಇಷ್ಟಪಟ್ಟಿದ್ದಾರಂತೆ. ಮುಂದಿನ ತಿಂಗಳು ಹೆಣ್ಣು ನೋಡುವ ಶಾಸ್ತ್ರ ಪೂರೈಸಲು ಮಗನ ಸಮೇತ ನಮ್ಮ ಮನೆಗೆ ಬರುತ್ತಿದ್ದಾರೆ" ಎಂದು ಹೇಳಿದಳು. ತಾನು ಬಹಳ ವರ್ಷಗಳ ಹಿಂದೆ ಚಿಕ್ಕವನಾಗಿದ್ದಾಗ ಆ ಹುಡುಗನನ್ನು ನೋಡಿದ ನೆನಪು. ಆಮೇಲೆ ನೋಡಿಲ್ಲ ಎಂದಳು. ವಸುಂಧರಾ ಗೆಳತಿಯನ್ನು ಅಭಿನಂದಿಸಿ ಅದೇ ಹುಡುಗನನ್ನು ನೀನೂ ಒಪ್ಪುವಂತಾಗಿ ಮದುವೆ ಪಕ್ಕಾ ಆಗಲಿ ಎಂದು ಹಾರೈಸಿದಳು.

ಗಂಡಿನ ಜೊತೆಗೆ ಅವನ ತಂದೆ ತಾಯಿ ಮತ್ತು ತಂಗಿ ಇಷ್ಟೂ ಜನ ಒಂದು ಭಾನುವಾರ ಹೇಮಾಳ ಮನೆಗೆ ಬಂದರು. ಹೆಣ್ಣು ನೋಡಿದ ಶಾಸ್ತ್ರ ಆಯಿತು. ಹುಡುಗನ ಕಡೆಯವರೆಲ್ಲರೂ ಹೇಮಾಳನ್ನು ಒಪ್ಪಿಕೊಂಡರು. ಹೇಮಾಳಿಗೂ ಅವರ ಮನೆಯವರಿಗೂ ಹುಡುಗ ಒಪ್ಪಿಗೆಯಾದ. ಹುಡುಗನ ಮುಖಭಾವ ನೋಡಿದರೆ ಅವನಿಗೆ ಹುಡುಗಿ ಒಪ್ಪಿಗೆಯಾದಂತೆ ತೋರುತ್ತಿತ್ತು. ಆದರೆ ಹುಡುಗ ತನ್ನ ಅಭಿಪ್ರಾಯವನ್ನು ಒಂದು ವಾರದ ನಂತರ ತಿಳಿಸುವುದಾಗಿ ಹೇಳಿದ. ಹುಡುಗನ ಮನೆಯವರು ಹೊರಡುವ ಮುಂಚೆ ಹೇಮಾಳ ಮನೆಯವರಿಗೆ ನೀವೇನೂ ಆತಂಕ ಪಡಬೇಡಿ. ತಮ್ಮ ಮಗನನ್ನು ನಾವೆಲ್ಲ ಒಪ್ಪಿಸುತ್ತೇವೆ ಎಂದು ಭರವಸೆ ಕೊಟ್ಟಿದ್ದರು. ಆದರೆ ಹೇಮಾಳೇ ಈ ವಿಷಯದಲ್ಲಿ ನೀವು ಯಾವುದೇ ಬಗೆಯ ಒತ್ತಡ ಹಾಕಬೇಡಿ. ಅವರಿಗೂ ಸಂಪೂರ್ಣವಾಗಿ ಒಪ್ಪಿಗೆಯಿದ್ದರೆ ಮಾತ್ರ ಮದುವೆ. ಇಲ್ಲದಿದ್ದರೆ ಬೇಡ. ಎಂದು ಖಡಾಖಂಡಿತವಾಗಿ ಹೇಳಿದಳು. ವರದಕ್ಷಿಣೆಯ ವಿಷಯಕ್ಕೆ ಗಂಡಿನ ಕಡೆಯವರು ಸ್ವಲ್ಪ ಆಸೆ ತೋರಿಸಿದರು. ಆದರೆ ಹೇಮಾ ವರದಕ್ಷಿಣೆ ಕೊಡೋದಾದರೆ ಖಡಾಖಂಡಿತವಾಗಿ ಈ ಮದುವೆಗೆ ತನ್ನ ಒಪ್ಪಿಗೆ ಇಲ್ಲ ಎಂದು ಹೇಳಿಬಿಟ್ಟಳು. ವಾಸ್ತವವಾಗಿ ಗಂಡು, ಹೆಣ್ಣಿನ ಮನೆಯಲ್ಲೇ ತನ್ನ ಒಪ್ಪಿಗೆ ಸೂಚಿಸದೆ ಇರಲು ಮನೆಯವರು ಈ ಮುಂಚೆಯೇ ಮಾಡಿಕೊಂಡಿದ್ದ ಹಂಚಿಕೆಯೇ ಕಾರಣವಂತೆ. ಹೇಗೂ ಹೇಮಾ ಒಬ್ಬಳೇ ಹೆಣ್ಣು ಮಗಳಾದ್ದರಿಂದ ವರದಕ್ಷಿಣೆ ಕೇಳಿದರೆ ಕೊಡದೆ ಇರಲಾರರು. ನಮಗೆ ದೂರದ ಬಂಧುಗಳಾದ್ದರಿಂದ ವರದಕ್ಷಿಣೆಯ ವಿಷಯದಲ್ಲಿ ನಾವು ತೀರ ಒತ್ತಾಯ ಮಾಡುವುದು ಕಷ್ಟ. ಅವರು ವರದಕ್ಷಿಣೆ ಕೊಡಲು ಒಪ್ಪದೆ ಇದ್ದರೆ ಗಂಡು ಒಪ್ಪಲಿಲ್ಲ ಎಂದು ಹೇಳಿ ಆಮೇಲೆ ಜಾರಿಕೊಳ್ಳಬಹುದು ಎಂಬುದು ಅವರ ಹಂಚಿಕೆಯಾಗಿತ್ತಂತೆ. ಇತ್ತ ಒಂದು ವಾರ ಕಳೆಯುತ್ತ ಬಂದರೂ ಗಂಡು ತನ್ನ ಒಪ್ಪಿಗೆ ತಿಳಿಸಲಿಲ್ಲ. ಅವರ ಕಡೆಯಿಂದ ಖಚಿತವಾದ ಉತ್ತರ ಬಂದದ್ದನ್ನು ನೋಡಿಕೊಂಡು ಮುಂದುವರಿಯುವುದು ಎಂಬುದು ಹೇಮಾಳ ತಂದೆ ತಾಯಿಗಳ ಯೋಚನೆಯಾಗಿತ್ತು. ಹೇಮಾಳ ತಂದೆ ದಾವಣಗೆರೆಯವರೇ ಆದ ತಮ್ಮ ಅತ್ಯಂತ ಆತ್ಮೀಯ ಗೆಳೆಯ ವೀರಭದ್ರಪ್ಪನವರ ಮೂಲಕ ತಮ್ಮ ಸಮುದಾಯದ ಗುರುಗಳ ಕಿವಿಗೂ ಈ ಸಂಬಂಧದ ವಿಷಯ ಹಾಕಿಸಿದ್ದರಂತೆ. ವೀರಭದ್ರಪ್ಪನವರು ಗಂಡಿನ ಮನೆಯವರಿಗೂ ತುಂಬಾ ಚೆನ್ನಾಗಿ ಪರಿಚಯವಿದ್ದವರೇ. ಹೇಮಾಳ ತಂದೆ ಸ್ವಾಮಿಗಳಿಗೆ ತುಂಬ ಬೇಕಾದವರಾಗಿದ್ದರು. ಹಾಗಾಗಿ ಸ್ವಾಮಿಗಳು ಹುಡುಗನ ತಂದೆ ಮತ್ತು ಹುಡುಗನಿಗೆ ಹೇಳಿ ಕಳಿಸಿ ಮಠಕ್ಕೆ ಕರೆಸಿಕೊಂಡು ಈ ಬಗ್ಗೆ ವಿಚಾರಿಸಿದರಂತೆ. ಅವರ ಮಾತುಕತೆಯಿಂದ ಹುಡುಗನನ್ನೂ ಒಳಗೊಂಡಂತೆ ಎಲ್ಲರಿಗೂ ಹುಡುಗಿ ಇಷ್ಟವಾಗಿದ್ದ ವಿಚಾರ ತಿಳಿದು ಗುರುಶಾಂತಪ್ಪನವರಿಗೆ ವರದಕ್ಷಿಣೆಯ ವಿಚಾರವಾಗಿ ಒತ್ತಾಯಿಸ ಕೂಡದೆಂದೂ ಅವರು ಮಠಕ್ಕೆ ಬಹಳ ನಿಷ್ಠರಾದ ಭಕ್ತರೆಂದೂ ಹೇಳಿದರಂತೆ. ಆದರೆ ಮಗನಿಗೆ ಸಿ.ಎ. ಮಾಡಿಸಲು ತುಂಬಾ ಖರ್ಚು ಬಂತು ಎಂದೆಲ್ಲ ಅವರುಗಳು ಅಲವತ್ತುಕೊಂಡಾಗ ಸ್ವಾಮಿಗಳು "ಹುಡುಗಿ ಹೇಗೂ ಎಂ.ಎ. ಮಾಡಿದ್ದಾಳೆ

ಅಂತ ಹೇಳ್ತಿದ್ದೀರಿ. ಹರಿಹರದಲ್ಲಿರುವ ನಮ್ಮ ಕಾಲೇಜಿನಲ್ಲಿ ಸದ್ಯಕ್ಕೆ ತಾತ್ಕಾಲಿಕವಾಗಿ ಉಪನ್ಯಾಸಕಿಯಾಗಿ ನೇಮಿಸಿಕೊಳ್ಳೋಣ. ಮುಂದೆ ಸಂದರ್ಭ ಬಂದಾಗ ಪರ್ಮನೆಂಟ್ ಮಾಡಬಹುದು" ಎಂದರಂತೆ. ಹುಡುಗಿಗೆ ಸ್ವಾಮಿಗಳು ಕೆಲಸ ಕೊಡುತ್ತಾರೆ ಎಂದು ತಿಳಿದು ಹಾಲುಕರೆಯುವ ಹಸುವನ್ನು ಸಾಕಿಕೊಂಡಂತಾಗುತ್ತದೆಂದು ಪರಮ ಸಂತೃಪ್ತರಾಗಿ ಮರುದಿನವೇ ಗಂಡಿನ ಸಂಪೂರ್ಣ ಒಪ್ಪಿಗೆ ಇದೆ ಎಂದು ಕಾಗದ ಬರೆದು ಒಂದು ಒಳ್ಳೆಯ ದಿನ ನೋಡಿ ಸರಳವಾಗಿ ನಿಶ್ಚಿತಾರ್ಥದ ಶಾಸ್ತ್ರ ಇಟ್ಟುಕೊಳ್ಳಬಹುದೆಂದು ಸೂಚಿಸಿದರಂತೆ.

ಮುಂದಿನ ಎರಡು ವಾರಗಳಲ್ಲಿ ಹೇಮಾಳ ಮದುವೆಯ ನಿಶ್ಚಿತಾರ್ಥ ನಡೆದು ಆಚೆಗೆ ಒಂದು ತಿಂಗಳಿಗೆ ತುಮಕೂರಿನ ರುದ್ರಯ್ಯನವರ ಛತ್ರದಲ್ಲಿ ಮದುವೆ ಕೂಡ ನಡೆದೇ ಹೋಯಿತು. ಹೇಮಾಳ ಮದುವೆಗೂ ಶಾಮೂ ಮತ್ತು ಅವನ ತಂಗಿಯ ಮದುವೆಗೂ ಹದಿನೈದು ದಿನಗಳ ಅಂತರವಿದ್ದುದು ಒಂದು ರೀತಿಯಲ್ಲಿ ವಸುಂಧರಾಗೆ ಅನುಕೂಲವಾಯಿತು. ವಸುಂಧರಾ ಮದುವೆಗೆ ಹಿಂದಿನ ದಿನವೇ ಹೋಗಿ ತನ್ನಿಂದ ಏನಾದರೂ ಸಹಾಯವಾಗಬೇಕೆ ಎಂದು ಕೇಳಿಕೊಂಡು ಇಡೀ ದಿನ ಮದುವೆ ಮನೆಯಲ್ಲಿ ಸಂಭ್ರಮದಿಂದ ಓಡಾಡಿ ಧಾರೆ ಮತ್ತು ಅರತಕ್ಷತೆ ಮುಗಿಸಿಕೊಂಡೇ ವಾಪಸಾದಳು. ಜೋಯಿಸರು ಮತ್ತು ಸಾವಿತ್ರಮ್ಮನವರು ಮಾತ್ರ ಸಾಯಂಕಾಲದ ಆರತಕ್ಷತೆ ಸಮಾರಂಭಕ್ಕೆ ಹೋಗಿ ಬಂದರು. ಧಾರೆಯ ಮರುದಿನವೇ ಗಂಡಿನ ಮನೆಯವರು ಹೇಮಾಳನ್ನು ಕರೆದುಕೊಂಡು ದಾವಣಗೆರೆಗೆ ಹೋದದ್ದೂ ಆಯಿತು. ಮಾತೆತ್ತಿದರೆ ಕಷ್ಟ ಸುಖ ಎಲ್ಲವುದಕ್ಕೂ ಏನು ಹೇಳಿಕೊಳ್ಳುವುದಕ್ಕೂ ಬಲಭುಜದಂತಿದ್ದ ಹೇಮಾಳನ್ನು ಕಳಿಸಿಕೊಡಲು ಎಲ್ಲರಿಗಿಂತ ಹೆಚ್ಚು ಸಂಕಟಪಟ್ಟವಳು ವಸುಂಧರಾ. ಆದರೆ ಇದು ಎಂದಾದರೂ ಆಗಲೇಬೇಕಿತ್ತಲ್ಲವೆ? ಒಂದು ವೇಳೆ ತಾನೆಣಿಸಿದಂತೆ ಎಲ್ಲವೂ ನಡೆದಿದ್ದರೆ ತಾನೇ ಈ ಊರನ್ನು ಬಿಟ್ಟು ಹೇಮಾಳನ್ನೂ ಅಗಲಿ ಹೋಗಿರಬೇಕಾಗಿತ್ತಲ್ಲವೆ? ಎಂದುಕೊಂಡಳು.

* * *

ಈಗ ವಸುಂಧರಾಳ ಬದುಕಿನಲ್ಲಿ ಇನ್ನೊಂದು ಅಧ್ಯಾಯ ಶುರುವಾಯಿತು. ಎರಡು ವರ್ಷದ ಬಿಡುವಿನ ನಂತರ ಮತ್ತೊಮ್ಮೆ ವಿದ್ಯಾರ್ಥಿ ಜೀವನ. ಬೆಂಗಳೂರಿನ ಮಲ್ಲೇಶ್ವರದಲ್ಲಿದ್ದ ಸರ್ಕಾರಿ ಬಿ.ಎಡ್. ಕಾಲೇಜಿಗೆ ಅವಳನ್ನು ಡೆಪ್ಯೂಟ್ ಮಾಡಿದ್ದರು. ಬಿ.ಎ. ಯಲ್ಲಿ ಎಚ್.ಇ.ಪಿ ವಿಷಯಗಳನ್ನು ತೆಗೆದುಕೊಂಡಿದ್ದು ಈಗ ಬಿ.ಎಡ್.ನಲ್ಲಿ ಅವಳಿಗೆ ಅನುಕೂಲವೇ ಆಯಿತು. ಆದರೆ ಬಿ.ಇಡಿ.ಯ ಪಠ್ಯಕ್ರಮ ಅಧ್ಯಾಪಕ ವಿದ್ಯಾರ್ಥಿಗಳಿಗೆ ಬಿಡುವೇ ಕೊಡದಂಥ ಕಠಿಣವೇ ಎನ್ನಬಹುದಾದ ಪಠ್ಯಕ್ರಮ. ಮನೆಗೆ ಬಂದ ಮೇಲೂ ಓದು, ಹೋಮ್ ವರ್ಕ್ ಎಂದು ತುಂಬಾ ಪರಿಶ್ರಮ ಮತ್ತು ಸಮಯವನ್ನು ಬೇಡುವ ಕೋರ್ಸ್. ಈ ಹಿಂದೆ ಬಿ.ಎಡ್ ಮಾಡಿದ ತನ್ನ ಶಾಲೆಯ ಸಹೋದ್ಯೋಗಿಗಳಿಂದ ಈ ಬಗೆಗೆ ಕೇಳಿ ತಿಳಿದಿದ್ದರಿಂದ ಒಂದು ಶೈಕ್ಷಣಿಕ ವರ್ಷ

ಪೂರ್ತಿ ಬೆಂಗಳೂರಿನಲ್ಲೇ ನೆಲೆ ನಿಲ್ಲಲು ಏನು ಮಾಡುವುದು ಎಂದು ಚಿಂತಿಸುತ್ತಿದ್ದಾಗ ಕಾಲೇಜಿಗೆ ಹತ್ತಿರದಲ್ಲೇ ಒಂದು ಒಳ್ಳೆಯ ಲೇಡೀಸ್ ಪಿ.ಜಿ. ಅರ್ಥಾತ್ ಪೇಯಿಂಗ್ ಗೆಸ್ಟ್ ಹೋಮ್ ಇದೆ ಅಂತ ಹಿಂದಿನ ವರ್ಷ ಬಿ.ಎಡ್. ಮಾಡುವ ಸಂದರ್ಭದಲ್ಲಿ ಅಲ್ಲಿ ತಂಗಿದ್ದ ತುಮಕೂರಿನ ಸೋದರ ಪ್ರೌಢಶಾಲೆಯ ಅಧ್ಯಾಪಕಿಯೊಬ್ಬರಿಂದ ತಿಳಿದುಬಂತು. ಅಲ್ಲೇ ಇದ್ದುಕೊಂಡು ಒಂದು ವರ್ಷ ಹೇಗೋ ಕಳೆದುಬಿಡುವುದು ಎಂದು ತೀರ್ಮಾನಿಸಿದಳು. ಹದಿನೈದು ದಿನಕ್ಕೋ ತಿಂಗಳಿಗೋ ಒಮ್ಮೆ ತುಮಕೂರು ಮನೆಗೆ ಬಂದು ಹೋದರಾಯಿತೆಂದುಕೊಂಡಳು. ತರಗತಿಗಳು ಪ್ರಾರಂಭವಾಗುವುದಕ್ಕೆ ಒಂದು ವಾರ ಮುಂಚೆ ಆ ಅಧ್ಯಾಪಕಿಯನ್ನು ಕರೆದುಕೊಂಡುಹೋಗಿ ಅಲ್ಲಿ ಇರುವುದಕ್ಕೆ ವ್ಯವಸ್ಥೆ ಮಾಡಿಕೊಂಡು ಬಂದಳು. ಅವಳಿಗೆ ಇರಲು ಗೊತ್ತು ಮಾಡಿದ ಕೊಠಡಿಯಲ್ಲಿ ಇನ್ನಿಬ್ಬರು ಮಹಿಳೆಯರು ಇರುತ್ತಾರೆಂದು ಅದರ ಮ್ಯಾನೇಜರ್ ತಿಳಿಸಿದರು. ಕೊಠಡಿ ಸಾಕಷ್ಟು ವಿಶಾಲವಾಗಿದ್ದು ಮೂರೂ ಜನಕ್ಕೆ ಪ್ರತ್ಯೇಕವಾದ ಮಂಚ, ಟೇಬಲ್ಲು, ಕುರ್ಚಿ, ಸಾಮಾನುಗಳನ್ನು ಇಟ್ಟುಕೊಳ್ಳಲು ಅಲಮಾರು ಎಲ್ಲ ಇದ್ದುದರಿಂದ ತೃಪ್ತಿಯಾಯಿತು. ಬಾತ್ ರೂಮ್ ಮಾತ್ರ ಮೂರೂ ಜನರಿಗೆ ಒಂದೇ. ಊಟಕ್ಕೆ ತಿಂಡಿಗೆ ಅಲ್ಲಿಯ ಎಲ್ಲ ವಾಸಿಗಳೂ ಒಂದೇ ಡೈನಿಂಗ್ ಹಾಲ್ನಲ್ಲಿ ಸೇರಬೇಕಿತ್ತು. ಮಧ್ಯಾಹ್ನದ ಊಟಕ್ಕೆ ಅನೇಕರಿಗೆ ಇರಲು ಆಗುತ್ತಿರಲಿಲ್ಲ. ಅಂಥವರೆಲ್ಲ ರಾತ್ರಿ ಊಟ ಮಾತ್ರ ಅಲ್ಲಿ ಮಾಡುತ್ತಿದ್ದರು. ಮ್ಯಾನೇಜರ್‌ನಿಂದ ಹಿಡಿದು ಪರಿಚಾರಕ ಸಿಬ್ಬಂದಿಯವರೆಗೆ ಎಲ್ಲರೂ ಮಹಿಳೆಯರೇ ಅಗಿದ್ದುದರಿಂದ ಒಂದು ರೀತಿಯಲ್ಲಿ ನಿರಾಳವೆನಿಸಿತು.

ಮೊದಲನೇ ಸಲ ಊರು ಮನೆ ಬಿಟ್ಟು ಮಗಳೊಬ್ಬಳನ್ನೇ ಪರಸ್ಥಳದಲ್ಲಿ ಇರಲು ಕಳಿಸುವುದು ಅಪ್ಪ ಅಮ್ಮ ಇಬ್ಬರಿಗೂ ಕಿಂಚಿತ್ತೂ ಇಷ್ಟವಿಲ್ಲದ ಸಂಗತಿ. ಆದರೆ ವಿಧಿಯಿಲ್ಲದೆ ಪರಿಸ್ಥಿತಿಗೆ ತಲೆಬಾಗಲೇ ಬೇಕಾಯಿತು. ಅವಳನ್ನು ಕಳಿಸಿಕೊಡುವ ಮುಂಚೆ, "ಪರಸ್ಥಳ, ಒಂಟಿ ಹೆಣ್ಣು ನೀನು. ಜೋಪಾನ" ಎಂದು ಅಪ್ಪ ಅಮ್ಮ ಇಬ್ಬರೂ ಸೂಚ್ಯವಾಗಿ ಅವಳಿಗೆ ಹೇಳಿಕಳಿಸಿದ್ದರು. ತನಗೆ ಬೇಕಾಗುವಷ್ಟು ಕನಿಷ್ಠ ಅಗತ್ಯದ ಸಾಮಾನುಗಳನ್ನು ತೆಗೆದುಕೊಂಡು ಮೊದಲನೇ ಸಲವಾದ್ದರಿಂದ ಅಪ್ಪನನ್ನೂ ಜೊತೆಯಲ್ಲಿ ಕರೆದುಕೊಂಡು ಬೆಳಿಗ್ಗೆಯೇ ಹೊರಟು ಬಂದು ತನ್ನ ಕೊಠಡಿಯಲ್ಲಿ ತಳ ಊರಿದಳು.

ವಸುಂಧರಾಗೆ ಕೊಠಡಿಯಲ್ಲಿ ಸಹವಾಸಿಗಳಾಗಿ ದೊರೆತ ಇಬ್ಬರು ಮಹಿಳೆಯರಲ್ಲಿ ಒಬ್ಬಳು ನರ್ಸಿಂಗ್ ಹೋಂ ಒಂದರಲ್ಲಿ ರಿಸೆಪ್ಷನಿಸ್ಟ್ ಆಗಿ ಕೆಲಸ ಮಾಡುತ್ತಿದ್ದ ಸುಮಾರು 35–40 ವರ್ಷದ ನೋಡಲು ಲಕ್ಷಣವಾಗಿದ್ದ ಗಂಭೀರ ಸ್ವಭಾವದ ವಿದ್ಯಾ ಎಂಬ ವಿವಾಹಿತ ಮಹಿಳೆ. ಬೆಂಗಳೂರಿಗೆ 30 ಕಿಲೋಮೀಟರ್ ದೂರದ ಒಂದು ಊರಿನವಳು. ತನ್ನದು ಪಾಳಿಯ ಮೇಲೆ ಕೆಲಸ ಮಾಡುವಂಥದಾದ್ದರಿಂದ ಸರಿಯಾದ ಸಮಯಕ್ಕೆ ದಿನವೂ ಬಂದು ಹೋಗುವುದು ಕಷ್ಟ ಎನ್ನುವ ಕಾರಣಕ್ಕೆ ಈ ಪಿ.ಜಿ.ಯಲ್ಲಿ ಇದ್ದುಕೊಂಡು ವಾರಕ್ಕೊಮ್ಮೆಯೋ ಕೆಲವು ಸಲ ಹದಿನೈದು ದಿನಕ್ಕೊಮ್ಮೆಯೋ ಊರಿಗೆ ಬಂದು ಹೋಗುತ್ತಿದ್ದಳು. ಆಕೆಯದು ಪ್ರೇಮವಿವಾಹವಂತೆ. ಮನೆಯಲ್ಲಿ ಎಂಟು ವರ್ಷದ ಒಬ್ಬ ಮಗಳು, ಐದು ವರ್ಷದ ಒಬ್ಬ ಮಗ ಮತ್ತು

ವಿಧವೆ ತಾಯಿ ಇದ್ದಾರಂತೆ. ಗಂಡ ಪದವೀಧರನಾದರೂ ಯಾವುದೋ ಒಂದು ಸಣ್ಣ ಕೆಲಸದಲ್ಲಿದ್ದುಕೊಂಡು ಊರಿನಲ್ಲಿ ಮಕ್ಕಳನ್ನು ಓದಿಸಿಕೊಂಡು ವಿಧವೆ ತಾಯಿಯನ್ನು ನೋಡಿಕೊಂಡು ಇದ್ದಾನಂತೆ. ಸಂಸಾರ ತೂಗಿಸಲು ಗಂಡನ ಸಂಬಳವಷ್ಟೇ ಸಾಕಾಗದ ಕಾರಣ ಇವಳು ಇಲ್ಲಿ ಕೆಲಸ ಮಾಡುತ್ತಿದ್ದಾಳೆ. ಅವಳ ಕೊಠಡಿಯ ಮತ್ತೊಬ್ಬ ಸಂಗಾತಿ ವಸುಂಧರಾಳಿಗಿಂತ ಒಂದೆರಡು ವರ್ಷ ಕಿರಿಯಳಾದ ಒಬ್ಬ ಸಾಫ್ಟ್‌ವೇರ್ ಇಂಜಿನಿಯರ್ ಭಾರತಿ. ಅವಳ ಊರು ಮೈಸೂರು. ಅಲ್ಲಿಯ ಸ್ವಂತ ಮನೆಯಲ್ಲಿ ತಾಯಿ, ಮತ್ತು ತಮ್ಮ ಇದ್ದರು. ತಮ್ಮ ಪಿ.ಯು.ಸಿ.ಯಲ್ಲಿ ಓದುತ್ತಿದ್ದವನು. ಮಕ್ಕಳಿಬ್ಬರೂ ಇನ್ನೂ ತುಂಬಾ ಚಿಕ್ಕವರಾಗಿದ್ದಾಗಲೇ ತಾಯಿ ಗಂಡನಿಂದ ವಿಚ್ಛೇದನ ತೆಗೆದುಕೊಂಡು ಮಕ್ಕಳೊಂದಿಗೆ ಪ್ರತ್ಯೇಕವಾಗಿದ್ದರು. ಅವರು ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ವಸುಂಧರಾ ಮತ್ತು ವಿದ್ಯಾರಿಗಿಂತ ಭಾರತಿ ವಯಸ್ಸಿನಲ್ಲಿ ಚಿಕ್ಕವಳು. ನೋಡಲು ಅತ್ಯಂತ ಆಕರ್ಷಕಳಾದ ಯುವತಿ. ಇವರಿಬ್ಬರಿಗೆ ಹೋಲಿಸಿದರೆ ಅವಳು ಅಲ್ಟ್ರಾ ಮಾಡರನ್ ಎಂದು ಹೇಳಬಹುದಾದವಳು. ಬಹಳ ಮಾಡ್ ಆಗಿ ಡ್ರೆಸ್ ಮಾಡುತ್ತಿದ್ದಳು. ತಾನೊಬ್ಬಳೇ ಸ್ವತಂತ್ರವಾಗಿರುವ ಆಸೆ ಇದ್ದರೂ ಸೇಫ್ಟಿ ಸಲುವಾಗಿ ಈ ಪಿ.ಜಿ. ಯಲ್ಲಿ ಇದ್ದಳು. ನಗರದಲ್ಲಿ ಓಡಾಡಲು ಅವಳು ಒಂದು ಸ್ಕೂಟಿ ಕೂಡ ಇಟ್ಟುಕೊಂಡಿದ್ದಳು.

ವಸುಂಧರಾ ಬೆಳಿಗ್ಗೆ ತಿಂಡಿ ತಿಂದು ಮಧ್ಯಾಹ್ನದ ಊಟವನ್ನು ಬಾಕ್ಸ್‌ನಲ್ಲಿ ಹಾಕಿಕೊಂಡು ಹೋಗುತ್ತಿದ್ದಳು. ಇವಳ ಇನ್ನಿಬ್ಬರು ಜೊತೆಗಾತಿಯರು ಬೇಗನೆ ತಿಂಡಿ ತಿಂದು ಹೊರಟುಹೋಗುತ್ತಿದ್ದರು. ವಿದ್ಯಾ ಮಧ್ಯಾಹ್ನದ ಊಟವನ್ನು ನರ್ಸಿಂಗ್ ಹೋಮ್‌ಗೆ ಸೇರಿದ್ದ ಕ್ಯಾಂಟೀನಿನಲ್ಲಿ ಮಾಡುತ್ತಿದ್ದಳು. ಭಾರತಿ ಕೂಡ ಹಾಗೆಯೇ. ಇಬ್ಬರೂ ಮತ್ತೆ ಡೈನಿಂಗ್ ಹಾಲ್‌ಗೆ ಬರುತ್ತಿದ್ದುದು ರಾತ್ರಿ ಒಂಬತ್ತು ಗಂಟೆಗೇ. ವಿದ್ಯಾ ಅಪರೂಪಕ್ಕೆ ನೈಟ್ ಶಿಫ್ಟ್ ಇದ್ದಾಗ ಸಂಜೆಯೇ ಹೊರಟು ಹೋಗಿ ಮರುದಿನ ಬೇಗನೆ ಬಂದುಬಿಡುತ್ತಿದ್ದಳು. ವಸುಂಧರಾ ಮಾತ್ರ ಸಂಜೆಯ ಟೀ ಕೂಡ ಪಿ.ಜಿ.ಯಲ್ಲೇ ತೆಗೆದುಕೊಳ್ಳುತ್ತಿದ್ದಳು. ಕೆಲವೊಮ್ಮೆ ಕಾಲೇಜಿನಿಂದ ಬರುವಾಗ ಸಹಪಾಠಿಗಳ ಜೊತೆ ಹೋಟೆಲ್‌ನಲ್ಲಿ ಕಾಫಿ ಕುಡಿದು ಬರುತ್ತಿದ್ದಳು.

ಕಾಲೇಜಿಗೆ ಸೇರಿದ ಮೂರು ತಿಂಗಳ ನಂತರ ಪ್ರಾಕ್ಟೀಸ್ ಟೀಚಿಂಗ್‌ಗೆ ಯಾವು ಯಾವುದೋ ಪ್ರೌಢಶಾಲೆಗೆ ಹೋಗಿ ಪಾಠ ಮಾಡವುದು ಇರುತ್ತಿತ್ತು. ಅದಕ್ಕೆಲ್ಲಾ ಎಲ್ಲ ರೀತಿಯ ತಯಾರಿ ನಡೆಸಿಕೊಂಡು ಹೋಗುತ್ತಿದ್ದಳಾಗಿ ಅಲ್ಲಿಯೂ ಅವಳು ತನ್ನ ನಿರೀಕ್ಷಕರ ಮೆಚ್ಚುಗೆ ಗಳಿಸಿದಳು. ಒಂದು ಭಾನುವಾರ ಶಿಕ್ಷಣ ಮನಶ್ಶಾಸ್ತ್ರ ವಿಷಯಕ್ಕೆ ಸಂಬಂಧಸಿದಂತೆ ರಾಜಾಜಿ ನಗರದಲ್ಲಿದ್ದ ತನ್ನ ಸಹಪಾಠಿ ಮೇಡಮ್ ಒಬ್ಬರ ಮನೆಗೆ ಹೋಗಿ ಪಿ.ಜಿ. ಗೆ ಹಿಂದಿರುಗಲು ಸಿಟಿ ಬಸ್‌ಗಾಗಿ ಕಾಯುತ್ತ ಸ್ಟಾಪ್‌ನಲ್ಲಿ ನಿಂತಿದ್ದಳು. ಇವಳು ಹೋದ ಸ್ವಲ್ಪ ಹೊತ್ತಿಗೆ ಶಾಮು ಕೂಡ ಎಲ್ಲಿಗೋ ಹೋಗಲು ಬಂದ. ವಸುಂಧರಾಳನ್ನು ಅಲ್ಲಿ ನೋಡಿ ಅವನಿಗೆ ತುಂಬ ಆಶ್ಚರ್ಯ ಮತ್ತು ಸಂತೋಷವಾಯಿತು. ಶಾಮೂ ಮದುವೆಯಾದ ಮೇಲೆ ಬೆಂಗಳೂರಿನಲ್ಲೇ ಮನೆ ಮಾಡಿರುವ ಸಂಗತಿ

ವಸುಂಧರಾಗೆ ಗೊತ್ತಿತ್ತು. "ನೀನೂ ಹಲವಾರು ವರ್ಷಗಳಿಂದ ಟ್ರೈನಿನಲ್ಲಿ ಓಡಾಡಿ ಸುಸ್ತಾಗಿದ್ದೆ. ಈಗ ಮನೆಮಾಡಿದ್ದು ಒಳ್ಳೆಯದೇ ಆಯಿತು" ಎಂದು ತುಮಕೂರಿನಲ್ಲಿ ಅವರ ಮನೆಗೆ ಹೋಗಿದ್ದಾಗ ಅವನಿಗೆ ಹೇಳಿಯೂ ಇದ್ದಳು. ಅಪ್ಪ ಅಮ್ಮನಿಗೆ "ನೀವು ತಾನೆ ಈಗ ತುಮಕೂರಿನಲ್ಲಿ ಏಕಿರಬೇಕು, ಬೆಂಗಳೂರಿಗೇ ಬಂದುಬಿಡಿ" ಎಂದು ಶಾಮೂ ಹೇಳಿದರೂ ಅವರು "ಬೆಂಗಳೂರಿನ ಗಜಿಬಿಜಿ ನಮಗೆ ಸರಿಹೊಂದುವುದಿಲ್ಲ. ನಾವು ಇಲ್ಲೇ ಇರುತ್ತೀವಿ. ನೀವೇ ಗಂಡ ಹೆಂಡತಿ ಆಗಾಗ್ಗೆ ಬಂದು ಹೋಗುತ್ತಾ ಇರಿ" ಎಂದು ಹೇಳಿದ್ದರು. "ನನ್ನ ಮನೆ ಇಲ್ಲೇ ಒಂದೆರಡು ಕ್ರಾಸ್ ದಾಟಿ ಒಂದು ಹತ್ತು ನಿಮಿಷ ನಡೆದರೆ ಸಿಕ್ಕುತ್ತೆ. ನಿನಗೆ ತೋರಿಸಿರುತ್ತೀನಿ ಬಾ. ಆಮೇಲೆ ಇಬ್ಬರೂ ಇಲ್ಲಿಗೇ ಬಂದು ಬಸ್ ಹತ್ತೋಣ. ನೀನು ಹೋಗೋ ಬಸ್‌ನಲ್ಲೇ ನಿನ್ನ ಪಿ.ಜಿ. ಸ್ಟಾಪ್ ಆದಮೇಲೆ ಮೂರು ಸ್ಟಾಪ್ ನಂತರ ನಾನು ಹೋಗಬೇಕಾದ ನನ್ನ ಕಲೀಗ್ ಮನೆ" ಎಂದು ಹೇಳಿದ. ವಸುಂಧರಾ ಆಗಲಿ ಎಂದು ಅವನೊಂದಿಗೆ ಹೆಜ್ಜೆ ಹಾಕಿದಳು.

ಅವನು ಹೇಳಿದಂತೆ ಒದು ಹದಿನೈದು ನಿಮಿಷದ ದಾರಿ ಸವೆಸಿದ ಮೇಲೆ ಅವನ ಔಟ್ ಹೌಸ್ ಸಿಕ್ಕಿತು. ಹೋಗುತ್ತಾ ದಾರಿಯಲ್ಲಿ ಅವನ ಹೆಂಡತಿಯನ್ನು ತವರು ಮನೆಯವರು ಬಾಣಂತನಕ್ಕೆ ಕರೆದುಕೊಂಡು ಹೋಗಿರುವ ಬಗ್ಗೆ ತಿಳಿಸಿದ. ವಸುಂಧರಾಳು ಅದನ್ನು ಊಹಿಸಿದ್ದಳು. ಕಾರಣ ಕಳೆದ ವಾರ ಊರಿಗೆ ಹೋದಾಗ ತನ್ನ ಚಿಕ್ಕಮ್ಮನ ಮನೆಯವರು ರಜನಿಗೆ ಮಾಡಿದ ಸೀಮಂತದ ಕಾರ್ಯಕ್ರಮ ಮತ್ತು ಅದಕ್ಕೆ ತಾವು ಹೋಗಿದ್ದನ್ನು ತಿಳಿಸಿದ್ದರು. ಒಳಗೆ ಕರೆದುಕೊಂಡು ಹೋಗಿ ಕೂತಿರು ಎಂದು ಹೇಳಿ ಕಾಫಿಗೆ ನೀರಿಡಲು ಒಳಕ್ಕೆ ಹೋದ. ಆಮೇಲೆ ಮನೆ ತೋರಿಸಿದ. ಒಂದು ರೂಮು, ಹಾಲು, ಅಡಿಗೆ ಮನೆ ಬಚ್ಚಲು ಮನೆಗಳಿದ್ದ ಒಂದು ಸಣ್ಣ ಮನೆ. ಆದರೆ ಎಲ್ಲ ಅನುಕೂಲಗಳೂ ಇರುವ ಮನೆ. ಗಂಡ ಹೆಂಡತಿ ಇಬ್ಬರಿಗೆ ಸದ್ಯಕ್ಕೆ ಸಾಕು ಎಂದು ಹೇಳಿದಳು. ಒಳಕ್ಕೆ ಹೋಗಿ ಒಂದು ಪ್ಲೇಟಿನಲ್ಲಿ ನಾಲಕ್ಕು ಬಿಸ್ಕತ್ತು ಎರಡು ಕಪ್ ಕಾಫಿ ಇಟ್ಟುಕೊಂಡು ಬಂದು ಅವಳ ಮುಂದೆ ಇಟ್ಟು, ಒಂದು ಕಪ್ಪನ್ನು ತಾನು ತೆಗೆದುಕೊಂಡ. ಸ್ವಲ್ಪ ಹೊತ್ತು ಅದೂ ಇದೂ ಮಾತನಾಡಿದ ಮೇಲೆ ಬಾ ಬಸ್‌ಗೆ ಹೋಗೋಣ ಎಂದು ಹೇಳಿ ಬಸ್ ಸ್ಟಾಪ್‌ಗೆ ಬಂದು ಬಸ್ ಹತ್ತಿದರು. ವಸುಂಧರಾ ಮಲ್ಲೇಶ್ವರಂನಲ್ಲಿ ಬಸ್ಸಿಳಿದು ಪಿ.ಜಿ.ಯತ್ತ ಹೊರಟಳು. ಶಾಮೂ ಅಲ್ಲಿಂದ ಮುಂದೆ ಮೂರನೇ ಸ್ಟಾಪ್‌ನಲ್ಲಿ ಇಳಿಯಬೇಕಾಗಿದ್ದರಿಂದ ಅವನು ಪ್ರಯಾಣ ಮುಂದುವರಿಸಿದ.

ಅಧ್ಯಾಯ-11

ತುಮಕೂರಿನ ಕಾಲೇಜಿನಲ್ಲಿ ಪುಟಿಯುವ ಉತ್ಸಾಹದಿಂದ ಪ್ರಾಂಭವಾಗಿದ್ದ ಶ್ರೀನಿವಾಸನ ವೃತ್ತಿಜೀವನಕ್ಕೆ ವಸುಂಧರಾಳ ಪ್ರೀತಿ ಎಲ್ಲಿಲ್ಲದ ಉತ್ಕರ್ಷವನ್ನು ತಂದುಕೊಟ್ಟು ತನ್ನಂಥ ಅದೃಷ್ಟವಂತನೇ ಇಲ್ಲ ಎಂದು ಸಂತಸದ ಉತ್ತುಂಗವನ್ನೇರಿದ್ದ. ಆದರೆ ಅದೇ ಹಾಸನದ ಸರ್ಕಾರಿ ಕಾಲೇಜಿನಲ್ಲಿ ಶ್ರೀನಿವಾಸನ ವೃತ್ತಿ ಜೀವನ ಯಾಂತ್ರಿಕವಾಗಿ ಏನೊಂದೂ ಉತ್ಸಾಹವಿಲ್ಲದೆ ಪ್ರಾರಂಭವಾಗಿತ್ತು. ಏರಿದಷ್ಟೇ ವೇಗವಾಗಿ ಅತ್ಯಂತ ಅನಿರೀಕ್ಷಿತವಾಗಿ ನಿರಾಶೆಯ ಪಾತಾಳವನ್ನು ಮುಟ್ಟಿದ್ದ. ಸಂತಸ ಎನ್ನುವುದು ಇಷ್ಟೊಂದು ಕ್ಷಣಿಕವೆ ಎಂದು ಅನೇಕ ವೇಳೆ ಅವನ ಮನಸ್ಸು ಗಲಿಬಿಲಿಗೊಳ್ಳುತ್ತಿತ್ತು. ಅಲ್ಲಿಗೆ ಬಂದ ಒಂದುತಿಂಗಳ ಕಾಲ ಯಾವುದೋ ಒಂದು ಲಾಜ್‌ನಲ್ಲಿದ್ದುಕೊಂಡೇ ಕಾಲೇಜಿಗೆ ಬಂದುಹೋಗುತ್ತಿದ್ದ. ಆದರೆ ಅದೇ ಊರಿನ ಎಸ್.ಆರ್. ಮಾಸ್ಟರ್ ಅರ್ಥಾತ್ ಎಸ್. ರಾಮಸ್ವಾಮಿಯವರು ತುಮಕೂರಿನಿಂದ ಹಾಸನಕ್ಕೆ ಬಂದಿದ್ದಾಗ ಭಾನುವಾರ ಶ್ರೀನಿವಾಸನ್ನು ಭೇಟಿಮಾಡಿ ಹೆಚ್ಚುಕಡಿಮೆ ಇಡೀ ದಿನ ಅವನೊಂದಿಗೆ ಕಳೆದಿದ್ದರು. ಮಾತ್ರವಲ್ಲ ಅವನಿಗೆ ಎಲ್ಲ ರೀತಿಯ ಸಮಾಧಾನವನ್ನು ಹೇಳಿ ತುಮಕೂರಿನಲ್ಲಿ ಹಿಂದೆ ಅವರಿಬ್ಬರೂ ಜೊತೆಯಲ್ಲಿ ವಾಸಮಾಡುವುದಕ್ಕೆ ಮುಂಚೆ ಶ್ರೀನಿವಾಸ ವಾಸವಿದ್ದಂಥ ಸಣ್ಣ ಮನೆಯೊಂದನ್ನು ಹುಡುಕಿಕೊಟ್ಟು "ನಿಮಗೆ ಅಡಿಗೆ ಮಾಡುವುದು ಬೇಸರವಾದರೆ ಹೋಟೆಲ್‌ನಲ್ಲೇ ಊಟಮಾಡಿ. ಆದರೆ ಹೆಚ್ಚು ದಿನ ಲಾಜ್‌ನಲ್ಲಿ ಇರುವುದು ಸರಿಯಲ್ಲ ಎಂದು ಹೇಳಿ ಮರುದಿನದಿಂದಲೇ ಆ ಮನೆಯಲ್ಲಿ ಇರಲು ಏರ್ಪಾಟುಮಾಡಿದ್ದರು. ಅವರು ಮತ್ತೆಯೂ ಎರಡುದಿನ ರಜೆಹಾಕಿದ್ದರಿಂದ ಅದರ ಮರುದಿನವೂ ಬಂದು ಶ್ರೀನಿವಾಸನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ತಮ್ಮ ಪತ್ನಿ ಮತ್ತು ತಂದೆತಾಯಿಯರಿಗೆ ಪರಿಚಯಮಾಡಿಕೊಟ್ಟು ಅಂದು ರಾತ್ರಿ ತಮ್ಮ ಮನೆಯಲ್ಲೇ ಊಟಮಾಡಿಸಿ ಕಳಿಸಿದ್ದರು. ಶ್ರೀನಿವಾಸನು ವಸುಂಧರಾಳನ್ನು ಮದುವೆಯಾಗದಿರಲು ಕಾರಣವಾದ ತನಗೆ ಬಂದೊದಗಿದ ಇಕ್ಕಟ್ಟಿನ ಪರಿಸ್ಥಿತಿಯನ್ನು ಅವರೊಂದಿಗೆ ಹೇಳಿಕೊಂಡು ತನ್ನನ್ನೇ ಮನಸೋ ಇಚ್ಛೆ ದೂಷಿಸಿಕೊಂಡ. ತನ್ನಂಥ ಸಡಿಲ ಮನಸ್ಸಿನ ವ್ಯಕ್ತಿ ಪ್ರೀತಿ ಪ್ರೇಮ ಎಂದೆಲ್ಲ ಎಂದೂ ಹೋಗಲೇ ಬಾರದಿತ್ತು. ತನಗೆ ಬದುಕೇ ಬೇಡವೆನ್ನಿಸಿಬಿಟ್ಟಿದೆ. ಅನ್ಯಾಯವಾಗಿ ಒಬ್ಬ ಹೆಣ್ಣುಮಗಳ ಜೀವನದೊಂದಿಗೆ ಚೆಲ್ಲಾಟವಾಡಿಬಿಟ್ಟೆ. ತನ್ನ ತಪ್ಪನ್ನು ಯಾರ್‍ಯಾರೂ ಕ್ಷಮಿಸುವುದಿಲ್ಲ ಎಂದೆಲ್ಲ ಪರಿತಪಿಸಿದ.

ರಾಮಸ್ವಾಮಿಯವರು ತಮ್ಮದೇ ದೃಷ್ಟಿಕೋನದಿಂದ ಅವನ ಪರಿಸ್ಥಿತಿಯನ್ನು ವಿಶ್ಲೇಷಿಸಿ ಕೆಲವೊಂದು ಸನ್ನಿವೇಶಗಳು ನಮ್ಮ ಕೈಮೀರಿ ಹೋಗಿಬಿಡುತ್ತವೆ. ಏನೂ ಮಾಡಲಾಗುವುದಿಲ್ಲ. ನಿಮ್ಮ ಮನಸ್ಸಿನಲ್ಲಿ, ಏನೇ ಆದರೂ ವಸುಂಧರಾಳೊಂದಿಗೆ

ಬಾಳಬೇಕೆಂದು ಇತ್ತೇ ಹೊರತು ಅನ್ಯಾಯಮಾಡಬೇಕೆಂಬ ಭಾವ ಲವಲೇಶವೂ ಇರಲಿಲ್ಲ ಎನ್ನುವುದಷ್ಟೇ ಸದ್ಯದ ಪರಿಸ್ಥಿತಿಯಲ್ಲಿ ಮುಖ್ಯವಾದ್ದು. ನಾವೆಲ್ಲರೂ ಪರಿಸ್ಥಿತಿಯ ಕೂಸುಗಳು ಎಂದು ಹೇಳಿ ಅವನ ಮನಸ್ಸಿನ ದುಗುಡವನ್ನು ಕಡಿಮೆಮಾಡಿ ಸಂತೈಸಲು ಯತ್ನಿಸಿದ್ದರು. ಅವರ ಮಾತಿನಿಂದ ಸ್ವಲ್ಪ ಮಟ್ಟಿನ ಸಮಾಧಾನವುಂಟಾದರೂ ಅಪರಾಧೀ ಭಾವ ಉಳಿದೇ ಇತ್ತು. ವೈಯಕ್ತಿಕ ಜೀವನದ ನೋವುಗಳು ಏನೇ ಇದ್ದರೂ ಅದನ್ನೆಲ್ಲಾ ತನ್ನಲ್ಲೇ ನುಂಗಿಕೊಂಡು ತನ್ನ ಕರ್ತವ್ಯಕ್ಕೆ ಕಿಂಚಿತ್ತೂ ಕುಂದುಬಾರದ ರೀತಿಯಲ್ಲಿ ತೊಡಗಿಸಿಕೊಳ್ಳುತ್ತಿದ್ದ.

ಹಾಸನಕ್ಕೆ ಬಂದು ನಾಲ್ಕೈದು ತಿಂಗಳಾದರೂ ಊರಿಗೆ ಹೋಗಬೇಕೆಂದು ಅವನಿಗೆ ಅನಿಸಲೇ ಇಲ್ಲ. ವಸುಂಧರೆಯನ್ನು ಮದುವೆಯಾಗುವುದನ್ನು ತಪ್ಪಿಸಿದಳೆಂದು ಹೆತ್ತ ತಾಯಿಯ ಮೇಲೆ ಎಲ್ಲಿಲ್ಲದ ಅಸಮಾಧಾನವಿತ್ತು. ಆ ಕಾರಣಕ್ಕಾಗಿಯೇ ಊರಿಗೆ ಹೋಗುವುದನ್ನು ತಪ್ಪಿಸಿದ್ದ. "ನಿಮ್ಮಮ್ಮ ನಿನಗಾಗಿ ದಿನವೂ ಹಂಬಲಿಸುತ್ತಿದ್ದಾಳೆ, ಬರದೆ ಇರಬೇಡ. ಒಂದು ಸಲ ಬಂದುಹೋಗು ಎಂದು ತಂದೆಯವರು ಬರೆದ ಕಾಗದಕ್ಕೆ ಯಾವುದೇ ಜವಾಬುಕೊಡುವ ಗೋಜಿಗೇ ಹೋಗಲಿಲ್ಲ. ಕೊನೆಗೆ ಇನ್ನೊಮ್ಮೆ ಊರಿಗೆ ಬಂದ ರಾಮಸ್ವಾಮಿಯವರು ಶ್ರೀನಿವಾಸ ಊರಿಗೆ ಹೋಗಿಲ್ಲವೆಂಬುದನ್ನು ಕಂಡುಕೊಂಡು ಹಾಗೆ ಮಾಡುವುದು ಸರಿಯಲ್ಲ; ಊರಿಗೆ ಹೋಗಿಬನ್ನಿ ಎಂದು ಒತ್ತಾಯಿಸಿದ ಮೇಲೆ ಅದರ ಮುಂದಿನ ಶನಿವಾರ ಊರಿಗೆ ಹೋದ.

ಊರಿಗೆ ಹೋದಮೇಲೂ ಅಮ್ಮನೊಂದಿಗೆ ಮುಖಕೊಟ್ಟು ಮಾತನಾಡಲಿಲ್ಲ. ಆಕೆಯೇ ಅವನು ಕುಳಿತಿದ್ದ ಕಡೆಗೆ ಬಂದು ಮೈಕೈಯೆಲ್ಲ ಸವರಿ "ಅಯ್ಯೋ ನನ್ನಪ್ಪಾ ಎಷ್ಟೊಂದು ಸಣ್ಣಗಾಗೋಗಿದ್ದೀಯಲ್ಲಾ ಮಗನೆ" ಎಂದು ಕಣ್ಣೀರು ಸುರಿಸುತ್ತ ಕುಳಿತರು. ಆಗಲೂ ಶ್ರೀನಿವಾಸನ ಮನ ಕರಗಲಿಲ್ಲ. "ಆಯಿತಲ್ಲ ನಿನ್ನ ಆಸೆ ಈಡೇರಿತಲ್ಲ. ಇನ್ನು ಯಾರಿಗೆ ಏನಾದರೇನು" ಎಂದು ಮುನಿಸು ತೋರಿದ. ಎಷ್ಟು ಹೊತ್ತು ಹಾಗೆ ಇರಲು ಸಾಧ್ಯ? ಕೊನೆಗೆ ಸಮಾಧಾನ ತಂದುಕೊಂಡು ಅಪ್ಪ ಅಮ್ಮನ ಜೊತೆ ಕೂತು ಊಟ ಮಾಡಿದ. ಒಂದು ದಿನ ಅಲ್ಲಿದ್ದು ಭಾನುವಾರ ಸಂಜೆ ಮತ್ತೆ ಅಲ್ಲಿಂದ ಹಾಸನಕ್ಕೆ ಹೊರಟು ಬಂದ. ಮಗ ಸದ್ಯ ಬಂದುಹೋದನಲ್ಲ ಎನ್ನುವುದೇ ಅಪ್ಪ ಅಮ್ಮನಿಗೊಂದು ಭಾರೀ ನೆಮ್ಮದಿ ತಂದಿತು. ಅದರ ನಂತರದಲ್ಲಿ ಹದಿನೈದು ದಿನಕ್ಕೋ ಒಂದು ತಿಂಗಳಿಗೋ ಒಮ್ಮೆ ಬಂದು ಹೋಗುತ್ತಿದ್ದ.

ಮಗನೊಂದಿಗೆ ಮದುವೆಯ ವಿಷಯವನ್ನು ಪ್ರಸ್ತಾಪಿಸಲೇ ಆಕೆಗೆ ಹೆದರಿಕೆಯಾಗುತ್ತಿತ್ತು. ಹಾಸನಕ್ಕೆ ವರ್ಗವಾಗಿ ಒಂದು ವರ್ಷ ಕಳೆಯುತ್ತ ಬಂದಿತೆನ್ನುವಾಗ ಇನ್ನೇನು ಮದುವೆ ಸೀಸನ್ ಶುರುವಾಗುತ್ತದೆನ್ನುವಾಗ ತಾಯಿ ಧೈರ್ಯಮಾಡಿ ಮಗನೊಂದಿಗೆ ಮದುವೆಯ ವಿಷಯ ಪ್ರಸ್ತಾಪಿಸಿದಳು. ಆದರೆ ಅದಕ್ಕೆ ಶ್ರೀನಿವಾಸನದು ಒರಟು ಉತ್ತರ. "ನಾನು ಆ ಬ್ರಾಹ್ಮಣರ ಹುಡುಗಿಯನ್ನು ಮದುವೆಯಾಗಬಾರದು ಅಂತ ತಾನೆ ನಿನ್ನ ಹಠ. ಅದು ಈಡೇರಿತಲ್ಲ ಬಿಡು ಇನ್ನೇನು?" "ಹಾಗಲ್ಲಪ್ಪ ನನಗೆ ಈಗ ಮೊದಲಿನ ಹಾಗೆ ಮನೆಕೆಲಸ ಮಾಡಲಾಗುತ್ತಿಲ್ಲ. ನಿನ್ನ ಜೊತೆಯವರಿಗೆಲ್ಲ

ಆಗಲೇ ಮದುವೆಯಾಗಿದೆ. ನಿನಗೂ ಮದುವೆಯ ವಯಸ್ಸು ಮೀರಕ್ಕೆ ಮುಂಚೆ ಮದುವೆ ಮಾಡಿ ನಮ್ಮ ಜವಾಬ್ದಾರಿ ಕಳೆದುಕೊಳ್ಳಬೇಡವೇನು?" ಎಂದೆಲ್ಲ ವಾದಿಸಿದರೆ, ಶ್ರೀನಿವಾಸನು "ಮನೆ ಕೆಲಸ ಮಾಡಕ್ಕೆ ಅಗದಿದ್ದರೆ ಯಾರಾದರೂ ಕೆಲಸದವರನ್ನು ಗೊತ್ತುಮಾಡಿಕೋ. ನನಗೆ ಸದ್ಯಕ್ಕೆ ಮದುವೆಯಾಗಲು ಆಸಕ್ತಿ ಇಲ್ಲ" ಎಂದಷ್ಟೇ ಹೇಳಿ ಎಲ್ಲೋ ಹೊರಟುಬಿಟ್ಟ. ಅಪ್ಪ ಅಮ್ಮನಿಗೆ ಇದೇ ಒಂದು ದೊಡ್ಡ ತಲೆನೋವಾಯಿತು. ಆಗಲಿ ಇನ್ನೊಂದಷ್ಟು ದಿವಸ ಕಳೆಯಲಿ ಎಂದು ಸುಮ್ಮನಾದರು.

ಇವರೇನೋ ಸುಮ್ಮನಾದರು. ಆದರೆ ಶ್ರೀನಿವಾಸನಿಗೆ ತಮ್ಮ ಮಗಳನ್ನು ತಂದುಕೊಳ್ಳುತ್ತಾರೆಂದು ಕಾದುಕುಳಿತಿದ್ದ ಶ್ರೀನಿವಾಸನ ಸೋದರಮಾವ ಮತ್ತು ಅತ್ತೆ ಎಷ್ಟು ದಿನ ತಾನೆ ಸುಮ್ಮನಿದ್ದಾರು? ಕೊನೆಯ ಪಕ್ಷ ತಮ್ಮ ಮಗಳನ್ನೇ ಮದುವೆಯಾಗುತ್ತಾನೆಂಬ ಖಚಿತ ಭರವಸೆಯಾದರೂ ಶ್ರೀನಿವಾಸನಿಂದಲೋ ಅವನ ಅಪ್ಪ ಅಮ್ಮನಿಂದಲೋ ಬಂದಿದ್ದರೆ ಅವರು ಕಾಯಲು ಸಿದ್ಧವಿದ್ದರು. ಬ್ರಾಹ್ಮಣರ ಹುಡುಗಿಯನ್ನು ಪ್ರೀತಿಸಿದ ಸಂಗತಿ ಗೊತ್ತಿದ್ದೂ ಸೋದರಿಕೆಯ ಸಂಬಂಧವೆನ್ನುವ ಕಾರಣಕ್ಕೆ ಅವರು ಏನೂ ಆಕ್ಷೇಪವೆತ್ತಿರಲಿಲ್ಲ. ಮಗುವಾಗಿದ್ದಾಗಿನಿಂದಲೂ ತಾವು ಅಡಿಸಿಬೆಳೆಸಿದ ಹುಡುಗನೇ ಅಳಿಯನಾದರೆ ತಮ್ಮ ಮಗಳು ಸುಖವಾಗಿರುತ್ತಾಳೆಂಬ ಒಂದೇ ಕಾರಣಕ್ಕೆ ಶ್ರೀನಿವಾಸನ ತಾಯಿಗಿಂತ ಹೆಚ್ಚಿನ ಅಸಕ್ತಿ ತೋರಿದ್ದರು. ಮಗಳು ಲೀಲಳಿಗೂ ಈಗ 20 ತುಂಬಿ ಇಪ್ಪತ್ತೊಂದನೇ ವರ್ಷ. ಪಿ.ಯು.ಸಿ ವರೆಗೆ ಓದಿದ ಹೆಣ್ಣು. ಒಂದೆರಡು ಸಲ ಪಿಯುಸಿಯಲ್ಲಿ ಫೇಲಾಗಿದ್ದರಿಂದ ಅವಳೇ ಮುಂದೆ ಓದಲು ಆಸಕ್ತಿ ತೋರಲಿಲ್ಲ. ಗೃಹಿಣಿಗೆ ಅಷ್ಟು ಓದು ಸಾಕು ಎಂದು ಅವರ ತೀರ್ಮಾನ. ಅವಳೇನೂ ಕುರೂಪಿಯಲ್ಲ. ಲಕ್ಷಣವಾಗಿದ್ದವಳೇ. ಶ್ರೀನಿವಾಸನಿಗೆ ಹೋಲಿಸಿದರೆ ಸ್ವಲ್ಪ ಕುಳ್ಳು ಎಂಬುದೊಂದೇ ಅವಳ ಮೈನಸ್ ಪಾಯಿಂಟ್. ಶ್ರೀನಿವಾಸನ ಸೋದರಮಾವ ಮತ್ತು ಅತ್ತೆ ಒಂದು ದಿನ ಮನೆಗೆ ಬಂದು "ಇನ್ನೆಷ್ಟು ದಿನ ಅಂತ ನಾವು ಮಗಳನ್ನು ಮನೇಲಿ ಕೂಡಿಸಿಕೊಂಡಿರೋದು? ಈ ಸಲದ ಚೈತ್ರವೈಶಾಖದೊಳಗೆ ಮಗಳ ಮದುವೆ ಶ್ರೀನಿವಾಸನೊಂದಿಗೆ ಆಗದಿದ್ದರೆ ಋಣಾನುಬಂಧವಿಲ್ಲ ಅಂತ ತಿಳಿದುಕೊಂಡು ನಾವು ಬೇರೆ ಕಡೆ ಪ್ರಯತ್ನಿಸುತ್ತೀವಿ" ಎಂದು ಖಡಕ್ಕಾಗಿ ಹೇಳಿಬಿಟ್ಟರು. ಆಗ ನಿಂಗೇಗೌಡರು ಮತ್ತು ಅವರ ಹೆಂಡತಿ ಕೆಂಪಮ್ಮನವರು ಈಸಲ ಏನಾದರೂ ಒಂದು ಇತ್ಯರ್ಥ ಆಗಲೇಬೇಕು ಅಂತ ತೀರ್ಮಾನಿಸಿದರು.

ಮಳೆಗಾಲ ಕೆಮ್ಮು ದಮ್ಮು ಅಂತ ಮೂಲೆ ಹಿಡಿದು ಕೂತುಕೊಳ್ಳೋ ಸಂದರ್ಭ ಬರಬಹುದು ಎಂದು ಭಾವಿಸಿ ಶ್ರಾವಣ, ಭಾದ್ರಪದ ಕಳೆದ ಮೇಲೆ ಆ ತಿಂಗಳ ಕೊನೆಗೆ ಬಂದ ಮಗನೊಂದಿಗೆ ಅಪ್ಪ ಅಮ್ಮ ಇಬ್ಬರೂ ಪಟ್ಟುಹಿಡಿದು – "ಇಲ್ಲಾ ನೀನು ನಿಮ್ಮ ಮಾವನ ಮಗಳು ಲೀಲಳನ್ನು ಮದುವೆಯಾಗು. ಇಲ್ಲಾ ಬೇರೆ ಯಾರಾದರೂ ಸರಿ ನಮ್ಮ ಜನದಲ್ಲಿ ನಿನಗೆ ಒಪ್ಪಿಗೆಯಾದ ಹೆಣ್ಣನ್ನು ಮದುವೆಯಾಗು. ಈಗಲೇ ಮದುವೆ ಆಗಲ್ಲ ಹಾಗೆ ಹೀಗೆ ಅಂತ ಮಾತ್ರ ಹೇಳಬೇಡ. ನಾವು ತಾನೆ ಇನ್ನೆಷ್ಟು ದಿನ ಬದುಕಿರುತ್ತೀವಿ. ಏನೇ ಆದರೂ ಈಸಲದ ಚೈತ್ರ ವೈಶಾಖಮಾಸದಲ್ಲಿ ಮದುವೆ

ಆಗಬೇಕು. ಮುಂದೂಡೋ ಹಾಗಿಲ್ಲ" ಎಂದು ಹೇಳಿದರು. ಸರಿ ನನಗೆ ಇನ್ನೊಂದು ವಾರ ಟೈಮ್ ಕೊಡಿ ಅಂತ ಹೇಳಿದ. ಅದಕ್ಕೆ ಅವರು ಒಪ್ಪಿದರು. ಆಮೇಲೆ ನಿಂಗೇಗೌಡರು ಮಗನನ್ನೊಬ್ಬನನ್ನೇ ಕರೆದು ನಿಮ್ಮ ಅಮ್ಮನ ಅರೋಗ್ಯ ಏನೇನೂ ಸರಿಯಿಲ್ಲ. ನಿನ್ನ ಮದುವೆ ನೋಡಬೇಕು ಅನ್ನುವ ಅವಳ ಒಂದು ಅಸೆಯನ್ನು ಈಡೇರಿಸದೆ ಇರೋದು ಸರಿಯಲ್ಲ ಎಂದು ಹೇಳಿದರು.

ಹಾಸನಕ್ಕೆ ಬಂದ ನಂತರದಲ್ಲಿ ತನ್ನ ಆಪ್ತರಾದ ಎಸ್.ಆರ್. ಮಾಸ್ಟರ್ ಅವರೊಂದಿಗೂ ಚರ್ಚಿಸಿದ. ಅವರು ಎಲ್ಲ ಕೇಳಿ ವಸುಂಧರಾಳೊಂದಿಗಿನ ಬದುಕು ಮುಗಿದುಹೋದ ಅಧ್ಯಾಯ ಎಂಬ ಈಗಿನ ವಾಸ್ತವವನ್ನು ಒಪ್ಪಿಕೊಳ್ಳುವುದು ವಿವೇಕ ಎಂದು ಹೇಳಿ ಮದುವೆ ಆಗುವುದೇ ಆದರೆ ಮತ್ತೆಯೂ ಮುಂದಕ್ಕೆ ಹಾಹುವುದರಲ್ಲೇನೂ ಅರ್ಥವಿಲ್ಲ ಎಂಬ ಮಾತನ್ನು ಗಟ್ಟಿಗೊಳಿಸಿದರು. ಶ್ರೀನಿವಾಸನೂ ಈ ವಿಚಾರದಲ್ಲಿ ಇನ್ನು ಮೀನಮೇಷ ಎಣಿಸುವುದು ಸರಿಯಲ್ಲ ಎಂದು ತೀರ್ಮಾನಿಸಿದ. ಹಾಗೆ ತೀರ್ಮಾನಿಸಿದ ಮೇಲೂ ವಸುಂಧರಾಳ ಗುಣ, ಸ್ವಭಾವ, ಬುದ್ಧಿವಂತಿಕೆ ರೂಪಗಳಿಗೆ ಮನಸೋತಿದ್ದ ಅವನ ಕಣ್ಮುಂದೆ ಅವಳೇ ಬಂದು ನಿಲ್ಲುತ್ತಿದ್ದಳು. ಒಂದು ಕ್ಷಣವೂ ಅವಳನ್ನು ಅವನು ಮರೆತಿರಲಿಲ್ಲ. ಅವಳೊಂದಿಗೆ ಲೀಲಳನ್ನು ಅವನ ಮನಸ್ಸು ನಿಲ್ಲಿಸಿ ನೋಡಿತು. ಯಾವ ರೀತಿಯಲ್ಲೂ ಹೋಲಿಕೆ ಇಲ್ಲ. ಆದರೇನು ಬದುಕು ಕೊನೆಗೂ ಒಂದು ಹೊಂದಾಣಿಕೆ. ಈಗ ವಿಧಿಯಿಲ್ಲದೆ ಹೊಂದಾಣಿಕೆ ಮಾಡಿಕೊಳ್ಳಲೇ ಬೇಕು. ಯಾರೋ ಅಪರಿಚಿತ ಹೆಣ್ಣನ್ನು ವಿದ್ಯಾರ್ಹತೆ, ರೂಪುಗಳಿಗಾಗಿ ಒಪ್ಪಿಕೊಂಡರೂ ಅವಳು ವಸುಂಧರಳಿಗೆ ಪರ್ಯಾಯವಾಗಲು ಸಾಧ್ಯವೇ ಇಲ್ಲ. ಕಾರಣ ವಸು ತಾನು ಒಲಿದ ಹೆಣ್ಣು. ಹಾಗೆ ಒಲಿದ ಹೆಣ್ಣಲ್ಲದೆ ಹೋದ ಮೇಲೆ ಬೇರೆ ಯಾರೋ ಹೊರಗಿನವಳನ್ನು ತಂದು ಮನೆ ತುಂಬಿಸಿಕೊಳ್ಳುವುದಕ್ಕಿಂತ ತನ್ನ ತಂದೆತಾಯಿಗಳಿಗೆ ಮೆಚ್ಚಾದ, ಅದರಲ್ಲೂ ತಾಯಿಗೆ ತುಂಬಾ ಮೆಚ್ಚಾದ, ತಾನು ಒಲಿದ ಹೆಣ್ಣಲ್ಲದಿದ್ದರೂ ತನ್ನ ಬಗ್ಗೆ ತುಂಬಾ ಒಲವಿರುವ ತಾನು ಚಿಕ್ಕಮಗುವಾಗಿದ್ದಾಗಿನಿಂದಲೂ ಬಲ್ಲ, ಕುಳ್ಳಾದರೂ ಲಕ್ಷಣವಾಗಿರುವ ತನ್ನ ಮನೆಗೆ ಹೊಂದಿಕೊಂಡು ಹೋಗಬಲ್ಲ ಸೋದರಮಾವನ ಮಗಳು ಲೀಲಳನ್ನೇ ಕೈಹಿಡಿಯುವುದೆಂದು ತೀರ್ಮಾನಿಸಿದ. ಅದರಿಂದ ತನ್ನನ್ನು ಪ್ರೀತಿಸುವ ಸೋದರ ಮಾವ, ಅತ್ತೆ, ಅಪ್ಪ, ಅಮ್ಮ ಮತ್ತಿತರ ಬಂಧುವರ್ಗಕ್ಕೆ ಎಲ್ಲರಿಗೂ ಅತ್ಯಂತ ಸಂತೋಷವಾಗುತ್ತದೆ. ಇಷ್ಟೊಂದು ಜನಕ್ಕೆ ಸಂತೋಃಷವಾಗುತ್ತದೆಂದಾದರೆ ಹಾಗೆ ಮಾಡುವುದೇ ಸರಿಯೆಂದು ನಿರ್ಧರಿಸಿ ಊರಿಗೆ ಬಂದು ಅಪ್ಪ ಮತ್ತು ಅಮ್ಮನಿಗೆ ತನ್ನ ನಿರ್ಧಾರ ತಿಳಿಸಿದ. ಅಮ್ಮನಿಗೆ ಆದ ಸಂತೋಷಕ್ಕೆ ಪಾರವೇ ಇರಲಿಲ್ಲ. ಮರುದಿನವೇ ತನ್ನ ತಮ್ಮನಿಗೆ ಹೇಳಿಕಳಿಸಿ ಸಂತೋಷದ ಸಮಾಚಾರ ತಿಳಿಸಿದರು. ಈ ದಿನಕ್ಕಾಗಿಯೇ ವರ್ಷಗಳಿಂದ ಕಾದುಕುಳಿತಿದ್ದ ಅವರೆಲ್ಲರೂ ಅಪಾರ ಸಂತಸ ತಾಳಿದರು. ಅದರಲ್ಲಿ ಶ್ರೀನಿವಾಸನ ಒಂದು ಷರತ್ತು ಇದ್ದೇ ಇತ್ತು. ಅದೆಂದರೆ ಪರಿಮಿತ ಸಂಖ್ಯೆಯ ಬಂಧುಗಳೆದುರು ತೀರಾ ಸರಳ ರೀತಿಯಲ್ಲಿ ಮದುವೆ ನಡೆಸಬೇಕೆನ್ನುವುದು.

ಪರೀಕ್ಷೆಗಳೆಲ್ಲ ಮುಗಿದ ಮೇಲೆ ಆ ವರ್ಷ ಚೈತ್ರಮಾಸದಲ್ಲಿ ಒಂದು ಶುಭ

ಭಾನುವಾರ ಮಂಡ್ಯದ ಒಂದು ಛತ್ರದಲ್ಲಿ ನಡೆದ ವಿವಾಹ ಮುಹೂರ್ತದಲ್ಲಿ ಶ್ರೀನಿವಾಸ ಲೀಲಳ ಕೈಹಿಡಿದ. ಎಷ್ಟೇ ಸರಳವೆಂದರೂ ಹೆಣ್ಣಿನ ಕಡೆಯವರಿಗೆ ಒಬ್ಬಳೇ ಮಗಳ ಮದುವೆ ಅದ್ದೂರಿ ಮದುವೆ ಆಗಬೇಕೆಂಬ ಕಾರಣಕ್ಕೆ ಸಾಕಷ್ಟು ಅದ್ದೂರಿಯಾಗಿಯೇ ಇತ್ತು. ತನ್ನ ಕಡೆಯ ಆಪ್ತರಾಗಿ ಶ್ರೀನಿವಾಸನು ಕರೆದಿದ್ದುದು ಎಸ್.ಅರ್. ಮಾಸ್ಟರ್ ಮತ್ತು ಅವರ ಶ್ರೀಮತಿಯವರನ್ನು ಮಾತ್ರ.

ಲೀಲಾ ಶ್ರೀನಿವಾಸನ ಮನೆತುಂಬಿದಳು. ಆದರೆ ಮನತುಂಬಿದಳೆ ಎಂದರೆ ಅದಕ್ಕೆ ಉತ್ತರ ಯಾರು ಹೇಳಬೇಕು? ವಸುಂಧರಾಳನ್ನು ಮನಸಾರ ಮೆಚ್ಚಿ ಪ್ರೀತಿಯ ಚುಂಬನ ನೀಡಿದ್ದ ಶ್ರೀನಿವಾಸನಿಗೆ ತನ್ನ ಪಕ್ಕದಲ್ಲಿ ಹಾಸಿಗೆ ಹಂಚಿಕೊಂಡಿದ್ದ ಲೀಲಳೊಂದಿಗೆ ಮೈಹಂಚಿಕೊಳ್ಳಲು ಏನೋ ಹಿಂಜರಿಕೆ, ಏನೋ ತಳಮಳ. ನೂರೆಂಟು ಪ್ರಶ್ನೆಗಳು. ನೂರೆಂಟು ಸಂದಿಗ್ಧಗಳು. ಏಕೋ ಅವಳು ಪರಸ್ತ್ರೀಯೇನೋ ಎನಿಸತೊಡಗಿದಳು. ಲೀಲಳಿಗಾದರೋ ಅವನು ತನ್ನ ಪರಿಚಿತ ಮಾಮನೇ ಆದರೂ ಹೆಣ್ಣಿಗೆ ಸಹಜವಾದ ಲಜ್ಜೆ ಅವಳನ್ನಾವರಿಸಿತ್ತು. ಮನಸ್ಸನ್ನು ಒಬ್ಬಳಿಗೆ ಕೊಟ್ಟು ಮೈಯನ್ನು ಮತ್ತೊಬ್ಬಳಿಗೆ ಹೇಗೆ ಕೊಡುವುದು? ಅದೂ ಒಂದು ಬಗೆಯ ವ್ಯಭಿಚಾರವೇ ಅಲ್ಲವೆ? ಎಂಬ ಸಂದಿಗ್ಧದಲ್ಲೇ ಶ್ರೀನಿವಾಸನಿಗೆ ಆ ರಾತ್ರಿ ಕಳೆದು ಬೆಳಗಾಯಿತು.

ಅಧ್ಯಾಯ-12

ಹೇಮಾ ಗಂಡನ ಮನೆಗೆ ಹೋಗಿ ಐದು ತಿಂಗಳಾಗುತ್ತ ಬಂತು. ಪ್ರಾರಂಭದ ಒಂದೆರಡು ತಿಂಗಳು ಹನಿಮೂನು ಎಂದು ಅಲ್ಲಿ ಇಲ್ಲಿ ಸುತ್ತುವುದರಲ್ಲಿ ನೆಂಟರಿಷ್ಟರ ಮನೆಗಳಿಗೆ ಹೋಗುವುದರಲ್ಲಿ ಕಳೆದು ಹೊಯಿತು. ಅವಳ ಗಂಡ ಶಿವರಾಜು ನೋಡಲು ಸೌಮ್ಯ ಸ್ವಭಾವದವನಂತೆಯೇ ಕಾಣುವವನು. ಅವರ ತಾಯಿಗೆ ಹೋಲಿಸಿದರೆ ತುಂಬಾ ಮೆಲ್ಲನೆಯ ದನಿಯಲ್ಲಿ ಮಾತಾಡುವ ವ್ಯಕ್ತಿ. ಆದರೆ ಹೆಂಡತಿಯಾದವಳು ತನ್ನ ಮಾತನ್ನು ಕೇಳಬೇಕು, ತನಗೆ ಪ್ರತಿ ಹೇಳಬಾರದು ಎಂಬ ಸ್ವಭಾವದವನು. ಹೆಂಡತಿ ಎಂದರೆ ತನ್ನೆಲ್ಲ ಬೇಕು ಬೇಡಗಳನ್ನು ತಾನು ಬಾಯಿಂದ ಹೇಳುವುದಕ್ಕೆ ಮುಂಚೆಯೇ ತಿಳಿದುಕೊಂಡು ಅದನ್ನು ಮಾಡಬೇಕಾದವಳು, ತನ್ನ ಪೂರ್ತಿ ಯೋಗಕ್ಷೇಮ ನೋಡಿಕೊಳ್ಳಲು ಇರುವ ವ್ಯಕ್ತಿ ಎಂಬಂಥ ಧೋರಣೆಯವನು. ಮಠದ ಸ್ವಾಮಿಗಳು ಹೇಳಿದ ಮಾತಿಗೆ ತಕ್ಕಂತೆ ದಾವಣಗೆರೆಗೆ ಹೋದ ಮೂರನೇ ತಿಂಗಳೇ ಹೇಮಾಳಿಗೆ ಅಂಶಕಾಲಿಕ ಉಪನ್ಯಾಸಕಳೆಂದು ನೇಮಕ ಮಾಡಿದರು. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪೂರ್ಣ ಕಾಲಿಕ ಉಪನ್ಯಾಸಕನಿಗೆ ಅಗತ್ಯವಿರುವಷ್ಟು ಕಾರ್ಯಭಾರ ಸೃಷ್ಟಿಯಾಗುವುದರಿಂದ ಆಗ ತಾತ್ಕಾಲಿಕವಾಗಿ ಪೂರ್ಣಕಾಲಿಕ ಉಪನ್ಯಾಸಕಿಯಾಗಿ ನೇಮಿಸಿಕೊಳ್ಳುವುದಾಗಿ ಹೇಳಿದರು. ಅದರಂತೆ ಕಾಲೇಜಿಗೆ ಕೆಲಸಕ್ಕೆ ಹೋಗಲು ಪ್ರಾರಂಭಿಸಿದಳು. ಗಂಡ ಮನೆಯಲ್ಲೇ ಮುಂಭಾಗದಲ್ಲಿದ್ದ ಒಂದು ದೊಡ್ಡ ಕೊಠಡಿಯನ್ನು ತನ್ನ ಕಛೇರಿಯನ್ನಾಗಿ ಮಾಡಿಕೊಂಡು ಅಲ್ಲೇ ಪ್ರಾಕ್ಟೀಸ್ ನಡೆಸುತ್ತಿದ್ದ. ದಾವಣಗೆರೆ ಒಂದು ವಾಣಿಜ್ಯ ಕೇಂದ್ರವಾಗಿದ್ದರಿಂದ ಅವನಿಗೆ ಕ್ಲೈಯಂಟ್ಸ್ ಸಾಕಷ್ಟು ಮಂದಿ ಇದ್ದರು. ಅದಕ್ಕೆ ತಕ್ಕಂತೆ ದುಡಿಮೆಯೂ ಇತ್ತು. ಮನೆಯಲ್ಲಿ ಯಾವುದಕ್ಕೂ ಏನೂ ಕೊರತೆ ಇರಲಿಲ್ಲ. ಹೇಮಾಳಿಗೆ ಮೊದಲ ತಿಂಗಳ ಅಂಶಕಾಲಿಕ ವೇತನ ಎಂದು ಕಾಲೇಜಿನವರು 600 ರೂಪಾಯಿಗಳನ್ನು ನೀಡಿದರು. ಅದು ತನ್ನ ಮೊದಲ ಸಂಪಾದನೆ ಎಂದು ಅವಳಿಗೆ ಸಹಜವಾಗಿ ಹೆಮ್ಮೆ. ಅಂದು ವೇತನ ತೆಗೆದುಕೊಂಡು ಮಾಡಿದ ಮೊದಲ ಕೆಲಸವೆಂದರೆ ದಾರಿಯಲ್ಲಿ ಬರುತ್ತ ಸಿಗುವ ವಿನಾಯಕನ ದೇವಾಲಯಕ್ಕೆ ಹೋಗಿ ಅರ್ಚನೆ ಮಾಡಿಸಿಕೊಂಡು ಪ್ರಸಾದ ತೆಗೆದುಕೊಂಡು ಸ್ವೀಟ್ ಸ್ಟಾಲ್‌ನಲ್ಲಿ ಮನೆಯವರೆಲ್ಲರಿಗೂ ಸ್ವೀಟು ಖಾರ ಕಟ್ಟಿಸಿಕೊಂಡು ಬಂದು ತಾನೇ ಎಲ್ಲರಿಗೂ ಕೊಟ್ಟಳು. ಗಂಡ ಶಿವರಾಜು ವೇತನವನ್ನು ಈಸಿಕೊಂಡು ಬೀರುವಿನಲ್ಲಿಟ್ಟು ನಿನಗೆ ಬೇಕಾದಾಗ ಕೇಳು ನಿನ್ನ ಖರ್ಚಿಗೆ ಕೊಡುತ್ತೇನೆ ಎಂದು ಹೇಳಿದ. ಅವಳಿಗೆ ಅದರಿಂದ ಇರುಸು ಮುರುಸು ಆಯಿತು. ಆದರೂ ಏನೂ ಮಾತಾಡಲಿಲ್ಲ. ಆದರೆ ಕಷ್ಟವೆನಿಸತೊಡಗಿದ್ದೆಂದರೆ ಕೆಲಸಕ್ಕೆ ಹೋಗುವ ಮೊದಲು ಮನೆಗೆಲಸದಲ್ಲಿ ಅತ್ತೆಗೆ ನೆರವಾಗುತ್ತಿದ್ದಳು. ಮೊದಲೆಲ್ಲ ಅವರೇ ಅಡುಗೆ

ತಿಂಡಿ ಮಾಡುತ್ತಿದ್ದವರು ಹೇಮಾ ಬಂದಮೇಲೆ ಕ್ರಮೇಣ ಎಲ್ಲವನ್ನೂ ಅವಳ ತಲೆಗೇ ಕಟ್ಟಲಾರಂಭಿಸಿದರು. ಮನೆಯಲ್ಲಿದ್ದವರು ತನ್ನನ್ನೂ ಸೇರಿಸಿ ಐದೇ ಜನವಾದ್ದರಿಂದ ಮೊದಲ ಒಂದೆರಡು ತಿಂಗಳು ಅವಳಿಗೆ ಅದೇನೂ ಅಂಥ ಕಷ್ಟ ಎನಿಸಲಿಲ್ಲ. ಆದರೆ ಕೆಲಸಕ್ಕೆ ಹೋಗಲು ಪ್ರಾರಂಭಿಸಿದ ಮೇಲೆ ಅಡುಗೆ ತಿಂಡಿ ಎರಡನ್ನೂ ಮಾಡುವುದು ಕಷ್ಟ ಎನಿಸಿ ತಿಂಡಿ ಮಾತ್ರ ತಾನು ಮಾಡತೊಡಗಿದಳು. ಆದರೆ ಅವಳು ಕಾಲೇಜಿಗೆ ಹೋಗುವ ಮುನ್ನ ತರಕಾರಿ ಹೆಚ್ಚಿ ಕುಕ್ಕರ್‌ನಲ್ಲಿಡಲು ಅಣಿ ಮಾಡಬೇಕೆಂದು ಅವರ ಅತ್ತೆ ಸ್ಪಷ್ಟವಾಗಿ ಹೇಳಿದರು. ಬೆಳಿಗ್ಗೆ ಮೊದಲ ಪೀರಿಯಡ್ಡೇ ತರಗತಿ ಇಲ್ಲದಿದ್ದಾಗ ಅದನ್ನು ಮಾಡಲು ಸಾಧ್ಯ. ಮೊದಲ ಪೀರಿಯಡ್ಡೇ ತರಗತಿ ಇದ್ದರೆ ತಿಂಡಿ ಮಾತ್ರ ಮಾಡುತ್ತೇನೆ ಎಂದರೆ ಇಲ್ಲ ನನ್ನ ಕೈಯಲ್ಲಿ ಆಗುವುದಿಲ್ಲ. ಈಗ ವಯಸ್ಸಾಗುತ್ತ ಕಷ್ಟ ಆಗುತ್ತೆ ಎಂದು ಹೇಳತೊಡಗಿದರು. ಇನ್ನು ಸಂಜೆ ಕಾಲೇಜು ಮುಗಿಸಿಕೊಂಡು ಸುಸ್ತಾಗಿ ಬಂದಾಗ ಮನೆಯಲ್ಲಿ ಅತ್ತೆಯಾಗಲಿ ನಾದಿನಿಯಾಗಲಿ ಕಾಫಿ ಕೂಡ ಮಾಡಿಕೊಡುತ್ತಿರಲಿಲ್ಲ. ಅವಳೇ ಹೋಗಿ ಮಾಡಿಕೊಳ್ಳಬೇಕಾಗುತ್ತಿತ್ತು. ಅದುವರೆಗೆ ಅವರೆಲ್ಲರದ್ದೂ ಕಾಫಿ ಆಗಿರುತ್ತಿತ್ತು. ಅದು ನಿಜಕ್ಕೂ ಮನಸ್ಸಿಗೆ ತೀರಾ ಕೆಡುಕೆನಿಸಿತು. ಇನ್ನು ಗಂಡನದು ತುಂಬ ಕೈಹಿಡಿತ ಜಾಸ್ತಿ. ಜೊತೆಯಾಗಿ ಪೇಟೆಗೆ ಹೋದಾಗ ಅವಳೇನಾದರೂ ಇಷ್ಟಪಟ್ಟು ತೆಗೆದುಕೊಳ್ಳೋಣವೆಂದರೆ ಈಗ್ಯಾಕೆ ಅದು, ಇನ್ನು ಯಾವಾಗಲಾದರೂ ತೆಗೆದುಕೊಂಡರಾಯಿತು ಎಂದು ತಳ್ಳಿ ಹಾಕುತ್ತಿದ್ದ. ಹೋಗಲಿ ಮನೆಗೆಲಸ ಮಾಡುವುದಕ್ಕೆ ಯಾರಾದರೂ ಹೆಂಗಸನ್ನು ನೇಮಿಸಿಕೊಳ್ಳೋಣ ಎಂದು ಹೇಮಾ ಹೇಳಿದರೆ ಅದಕ್ಕೆ ಅವರ ಅತ್ತೆ ಮತ್ತು ಗಂಡ ಸುತರಾಂ ಒಪ್ಪಲಿಲ್ಲ. ಬಟ್ಟೆ ಒಗೆಯಲು ವಾಷಿಂಗ್ ಮೆಷಿನ್ ಏನೋ ಇತ್ತು. ತಾನು ಬರುವುದಕ್ಕೆ ಮುಂಚೆ ವಾಷಿಂಗ್ ಮೆಷಿನ್‌ಗೆ ಬಟ್ಟೆಗಳನ್ನು ಹಾಕಿ ಸ್ವಚ್ಛಗೊಳಿಸುವ ಜವಾಬ್ದಾರಿಯನ್ನು ಅತ್ತೆಯೇ ವಹಿಸಿಕೊಂಡಿದ್ದರು. ಹೇಮಾ ಹೋದ ಮೇಲೆ ಅವಳೇ ಆ ಕೆಲಸವನ್ನೂ ಮಾಡಬೇಕಾಯಿತು. ಬಿಡುವಿಲ್ಲದಿದ್ದಾಗ ಎಂದಾದರೂ ನಾದಿನಿಗೆ ಹೇಳಿದರೆ ಕೂಡಲೇ ಅವರ ಅತ್ತೆ "ಅಯ್ಯೋ ಅವಳು ಮದುವೆಯಾಗಿ ಹೋಗುವ ಹುಡುಗಿ. ಅತ್ತೆ ಮನೆಗೆ ಹೋದ ಮೇಲೆ ಮಾಡೋದು ಇದ್ದೇ ಇರುತ್ತೆ. ನಮ್ಮ ಮನೇಲಿ ಇರೋವರೆಗೆ ಅವಳಿಗೆ ನಾವು ಯಾವ ಕೆಲಸಾನೂ ಹೇಳಲ್ಲ" ಎಂದು ಅವಳನ್ನು ವಹಿಸಿಕೊಂಡು ಬರುತ್ತಿದ್ದರು. ಆ ಮನೆಯಲ್ಲಿ ಸೊಸೆಗೆ ಏನೂ ಗಟ್ಟಿಯಾಗಿ ಮಾತಾಡದೆ ತಮ್ಮ ಕೆಲಸ ತಾವು ಮಾಡಿಕೊಳ್ಳುತ್ತಿದ್ದವರೆಂದರೆ ಅವಳ ಮಾವನವರು ಮಾತ್ರ. ಇನ್ನು ಉಳಿದವರೆಲ್ಲರೂ ಅವಳನ್ನು ತಮ್ಮ ಮನೆಗೆ ಕೆಲಸ ಮಾಡಲು ಬಂದ ಒಂದು ಆಳು ಎನ್ನುವ ರೀತಿಯಲ್ಲಿ ನೋಡುತ್ತಿದ್ದರು.

ಬರುಬರುತ್ತ ಅವಳ ಅತ್ತೆ ಮತ್ತು ನಾದಿನಿ ಅವಳನ್ನು ಸಣ್ಣ ಪುಟ್ಟದ್ದಕ್ಕೆಲ್ಲ ದಂಡಿಸುವುದು ಆಕ್ಷೇಪಿಸುವುದು ಮಾಡಲಾರಂಭಿಸಿದರು. ಆರೇ ತಿಂಗಳಲ್ಲಿ ಹೇಮಾಳಿಗೆ ಈ ಮನೆಯವರ ರೀತಿ, ಧೋರಣೆ ನಡವಳಿಕೆಗಳಿಂದ ಸಾಕುಸಾಕಾಯಿತು. ತನ್ನ ತವರು ಮನೆಯಲ್ಲಿ ಪ್ರೀತಿಯ ವಾತಾವರಣದಲ್ಲಿ ಬೆಳೆದುಬಂದಿದ್ದ ಹೇಮಾಳಿಗೆ ಇಲ್ಲಿಯ ವಾತಾವರಣ ಉಸಿರುಗಟ್ಟಿಸತೊಡಗಿತು. ಯಾರು ಹೇಗಾದರೂ ಇರಲಿ ಗಂಡನೊಬ್ಬ

ಪ್ರೀತಿಯ ಮಾತಾಡಿ ತನ್ನೊಂದಿಗೆ ಸ್ವಲ್ಪ ಸಮಯ ಕಳೆಯುವಂಥವನಾಗಿದ್ದರೆ ಬಹುಶಃ ಹೇಮಾ ಬೇರೆ ಎಲ್ಲ ಕಷ್ಟಗಳನ್ನು ಮರೆಯುತ್ತಿದ್ದಳೇನೋ. ಶಿವರಾಜುವಿನ ಮಾತು ಮೆಲು. ಆದರೆ ಸ್ವಭಾವ ಮೃದುವಾದ್ದಲ್ಲ ಎಂಬುದನ್ನು ಕಂಡುಕೊಳ್ಳಲು ಹೇಮಾಳಿಗೆ ಹೆಚ್ಚು ಸಮಯ ಬೇಕಾಗಲಿಲ್ಲ. ಅವನ ಲೈಂಗಿಕ ಹಸಿವು ಅಂಥಿಂಥದಲ್ಲ. ಹೆಂಡತಿಯ ಮನಸ್ಥಿತಿಯ ಕಡೆ ಕಿಂಚಿತ್ತೂ ಲಕ್ಷ್ಯಕೊಡದೆ ಅವಳ ಮೇಲೆ ಹಸಿದ ಹದ್ದಿನಂತೆ ಎರಗುತ್ತಿದ್ದ. ಬೆಳಿಗ್ಗೆ ಮನೆಯಲ್ಲಿ ಕೆಲಸ ಮಾಡಿ ಕಾಲೇಜಿನಲ್ಲಿ ದುಡಿದು ಕೆಲವೊಮ್ಮೆ ತುಂಬಾ ಆಯಾಸಗೊಂಡು ಕೂಟಕ್ಕೆ ಅವಳು ಸಿದ್ಧಳಿಲ್ಲದಿದ್ದರೂ ಅವಳ ಇಷ್ಟಕ್ಕೆ ವಿರುದ್ಧವಾಗಿ ತನ್ನ ದೈಹಿಕ ತೃಷೆ ಪೂರೈಸಿಕೊಳ್ಳುತ್ತಿದ್ದ.

ಕಾಲೇಜಿಗೆ ಮಧ್ಯಂತರ ರಜೆ ಬಂದಾಗ ತನ್ನ ತೌರಿಗೆ ಹೋಗಿ ಬರುತ್ತೇನೆಂದು ಹೇಳಿದಾಗ ಇಷ್ಟು ಬೇಗ ಹೋಗುವ ಅಗತ್ಯವೇನಿದೆ ಎಂದು ಗಂಡ, ಅತ್ತೆ ಇಬ್ಬರೂ ಅಡ್ಡಿಯಾಗಿ ನಿಂತರು. ಕೊನೆಗೆ ಹೇಮಾಳ ಮಾವ ಒಂದು ವಾರದ ಮಟ್ಟಿಗಾದರೂ ಪಾಪ ತೌರಿಗೆ ಹೋಗಿಬರಲಿ ಎಂದು ಅವಳ ಪರವಾಗಿ ವಾದಿಸಿ ಕಳಿಸಿಕೊಟ್ಟರು.

ಮನೆಗೆ ಬಂದ ಹೇಮಾಳ ಮುಖ ಮೊದಲಿನ ಲವಲವಿಕೆ ಕಳೆದುಕೊಂಡಿದ್ದು ಕಂಡು ಎಲ್ಲರಿಗಿಂತ ಹೆಚ್ಚಾಗಿ ಅವಳ ತಾಯಿ ಆತಂಕಗೊಂಡರು. ದೂರದ ಪ್ರಯಾಣ ಮಾಡಿ ಬಂದ ಕಾರಣ ಮುಖದಲ್ಲಿ ಆಯಾಸ ಕಾಣುತ್ತಿರಬೇಕೆಂದು ಅಂದುಕೊಂಡರು. ಒಂದೆರಡು ದಿನ ಕಳೆದ ಮೇಲೆ ಸರಿಹೋಗುತ್ತಾಳೆ ಎಂದು ಭಾವಿಸಿದರು. ಆದರೆ ಮೂರನೇ ದಿನ ಹೇಮಾ ಯಾರ ಬಗ್ಗೆಯೂ ಆರೋಪ ಮಾಡದಿದ್ದರೂ ತನ್ನ ಅದೃಷ್ಟವೇ ನೆಟ್ಟಗಿಲ್ಲವೇನೋ ಎಂದು ಅಮ್ಮನ ಬಳಿ ಕಣ್ಣೀರಿಟ್ಟಳು. ಇನ್ನೂ ಕೆಲವು ಕಾಲ ನೋಡಿ ಆಮೇಲೆ ಅಲ್ಲಿಯವರ ಬಗ್ಗೆ ಹೇಳಿದರಾಯಿತು ಎಂದು ಸಂಯಮ ವಹಿಸಿದಳು. ಬಹಳ ಮುಖ್ಯ ಕಾರಣ ತಮ್ಮ ಮಗಳು ಸೇರಿದ ಮನೆಯಲ್ಲಿ ಸುಖವಾಗಿರಲೆಂದು ಮದುವೆ ಮಾಡಿಕೊಟ್ಟರೆ ಅದು ಅವಳ ಪಾಲಿಗೆ ಮುಳ್ಳಿನ ಹಾಸಿಗೆಯಾಗಿದೆಯೆಂದು ತಿಳಿದರೆ ತಂದೆ ತಾಯಿ ತುಂಬಾ ಕಳವಳಕ್ಕೀಡಾಗುತ್ತಾರೆ ಎಂಬ ಕಾರಣಕ್ಕೆ ಸದ್ಯಕ್ಕೆ ತಾಳ್ಮೆಯ ಮೊರೆಹೋದಳು. ಆತ್ಮೀಯ ಗೆಳತಿ ವಸುಂಧರಾ ಇಲ್ಲಿ ಇದ್ದಿದ್ದರೆ ಅವಳ ಹತ್ತಿರವಾದರೂ ಹೇಳಿಕೊಂಡು ಹಗುರಾಗಬಹುದಿತ್ತು. ಆದರೆ ಅವಳೂ ಇಲ್ಲ. ವಾರ ಕಳೆಯುತ್ತಿದ್ದಂತೆ ಹೊರಡುತ್ತೇನೆಂದಾಗ ತಂದೆ ತಾಯಿ ಇಬ್ಬರೂ ಈಗ ರಜೆ ಒಂದು ತಿಂಗಳು ತನಕ ತಾನೆ, ಇಷ್ಟು ಬೇಗ ಯಾಕೆ ಹೊರಡಬೇಕು ಎಂದು ಸಹಜವಾಗಿಯೇ ತಡೆದರು. ಆದರೆ ತಾನು ಹೋಗದಿದ್ದರೆ ಯಜಮಾನರನ್ನು ನೋಡಿಕೊಳ್ಳೋರು ಯಾರೂ ಇಲ್ಲ. ಅವರಿಗೆ ಕಷ್ಟವಾಗುತ್ತೆ ಎಂದಳು. ಅದು ನೆವ ಎಂದು ತಿಳಿಯದ ಅವರು "ಓಹೋ ನೋಡಪ್ಪಾ ಯಜಮಾನರು ಅಂದರೆ ಅದೇನು ಪ್ರೀತಿ! ಅದೇನೋ ಹೇಳುತ್ತಾರಲ್ಲ– ಮೊದಲು ಬಂದ ಕಿವಿಗಿಂತ ಆಮೇಲೆ ಬಂದ ಕೋಡು ಮೇಲೆ ಅಂದ ಹಾಗೆ" ಎಂದು ಅವರ ಅಪ್ಪ ನಗುತ್ತ ಛೇಡಿಸಿದರು. ಕೊನೆಗೆ ಅವರ ಬಲವಂತಕ್ಕೆ ಇನ್ನೂ ನಾಲ್ಕು ದಿನ ಇದ್ದು ಐದನೇ ದಿನ ಹೊರಡುತ್ತೇನೆಂದಳು. ಅವಳ ಮಾತಿನಿಂದ ಅವರಿಗೂ ಹರ್ಷವಾಯಿತು.

ಅಧ್ಯಾಯ-13

ಮದುವೆಯ ನಂತರದಲ್ಲಿ ಊರಿನಲ್ಲಿದ್ದ ಎರಡುಮೂರು ದಿನಗಳು ಹೆಣ್ಣಿನ ಮನೆಯಲ್ಲಿ ಆರತಿ, ಬೀಗರ ಔತಣ, ಹತ್ತಿರದ ಬಂಧುಗಳ ಮನೆಗೆ ಭೇಟಿ, ದೇವಸ್ಥಾನಕ್ಕೆ ಹೋಗುವುದು ಇತ್ಯಾದಿಗಳಲ್ಲೇ ಕಳೆದು ಮರುದಿನ ಶ್ರೀನಿವಾಸ ಹಾಸನಕ್ಕೆ ಹೊರಟುನಿಂತ. ಆ ದಿನಗಳಲ್ಲಿ ಹೊಸದಾಗಿ ಮಡದಿಯಾಗಿ ಬಂದವಳೊಂದಿಗೆ ಆಪ್ತವಾಗಿ ಕಳೆಯುವ ಕ್ಷಣಗಳನ್ನು ಶ್ರೀನಿವಾಸ ಕಳೆದುಕೊಂಡನೋ ಅಥವಾ ನಿವಾರಿಸಿಕೊಂಡನೋ ಎಂಬುದರ ಹೊಲಬು ಆ ತಿರುಪತಿಯ ಶ್ರೀನಿವಾಸನಿಗಾದರೂ ಆಗಿತ್ತೋ ಇಲ್ಲವೊ!

ಮದುವೆಯಾದ ನಂತರದಲ್ಲೂ ಅವನ ದಿನಚರಿಯಲ್ಲೇನೂ ಬದಲಾವಣೆಗಳಾಗಲಿಲ್ಲ. ಅಂದರೆ ಎರಡು ವಾರಕ್ಕೋ ತಿಂಗಳಿಗೋ ಊರಿಗೆ ಹೋಗುತ್ತಿದ್ದವನು ಈಗ ಮದುವೆಯಾದ ನಂತರದಲ್ಲೂ ಅದೇ ಪದ್ಧತಿಯನ್ನು ಮುಂದುವರಿಸಿ ಎರಡನೇ ವಾರದ ಕೊನೆಯಲ್ಲಿ ಶನಿವಾರ ಊರಿಗೆ ಬಂದ. ಮೊದಲಿನ ಮುಖದ ಗಂಟು ಸಡಿಲಗೊಂಡು ಬಹಳ ದಿನಗಳ ನಂತರ ಎಂದಿನಂತೆ ಎಲ್ಲರೊಂದಿಗೆ ನಗುನಗುತ್ತ ಮಾತಾಡಿದ. ಮದುವೆಯಾಗಿ ಹದಿನೈದು ದಿನಗಳು ಕಳೆದರೂ ಲೀಲ ಇನ್ನೂ ಕನ್ಯೆಯೇ ಎಂಬುದರ ಸುಳಿವು ಹೇಗೋ ಮನೆಯ ಹೆಂಗಸರಿಗೆ ಅರ್ಥಾತ್ ಹುಡುಗಿಯ ತಾಯಿ ಮತ್ತು ಶ್ರೀನಿವಾಸನ ತಾಯಿಗೆ ಹತ್ತಿತ್ತು. ಹಾಗಾಗಿ ಈ ಸಲ ಅವರು ಸೊಸೆಯು ಮಗನೊಂದಿಗೆ ಆಪ್ತವಾಗಿ ಕಳೆಯಲು ಅಗತ್ಯವಾದ ಏರ್ಪಾಟನ್ನು ಮುತುವರ್ಜಿಯಿಂದ ಮಾಡಿದರು.

ಲೀಲಾ ಪೇಟೆಯ ಹೆಣ್ಣಿನಂತಲ್ಲ. ಮತ್ತು ಶ್ರೀನಿವಾಸ ಅವಳಿಗೆ ಅಪರಿಚಿತನೂ ಅಲ್ಲ. ಮೊದಲ ದಿನ ಆದಂತೆ ಈ ದಿನ ಆಗಕೂಡದು ಎಂದು ಆಕೆ ನಿರ್ಧರಿಸಿದಂತಿತ್ತು. ಶ್ರೀನಿವಾಸ ಈಗಲೂ ಪಕ್ಕದಲ್ಲಿ ಮಲಗಿದ ಅವಳ ಕಡೆ ಉತ್ಸಾಹ ತೋರದೆ ಅವಳತ್ತ ಬೆನ್ನುಮಾಡಿ ಮಲಗಿದ್ದಾಗ ಲೀಲಳೇ ಮುಂದುವರಿದು– "ಯಾಕೆ ಮಾಮ ನನ್ನನ್ನು ಕಂಡರೆ ನಿಮಗೆ ಇಷ್ಟ ಇಲ್ಲವಾ?" ಎಂದು ಅವನ ಪಕ್ಕಕ್ಕೆ ಸರಿದು ಅವನ ಮುಖವನ್ನು ತನ್ನತ್ತ ಹೊರಳಿಸಿಕೊಂಡು ಕಣ್ಣಲ್ಲಿ ಕಣ್ಣಿಟ್ಟು ಕೇಳಿದಳು. ನೋವಿನಿಂದ ಕೂಡಿದ ಆ ನೋಟ ಮತ್ತು ಹೃದಯ ಭೇದಕವಾದ ಅವಳ ಮಾತಿಗೆ ಉತ್ತರಿಸಲು ಶ್ರೀನಿವಾಸನಿಗೆ ಕಷ್ಟವಾಯಿತು. "ನಿಜ ಈ ಹುಡುಗಿ ಮಾಡಿರುವ ತಪ್ಪೇನು? ತಾನು ಇನ್ನೊಬ್ಬಳನ್ನು ಪ್ರೀತಿಸಿದ ಸಂಗತಿ ಗೊತ್ತಿದ್ದೂ ತನ್ನ ಮೇಲಿನ ಅಭಿಮಾನ, ಪ್ರೀತಿ, ಎಲ್ಲಕ್ಕಿಂತ ಹೆಚ್ಚಾಗಿ ಬಂಧುತ್ವದ ಕಾರಣದಿಂದ, ಜೊತೆಗೆ ಅಪ್ಪ ಅಮ್ಮ ಮತ್ತು ಅಜ್ಜಿಯ ಒತ್ತಾಯದಿಂದ ನನ್ನ ಕೈಹಿಡಿದು ಮಡದಿಯಾಗಿ ಬಂದವಳು. ಅವಳ ಮನಸ್ಸಿನಲ್ಲಿ ವೈವಾಹಿಕ ಜೀವನದ

ಬಗ್ಗೆ ಏನೇನೋ ಕನಸುಗಳಿರುತ್ತವಲ್ಲವೆ? ಅವುಗಳನ್ನು ಮುರುಟಿ ಹಾಕಲು ತನಗೇನು ಅಧಿಕಾರ? ವಸುಂಧರಾಳ ಜೊತೆ ಬಾಳ್ವೆ ಮಾಡುವುದೆಂಬುದು ಈ ಜನ್ಮದಲ್ಲಿ ನನ್ನ ಹಣೆಯಲ್ಲಿ ಬರೆದಿಲ್ಲ. ಈಗ ಇವಳ ಪ್ರೀತಿಯನ್ನು ತಿರಸ್ಕರಿಸುವುದು ಯಾವ ನ್ಯಾಯ?" ಎಂಬೆಲ್ಲ ಯೋಚನೆಗಳು ಒಂದು ಕ್ಷಣದಲ್ಲಿ ಅವನ ಮನದಲ್ಲಿ ಸುಳಿದು ಹೋದವು. ಅವಳ ಪ್ರಶ್ನೆಗೆ ಅವನು ಉತ್ತರ ಕೊಡುವುದಕ್ಕೆ ಮುಂಚೆಯೇ ಲೀಲ ಅವನನ್ನು ಅಪ್ಪಿಕೊಂಡು ಮುಖದ ತುಂಬೆಲ್ಲ ಮುತ್ತಿನ ಮಳೆಗರೆಯತೊಡಗಿದಳು. ಅವನ ಸಂದಿಗ್ಧಗಳೆಲ್ಲ ಆವಳ ಬಿಸಿ ಅಪ್ಪುಗೆ ಮತ್ತು ಚುಂಬನದಲ್ಲಿ ಕರಗಿಹೋಗಿ ಅವನ ಮನಸ್ಸು ಸ್ಪಂದಿಸುವುದಕ್ಕೆ ಮುಂಚೆಯೇ ದೇಹ ಸ್ಪಂದಿಸಿ ಲೀಲಳ ಪ್ರಶ್ನೆಗೆ ನಿಖರವಾದ ಉತ್ತರ ಸಿಕ್ಕಿತ್ತು.

ಮರುದಿನ ಅಂದರೆ ಭಾನುವಾರ ಸಂಜೆ ಹಾಸನಕ್ಕೆ ಹೊರಡಬೇಕಿತ್ತು. ಕಾರಣ ಸೋಮವಾರಕ್ಕೆ ಅವನು ರಜೆಯನ್ನೇನೂ ಹಾಕಿರಲಿಲ್ಲ. ಆದರೆ "ಇವತ್ತು ಹೋಗಲೇಬೇಕಾ ಮಾಮ?" ಎಂಬ ಲೀಲಳ ಪ್ರೀತಿಭರಿತ ಮಾತಿನಲ್ಲಿದ್ದ ಯಾಚನೆಯ ಧ್ವನಿ ಶ್ರೀನಿವಾಸನ ಮನಸ್ಸನ್ನು ತಟ್ಟಿ "ಇಲ್ಲ ನಾಳೆಗೆ ರಜೆ ಹಾಕುತ್ತೇನೆ. ಬೆಳಿಗ್ಗೆ ಟೆಲಿಗ್ರಾಮ್ ಕೊಡುತ್ತೇನೆ" ಎಂದ ಮಾತಿನಿಂದ ಅವಳಿಗಾದ ಆನಂದ ಕಣ್ಣುಗಳಲ್ಲಿ ಉಕ್ಕುತ್ತಿತ್ತು.

ಶ್ರೀನಿವಾಸ ಮಂಗಳವಾರ ಬೆಳಿಗ್ಗೆ ಎಷ್ಟು ಬೇಗ ಎದ್ದು ಹೊರಟರೂ ಹಾಸನದಲ್ಲಿ ಕಾಲೇಜು ತಲುಪುವ ವೇಳೆಗೆ ಹನ್ನೊಂದೂವರೆಯಾಗಿತ್ತು. ಅವನಿಗೆ ಮೊದಲ ಎರಡು ಪೀರಿಯಡ್ ತರಗತಿಯಿರದಿದ್ದರೂ ತಡವಾಗಿ ಹೋದದ್ದಕ್ಕೆ ಒಂದು ರೀತಿಯ ಅಪರಾಧಿ ಮನೋಭಾವದಿಂದ ಪ್ರಿನ್ಸಿಪಾಲರ ರೂಮಿಗೆ ಹೋದ. ಬಸ್ಸು ತಡವಾಯಿತು ಸರ್ ಎಂದ. ಪ್ರಿನ್ಸಿಪಾಲರು ನಗುತ್ತ– "ಹೊಸದಾಗಿ ಮದುವೆಯಾದವರನ್ನು ಏಕೆ ತಡವಾಗಿ ಬಂದಿರಿ ಎಂದು ಕೇಳುವ ಅಧಿಕಾರ ಆ ಬ್ರಹ್ಮನಿಗೂ ಇಲ್ಲ ಅಂದಮೇಲೆ ಕೇಳಲು ಈ ಬಡ ಪ್ರಿನ್ಸಿಪಾಲ್ ಯಾರು?" ಎಂದು ಅವನ ಸಂಕೋಚವನ್ನು ಹೋಗಲಾಡಿಸಿದರು. "ಹೇಗೂ ಕ್ಲಾಸಿರಲಿಲ್ಲವಲ್ಲ ಬಿಡಿ, ತಲೆಹೋದದ್ದೇನು?" ಎಂದರು. ಶ್ರೀನಿವಾಸ 'ತುಂಬಾ ಥ್ಯಾಂಕ್ಸ್ ಸರ್' ಎಂದ.

ಮುಂದಿನ ಹದಿನೈದು ದಿನಗಳ ನಂತರದಲ್ಲಿ ಊರಿಗೆ ಹೋದಾಗ ಮೊದಲು ಅವನನ್ನು ಎದುರುಗೊಂಡ ಅವರಮ್ಮ – "ನಾನು ಅಜ್ಜಿ ಆಗೋ ದಿನ ದೂರ ಇಲ್ಲಪ್ಪ. ಕೊನೆಗೂ ನನ್ನ ಕೋರಿಕೆಯನ್ನು ಆ ತಿಮ್ಮಪ್ಪ ಈಡೇರಿಸಿಬಿಟ್ಟ" ಎಂದರು. ಒಂದು ಕ್ಷಣ ಶ್ರೀನಿವಾಸನಿಗೆ ಏನೂ ಗೊತ್ತಾಗಲಿಲ್ಲ. ಅಮೇಲೆ ಅವರ ಮಾತಿನ ಅರ್ಥ ಹೊಳೆದು ಸಂತೋಷ ಮತ್ತು ನಾಚಿಕೆ ಎರಡೂ ಒಮ್ಮೆಗೇ ಆದುವು. ಅದರ ಜೊತೆಯಲ್ಲೇ, ಲೀಲಾ ಬಿಮ್ಮನ್ಸಿ ಆದ ದಿನದಿಂದಲೂ ವಾಂತಿ ಬಹಳವಾಗಿ ಆಗಿ ತಿಂದದ್ದೇನೂ ದಕ್ಕುತ್ತಿಲ್ಲ ಎಂಬ ಮಾತಿನಿಂದ ಕಳವಳಪಟ್ಟನು. ಅಷ್ಟೇ ಅಲ್ಲ ಅವಳನ್ನು ಸದಾ ವೈದ್ಯರ ನಿಗಾದಲ್ಲಿರಿಸುವ ಸಲುವಾಗಿ ಅವರ ಅಪ್ಪ ಅಮ್ಮ ಮಂಡ್ಯದ ಮನೆಗೆ ಅವಳನ್ನು ಕರೆದೊಯ್ದು ಅವಳೊಂದಿಗೇ ಇದ್ದಾರೆ ಎಂದು ಕೇಳಿ ಅವನ ಚಿಂತೆ ಹೆಚ್ಚಾಯಿತು. "ನೀನು ಬರಲಿ ಅಂತ ಕಾಯುತ್ತಿದ್ದೆ. ನಾಳೆ ಇಬ್ಬರೂ ಮಂಡ್ಯಕ್ಕೆ ಹೋಗೋಣ" ಎಂದರು.

ಶ್ರೀನಿವಾಸನ ಸೋದರಮಾವ ಮತ್ತು ಈಗ ಹೆಣ್ಣುಕೊಟ್ಟ ಮಾವನಾದ ರಂಗೇಗೌಡರು ಸಾಕಷ್ಟು ಶ್ರೀಮಂತರಾಗಿದ್ದವರೇ. ಊರಿನಲ್ಲಿದ್ದ ಮನೆಯ ಜೊತೆಗೆ ಮುಂದೆ ಮಗಳು ಅಳಿಯನಿಗೆ ಕೊಡಲೆಂದೇ ಮಂಡ್ಯದ ಪ್ರತಿಷ್ಠಿತ ಬಡಾವಣೆಯಲ್ಲಿ ದೊಡ್ಡ ನಿವೇಶನದಲ್ಲಿ ಸಾಕಷ್ಟು ದೊಡ್ಡದಾದ ಮನೆಯೊಂದನ್ನು ಕಟ್ಟಿಸಿದ್ದರು. ಅಲ್ಲಿಯೂ ಕೆಳಗೊಂದು ಮನೆ, ಅಷ್ಟೇ ವಿಶಾಲವಾದ ಮನೆಯನ್ನು ಮೊದಲ ಮಹಡಿಯಲ್ಲೂ ಕಟ್ಟಿಸಿದ್ದು ಕೆಳಗಿನ ಮನೆಯನ್ನು ಬಾಡಿಗೆಗೆ ಕೊಟ್ಟು ಮೇಲಿನ ಮನೆಯನ್ನು ತಮ್ಮ ವಶದಲ್ಲೇ ಇಟ್ಟುಕೊಂಡಿದ್ದರು. ಜಿಲ್ಲೆಯ ಮುಖ್ಯಪಟ್ಟಣವಾದ ಮಂಡ್ಯಕ್ಕೆ ಬರುವ ಸಂದರ್ಭಗಳು ಇದ್ದೇ ಇರುತ್ತವಾದ ಕಾರಣ ಅಲ್ಲಿ ಒಂದಿಬ್ಬರು ಆಳುಗಳನ್ನು ಅದರ ಮೇಲ್ವಿಚಾರಣೆಗೆ ನೇಮಿಸಿದ್ದರು.

ಬೆಳಿಗ್ಗೆ ತಿಂಡಿ ತಿಂದ ಮೇಲೆ ಅಮ್ಮ ಮತ್ತು ಮಗ ಇಬ್ಬರೂ ಮಂಡ್ಯಕ್ಕೆ ಹೊರಟರು. ಅಲ್ಲಿ ಹೋಗಿ ನೋಡಿದರೆ ಲೀಲಾ ಗುರುತೇ ಸಿಗದಷ್ಟು ಮಟ್ಟಿಗೆ ಬಡವಾಗಿದ್ದಳು. ಮುಖದ ಮೇಲೆ ಅಯಾಸ ಎದ್ದು ಕಾಣುತ್ತಿತ್ತು. ಅವಳು ಗರ್ಭಿಣಿಯಾಗಿ ಆಗಲೇ ಹನ್ನೆರಡು ದಿನಗಳು ಆಗಿವೆ ಎಂದು ವೈದ್ಯರು ತಿಳಿಸಿದ್ದರು. ಕೆಲವರಿಗೆ ಗರ್ಭಿಣಿಯಾದ ನಾಲ್ಕನೇ ತಿಂಗಳೋ ಐದನೇ ತಿಂಗಳೋ ವಾಂತಿ ಶುರುವಾದರೆ ಅಪರೂಪಕ್ಕೆ ಕೆಲವರಿಗೆ ಪ್ರಾರಂಭದಲ್ಲೇ ಶುರುವಾಗಿಬಿಡುತ್ತೆ ಎಂದು ವೈದ್ಯರು ತಿಳಿಸಿದ್ದರಂತೆ. ಲೀಲಾ ಏಕಾಂತದಲ್ಲಿ ಶ್ರೀನಿವಾಸನ ಹತ್ತಿರ 'ಇದು ಈಗಲೇ ಬೇಕಿರಲಿಲ್ಲ. ಆದರೇನು ಮಾಡೋದು. ನಿಮಗೆ ಬೇಜಾರಾ ಮಾಮ?' ಎಂದು ಕೇಳಿದಳು. ಶ್ರೀನಿವಾಸ ನಗುತ್ತ "ಹುಚ್ಚಿ ಇದಕ್ಕೆ ಬೇಜಾರು ಯಾಕೆ ಮಾಡಿಕೊಳ್ಳಲಿ? ಎಷ್ಟೋ ಜನಕ್ಕೆ ಮಕ್ಕಳಾಗಲಿಲ್ಲ ಅನ್ನುವ ಚಿಂತೆ ಬಾಧಿಸುತ್ತಿರುತ್ತೆ. ಅಂಥದ್ದರಲ್ಲಿ ಮಗು ಬರೋವಾಗ ಬೇಜಾರು ಯಾಕೆ" ಎಂದು ಅವಳನ್ನು ಅಪ್ಪಿ ಸಂತೈಸಿದ.

ಇನ್ನು ಹೆರಿಗೆ ಆಗುವವರೆಗೂ ಲೀಲಾ ಡಾಕ್ಟರರ ನಿಗಾದಲ್ಲೇ ಇರಬೇಕಾಗುತ್ತದೆ ಯಾದ್ದರಿಂದ ಊರಿಗೆ ಕರೆದುಕೊಂಡು ಹೋಗುವುದೇ ಬೇಡ. ಲೀಲಳ ತಾಯಿ ಮತ್ತು ಶ್ರೀನಿವಾಸನ ತಾಯಿ ಅವಳ ಜೊತೆಯಲ್ಲೇ ಇರುವುದು. ಲೀಲಳ ತಂದೆ ರಂಗೇಗೌಡರು ಲೀಲಳ ಸ್ಥಿತಿ ನಾರ್ಮಲ್ ಆಗುವವರೆಗೂ ಇದ್ದು ಆ ನಂತರದಲ್ಲಿ ಊರಿಗೆ ಹೋಗಿ ವಾರಕ್ಕೊಂದು ಸಲ ಅಥವಾ ಎರಡು ಸಲ ಊರಿನಿಂದ ಬಂದು ನೋಡಿಕೊಂಡು ಹೋಗುವುದು, ನಿಂಗೇಗೌಡರೂ ಬಿಡುವಾದಾಗ ಅಥವಾ ನೋಡಬೇಕು ಎನಿಸಿದಾಗಲೆಲ್ಲ ಬಂದುಹೋಗುವುದು ಎಂಬ ಏರ್ಪಾಟಾಯಿತು. ಶ್ರೀನಿವಾಸನಂತೂ ಹಾಸನದಿಂದ ಊರಿಗೆ ಬರುವ ಬದಲು ಮಂಡ್ಯಕ್ಕೇ ಬಂದುಹೋಗುವುದು ಎಂದಾಯಿತು.

* * *

ಎರಡು ತಿಂಗಳ ಹೊತ್ತಿಗೆ ಲೀಲಳ ವಾಂತಿ ನಿಂತು ಅವಳ ಸ್ಥಿತಿ ನಾರ್ಮಲ್‌ಗೆ ಬಂದಿತಾದರೂ ಮತ್ತೆಯೂ ಒಂದೆರಡು ತಿಂಗಳ ನಂತರ ಶುರುವಾದರೂ ಆಗಬಹುದು ಎಂದು ವೈದ್ಯರು ಹೇಳಿದ್ದರು. ಶ್ರೀನಿವಾಸ ಈಗ ಹದಿನೈದು ದಿನಗಳಿಗೊಮ್ಮೆ ಬಂದು

ಹೋಗುವುದರ ಬದಲು ವಾರ ತಪ್ಪಿದರೆ ಎರಡು ವಾರಕ್ಕೊಮ್ಮೆ ಅಥವಾ ಯಾವುದಾದರೂ ಸಾರ್ವತ್ರಿಕ ರಜೆ ಇದ್ದರೆ ಅದರ ಜೊತೆ ಇನ್ನೊಂದೋ ಎರಡೋ ದಿನ ರಜೆ ಹಾಕಿಕೊಂಡು ಹೆಚ್ಚು ಸಮಯವನ್ನು ಮಂಡ್ಯದ ಮನೆಯಲ್ಲಿ ಮಡದಿಯೊಂದಿಗೆ ಕಳೆಯುತ್ತಿದ್ದ. ಅವಳ ಸೂಕ್ಷ್ಮ ಸ್ಥಿತಿಯ ಕಾರಣದಿಂದಾಗಿ ದೈಹಿಕ ಸಂಪರ್ಕವನ್ನು ನಿವಾರಿಸಬೇಕೆಂದು ಹೇಳಿದ್ದರು. ಶ್ರೀನಿವಾಸ ಬಂದಾಗಲೆಲ್ಲ ಅವಳೊಂದಿಗೆ ಹೆಚ್ಚು ಹೊತ್ತು ಕಳೆದು ಧೈರ್ಯ ಹೇಳಿ ಆರೋಗ್ಯವನ್ನು ಸರಿಯಾಗಿ ಕಾಪಾಡಿಕೊಳ್ಳಲು ಹೇಳುತ್ತಿದ್ದ ಮತ್ತು ಅವಳನ್ನೂ ಕರೆದುಕೊಂಡು ವೈದ್ಯರನ್ನು ಭೇಟಿಮಾಡಿ ಅವಳ ಸ್ಥಿತಿಯ ಬಗ್ಗೆ ಅವರ ಅಭಿಪ್ರಾಯ, ಸಲಹೆ ಪಡೆದುಕೊಳ್ಳುತ್ತಿದ್ದ. ಈ ಸಲ ಟ್ರಾನ್ಸ್‌ಫರ್ ಸೀಸನ್ ಬಂದಕೂಡಲೇ ಹೇಗೂ ತಾನು ಹಾಸನಕ್ಕೆ ಹೋಗಿ ಮೂರು ವರ್ಷ ಮುಗಿಯುತ್ತ ಬಂದಿದ್ದ ಕಾರಣ ಮಂಡ್ಯಕ್ಕೇ ವರ್ಗ ಮಾಡಿಸಿಕೊಳ್ಳಲು ನಿರ್ಧಾರ ಮಾಡಿದ್ದ. ಹಾಗೆಂದು ಲೀಲಳಿಗೂ ಹೇಳಿದ್ದ. ಅದರಿಂದ ಅವಳಿಗಾದ ಸಂತೋಷ ಅಷ್ಟಿಷ್ಟಲ್ಲ.

ಏಳನೆಯ ತಿಂಗಳಿನಲ್ಲಿ ಎರಡೂ ಮನೆಗಳವರು ಸೇರಿಕೊಂಡು ಸೀಮಂತದ ಸಮಾರಂಭವನ್ನು ವಿಜೃಂಭಣೆಯಿಂದಲೇ ಮಾಡಿದ್ದರು. ಎಂಟು ತಿಂಗಳು ತುಂಬುತ್ತಿದ್ದ ಹಾಗೆಯೇ ಇನ್ನೇನೋ ತೊಂದರೆ ಕಾಣಿಸಿಕೊಂಡು ವೈದ್ಯರ ಸಲಹೆಯ ಮೇರೆಗೆ ಅವಳನ್ನು ನೋಡುತ್ತಿದ್ದ ವೈದ್ಯರು ವಿಸಿಟ್‌ಗೆ ಹೋಗುತ್ತಿದ್ದ ಪ್ರಖ್ಯಾತವಾದ ನರ್ಸಿಂಗ್ ಹೋಮ್‌ಗೆ ಸೇರಿಸಿದರು. ಹೆರಿಗೆಯಾಗಲು ಇನ್ನೂ ಹದಿನೈದು ದಿನಗಳಾದರೂ ಆಗಬಹುದು ಎಂದು ಡಾಕ್ಟರ್ ತಿಳಿಸಿದ್ದರು. ಆ ಸಮಯದಲ್ಲಿ ತಾನು ಮಂಡ್ಯದಲ್ಲಿರುವುದು ಒಳ್ಳೆಯದು ಎಂದು ಯೋಚಿಸಿ ಶ್ರೀನಿವಾಸನು ಅವಳು ನರ್ಸಿಂಗ್ ಹೋಮ್ ಸೇರಿದ ಒಂದು ವಾರದ ನಂತರ ಹತ್ತು ದಿನಗಳ ರಜೆಹಾಕಿ ತಾನೂ ಮಂಡ್ಯಕ್ಕೆ ಹೊರಟುಬಿಟ್ಟ. ಮಗು ಭಾರಿಯಾಗಿ ಬೆಳೆದಿರುವುದರಿಂದ ನಾರ್ಮಲ್ ಹೆರಿಗೆ ಸಾಧ್ಯವಿಲ್ಲ; ಸಿಸೇರಿಯನ್ ಆಪರೇಷನ್ ಮಾಡಬೇಕಾಗುತ್ತದೆಂದು ಡಾಕ್ಟರ್ ಹೇಳಿದ್ದರು. ಲೀಲಳ ತಂದೆ ತಾಯಿ ಮತ್ತು ಸ್ವತಃ ಶ್ರೀನಿವಾಸನಿಗೆ ಅದು ಇಷ್ಟವಿಲ್ಲದಿದ್ದರೂ ಅನಿವಾರ್ಯವಾದದ್ದಕ್ಕೆ ಮಾನಸಿಕವಾಗಿ ಸಿದ್ಧರಾದರು. ಒಂದು ಕಡೆ ಮನೆಗೆ ಮಗು ಬರುತ್ತದೆಂಬ ಸಂಭ್ರಮವಿದ್ದರೆ ಇನ್ನೊಂದು ಕಡೆ ಡಾಕ್ಟರರು ಎಷ್ಟೇ ಧೈರ್ಯದ ಮಾತುಗಳನ್ನು ಹೇಳಿದ್ದರೂ ಲೀಲಳಿಗೆ ಏನಾದರೂ ಆಗಿಬಿಟ್ಟರೆ ಎಂಬ ಆತಂಕವಿತ್ತು. ಏನೂ ಆಗದೆ ಸುಖಪ್ರಸವವಾಗಲೆಂದು ಎರಡೂ ಮನೆಗಳವರು ಮನೆದೇವರಿಗೆ ಹರಕೆ ಹೊತ್ತಿದ್ದರು.

ಸಿಸೇರಿಯನ್ ಆಪರೇಷನ್ ಯಶಸ್ವಿಯಾಗಿ ಆಗಿ ಚೆನ್ನಾಗಿ ಬೆಳೆದ ಸುಂದರವಾದ ಹೆಣ್ಣು ಮಗುವಿಗೆ ಲೀಲ ಜನ್ಮ ಕೊಟ್ಟಳು. ಎರಡೂ ಮನೆಗಳವರ ಸಂತೋಷಕ್ಕೆ ಮೇರೆಯೇ ಇರಲಿಲ್ಲ. ಲೀಲಳನ್ನು ನೋಡಬೇಕು ಎಂದರೆ ಆಪರೇಷನ್ ವೇಳೆ ವಿಪರೀತ ರಕ್ತ ಹೋಗಿದ್ದರಿಂದ ರಕ್ತ ಕೊಟ್ಟಿದ್ದಾರೆ. ಅನಸ್ತೇಷಿಯಾ ಪರಿಣಾಮ ಇನ್ನೂ ಇರುವುದರಿಂದ ಅವಳಿಗಿನ್ನೂ ಪ್ರಜ್ಞೆ ಬಂದಿಲ್ಲ. ಪ್ರಜ್ಞೆ ಬಂದ ಮೇಲೆ ನೋಡಬಹುದು ಎಂದರು. ಸರಿ ಕಾಯುತ್ತ ಕುಳಿತರು. ಇವರುಗಳ ಹರಕೆ ಫಲಿಸಲಿಲ್ಲವೋ ಇಲ್ಲವೆ ಲೀಲಳ ಆಯುಷ್ಯ ಅಲ್ಲಿಗೇ ಮುಗಿದಿತ್ತೋ ಎನ್ನುವಂತೆ ಅರ್ಧಗಂಟೆಯ ಒಳಗೆ ಲೀಲ

ಕೊನೆಯುಸಿರೆಳೆದಿದ್ದಳು. ಆಮೇಲೆ ತಿಳಿದುಬಂದ ವಿಷಯವೆಂದರೆ ರಕ್ತ ಕೊಡುವಾಗ ಮ್ಯಾಚಿಂಗ್ ಬ್ಲಡ್ ಕೊಡುವಲ್ಲಿ ಎಡವಟ್ಟಾಗಿ ಬೇರಾವುದೋ ಬ್ಲಡ್ ಗ್ರೂಪ್‌ನ ರಕ್ತ ನೀಡಿದ್ದರಿಂದ ಲೀಲ ಶಾಶ್ವತವಾಗಿ ಕಣ್ಣುಮುಚ್ಚಿದ್ದಳು.

ಎರಡೂ ಕುಟುಂಬಗಳವರು ದಿಕ್ಕು ತೋಚದಂತಾದರು. ಶ್ರೀನಿವಾಸನಿಗಂತೂ ಹುಚ್ಚೇ ಹಿಡಿದಂತಾಯಿತು. ಇದು ಹೇಗಾಯಿತು ಎಂದು ಆಸ್ಪತ್ರೆಯವರೊಂದಿಗೆ ವ್ಯಾಜ್ಯವಾಡುವುದೋ, ಇಲ್ಲ ಆಗತಾನೆ ಕಣ್ಣುಬಿಟ್ಟು ಈ ಲೋಕವನ್ನು ಪಿಳಿಪಿಳಿ ನೋಡುತ್ತಿರುವ ಮಗುವಿನ ಆರೈಕೆಯತ್ತ ಗಮನ ಹರಿಸುವುದೋ, ಮುದ್ದಿನ ಮಗಳನ್ನು ಕಳೆದುಕೊಂಡು ದುಃಖ ಸಾಗರದಲ್ಲಿ ಮುಳುಗಿದ ಸೋದರಮಾವ ಸೋದರತ್ತೆಯರನ್ನು ಸಂತೈಸುವುದೋ, ತಾನು ತಂಬ ಇಷ್ಟಪಟ್ಟ ಹೆಣ್ಣನ್ನು ಮದುವೆಯಾಗಗೊಡದೆ ತನ್ನ ಕಣ್ಣೀರಿಗೂ ಕರಗದೆ ತನ್ನ ಮೇಲೆ ಇನ್ನಿಲ್ಲದ ಒತ್ತಡಹಾಕಿ ಮನೆತುಂಬಿಸಿಕೊಂಡ ಮುದ್ದಿನ ಮೊಮ್ಮಗಳು ಮದುವೆಯಾಗಿ ವರ್ಷ ತುಂಬುವುದರೊಳಗೆ ಮನೆಯನ್ನು ಮಸಣ ಮಾಡಿಹೋದದ್ದಕ್ಕೆ ಅಳಲೂ ಶಕ್ತಿಯಿಲ್ಲದೆ ದುಃಖತಪ್ತಳಾಗಿರುವ ತಾಯಿಯನ್ನು ಸಂತೈಸುವುದೋ ಒಂದೂ ತಿಳಿಯದೆ ದಿಙ್ಮೂಢನಾದನು.

ಕೊನೆಗೆ ಅವನೇ ಧೈರ್ಯ ತಂದುಕೊಂಡು ಆಗ ಬೇಕಾದ ಮುಂದಿನ ಕಾರ್ಯಗಳತ್ತ ಗಮನ ಹರಿಸಿ ಮಗುವಿನ ಆರೈಕೆಗೆ ಏರ್ಪಾಟುಮಾಡಿದನು. ಆಪರೇಷನ್ ಮಾಡಿದ ನರ್ಸಿಂಗ್ ಹೋಮ್‌ನ ವೈದ್ಯರು ಶ್ರೀನಿವಾಸನ ಕೈಹಿಡಿದು ಇದು ಕೈಯಲ್ಲ ಕಾಲು ಎಂದು ಹೇಳಿ ಲೀಲಳ ಆಪರೇಷನ್ ಮುಗಿಸಿದ ಕೂಡಲೇ ತಾವು ತುರ್ತಾಗಿ ಇನ್ನೊಂದು ಆಪರೇಷನ್ ಮಾಡಬೇಕಾಗಿದ್ದರಿಂದ ಮ್ಯಾಚಿಂಗ್ ಬ್ಲಡ್ ಕೊಡಲು ಒಬ್ಬ ಅತ್ಯಂತ ನುರಿತ ನರ್ಸ್‌ಗೇ ಒಪ್ಪಿಸಿದ್ದರೂ ಏನೋ ಅಚಾತುರ್ಯವಾಗಿ ಹೀಗಾಗಿ ಹೋಯಿತು, ನೀವು ಕೇಸ್ ಮಾಡಬಹುದು. ನಾವೆಲ್ಲ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂದರು. ಶ್ರೀನಿವಾಸ ಅವರ ಮಾತಿಗೆ ಏನು ಹೇಳಲೂ ತೋಚದೆ "ಕೇಸ್ ಮಾಡಿದರೂ ಲೀಲಾ ಹೇಗೂ ಈಗ ಹಿಂತಿರುಗುವಂತಿಲ್ಲ; ನೀವ್ಯಾರೂ ಬೇಕೆಂದೇ ಮಾಡಿದ್ದಲ್ಲ. ಏನೋ ಅವಳ ಗ್ರಹಚಾರ, ನಮ್ಮ ದುರದೃಷ್ಟ" ಎಂದು ಅದನ್ನು ಅಲ್ಲಿಗೇ ಕೈಬಿಟ್ಟ. ಕಾಲೇಜಿಗೆ ದೀರ್ಘ ರಜೆಹಾಕಿಬಿಟ್ಟ. ಲೀಲಳ ತಾಯಿ ಮತ್ತು ಶ್ರೀನಿವಾಸನ ಅಮ್ಮ ಮಂಡ್ಯದಲ್ಲೇ ಇದ್ದುಕೊಂಡು ಮಗುವಿಗೆ ಆರು ತಿಂಗಳಾಗುವವರೆಗೂ ಜತನದಿಂದ ಕಾಪಾಡಿಕೊಂಡ ಮೇಲೆ ಇನ್ನು ಭಯವಿಲ್ಲ ಎನಿಸಿ ಊರಿನ ತಮ್ಮ ಮನೆಗೆ ಕರೆದುಕೊಂಡು ಹೋದರು. ಶ್ರೀನಿವಾಸನು ಹಾಸನಕ್ಕೆ ಹೋದದ್ದೇನಿದ್ದರೂ ಮಂಡ್ಯಕ್ಕೆ ವರ್ಗ ಮಾಡಿಕೊಡಿ ಎಂಬ ಅರ್ಜಿಯನ್ನು ಪ್ರಿನ್ಸಿಪಾಲರ ಕಡೆಯಿಂದ ನಿರ್ದೇಶಕರಿಗೆ ಕಳಿಸಿಕೊಡುವ ಸಲುವಾಗಿ. ಸಹೋದ್ಯೋಗಿಗಳೆಲ್ಲ ಅವನ ಪರಿಸ್ಥಿತಿಗೆ ತುಂಬ ಪರಿತಪಿಸಿದರು. ಎಸ್.ಆರ್. ಮಾಸ್ಟರ್ ಅವರಂತೂ ಅವನ ಜೊತೆ ಆಧಾರ ಸ್ತಂಬದಂತೆ ನಿಂತು ಅವರೂರಿಗೂ ಹೋಗಿ ಕೆಲದಿನ ಜೊತೆಯಲ್ಲೇ ಇದ್ದು ನೈತಿಕ ಬೆಂಬಲ ಕೊಟ್ಟರು.

* * *

ಕಷ್ಟಗಳು ಬರುವಾಗ ಒಟ್ಟೊಟ್ಟಿಗೇ ಬರುತ್ತವೆ ಎಂಬುದಕ್ಕೆ ಶ್ರೀನಿವಾಸನ ಬದುಕೇ ದೊಡ್ಡ ನಿದರ್ಶನ. ಆ ವರ್ಷ ಮನಸ್ಸಿಗಾದ ನೋವು ಬೇಸರಗಳಿಂದ ಬೇಸಿಗೆಯ ರಜೆಯಲ್ಲಿ ಮೌಲ್ಯಮಾಪನ ಕೆಲಸಕ್ಕೆ ಹೋಗದೆ ಹುಟ್ಟುತ್ತಲೇ ತಬ್ಬಲಿಯಾಗಿ ಅಜ್ಜಿಯ ಆರೈಕೆಯಲಿ ಬೆಳೆಯುತ್ತಿದ್ದ ಮಗುವನ್ನು ನೋಡಿಕೊಳ್ಳುತ್ತ ಸೋದರಮಾವನ ಮನೆಯಲ್ಲಿ ಕೆಲವು ದಿನ, ಸೊಸೆಯ ಅನಿರೀಕ್ಷಿತ ಸಾವು ಮತ್ತು ಅದರ ಪರಿಣಾಮವಾಗಿ ಮಗನ ಸಾಂಸಾರಿಕ ಬದುಕು ಹಾಳಾಯಿತೆಂಬ ಕೊರಗಿನಿಂದ ಊರಿಗೆ ಬಂದ ಸ್ವಲ್ಪ ದಿನಕ್ಕೇ ಹಾಸಿಗೆ ಹಿಡಿದಿದ್ದ ಅಮ್ಮನ ಆರೈಕೆಯಲ್ಲಿ ಕೆಲವು ದಿನ, ಮಂಡ್ಯದಲ್ಲಿ ಇನ್ನು ಕೆಲವು ದಿನ ಹೀಗೆ ಹೇಗೋ ದಿನ ದೂಡುತ್ತಿದ್ದ. ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮುನ್ನವೇ ವರ್ಗಾವರ್ಗಿಗಳು ಪ್ರಕಟವಾಗಿ ಶ್ರೀನಿವಾಸನ ಕೋರಿಕೆಯಂತೆ ಮಂಡ್ಯದ ಸರ್ಕಾರೀ ಕಾಲೇಜಿಗೇ ಅವನಿಗೆ ವರ್ಗವಾಗಿತ್ತು. ಎಲ್ಲದರಲ್ಲೂ ಆಸಕ್ತಿ ಕಳೆದುಕೊಂಡು ಯಾಂತ್ರಿಕವಾಗಿ ತನ್ನ ದಿನನಿತ್ಯದ ಕೆಲಸಗಳನ್ನು ಹೇಗೋ ಮಾಡಿಕೊಂಡು ಹೋಗುತ್ತಿದ್ದ. ಮುಂಚಿನಂತೆ ತರಗತಿಗೆ ಹೋಗುವಾಗ ಷೇವ್ ಮಾಡಿಕೊಂಡು ನೀಟಾಗಿ ಡ್ರೆಸ್ ಮಾಡಿಕೊಂಡು ಹೋಗುವುದನ್ನು ಮರೆತೇ ಬಿಟ್ಟನೋ ಎಂಬಂತೆ ಯಾವಾಗಲೂ ವಾರಗಟ್ಟಲೆಯ ಗಡ್ಡ ಮುಖದ ಮೇಲೆ ರಾರಾಜಿಸುತ್ತಿತ್ತು. ಯಾವಾಗಲೋ ಒಮ್ಮೆ ಬೋಳಿಸಿದರೆ ಆಯಿತು ಎಂಬ ಧೋರಣೆ. ಬಟ್ಟೆಗಳೂ ಅಷ್ಟೆ. ಯಾವುದಾದರೂ ಅಯಿತು. ವರ್ಗವಾದ ಮೇಲೆ ರಿಲೀವ್ ಮಾಡಿಸಿಕೊಂಡುಬರಲು ಹಾಸನಕ್ಕೆ ಹೋದಾಗ ಅಲ್ಲಿ ತುಮಕೂರಿನಲ್ಲಿ ತನ್ನ ಸಹೋದ್ಯೋಗಿಯಾಗಿದ್ದ ಮಮತಾ ಮೇಡಮ್ ಸಿಕ್ಕಿದ್ದರು. ಮೊದಲಿಗೆ ಅವರಿಗೆ ಗುರುತು ಸಿಕ್ಕದ ಕಾರಣಕ್ಕೋ ಏನೋ ಇವನ ಕಡೆ ನೋಡಿದರೂ ಏನೂ ಪ್ರತಿಕ್ರಿಯೆ ತೋರಿಸಲಿಲ್ಲ. ಬಹುಶಃ ನನ್ನ ಗಡ್ಡದಿಂದ ಗುರುತು ಸಿಕ್ಕಿರಲಿಕ್ಕಿಲ್ಲವೆಂದು ಭಾವಿಸಿ ಶ್ರೀನಿವಾಸನೇ "ಯಾಕೆ ಮೇಡಮ್ ನನ್ನ ಗುರುತು ಸಿಕ್ಕಲಿಲ್ಲವಾ ನಾನು ಶ್ರೀನಿವಾಸ" ಎಂದಾಗ ಮೇಡಮ್ ಗರಬಡಿದವರಂತೆ ನೋಡುತ್ತಲೇ ನಿಂತುಬಿಟ್ಟರು. ಆಮೇಲೆ ಸಾವರಿಸಿಕೊಂಡು "ಇದೇನು ಸದಾ ಸ್ಮಾರ್ಟಿಯಾಗಿರುತ್ತಿದ್ದ ನಮ್ಮ ಶ್ರೀನಿವಾಸ್ ಈ ಅವತಾರದಲ್ಲಿ? ನನಗೆ ಗೊತ್ತೇ ಆಗಲಿಲ್ಲ" ಎಂದರು. ಅವರ ಜೊತೆಯೇ ಅವರ ರೂಮಿಗೆ ಹೋದ. ಅವರೂ ಎರಡು ದಿನದ ಹಿಂದೆಯಷ್ಟೇ ಬೆಂಗಳೂರಿನಿಂದ ವರ್ಗವಾಗಿ ಹಾಸನದ ಕಾಲೇಜಿಗೆ ರಿಪೋರ್ಟ್ ಮಾಡಿಕೊಂಡಿದ್ದರು. ಶ್ರೀನಿವಾಸ ತನ್ನ ಈಗಿನ ಸಾಂಸಾರಿಕ ಪರಿಸ್ಥಿತಿಯನ್ನು ಎರಡೇ ಮಾತುಗಳಲ್ಲಿ ಹೇಳಿ ಮುಗಿಸಿದ. ಕೇಳಿದ ಮಮತ ತುಂಬ ನೊಂದುಕೊಂಡರು. ತಮ್ಮ ತೀವ್ರ ವಿಷಾದ ಸೂಚಿಸಿದರು.

ತಾನು ಮಂಡ್ಯದಲ್ಲೇ ಇರುತ್ತಿದ್ದುದರಿಂದ ಹಾಸಿಗೆ ಹಿಡಿದಿದ್ದ ತಾಯಿಯನ್ನು ಮಂಡ್ಯದ ತನ್ನ ಮನೆಗೇ ಕರೆತಂದ. ತನ್ನ ಕಣ್ಣ ಮುಂದೆಯೇ ಇದ್ದಹಾಗೂ ಆಯಿತು, ಡಾಕ್ಟರರಿಗೆ ತೋರಿಸಲೂ ಅನುಕೂಲ ಎಂಬ ಅವನ ಯೋಚನೆ ಸರಿಯಾಗಿಯೇ ಇತ್ತು. ನಿಂಗೇಗೌಡರು ಊರು, ಜಮೀನು ಮಂಡ್ಯ ಹೀಗೆ ತಿರುಗಾಡಿಕೊಂಡು ಇದ್ದರು. ಅಮ್ಮನಿಗೆ ಮಗುವನ್ನು ನೋಡಬೇಕೆನಿಸಿದಾಗಲೆಲ್ಲ ಸೋದರ ಮಾವನಿಗೇ ಮಗುವನ್ನು ಕರೆತರಲು ಹೇಳುತ್ತಿದ್ದ. ಕೆಲವೊಮ್ಮೆ ಅಮ್ಮ ಮಗ ಟ್ಯಾಕ್ಸಿ ಮಾಡಿಕೊಂಡು ಹೋಗಿ

ನೋಡಿಕೊಂಡು ಬರುತ್ತಿದ್ದರು. ಮಗು ಬಣ್ಣದಲ್ಲೂ ರೂಪಿನಲ್ಲೂ ಅಪ್ಪನನ್ನೇ ಹೋಲಿತ್ತು. ವೈದ್ಯರು ಎಷ್ಟೆಲ್ಲ ಪ್ರಯತ್ನಿಸಿದರೂ ಅಮ್ಮನ ಬಿ.ಪಿ. ಮತ್ತು ರಕ್ತ ಸಕ್ಕರೆ ಹತೋಟಿಗೇ ಬರುತ್ತಲೇ ಇರಲಿಲ್ಲ. ಈ ಮಧ್ಯೆ ಬೇಸಿಗೆಯಲ್ಲಿ ಕಾಣಿಸಿಕೊಳ್ಳದಿದ್ದ ಉಬ್ಬಸದ ತೊಂದರೆ ಜೂನ್ ತಿಂಗಳ ಮುಂಗಾರು ಮಳೆಯೊಂದಿಗೆ ಹೆಚ್ಚುತ್ತಲೇ ಹೋಯಿತು. "ಇದು ಮನೋದೈಹಿಕಬೇನೆ. ನಮ್ಮ ವೈದ್ಯೋಪಚಾರ ಅವರಿಗೆ ಹಿಡಿಸುತ್ತಿಲ್ಲ" ಎಂದು ವೈದ್ಯರು ತಮ್ಮ ಅಸಹಾಯಕತೆ ತೋರಿದರು. ಹಾಗೂ ಹೀಗೂ ತಳ್ಳಿ ಜುಲೈ ಕೊನೆಯ ವೇಳೆಗೆ ಅವರ ಆರೋಗ್ಯ ವಿಷಮಿಸಿ ಕೊನೆಯುಸಿರೆಳೆದರು. ಸಾಯುವ ಹಿಂದಿನ ದಿನ ಮಗನನ್ನು ಕರೆದು ಹತ್ತಿರ ಕೂಡಿಸಿಕೊಂಡು ಅಸ್ಪಷ್ಟ ಮಾತುಗಳಲ್ಲೇ– "ಮಗಾ ನಾನು ಮೂಢೆ. ನನ್ನ ಹಠದಿಂದಾಗೇ ನಿನಗೀ ಗತಿ ಬಂತು. ನೀನು ಮೆಚ್ಚಿಕೊಂಡ ಹುಡುಗಿಯನ್ನು ಮದುವೆಯಾಗಿದ್ದರೆ ಹೀಗೆಲ್ಲಾ ಆಗುತ್ತಿರಲಿಲ್ಲವೋ ಏನೋ. ಆ ಹುಡುಗಿ ನೋವು ಪಟ್ಟಿದ್ದರಿಂದಲೇ ಹೀಗೆಲ್ಲಾ ಆಯಿತೋ ಏನೋ. ನನಗೆ ಗೊತ್ತಾಗಲಿಲ್ಲಪ್ಪಾ. ಲೀಲಳ ಜೊತೆ ಹೆಚ್ಚು ದಿನ ಬಾಳೋದು ನಿನ್ನ ಹಣೇಲಿ ಬರೆದಿರಲಿಲ್ಲ. ಯಾರ ಜೊತೇಲಿ ನಿನ್ನ ಋಣಾನುಬಂಧ ಇದೆಯೋ ಆ ಹುಡುಗೀನೆ ನಿನಗೆ ಬೇಗನೆ ಸಿಕ್ಕಲಪ್ಪಾ. ಆದರೆ ಈ ಬೇಜಾರಿನಲ್ಲಿ ಮದುವೆ ಆಗದೆ ಮಾತ್ರ ಇರಬೇಡ. ನನಗೆ ಭಾಷೆಕೊಡು. ನನ್ನ ಕಾಲ ಮುಗೀತು." ಎಂದು ಅವನ ಕೈ ಎಳೆದುಕೊಂಡು ತಮ್ಮ ಕೈಮೇಲೆ ಹಾಕಿಕೊಂಡಿದ್ದರು. "ನೀನು ಏನೇನೋ ಯೋಚನೆ ಮಾಡಿ ನೊಂದುಕೋ ಬೇಡಮ್ಮ. ನಿನಗೇನೂ ಆಗಲ್ಲ" ಎಂದು ಅಮ್ಮನಿಗೆ ಸಮಾಧಾನ ಹೇಳಿದ್ದ.

ಹೆಂಡತಿ ಮತ್ತು ಅಮ್ಮ ಹೋದ ಮೇಲೆ ಮಗನನನ್ನು ಒಂಟಿಯಾಗಿ ಬಿಟ್ಟಿರುವುದು ಸರಿಯಲ್ಲ ಎಂದು ತೀರ್ಮಾನಿಸಿದ ನಿಂಗೇಗೌಡರು ಊರಿನ ಮನೆಯ ಮೇಲ್ವಿಚಾರಣೆಯನ್ನು ನಂಬಿಕೆಯ ಆಳುಕಾಳುಗಳಿಗೆ ವಹಿಸಿಕೊಟ್ಟು ಮಂಡ್ಯಕ್ಕೆ ಬಂದು ಮಗನ ಜೊತೆಯಲ್ಲೇ ಇರತೊಡಗಿದರು. ಶ್ರೀನಿವಾಸನ ಚಿಂತೆ ದುಃಖಗಳು ಗಾಢವಾಗುತ್ತ ಹೋಗಿ ಹತಾಶೆಯ ಅಧಃಪಾತಾಳವನ್ನೇ ತಲುಪಿದನೆನ್ನಬೇಕು. ಅಂಥ ದಿನಗಳಲ್ಲೇ ಒಂದು ದಿನ ಶ್ರೀನಿವಾಸನನ್ನು ನೋಡಿಕೊಂಡು ಬರಬೇಕೆಂದು ಅವನ ಅನಿಮಿತ್ತ ಬಂಧುವೆಂಬಂತಿದ್ದ ಸಹೋದ್ಯೋಗಿ ಎಸ್.ಆರ್ ಮಾಸ್ಟರ್ ಅವರು ಮಂಡ್ಯಕ್ಕೇ ಬಂದರು. ಅವನ ಸ್ಥಿತಿಯನ್ನು ನೋಡಿ– "ನನಗೆ ಗೊತ್ತಿರುವ ಸೈಕಿಯಾಟ್ರಿಸ್ಟ್ ಒಬ್ಬರು ಇದ್ದಾರೆ. ಅವರ ಹತ್ತಿರ ಹೋಗಿಬರೋಣ" ಎಂದು ಬಲವಂತವಾಗಿ ಮೈಸೂರಿಗೆ ಕರೆದುಕೊಂಡು ಹೋಗಿ ತೋರಿಸಿದರು. ಅವರು ರಾಮಸ್ವಾಮಿಯವರಿಗೆ– ನೀವು ಸರಿಯಾದ ಸಮಯದಲ್ಲಿ ಕರೆದುಕೊಂಡುಬಂದಿದ್ದೀರಿ– ಎಂದು ಹೇಳಿ ಅಂದೇ ಕೌನ್ಸೆಲಿಂಗ್ ಮಾಡಿ ಕೆಲವು ಔಷಧಗಳನ್ನು ಬರೆದುಕೊಟ್ಟರು. ಮತ್ತೆ ಯಾವಾಗ ಕೌನ್ಸೆಲಿಂಗಿಗೆ ಬರಬೇಕೆಂಬುದನ್ನೂ ತಿಳಿಸಿ ಮೂರು ನಾಲ್ಕು ಸಿಟಿಂಗ್ ಸಾಕಾಗುತ್ತದೆಂದು ಹೇಳಿದರು. ಚಿಂತೆಯನ್ನು ಮರೆಯುವುದು ಅಧ್ಯಾಪಕರಾದ ನಿಮಗೆ ಬಲು ಸುಲಭ. ಓದುವುದು ಬರೆಯುವುದರಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳಿ ಎಂದರು. ಶ್ರೀನಿವಾಸ ಮೊದಲಿನಿಂದಲೂ ಓದಾಳಿಯೇ. ಈ ಮಧ್ಯೆ ಬಂದೊದಗಿದ ಸಮಸ್ಯೆಗಳ ಸುಳಿಯಲ್ಲಿ

ಸಿಲುಕಿದ ಕಾರಣದಿಂದಾಗಿ ಅತ್ತ ಹೆಚ್ಚು ಗಮನ ನೀಡಲಾಗಿರಲಿಲ್ಲ. ಈಗ ಡಾಕ್ಟರರು ಹೇಳಿದ ಮೇಲೆ ಓದು ಬರಹಗಳಲ್ಲಿ ಪೂರ್ಣವಾಗಿ ಮುಳುಗಿಬಿಟ್ಟ.

ವರ್ಷದಲ್ಲೇ ಎರಡು ಸಾವಾದ್ದರಿಂದ ಮಗುವಿಗೆ ನಾಮಕರಣ ಸಮಾರಂಭ ಮಾಡಲಾಗಲೇ ಇಲ್ಲ. ಸಮಾರಂಭ ಮಾಡುವ ಉತ್ಸಾಹ ಯಾರಿಗೂ ಇರಲಿಲ್ಲ. 'ಪಾಪು' 'ಪಾಪು' ಎಂದು ಕರೆಯುತ್ತಿದ್ದ ಮಗುವಿಗೆ ಶ್ರೀನಿವಾಸ ಪ್ರೀತಿಯಿಂದ 'ಭೂಮಿಕಾ' ಎಂದು ಕರೆಯತೊಡಗಿದ. ಕೊನೆಗೆ ಅದೇ ಖಾಯಮ್ಮಾಯಿತು. ಅವನ ಒಳಮನಸ್ಸಿನಲ್ಲಿ ವಸುಂಧರಾ ಶಾಶ್ವತವಾಗಿ ಮನೆಮಾಡಿಬಿಟ್ಟಿದ್ದಳು. ಅವಳ ನೆನಪಿಗಾಗಿ ಅದೇ ಅರ್ಥ ಬರುವ 'ಭೂಮಿಕಾ' ಎಂಬ ಹೆಸರು ಅವನಿಗೆ ಹೆಚ್ಚು ಯೋಚಿಸದೆಯೇ ಹೊಳೆದಿತ್ತು. ಒಂದೊಂದು ಸಲ ಅವಳು ಈಗ ಎಲ್ಲಿದ್ದಾಳೋ ಹೇಗಿದ್ದಾಳೋ ಮದುವೆ ಆದಳೋ ಬಿಟ್ಟಳೋ ಎಂಬ ಯೋಚನೆ ಬಂದು ಮನಸ್ಸು ಭಾರವಾಗುತ್ತಿತ್ತು.

ಲೀಲಾ ಅವನ ಬಾಳಿನಲ್ಲಿ ಒಂದು ಮಿಂಚಿನಂತೆ ಸುಳಿದುಹೋಗಿದ್ದಳು. ತನಗೆ ಅಷ್ಟಾಗಿ ಮನಸ್ಸಿಲ್ಲದಿದ್ದರೂ ತನ್ನನ್ನು ತುಂಬ ಇಷ್ಟಪಟ್ಟಿದ್ದ ಅವಳಿಗೆ ಅಸಂತೋಷ ಉಂಟುಮಾಡುವುದು ನ್ಯಾಯವಲ್ಲವೆಂದು ಎರಡು ಮೂರು ಬಾರಿ ಅವಳೊಂದಿಗೆ ಸೇರಿದ್ದೇ ಕೊನೆಯಾಯಿತು. ಏನಿದು ಬದುಕಿನ ಸ್ವರೂಪ? ಗುಣ, ಸ್ವಭಾವ ರೂಪು, ಮನಸ್ಸು, ಮತ್ತು ಹೃದಯಗಳ ಮೂಲಕ ಒಬ್ಬಳು ತನ್ನನ್ನು ಗೆದ್ದುಕೊಂಡಿದ್ದರೂ ತಾನು ಅವಳೊಡನೆ ಬಾಳಲಾಗಲಿಲ್ಲ. ನಾನು ಮನಸೋಲದಿದ್ದರೂ ತಾನಾಗಿ ನನಗೆ, ನನ್ನ ವ್ಯಕ್ತಿತ್ವಕ್ಕೆ ಮನಸೋತವಳೊಂದಿಗೆ ಮೈಯ ಮೂಲಕ ಸಂಬಂಧ ಬೆಳೆದು ಅತಿ ಕ್ಷಿಪ್ರವಾಗಿ ಕೊನೆಗೊಂಡಿತು. ಮನಸ್ಸು ಸ್ಪಂದಿಸದಿದ್ದರೂ ಮೈ ಸ್ಪಂದಿಸಿತು. ಮಾಯೆಯೆಂದರೆ ಇದೆಯೋ? ಅವಳು ಬದುಕಿದ್ದರೆ ಮುಂದೆ ಅವಳೊಂದಿಗೇ ಬದುಕಿನ ಬಂಡಿ ಸಾಗುತ್ತಿತ್ತಲ್ಲವೆ? ಎಂದೆಲ್ಲ ಯೋಚಿಸಿ ಹೈರಾಣಾಗುತ್ತಿದ್ದ.

ಅಧ್ಯಾಯ-14

ಬಿ.ಎಡ್. ಕೋರ್ಸಿನಲ್ಲಿ ತರಬೇತಿ ಪಡೆಯುವ ಶಿಕ್ಷಕ ಅಭ್ಯರ್ಥಿಗಳಿಗೆ ಬೆವರು ಒರೆಸಿಕೊಳ್ಳುವುದಕ್ಕೂ ಪುರಸತ್ತು ಇರದಷ್ಟು ಮನೆಯಲ್ಲಿ ಓದುವುದು, ಹೋಮ್ ವರ್ಕ್ ಮಾಡುವುದು ಇರುತ್ತದೆ. ಹಾಗಾಗಿ ವಸುಂಧರಾ ಮೊದಲು ಹದಿನೈದು ದಿನಕ್ಕೊಮ್ಮೆ ಊರಿಗೆ ಹೋಗುತ್ತಿದ್ದವಳು ಆಮೇಲೆ ತಿಂಗಳಿಗೋ ಎರಡು ತಿಂಗಳಿಗೋ ಒಮ್ಮೆ ಶನಿವಾರ ಸಂಜೆ ಹೊರಟು ಭಾನುವಾರ ಸಂಜೆಯೇ ಹಿಂತಿರುಗಿ ಬಿಡುತ್ತಿದ್ದಳು. ಒಂದು ವಾರ ಭಾನುವಾರಕ್ಕೆ ಲಗತ್ತಾಗಿ ಯಾವುದೋ ಸರ್ಕಾರಿ ರಜೆ ಬಂದದ್ದರಿಂದ ಒಂದು ದಿನ ಹೆಚ್ಚಾಗಿ ಉಳಿಯಲು ಸಾಧ್ಯವಾಯಿತು. ವಸುಂಧರಾ ಈ ನಡುವೆ ನಮ್ಮ ಮನೆಕಡೆ ಬರಲೇ ಇಲ್ಲ ಎಂದು ಸಾವಿತ್ರಮ್ಮನವರ ಚಿಕ್ಕಮ್ಮ ಹೇಳಿದ್ದನ್ನು ವಸುಂಧರಾಗೆ ತಿಳಿಸಿದ್ದರು. ಹೇಗೂ ಭಾನುವಾರ ಬಿಡುವಿದೆಯಲ್ಲ ಎಂದು ಸಾಯಂಕಾಲ ಅವರ ಮನೆಗೆ ಹೋಗಿ ಕೆಲ ಸಮಯ ಮಾತಾಡುತ್ತ ಕುಳಿತಿದ್ದಳು. ಮಾತಿನ ನಡುವೆ ಅವರ ಮಗಳು ಮದುವೆಯಾಗಿ ಹೋದ ಮೇಲೆ ಏನಾದರೂ ಬಂದಿದ್ದಳೆ, ಏನಾದರೂ ವಿಶೇಷ ಉಂಟೆ ಎಂದೆಲ್ಲ ಕೇಳಿದಳು. ಹೌದು ಬಂದಿದ್ದಳು. ಮೈಕೈ ತುಂಬಿಕೊಂಡು ಚೆನ್ನಾಗಿ ಅಗಿದ್ದಾಳೆ. ಆದರೆ ಹಾಗಂತ ವಿಶೇಷ ಏನಿಲ್ಲ ಎಂದರು. ಆ ಮೇಲೆ– "ನೀನು ಶಾಮೂಗೆ ಸಿಕ್ಕಿದ್ದೆಯಂತೆ. ಶಾಮೂ ಹೋದ ವಾರ ಬಂದಿದ್ದಾಗ ಹೇಳಿದ. ಅವನ ಮನೆಗೆ ನಿನ್ನ ಪಿ.ಜಿ. ಹತ್ತಿರವಂತೆ" ಎಂದು ಕೇಳಿದರು. "ಹತ್ತಿರ ಅಂದರೆ ತೀರಾ ಹತ್ತಿರ ಏನಲ್ಲ, ಬಸ್‌ನಲ್ಲಿ ಹೋದರೆ ಒಂದು ಅರ್ಧ ಗಂಟೆ ಆಗುತ್ತೆ" ಎಂದಳು. ಆಮೇಲೆ ಏನನ್ನೋ ಜ್ಞಾಪಿಸಿಕೊಂಡವರಂತೆ "ಮೊನ್ನೆ ಬಂದಿದ್ದಾಗ ಬೆಳಿಗ್ಗೆ ಎದ್ದಿದ್ದು ಸ್ವಲ್ಪ ತಡ ಆಗಿ ಸ್ನಾನ ಮಾಡಿ ಹೊರಡುವ ಅವಸರದಲ್ಲಿ ವಾಚ್ ಬಿಟ್ಟು ಹೋಗಿಬಿಟ್ಟಿದ್ದಾನೆ. ಮುಂದಿನ ಎರಡು ವಾರ ಬರಕ್ಕಾಗಲ್ಲ ಅಂತ ಹೇಳಿದ್ದಾನೆ. ಅದನ್ನು ಅವನಿಗೆ ತಲುಪಿಸೋದಕ್ಕೆ ನಿನಗೆ ಆಗುತ್ತಾ" ಎಂದು ಕೇಳಿದರು. "ಓಹೋ ಅದಕ್ಕೇನಂತೆ ಕೊಡಿ ತಲುಪಿಸುತ್ತೇನೆ" ಎಂದು ಕೇಳಿ ತೆಗೆದುಕೊಂಡು ಬಂದಳು. ನಿನ್ನ ಕೈಗೆ ಕೊಟ್ಟಿರೋ ವಿಷಯ ನಮ್ಮ ಯಜಮಾನರಿಗೆ ಹೇಳಿ ಶಾಮೂ ಆಫೀಸಿಗೇ ಫೋನ್ ಮಾಡಿ ತಿಳಿಸಲು ಹೇಳುತ್ತೇನೆ ಎಂದರು. "ಶಾಮೂಗೇನೂ ನಮ್ಮ ಪಿ.ಜಿ. ಹತ್ತಿರ ಬರೋದಕ್ಕೆ ಹೇಳಬೇಡಿ. ಹೆಣ್ಣು ಮಕ್ಕಳ ಪಿ.ಜಿ.ನಲ್ಲಿ ಗುರುತು ಪರಿಚಯ ಇಲ್ಲದ ಗಂಡಸರಿಗೆ ಸೆಕ್ಯುರಿಟಿ ಗಾರ್ಡ್ ಒಳಕ್ಕೆ ಬಿಡಲ್ಲ. ನಾನೇ ಬರೋ ಭಾನುವಾರ ಬೆಳಿಗ್ಗೆನೋ ಸಂಜೇನೋ ಹೋಗಿ ತಲುಪಿಸುತ್ತೇನೆ ಬಿಡಿ" ಎಂದು ಹೇಳಿದಳು.

ಮುಂದಿನ ಭಾನುವಾರ ಬೆಳಿಗ್ಗೆ ತಿಂಡಿ ತಿನ್ನುವಾಗ ಅಪರೂಪಕ್ಕೆ ಅವಳ

ರೂಮ್ ಮೇಟ್ ಭಾರತಿ ಬಿಡುವಾಗಿ ಮಾತಾಡಲು ಸಿಕ್ಕಿದಳು. ಸಾಮಾನ್ಯವಾಗಿ ಭಾನುವಾರಗಳಂದೂ ಅವಳು ಬಿಡುವಾಗಿ ಸಿಗುತ್ತಿದ್ದುದು ತೀರ ಅಪರೂಪ. ಯಾರೋ ಫ್ರೆಂಡನ್ನು ನೋಡಬೇಕಾಗಿದೆ ಎಂದೋ, ಇಲ್ಲ ಶಾಪಿಂಗ್‌ಗೆ ಹೋಗುತ್ತಿನಿ ಅಂತಲೋ ಹೇಳಿ ಸ್ನಾನ ಮುಗಿಸಿ ಹೋದರೆ ಮತ್ತೆ ಸಿಗುತ್ತಿದ್ದದು ರಾತ್ರಿಯೇ. ತಿಂಡಿ ತಿಂದುಕೊಂಡು ಹೋಗಬಹುದಲ್ಲ ಅಂತ ಹೇಳಿದರೆ "ವಸುಂಧರಾ ಅವರೇ ತಿಂಡಿಗೆ ಬೆಂಗಳೂರಿನಲ್ಲಿ ಒಳ್ಳೊಳ್ಳೆ ಹೋಟೆಲ್‌ಗಳಿಗೇನು ಬರವೆ? ಇಲ್ಲಿ ತಿನ್ನೋದು ಇದ್ದೇ ಇದೆ. ಒಂದು ಛೇಂಜ್ ಇರಲಿ ಅಂತ ನಾನಂತೂ ಹೊರಗಡೇ ಹೋಗಕ್ಕೇ ಇಷ್ಟಪಡುತ್ತೀನಿ. ಲೈಫ್ ಅಂದರೆ ಅದರಲ್ಲಿ ಒಂದು ಛೇಂಜ್ ಇರಬೇಕು. ದಿನಾ ಅದೇ ಅದೇ ಮೆಕ್ಯಾನಿಕಲ್ ಲೈಫ್ ಅಂದರೆ ನನಗಂತೂ ಬೋರಾಗಿಬಿಡುತ್ತೆ. ಗಂಡಸರು ನೋಡಿ ಹೇಗೆ ಬಿಡುಬೀಸಾಗಿ ಎಲ್ಲಿ ಬೇಕಂದರೆ ಅಲ್ಲಿ ಹೋಗಿ ಲೈಫ್‌ನ ಎಂಜಾಯ್ ಮಾಡ್ತಿರ್ತಾರೆ. ಹೆಂಗಸರು ಮಾತ್ರ ಮನೇಲೇ ಬಿದ್ದು ಸಾಯಬೇಕಾ?" ಎಂದು ಒಂದು ದೊಡ್ಡ ಲೆಕ್ಚರ್ರೇ ಕೊಟ್ಟುಬಿಡುತ್ತಿದ್ದಳು. ಅದೇನೋ ಈ ವಾರ ಕರೆದ ತಕ್ಷಣ ಬಂದಳು. ಇಬ್ಬರೂ ಅದೂ ಇದೂ ಮಾತಾಡಿಕೊಂಡು ತಿಂಡಿ ತಿಂದರು. ಆಮೇಲೆ ವಸುಂಧರಾ ತನ್ನ ಲೆಸನ್ಸಿಗೆ ಸಂಬಂಧ ಪಟ್ಟ ಹಾಗೆ ಏನೋ ಹೋಮ್ ವರ್ಕಿಗೆ ತೊಡಗಿಕೊಂಡಳು. ಆ ಹೊತ್ತು ಭಾರತಿ ಎಲ್ಲೂ ಹೋಗದೆ ಮಂಚದ ಮೇಲೆ ಮಲಗಿ ಯಾವುದೋ ಪುಸ್ತಕ ಓದವುದಕ್ಕೆ ತೊಡಗಿಕೊಂಡಳು. ಹತ್ತೂವರೆ ಹೊತ್ತಿಗೆ ಯಾರಿಗೋ ಫೋನ್ ಮಾಡಬೇಕಾಗಿತ್ತು ಅಂತ ತಮ್ಮ ಪಿ.ಜಿ. ಯಲ್ಲೇ ಇದ್ದ ಕಾಯಿನ್ ಬೂತ್‌ನಿಂದ ಫೋನ್ ಮಾಡಲು ಕೆಳಕ್ಕೆ ಹೋದಳು. ಅವಳು ಆ ಕಡೆ ಹೋದಾಗ ಭಾರತಿ ಓದುತ್ತಾ ಇದ್ದ ಪುಸ್ತಕ ಯಾವುದು ಅಂತ ವಸುಂಧರಾ ಕುತೂಹಲಕ್ಕೆ ಕೈಗೆ ತೆಗೆದುಕೊಂಡಳು. ಮುಖಪುಟದಲ್ಲೇ ಅರೆಬೆತ್ತಲೆಯ ಗಂಡು ಹೆಣ್ಣು ತಬ್ಬಿ ಮುತ್ತಿಡುತ್ತಿರುವ ಚಿತ್ರವಿದ್ದ ಒಂದು ಇಂಗ್ಲಿಷ್ ಕಾದಂಬರಿ. ಅದರ ರಕ್ಷಾಪುಟದ ಹಿಂಬದಿಯಲ್ಲಿ ಅತ್ಯಂತ ಸೆಕ್ಸೀ ನಾವೆಲ್ ಎಂದು ವರ್ಣಿಸಿರುವ ಬರಹ ಇತ್ತು.

ಒಂದು ಹತ್ತು ನಿಮಿಷದ ನಂತರ ಭಾರತಿ ವಾಪಸ್ ಬಂದು ನನ್ನ ಫ್ರೆಂಡ್ ಅನ್ನು ನೋಡೋಕೆ ಹೋಗಬೇಕು ಎಂದು ಹೇಳಿ ತನ್ನ ಸ್ಕೂಟಿ ಹತ್ತಿ ಹೋಗೇ ಬಿಟ್ಟಳು. ಅವಳ ಅಭಿರುಚಿ, ನಡವಳಿಕೆಗಳು ವಸುಂಧರಾಳ ಮನಸ್ಸಿನಲ್ಲಿ ನಾನಾ ಬಗೆಯ ಪ್ರಶ್ನೆಗಳನ್ನು ಏಳಿಸಿದವು. ಅವರವರ ಬದುಕು ಅವರದು. ಎಂದುಕೊಂಡು ಸುಮ್ಮನಾದಳು.

ಊಟದ ನಂತರ ಒಂದರ್ಧ ಗಂಟೆ ವಿಶ್ರಾಂತಿ ತೆಗೆದುಕೊಂಡಳು. ರೂಫ್ ಹತ್ತಿಹೋಗಿ ನೆನೆಸಿಟ್ಟಿದ್ದ ತನ್ನ ಬಟ್ಟೆಗಳನ್ನು ಕಸಕಿಕೊಂಡಳು. ಅಷ್ಟುಹೊತ್ತಿಗೆ ಸಂಜೆ ನಾಲ್ಕು ಗಂಟೆ ಆಯಿತು. ಡೈನಿಂಗ್ ಹಾಲ್‌ಗೆ ಹೋಗಿ ಕಾಫಿ ಕುಡಿದು ಶಾಮೂ ಮನೆಕಡೆ ಹೋಗೋಣ ಎಂದುಕೊಂಡು ಅವನ ವಾಚನ್ನು ತನ್ನ ಹ್ಯಾಂಡ್ ಬ್ಯಾಗಿನಲ್ಲಿ ಹಾಕಿಕೊಂಡು ಬಸ್ ಸ್ಟಾಪ್‌ನತ್ತ ಹೆಜ್ಜೆ ಹಾಕಿದಳು.

ವಸುಂಧರಾ ಶಾಮೂ ಮನೆಯ ಹತ್ತಿರ ಹೋಗಿ ಬಾಗಿಲು ತಟ್ಟಲೆಂದು ಕೈ ಹಾಕಿದ

ಕೂಡಲೇ ಬಾಗಿಲು ಹಿಂದಕ್ಕೆ ಹೋಯಿತು. ಓಹೋ ಬೋಲ್ಟ್ ಹಾಕಿಲ್ಲ ಅಂದುಕೊಂಡು ಒಳಗೆ ಹಾಲ್‌ನಲ್ಲಿ ಹೆಜ್ಜೆ ಇಟ್ಟಕೂಡಲೇ ಬಲಭಾಗಕ್ಕೆ ಇದ್ದ ರೂಮಿನಲ್ಲಿ ಮಂಚದ ಮೇಲೆ ಯಾರೋ ಬೆಡ್ ಶೀಟ್ ಹೊದ್ದು ಮಲಗಿದ್ದಂತೆ ಕಂಡಿತು. ಶಾಮೂನೇ ಇರಬೇಕು ಅಂದುಕೊಂಡರೆ ಶಾಮೂನೇ. ಪಕ್ಕಕ್ಕೆ ಹೊರಳಿ ಗೋಡೆ ಕಡೆಗೆ ಮುಖ ಮಾಡಿ ಮುಸುಕಿಟ್ಟು ಶಾಮೂ ಕಣ್ಣುಮುಚ್ಚಿ ಮಲಗಿಬಿಟ್ಟಿದ್ದಾನೆ.

ಮಂಚದ ಹತ್ತಿರ ಹೋಗಿ ಮೆಲ್ಲಗೆ 'ಶಾಮೂ' ಎಂದು ಕರೆದಳು. ಎಚ್ಚರಗೊಳ್ಳಲಿಲ್ಲ. ಏನು, ಏನಾದರೂ ಜ್ವರ ಗಿರ ಬಂದಿದೆಯೇನೋ ಎಂದು ಹೊದಿಕೆ ಸರಿಸಿ ಹಣೆಮೇಲೆ ಕೈಯಾಡಿಸಿದಳು. ಹಣೆ ಬೆಚ್ಚಗಿತ್ತು. ಓಹೋ ಜ್ವರ ಬಂದಿದೆ ಎಂದುಕೊಂಡು ಲುಂಗಿ ಮತ್ತು ಬನಿಯನ್ನಲ್ಲಿ ಮಲಗಿದ್ದ ಅವನ ಭುಜ ಅಲುಗಿಸಿ ಸ್ವಲ್ಪ ಗಟ್ಟಿಯಾಗಿ 'ಶಾಮೂ' ಎಂದು ಕೂಗಿದಳು. ಶಾಮೂ ಹೊರಳಿ ಕಣ್ಣುಬಿಟ್ಟು ನೋಡಿದರೆ ಎದುರುಗಡೆ ವಸುಂಧರಾ– "ಏನಾಗಿದೆ ನಿನಗೆ" ಎಂದಳು. "ಏನಿಲ್ಲ ವಸೂ, ರಾತ್ರಿಯಿಂದ ಸ್ವಲ್ಪ ಮೈಲ್ಡ್ ಆಗಿ ಜ್ವರ, ತಲೆ ನೋವು ಅಷ್ಟೆ" ಅಂದ. ಮತ್ತೆ "ಬೆಳಿಗ್ಗೆಯಿಂದ ಏನಾದರೂ ತಿಂದಿದ್ದೀಯೋ ಇಲ್ಲವೋ" ಎಂದಾಗ, ಇಲ್ಲ ಬೆಳಿಗ್ಗೆ ಕಾಫಿ ಮಾಡಿಕೊಂಡು ಕುಡಿದಿದ್ದೆ. ಆಮೇಲೆ ಇಲ್ಲೇ ಹತ್ತಿರದ ಹೋಟೆಲ್‌ಗೆ ಹೋಗಿ ಇಡ್ಲಿ ತಿಂದುಬಂದೆ. 12 ಗಂಟೆ ಸುಮಾರಿಗೆ ಏನೋ ವಿಷಯ ಮಾತಾಡಬೇಕು ಅಂತ ನನ್ನ ಕಲೀಗ್ ಒಬ್ಬರು ಬಂದಿದ್ದರು. ಮಾತಾಡಿ ಆಮೇಲೆ ಹತ್ತಿರದ ಹೋಟೆಲ್‌ನಿಂದ ಅವರೇ ಊಟ ತಂದು ಕೊಟ್ಟು ಜೊತೆಗೆ ಮೆಡಿಕಲ್ ಸ್ಟೋರ್ಸ್‌ನಿಂದ ಜ್ವರಕ್ಕೆ ಮಾತ್ರೆ ತಂದು ಕೊಟ್ಟು ಹೋಗಿದ್ದರು. ಊಟಮಾಡಿದ ಮೇಲೆ ಮಾತ್ರೆ ತೆಗೆದುಕೊಂಡ ಸ್ವಲ್ಪ ಹೊತ್ತಿಗೆ ತೂಕಡಿಕೆ ಬಂದು ಬಾಗಿಲ ಬೋಲ್ಟ್ ಕೂಡ ಹಾಕದೆ ಹಾಗೇ ಮಲಗಿಬಿಟ್ಟಿದ್ದೆ. ಈಗ ನೀನು ಬಂದ ಮೇಲೇ ಎಚ್ಚರವಾದ್ದು" ಎಂದ. "ಸಣ್ಣಗೆ ತಲೆ ನೋವು ಶುರುವಾಗಿದೆ. ಅಲ್ಲೇ ಮೇಜಿನ ಡ್ರಾದಲ್ಲಿ ಅಮೃತಾಂಜನ ಇದೆ. ತಂದು ಕೊಡು" ಅಂದ. ವಸುಂಧರಾ ಅದನ್ನು ತಂದು ಮಂಚದ ಮೇಲೆ ಪಕ್ಕ ಕೂತು ತಾನೇ ಮೃದುವಾಗಿ ಹಣೆಗೆ ಹಚ್ಚಿ ಮೆಲ್ಲಗೆ ಸವರ ತೊಡಗಿದಳು. ನೋಡಲು ಮುದ್ದಾಗಿದ್ದ ಅವಳ ಸಾಮೀಪ್ಯ ಮತ್ತು ಆ ಮೃದು ಸ್ಪರ್ಶ ಶಾಮುಗೆ ಏನು ಪ್ರಚೋದನೆ ನಿಡಿತೋ ಅವಳನ್ನು ತಕ್ಷಣವೇ ಬಾಚಿ ತಬ್ಬಿ ಮುಖದ ತುಂಬಾ ಲೊಚಲೊಚನೆ ಚುಂಬಿಸತೊಡಗಿದ. ವಸುಂಧರಾ ಅವನ ತೆಕ್ಕೆಯಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದಷ್ಟೂ ಅವನ ಬಿಗಿತ ಜೋರಾಗಿ ಮಂಚದ ಮೇಲೆ ಮಲಗಿಸಿ ವಸುಂಧರಾಳ ತೀವ್ರ ಪ್ರತಿರೋಧವನ್ನೂ ಲೆಕ್ಕಿಸದೆ ಕೂಡಿದ. ಸೋತುಹೋದ ವಸುಂಧರಾ ಅವನಿಂದ ಬಿಡಿಸಿಕೊಳ್ಳುವ ತನ್ನ ಪ್ರಯತ್ನ ಕೈಚೆಲ್ಲಿ ಅವನಿಗೆ ಒಪ್ಪಿಸಿಕೊಂಡಳು.

ಸುಖದ ಕ್ಷಣ ಕಳೆದು ವಾಸ್ತವಕ್ಕೆ ಬರುತ್ತಿದ್ದಂತೆ ಇಬ್ಬರೂ ಬೆವರತೊಡಗಿದರು. ಶಾಮು– "ನಿನ್ನ ಮೇಲೆ ನನಗೆ ಮೊದಲಿನಿಂದಲೂ ಇದ್ದ ಅತಿಶಯವಾದ ಪ್ರೀತಿ ಮತ್ತು ಆಸೆ ನನ್ನನ್ನು ಸಂಯಮವನ್ನು ಮೀರುವಂತೆ ಮಾಡಿಬಿಟ್ಟಿತು. ದೇವರ ಕೃಪೆ ಇದ್ದಿದ್ದರೆ ಈ ಹೊತ್ತು ರಜನಿಯ ಜಾಗದಲ್ಲಿ ನೀನಿರಬೇಕಾಗಿತ್ತು. ಏನೋ ಒಂದು ದುರ್ಬಲ

ಕ್ಷಣ. ನಾನು ತುಂಬಾ ತಪ್ಪಿದೆ. ದಯವಿಟ್ಟು ನನ್ನನ್ನು ಕ್ಷಮಿಸಿಬಿಡು ವಸೂ" ಎಂದು ಹೇಳಿ ನಾಚಿಕೆಯಿಂದ ಮುಖ ಕೆಳಗೆ ಹಾಕಿದ. ವಸುಂಧರಾ ಏನೂ ಮಾತಾಡದೆ ತನ್ನ ಉಡುಪನ್ನು ಸರಿಪಡಿಸಿಕೊಂಡು ತಾನು ತಂದಿದ್ದ ವಾಚನ್ನು ಬ್ಯಾಗಿನಿಂದ ತೆಗೆದು ಟೇಬಲ್ ಮೇಲಿಟ್ಟು ಬಾಗಿಲೂ ಹಾಕಿಕೊಳ್ಳದೆ ಕಣ್ಣಂಚಿನಲ್ಲಿ ನೀರಾಡಿಸುತ್ತ ಬಾಡಿದ ಮುಖದಿಂದ ಹೊರಟುಹೋದಳು. ಅವಳ ಆ ಮುಖದ ಚಿತ್ರ ಶಾಮೂನನ್ನು ಒಂದೇ ಸಮನೆ ಇರಿಯತೊಡಗಿತು.

ಅಧ್ಯಾಯ-15

ಈ ಸಲ ದಾವಣಗೆರೆಗೆ ಹೋದ ಮೇಲೆ ಹೇಮಾ ಮೊದಲಿನಂತಿರಲಿಲ್ಲ. ಅತ್ತೆ ಹೇಳಿದ್ದಕ್ಕೆ ಪ್ರತಿ ಹೇಳದೆ ವಿಧೇಯಳಾಗಿ ನಡೆದುಕೊಳ್ಳುವುದೇ ಸೊಸೆಯ ಧರ್ಮ ಎಂದು ತಿಳಿದಂತಿದ್ದ ಅವರಿಗೆ ಬದಲಾದ ಕಾಲದಲ್ಲಿ ಯಾವುದೋ ಕಾಲದ ಈ ಮನೋಭಾವಕ್ಕೆ ಈಗ ಎಡೆಯಿಲ್ಲ ಎಂದು ಮನವರಿಕೆ ಮಾಡಿಕೊಡಬೇಕೆಂದು ನಿರ್ಧರಿಸಿದ್ದಳು. ತಾನು ಮೂಕಳಾಗಿ ಅವರು ಹೇಳಿದಂತೆ ಎಲ್ಲಕ್ಕೂ ತಲೆಬಾಗಿ ನಡೆಯುತ್ತಿರುವುದರಿಂದಲೇ ತನ್ನ ಮೇಲೆ ಅವರ ಸವಾರಿ ಜೋರಾಗುತ್ತಿದೆ ಎನಿಸಿ ತಾನೂ ಕೆಲವು ಸಲವಾದರೂ ವಿರೋಧಿಸಬೇಕೆಂದು ತೀರ್ಮಾನಿಸಿದ್ದಕ್ಕೆ ತಕ್ಕಂತೆ ನಡೆದುಕೊಳ್ಳತೊಡಗಿದಳು. ಇದರಿಂದ ಅತ್ತೆ ಮತ್ತು ನಾದಿನಿಯೊಂದಿಗೆ ಘರ್ಷಣೆ ದಿನನಿತ್ಯದ ಕಥೆಯಾಯಿತು. ಮನೆಯಲ್ಲೂ ಕೆಲಸ ಮಾಡಿ ಹೊರಗೂ ದುಡಿಯಲು ನಾನೇನೂ ಕತ್ತೆಯಲ್ಲ ಎಂದು ಒಂದು ಸಂದರ್ಭದಲ್ಲಿ ಅತ್ತೆ ತಡಕಿ ನೋಡಿಕೊಳ್ಳುವಂತೆ ಪ್ರತ್ಯುತ್ತರ ಕೊಟ್ಟಿದ್ದಳು. ತನ್ನ ಸಹನೆಯ ಮಿತಿ ಮೀರಿದಾಗ. "ನಿಮಗೆ ನಾನು ದುಡಿದು ತರುವ ಹಣದ ಮೇಲೆಯೇ ಕಣ್ಣು. ನಾನೂ ಮನುಷ್ಯಳು ಎನ್ನುವುದನ್ನೇ ನೀವು ಮರೆತಂತಿದೆ" ಎಂದು ಗಂಡನಿಗೂ ಒಮ್ಮೆ ನಿರ್ದಾಕ್ಷಿಣ್ಯವಾಗಿ ಹೇಳಿಬಿಟ್ಟಳು. ಹಾಗೆ ಹೇಳಿದ ಮೇಲೂ ಗಂಡನ ವರ್ತನೆಯಲ್ಲಿ ಹೆಚ್ಚಿನ ಬದಲಾವಣೆಯೇನೂ ಕಂಡುಬರಲಿಲ್ಲ. ಗಂಡನಿಗೆ ಆಸ್ತಿ ಮಾಡಬೇಕೆಂಬ ಅತಿಯಾದ ಆಸೆ. ಅಲ್ಲದೆ ತಂಗಿಯ ಮದುವೆಗೂ ಈಗಿನಿಂದಲೇ ಹಣ ಕೂಡಿಡಬೇಕು. ಅದಕ್ಕಾಗಿ, ಅಸಲಿಗೆ ಮೋಸ ಮಾಡದೆ ವಾಯಿದೆಗೆ ಸರಿಯಾಗಿ ಬಡ್ಡಿ ತಂದುಕೊಡುವಂಥ ತನಗೆ ತೀರಾ ಪರಿಚಿತರಾದ ನಂಬಿಕಸ್ಥ ಕುಳಗಳಿಗೆ ಮಾತ್ರ ಹೆಚ್ಚಿನ ಬಡ್ಡಿಗೆ ಸಾಲ ಕೊಡುತ್ತಿದ್ದ. ಹಣ ಕೂಡಿಟ್ಟು ಸೈಟು, ಜಮೀನುಗಳ ಮೇಲೆ ಹಣ ಹೂಡಬೇಕೆಂಬ ಇರಾದೆ ಇತ್ತು. ಆ ಕಾರಣದಿಂದ ಹೇಮಾ ತರುತ್ತಿದ್ದ ಅಲ್ಪ ಸಂಬಳಕ್ಕೂ ಕೈಹಾಕಿ ಅವಳು ಕೇಳಿದಾಗ ಮಾತ್ರ ಖರ್ಚಿಗೆ ಕೊಡುತ್ತಿದ್ದ. ಇದು ಅವಳಿಗೆ ಎಲ್ಲಿಲ್ಲದ ಕೋಪವುಂಟು ಮಾಡಿತ್ತು. ಒಂದು ವರ್ಷ ಕಳೆಯುವಷ್ಟರಲ್ಲಿ ಹೇಮಾಳಿಗೆ ವೈವಾಹಿಕ ಜೀವನದ ಬಗ್ಗೆ ತಾನು ಕಂಡಿದ್ದ ಕನಸೆಲ್ಲ ಕ್ರಮೇಣ ಕರಗತೊಡಗಿತು. ಹೆಂಡತಿಯೆನಿಸಿಕೊಂಡವಳಿಗೂ ಅಶೆ ಆಕಾಂಕ್ಷೆಗಳಿರುತ್ತವೆ, ಬೇಕು ಬೇಡಗಳಿರುತ್ತವೆ ಅವುಗಳನ್ನು ಈಡೇರಿಸುವುದೂ ಗಂಡನಾದ ತನ್ನ ಕರ್ತವ್ಯವಷ್ಟೇ ಅಲ್ಲ, ಜವಾಬ್ದಾರಿ ಕೂಡ ಎಂಬುದು ಶಿವರಾಜನ ನಿಘಂಟಿನಲ್ಲೇ ಇರಲಿಲ್ಲವೆಂದು ದಿನ ಕಳೆದಂತೆ ಹೇಮಾಳಿಗೆ ದೃಢವಾಗತೊಡಗಿತು.

ಹೇಮಾ ಸಮಾಜ ಶಾಸ್ತ್ರವನ್ನು ಚೆನ್ನಾಗಿ ಅಧ್ಯಯನ ಮಾಡಿದ್ದವಳು. ಪುರುಷ ಪ್ರತಿಷ್ಠಾ ಪ್ರಧಾನವಾದ ಈ ಸಮಾಜದಲ್ಲಿ ಯಾವ ಕಾಲದಲ್ಲಿಯೂ ಯಾವ ದೇಶದಲ್ಲಿಯೂ ಹೆಣ್ಣನ್ನು ಪುರುಷರು ಕೀಳಾಗೇ ನಡೆಸಿಕೊಂಡು ಬಂದಿದ್ದಾರೆಂಬುದು ಅವಳಿಗೆ ತಿಳಿಯದ್ದೇನಲ್ಲ. ನಾಗರಿಕತೆ ಇಷ್ಟೆಲ್ಲ ಮುಂದುವರಿದಿರುವಾಗ, ಎಲ್ಲ

ರಂಗಗಳಲ್ಲೂ ನಾರಿ ಪುರುಷನಿಗಿಂತ ತಾನು ಯಾವ ರೀತಿಯಲ್ಲಿಯೂ ಕಡಿಮೆಯಿಲ್ಲ ಎಂಬುದನ್ನು ಸಾಧಿಸಿ ತೋರಿಸುತ್ತಿರುವಾಗ ಅವಳ ವಿಷಯಕ್ಕೆ ತಮ್ಮ ಧೋರಣೆಯನ್ನು ಸ್ವಲ್ಪವಾದರೂ ಮಾರ್ಪಾಟುಮಾಡಿಕೊಳ್ಳಬೇಕೆಂದು ಅವರಿಗೆ ಅನಿಸುವುದೇ ಇಲ್ಲವೆ ಎಂದು ಅನೇಕ ಸಲ ತೀವ್ರವಾಗಿ ಚಿಂತಿಸುವಳು. ಈ ವಿಷಯದಲ್ಲಿ ಓದು ಬರೆದು ಮಾಡಿ ಉನ್ನತ ಪದವಿಗಳನ್ನು ಪಡೆದವರಿಗೂ, ಹಾಗೆ ಹೆಚ್ಚು ಓದದೆ ಇರುವವರಿಗೂ ಅಂಥ ಹೇಳಿಕೊಳ್ಳುವಂಥ ವ್ಯತ್ಯಾಸ ನಮ್ಮ ದೇಶದಲ್ಲಿ ಕಂಡುಬರದೆ ಇರುವುದಕ್ಕೆ ಅವಳಿಗೆ ವಿಷಾದದ ಜೊತೆಗೆ ಸೋಜಿಗವೂ ಆಗುತ್ತಿತ್ತು. ತನ್ನ ಗಂಡನನ್ನೇ ತೆಗೆದುಕೊಂಡರೆ ಅವನು ಬಿ.ಕಾಮ್. ಮಾಡಿ ಸಿ.ಎ. ಮಾಡಿದವನು. ಏನು ಪ್ರಯೋಜನ? ವಿಶ್ವವಿದ್ಯಾನಿಲಯದ ಪದವಿಗಳು ಮದುವೆ ಮಾರ್ಕೆಟ್ಟಿನಲ್ಲಿ ಗಂಡು ಹೆಚ್ಚು ಬೆಲೆಗೆ ಮಾರಾಟವಾಗುವುದಕ್ಕೆ ಒಂದು ಪಾಸ್ ಪೋರ್ಟ್ ಎಂದು ಭಾವಿಸಿದವರೇ ಬಹಳಷ್ಟು ಜನ ಎಂದು ಅನ್ನಿಸಿ ಮನಸ್ಸು ಮುದುಡುತ್ತಿತ್ತು. ತಾನು ದುಡಿದು ಸಂಬಳ ತರುವವಳಾದ ಕಾರಣ ತನ್ನ ಗಂಡ ಮತ್ತು ಅವರ ಮನೆಯವರು ವರದಕ್ಷಿಣೆಗಾಗಿ ಹೆಚ್ಚು ಒತ್ತಾಯಿಸಲಿಲ್ಲವೆಂದು ಗೊತ್ತಾಗಲು ಅವಳಿಗೆ ಹೆಚ್ಚು ಸಮಯವೇನೂ ಬೇಕಾಗಲಿಲ್ಲ.

ಒಂದು ದಿನ ಕಾಲೇಜಿನಿಂದ ಬಂದ ಮೇಲೆ ಗಂಡನ ಹತ್ತಿರ "ಈ ಹೊತ್ತು ಯಾಕೋ ತುಂಬಾ ಬೇಜಾರಾಗ್ತಾ ಇದೆ. ಸುಮ್ಮನೆ ಹಾಗೇ ತಿರುಗಾಡಿಕೊಂಡು ಬರೋಣ ಬನ್ನಿ" ಎಂದು ಹೇಳಿದಳು. ಅವಳಿಗೆ ಆಶ್ಚರ್ಯವೆನಿಸುವಂತೆ ಶಿವರಾಜು ಕೂಡಲೇ "ರೆಡಿಯಾಗು ಹೋಗೋಣ" ಎಂದು ಹೇಳಿ ತಾನೂ ಸಿದ್ಧನಾಗಿ ನಿಂತ. ಒಂದರ್ಧ ಮುಕ್ಕಾಲು ಗಂಟೆ ಸುತ್ತಾಡಿ ಹೋಟೆಲ್‌ಗೆ ಹೋಗಿ ಲೈಟಾಗಿ ತಿಂಡಿ ತಿಂದು ಟೀ ಕುಡಿದು ಆದ ಮೇಲೆ "ನನಗೆ ರಜೆ ಶುರುವಾದ ಮೇಲೆ ಒಂದು ಹದಿನೈದು ದಿನ ಊರಿಗೆ ಹೋಗಿ ಬರ್ತೀನಿ. ಬೇಕಾದರೆ ನೀವೂ ಬನ್ನಿ. ಮದುವೆ ಅದ ಮೇಲೆ ನಮ್ಮ ಮನೆಗೆ ಬಂದೇ ಇಲ್ಲ" ಎಂದಳು. "ಇಲ್ಲ ಫೈನಾನ್ಷಿಯಲ್ ಇಯರ್ ಕೊನೆಯಾಗುವ ಸಮಯ ಅಂದರೆ ನನಗೆ ವಿಪರೀತ ಕೆಲಸ ಇರುತ್ತೆ. ನಾನು ಬರೋದಕ್ಕೆ ಆಗಲ್ಲ. ನೀನು ಹದಿನೈದು ದಿನ ಬೇಡ. ಒಂದು ವಾರ ಹೋಗಿಬಿಟ್ಟು ಬಾ ಎಂದ." ಒಂದು ವಾರ ಅಂತ ಹೇಳಿ ಆಮೇಲೆ ಇನ್ನೊಂದು ವಾರ ಮುಂದುವರೆಸಿದರೆ ಆಯಿತು ಎಂದು ಕೊಂಡು ಸದ್ಯ ಹೋಗಕ್ಕೆ ಒಪ್ಪಿಗೆ ಕೊಟ್ಟರಲ್ಲ ಎಂದು ಸಂತಸವಾಯಿತು. ಆಮೇಲೆ "ಊರಿನಲ್ಲಿ ನನ್ನ ಫ್ರೆಂಡ್ ಒಬ್ಬಳ ಮದುವೆ ಇದೆ. ಅವಳಿಗೆ ಒಂದು ಒಳ್ಳೆ ಸೀರೆ ಪ್ರಸೆಂಟ್ ಮಾಡಬೇಕು ಅಂತ ಇದ್ದೀನಿ. ಜೊತೆಗೆ ನನಗೂ ಒಂದು ಒಳ್ಳೆ ಸೀರೆ ಬೇಕು ಕೊಡಿಸಿ" ಎಂದಳು. ಶಿವರಾಜುವಿನ ಮುಖದಲ್ಲಿ ಗಂಟುಗಳು ಕಾಣಿಸಿಕೊಂಡುವು. "ಮದುವೆ ಅಂತ ಹೇಳ್ತಾ ಇದ್ದೀಯ. ಒಂದು ಸೀರೆ ತಗೋ. ಒಂದೇ ಸಲ ಎರಡು ಸೀರೆ ಬೇಡ. ನೀನು ಊರಿನಿಂದ ಬಂದಮೇಲೆ ಬೇಕಾದರೆ ತಗೊಂಡರಾಯಿತು" ಎಂದ. ಹೇಮಾಳಿಗೆ ಬೇಜಾರಾಯಿತು. "ನಿಮ್ಮ ದುಡ್ಡೇನೂ ಕೊಡಬೇಡಿ. ನಾನು ದುಡಿದಿರುವ ದುಡ್ಡೇ ಇದೆಯಲ್ಲ. ಅದರಲ್ಲೇ ಕೊಡಿ. ನಿಮಗೇನು ಕಷ್ಟ" ಅಂದಳು. ಇನ್ನು ತೀರಾ ಹಠ ಮಾಡುವುದು ಬೇಡ ಎಂತಲೋ ಏನೋ "ಆಯಿತು ನಡಿ" ಎಂದ. ಒಂದು ಪರಿಚಯದ

ಸೀರೆ ಅಂಗಡಿಗೆ ಹೋದರು. ಹೇಮಾ ಹೆಚ್ಚಿನ ಬೆಲೆಯದೊಂದು ಮತ್ತು ಅದಕ್ಕಿಂತ ಸ್ವಲ್ಪ ಕಡಿಮೆ ಬೆಲೆಯದೊಂದು ಸೀರೆ ಆರಿಸಿದಳು. ಬೆಲೆ ಕೇಳಿದ ಮೇಲೆ "ಇಷ್ಟೊಂದು ಬೆಲೆಯ ಸೀರೆ ಪ್ರಸೆಂಟೇಷನ್ ಕೊಡಬೇಕಾ? ಸ್ವಲ್ಪ ಕಡಿಮೆ ದುಡ್ಡಿನದು ತಗೋ ಎಂದ. ಹೇಮಾಳಿಗೆ ತುಂಬ ಸಿಟ್ಟು ಬಂತು. ಕೊನೆಗೆ ಸೀರೆ ತಗೊಳ್ಳೋದೇ ಬೇಡಾ ಎಂದು ಹೋಗಿಬಿಡಬೇಕೆನಿಸಿದರೂ ಅಂಗಡಿಯವರು ಏನಾದರೂ ಅಂದುಕೊಂಡಾರೆಂದು "ಒಂದೇ ಸೀರೆ ಸಾಕು" ಎಂದು ಹೆಚ್ಚಿನ ಬೆಲೆಯ ಒಂದನ್ನು ಮಾತ್ರ ಪ್ಯಾಕ್ ಮಾಡಿಸಿ ಎಂದು ಹೇಳಿದಳು. ಶಿವರಾಜುವಿಗೆ ಕಸಿವಿಸಿಯಾದರೂ ಸುಮ್ಮನಾದ. ಹೇಮಾಳಿಗೆ 'ಇವರಿಗೆ ಹಣಕ್ಕೆ ಏನೇನೂ ಕೊರತೆ ಇಲ್ಲದೆ ಹೋದರೂ ಮನಸ್ಸು ಮಾತ್ರ ಬಹಳ ಕಿಲುಬು ಮನಸ್ಸು' ಎಂದು ಮನಸ್ಸಿನಲ್ಲೇ ಬೇಸರಪಟ್ಟುಕೊಂಡಳು.

ತಾನೇನೋ ಈಗ ಇವರ ಮನೆಗೆ ಬಂದವಳು. ಆದರೆ ಬೆನ್ನಿಗೆ ಬಿದ್ದ ತಂಗಿ ಹೋದವಾರ ತನ್ನ ಒಬ್ಬ ಗೆಳತಿಯ ಮದುವೆ ಇದೆ ಅದಕ್ಕೆ ಒಂದು ಒಳ್ಳೆ ಪ್ರಸೆಂಟೇಷನ್ ಮತ್ತು ತನಗೆ ಒಂದು ಒಳ್ಳೆಯ ಡ್ರೆಸ್ ಮೆಟೀರಿಯಲ್‌ಗೆ ಹತ್ತು ಸಾವಿರ ರೂಪಾಯಿ ಬೇಕು ಕೊಡು ಅಂತ ಅಣ್ಣನ್ನು ಕೇಳಿದರೆ ಹತ್ತು ಸಾವಿರ ಯಾಕೆ ಬೇಕು. ಹಣ ದುಂದು ಮಾಡಬಾರದು ಅಂತೆಲ್ಲಾ ಅವಳಿಗೆ ಉಪದೇಶ ನೀಡಿ ಐದು ಸಾವಿರ ಕೊಡಕ್ಕೆ ಹೋದರಲ್ಲ ಈ ಮಹಾಶಯರು! ಕೊನೆಗೆ ಅವಳು ಬೇಜಾರು ಮಾಡಿಕೊಂಡು ಆ ಐದು ಸಾವಿರವನ್ನು ಅವರ ಮುಖದ ಮೇಲೇ ಎಸೆದು "ನೀನು ಜುಗ್ಗರ ರಾಜ ನಿನ್ನ ದುಡ್ಡು ನೀನೇ ಇಟ್ಟುಕೋ ನನಗೇನೂ ಬೇಡ" ಎಂದು ಹೀಯಾಳಿಸಿ ಹೋಗೋದಕ್ಕೆ ಎದ್ದಾಗ ತಾನೇ ಹೇಗೋ ಕಷ್ಟಪಟ್ಟು ಉಳಿಸಿದ್ದ ಹಣದಲ್ಲಿ ಅದಕ್ಕೆ ಮತ್ತೈದು ಸಾವಿರ ಸೇರಿಸಿ ತೊಗೋ ಅಂತ ಅವಳಿಗೆ ಕೊಟ್ಟಿದ್ದಳು. ಯಾಕೆ ಇವರು ಹೀಗೆ ಅಂತ ಬೇಜಾರಾಗುತ್ತಿತ್ತು. ಆದರೆ ತನಗಾದರೆ ಎಷ್ಟು ಬೇಕಾದರೂ ಖರ್ಚುಮಾಡಲು ಹಿಂಜರಿಯದ ಆಸಾಮಿ ಅನ್ನುವುದು ಹೋದ ತಿಂಗಳು ಮನೆಯ ಆಫೀಸಿಗೆ ತಾವು ಕೂತುಕೊಳ್ಳಲು ತರಿಸಿದ ರಿವಾಲ್ವಿಂಗ್ ಛೇರಿಗೆ ಐವತ್ತು ಸಾವಿರ ಕೊಟ್ಟಿದ್ದೀನಿ ಅಂತ ಹೇಳಿಕೊಂಡರು. ಮತ್ತು ಹಾಗೆ ಕೊಟ್ಟಿರೋದನ್ನು ಬಹಳ ಹೆಮ್ಮೆಯಿಂದ ಹೇಳಿಕೊಂಡರು. ಅದರರ್ಥ ಮನುಷ್ಯ ಸ್ವಾರ್ಥಿ ಎನ್ನುವುದನ್ನು ಅರ್ಥಮಾಡಿಕೊಳ್ಳಲು ಹೇಮಳಿಗೆ ಕಷ್ಟವೇನೂ ಆಗಲಿಲ್ಲ.

ತಾನು ಈ ಮನೆಗೆ ಬಂದ ಹೊಸದರಲ್ಲಿ ಸ್ವಾಮಿಗಳು ಮಠದಲ್ಲಿ ಒಂದು ವಾರ ಕಾಲ ಯಾವುದೋ ಉತ್ಸವ ಏಪಾಟು ಮಾಡುತ್ತಾ ಇದ್ದಾರೆ. ಸಾಮೂಹಿಕ ಮದುವೆ, ಅನ್ನದಾನ ಎಲ್ಲ ಇರುತ್ತೆ. ಅದಕ್ಕೆ ಉದಾರವಾಗಿ ದೇಣಿಗೆ ಕೊಡಬೇಕು ಎಂದು ಮಠದ ಕಡೆಯಿಂದ ಕೆಲವರು ಬಂದಿದ್ದರು. ಇವರ ತಂದೆ ಮಠದ ದೊಡ್ಡ ಭಕ್ತರು. ಸ್ವಾಮಿಗಳಿಗೆ ಅವರನ್ನು ಕಂಡರೆ ತುಂಬಾ ವಿಶ್ವಾಸ. ಅದಕ್ಕೆ ಐದು ಸಾವಿರ ಕೊಡಬೇಕು ಅಂತ ಅವರ ತಂದೆಯ ಇಚ್ಛೆ. ಅದರೆ ಮಗನಿಗೆ ಅಷ್ಟೊಂದೆಲ್ಲಾ ಕೊಡಲು ಇಷ್ಟವಿಲ್ಲ. ಅಪ್ಪನಿಗೂ ಮಗನಿಗೂ ಒಳಗಡೆ ರೂಮ್‌ನಲ್ಲಿ ವಿವಾದ ನಡೆದು ಕೊನೆಗೆ ಅವರ ತಾಯಿ ಮಧ್ಯೆ ಪ್ರವೇಶಿಸಿ ಅದನ್ನು ಬಗೆಹರಿಸಿ ಐದು ಸಾವಿರವನ್ನು ಮಗನ ಕಡೆಯಿಂದ ಕೊಡಿಸಿದ್ದರು. ಒಂದು ವಾರಕಾಲ ಅಪ್ಪ ಮಗನೊಂದಿಗೆ ಮಾತುಬಿಟ್ಟಿದ್ದರು ಆಗ.

ಅಧ್ಯಾಯ-16

ಆ ತಿಂಗಳು ತನ್ನ ಪೀರಿಯಡ್ಸ್ ಸಮಯ ಬಂದರೂ ಮಾಮೂಲಿಯಂತೆ ತಾನು ಹೊರಗಾಗದೆ ಇದ್ದಾಗ ವಸುಂಧರಾಗೆ ತನ್ನ ಆತಂಕ ನಿಜವಾಗುತ್ತಿದೆಯೇನೋ ಎನಿಸಿ ಭಯವಾಗತೊಡಗಿತು. ಏನೋ ಈಸಲ ಒಂದೆರಡು ದಿನ ಹಿಂದೆ ಮುಂದೆ ಅಗಿರಬಹುದು ಎಂದು ತನಗೆ ತಾನೇ ಸಮಾಧಾನ ಪಟ್ಟುಕೊಂಡರೂ ಒಳಗೊಳಗೇ ಕಳವಳ ಹೆಚ್ಚತೊಡಗಿತು. ನಿದ್ದೆಯಿಲ್ಲದೆ ಮೂರು ನಾಲ್ಕು ರಾತ್ರಿ ಹೊರಳಾಡುತ್ತಿದ್ದಳು. ಅವಳ ರೂಮ್ ಮೇಟ್ ವಿದ್ಯಾ ಒಂದು ದಿನ "ಯಾಕೆ ತುಂಬಾ ಡಲ್ ಆಗಿದ್ದೀರಿ. ಮೈಗೆ ಸರಿಯಿಲ್ಲವೆ? ಡಾಕ್ಟರರ ಹತ್ತಿರ ಏನಾದರೂ ಹೋಗಬೇಕಾದರೆ ಹೇಳಿ. ನಮ್ಮ ನರ್ಸಿಂಗ್ ಹೋಮ್‌ನಲ್ಲೇ ನನಗೆ ಪರಿಚಯವಿರುವ ಒಳ್ಳೆ ಡಾಕ್ಟರ್‌ಗಳಿದ್ದಾರೆ. ತೋರಿಸಿಕೊಂಡು ಬರೋಣ ಎಂದಳು. ಅವಳು ಹಾಗೆ ಹೇಳಿದ ಮೇಲೆ ಹೌದು ಈಗ ವಿದ್ಯಾಳ ಹತ್ತಿರ ಯಾವುದನ್ನೂ ಮುಚ್ಚಿಡದೆ ಎಲ್ಲವನ್ನೂ ಹೇಳಿಕೊಂಡು ಅವಳ ನೆರವನ್ನು ತೆಗೆದುಕೊಳ್ಳುವುದೇ ಸರಿ ಎಂದು ನಿರ್ಧರಿಸಿ, "ನಾಳೆ ಭಾನುವಾರ ನಿಮ್ಮ ಹತ್ತಿರ ಸ್ವಲ್ಪ ಮಾತಾಡೋದಿದೆ" ಎಂದು ಹೇಳಿದಳು. ವಸುಂಧರಾ ಹಾಗೆ ಹೇಳಿದ್ದರಿಂದ ಊರಿಗೆ ಹೋಗಬೇಕೆಂದಿದ್ದ ವಿದ್ಯಾ ಮುಂದಿನ ವಾರ ಹೋದರಾಯಿತು ಎಂದು ತಿಂಡಿ ಆದ ಮೇಲೆ ವಸುಂಧರಾಳನ್ನು ಕರೆದುಕೊಂಡು ಹತ್ತಿರದ ಪಾರ್ಕಿಗೆ ಹೋದಳು. ಅಲ್ಲಿ ಹೋದಮೇಲೆ ವಸುಂಧರಾ ತನ್ನ ಮತ್ತು ಶ್ರೀನಿವಾಸನ ಪ್ರೇಮ ಪ್ರಕರಣ, ಅದರ ಅಂತ್ಯ, ಶಾಮೂ ವಿಚಾರ, ತಾನು ಶಾಮೂ ರೂಮಿಗೆ ಹೋಗಬೇಕಾಗಿ ಬಂದದ್ದು, ಮತ್ತು ಅಲ್ಲಿ ನಡೆದದ್ದು ಎಲ್ಲವನ್ನೂ ಯಾವುದನ್ನೂ ಬಿಡದೆ ಹೇಳಿಕೊಂಡು ಗಳಗಳನೆ ಅತ್ತುಬಿಟ್ಟಳು. ತನ್ನ ಅದೃಷ್ಟವೇ ಸರಿಯಿಲ್ಲ ಎಂದೆಲ್ಲ ತನ್ನನ್ನು ಹಳಿದುಕೊಂಡಳು. ಅವಳ ಮಾತು ಕೇಳಿ ವಿದ್ಯಾ "ನೀನು ಅಳಬೇಡ. ಹೆದರಲೂ ಬೇಡ. ಏನೇ ಆದರೂ ನಾನು ನಿನ್ನ ಜೊತೆ ಇದ್ದೀನಿ. ಒಂದು ವೇಳೆ ಏನಾದರೂ ಹೆಚ್ಚು ಕಡಿಮೆ ಆಗಿದ್ದರೂ ಅದನ್ನೆಲ್ಲ ಸರಿಪಡಿಸಲು ತನಗೆ ಜನ ಗೊತ್ತಿದ್ದಾರೆ. ಈ ಹೊತ್ತೇ ಮಧ್ಯಾಹ್ನ ನಮ್ಮ ನರ್ಸಿಂಗ್ ಹೋಮ್‌ಗೆ ಹೋಗೋಣ. ಅಲ್ಲಿ ನನಗೆ ತುಂಬ ಗೊತ್ತಿರುವ ಒಬ್ಬ ಒಳ್ಳೆಯ ಮತ್ತು ತಜ್ಞ ಲೇಡಿ ಡಾಕ್ಟರ್ ಇದ್ದಾರೆ. ಟೆಸ್ಟ್ ಮಾಡಿಸೋಣ. ಹೆಣ್ಣಿನ ಬಾಳು ಅಂದರೇನೇ ಕಷ್ಟ. ಈ ಗಂಡಸರು ಅವಕಾಶ ಸಿಕ್ಕಿದರೆ ಸಾಕು ಅಂತ ಕಾಯ್ತಾ ಇರ್ತಾರೆ. ಯಾರನ್ನೂ ನಂಬೋ ಹಾಗಿಲ್ಲ. ನಮ್ಮ ಎಚ್ಚರಿಕೇಲಿ ನಾವಿರಬೇಕು. ಹಾಗೆ ಎಚ್ಚರಿಕೇಲಿ ಇದ್ದರೂ ಒಂದೊಂದು ಸಲ ಅನಿರೀಕ್ಷಿತವಾಗಿ ಏನೇನೋ ಆಗಿಹೋಗುತ್ತೆ. ನಿನ್ನಂಥ ಅಮಾಯಕಳಿಗೆ ಹೀಗಾಗಬಾರದಿತ್ತು." ಎಂದೆಲ್ಲ ಹೇಳಿ "ನೀವೆಲ್ಲ ತಿಳಿದಿರುವಂತೆ ನಾನು ಗಂಡ ಇರುವ ಹೆಣ್ಣಲ್ಲ. ನಾನು ವಿಧವೆ. ಆದರೆ ನೋಡೋದಕ್ಕೆ ಸ್ವಲ್ಪ ಚೆನ್ನಾಗಿ ಕಾಣೋ

ನನ್ನ ವಯಸ್ಸಿನವಳಿಗೆ ಗಂಡ ಇಲ್ಲ ಅಂತ ಗೊತ್ತಾದರೆ ನಮ್ಮ ಅಸಹಾಯಕ ಪರಿಸ್ಥಿತಿಯ ದುರ್ಲಾಭ ಪಡೆಯಲು ಪುರುಷಾ ಮೃಗಗಳು ತುದಿಗಾಲ ಮೇಲೆ ನಿಂತಿರುತ್ತವೆ. ನಾನು ಹಿಂದೆ ಕೆಲಸ ಮಾಡುತ್ತಿದ್ದ ಒಂದು ನರ್ಸಿಂಗ್ ಹೋಮ್ ನಲ್ಲಿ ಒಬ್ಬ ಡಾಕ್ಟರ್ ನಾನು ವಿಧವೆ ಅಂತ ಗೊತ್ತಾದ ಮೇಲೆ ನನ್ನನ್ನು ಉಪಾಯವಾಗಿ ಮರುಳು ಮಾಡಿ ಬಲವಂತವಾಗಿ ನನ್ನ ಇಷ್ಟಕ್ಕೆ ವಿರುದ್ಧವಾಗಿ ನನ್ನನ್ನು ಬಳಸಿಕೊಂಡು ತನ್ನ ಕಾಮತೃಷೆ ತೀರಿಸಿಕೊಂಡ. ಆದರೆ ನನ್ನ ಅದೃಷ್ಟಕ್ಕೆ ಗರ್ಭ ಏನೂ ಕಟ್ಟಲಿಲ್ಲ. ನಾನು ಅವನ ಮೇಲೆ ಕೇಸ್ ಮಾಡಿಸಿ ಸರಿಯಾಗಿ ಶಿಕ್ಷೆ ಆಗೋ ಹಾಗೆ ಮಾಡಿದೆ. ಕೂಡಲೇ ಆ ನರ್ಸಿಂಗ್ ಹೋಂ ಬಿಟ್ಟು ಈಗ ಕೆಲಸ ಮಾಡುತ್ತಿರುವ ನರ್ಸಿಂಗ್ ಹೋಂ ಸೇರಿಕೊಂಡೆ. ಅವತ್ತಿನಿಂದ ನನ್ನ ಗಂಡ ಸತ್ತಾಗ ತೆಗೆದು ಹಾಕಿದ್ದ ತಾಳಿ ಮತ್ತು ಕಾಲುಂಗುರ ಧರಿಸಿಕೊಳ್ಳಲು ಪ್ರಾರಂಭಿಸಿದೆ. ಹೆಣ್ಣಿಗೆ ಅದೊಂದು ಬಲವಾದ ಬೇಲಿ ಇದ್ದ ಹಾಗೆ. ಗಂಡು ಗೂಳಿಗಳು ನುಗ್ಗದಿರಲು ಅದೊಂದು ತಡೆ. ನನ್ನದು ಮತ್ತು ನನ್ನ ಗಂಡನದೂ ಪ್ರೇಮವಿವಾಹವೇ. ಅವನೊಬ್ಬ ಬಿಸಿನೆಸ್‌ಮನ್. ನನ್ನನ್ನು ಪಿ.ಎ. ಆಗಿ ಕೆಲಸಕ್ಕಿಟ್ಟುಕೊಂಡಿದ್ದ. ಇಬ್ಬರಿಗೂ ಲವ್ ಆಗಿ ಮದುವೆ ಆಗಿ ಮುದ್ದಾದ ಎರಡು ಮಕ್ಕಳೂ ಆದುವು. ಆದರೆ ನನ್ನಂಥ ನೋಡೋದಕ್ಕೆ ಲಕ್ಷಣವಾಗಿರೋ ಹೆಂಡತಿ ಇದ್ದರೂ ಅತಿಯಾದ ಹೆಣ್ಮರುಳ. ಅತಿಯಾದ ರತಿಸುಖದ ಆಸೆಗೆ ಬಲಿಬಿದ್ದು ದುಡ್ಡು ಆಸ್ತಿ ಎಲ್ಲ ಹಾಳುಮಾಡಿಕೊಳ್ಳುವ ಜೊತೆಗೆ ಆರೋಗ್ಯವನ್ನೂ ಹಾಳುಮಾಡಿಕೊಂಡು ಏಡ್ಸ್ ಹತ್ತಿಸಿಕೊಂಡು ಸತ್ತ. ನನ್ನ ಗಂಡ ಕರುಣಿಸಿರುವ ಎರಡು ಮಕ್ಕಳನ್ನು ಸಾಕಿ ದೊಡ್ಡವರನ್ನು ಮಾಡುವ ಸಲುವಾಗಿ ನಾನು ಅನಿವಾರ್ಯವಾಗಿ ಕೆಲಸಕ್ಕೆ ಸೇರಿಕೊಳ್ಳಬೇಕಾಯಿತು." ಎಂದು ತನ್ನ ಕರುಣಾಜನಕ ಕಥೆ ಹೇಳಿದಳು.

ವಿದ್ಯಾ ಈ ವಿಷಯದಲ್ಲಿ ತಡಮಾಡುವುದು ಬೇಡವೆಂದು ಅಂದೇ ಸಂಜೆ ನಾಲ್ಕು ಗಂಟೆಯ ಹೊತ್ತಿಗೆ ತಾನು ಕೆಲಸ ಮಾಡುತ್ತಿದ್ದ ನರ್ಸಿಂಗ್ ಹೋಮ್‌ಗೆ ಕರೆದುಕೊಂಡು ಹೋದಳು. ತನಗೆ ಚೆನ್ನಾಗಿ ಗೊತ್ತಿದ್ದ ಲೇಡಿ ಗೈನಾಕಾಲಜಿಸ್ಟ್ ಅವರ ರೂಮಿಗೆ ಕರೆದುಕೊಂಡು ಹೋದಳು. ಡಾಕ್ಟರ್ ಅವರು, ಹೌದು ನಿಮಗೆ ಈ ಹೊತ್ತು ರಜೆ ಅಲ್ಲವೆ ಎಂದು ಕೇಳಿದರು. ತನ್ನ ಪಕ್ಕ ನಿಂತಿದ್ದ ವಸುಂಧರಾಳನ್ನು ತೋರಿಸಿ "ಇವರು ನನ್ನ ರೂಮ್ ಮೇಟ್. ಬಹಳ ಬೇಕಾದೋರು. ಇವರದ್ದೊಂದು ಪ್ರಾಬ್ಲಮ್ ಇತ್ತು. ಅದಕ್ಕೇ ಊರಿಗೆ ಹೋಗೋದು ಕ್ಯಾನ್ಸಲ್ ಮಾಡಿದೆ" ಎಂದಳು. ಅವರು ವಸುಂಧರಾಳನ್ನು ಪರೀಕ್ಷಿಸಿ ನೋಡಿ ಇವರು ಕನ್ಸೀವ್ ಆಗಿದ್ದಾರೆ ಎಂದರು. ಅದನ್ನು ಕೇಳಿ ವಸುಂಧರಾಳ ಮುಖ ಕೂಡಲೇ ಮ್ಲಾನವಾಯಿತು. ಆಮೇಲೆ ವಿದ್ಯಾ ತಾನೊಬ್ಬಳೇ ಡಾಕ್ಟರರ ಹತ್ತಿರ ವಸುಂಧರಾಗೆ ಇದು ಹೇಗೆ ಬೇಡದ ಗರ್ಭ ಎಂಬುದನ್ನು ಮನವರಿಕೆ ಮಾಡಿಕೊಟ್ಟಳು. ಅವರು "ನೀವೇನೂ ಯೋಚನೆ ಮಾಡಬೇಡಿ. ನಾನು ಇದನ್ನು ಮಾಡೋದಿಲ್ಲ. ಜಯನಗರದಲ್ಲಿ ನನಗೆ ಚೆನ್ನಾಗಿ ಗೊತ್ತಿರುವ ನನ್ನ ಸ್ನೇಹಿತೆ ಒಬ್ಬರು ಇದ್ದಾರೆ. ಅವರಿಗೆ ಬರೆದು ಕೊಡುತ್ತೇನೆ. ನೀವು ನಾಳೆಯೇ ಅವರನ್ನು ಕಾಣಿ. ನೀವು ಬೇಗಲೇ ಬಂದಿದ್ದೀರಿ. ಏನೂ ತೊಂದರೆ ಇಲ್ಲ. ಅವರೆಲ್ಲ ಸರಿಪಡಿಸುತ್ತಾರೆ" ಎಂದು ಆಶ್ವಾಸನೆ ಕೊಟ್ಟರು. ಫೀಸು ಕೊಡಲು ಹೋದಾಗ ಡಾಕ್ಟರ್ ಅವರು ತೆಗೆದುಕೊಳ್ಳಲಿಲ್ಲ. ಅವರಿಗೆ

ಥ್ಯಾಂಕ್ಸ್ ಹೇಳಿ ಪಿ.ಜಿ.ಗೆ ಹಿಂತಿರುಗಿದರು. ವಸುಂಧರಾ ನಾಳೆ ನಾನು ಕಾಲೇಜಿಗೆ ಹೋಗಲ್ಲ ಎಂದಳು. ವಿದ್ಯಾ ನರ್ಸಿಂಗ್ ಹೋಮ್‌ಗೆ ರಜೆ ಹಾಕಿ ವಸುಂಧರಾಳನ್ನು ಕರೆದುಕೊಂಡು ಜಯನಗರಕ್ಕೆ ಹೋಗಿ ನರ್ಸಿಂಗ್ ಹೋಮ್‌ನ ಡಾಕ್ಟರ್ ಕೊಟ್ಟಿದ್ದ ಲೆಟರ್ ಕೊಟ್ಟು ಡಾಕ್ಟರ್ ಅವರಿಗೆ ವಸುಂಧರಾಳನ್ನು ಪರಿಚಯಿಸಿದಳು. ಅವರು ತುಟಿಯಂಚಿನಲ್ಲಿ ನಗೆ ತಂದುಕೊಂಡು ನೀವೇನೂ ಹೆದರಬೇಡಿ. ಒಂದರ್ಧ ಗಂಟೆಯಲ್ಲಿ ಇದೆಲ್ಲ ಮುಗಿಯುತ್ತೆ. ನೀವು ಇವತ್ತು ಪೂರ್ತಿ ರೆಸ್ಟ್ ತೆಗೆದುಕೊಂಡರೆ ಸಾಕು ಎಂದರು. ವಸುಂಧರಾ ದುಃಖ, ಅವಮಾನ, ಅಸಹಾಯಕತೆಗಳಿಂದ ತನಗೆ ಬಂದ ಅಳುವನ್ನು ಕಷ್ಟಪಟ್ಟು ತಡೆದುಕೊಂಡಳು. ವಸುಂಧರಾ ಓ.ಟಿ. ಪ್ರವೇಶಿಸಿದ ಒಂದು ಗಂಟೆಯ ನಂತರ ಹೊರಬಂದಳು. ಅಲ್ಲೇ ಹತ್ತಿರದ ಹೋಟೆಲ್‌ನಲ್ಲಿ ಊಟ ಮುಗಿಸಿಕೊಂಡು ಆಟೋ ಮಾಡಿಕೊಂಡು ಪಿ.ಜಿ.ಗೆ ಹಿಂತಿರುಗಿದರು. ವಸುಂಧರಾ ಇಡೀ ದಿನ ಪೂರ್ತಿ ರೆಸ್ಟ್ ತೆಗೆದುಕೊಂಡಳು. "ನೀನು ಮಲಗೇ ಇರು" ಎಂದು ಹೇಳಿ ವಿದ್ಯಾಳೇ ಸಂಜೆಯ ಟೀ ಮತ್ತು ರಾತ್ರಿಯ ಊಟವನ್ನೂ ರೂಮಿಗೇ ತಂದುಕೊಟ್ಟಳು. "ನನ್ನ ಅಕ್ಕನ ಸ್ಥಾನದಲ್ಲಿ ನಿಂತು ನನಗೆ ಸಹಾಯ ಮಾಡುತ್ತಿದ್ದೀರಿ. ಇಲ್ಲದೆ ಹೋಗಿದ್ದರೆ ಇಂಥ ಸಂದರ್ಭದಲ್ಲಿ ನನ್ನನ್ನು ಯಾರು ತಾನೆ ಕೇಳಬೇಕೀತ್ತು. ನಿಮಗೆ ನಾನು ಜೀವನ ಪೂರ್ತಿ ಋಣಿಯಾಗಿರುತ್ತೇನೆ." ಎಂದು ಹೃದಯ ತುಂಬಿಬಂದು ಹೇಳಿದಳು.

ಅಂದು ಮಾಮೂಲಿ ಬರುತ್ತಿದ್ದುದಕ್ಕಿಂತ ಸ್ವಲ್ಪ ಬೇಗನೇ ರೂಮಿಗೆ ಹಿಂತಿರುಗಿದ ಭಾರತಿ ವಸುಂಧರಾ ಮಲಗಿದ್ದುದು ಮತ್ತು ವಿದ್ಯಾ ಅವಳ ಬಳಿ ಕುಳಿತು ಮಾತಾಡುತ್ತಿದ್ದುದು ನೋಡಿ ಆಶ್ಚರ್ಯವಾಗಿ "ಯಾಕೆ ವಸುಂಧರಾ ಏನು ಮೈಯಲ್ಲಿ ಹುಷಾರಿಲ್ಲವಾ?" ಎಂದು ಆತಂಕದಿಂದಲೇ ಹತ್ತಿರ ಬಂದು ಹಣೆಮುಟ್ಟಿ ನೋಡಿದಳು. "ಜ್ವರವೇನೂ ಇಲ್ಲ. ಹಾಗಾದರೆ ಏನು ಪ್ರೇಮಜ್ವರವಾ? ಈಗ ಅದೇ ತಾನೆ ಬರಬೇಕಾದ್ದು?" ಎಂದು ನಗೆಯಾಡಿದಳು. ವಿದ್ಯಾ "ಎಲ್ಲರೂ ನಿನ್ನ ಹಾಗೇ ಅಂತ ಅಂದುಕೊಂಡುಬಿಡಬೇಡ. ಏನೋ ಸುಸ್ತು. ಅಮ್ಮನ ಆರೈಕೇಲಿ ಬೆಳೆದಿದ್ದೋಳಿಗೆ ಈಗ ಈ ಪಿ.ಜಿಯಲ್ಲಿ ಸಿಗೋ ಊಟದಿಂದ ವೀಕ್‌ನೆಸ್ ಆಗಿರಬೇಕು" ಎಂದಳು. ಭಾರತಿ "ನಾನು ಅಷ್ಟೆಲ್ಲಾ ಸೂಕ್ಷ್ಮ ಅಲ್ಲಪ್ಪ. ಹಿಮಾಲಯಾ ಪರ್ವತದ ಮೇಲೆ ಹೋದರೂ ನಾನು ಚೆನ್ನಾಗೇ ಇರ್ತೀನಿ." ಎಂದಳು. "ಎಲ್ಲರೂ ನಿನ್ನ ಥರಾನೇ ಇರಕ್ಕಾಗುತ್ತಾ" ಎಂದು ಮಾತಿಗೆ ಫುಲ್ ಸ್ಟಾಪ್ ಹಾಡಿದಳು ವಿದ್ಯಾ. ದಿನವಿಡೀ ವಿಶ್ರಾಂತಿ ತೆಗೆದುಕೊಂಡ ಪರಿಣಾಮವಾಗಿ ವಸುಂಧರಾ ಮಾರನೇ ದಿನದ ಹೊತ್ತಿಗೆ ತನ್ನ ಎಂದಿನ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳಲು ಕಷ್ಟವೆನಿಸಲಿಲ್ಲ.

* * *

ದೇಹದ ಭಾರವನ್ನೇನೋ ವಸುಂಧರಾ ಇಳಿಸಿಕೊಂಡಳು. ಆದರೆ ಮನಸ್ಸಿಗೆ ಮತ್ತು ಹೃದಯಕ್ಕೆ ಆದ ಭಾರವನ್ನು ಇಳಿಸಿಕೊಳ್ಳುವುದು ಆಗಲೇ ಇಲ್ಲ. ಚಿಕ್ಕಂದಿನಿಂದ ತನ್ನನ್ನು ಚೆನ್ನಾಗಿ ಬಲ್ಲ, ಜೊತೆಯಲ್ಲಿ ಆಟ ಆಡಿ ಬೆಳೆದಿದ್ದ ತನ್ನ ಶಾಮೂ ಹೀಗೆ

ಮಾಡಿಯಾನೆಂದು ವಸುಂಧರಾ ಕನಸು ಮನಸಿನಲ್ಲೂ ಎಣಿಸಿರಲಿಲ್ಲ. ಶಾಮೂ ತನ್ನನ್ನು ಹೀಗೆ ಕಾಮದೃಷ್ಟಿಯಿಂದ ನೋಡಿಯಾನೆಂದು ಅವಳು ಹೇಗೆ ತಾನೆ ಯೋಚಿಸಲು ಸಾಧ್ಯ? ಶಾಮೂ ಅಮ್ಮನ ಹತ್ತಿರ ತಾವುಗಳೆಲ್ಲ ಇನ್ನೂ ಚಿಕ್ಕವರಿದ್ದಾಗ ಯಾವಾಗಲೋ "ಬೇಕಾದರೆ ವಸುಂಧರಾಳನ್ನು ನಿನ್ನ ಸೊಸೆ ಮಾಡಿಕೊಂಡುಬಿಡು. ಆಗ ಯಾವಾಗಲೂ ನಿಮ್ಮ ಮನೇಲೇ ಇರ್ತಾಳೆ" ಎಂದು ತನ್ನ ಅಮ್ಮ ಹೇಳಿದ್ದು ನಿಜ. ಆದರೆ ಮುಂದೆಂದೂ ಅಂಥ ಭಾವ ಬೆಳೆಯಲು ತಾನಾಗಲಿ ಶಾಮೂ ಆಗಲಿ ಆಸ್ಪದ ಕೊಟ್ಟಿರಲಿಲ್ಲ. ಅವನಿಗೆ ತಾನು ಅಂದರೆ ಇಷ್ಟ ಎಂದು ಸ್ವಲ್ಪ ಗೊತ್ತಿತ್ತು. ಆದರೆ ತನಗೇನೂ ಅವನ ಬಗ್ಗೆ ಆ ರೀತಿಯ ಭಾವನೆ ಇರಲಿಲ್ಲ. ಅದೂ ಈಗ ಮದುವೆ ಆಗಿ ಇನ್ನೂ ಎರಡು ವರ್ಷ ಕೂಡ ತುಂಬಿಲ್ಲ. ಹೆಂಡತಿ ಬಾಣಂತನಕ್ಕೆ ಹೋಗಿರೋ ಈ ಸಂದರ್ಭವನ್ನೇ ಬಳಸಿಕೊಂಡು ಹೀಗೆ ಮಾಡಿಬಿಟ್ಟನಲ್ಲ. ಬಹುಶಃ ತನ್ನದೂ ಸ್ವಲ್ಪ ತಪ್ಪಿರಬೇಕು. ಅವನ ಪಕ್ಕ ಕೂತುಕೊಂಡು ಅಮೃತಾಂಜನವನ್ನು ಹಣೆಗೆ ಹಚ್ಚಬಾರದಿತ್ತು. ಹೆಂಡತಿಯ ಸಂಗ ತಪ್ಪಿ ಹಲವು ದಿನ ಆಗಿದ್ದು, ತಾನು ಇಷ್ಟಪಟ್ಟ ಹುಡುಗಿಯಾದ ನಾನು ಅಷ್ಟು ಹತ್ತಿರ ಕೂತು ಹಣೆ ಮೇಲೆ ಮೃದುವಾಗಿ ಸವರುತ್ತಾ ಇದ್ದದ್ದು ಅವನಿಗೆ ಬೇರೆ ಏನೋ ತಪ್ಪು ಸಂದೇಶ ಸಿಕ್ಕಿದಂತಾಗಿ ಸಂಯಮ ಕಳೆದುಕೊಳ್ಳಲು ಕಾರಣವಾಯಿತೆ? ಹಾಗಾದರೆ ಒಂದು ಗಂಡು, ಒಂದು ಹೆಣ್ಣು ಹತ್ತಿರ ಇರಲೇ ಬಾರದೆ? ಗಂಡಸಿಗೆ ತನ್ನ ಕಾಮ ತೀರಿಸಿಕೊಳ್ಳುವುದೊಂದು ಆಗಿಬಿಟ್ಟರೆ ಬೇರೆ ಯಾವುದೂ ಲೆಕ್ಕಕ್ಕೆ ಬರೋದಿಲ್ಲವೆ? ತನ್ನಂಥ ಒಬ್ಬ ಸುಂದರ ಯುವತಿಯ ಅತಿ ಸಾಮೀಪ್ಯ ಅವನನ್ನು ಹಾದಿ ತಪ್ಪಿಸಿತಾದರೆ ತನ್ನ ಪಾತ್ರ ಏನೂ ಇರಲಿಲ್ಲವೆ? ನಾನು ಅವನಿಗೆ ಅಮೃತಾಂಜನ ತಿಕ್ಕುವಾಗಲೂ ಅವನ ಬಗ್ಗೆ ಚಿಕ್ಕಂದು ಇದ್ದಾಗಿನ ಒಂದು ಬಗೆಯ ಅಕ್ಕರೆಯ, ಬಂಧುತ್ವದ ಭಾವವಷ್ಟೇ ಇದ್ದದ್ದು. ಆದರೆ ಅನಂತರದಲ್ಲಿ ಒಂದು ಹಂತದಲ್ಲಿ ತಾನೂ ಅವನಿಗೆ ಸೋತೆನಲ್ಲವೆ? ಅವನೊಂದಿಗಿನ ಆ ಕೂಟ ತನಗೆ ಪೂರ್ತಿ ತಿರಸ್ಕಾರ ಹುಟ್ಟಿಸಬೇಕಿತ್ತಲ್ಲವೆ? ಹಾಗೇನೂ ಅನ್ನಿಸದೆ ಅವನ ಬಿಗಿತ ಬಲವಾಗುತ್ತಿದ್ದಂತೆ ತನ್ನ ದೇಹ, ಬಹುಶಃ ತನ್ನ ಮನಸ್ಸೂ ಆ ಕ್ಷಣದ ಅನುಭವಕ್ಕೆ ಸೋತಿತಲ್ಲವೆ? ನಾನೂ ಅವನಿಗೆ ಒಂದು ಹಂತದಲ್ಲಿ ಸಹಕರಿಸಿದೆನಲ್ಲವೆ? ಅದೇನೂ ಅಂಥ ಅಸಹ್ಯ ಹುಟ್ಟಿಸಲಿಲ್ಲವಲ್ಲ, ಏನಿದರ ಮರ್ಮ? ಏನಿದರ ಮರ್ಮ? ವಸುಂಧರಾಗೆ ಯೋಚಿಸಿ ಯೋಚಿಸಿ ತಲೆ ಕೆಟ್ಟುಹೋಯಿತು.

* * *

ವಸುಂಧರಾಳ ಬಿ.ಎಡ್. ಕೋರ್ಸ್ ಇನ್ನೇನು ಮುಗಿತಾಯದ ಹಂತಕ್ಕೆ ಬರುವುದರಲ್ಲಿತ್ತು. ಇನ್ನೊಂದೆರಡು ತಿಂಗಳು ಹಾಜರಿ ಹಾಕಿಬಿಟ್ಟರೆ ಆಚೆಗೆ ಪರೀಕ್ಷೆಯೊಂದು ಉಳಿದಿರುತ್ತದೆ. ಪರೀಕ್ಷೆ ಪ್ರಾರಂಭವಾಗುವ ಮೊದಲು ಹೇಗೂ ರಜೆ ಇರುವುದರಿಂದ ಒಂದು ನಾಲ್ಕು ದಿನ ಊರಿಗೂ ಹೋಗಿ ಬರಬೇಕು ಅಂದುಕೊಂಡಳು, ಈ ಮಧ್ಯೆ ಒಂದು ಭಾನುವಾರ ಮಲ್ಲೇಶ್ವರಂನ ಗಾಂಧಿ ಭವನದಲ್ಲಿ ನಡೆದ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಯಾವುದೋ ಒಂದು ವಿಚಾರ ಸಂಕಿರಣಕ್ಕೆ ಹೋಗಿದ್ದಳು.

ಅಲ್ಲಿ ಬೆಳಗಿನ ಅಧಿವೇಶನ ಮುಗಿದ ಮೇಲೆ ಊಟದ ವಿರಾಮದಲ್ಲಿ ಊಟಕ್ಕಾಗಿ ಸರತಿಯ ಸಾಲಿನಲ್ಲಿ ನಿಂತಿದ್ದಾಗ ಮಮತಾ ಮೇಡಮ್ ಕಾಣಿಸಿದರು. ಊಟ ಹಾಕಿಸಿಕೊಂಡು ಮೇಡಮ್ ಅವರನ್ನು ಮಾತಾಡಿಸಲೆಂದು ಅವರ ಹತ್ತಿರ ಹೋಗಿ "ನಮಸ್ಕಾರ ಮೇಡಮ್" ಎಂದಳು. ಮಮತಾ ತಿರುಗಿ ನೋಡಿ "ಓಹ್! ನೀನು ವಸುಂಧರಾ ಅಲ್ಲವಾ? ತುಮಕೂರು ಕಾಲೇಜಿನಲ್ಲಿ ತಾನೆ ನೀನು ಒದುತ್ತಾ ಇದ್ದದ್ದು?" ಎಂದು ಕೇಳಿದರು. "ಹೌದು ಮೇಡಮ್ ತುಮಕೂರೇ. ನಮ್ಮ ಜೊತೆ ಶ್ರವಣ ಬೆಳುಗೊಳಕ್ಕೆ ಟೂರ್‌ಗೆ ನೀವು ಬಂದಿದ್ದರಲ್ಲಾ ಮೇಡಮ್" ಎಂದು ಜ್ಞಾಪಿಸಿದಳು. ಮೇಡಮ್ – "ನಿಜ, ನಿಜ. ಅದನ್ನು ಹೇಗೆ ತಾನೆ ಮರೆಯಕ್ಕಾಗುತ್ತೆ? ಅಂದಹಾಗೆ ಈಗೇನು ಇಲ್ಲಿ? ಎಂದರು. "ಮೇಡಮ್ ನಾನು ಇಲ್ಲೇ ಸರ್ಕಾರೀ ಬಿ.ಎಡ್. ಕಾಲೇಜಿನಲ್ಲಿ ಬಿ.ಎಡ್. ಮಾಡುತ್ತಾ ಇದ್ದೀನಿ. ಇನ್ನೇನು ಇನ್ನೊಂದೆರಡು ತಿಂಗಳು ಆದರೆ ಮುಗಿದೇ ಹೋಗುತ್ತೆ ನಮ್ಮ ಕೋರ್ಸ್" ಎಂದಳು. ಇವರಿಬ್ಬರ ಸಂವಾದ ಕೇಳುತ್ತ ಪಕ್ಕದಲ್ಲಿಯೇ ನಿಂತಿದ್ದ ಒಬ್ಬರಿಗೆ ವಸುಂಧರಾಳತ್ತ ಕೈ ತೋರಿಸಿ– "ಸ್ವಾಮಿ ಇವರು ನೋಡು ವಸುಂಧರಾ ಅಂತ ತುಮಕೂರಿನಲ್ಲಿ ನನ್ನ ಸ್ಟೂಡೆಂಟು. ತುಂಬಾ ಬುದ್ಧಿವಂತ ಹುಡುಗಿ". ವಸುಂಧರಾಕೈ ಜೋಡಿಸಿ "ನಮಸ್ಕಾರಾ ಸರ್." ಎಂದಳು. ವಸುಂಧರಾಗೆ – "ಇವರು ಕೆ. ಎನ್. ಸ್ವಾಮಿ ಅಂತ ನನ್ನ ಎಂ. ಎ. ಕ್ಲಾಸ್ ಮೇಟ್ ಮತ್ತು ಈಗ ಕಲೀಗ್. ನಾವಿಬ್ಬರೂ ಒಂದೇ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೀವಿ" ಎಂದಳು, ಸ್ವಾಮಿ ಮುಗುಳ್ನಗುತ್ತ " ನಮಸ್ಕಾರಾ ರೀ" ಅಂದರು. ಆ ಮೇಲೆ ಮಮತಾ ಹ್ಯಾಂಡ್ ಬ್ಯಾಗಿನಿಂದ ತಮ್ಮ ವಿಸಿಟಿಂಗ್ ಕಾರ್ಡ್ ಕೊಟ್ಟು – "ನೋಡು ಇದರಲ್ಲಿ ನನ್ನ ಅಡ್ರೆಸ್ಸು, ಫೋನ್ ನಂಬರ್ರು ಎಲ್ಲ ಇದೆ. ನಮ್ಮ ಮನೆ ಇಲ್ಲೇ ಕುಮಾರಾ ಪಾರ್ಕ್ ಹತ್ತಿರ. ನಮ್ಮ ಮನೆ ಹುಡುಕೋದು ನಿನಗೇನೂ ಕಷ್ಟವಾಗಲ್ಲ. ಮುಂದಿನ ಭಾನುವಾರಾನೋ ಅದರ ಮುಂದಿನ ಭಾನುವಾರಾನೋ ಬೆಳಿಗ್ಗೆ ನಮ್ಮ ಮನೆಗೆ ಬಂದು ಹೋಗು. ಬರದೆ ಇರಬೇಡ. 11 ಗಂಟೆಯ ತನಕ ಮನೆಬಿಟ್ಟು ಎಲ್ಲೂ ಹೊಗಲ್ಲ. ಮನೇಲೇ ಇರ್ತೀನಿ. ನಿಧಾನವಾಗಿ ಮಾತಾಡೋಣ. ಈಗ ಈ ಸೆಷನ್ ಮುಗಿದ ಮೇಲೆ ತಿರುಗ ನಿನ್ನನ್ನು ನೋಡೋದು ಇನ್ನು ಯಾವಾಗಲೋ." ಎಂದು ಅಕ್ಕರೆಯಿಂದ ಹೇಳಿದರು. ವಸುಂಧರಾ "ಖಂಡಿತಾ ಬರ್ತಿನಿ ಮೇಡಮ್" ಎಂದು ಮುಗುಳ್ನಕ್ಕಳು.

ವಸುಂಧರಾ ವಿಚಾರ ಸಂಕಿರಣದ ಕೊನೆಯವರೆಗೂ ಇದ್ದಳು. ಮೇಡಮ್ ಕೂಡ ವಿಚಾರ ಸಂಕಿರಣ ಮುಗಿದ ಮೇಲೇ ಹೊರಟದ್ದು. ಹೋಗುವಾಗ ಅವರ ಕಲೀಗ್ ಸ್ವಾಮಿಯವರ ಸ್ಕೂಟರ್ ಹಿಂಬದಿಯ ಸೀಟಿನಲ್ಲಿ ಕುಳಿತು ಹೋದದ್ದನ್ನು ನೋಡಿದಳು.

* * *

ಮಮತಾ ಮೇಡಮ್‌ಗೆ ಹೇಳಿದ್ದಂತೆ ಅಲ್ಲಿಂದ ಎರಡನೇ ಭಾನುವಾರ ಅವರ ಮನೆ ಹುಡುಕಿಕೊಂಡು ಹೋದಳು. ವಿಸಿಟಿಂಗ್ ಕಾರ್ಡ್ ಇದ್ದದ್ದರಿಂದ ಮನೆ ಹುಡುಕುವುದೇನೂ ಕಷ್ಟವಾಗಲಿಲ್ಲ. ಇವಳು ಹೋದಾಗ ಮೇಡಮ್ ಮನೆಯ

ಮುಂದಿನ ಹೂವಿನ ಕುಂಡಗಳಿಗೆ ನೀರು ಹಾಕುತ್ತಾ ಇದ್ದರು. ಇವಳನ್ನು ನೋಡಿದ ಕೂಡಲೇ ಸಡಗರಿಸಿ ಬಾಬಾ ವಸುಂಧರಾ ಎಂದು ಒಳಕ್ಕೆ ನಡುಮನೆಗೆ ಕರೆದುಕೊಂಡು ಹೋದರು. ಮನೆ ಸಾಕಷ್ಟು ದೊಡ್ಡದಾಗಿ ಎಲ್ಲ ಅನುಕೂಲಗಳಿಂದ ಕೂಡಿದ್ದಂತೆ ಕಂಡಿತು. ಸ್ವಲ್ಪ ಹೊತ್ತಾದ ಮೇಲೆ ಸುಮಾರು 11–12 ವರ್ಷದ ಒಬ್ಬ ಹುಡುಗ ರೂಮಿನಿಂದ ಹೊರಕ್ಕೆ ಬಂದ. "ವಸೂ ಬಾ ಇಲ್ಲಿ" ಅಂತ ಅವನನ್ನು ಹತ್ತಿರ ಕರೆದು "ನೋಡು ಇವರು ವಸುಂಧರಾ ಮೇಡಮ್ ಅಂತ. ಇವರಿಗೆ ನಮಸ್ಕಾರ ಮಾಡು" ಎಂದರು. ಅವನು "ನಮಸ್ತೇ ಮೇಡಮ್" ಎಂದು ನಗುತ್ತಾ ಕೈ ಜೋಡಿಸಿದ. ಹುಡುಗ ತುಂಬಾ ಕ್ಯೂಟ್ ಅಗಿದ್ದ. "ನೋಡು ವಸುಂಧರಾ ಇವನು ವಸಂತ ಅಂತ ನನ್ನ ಏಕ ಮಾತ್ರ ಪುತ್ರ. ನನ್ನೆಲ್ಲಾ ಅಸ್ತಿಗೆ ವಾರಸುದಾರ" ಎಂದು ಜೋರಾಗಿ ನಕ್ಕರು. "ಹೋಗಮ್ಮಾ ನೀನು ಏನೇನೋ ಹೇಳ್ತೀಯಾ" ಎಂದು ನಗುತ್ತಾ ಹೊರಗೋಡಿದ. "ನೋಡು ಇವತ್ತು ಭಾನುವಾರ ಅಲ್ಲವಾ. ಈಗ ತಿಂಡಿ ಕತ್ತರಿಸಿದ್ದು ಆಯಿತು. ಫ್ರೆಂಡ್ಸ್ ಜೊತೆ ಕ್ರಿಕೆಟ್ ಆಡಕ್ಕೆ ಹೋದ. ಇನ್ನು ಬರೋದೇನಿದ್ದರೂ ಊಟದ ಹೊತ್ತಿಗೇ." ಎಂದರು. ವಸುಂಧರಾ " ಹುಡುಗರಲ್ಲವಾ ಮೇಡಮ್" ಎಂದಳು. "ನಿಜ. ಅಂದ ಹಾಗೆ ನಿನ್ನದು ತಿಂಡಿ ಆಗಿದೆಯಾ ಇಲ್ಲವಾ? ಆಗಿದ್ದರೇನಂತೆ ಇನ್ನೊಂದು ಸಲ ನಮ್ಮ ಮನೆಯಲ್ಲೂ ಸ್ವಲ್ಪ ತಿಂದರಾಯಿತು" ಎಂದು ಹೇಳಿ ಒಳಕ್ಕೆ ಹೋಗಿ ಉಪ್ಪಿಟ್ಟು ಕೇಸರಿ ಬಾತಿನ ಪ್ಲೇಟ್ ತಂದು ಮುಂದಿಟ್ಟರು. "ಮೇಡಮ್ ನಂದು ತಿಂಡಿ ಅಗಿದೆ. ಇದು ಜಾಸ್ತಿ ಆಗುತ್ತೆ ಎಂದು ವಸುಂಧರಾ ಸಂಕೋಚದಿಂದ ಹೇಳಿದರೆ– "ನನ್ನ ಮಗ ನಿನ್ನ ಕಣ್ಣಲ್ಲಿ ಹುಡುಗನಾದರೆ ನನಗೆ ನೀನು ನಿನ್ನಂಥೋರು ಹುಡುಗರು. ನಿಮಗೇನು ಕಲ್ಲು ತಿಂದು ಅರಗಿಸಿಕೊಳ್ಳೋ ವಯಸ್ಸು. ಅದೇನು ಜಾಸ್ತಿ ತಿನ್ನು. ಈಟ್ ಷೇಮ್‌ಲೆಸ್ಲೀ. ಹಾಗಂದರೆ ಏನು ಗೊತ್ತಾ? ನಾಚಿಕೆ ಪಟ್ಟುಕೊಳ್ಳದೆ ನಿಸ್ಸಂಕೋಚವಾಗಿ ತಿನ್ನು ಅಂತ" ಎಂದರು, ವಸುಂಧರಾ ಬಾಯಿತುಂಬಾ ನಕ್ಕಳು. ಒಳಗಡೆ ಇದ್ದ ಅವರ ವಯಸ್ಸಾದ ತಾಯಿ ಮತ್ತು ತಂದೆಯನ್ನು ಕರೆದು ನೋಡಿ – "ಈಕೆ ವಸುಂಧರಾ ಅಂತ. ತುಮಕೂರು ಕಾಲೇಜಿನಲ್ಲಿ ನಾನು ಇದ್ದಾಗ ಅಲ್ಲಿ ನನಗೆ ಸ್ಟೂಡೆಂಟು. ಬಹಳ ಬುದ್ಧಿವಂತೆ ಮತ್ತು ವೆರಿ ಸ್ಮಾರ್ಟ್ ಗರ್ಲ್. ಈಗ ಇಲ್ಲಿ ಬಿ. ಎಡ್. ಮಾಡ್ತಾ ಇದ್ದಾಳೆ" ಎಂದರು. ನಮ್ಮ ತಂದೆ ನಿವೃತ್ತ ತಹಶೀಲ್ದಾರ್. ತಾಯಿ ನಿವೃತ್ತ ಶಿಕ್ಷಕಿ. ನಮ್ಮಮ್ಮ ನನ್ನ ಜೊತೇನೇ ಇರ್ತಾರೆ. ನಮ್ಮ ಅಪ್ಪ ಮಾತ್ರ ಬನಶಂಕರಿಯಲ್ಲಿರೋ ನನ್ನ ತಮ್ಮನ ಮನೆಯಲ್ಲಿ ಕೆಲವು ದಿವಸ, ನಮ್ಮ ಮನೆಯಲ್ಲಿ ಕೆಲವು ದಿವಸ ಇರ್ತಾರೆ." ಎಂದರು.

ಆ ನಂತರ ಮೇಡಮ್ ಅವಳ ಬಿ.ಎಡ್. ಓದು ಹೇಗೆ ಸಾಗಿದೆ ಎಂದು ಕೇಳಿದರು. ಅವಳ ಮತ್ತು ಶ್ರೀನಿವಾಸನ ಪ್ರೇಮಪ್ರಕರಣದ ಅರಿವಿದ್ದ ಮಮತಾ ಆ ಬಗ್ಗೆ ಏನೂ ಕೇಳಲಿಲ್ಲ. "ನೀನು ಈಗ ಹೈಸ್ಕೂಲಿನಲ್ಲಿ ಟೀಚರ್ ಅಲ್ಲವಾ. ಹೇಗನ್ನಿಸುತ್ತೆ ಟೀಚಿಂಗ್ ಪ್ರೊಫೆಷನ್ನು?" ಎಂದು ಕೇಳಿದರು. ವಸುಂಧರಾ "ತುಂಬಾ ಸಂತೋಷ ಕೊಡುತ್ತೆ ಮೇಡಮ್. ಮಕ್ಕಳ ಮಧ್ಯೆ ದಿನ ಕಳೆದದ್ದೇ ಗೊತ್ತಾಗೋಲ್ಲ. ಜೊತೆಗೆ ನಾವೂ ಓದುತ್ತಾ ಇರಬೇಕಾಗುತ್ತಲ್ಲ ಅದು ನಮಗೆ ಸಂತೋಷ ಕೊಡೋದರ

ಜೊತೆಗೆ ನಮ್ಮ ತಿಳಿವಳಿಕೇನೂ ಹೆಚ್ಚು ಮಾಡುತ್ತೆ" ಎಂದಳು. "ಸರಿಯಾಗಿ ಹೇಳಿದೆ ನೋಡು. ಆ ಮೇಲೆ ಒಬ್ಬ ಒಳ್ಳೇ ಟೀಚರ್‌ಗೆ ವಿದ್ಯಾರ್ಥಿಗಳು ತುಂಬಾ ಗೌರವಿಸುತ್ತಾರೆ. ವಿದ್ಯಾರ್ಥಿಗಳೇ ಒಬ್ಬ ನಿಜವಾದ ಅಧ್ಯಾಪಕನ ಬ್ಯಾಂಕ್ ಬ್ಯಾಲೆನ್ಸ್. ಎಷ್ಟು ವರ್ಷ ಆದರೂ ನಾವು ನಮ್ಮ ಮೇಷ್ಟ್ರುಗಳನ್ನು ಮರೆಯಲ್ಲ. ನಿಜವಾಗಿ ಒಂದು ಆರೋಗ್ಯವಂತ ಸಮಾಜವನ್ನು ರೂಪಿಸುವುದರಲ್ಲಿ ಶಿಕ್ಷಕನ ಪಾತ್ರ ತುಂಬಾ ದೊಡ್ಡದು. ಅದರಲ್ಲೂ ಸಾಹಿತ್ಯದ ಅಧ್ಯಾಪಕರು ಹೆಚ್ಚಿನ ಅದೃಷ್ಟವಂತರು. ಜಗತ್ತಿನ ಶ್ರೇಷ್ಠ ಬರಹಗಾರರ, ಚಿಂತಕರ ಚಿಂತನೆಗಳ ಪರಿಚಯವಾಗುವುದರಿಂದ ಅವನ ಜೀವನದೃಷ್ಟಿ ತುಂಬಾ ವಿಶಾಲವಾಗುತ್ತಾ ಹೋಗುತ್ತೆ. ಅಂದ ಹಾಗೆ ನೀನು ಮತ್ತು ಹೇಮಾ ಯಾವಾಗಲೂ ಒಂದು ಜೋಡಿ ಅಲ್ಲವಾ. ಅವಳು ಒಂದು ವರ್ಷದ ಹಿಂದೆನೋ ಏನೋ ಇಲ್ಲೇ ಬೆಂಗಳೂರಿನಲ್ಲಿ ಸಿಕ್ಕಿದ್ದಳು. ಇಲ್ಲಿ ಯೂನಿವರ್ಸಿಟಿಯಲ್ಲಿ ಸಮಾಜ ಶಾಸ್ತ್ರದ ಎಂ. ಎ. ಏನೋ ಮಾಡ್ತಾ ಇದ್ದಳು ಅಂತ ಅನ್ನಿಸುತ್ತೆ. ನೀವಿಬ್ಬರೂ ಒಂದೇ ಸೆಕ್ಷನ್ ಅಲ್ಲವಾ? ನೀನು ಯಾಕೆ ಎಂ.ಎ. ಗೆ ಹೋಗಲಿಲ್ಲ?" ಅಂದರು. "ಇಲ್ಲ ಮೇಡಮ್ ನನಗೆ ಪರೀಕ್ಷೆ ಸಮಯದಲ್ಲಿ ಆರೋಗ್ಯ ಸರಿ ಇಲ್ಲದೆ ಪರೀಕ್ಷೆಯಲ್ಲಿ ಸರಿಯಾಗಿ ಮಾಡಕ್ಕಾಗಲಿಲ್ಲ. ಸೆಕೆಂಡ್ ಕ್ಲಾಸ್ ಬಂದುಬಿಡ್ತು ಮೇಡಮ್. ಹೀಗಾಗಿ ಎಂಎ.ಗೆ ಹೋಗಕ್ಕಾಗಲಿಲ್ಲ" ಅಂದಳು. ಮೇಡಮ್‌ಗೆ ಅದರ ಹಿನ್ನೆಲೆ ನೆನಪಾಗಿ ಛೇ ನಾನು ಈ ಪ್ರಶ್ನೆ ಕೇಳಬಾರದಿತ್ತು ಎನ್ನಿಸಿ "ಹೋಗಲಿ ಬಿಡು. ಈಗಲೂ ನೀನು ಮನಸ್ಸು ಮಾಡಿದರೆ ಕರೆಸ್ ಪಾಂಡೆನ್ಸ್ ಎಂ.ಎ. ಮಾಡಬಹುದು. ನಿನಗೇನೂ ಏಜಾಗಿಲ್ಲ. ಅಲ್ಲದೆ ನಿನ್ನಂಥ ಬುದ್ಧಿವಂತೆಗೆ ಎಂ.ಎ. ಪಾಸ್ ಮಾಡೋದೇನೂ ಕಷ್ಟವಲ್ಲ. ನೀನು ಸೋಷಿಯಾಲಜಿ, ಪೊಲಿಟಿಕಲ್ ಸೈನ್ಸ್ ಅದೆಲ್ಲ ತಗೊಳ್ಳಬೇಡ. ನೀನು ಕನ್ನಡದಲ್ಲಿ ತುಂಬಾ ಚೆನ್ನಾಗಿ ಮಾತಾಡ್ತಾ ಇದ್ದೆ, ನಿನ್ನ ಬರವಣಿಗೇನೂ ಚೆನ್ನಾಗಿತ್ತು ಅಂತ ನನಗೆ ನೆನಪಿದೆ. ನೀನು ಮೈಸೂರು ವಿಶ್ವವಿದ್ಯಾನಿಲಯದ ಕರೆಸ್ ಪಾಂಡೆನ್ಸ್ ಕೋರ್ಸಿನಲ್ಲಿ (ಅಂಚೆ ಮತ್ತು ತೆರಪಿನ ಸಂಸ್ಥೆ) ಕನ್ನಡ ಎಂ. ಎ. ಮಾಡು. ಅದಕ್ಕೆ ರೆಗ್ಯುಲರ್ ಎಂ.ಎ. ಗೆ ಇರುವಷ್ಟೇ ಬೆಲೆ ಇದೆ. ಮುಂದೆ ನೀನು ನನ್ನ ಹಾಗೇ ಕಾಲೇಜಿನಲ್ಲಿ ಮೇಡಮ್ ಆಗಬಹುದು. ನಿನಗೇನಾದರೂ ಪುಸ್ತಕ ಗಿಸ್ತಕ ಬೇಕಾದರೆ ನಾನು ಕೊಡುತ್ತೀನಿ. ನಮ್ಮ ಲೈಬ್ರರಿಯಿಂದಲೂ ತಂದುಕೊಡಬಹುದು. ಈಗಿನ್ನೇನು ನಿನ್ನ ಬಿ.ಎಡ್, ಮುಗಿಯುತ್ತೆ ಅಲ್ಲವಾ? ಮುಂದಿನ ಅಕೆಡಮಿಕ್ ಇಯರ್‌ಗೇ ಎಂ.ಎ. ಸೇರಿಕೋ. ಅಲ್ಲಿ ಕರೆಸ್ ಪಾಂಡೆನ್ಸ್ ಕೋರ್ಸಿನ ಒಬ್ಬರು ಮೇಡಮ್ ನನಗೆ ಗೊತ್ತಿದ್ದಾರೆ. ಅವರ ಅಡ್ರೆಸ್, ಫೋನ್ ನಂಬರ್ ಕೊಡುತ್ತೀನಿ. ಬೇಕಾದಾಗ ಅವರನ್ನು ಸಂಪರ್ಕಿಸು." ಎಂದು ಒಂದೇ ಸಮನೆ ಹೇಳಿಬಿಟ್ಟರು. ವಸುಂಧರಾಗೆ ಮೇಡಮ್ ಮಾತು ಕೇಳಿ ಎಲ್ಲಿಲ್ಲದ ಸಂತಸವಾಯಿತು. ಈ ಹೊತ್ತು ಇಲ್ಲಿಗೆ ಬಂದಿದ್ದು ತುಂಬಾ ಒಳ್ಳೇದಾಯ್ತು ಎಂದುಕೊಂಡಳು. "ನೀವು ಹೇಳಿದ ಹಾಗೇ ಕರೆಸ್ಪಾಂಡೆನ್ಸಿನಲ್ಲಿ ಕನ್ನಡ ಎಂ. ಎ. ಮಾಡ್ತೀನಿ ಮೇಡಮ್" ಎಂದು ಹೇಳಿ ಹೊರಡಲು ಎದ್ದಳು. ಅದೇ ಸಮಯಕ್ಕೆ ಆ ಹೊತ್ತು ನೋಡಿದ್ದ ಸ್ವಾಮಿ ಮೇಷ್ಟ್ರು ಬಂದರು. "ಏನು ಗುರು ಶಿಷ್ಯೆ ಇಬ್ಬರೂ ಸುಖಸಂಕಟಾ ವಿನೋದದಲ್ಲಿ ತೊಡಗಿಬಿಟ್ಟಿರಾ" ಎಂದು ತಮಾಶೆ

ಮಾಡಿದರು. "ನೀನೊಬ್ಬ ಕಡಮೆ ಆಗಿದ್ದೆ ನೋಡು" ಎಂದು ಮೇಡಮ್ ನಕ್ಕರು. "ಬೈದಿಬೈ ನಾವಿಬ್ಬರೂ ಕ್ಲಾಸ್ ಮೇಟ್ಸ್ ಅಲ್ಲವಾ. ಹಾಗಾಗಿ ಏಕವಚನದ ಫ್ರೆಂಡ್ಸ್" ಅಂತ ಮೇಡಮ್ ತಕ್ಷಣ ಹೇಳಿದರು. ವಸುಂಧರಾ "ನಮಸ್ಕಾರಾ ಸರ್. ನಾನು ಬಂದು ಬಹಳ ಹೊತ್ತು ಆಯಿತು ಬರ್ತೀನಿ" ಎಂದು ಇಬ್ಬರಿಗೂ ಹೇಳಿ ಅಲ್ಲಿಂದ ಹೊರಟಳು.

ಶಾಮೂ ಮನೆಗೆ ಹೋದಾಗ ನಡೆದ ಅನಿರೀಕ್ಷಿತ ಆಘಾತ ಮತ್ತು ಅನಂತರದ ಘಟನೆಗಳಿಂದ ವಸ್ತುಶಃ ಹೈರಾಣಾಗಿದ್ದ ವಸುಂಧರಾಗೆ ಮಮತಾ ಮೇಡಮ್ ಅವರನ್ನು ಮನೆಯಲ್ಲಿ ಭೇಟಿಮಾಡಿ ಬಂದದ್ದರಿಂದ ಏನೋ ಒಂದು ಹೊಸ ಚೈತನ್ಯ, ಹುರುಪು ಬಂದಂತಾಗಿತ್ತು. ಆಗಿಹೋದ ಘಟನೆಗಳನ್ನು ಬಲವಂತದಿಂದ ಬದಿಗೆ ಸರಿಸಿ ಮುಂದಿನ ಪರೀಕ್ಷೆಗೆ ಸಿದ್ಧತೆ ಮಾಡತೊಡಗಿದಳು. ರಾತ್ರಿ ಬಹು ಹೊತ್ತಿವರೆಗೆ ಅಧ್ಯಯನದಲ್ಲಿ ತೊಡಗಿರುತ್ತಿದ್ದಳು. ಹಾಗೆ ಓದುತ್ತಿದ್ದಾಗ ರೂಮಿನಲ್ಲಿದ್ದ ಇನ್ನಿಬ್ಬರಿಗೆ ನಿದ್ರೆಗೆ ತೊಡಕಾಗದಂತೆ ತನ್ನ ಟೇಬಲ್ ಲ್ಯಾಂಪ್ ಬೆಳಕು ಅವರ ಮುಖದ ಮೇಲೆ ಬೀಳದಂತೆ ಕರಿಯ ಕಾಗದದಿಂದ ಮರೆಮಾಡಿರುತ್ತಿದ್ದಳು. ಅಂದು ವಿದ್ಯಾಳಿಗೆ ಸಂಜೆಯ ಶಿಫ್ಟ್ ಇದ್ದ ಕಾರಣ ರೂಮಿನಲ್ಲಿ ಇದ್ದವರು ವಸುಂಧರಾ ಮತ್ತು ಭಾರತಿ ಮಾತ್ರ. ಬಾತ್ ರೂಮಿಗೆ ಹೋಗಲೆಂದು ಹನ್ನೆರಡು ಗಂಟೆಯ ಸುಮಾರಿಗೆ ಎದ್ದ ಭಾರತಿಯ ಗಮನ ಕುರ್ಚಿಯಲ್ಲಿ ಕೂತೇ ಕಣ್ಣು ಮುಚ್ಚಿಕೊಂಡು ಮೆಲ್ಲಗೆ ಬಿಕ್ಕುತ್ತಿದ್ದ ವಸುಂಧರಾಳ ಕಡೆಗೆ ಹೋಯಿತು. ವಸುಂಧರಾಳನ್ನು ಸಮೀಪಿಸಿ ಹಣೆ ಮತ್ತು ತಲೆಯ ಮೇಲೆ ಕೈಯಾಡಿಸುತ್ತ ತನ್ನ ಹಾಸಿಗೆಯ ಮೇಲಕ್ಕೆ ಕರೆದೊಯ್ದು ಕೂಡಿಸಿಕೊಂಡಳು. ತನ್ನ ಬೀರು ತೆರೆದು ಫ್ರೂಟಿ ಒಡೆದುಕೊಟ್ಟು ಕುಡಿಸಿದಳು. "ಏಕೆ ಚಿಂತೆ ನಾವಿಬ್ಬರೂ ಇದ್ದೀವಲ್ಲ ದುಃಖಿಸಬೇಡ, ಏನಾಯಿತು" ಎಂದು ಸಮಾಧಾನ ಹೇಳತೊಡಗಿದಳು. ಅವಳು ಸಮಾಧಾನ ಮಾಡಿದಷ್ಟೂ ವಸುಂಧರಾಳ ದುಃಖ ಒತ್ತರಿಸಿ ಬರುತ್ತಿತ್ತು. ಭಾರತಿ ಕಕ್ಕುಲತೆಯಿಂದ ಅವಳ ಬೆನ್ನ ಮೇಲೆ ಕೈಯಾಡಿಸುತ್ತ ಕುಳಿತಳು. ಸ್ವಲ್ಪ ತಹಬಂದಿಗೆ ಬಂದ ಮೇಲೆ "ಏನಾಯಿತು ಹೇಳು ನನ್ನಾಣೆ" ಎಂದಳು. ವಸುಂಧರಾ ಬೇರೆ ಯಾರಿಗೂ ಹೇಳಬೇಡವೆಂದು ಶಾಮೂನ ರೂಮಿಗೆ ಹೋದಾಗಿನಿಂದ ತೊಡಗಿ ಲೇಡಿ ಡಾಕ್ಟರರನ್ನು ಭೇಟಿ ಮಾಡಿದ್ದು ಎಲ್ಲವನ್ನು ಹೇಳಿಕೊಂಡು ಹಗುರಾದಳು. ಅದನ್ನು ಕೇಳಿದ ಮೇಲೆ ಭಾರತಿ "ನನಗೆ ಅವತ್ತೇ ಸ್ವಲ್ಪ ಅನುಮಾನ ಬಂದಿತ್ತು. ಆದರೆ ನಾನಾಗಿ ಕೆದಕಿ ಕೇಳುವುದೇಕೆ ಅಂತ ಸುಮ್ಮನಿದ್ದೆ. ಅಯ್ಯೋ ವಸುಂಧರಾ ನೀನು ತುಂಬಾ ಮುಗ್ಧೆ ಮತ್ತು ಸರಳೆ. ಈಗ ಅವನು ಯಾವನೋ ನಿನಗೆ ಮಾವನಾಗಬೇಕಾದವನು ತನ್ನ ತೀಟೆ ತೀರಿಸಿಕೊಂಡದ್ದು ಆಯಿತಲ್ಲ. ಅದರಲ್ಲಿ ನಿನ್ನ ತಪ್ಪು ಏನಿದೆ ಹೇಳು. ನಿನ್ನಂಥ ಒಳ್ಳೆಯವಳಿಗೆ ಹೀಗಾಗಬಾರದಿತ್ತೆಂದು ಒಪ್ಪುತ್ತೇನೆ. ಆದರೆ ಇದಕ್ಕೆ ಹೀಗೆ ತಲೆ ಯಾಕೆ ಕೆಡಿಸಿಕೊಳ್ತೀ. ನಿನಗೆ ಬೇಡದ ಅವನ ಆ ದರಿದ್ರ ಪಿಂಡ ಕಿತ್ತೊಗೆದದ್ದು ಆಯಿತಲ್ಲ. ಮೈಮೇಲೆ ಬಂದಿದ್ದ ಪೀಡೆ ತೊಲಗಿತು ಅಂತ ಸಂತೋಷ ಪಡು. ವಿದ್ಯಾ ಸರಿಯಾದ ಸಮಯದಲ್ಲಿ ಮಾಡಬೇಕಾದ್ದೇ ಮಾಡಿದ್ದಾರೆ. ನಿನ್ನ ಸಂಕಟ ಯಾಕೆ ಅಂತ ನನಗೆ ಅರ್ಥ ಆಯಿತು. ನಾನು ಅಪವಿತ್ರ ಆಗಿಬಿಟ್ಟಿದ್ದೀನಿ. ಪಾಪಿ ನಾನು ಅಂತ ನಿನ್ನ

ಸಂಕಟ. ನೀನು ಪವಿತ್ರರಲ್ಲಿ ಪವಿತ್ರಳು. ಪಾಪಿ ಅವನು. ಹೆಂಡತಿನ ಬಸುರು ಮಾಡಿದ್ದು ಸಾಲದು ಅಂತ ಬಿಟ್ಟಿ ಸಿಕ್ಕಿದ ನಿನ್ನ ಮೇಲೆ ತನ್ನ ಪೌರುಷ ತೋರಿಸಿದ್ದಾನೆ. ನೀನು ನ್ಯಾಯವಾಗಿ ಅವನ ಮೇಲೆ ಕೇಸು ಮಾಡಬೇಕಾಗಿತ್ತು. ಆದರೆ ಅದರಿಂದ ನಿನ್ನ ಹೆಸರೇ ಹಾಳಾಗುತ್ತೆ ಅಂತ ನನಗೆ ಗೊತ್ತು. ಜೊತೆಗೆ ಅವನು ಅತ್ಯಂತ ಹತ್ತಿರದ ನೆಂಟ ಬೇರೆ. ಕಿತ್ತು ಎಸಿ ಅವನನ್ನು ಮತ್ತು ಆ ದರಿದ್ರ ಘಟನೆಯನ್ನು ನಿನ್ನ ಮನಸ್ಸಿನಿಂದ. ಈ ಗಂಡಸರು ಇದ್ದಾರಲ್ಲ ಅವರಷ್ಟು ಸ್ವಾರ್ಥಿಗಳು ಬೇರೆ ಯಾರೂ ಇಲ್ವೇನೋ ಅನ್ನಿಸುತ್ತೆ. ಮೊದಲಿನಿಂದ ಇದನ್ನೇ ಮಾಡಿಕೊಂಡು ಬಂದಿದ್ದಾರೆ. ಯಾರನ್ನು ಬೇಕಾದರೂ ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಊಟ ಮಾಡಿದ ಮೇಲೆ ಊಟದ ಎಲೆ ಎಸೆದ ಹಾಗೆ ಎಸೆದುಬಿಡುತ್ತಾರೆ. ನನ್ನ ಕಥೆ ಕೇಳಿದರೆ ನೀನು ಏನು ಹೇಳುತ್ತೀಯೋ! ಅಮ್ಮಾ ಅಂತ ನನಗೂ ಹೆಸರಿಗೊಬ್ಬಳು ಇದ್ದಾಳೆ. ತಿಂಗಳುಗಟ್ಟಲೆ ಆದರೂ ನಾನು ಯಾಕೆ ಊರಿಗೆ ಹೋಗಲ್ಲ ಗೊತ್ತಾ? ನನಗೆ ಜನ್ಮ ಕೊಟ್ಟ ಅಪ್ಪ ಒಳ್ಳೆಯವರು. ಅಗ್ನಿ ಸಾಕ್ಷಿಯಾಗಿಯೇ ನಮ್ಮ ಅಮ್ಮನನ್ನು ಕೈ ಹಿಡಿದವರು. ಯಾವುದೋ ಬಿಸಿನೆಸ್ ಮಾಡ್ತಾ ಇದ್ದರಂತೆ. ಬಿಸಿನೆಸ್‌ನಲ್ಲಿ ತುಂಬ ಲಾಸ್ ಆಯಿತು. ಮೊದಲಿನ ಹಾಗೆ ಶ್ರೀಮಂತಿಕೆಯ ಜೀವನ ನಡೆಸಲು ಬೇಕಾದಷ್ಟು ಆದಾಯ ಗಳಿಸಲು ಅವರಿಗೆ ಸಾಧ್ಯವಾಗುತ್ತಾ ಇರಲಿಲ್ಲ. ಆದರೂ ಸಾಮಾನ್ಯ ಜೀವನಕ್ಕೇನೂ ಕೊರತೆ ಮಾಡಿರಲಿಲ್ಲ. ಆದರೆ ನಮ್ಮ ಅಮ್ಮ ಬಡತನ ಅಂದರೆ ಏನು ಅಂತ ಗೊತ್ತಿಲ್ಲದೆ ಐಶಾರಾಮಾಗಿ ಬೆಳೆದವಳು. ದಿನವೂ "ನಿನಗೆ ದುಡಿಯೋಕೆ ಯೋಗ್ಯತೆ ಇಲ್ಲ. ಇಂಥ ದರಿದ್ರ ಬಾಳು ಬಾಳಕ್ಕೆ ನನಗೆ ಆಗಲ್ಲ" ಎಂದೆಲ್ಲ ತುಂಬಾ ಹೀಯಾಳಿಸಿ ಅವಮಾನ ಮಾಡ್ತಾ ಇದ್ದಳು. ಕೊನೆಗೆ ಅಪ್ಪನನ್ನು ನನಗೆ ಡೈವರ್ಸ್ ಕೊಡಿ ಅಂತ ಒತ್ತಾಯ ಮಾಡತೊಡಗಿದಳು. ಅಪ್ಪನಿಗೆ ರೋಸಿಹೋಗಿ ಪರಸ್ಪರ ಒಪ್ಪಿಗೆಯ ಮೇರೆಗೆ ಮನಸ್ಸಿಲ್ಲದ ಮನಸ್ಸಿನಿಂದ ವಿಚ್ಛೇದನ ಕೊಡಲು ಸಿದ್ಧವಾದರು. ನಾನು ಆಗ ಏಳೋ ಎಂಟೋ ವರ್ಷದವಳು. ನನ್ನನ್ನು ತುಂಬಾ ಪ್ರೀತಿಸುತ್ತಿದ್ದರು. ಡೈವರ್ಸ್ ಕೊಟ್ಟ ಮೇಲೆ ಅಪ್ಪ ಬೇಜಾರಾಗಿ ಆ ಊರನ್ನೇ ಬಿಟ್ಟು ಹೋಗಿಬಿಟ್ಟರು. ಅಮ್ಮ ಒಂದು ಖಾಸಗಿ ಕಂಪನಿಯ ಬಾಸ್‌ನ ಪಿ.ಎ. ಆಗಿ ಸೇರಿಕೊಂಡಳು. ಒಳ್ಳೆ ಸಂಬಳ ಬರುತ್ತಿತ್ತು. ಜೊತೆಗೆ ಬಾಸ್‌ನ ಸಾಮೀಪ್ಯದಿಂದ ಅವನ ಪ್ರಿಯಕರಿಯಾದಳು. ಒಂದು ರೀತಿಯಲ್ಲಿ ಲಿವಿಂಗ್ ಇನ್ ರಿಲೇಷನ್‌ಷಿಪ್. ಅವನಿಂದ ಅವಳಿಗೆ ಒಬ್ಬ ಮಗನೂ ಹುಟ್ಟಿದ. ಮದುವೆ ಮಾಡಿಕೊಳ್ಳಲು ಒತ್ತಾಯಿಸಿದಳು. ಆದರೆ ಅವನಿಗೆ ಮದುವೆಯಾದ ಹೆಂಡತಿ ಇದ್ದಳು. ಹೀಗಾಗಿ ಅದು ಸಾಧ್ಯವಾಗದೆ ಈಗಲೂ ಅದೇ ರಿಲೇಷನ್ಷಿಪ್ ಮುಂದುವರಿದಿದೆ. ನಾನು ದೊಡ್ಡವಳಾದಮೇಲೆ ಒಂದು ಸಲ ಅವನ ಕಣ್ಣು ನನ್ನತ್ತಲೂ ತಿರುಗಿತು. ಆದರೆ ಅಕಸ್ಮಾತ್ ಅವತ್ತು ಅಮ್ಮ ಬಂದುಬಿಟ್ಟಿದ್ದರಿಂದ ಅದು ತಪ್ಪಿತು. ಅವತ್ತಿನಿಂದ ಅಮ್ಮ ನಾನು ಮತ್ತು ನಮ್ಮ ಅಮ್ಮನ ಪ್ರಿಯಕರನಿಂದ ಹುಟ್ಟಿದ ಮಗ ಮೂವರೂ ಬೇರೆ ಮನೆಯಲ್ಲಿ ಇರತೊಡಗಿದೆವು. ತನ್ನ ಪ್ರಿಯಕರನಿಗೆ ನನ್ನ ಮನೆಗೆ ಮಾತ್ರ ಬರಕೂಡದು ಅಂತ ನಿಷೇಧ ಹಾಕಿದಳು. ಆದರೆ ಅವರಿಬ್ಬರ ಸಂಬಂಧ ಮಾತ್ರ ಈಗಲೂ ಮುಂದುವರಿದಿದೆ. ನಾನು ಬಿ.ಕಾಮ್ ಮತ್ತು ಕಂಪ್ಯೂಟರ್ ಕೋರ್ಸ್‌ಗಳನ್ನು

ಮಾಡಿದ್ದರಿಂದ ದೇವರ ದಯದಿಂದ ನನಗೆ ಕೆಲಸ ಸಿಕ್ಕಿದ ಮೇಲೆ ಬೆಂಗಳೂರಿಗೆ ಬಂದುಬಿಟ್ಟೆ. ಇಂಥ ಹಿನ್ನೆಲೆಯಿಂದ ಬಂದ ನನಗೆ ವೈವಾಹಿಕ ಸಂಬಂಧದಲ್ಲೇ ನಂಬಿಕೆ ಹೋಗಿಬಿಟ್ಟಿದೆ. ಈಗ ನನ್ನ ವಯಸ್ಸು 23. ಅಮ್ಮನಿಗೆ ಮದುವೆ ಮಾಡುವ ಯೋಚನೇನೂ ಇಲ್ಲ. ಅದು ನನಗೂ ಗೊತ್ತಾಗಿದೆ. ಗಂಡಸರ ಜೊತೆ ಕ್ಲೋಸ್ ಆಗಿ ಕೆಲಸ ಮಾಡಬೇಕಾದ ಸಂದರ್ಭ ಇರುತ್ತೆ. ಮನಸ್ಸು ಚಂಚಲವಾದಾಗ, ಹಾಗೆ ಬೇಕು ಅಂತ ಅನ್ನಿಸಿದಾಗ ತುಂಬ ಎಚ್ಚರಿಕೆ ತೆಗೆದುಕೊಂಡು ಕಾಂಟ್ರಾ ಸೆಪ್ಟೀವ್ ಬಳಸಿಯೇ ಬಯಕೆ ತೀರಿಸಿಕೊಳ್ತೀನಿ. ಒಂದು ಸಲ ಮಾತ್ರ ಎಚ್ಚರ ತಪ್ಪಿದ್ದರಿಂದ ಈಗ ನಿನಗೆ ಅದ ಹಾಗೇ ಆಗಿಬಿಟ್ಟಿತ್ತು. ಅದನ್ನು ಕೂಡಲೇ ಇಳಿಸಿಕೊಂಡೆ. ಈಗ ತುಂಬಾ ಕೇರ್‌ಫುಲ್ ಆಗಿರ್ತೀನಿ. ಸೆಕ್ಸ್ ಗಂಡು ಹೆಣ್ಣು ಇಬ್ಬರಿಗೂ ಅಗತ್ಯ. ಆದರೆ ಅದು ಒಂದು ಆಬ್ಸೆಷನ್ ಆಗದ ಹಾಗೆ ಸಾಮಾಜಿಕ ಮರ್ಯಾದೆ ಕೆಡಿಸಿಕೊಳ್ಳದ ಹಾಗೆ ಇದ್ದರೆ ಅಯಿತು ಅಂತ ಸದ್ಯಕ್ಕೆ ನನ್ನ ಪ್ರಿನ್ಸಿಪಲ್." ಎಂದು ಹೇಳಿ ಸುಮ್ಮನಾದಳು. ವಸುಂಧರಾ – "ನಿನ್ನ ಕಥೆ ಕೇಳಿ ನನಗೆ ನಿಜಕ್ಕೂ ತುಂಬಾ ಬೇಜಾರಾಗಿದೆ. ನನ್ನ ಪರಿಸ್ಥಿತಿಗಿಂತ ನಿನ್ನ ಪರಿಸ್ಥಿತಿ ದಾರುಣವಾದ್ದು. ಆದರೆ ನೀನು ಹೇಳಿದೆಯಲ್ಲ ವೈವಾಹಿಕ ಜೀವನದಲ್ಲಿ ನಂಬಿಕೆ ಕಳೆದುಕೊಂಡಿದ್ದೀನಿ, ಬೇಕು ಅಂತ ಅನ್ನಿಸಿದಾಗ ಹುಶಾರಾಗಿ ಆಸೆ ತೀರಿಸಿಕೊಳ್ತೀನಿ ಅನ್ನುವುದು ಆರೋಗ್ಯಕರವಾದ ಪ್ರಿನ್ಸಿಪಲ್ ಅಲ್ಲ. ಅದನ್ನು ನೀನು ಮನಸ್ಸಿನಿಂದ ಕಿತ್ತು ಒಗಿ. ಅದು ಯಾವತ್ತು ಬೇಕಾದರೂ ಸ್ವೇಚ್ಛಾಚಾರಕ್ಕೆ ತಿರುಗಿಬಿಡಬಹುದು. ಒಂದು ಸಲ ನೀತಿಯ ವಿಷಯದಲ್ಲಿ ಸಡಿಲಬಿಟ್ಟರೆ ಅದೇ ರೂಢಿಯಾಗಿಬಿಡಬಹುದು. ನೀನು ವಿದ್ಯಾವಂತೆ. ಬುದ್ಧಿವಂತೆ. ಕೈನಲ್ಲಿ ಕೆಲಸ ಇದೆ. ನೋಡಕ್ಕೆ ಚೆನ್ನಾಗಿದ್ದೀಯ. ಒಬ್ಬ ಒಳ್ಳೆಯ ಹುಡುಗನನ್ನು ಪ್ರೀತಿಸಿ ಮದುವೆಯಾಗು. ನನ್ನಿಂದ ನಿನಗೂ ನಿದ್ದೆ ಹೋಯಿತು. ಮಲಗು. ನನಗೂ ಬೆಳಿಗ್ಗೆ ಬೇಕಾದಷ್ಟು ಕೆಲಸಗಳಿವೆ. ನಾನೂ ಮಲಗುತ್ತೀನಿ" ಎಂದು ದೀಪ ಆರಿಸಿದಳು.

ಮುಂದಿನ ಕೆಲವು ದಿನ ವಸುಂಧರಾ ಪರೀಕ್ಷೆಗಾಗಿ ಕಣ್ಣಿಗೆ ಎಣ್ಣೆ ಹೊಯ್ದುಕೊಂಡು ಓದಿದಳು. ಅಷ್ಟೆಲ್ಲಾ ಶ್ರಮಪಟ್ಟಿದ್ದಕ್ಕೆ ತಕ್ಕಂತೆ ಪರೀಕ್ಷೆಯಲ್ಲಿ ಚೆನ್ನಾಗಿಯೇ ಮಾಡಿದಳು. ಕೊನೆಯ ಪೇಪರ್ ಮುಗಿದ ದಿನ ಸದ್ಯ ಮುಗೀತಪ್ಪ ಎಂದು ನಿರಾಳವಾದಳು. ಆಮೇಲೆ ಎರಡು ದಿನ ಎಲ್ಲೂ ಹೋಗದೆ ರೂಮಿನಲ್ಲಿ ವಿಶ್ರಾಂತಿ ತೆಗೆದುಕೊಂಡಳು. ಮೂರನೇ ದಿನ ಭಾರತಿ ಕೆಲಸದಿಂದ ಬೇಗನೆ ಬಂದು ವಸುಂಧರಾಳನ್ನು ಒತ್ತಾಯಮಾಡಿ ಮ್ಯಾಟ್ನಿ ಸಿನಿಮಾಗೆ ಕರೆದುಕೊಂಡು ಹೋದಳು. ಬರುತ್ತಾ ಅವಳಿಗೆ ಹೋಟೆಲ್‌ನಲ್ಲಿ ಸ್ವೀಟ್ ಕೊಡಿಸಿ ಜೊತೆಗೆ ವಿದ್ಯಾಳಿಗೆ ಸ್ವೀಟ್ ಪಾರ್ಸೆಲ್ ಮಾಡಿಸಿಕೊಂಡು ಬಂದಳು. ಆ ವಾರದ ಕೊನೆಯಲ್ಲಿ ಭಾನುವಾರ ತಾನು ಊರಿಗೆ ಹೋಗುತ್ತೇನೆಂದು ಹೇಳಿ ಅದಕ್ಕೆ ಮುಂಚೆಯೇ ತನ್ನ ಕೆಲವು ಸಾಮಾನುಗಳನ್ನು ಟ್ರಾನ್ಸ್ ಪೋರ್ಟ್‌ಗೆ ಬುಕ್ ಮಾಡಿಸಿದಳು. ಅದಕ್ಕೂ ಭಾರತಿ ಜೊತೆಗೆ ಬಂದಿದ್ದಳು.

ಭಾನುವಾರ ಮೂರೂ ಜನ ಪಿ.ಜಿ. ಯಲ್ಲೇ ಜೊತೆಯಲ್ಲಿ ಊಟ ಮಾಡಿದರು. ಆ ಮೇಲೆ ವಿದ್ಯಾ ಮತ್ತು ಭಾರತಿ ಇಬ್ಬರೂ ಮಾತಾಡಿಕೊಂಡು ಮುಂಚೆಯೇ ತಂದಿಟ್ಟಿದ್ದ

ಸಂತ ಮೀರಾಳ ಅಮೃತ ಶಿಲೆಯ ವಿಗ್ರಹ ಮತ್ತು ಒಂದು ಬೆಲೆ ಬಾಳುವ ಪೆನ್ ನೀಡಿ ಇದು ನಮ್ಮಿಬ್ಬರ ನೆನಪಾಗಿ ನಿನ್ನ ಬಳಿ ಇರಲಿ ಎಂದು ಹೇಳಿದರು. ವಸುಂಧರಾಗೆ ಅವರ ಪ್ರೀತಿ ನೋಡಿ ಕಣ್ಣಲ್ಲಿ ನೀರುಬಂತು. ವಿದ್ಯಾ "ವಸುಂಧರಾ ಸಂತೋಷಕ್ಕಾಗಲಿ ದುಃಖಕ್ಕಾಗಲಿ ನಿನ್ನ ಕಣ್ಣಿಂದ ಯಾವತ್ತೂ ನೀರು ಬರಬಾರದು. ನೀನು ಸದಾ ನಗುತ್ತಿದ್ದರೆ ನೋಡಲು ತುಂಬ ಚೆನ್ನಾಗಿ ಕಾಣುತ್ತೀ. ಪ್ರಪಂಚವನ್ನು ಧೈರ್ಯದಿಂದ ಎದುರಿಸು. ನಿರಾಶೆಗೆ ಎಡೆಕೊಡಬೇಡ" ಎಂದು ಹಾರೈಸಿದಳು. ಇಬ್ಬರೂ ಮಲ್ಲೇಶ್ವರಮ್ ಸ್ಟೇಷನ್‌ನಿಂದಲೇ ಟ್ರೈನು ಹತ್ತಿಸಿದರು.

* * *

ವಸುಂಧರಾ ಊರಿಗೆ ಹೋದ ಒಂದು ವಾರಕ್ಕೆ ನಾಲ್ಕು ಗಂಟೆ ಹೊತ್ತಿಗೆ ಇದ್ದಕ್ಕಿಂದ್ದಂತೆ ಹೇಮಾ ಮನೆ ಬಾಗಿಲಲ್ಲಿ ಪ್ರತ್ಯಕ್ಷವಾದಳು. ಅವಳನ್ನು ನೋಡಿ ವಸುಂಧರಾಳಿಗಾದ ಸಂತೋಷ ಅಷ್ಟಿಷ್ಟಲ್ಲ. ಗೆಳತಿಯನ್ನು ಭೇಟಿಮಾಡಿ ಹತ್ತಿರ ಹತ್ತಿರ ಒಂದು ವರ್ಷವೇ ಆಗಿಹೋಗಿತ್ತು. ವಸುಂಧರಾಳ ತಾಯಿ ಸಾವಿತ್ರಮ್ಮನವರಿಗೂ ಹೇಮಾಳನ್ನು ನೋಡಿ ಸಂತೋಷವಾಯಿತು. ಆದರೆ ಇಲ್ಲಿದ್ದಾಗ ಮೈ ಕೈ ತುಂಬಿಕೊಂಡಿದ್ದ ಹೇಮಾ ಹೀಗೇಕೆ ಬಡಕಲಾಗಿದ್ದಾಳೆ ಎನಿಸಿ ಬೇಸರವಾಯಿತು. ಕೇಳಿಯೂ ಬಿಟ್ಟರು– "ಯಾಕೆ ಹೇಮಾ ನೀನು ಇಷ್ಟೊಂದು ಇಳಿದುಹೋಗಿದ್ದೀ. ಏನು ಚಿಂತೆ? ಅತ್ತೆಮನೆಯಲ್ಲಿ ಕಷ್ಟವಾಗುತ್ತಾ ಇದೆಯಾ? ಗಂಡ ಚೆನ್ನಾಗಿ ನೋಡಿಕೊಳ್ತಾ ಇದ್ದಾರೆ ತಾನೆ? ದಾವಣಗೆರೆ ಹವೆ ಸರಿಹೋಗಲಿಲ್ಲವಾ?" ಎಂದು ಒಂದೇ ಸಮನೆ ಪ್ರಶ್ನೆಗಳ ಮೇಲೆ ಪ್ರಶ್ನೆ ಹಾಕತೊಡಗಿದರು. "ಅಯ್ಯೋ ಅವಳಿನ್ನೂ ಈಗ ಒಳಕ್ಕೆ ಬರುತ್ತಾ ಇದ್ದಾಳೆ. ಏನು ನಿನ್ನ ಪ್ರಶ್ನಮಾಲಿಕೆ?" ಎಂದು ತಡೆಹಾಕಿ ಒಳಕ್ಕೆ ಕರೆದೊಯ್ದಳು. "ಇದೇನು ಇದ್ದಕ್ಕಿದ್ದ ಹಾಗೇ ದರ್ಶನ ಕೊಟ್ಟುಬಿಟ್ಟೆ" ಎಂದಳು. "ಹೌದು ನಿಮ್ಮನ್ನೆಲ್ಲ ನೋಡಿ ತುಂಬ ದಿವಸ ಆಗಿತ್ತಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ನಿನ್ನನ್ನು ನೋಡಬೇಕು ಅಂತ ತುಂಬ ಅನ್ನಿಸುತ್ತಿತ್ತು. ಹೇಗೂ ರಜೆ ಇತ್ತಲ್ಲ. ಯಜಮಾನರ ಪರ್ಮಿಷನ್ ತಗೊಂಡು ಬಂದುಬಿಟ್ಟೆ" ಎಂದಳು. ಕಾಫಿ ಕುಡಿಯುತ್ತ ಗೆಳತಿಯರಿಬ್ಬರೂ ಮಾತಿಗೆ ತೊಡಗಿಕೊಂಡು ಪರಸ್ಪರರ ವಿಚಾರಗಳನ್ನು ವಿನಿಮಯ ಮಾಡಿಕೊಂಡರು. ಶಾಮೂ ವಿಚಾರವೊಂದನ್ನು ಬಿಟ್ಟು ಪಿ.ಜಿ.ಯಲ್ಲಿನ ತನ್ನ ರೂಮ್ ಮೇಟ್ಸ್ ವಿಚಾರ, ಮಮತಾ ಮೇಡಮ್ ಸಿಕ್ಕಿದ್ದ ವಿಚಾರ, ತಾನು ಅವರ ಮನೆಗೆ ಹೋಗಿದ್ದು, ತನಗೆ ಕರೆಸ್ಪಾಂಡೆನ್ಸ್ ಕೋರ್ಸ್‌ನಲ್ಲಿ ಎಂ.ಎ. ಮಾಡಲು ಹೇಳಿದ್ದು ಎಲ್ಲ ಹೇಳಿಮುಗಿಸಿದಳು. ಆಮೇಲೆ ಹೇಮಾ ತನ್ನ ಅತ್ತೆಯ ಮನೆಯ ಸಂಗತಿಗಳು, ಅತ್ತೆ ಮತ್ತು ನಾದಿನಿಯ ಅಸಹಕಾರ, ಗಂಡನ ಜುಗ್ಗತನ, ಸ್ವಾರ್ಥ, ತನ್ನ ಬಗೆಗೆ ತೋರುವ ನಿಷ್ಕಾಳಜಿ, ವ್ಯಾವಹಾರಿಕ ಬುದ್ಧಿ, ಎಲ್ಲ ಹೇಳಿಕೊಂಡು ಮುಖ ಸಪ್ಪಗೆ ಮಾಡಿಕೊಂಡಳು. "ನಾನು ವೈವಾಹಿಕ ಜೀವನದ ಬಗ್ಗೆ ಏನೆಲ್ಲ ಕನಸುಗಳನ್ನು ಕಂಡಿದ್ದೆ. ಆದರೆ ಅವೆಲ್ಲ ನನ್ನ ಪಾಲಿಗೆ ಕೇವಲ ಹಗಲುಗನಸುಗಳಷ್ಟೇ ಆದುವು. ಬಹುಶಃ ಕನಸುಗಳನ್ನು ಕಾಣೋದೇ ತಪ್ಪೇನೋ ಅನ್ನಿಸಿಬಿಟ್ಟಿದೆ." ಎಂದು ನಿಡುಸುಯ್ದಳು.

ವಸುಂಧರಾ – "ಈಗಲೇ ಅಷ್ಟೊಂದು ನಿರಾಶಳಾದರೆ ಹೇಗೆ? ಸರಿಹೋಗಬಹುದು. ನಿನ್ನ ಜೊತೆ ಹೊಂದಿಕೊಳ್ಳಲು ಅವರುಗಳಿಗೂ ಇನ್ನು ಸ್ವಲ್ಪ ಕಾಲ ಬೇಕಾಗಬಹುದು. ತಾಳ್ಮೆಯಿಂದಿರು" ಎಂದು ಗೆಳತಿಯನ್ನು ಸಮಾಧಾನಪಡಿಸಲು ಯತ್ನಿಸಿದಳು. ಹೇಮಾ "ನಾನು ಕಾಯಲು ಸಿದ್ಧ. ಆದರೆ ಪರಿಸ್ಥಿತಿ ಸುಧಾರಿಸುತ್ತೆ ಅಂತ ನನಗನ್ನಿಸಲ್ಲ." ಎಂದು ನಿರಾಶೆ ವ್ಯಕ್ತಪಡಿಸಿದಳು. ಹೊರಡುವ ಮುನ್ನ "ಮಮತಾ ಮೇಡಮ್ ಹೇಳಿದ ಹಾಗೆ ನೀನು ಕರೆಸ್ಪಾಂಡೆನ್ಸ್ ನಲ್ಲಿ ಎಂ.ಎ. ಮಾಡು. ಪೇಪರ್‌ನಲ್ಲಿ ಜಾಹೀರಾತು ಬರುತ್ತೆ. ನೋಡಿಕೊಂಡು ಸೇರಿಕೋ ಎಂದು ಹೇಳಿದಳು. ವಸುಂಧರಾ ತಲೆ ಆಡಿಸಿದಳು.

ಪರೀಕ್ಷೆ ಮುಗಿದ ಒಂದೂವರೆ ತಿಂಗಳಿಗೆ ವಸುಂಧರಾಳ ರಿಸಲ್ಟ್ ಬಂತು. ಅವಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಳು. ಅವಳ ಫಲಿತಾಂಶದಿಂದ ಮನೆಯಲ್ಲಿ ಎಲ್ಲರಿಗೂ ಅತೀವ ಸಂತೋಷವಾಯಿತು. ಆದರೆ ಸ್ವತಃ ವಸುಂಧರಾ ಪ್ರಥಮ ದರ್ಜೆ ನಿರೀಕ್ಷಿಸಿರಲಿಲ್ಲ. ಶಾಲೆ ಪುನರಾರಂಭವಾಗಲು ಇನ್ನೂ ಒಂದು ವಾರವಿತ್ತು. ಶಾಲೆ ಪ್ರಾರಂಭವಾಗುವ ಮುನ್ನ ಒಮ್ಮೆ ಬೆಂಗಳೂರಿಗೆ ಹೋಗಿ ಬಿ.ಎಡ್. ಕಾಲೇಜಿನ ಅಧ್ಯಾಪಕರು ಮತ್ತು ತನ್ನ ಪಿ.ಜಿ.ಯ ಗೆಳತಿಯರನ್ನು ನೋಡಿಬರಲೆಂದು ಶನಿವಾರ ಬೆಳಿಗ್ಗೆಯೇ ಹೋದಳು. ಹೋಗುವ ಮುನ್ನ ಪಿ.ಜಿ.ಯ. ಆಫೀಸಿಗೆ ಕಾಯಿನ್ ಬಾಕ್ಸ್‌ನಿಂದ ಪೋನ್ ಮಾಡಿ ನಾಳೆ ತಾನು ಸಂಜೆ ಬರುತ್ತಿರುವ ವಿಚಾರವನ್ನು ವಿದ್ಯಾ ಮತ್ತು ಭಾರತಿ ಇಬ್ಬರಿಗೂ ತಿಳಿಸಬೇಕೆಂದು ವಿನಂತಿಸಿದಳು.

ಮಲ್ಲೇಶ್ವರಮ್‌ನಲ್ಲೇ ಟ್ರೈನ್ ಇಳಿದು ನೇರವಾಗಿ ಕಾಲೇಜಿಗೆ ಹೋದಳು. ಇವಳನ್ನು ನೋಡಿ ಪ್ರಿನ್ಸಿಪಾಲರು ತುಂಬಾ ಸಂತಸಪಟ್ಟು ಹಾರ್ದಿಕವಾಗಿ ಅಭಿನಂದಿಸಿದರು. "ಸಾಮಾನ್ಯವಾಗಿ ಬಿ.ಎಡ್‌ಗೆ ನಿಯೋಜಿತರಾಗಿ ಬಂದ ಅಧ್ಯಾಪಕರು ತಮ್ಮದು ಹೇಗೂ ಪಾಸಾಗುತ್ತದೆಂಬ ಧೋರಣೆಯಿಂದ ಪರೀಕ್ಷೆಗೆ ಗಂಭೀರವಾಗಿ ಸಿದ್ಧತೆ ನಡೆಸದೆ ಇರುವುದೇ ಹೆಚ್ಚು. ಅಂಥದರಲ್ಲಿ ನೀವು ಬಹಳ ಪರಿಶ್ರಮ ಪಟ್ಟು ಫಸ್ಟ್ ಕ್ಲಾಸ್ ಗಳಿಸಿರುವುದು ನಮ್ಮೆಲ್ಲರಿಗೂ ತುಂಬಾ ಹೆಮ್ಮೆ ಎನಿಸಿದೆ" ಎಂದರು. ಇತರೆ ಅಧ್ಯಾಪಕರೂ– "ನೀವು ಫಸ್ಟ್ ಕ್ಲಾಸ್ ಬರುತ್ತೀರೆಂದು ನಮಗೆಲ್ಲಾ ನಿರೀಕ್ಷೆ ಇತ್ತು. ನಮ್ಮ ನಿರೀಕ್ಷೆಯನ್ನು ನೀವು ನಿಜ ಮಾಡಿದ್ದೀರಿ ಎಂದು ಸಂತಸ ವ್ಯಕ್ತಪಡಿಸಿದರು. ಮುಂದೆ ಬೇಕಾದರೆ ಎಕ್ಸ್‌ಟರ್ನಲ್ ಆಗಿ ಎಂ.ಎಡ್. ಮಾಡಬಹುದೆಂದು ಹೇಳಿದರು. ವಸುಂಧರಾ – "ನನಗೆ ಕರೆಸ್ಪಾಂಡೆನ್ಸ್‌ನಲ್ಲಿ ಕನ್ನಡ ಎಂ.ಎ. ಮಾಡುವ ಆಸೆ ಇದೆ" ಎಂದು ಹೇಳಿದಳು. "ಅದೂ ಒಳ್ಳೆಯದೇ. ನೀವೇನು ಅದರಲ್ಲೂ ಫಸ್ಟ್ ಕ್ಲಾಸ್ ಗ್ಯಾರಂಟಿ ಬರ್ತೀರಿ ಬಿಡಿ" ಎಂದು ನಕ್ಕರು. ಅವರೆಲ್ಲ "ನೀವು ನಮ್ಮ ಅತಿಥಿ. ನಮ್ಮ ಜೊತೆ ಊಟಮಾಡಿ" ಎಂದು ಹತ್ತಿರದ ಹೋಟೆಲ್‌ಗೆ ಊಟಕ್ಕೆ ಕರೆದೊಯ್ದರು. ಅವರೆಲ್ಲರಿಂದ ಬೀಳ್ಕೊಂಡು ಸಾಯಂಕಾಲದ ಹೊತ್ತಿಗೆ ಪಿ.ಜಿ.ಗೆ ಹೋದಳು.

ವಸುಂಧರಾ ಫಸ್ಟ್ ಕ್ಲಾಸ್ ಬಂದದ್ದಕ್ಕೆ ಸ್ವೀಟ್ ಕಟ್ಟಿಸಿಕೊಂಡು ಹೋಗಿದ್ದಳು. ಪಿ.ಜಿ.ಯಲ್ಲಿ ತನಗೆ ಪರಿಚಯವಿದ್ದ ಮ್ಯಾನೇಜರ್, ಕೆಲವು ನೌಕರರು ಮತ್ತು ಅಡಿಗೆ

ಸಿಬ್ಬಂದಿಯವರಿಗೂ ಸ್ವೀಟ್ ನೀಡಿದಳು. ಆಮೇಲೆ ತನಗಾಗಿಯೇ ಕಾಯುತ್ತ ಕುಳಿತಿದ್ದ ಗೆಳತಿಯರನ್ನು ಭೇಟಿ ಮಾಡಿ ತನ್ನ ಸಂತಸವನ್ನು ಹಂಚಿಕೊಂಡಳು. ಅವಳು ಬಿಟ್ಟುಹೋಗಿದ್ದ ಜಾಗಕ್ಕೆ ಇನ್ನೂ ಯಾರೂ ಬಂದಿಲ್ಲದೆ ಇದ್ದುದರಿಂದ ಅಲ್ಲಿ ಉಳಿದುಕೊಳ್ಳಲು ಅನುಕೂಲವೇ ಆಯಿತು. ಒಂದು ವೇಳೆ ಯಾರಾದರೂ ಬಂದಿದ್ದರೂ ಒಂದು ರಾತ್ರಿ ಉಳಿದುಕೊಳ್ಳಲು ಅನುಮತಿ ಇದ್ದೇ ಇತ್ತು. ಮೂರೂ ಜನ ತಮ್ಮ ಮಾತಿನ ಬರವನ್ನು ತೀರಿಸಿಕೊಂಡರು. ವಸುಂಧರಾ ಫಸ್ಟ್ ಕ್ಲಾಸ್ ಬಂದಿರುವುದು ತಿಳಿದ ಮೇಲಂತೂ ಅವರಿಬ್ಬರ ಸಂತೋಷಕ್ಕೆ ಮೇರೆಯೇ ಇರಲಿಲ್ಲ. ನಾಳೆ ಭಾನುವಾರವಾದ್ದರಿಂದ ಫಸ್ಟ್ ಕ್ಲಾಸ್ ಬಂದದ್ದಕ್ಕೆ ಹೊರಗೆ ಎಲ್ಲಾದರೂ ಒಳ್ಳೆಯ ಹೋಟೆಲ್‌ನಲ್ಲಿ ಊಟ ಕೊಡಿಸುವುದಾಗಿ ಹೇಳಿದಳು. ರಾತ್ರಿಯ ಮಾತು-ಕತೆಯಲ್ಲಿ ಭಾರತಿ ಹೇಳಿದ ವಿಷಯವೆಂದರೆ ಬರುವ ಶ್ರಾವಣದಲ್ಲಿ ತಾನು ಪ್ರೀತಿಸುತ್ತಿರುವ ಹುಡುಗನೊಂದಿಗೆ ಸರಳವಾಗಿ ಆರ್ಯ ಸಮಾಜದ ಆಶ್ರಯದಲ್ಲಿ ಆರ್ಯ ಸಮಾಜದ ಪದ್ಧತಿಯ ಪ್ರಕಾರ ತನ್ನ ಮದುವೆ ಎಂಬುದು. ವಸುಂಧರಾಗೆ ಅದನ್ನು ಕೇಳಿ ಆದ ಸಂತೋಷ ಅಷ್ಟಿಷ್ಟಲ್ಲ.

ವಿದ್ಯಾಳಿಗೂ ಆ ವಿಷಯ ಗೊತ್ತಾದದ್ದು ಈಗಲೇ. ಭಾರತಿ ಹೇಳಿದಳು- "ಹುಡುಗನೂ ನನ್ನ ಜೊತೆಯಲ್ಲೇ ಕೆಲಸ ಮಾಡುತ್ತಾನೆ. ನಾವಿಬ್ಬರೂ ಹಿಂದೂಗಳು. ನಮ್ಮಿಬ್ಬರಿಗೂ ಜಾತಿಯಲ್ಲಿ ನಂಬಿಕೆಯಿಲ್ಲ. ಹುಡುಗನ ತಂದೆ ತಾಯಿಯರದೂ ಅಂತರ್ ಜಾತೀಯ ಮದುವೆಯಂತೆ. ಇಬ್ಬರೂ ಆರ್ಯಸಮಾಜದ ಪದ್ಧತಿಯ ಪ್ರಕಾರವೇ ಮದುವೆಯಾಗಿದ್ದರಂತೆ. ನಮ್ಮಲ್ಲಿನ ಒಳ ಒಪ್ಪಂದವೆಂದರೆ ನನ್ನ ಹಿಂದಿನ ಸಂಗತಿಗಳನ್ನಾವುದನ್ನೂ ಅವನು ಕೇಳಕೂಡದು. ಹಾಗೆಯೇ ಅವನ ಹಿಂದಿನ ಸಂಗತಿಗಳನ್ನಾವುದನ್ನೂ ನಾನು ಕೇಳುವಂತಿಲ್ಲ. ಆದರೆ ಸತಿಪತಿಗಳಾದ ನಂತರದಲ್ಲಿ ಒಬ್ಬರಿಗೊಬ್ಬರು ಪೂರ್ಣ ನಿಷ್ಠೆಯಿಂದ ಇರಬೇಕು ಎಂಬುದು. ಜೀವನ ಪಥದಲ್ಲಿ ಇಬ್ಬರೂ ಸಮಾನರು. ಸ್ನೇಹಿತರು. ಒಬ್ಬರ ಮೇಲೆ ಇನ್ನೊಬ್ಬರು ಅಧಿಕಾರ ಚಲಾಯಿಸುವುದು ಎನ್ನುವ ಮಾತೇ ಇಲ್ಲ." ಭಾರತಿಯ ಮಾತು ಕೇಳಿ ವಸುಂಧರಾ ಮತ್ತು ವಿದ್ಯಾ ಅತೀವ ಸಂತೋಷಪಟ್ಟರು. ಅಭಿನಂದಿಸಿದರು. ಭಾರತಿ- "ಈಗ ಅಭಿನಂದಿಸಿ ಕೈತೊಳೆದುಕೊಳ್ಳುವುದಲ್ಲ. ಮದುವೆಯ ಡೇಟ್ ಫಿಕ್ಸ್ ಅದ ನಂತರ ತಿಳಿಸುತ್ತೇನೆ. ನಾನು ಆಹ್ವಾನಿಸುತ್ತಿರುವುದು ಅತ್ಯಂತ ಪರಿಮಿತ ಸಂಖ್ಯೆಯ ಸ್ನೇಹಿತರನ್ನು. ಮದುವೆಗೆ ಬಂದು ಹಾರೈಸಬೇಕು" ಎಂದು ಅಡ್ವಾನ್ಸ್ ಅಗಿ ಕೇಳಿಕೊಂಡಳು.

ಆ ಮೇಲೆ ವಿದ್ಯಾ ಬಾತ್ ರೂಮಿಗೆ ಹೋಗಿದ್ದಾಗ-"ವಸುಂಧರಾ ಅವತ್ತು ನೀನು ಹೇಳಿದ ಮಾತು ನನ್ನ ಮನಸ್ಸಿನಲ್ಲಿ ಭದ್ರವಾಗಿ ಕೂತುಬಿಟ್ಟಿತು. ನಾನು ಪ್ರೀತಿಸುತ್ತಿದ್ದ ಹುಡುಗ ಎನ್ನುವುದಕ್ಕಿಂತ ನನ್ನನ್ನು ತುಂಬ ಹಚ್ಚಿಕೊಂಡಿದ್ದ ಮತ್ತು ಪ್ರೀತಿಸುತ್ತಿದ್ದ ಒಬ್ಬ ಹುಡುಗ ಇದ್ದ. ಆದರೆ ಅವನು ಬಾಯಿಬಿಟ್ಟು ಹೇಳಿರಲಿಲ್ಲ. ಅವನು ಒಂದು ದಿನ ಪ್ರಪೋಸ್ ಮಾಡಿದ. ಆಗ ನನ್ನ 'ಪ್ರಿನ್ಸಿಪಲ್' ಕೈಬಿಟ್ಟು ಎಲ್ಲರ ಹಾಗೆ ಅವನನ್ನು ಮದುವೆಯಾಗಿ ವೈವಾಹಿಕ ಬಂಧನದಲ್ಲಿ ತೊಡಗಿಕೊಳ್ಳುವುದೇ ಸರಿ ಎನ್ನಿಸಿತು. ಅದರಂತೆ ಎರಡು ದಿನ

ಟೈಮ್ ಕೊಡು. ಯೋಚಿಸಿ ಹೇಳುತ್ತೇನೆ ಎಂದೆ. ವಿದ್ಯಾ ಅವರ ಹತ್ತಿರವೂ ಮಾತಾಡಿದೆ. ಅವರೂ 'ವಸುಂಧರಾ ಹೇಳಿದ್ದು ಸರಿಯಾಗಿಯೇ ಇದೆ. ವಿವಾಹ ಎನ್ನುವುದು ಸಮಾಜದ ಸ್ವಾಸ್ಥ್ಯಕ್ಕೆ ನಿರ್ಮಿಸಿಕೊಂಡಿರುವ ಒಂದು ಒಳ್ಳೆಯ ವ್ಯವಸ್ಥೆ. ಅದನ್ನು ಯಾರೋ ತಮ್ಮ ಸ್ವಾರ್ಥಕ್ಕೆ ದುರುಪಯೋಗಪಡಿಸಿಕೊಂಡರೆ ಅದು ಆ ವ್ಯವಸ್ಥೆಯ ತಪ್ಪಲ್ಲ. ಪವಿತ್ರವಾದ ವ್ಯವಸ್ಥೆ ಎಂದು ಅದಕ್ಕೆ ಪಾವಿತ್ರ್ಯತೆಯನ್ನು ಅಟ್ಯಾಚ್ ಮಾಡಬೇಕಾಗಿಲ್ಲ. ಅದನ್ನು ಪವಿತ್ರವಾಗಿರಿಸುವುದು ಇಲ್ಲವೆ ಅಪವಿತ್ರಗೊಳಿಸುವುದು ಆ ವ್ಯವಸ್ಥೆಯ ಪಾಲುದಾರರಿಗೇ ಸೇರಿದ್ದು. ಹಾಗಂತ ಹೇಳಿ ಆ ವ್ಯವಸ್ಥೆಯೇ ಉರುಳಾದಾಗಲೂ ಅದಕ್ಕೇ ನೇಣು ಹಾಕಿಕೊಳ್ಳಬೇಕಾದ್ದಿಲ್ಲ. ಅದರಿಂದ ಹೊರ ನಡೆದರಾಯಿತು. ಮಕ್ಕಳಾಗಿದ್ದರೆ ವ್ಯವಸ್ಥೆಯಿಂದ ಹೊರನಡೆಯುವುದು ಅಷ್ಟು ಸುಲಭವಲ್ಲ. ಆಗ ಮಕ್ಕಳ ಸಲುವಾಗಿಯಾದರೂ ಪರಸ್ಪರ ಅನುಸರಿಸಿಕೊಂಡು ಹೋಗಬೇಕಾಗಬಹುದು. ನಿಮ್ಮಿಬ್ಬರಿಗೆ ಪರಸ್ಪರ ಒಪ್ಪಿಗೆ ಇದ್ದರೆ ಮುಂದುವರಿಯುವುದರಲ್ಲೇನೂ ತೊಂದರೆ ಇಲ್ಲ' ಅಂದರು. ನಾನು ಕೂಡಲೇ ಹುಡುಗನಿಗೆ ನನ್ನ ಒಪ್ಪಿಗೆ ಕೊಟ್ಟೆ. ನೀನು ಆ ಹೊತ್ತು ಆ ಮಾತು ಹೇಳದೆ ಇದ್ದಿದ್ದರೆ ನನ್ನ ಬದುಕು ಸ್ವೇಚ್ಛಾಚಾರಕ್ಕೆ ತಿರುಗಿ ಬಿಡುತ್ತಿತ್ತೇನೋ. ಈ ವಿಚಾರದಲ್ಲಿ ನೀನೇ ನನ್ನ ಗುರು. ನೋಡು ನಾನು ಗುರುವನ್ನು ಹಿಂದಿಕ್ಕಿ ಮುಂದೆ ಹೊರಟುಬಿಟ್ಟಿದ್ದೀನಿ. ಈಗ ನಾನು ನಿನಗೆ ಗುರುವಾಗ್ತೀನಿ. ನಿನಗೆ ನಾನು ಅವತ್ತು ಹೇಳಿದ ಮಾತನ್ನು ಇನ್ನೊಂದು ಸಲ ಹೇಳ್ತೀನಿ. ನೀನು ಅವತ್ತು ಅಕಸ್ಮಾತ್ತಾಗಿ ನಡೆದು ಹೋದ ಅ ದುರ್ಘಟನೆ ಮರೆತು ಮನೆಯವರು ಗೊತ್ತು ಮಾಡಿದವನನ್ನೋ ಇಲ್ಲ ನೀನು ಪ್ರೀತಿಸಿದವನನ್ನೋ ಬೇಗ ಮದುವೆಯಾಗು. ನಿನ್ನ ಈ ಅಪ್ರತಿಮ ಸೌಂದರ್ಯ ವ್ಯರ್ಥವಾಗಿ ಹೋಗಬಾರದು. ಅದನ್ನು ಸವಿಯಲಿರುವ ಆ ಭಾವೀ ಭಾಗ್ಯವಂತನನ್ನು ಹೆಚ್ಚು ಕಾಯಿಸಬೇಡ. ಅವನನ್ನು ಮನಸ್ಸಿನಲ್ಲೇ ಅಭಿನಂದಿಸುತ್ತೀನಿ" ಎಂದು ಜೋರಾಗಿ ನಕ್ಕಳು." ಬಾತ್ ರೂಮಿನಿಂದ ಹೊರಬಂದ ವಿದ್ಯಾ- "ಅದೇನು ಅಷ್ಟು ಜೋರಾಗಿ ಇಬ್ಬರೇ ನಗುತ್ತಿದ್ದೀರಿ. ನನ್ನನ್ನೂ ಸೇರಿಸಿಕೊಳ್ಳಿ" ಎಂದಳು. ಭಾರತಿ ಅದೇ ಮಾತನ್ನು ರಿಪೀಟ್ ಮಾಡಿದಳು. ವಿದ್ಯಾ ನಗುತ್ತ – "ನೀನು ಮಾತಿನಲ್ಲಿ ಬಲು ಚತುರೆ. ಕರೆಕ್ಟಾಗಿ ಹೇಳಿದೆ ಬಿಡು" ಎಂದಳು.

ಅಂದು ಮಧ್ಯಾಹ್ನ ವಸುಂಧರಾ ಹೋಟೆಲ್‌ನಲ್ಲಿ ಊಟ ಹಾಕಿಸಿದಳು. ರೂಮಿಗೆ ಬಂದ ಮೇಲೆ "ಹೌದು ವಿದ್ಯಾ, ಇನ್ನು ಕೆಲವು ತಿಂಗಳ ನಂತರ ಭಾರತಿ ಕೂಡ ಹೊರಟುಬಿಡುತ್ತಾಳೆ. ನೀವೇನು ಮಾಡುತ್ತೀರಿ?" ಎಂದು ವಸುಂಧರಾ ಕೇಳಿದಳು. ವಿದ್ಯಾ "ನಿಜ. ಅವಳೂ ಹೋಗಿಬಿಟ್ಟರೆ ಬೇಜಾರಾಗುತ್ತೆ. ಆದರೆ ನಿಮ್ಮಿಬ್ಬರ ಜಾಗಕ್ಕೆ ಯಾರಾದರೂ ನಿಮ್ಮಂಥ ಒಳ್ಳೆಯವರೇ ಬರಬಹುದು. ಆಗ ಹೀಗೇ ನಡೆಯುತ್ತೆ." ಒಂದರ್ಧ ಗಂಟೆ ರೆಸ್ಟ್ ತೆಗೆದುಕೊಂಡ ನಂತರ ವಸುಂಧರಾ ಊರಿಗೆ ಹೊರಟಳು. ಇಬ್ಬರೂ ಸ್ಟೇಷನ್‌ಗೆ ಹೋಗಿ ಟ್ರೈನು ಹತ್ತಿಸಿದರು.

ಅಧ್ಯಾಯ-17

ಮುಂದಿನ ಅಕಾಡೆಮಿಕ್ ವರ್ಷದಲ್ಲಿ ಒಬ್ಬ ಪೂರ್ಣಕಾಲಿಕ ಉಪನ್ಯಾಸಕರಿಗೆ ಅಗತ್ಯವಾದಷ್ಟು ಕಾರ್ಯಭಾರ ಸೃಷ್ಟಿಯಾದ್ದರಿಂದ ಸ್ವಾಮಿಗಳು ಹೇಳಿದ ಹಾಗೆಯೇ ಹೇಮಾಳನ್ನು ತಾತ್ಕಾಲಿಕವಾಗಿ ಪೂರ್ಣಕಾಲಿಕ ಉಪನ್ಯಾಸಕಳಾಗಿ ನೇಮಕ ಮಾಡಿಕೊಂಡರು. ಅದರಿಂದ ಬರುತ್ತಿದ್ದ ಸಂಬಳ ದುಪ್ಪಟ್ಟು ಆಯಿತು. ಇದರಿಂದ ಹೇಮಾಳಿಗೆ ಸಹಜವಾಗಿಯೇ ತುಂಬ ಸಂತೋಷವಾಯಿತು. ಅವಳಿಗಿಂತ ಅವಳ ಸಂಬಳದ ಮೇಲೆ ಕಣ್ಣಿಟ್ಟಿದ್ದ ಅವಳ ಗಂಡ ಶಿವರಾಜನಿಗೆ ಹೆಚ್ಚಿನ ಸಂತೋಷವಾಯಿತು. ಹೇಮಾಳಿಗೆ ತನ್ನ ಸಂಬಳವನ್ನು ತಾನೇ ಪೂರ್ತಿಯಾಗಿ ಇಟ್ಟುಕೊಳ್ಳಬೇಕೆಂಬ ಅಥವಾ ತನ್ನ ಖರ್ಚಿಗೆ ಮಾತ್ರ ಬಳಸಿಕೊಳ್ಳಬೇಕೆಂಬ ದುರ್ಬುದ್ಧಿ ಯಾವತ್ತೂ ಇರಲೇ ಇಲ್ಲ. ಆದರೆ ಅವಳಿಗೆ ತುಂಬ ಕೋಪ ತರಿಸಿದ್ದೆಂದರೆ ತಾನು ತಂದ ಸಂಬಳವಷ್ಟನ್ನೂ ಗಂಡನ ಕೈಗೆ ಕೊಟ್ಟುಬಿಟ್ಟು ತನ್ನ ಖರ್ಚಿಗೂ ಅವನನ್ನೇ ಕೇಳಬೇಕೆಂಬ ಶಿವರಾಜನ ಮಾತು. ತಾನು ದುಡಿಯುವ ಹೆಣ್ಣಾಗಿಯೂ ತನ್ನ ಸಣ್ಣ ಪುಟ್ಟ ಖರ್ಚಿಗೂ ಗಂಡನನ್ನೇ ಅವಲಂಬಿಸಿರಬೇಕೆಂಬ ಗಂಡನ ದಬ್ಬಾಳಿಕೆಯ ಮನೋಭಾವ ಅವಳಿಗೆ ಅರಗಿಸಿಕೊಳ್ಳಲು ಕಷ್ಟವಾಯಿತು.

ಇನ್ನು ಮನೆಯೊಳಗೆ ಅತ್ತೆ ಮತ್ತು ನಾದಿನಿಯ ಮನೋಭಾವದಲ್ಲಿ ಯಾವುದೇ ರೀತಿಯ ಹೆಚ್ಚಿನ ಸುಧಾರಣೆ ಕಂಡುಬರಲಿಲ್ಲ. ಸಣ್ಣಪುಟ್ಟ ವಿಷಯಕ್ಕೂ ಏನಾದರೂ ಲೊಟಗುಟ್ಟುತ್ತಿರುವುದು, ಸಿಟ್ಟು ತೋರಿಸುವುದು, ತನ್ನ ಮಾತನ್ನು ಯಾವುದೇ ಕಾರಣಕ್ಕೂ ಮೀರಕೂಡದೆಂಬ 'ಅಂದ ಕಾಲತ್ತಿಲ್ ಅತ್ತೆಯತನ' ಮುಂದುವರಿಯಿತು. ಅವರ ಸಮಕ್ಕೂ ವಾದಿಸುತ್ತ ಕೂತರೆ ದಿನನಿತ್ಯದ ಸಂಘರ್ಷಕ್ಕೆ ದಾರಿಯಾಗುತ್ತದೆಂದು ತಾನೇ ತಾಳ್ಮೆ ತಂದುಕೊಂಡು ಅನುಸರಣೆ ಮಾಡಿಕೊಂಡು ಹೋಗತೊಡಗಿದಳು. ನಾದಿನಿ ಇನ್ನೆಷ್ಟು ದಿನ ಇದ್ದಾಳು. ಹೇಗೂ ಇನ್ನೊಂದೋ ಎರಡೋ ವರ್ಷದಲ್ಲಿ ಮದುವೆಯಾಗಿ ಹೋಗುವವಳು ತಾನೆ ಎಂದು ತನಗೆ ತಾನೇ ತಾಳ್ಮೆ ತಂದುಕೊಂಡಳು. ಮನೆಯ ವಾತಾವರಣ ತುಂಬ ಬೇಸರವೆನಿಸಿದರೆ ಅಕ್ಕನವರ ವಚನಗಳನ್ನು ಹಿಂದೂಸ್ತಾನಿ ಧಾಟಿಯಲ್ಲಿ ತನ್ನ ಪಾಡಿಗೆ ತಾನು ಹಾಡಿಕೊಂಡು ಬೇಸರ ನೀಗಿಕೊಳ್ಳುತ್ತಿದ್ದಳು.

ಆ ಒಂದು ವರ್ಷವೂ ಹಾಗೂ ಹೀಗೂ ಕಳೆದೇ ಹೋಯಿತು. ಮನೆಯಲ್ಲಿ ಕಂಡುಕೊಳ್ಳಲಾಗದ ಸಂತೋಷ ಸಮಾಧಾನಗಳನ್ನು ಕಾಲೇಜಿನಲ್ಲಿ ವಿದ್ಯಾರ್ಥಿಗಳ ಮಧ್ಯೆ ಪಾಠಪ್ರವಚನಗಳಲ್ಲಿ ಕಂಡುಕೊಳ್ಳತೊಡಗಿದಳು. ತನ್ನ ಪಠ್ಯ ವಿಷಯದ ಸರಿಯಾದ ಜ್ಞಾನ, ಭಾಷೆಯ ಮೇಲೆ ಒಳ್ಳೆಯ ಪ್ರಭುತ್ವಗಳ ಜೊತೆಗೆ ಯಾವುದೇ

ತರಗತಿಯಾದರೂ ಸರಿಯಾದ ಸಿದ್ಧತೆ ಮಾಡಿಕೊಂಡೇ ತರಗತಿಗೆ ಹೋಗುತ್ತಿದ್ದುದು ಇವೆಲ್ಲದರ ಒಟ್ಟು ಪರಿಣಾಮವೆಂದರೆ ಹೇಮಾಳೂ ಸೇರಿ ಅ ವರ್ಷ ಬೇರೆ ಬೇರೆ ವಿಷಯಗಳಿಗೆ ನೇಮಿಸಿಕೊಂಡ ನಾಲ್ಕು ಜನ ಅಧ್ಯಾಪಕರಲ್ಲಿ ಹೇಮಾ ಅತ್ಯಂತ ವಿದ್ಯಾರ್ಥಿಪ್ರಿಯ ಅಧ್ಯಾಪಕಿ ಎನಿಸಿಕೊಂಡದ್ದು. ಸ್ವಾಮಿಗಳಿಗೆ ಇದರ ವರದಿ ಆಗಿಂದಾಗ್ಗೆ ಹೋಗುತ್ತಲೇ ಇತ್ತು. ತಮ್ಮ ಮಠದ ನಿಷ್ಠಾವಂತ ಭಕ್ತರಾದ ಗುರುಶಾಂತಪ್ಪನವರ ಮಗಳ ಯಶಸ್ಸಿನ ಬಗ್ಗೆ ಅವರಿಗೆ ಅಭಿಮಾನವೆನ್ನಿಸಿತು. ಮರು ವರ್ಷದ ಪ್ರಾರಂಭದಲ್ಲೇ ಶಾಶ್ವತ ಉಪನ್ಯಾಸಕಿಯಾಗಿ ನೇಮಕ ಮಾಡಿಕೊಳ್ಳಲು ಬೇಕಾದ ಪ್ರಕ್ರಿಯೆಗಳೆಲ್ಲವನ್ನೂ ಪೂರ್ಣಗೊಳಿಸಲು ಆಡಳಿತ ಮಂಡಳಿಗೆ ಸೂಚಿಸಿ ನೇಮಕಾತಿ ಮಾಡಿಕೊಂಡುಬಿಟ್ಟರು. ಗಂಡನ ಜೊತೆ ಮಠಕ್ಕೆ ಹೋಗಿ ಸ್ವಾಮೀಜಿಯವರನ್ನು ಕಂಡು ನಮಸ್ಕಾರ ಮತ್ತು ಕೃತಜ್ಞತೆಗಳನ್ನು ಸಲ್ಲಿಸಿದಳು.

ಮಗನ ಕೈಹಿಡಿದು ಸೊಸೆಯಾಗಿ ತಮ್ಮ ಮನೆಗೆ ಹೇಮಾ ಕಾಲಿಟ್ಟು ಎರಡು ವರ್ಷಗಳೇ ಕಳೆದುಹೋದರೂ ವಂಶೋದ್ಧಾರಕನೊಬ್ಬನನ್ನು ಕೊಡಲಿಲ್ಲವಲ್ಲ ಎಂಬುದೂ ಅವರ ಅತ್ತೆಯ ಅಸಂತೋಷ ಹೆಚ್ಚಲು ಕಾರಣವಾಯಿತು. ಮನೆಗೆ ಬಂದ ಬಂಧುಗಳು ಸಹಜವಾಗಿಯೇ ಹೇಮಾಳಿಗೆ "ಯಾಕೆ ನಿಮ್ಮ ಅತ್ತೆಯ ಕೈಗೊಂದು ಮೊಮ್ಮಗು ಕೊಡೋಕೆ ತಡಮಾಡ್ತಿದ್ದೀ. ಬೇಗ ಕೊಟ್ಟುಬಿಡು" ಎಂದು ಹೇಳುತ್ತಿದ್ದರು. ಹೇಮಾಳೂ ಆ ಮಾತಿಗೆ ನಾಚಿಕೆಯಿಂದಲೇ "ಇನ್ನೂ ಏನಂಥ ಕಾಲಮೀರಿ ಹೋಗಿರೋದು! ಆಗೋ ಕಾಲಬಂದರೆ ಆಗೇ ಆಗುತ್ತೆ" ಎನ್ನುತ್ತಿದ್ದಳು. ಹೇಮಾಳ ಒತ್ತಾಯದ ಮೇರೆಗೆ ಪ್ರಸಿದ್ಧ ಗೈನಕಾಲಜಿಸ್ಟ್ ಒಬ್ಬರಲ್ಲಿ ಟೆಸ್ಟ್ ಕೂಡ ಮಾಡಿಸಿಕೊಂಡು ಬಂದರು. ಇಬ್ಬರಲ್ಲೂ ಯಾವುದೇ ಕೊರತೆಯಿಲ್ಲ, ದೋಷವೂ ಇಲ್ಲ ಎಂದು ಡಾಕ್ಟರ್ ತಿಳಿಸಿದರು.

ಗಂಡನಲ್ಲಿ ಗಂಡಸುತನಕ್ಕೆ ಯಾವುದೇ ಕೊರತೆಯಿಲ್ಲ ಎಂಬುದು ಎಂದೋ ಅವಳ ಅರಿವಿಗೆ ಬಂದಿತ್ತು. ಆದರೆ ಅವನ ಅತಿಕಾಮವೇ ತನ್ನ ದಾಂಪತ್ಯಕ್ಕೆ ಮುಳುವಾಗಬಹುದೆಂದು ಹೇಮಾ ಎಂದೂ ಕನಸು ಮನಸಿನಲ್ಲೂ ಎಣಿಸಿರಲಿಲ್ಲ. ಹೇಮಾಳಂತೂ ಬೆಳಿಗ್ಗೆ ಹತ್ತಕ್ಕೆ ಮನೆ ಬಿಟ್ಟರೆ ಸಂಜೆಗೇ ಮನೆಗೆ ಮರಳುತ್ತಿದ್ದುದು. ಶಿವರಾಜನ ಕೆಲಸದ ಸ್ವರೂಪ ಕೇವಲ ಕಛೇರಿಯಲ್ಲಿ ಕುರ್ಚಿಗೆ ಅಂಟಿಕೊಂಡು ಕೆಲಸ ಮಾಡುವಂಥದಾಗಿರಲಿಲ್ಲ. ನಗರದಲ್ಲಿ ಮತ್ತು ನಗರದಾಚೆಯ ಹೊರ ಊರುಗಳಿಗೆ ತನ್ನ ಗಿರಾಕಿಗಳನ್ನು ಭೇಟಿಮಾಡಲು ಅವನು ಹೋಗಬೇಕಾಗುತ್ತಿತ್ತು. ನಗರದಲ್ಲೇ ಆದರೆ ಹೊರಗೆ ಹೋಗಿದ್ದರೂ ಊಟದ ಹೊತ್ತಿಗೆ ಸಾಮಾನ್ಯವಾಗಿ ಬಂದುಬಿಡುತ್ತಿದ್ದನು. ಬೇರೆ ಊರುಗಳಿಗೆ ಹೋದರೆ ಕೆಲವು ಸಲ ರಾತ್ರಿ 11 ಗಂಟೆಯ ತನಕವೂ ತಡವಾಗುತ್ತಿತ್ತು. ಅಪರೂಪಕ್ಕೆ ಒಂದೆರಡು ದಿನ ಅಲ್ಲೇ ತಂಗುತ್ತಿದ್ದುದೂ ಉಂಟು. ಹೇಮಾ ಗಂಡನ ಮನೆಗೆ ಹೋದ ಎರಡನೇ ವರ್ಷ ಜಿಲ್ಲಾ ಮುಖ್ಯ ಸ್ಥಳವಾದ ಚಿತ್ರದುರ್ಗದಲ್ಲೂ ಒಂದು ಕಛೇರಿ ತೆರೆದಿದ್ದನು. ಕಛೇರಿ ತೆರೆದ ದಿನ ಹೇಮಾ ಮತ್ತು ಅವಳ ನಾದಿನಿ ಕೂಡ ಹೋಗಿದ್ದರು. ಅಲ್ಲಿ ಕಛೇರಿಯ ಸಹಾಯಕರಾಗಿ ಇಬ್ಬರು ಮಹಿಳೆಯರು ಮತ್ತು

ಒಬ್ಬ ಯುವಕನನ್ನು ನೇಮಿಸಿಕೊಂಡಿದ್ದನು. ಅವರ ಜೊತೆ ಹೆಚ್ಚು ಕಡಿಮೆ ದಿನವೂ ಫೋನ್ ಮಾಡಿ ಮಾತಾಡುತ್ತಿದ್ದನು. ತಿಂಗಳಿಗೋ ಎರಡು ತಿಂಗಳಿಗೋ ಒಮ್ಮೆ ಅಲ್ಲಿಗೆ ಶಿವರಾಜು ಹೋಗಿ ಬರುತ್ತಿದ್ದನು. ಕೆಲವು ಸಲ ಅಲ್ಲಿ ಕೆಲಸ ಮಾಡುತ್ತಿದ್ದ ನಾಗರಾಜನೇ ದಾವಣಗೆರೆಗೆ ಬಂದು ಶಿವರಾಜನನ್ನು ಭೇಟಿಮಾಡಿ ಹೋಗುತ್ತಿದ್ದನು.

ಒಂದು ದಿನ ಹೇಮಾಳಿಗೆ ಕಾಲೇಜಿನ ವಿಳಾಸಕ್ಕೊಂದು ರಿಜಿಸ್ಟರ್ಡ್ ಪತ್ರ ಬಂತು. ಅದು ಐದು ಸಾಲಿನ ಚಿಕ್ಕ ಪತ್ರ. "ಮೇಡಮ್ ನನ್ನ ದೂರದ ಬಂಧುವೊಬ್ಬ ನಿಮ್ಮ ಕಾಲೇಜಿನಲ್ಲಿ ಬಿ.ಎ. ಓದುತ್ತಿರುವ ವಿದ್ಯಾರ್ಥಿ. ನೀವು ತುಂಬಾ ಚೆನ್ನಾಗಿ ಪಾಠ ಮಾಡುವ ಒಳ್ಳೆಯ ಮೇಡಮ್ ಎಂದು ಅವನಿಂದ ಕೇಳಿದ್ದೆ. ಆ ಕಾರಣಕ್ಕಾಗಿ ನಿಮ್ಮಂಥ ಒಳ್ಳೆಯವರಿಗೆ ಅನ್ಯಾಯವಾಗಬಾರದೆಂದು ಈ ಪತ್ರ ಬರೆಯುತ್ತಿದ್ದೇನೆ. ನಿಮ್ಮ ಪತಿಗೂ ಚಿತ್ರದುರ್ಗದ ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಮಹಿಳೆಗೂ ಅನೈತಿಕ ಸಂಬಂಧವಿದೆ. ಇದು ಬಹಳ ದಿನಗಳಿಂದಲೂ ನಡೆಯುತ್ತಿದೆ. ನೀವು ಈಗಲೇ ಎಚ್ಚರವಹಿಸುವುದು ಒಳ್ಳೆಯದು."

ನಿಮ್ಮ ಹಿತಾಕಾಂಕ್ಷಿ

XXX

ಬರೆದವನ ವಿಳಾಸ "ಕೆ.ಎನ್.ಎಸ್. ಕೇಸರಿ, ಮನೆ ನಂ; 15. 3ನೇ ಮುಖ್ಯ ರಸ್ತೆ, ಹಾವೇರಿ" ಎಂದಿತ್ತು. ಇದೊಂದು ಸುಳ್ಳು ಹೆಸರಿಟ್ಟುಕೊಂಡು ಬರೆದ ಪತ್ರವೆಂಬುದು ಖಚಿತವಾಯಿತು. ಕಾರಣ ಪತ್ರದ ಒಳಗೆ ನಿಮ್ಮ ಹಿತಾಕಾಂಕ್ಷಿ ಎಂಬುದರ ಕೆಳಗೆ ಹೆಸರೇ ಇಲ್ಲ. ರಿಜಿಸ್ಟರ್ಡ್ ಪತ್ರವಾದ್ದರಿಂದ ಬರೆದವನ ವಿಳಾಸ ಕೊಡಲೇಬೇಕಾಗುತ್ತದೆ. ಅದಕ್ಕಾಗಿ ಯಾವುದೋ ಒಂದು ಸುಳ್ಳು ಹೆಸರು ಮತ್ತು ವಿಳಾಸ ನೀಡಿರಬೇಕು ಎಂದು ಊಹಿಸಿದಳು. ಆದರೆ ಕವರ್ ಮೇಲೆ ಹಾವೇರಿಯ ಪೋಸ್ಟ್ ಆಫೀಸಿನ ಸೀಲ್ ಇತ್ತು. ಹಾವೇರಿಯವನೇ ಇರಬೇಕೆಂದು ಊಹಿಸಲೆಂದು ಬೇಕೆಂದೇ ಹಾವೇರಿಗೆ ಹೋಗಬೇಕಾಗಿ ಬಂದ ಸಂದರ್ಭವನ್ನು ಬಳಸಿಕೊಂಡು ಈ ಸುತ್ತುಮುತ್ತಿನವರಾರೋ ಈ ಪತ್ರವನ್ನು ಬರೆದು ಅಲ್ಲಿಂದಲೇ ಪೋಸ್ಟ್ ಮಾಡಿರಬೇಕು ಎಂದು ಯೋಚಿಸಿದಳು.

ಆದರೆ ಪತ್ರದಲ್ಲಿದ್ದ ವಿಷಯ ಹೇಮಾಳನ್ನು ಕಂಗೆಡಿಸಿತು. ಕೇವಲ ಇದನ್ನು ನಂಬಿಕೊಂಡು ಗಂಡನ ಬಗ್ಗೆ ಅನುಮಾನ ಪಡುವುದು ಸರಿಯಾಗಲಾರದು. ಹಾಗೆಂದು ಇದನ್ನು ಪೂರ್ತಿ ಸುಳ್ಳೆಂದು ತಳ್ಳಿಹಾಕಲೂ ಆಗದಂಥ ದ್ವಂದ್ವದಲ್ಲಿ ಸಿಲುಕಿಕೊಂಡಳು. ಗಂಡನ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದವನಾರೋ ಕೆಲಸದಿಂದ ತೆಗೆದ ಕಾರಣಕ್ಕೆ ಸಿಟ್ಟಿನಿಂದ ಹೀಗೆ ಬರೆದಿರಬಹುದೇನೋ ಎಂದು ಆ ವಿಷಯದ ಬಗ್ಗೆ ಹೆಚ್ಚು ಯೋಚಿಸುವುದನ್ನು ಬಿಟ್ಟಳು. ಕೆಲವು ದಿನಗಳ ನಂತರ ಮೊದಲಿದ್ದ ನಾಗರಾಜನನ್ನು ತೆಗೆದಿರುವುದು ನಿಜವೆಂದು ಗಂಡನ ಬಾಯಿಂದ ಯಾವುದೋ ಸಂದರ್ಭದಲ್ಲಿ ಹೊರಬಿತ್ತು. ಹಾಗಾದರೆ ತಾನು ಅಂದುಕೊಂಡಿದ್ದೇ ಸರಿ ಎಂದು ಆ ವಿಷಯವನ್ನು ಮನಸ್ಸಿನಿಂದ ತೆಗೆದು ಹಾಕಿದಳು.

ಆ ಪತ್ರ ಬಂದ ಎರಡು ತಿಂಗಳ ನಂತರ ಹೇಮಾಳ ಸಹೋದ್ಯೋಗಿ ಒಬ್ಬರು ಕಾಲೇಜಿನಲ್ಲಿ– "ಮೇಡಮ್, ಹೋದ ಶುಕ್ರವಾರ ನೀವು ಬೆಂಗಳೂರಿಗೆ ಹೋಗಿದ್ದಿರಾ?" ಎಂದು ಕೇಳಿದರು. ಹೇಮಾ ಅವರನ್ನು "ಯಾಕೆ?" ಎಂದು ಕೇಳಿದಳು. "ಸುಮ್ಮನೆ ಕೇಳಿದೆ. ನಾನೂ ನಮ್ಮ ಯಜಮಾನರ ಜೊತೆ ಬೆಂಗಳೂರಿಗೆ ಹೋಗಿದ್ದೆ. ಅಲ್ಲಿ ರಾಮಕೃಷ್ಣ ಲಾಡ್ಜ್‌ನ ರೂಮಿನಿಂದ ನಿಮ್ಮ ಯಜಮಾನರು ಮತ್ತು ಯಾರೋ ಒಬ್ಬ ಲೇಡಿ ಬೀಗ ಹಾಕಿಕೊಂಡು ಕೆಳಕ್ಕಿಳಿದು ಬರುತ್ತಿದ್ದರು. ಬಹುಶಃ ನೀವು ಮುಂಚೆಯೇ ಇಳಿದು ಅವರಿಗೋಸ್ಕರ ಕಾಯುತ್ತಿದ್ದಿರೇನೋ ಎಂದುಕೊಂಡೆ" ಎಂದರು. ಹೇಮಾಳಿಗೆ ತೀವ್ರ ಆಘಾತ ಮತ್ತು ಕಸಿವಿಸಿಯಾದರೂ ತೋರಿಸಿಕೊಳ್ಳಬಾರದೆಂದು "ಹೌದು ಹೋಗಿದ್ದೆ. ನೀವು ಹೇಳಿದ ಹಾಗೆ ಕೆಳಗಡೆ ಕಾಯುತ್ತಿದ್ದೆ. ಅವರು ನಮ್ಮ ಯಜಮಾನರ ನೆಂಟರು" ಎಂದು ಹೇಳಿದಳು. ಅವರು 'ಹೌದಾ' ಎಂದು ಸುಮ್ಮನಾದರು.

ಸಹೋದ್ಯೋಗಿಗೇನೋ ತಕ್ಷಣಕ್ಕೆ ತೋಚಿದ ಒಂದು ಸುಳ್ಳು ಹೇಳಿದಳು. ಆದರೆ ಅವಳ ಮನಸ್ಸು ಮತ್ತು ಹೃದಯ ಕದಡಿದ ಕಡಲಾದವು. ಅವರು ಹೇಳಿದಂತೆ ಆ ದಿನ ಶಿವರಾಜ್ ಬೆಂಗಳೂರಿನಲ್ಲಿ ಏನೋ ಕೆಲಸವಿದೆ. ಹೋಗಿ ಬರುತ್ತೇನೆಂದು ಹೇಳಿ ಹೋಗಿ ಒಂದು ದಿನದ ನಂತರ ಅಂದರೆ ಶನಿವಾರ ರಾತ್ರಿ 11 ಗಂಟೆಯ ಸುಮಾರಿಗೆ ಹಿಂತಿರುಗಿದ್ದನು. ಏನೋ ಓದುತ್ತ ಕುಳಿತಿದ್ದ ಹೇಮಾಳೇ ಹೋಗಿ ಬಾಗಿಲು ತೆಗೆದಿದ್ದಳು. ತನ್ನದು ಊಟ ಆಗಿದೆ ಎಂದು ಹೇಳಿ ಹೋಗಿ ಮಲಗಿದವನು ಮರುದಿನ ಭಾನುವಾರ ಬೆಳಿಗ್ಗೆ ತುಂಬ ತಡವಾಗಿ ಎದ್ದಿದ್ದ. ಅಂದು ಯಾರಿಂದಲೋ ಬಂದಿದ್ದ ಅನಾಮಧೇಯ ಪತ್ರದಲ್ಲಿ ಹೇಳಿದ್ದ ಸಂಗತಿಗೂ ಇವರು ಇಂದು ಹೇಳುತ್ತಿರುವುದಕ್ಕೂ ತಾಳೆಮಾಡಿ ನೋಡಿದರೆ ಆ ಪತ್ರದಲ್ಲಿ ತಿಳಿಸಿದ್ದ ಸಂಗತಿ ನಿಜವೆಂಬುದು ಮನವರಿಕೆಯಾಯಿತು. ಅವಳಿಗಾದ ಮನೋವ್ಯಥೆ ಅಷ್ಟಿಷ್ಟಲ್ಲ. ಜೊತೆಗೆ ಅಸಾಧಾರಣ ಕೋಪ ಬಂತು. ಇದನ್ನು ಸಹಿಸಲು ಸಾಧ್ಯವೇ ಇಲ್ಲ. ಇದು ತನ್ನ ವ್ಯಕ್ತಿತ್ವಕ್ಕೆ, ತನ್ನ ಸ್ತ್ರೀತ್ವಕ್ಕೆ ಮಾಡಿದ ಅವಮಾನ. ನಾನು ಅವರಿಗೆ ಏನು ತಾನೆ ಕಡಿಮೆ ಮಾಡಿದ್ದೀನಿ. ನನಗೆ ಎಷ್ಟೇ ದೇಹಾಲಸ್ಯವಿದ್ದ ಸಂದರ್ಭದಲ್ಲೂ, ಕೂಟಕ್ಕೆ ಸುತರಾಮ್ ಇಷ್ಟವಿಲ್ಲದಿದ್ದಾಗಲೂ ಅವರ ಹಸಿವು ತಿಳಿದಿದ್ದರಿಂದ ಯಾಂತ್ರಿಕವಾಗಿ ಒಪ್ಪಿಸಿಕೊಂಡಿದ್ದೇನೆ. ಅವನ ಕಂಜೂಸುತನ, ನಯವಿಹೀನತೆ, ತನ್ನ ಮಾತೇ ನಡೆಯಬೇಕೆಂಬ ಹಠ ಎಲ್ಲವನ್ನೂ ಸಹಿಸಬಹುದು, ಸಹಿಸಿದ್ದೇನೆ. ಆದರೆ ಈಗ ಇಂಥ ಮನುಷ್ಯನ ಜೊತೆ ಜೀವನ ಸಾಗಿಸುವುದು ಹೇಗೆ? ಅವಳಿಗೆ ಅಸಹ್ಯವೆನಿಸತೊಡಗಿತು. ಅವಳ ಮನಸ್ಸು ಕಲ್ಲಾಯಿತು. ಇಂದೇ ಗಂಡನನ್ನು ಈ ಬಗ್ಗೆ ಧಟ್ಟಿಸಿ ಕೇಳಿ ಇಲ್ಲಿಗೇ ಇದಕ್ಕೊಂದು ಇತ್ಯರ್ಥ ಮಾಡಬೇಕೆಂದು ಕೊಂಡಳು.

ಅಂದು ರಾತ್ರಿ ಗಂಡ ತಬ್ಬಿಕೊಳ್ಳಲು ಬಂದಾಗ ಹೇಮಾ ದೂರ ಸರಿದಳು. "ನನ್ನನ್ನು ಮುಟ್ಟಬೇಡಿ. ಯಾರೆಲ್ಲರನ್ನೂ ನೀವು ಕರೆದುಕೊಳ್ಳೋರು. ನನ್ನನ್ನೂ ಹಾಗೇ ಅಂತಾನೇ ತಿಳಿದುಕೊಂಡಿದ್ದೀರಾ? ನಾನು ಏನು ತಾನೆ ಕಡಿಮೆ ಮಾಡಿದ್ದೆ ನಿಮಗೆ" ಎಂದು ಕಣ್ಣಿನಲ್ಲಿ ಕೆಂಡ ಸುರಿಸತೊಡಗಿದಳು. ಶಿವರಾಜನಿಗೆ ಇದೇಕೆ ಎಂದೂ ಇಲ್ಲದ ರೀತಿಯಲ್ಲಿ ಇವಳು ಆಡುತ್ತಾ ಇದ್ದಾಳೆ. ಏನಾಗಿದೆ ಇವಳಿಗೆ ಎಂದು ಆಶ್ಚರ್ಯವಾಯಿತು.

ಪ್ರಶ್ನಿಸಿದಾಗ– “ನನ್ನ ಹತ್ತಿರ ನೀವು ಸುಳ್ಳು ಹೇಳಬೇಡಿ. ನಿಮಗೆ ಹೊರಸಂಬಂಧ ಇರೋದು ನಿಜ ತಾನೆ? ನನಗೆಲ್ಲಾ ಗೊತ್ತಾಗಿದೆ” ಎಂದಳು. ಅವಳಿಗೆ ಬಂದ ಪತ್ರ ತೋರಿಸಿದಳು. “ಏ ಅದು ನಮ್ಮ ಚಿತ್ರದುರ್ಗದ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದೋನು ಬರೆದಿರೋದು. ಅವನು ಕೆಲಸಕ್ಕೆ ಸರಿಯಾಗಿ ಬರುತ್ತಿರಲಿಲ್ಲ. ಅದಕ್ಕೆ ಅವನನ್ನು ಕೆಲಸದಿಂದ ತೆಗೆದಿದ್ದೆ. ಅದಕ್ಕೆ ಅವನು ಸುಳ್ಳುಪಳ್ಳು ಸೇರಿಸಿ ನಮ್ಮ ಸಂಸಾರದಲ್ಲಿ ಹುಳಿಹಿಂಡೋಕೆ ಹೊರಟಿದ್ದಾನೆ. ಅವನನ್ನು ಸುಮ್ಮನೆ ಬಿಡಲ್ಲ.” ಎಂದೆಲ್ಲ ರೇಗಾಡಿದ. ಆದರೆ ಹೇಮಾ ಅಷ್ಟಕ್ಕೆ ಸುಮ್ಮನಿರದೆ ಬೆಂಗಳೂರಿನಲ್ಲಿ ಒಬ್ಬ ಹೆಂಗಸಿನ ಜೊತೆ ತನ್ನ ಸಹೋದ್ಯೋಗಿ ಅವನನ್ನು ನೋಡಿದ್ದ ಸಂಗತಿ ತಿಳಿಸಿದಳು. ಆಗ ಶಿವರಾಜನ ಮುಖದ ಬಣ್ಣವೇ ಬದಲಾಯಿತು. ಇನ್ನು ಸುಳ್ಳು ಹೇಳಿ ಪ್ರಯೋಜನವಿಲ್ಲ ಎಂದು ಗೊತ್ತಾಗಿ ತಲೆ ಕೆಳಗೆ ಹಾಕಿದ. ಇಬ್ಬರೂ ಮಾತಿಲ್ಲದೆ ಬೇರೆ ಬೇರೆ ಮಲಗಿದರು.

ಶಿವರಾಜನಿಗೆ ಹೆಣ್ಣಿನ ಸಹವಾಸ ಹೊಸದೇನಲ್ಲ. ಅವರ ತಂದೆಗೆ ಪಿತ್ರಾರ್ಜಿತವಾದ ಆಸ್ತಿಯ ಜೊತೆಗೆ ಮಂಡಿ ವ್ಯಾಪಾರ ಕೂಡ ಇತ್ತು. ಹೀಗಾಗಿ ಮೊದಲಿನಿಂದಲೂ ಶ್ರೀಮಂತಿಕೆಯಲ್ಲೇ ಬೆಳೆದು ಬಂದವನು. ಅಲ್ಲದೆ ಒಬ್ಬನೇ ಮಗನೆಂದು ಯಾವುದಕ್ಕೂ ಕೊರತೆಯಾಗದಂತೆ, ಅವನು ಇಷ್ಟಪಟ್ಟದ್ದನ್ನೆಲ್ಲ ಕೊಡಿಸುತ್ತ ಪ್ರೀತಿಯಿಂದ ಸಾಕಿದ್ದರು. ಕೈಯಲ್ಲಿ ದುಡ್ಡು ಆಡುತ್ತಿತ್ತು. ನೋಡಲು ಬೇರೆ ಲಕ್ಷಣವಾಗಿದ್ದುದರಿಂದ ಹುಡುಗಿಯರ ಗೆಳೆತನ ಸಂಪಾದಿಸುವುದು ಅವನಿಗೆ ಬಲು ಸುಲಭವಾಗಿತ್ತು. ಕಾಲೇಜುದಿನಗಳಲ್ಲೇ ಕ್ಲಾಸಿಗೆ ಚಕ್ಕರ್ ಹೊಡೆದು ಸಮೀಪದ ದುರ್ಗಕ್ಕೋ ಹಿರಿಯೂರಿಗೋ ಗೆಳತಿಯೊಂದಿಗೆ ಸಿನಿಮಾಕ್ಕೆ ಹೋಗುತ್ತಿದ್ದುದು ರೂಢಿಯಾಗಿತ್ತು. ಒಬ್ಬ ಹುಡುಗಿಯ ತಂದೆ ಇವರ ಮನೆಗೇ ಬಂದು ಇವರ ತಂದೆಯ ಬಳಿ ದೂರಿ ಮಗಳನ್ನು ಕಾಲೇಜು ಬಿಡಿಸಿದ್ದರು. ಸಿ.ಎ. ಮಾಡಿ ಸ್ವಂತವಾಗಿ ಪ್ರಾಕ್ಟೀಸ್ ಪ್ರಾರಂಭಿಸಿದ ಮೇಲೆ ಅವನ ಆಫೀಸಿನಲ್ಲೇ ಕೆಲಸ ಮಾಡುತ್ತಿದ್ದ ಅನ್ಯ ಜಾತಿಯ ಹುಡುಗಿಯೊಂದಿಗೆ ಸಂಬಂಧವಿತ್ತೆಂಬುದು ಅವನ ತಂದೆ ತಾಯಿಗಳಿಗೂ ಗೊತ್ತಾದ ಮೇಲೆ ಮಗನ ಮೇಲೆ ರೇಗಾಡಿ ಅವಳನ್ನು ಕೆಲಸದಿಂದ ಬಿಡಿಸಿದ್ದರು. ಮದುವೆ ಮಾಡಿಬಿಟ್ಟರೆ ಮಗ ಸರಿಹೋದಾನೆಂದು ಸಂಬಂಧದ ಹುಡುಕಾಟದಲ್ಲಿದ್ದಾಗಲೇ ತಮ್ಮ ದೂರದ ಬಂಧುವಾದ ಗುರುಶಾಂತಪ್ಪನವರ ಮಗಳನ್ನು ಯಾವುದೋ ಒಂದು ಮದುವೆಯಲ್ಲಿ ತುಮಕೂರಿನಲ್ಲಿ ನೋಡಿದ್ದು, ಹುಡುಗಿ ನೋಡಲು ತುಂಬ ಲಕ್ಷಣವಾಗಿ ಎಂ.ಎ. ಮಾಡಿದವಳೆಂದು ತಿಳಿದ ಮೇಲೆ ಅವರಾಗಿಯೇ ಕೇಳಿಕೊಂಡುಬಂದಿದ್ದರು.

ಅಧ್ಯಾಯ-18

ಈ ಸಲ ಶಾಲೆ ಪುನರಾರಂಭವಾಗುತ್ತಿದ್ದಂತೆ ವಸುಂಧರಾ ಇಮ್ಮಡಿಸಿದ ಉತ್ಸಾಹದಿಂದ ಶಾಲೆಯ ಕೆಲಸ ಮಾಡತೊಡಗಿದಳು. ಅವಳು ಬಿ.ಎಡ್.ನಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದರಿಂದ ಅವಳ ಶಾಲೆಯ ಹೆಡ್ ಮೇಡಮ್, ಅವಳ ಸಹೋದ್ಯೋಗಿಗಳು ಮತ್ತು ಶಾಲೆಯ ಆಡಳಿತ ಮಂಡಲಿ ಎಲ್ಲರಿಗೂ ಸಂತೋಷವಾಗಿತ್ತು. ತನ್ನ ಕೆಲಸದಲ್ಲಿ ಅವಳು ತೋರುತ್ತಿದ್ದ ನಿಷ್ಠೆಯೂ ಅವರೆಲ್ಲರಿಗೂ ಪರಿಚಿತವಾದದ್ದೇ. ವಸುಂಧರಾಗೆ 24 ವರ್ಷ ತುಂಬಿ 25ನೇ ವರ್ಷ ನಡೆಯುತ್ತಿತ್ತು. ಶಾಲೆಗೆ ಸೇರಿಸುವಾಗಲೇ ಒಂದು ವರ್ಷ ತಡವಾಗಿ ಸೇರಿಸಿದ್ದರಿಂದ ಬಿ.ಎ. ಮುಗಿಯುವ ಹೊತ್ತಿಗೇ ಅವಳಿಗೆ 22 ತುಂಬಿತ್ತು. ಇನ್ನು ಅವಳ ಮದುವೆ ತಡಮಾಡಬರದೆಂದು ಅಪ್ಪ ಅಮ್ಮ ಯೋಚಿಸಿದರು. ಆದರೆ ಈ ಬಗ್ಗೆ ಅವಳ ಹತ್ತಿರ ಮಾತಾಡಲೇ ಅವರಿಗೆ ಸ್ವಲ್ಪ ಅಳುಕೆನಿಸುತ್ತಿತ್ತು. ಕಾಲೇಜಿನಲ್ಲಿ ನಡೆದು ಹೋದ ಅವಳ ಅಸಫಲ ಪ್ರೇಮ ಪ್ರಕರಣವನ್ನು ಎಲ್ಲರೂ ಹೆಚ್ಚು ಕಡಿಮೆ ಮರೆಯುತ್ತ ಬಂದಿದ್ದರು. ತಾವು ಇನ್ನೂ ಗಟ್ಟಿಯಾಗಿರುವಾಗಲೇ ಒಳ್ಳೇ ಕಡೆ ಗಂಡು ನೋಡಿ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳಬೇಕೆಂದು ಜೋಯಿಸರು ಮತ್ತು ಅವರ ಹೆಂಡತಿ ಮಾತಾಡಿಕೊಂಡರು. ಅಲ್ಲದೆ ತಮ್ಮ ನಿವೃತ್ತಿಗೆ ಉಳಿದಿರುವುದು ಇನ್ನು ಒಂದೇ ವರ್ಷ. ಆ ಕಾರಣ ಆ ಬಗ್ಗೆ ಮಾತಾಡಲು ಹೆಂಡತಿಗೇ ಹೇಳಿದರು.

ಒಂದು ಭಾನುವಾರ ಬೆಳಿಗ್ಗೆ ಜೋಯಿಸರು ತಿಂಡಿ ತಿಂದು ಎಲ್ಲೋ ಹೊರಟರು. ಮಗನೂ ಸ್ನೇಹಿತನ ಮನೆಗೆ ಹೋಗಿ ಬರುತ್ತೇನೆಂದು ಮನೆ ಬಿಟ್ಟಿದ್ದ. ವಸುಂಧರಾ ತನ್ನ ಕೊಠಡಿಯಲ್ಲಿ ಅಂದಿನ ದಿನಪತ್ರಿಕೆಯನ್ನು ವಿರಾಮವಾಗಿ ಓದುತ್ತಾ ಕುಳಿತಿದ್ದಳು. ಸಾವಿತ್ರಮ್ಮನವರು ಹತ್ತಿರ ಬಂದು "ಏನು ಓದುತ್ತ ಇದ್ದೀಯಾ" ಎಂದು ಮಾತಿಗೆ ತೊಡಗಿಕೊಂಡರು. ಇದು ಏನೋ ಮಾತಾಡಲು ಪೀಠಿಕೆ ಎಂದು ವಸುಂಧರಾಗೆ ಅರ್ಥವಾಯಿತು. "ಇನ್ನೊಂದು ತಿಂಗಳು ಕಳೆದರೆ ಹೇಮಾಳಿಗೆ ಮದುವೆ ಆಗಿ ಮೂರು ವರ್ಷ ತುಂಬುತ್ತೆ. ಶಾಮೂ ಮದುವೆ ಆಗಿ ಇದು ಮೂರನೇ ವರ್ಷ. ಸರೋಜಳಿಗೆ ಮೂರು ತಿಂಗಳಂತೆ. ನಿನ್ನ ಕ್ಲಾಸ್ ಮೇಟ್ ಇದ್ದಳಲ್ಲ ಮುಂದಿನ ಬೀದಿ ಆಚಾರ್ಯರ ಮಗಳು ಶ್ಯಾಮಲಾ, ಅವಳ ಮದುವೆ ಆಗಿ ಎರಡು ವರ್ಷ ಆಗಿ ಹೋಯಿತು ನೋಡು" ಎಂದರು. ವಸುಂಧರಾ ನಗುತ್ತ- "ಅದೇನು ಬೆಳಿಗ್ಗೆ ಬೆಳಿಗ್ಗೇನೇ ನಿನಗೆ ಗೊತ್ತಿರೋ ಎಲ್ಲರ ಮದುವೆ ಸ್ಟ್ಯಾಟಿಸ್ಟಿಕ್ಸ್ ಕೊಡುತ್ತಾ ಇದ್ದೀಯ" ಎಂದಳು. "ಯಾಕೆ ಅಂದರೆ ನನ್ನ ಮಗಳು ವಸುಂಧರಾಳೂ ಈ ಪಟ್ಟಿಯಲ್ಲಿರಬೇಕಾಗಿತ್ತಲ್ಲ ಅದಕ್ಕೆ. ನೋಡು ಮಗೂ ನಮಗೂ ವಯಸ್ಸಾಗುತ್ತಾ ಬಂತು. ನನ್ನ ಆರೋಗ್ಯದ ಪರಿಸ್ಥಿತಿ ನಿನಗೇ ಗೊತ್ತಿದೆ.

ಒಂದು ದಿನ ನೆಟ್ಟಗಿದ್ದರೆ ಒಂಬತ್ತು ದಿನ ನೆಟ್ಟಗಿರಲ್ಲ. ನಾನು ಗೊಟಕ್ ಅನ್ನೋದರ ಒಳಗೆ ನಿನ್ನ ಮದುವೆ ಮಾಡಬೇಕು ಅನ್ನುವ ಆತುರ, ಆಸೆ ಇರಲ್ಲವೇನು? ನಿಮ್ಮಪ್ಪ ಇನ್ನೊಂದು ವರ್ಷಕ್ಕೆ ರಿಟೈರ್ ಆಗ್ತಾರೆ. ನೀನು ಸುಮ್ಮನೆ ಹೂಂ ಅನ್ನು. ಒಳ್ಳೊಳ್ಳೇ ಕಡೆಯಿಂದ ಸಂಬಂಧಗಳು ಬರ್ತಾ ಇದ್ದಾವೆ. ನೀನು ಮದುವೆಗೆ ಸಿದ್ಧ ಅಂದರೆ ಇನ್ನು ಎರಡು ತಿಂಗಳೊಳಗೆ ವಾಲಗಾ ಊದಿಸಿಬಿಡಬಹುದು."

ವಸುಂಧರಾ ಒಂದೆರಡು ಕ್ಷಣ ಸುಮ್ಮನಿದ್ದಳು. ಆಮೇಲೆ "ನೋಡಮ್ಮಾ ನಿಮ್ಮ ಭಾವನೆ ನನಗೆ ಅರ್ಥ ಆಗುತ್ತೆ. ಅದರೆ ನನ್ನ ಮನಸ್ಥಿತಿ ಮದುವೆ ಅಂದರೆ ಸಾವಿರ ಮೈಲಿ ಹಿಂದಕ್ಕೆ ಓಡುತ್ತೆ. ನನಗೆ ಸದ್ಯಕ್ಕೆ ಮದುವೆ ಬಗ್ಗೆ ಆಸಕ್ತಿ ಇಲ್ಲ. ನಾನು ಈ ಸಲ ಕರೆಸ್‌ಪಾಂಡೆನ್ಸ್ ಕೋರ್ಸಿನಲ್ಲಿ ಎಂ.ಎ.ಗೆ ಸೇರಿಕೊಳ್ತೀನಿ. ಅದರ ಓದು ಬಿಟ್ಟರೆ ಸದ್ಯಕ್ಕೆ ನನಗೆ ಯಾವುದರ ಬಗ್ಗೇನೂ ಮನಸ್ಸಿಲ್ಲ. ನೀನೇ ಅಪ್ಪನಿಗೂ ಹೇಳಿಬಿಡು. ಈ ವಿಷಯದಲ್ಲಿ ನನಗೆ ಒತ್ತಾಯ ಮಾಡಬೇಡಿ." ಎಂದು ಖಡಾಖಂಡಿತವಾಗಿ ಹೇಳಿಬಿಟ್ಟಳು. ಸಾವಿತ್ರಮ್ಮನವರು– "ಈಗ ಮದುವೆ ಆಗದೆ ಇನ್ನೇನು ಮುದುಕಿ ಆದಮೇಲೆ ಮದುವೆ ಆಗ್ತೀಯಾ? ನೀನು ಸಿದ್ಧ ಇದ್ದರೂ ಮದುವೆ ಆಗಕ್ಕೆ ಮುಂದೆ ಬರೋರು ಯಾರು?" ಎಂದು ಕಣ್ಣೀರು ಹಾಕತೊಡಗಿದರು. "ನೋಡಮ್ಮಾ ನಾನು ಕಣ್ಣೀರು ಬೇಕಾದಷ್ಟು ಸುರಿಸಿದ್ದಾಗಿದೆ. ಅದು ಇನ್ನೂ ಬತ್ತಿಲ್ಲ. ಈಗ ನಿನ್ನ ಕಣ್ಣೀರಿಗೆ ನಾನು ಕರಗಲ್ಲಮ್ಮಾ. ದಯವಿಟ್ಟು ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡಿ" ಎಂದು ನಿಷ್ಠುರವಾಗಿಯೇ ಹೇಳಿಬಿಟ್ಟದ್ದರಿಂದ ಸಾವಿತ್ರಮ್ಮನವರ ಬಾಯಿ ಕಟ್ಟಿತು.

ಸಾವಿತ್ರಮ್ಮನವರು ಮಗಳ ಮಾತನ್ನು ಗಂಡನ ಕಿವಿಗೆ ಹಾಕಿದರು. "ಕಾಲೇಜಿನ ಆ ಘಟನೆಯಿಂದ ಅವಳಿನ್ನೂ ಹೊರಕ್ಕೆ ಬಂದಂತಿಲ್ಲ. ಸದ್ಯಕ್ಕೆ ಅವಳು ಹೇಳಿದಹಾಗೇ ಆಗಲಿ ಬಿಡು" ಎಂದು ಅವರೂ ಸುಮ್ಮನಾದರು.

ವಸುಂಧರಾ ಕನ್ನಡ ಎಂ.ಎ. ಕರೆಸ್ಪಾಂಡೆನ್ಸ್ ಕೋರ್ಸಿಗೆ ಸೇರಿಕೊಂಡಳು. ಒಂದೆರಡು ವಾರಗಳ ನಂತರ ಆ ಸಂಬಂಧದಲ್ಲಿ ಮಮತಾ ಮೇಡಮ್ ಹೇಳಿದ್ದ ಆ ಸಂಸ್ಥೆಯಲ್ಲೇ ಕೆಲಸ ಮಾಡುತ್ತಿದ್ದ ಗಿರಿಜಾ ಮೇಡಮ್ ಅವರನ್ನೂ ಫೋನ್ ಮೂಲಕ ಸಂಪರ್ಕಿಸಿ ಮಮತಾ ಅವರ ಹೆಸರು ಹೇಳಿದಳು. ಅವರು "ಪಿ.ಯು. ಮೌಲ್ಯಮಾಪನಕ್ಕೆ ಇಲ್ಲಿಗೆ ಬಂದಿದ್ದಾಗ ಮಮತ ಸಿಕ್ಕಿದ್ದರು. ನೀವು ಸಂಪರ್ಕಿಸಬಹುದು ಅಂತಲೂ ಹೇಳಿದ್ದರು. ನಿಮ್ಮಂಥ ಬುದ್ಧಿವಂತರಿಗೆ ಈ ಕೋರ್ಸ್ ಏನೂ ಕಷ್ಟವಾಗಲ್ಲ. ವರ್ಷದಲ್ಲಿ ಒಂದು ಹದಿನೈದು ದಿನ ಕಾಂಟ್ಯಾಕ್ಟ್ ಕ್ಲಾಸಸ್ ಅಂತ ಇರುತ್ತೆ. ಆಗ ಇಲ್ಲೇ ಬಂದು ಇರಬೇಕಾಗುತ್ತೆ. ಅದಕ್ಕೆಲ್ಲಾ ವ್ಯವಸ್ಥೆ ಮಾಡಬಹುದು. ಇಷ್ಟರಲ್ಲೇ ನಿಮಗೆ ಸಿಲಬಸ್ ಮತ್ತು ಪಾಠಗಳ ಮೊದಲ ಕಂತು ಬರುತ್ತೆ. ಏನಾದರೂ ಅನುಮಾನಗಳಿದ್ದರೆ ಕೇಳಿ. ಮಧ್ಯೆ ಅನುಕೂಲವಾದಾಗ ಮಮತಾ ಮೇಡಮ್ ಅವರನ್ನೂ ಭೇಟಿಮಾಡಿ" ಎಂದು ಹೇಳಿದರು.

ಅವರು ಹೇಳಿದಂತೆ ಒಂದೆರಡು ತಿಂಗಳ ನಂತರ ಕೋರ್ಸಿಗೆ ಸಂಬಂಧಿಸಿದ

ಸಿದ್ಧಪಡಿಸಿದ ಪಾಠಗಳು ಅಂಚೆಯಲ್ಲಿ ಬಂದವು. ಅದರ ಜೊತೆಯಲ್ಲಿ ಎರಡು ವರ್ಷದ ಎಂ.ಎ. ಕೋರ್ಸಿನ ಪೂರ್ಣ ಪಠ್ಯಕ್ರಮ ಮತ್ತು ಓದಬೇಕಾದ ಪಠ್ಯಪುಸ್ತಕಗಳು, ಪರಾಮರ್ಶಿಸಬೇಕಾದ ಪುಸ್ತಕಗಳು ಎಲ್ಲದರ ವಿವರ ಕೈಸೇರಿತು. ಹೇಗೂ ಭಾರತಿಯ ಪತ್ರ ರೂಪದ ಮದುವೆಯ ಆಹ್ವಾನ ಪತ್ರಿಕೆ ಬಂದಿತ್ತು. ಅದು ಇದ್ದದ್ದು ಮುಂದಿನ ಭಾನುವಾರವೇ. ಅದಕ್ಕೆ ಲಗತ್ತಾಗಿ ಶನಿವಾರ ಮತ್ತು ಸೋಮವಾರ ರಜೆ ಹಾಕಿ ತಾನು ಓದಬೇಕಾಗಿರುವ ಪಠ್ಯಪುಸ್ತಕಗಳ ಪಟ್ಟಿ ಮತ್ತು ಪರಾಮರ್ಶಿಸಬೇಕಾದ ಪುಸ್ತಕಗಳ ಪಟ್ಟಿಗಳೊಂದಿಗೆ ಇದೇ ಸಂದರ್ಭದಲ್ಲಿ ಮಮತಾ ಮೇಡಮ್ ಅವರನ್ನೂ ಕಂಡುಬರುವುದೆಂದು ಮುಂಚೆಯೇ ನಿರ್ಧರಿಸಿದಳು. ಆ ಬಗ್ಗೆ ಫೋನ್ ಮಾಡಿ ಮೇಡಮ್‌ಗೆ ಹೇಳಿಯೂ ಹೇಳಿದಳು.

ವಿದ್ಯಾ ಅವರಿಗೆ ಫೋನ್ ಮಾಡಿ ತಾನು ಬರುವ ವಿಷಯ ತಿಳಿಸಿದಳು. ಅವರು "ನೀನು ಬಂದು ನಮ್ಮ ಕೊಠಡಿಯಲ್ಲೇ ಉಳಿದುಕೊಳ್ಳಲು ಏನೂ ತೊಂದರೆ ಇಲ್ಲ. ಕಾರಣ ಭಾರತಿ ಇನ್ನೂ ಅಧಿಕೃತವಾಗಿ ಪಿ.ಜಿ. ಖಾಲಿಮಾಡಿಲ್ಲ. ಮದುವೆಯ ನಂತರ ಈಗಾಗಲೇ ಬನಶಂಕರಿಯಲ್ಲಿ ನೋಡಿ ಗೊತ್ತು ಮಾಡಿರುವ ಬಾಡಿಗೆ ಮನೆಗೆ ಹೋಗುತ್ತಾಳೆ. ಮದುವೆಗೆ ಅವರ ಅಮ್ಮ ಮತ್ತು ಮಲತಮ್ಮ ಬರಲಿದ್ದು ಮೂರೂ ಜನರಿಗೋಸ್ಕರ ಒಂದು ದೊಡ್ಡ ಹೋಟೆಲಿನಲ್ಲಿ ನಾಲ್ಕು ದಿನಗಳಿಗಾಗಿ ಒಂದು ದೊಡ್ಡ ರೂಮ್ ಹಿಡಿದಿದ್ದಾಳೆ. ಅವಳು ಶುಕ್ರವಾರ ಬೆಳಿಗ್ಗೆಯೇ ಇಲ್ಲಿಂದ ಹೋಟೆಲ್ ರೂಮಿಗೆ ಹೋಗಲಿದ್ದಾಳೆ. ಅವಳ ಜಾಗ ಇದ್ದೇ ಇರುತ್ತೆ. ನಿನ್ನ ಜಾಗಕ್ಕೆ ಮಧ್ಯ ವಯಸ್ಸಿನ ಹೆಂಗಸೊಬ್ಬರು ಬಂದಿದ್ದಾರೆಂದು ಹೇಳಿದರು.

ಶನಿವಾರ ಬೆಳಿಗ್ಗೆ ತಿಂಡಿ ತಿಂದ ನಂತರ ಹೊರಟು ಮಲ್ಲೇಶ್ವರಮ್‌ನ ತನ್ನ ಹಿಂದಿನ ರೂಮಿಗೆ ಮಧ್ಯಾಹ್ನದ ಹೊತ್ತಿಗೆ ತಲುಪಿದಳು. ಅಂದು ವಿದ್ಯಾ ಬೇಕೆಂದೇ ರಾತ್ರಿಯ ಶಿಫ್ಟ್ ಹಾಕಿಸಿಕೊಂಡಿದ್ದರಿಂದ ವಸುಂಧರಾಳಿಗಾಗಿ ರೂಮಿನಲ್ಲೇ ಕಾಯುತ್ತಿದ್ದಳು. ವಸುಂಧರಾ ಬಂದ ನಂತರ ಸ್ವಲ್ಪ ಹೊತ್ತು ಮಾತಾಡುತ್ತಿದ್ದು ಇಬ್ಬರೂ ಡೈನಿಂಗ್ ಹಾಲ್‌ಗೆ ಹೋಗಿ ಊಟ ಮುಗಿಸಿದರು. ಊಟದ ನಂತರ ಒಂದರ್ಧ ಗಂಟೆ ವಿಶ್ರಾಂತಿ ತೆಗೆದುಕೊಂಡು ಮಮತಾ ಮೇಡಮ್ ಅವರನ್ನು ನೋಡಿ ಬರುತ್ತೇನೆಂದು ಹೊರಟಳು. "ಸಂಜೆ ನೀನು ಬಂದಾಗ ನಾನು ಇರುವುದಿಲ್ಲ. ಬಹುಶಃ ನೀನು ಬಂದ ಮೇಲೆ ನಿನ್ನ ಜಾಗಕ್ಕೆ ಬಂದಿರುವ ಶೀಲಾ ಅವರು ಬರುತ್ತಾರೆ. ನೀನು ಬರುತ್ತೀ ಎಂದು ಅವರಿಗೆ ಹೇಳಿದ್ದೇನೆ. ನೀನೇ ಅವರ ಪರಿಚಯ ಮಾಡಿಕೋ" ಎಂದಳು. ಮಮತಾ ಅವರ ಮನೆಗೆ ಹೋದಾಗ ವಸುಂಧರಾ ಬರುವುದು ಗೊತ್ತಿದ್ದರಿಂದ ಮಮತಾ ಇವಳು ಹೋಗುವ ಹೊತ್ತಿಗಾಗಲೇ ಕಾಲೇಜಿನಿಂದ ಬಂದಿದ್ದರು. ಹೋದ ಕೂಡಲೇ ತಾವೇ ಟೀ ತಂದುಕೊಟ್ಟರು. ಬಿ.ಎಡ್.ನಲ್ಲಿ ಪ್ರಥಮ ದರ್ಜೆ ಬಂದದ್ದಕ್ಕೆ 'ಬಿಲೇಟೆಡ್ ಕಂಗ್ರಾಜುಲೇಷನ್ಸ್' ಎಂದು ನಕ್ಕರು. ಅವಳ ಕೈಯಿಂದ ಪಠ್ಯ ಕ್ರಮ ಮತ್ತು ಪುಸ್ತಕಗಳ ಪಟ್ಟಿಯನ್ನು ಈಸಿಕೊಂಡು ನೋಡಿದರು. "ಇದರಲ್ಲಿ ಅರ್ಧದಷ್ಟು ಪುಸ್ತಕಗಳು ನನ್ನ ಹತ್ತಿರ ಇವೆ. ಇನ್ನು ಕೆಲವು ನಮ್ಮ ಲೈಬ್ರರಿಯಲ್ಲಿ ಸಿಕ್ಕುತ್ತವೆ. ಸ್ವಾಮಿ ಮೇಷ್ಟರಿಗೂ ಕೇಳಿ

ನೋಡ್ತೀನಿ. ಒಂದು ನಾಲ್ಕೈದು ಈಚೆಗೆ ಪ್ರಕಟವಾದ ಪುಸ್ತಕಗಳನ್ನು ಮಾತ್ರ ನೀನು ಕೊಳ್ಳಬೇಕಾಗಿ ಬರಬಹುದು" ಎಂದರು. ಅಂಚೆ ತೆರಪಿನ ಸಂಸ್ಥೆಯವರು ಕಳಿಸಿದ ಪಾಠಗಳತ್ತಲೂ ಒಮ್ಮೆ ಕಣ್ಣು ಹಾಯಿಸಿದರು. "ಇದಿಷ್ಟನ್ನೇ ನೆಚ್ಚಿಕೊಂಡರಾಗುವುದಿಲ್ಲ. ಇವನ್ನು ಬಳಸಿಕೊಂಡು ನೀನು ನಿನ್ನದೇ ಆದ ನೋಟ್ಸ್ ಅನ್ನು ಮಾಡಿಕೊಳ್ಳಬೇಕು" ಎಂದು ಸೂಚನೆ ಕೊಟ್ಟರು. "ನೀನು ಸೋಮವಾರ ರಜೆ ಹಾಕಿದ್ದೀಯಲ್ಲವೆ? ಹಾಗಿದ್ದರೆ ಒಂದು ಕೆಲಸ ಮಾಡು. ನನ್ನ ಹತ್ತಿರ ಇರುವ ಪುಸ್ತಕಗಳನ್ನು ನಾಳೆಯೇ ನೋಡಿಟ್ಟಿರುತ್ತೇನೆ. ಸೋಮವಾರ ಮಧ್ಯಾಹ್ನ ಮೂರು ಮೂರುವರೆಯ ಹೊತ್ತಿಗೆ ಇಲ್ಲಿಗೆ ಬಂದುಬಿಡು. ಕಾಲೇಜಿನ ಲೈಬ್ರರಿಯಲ್ಲಿ ಸಿಕ್ಕುವ ಪುಸ್ತಕಗಳನ್ನು ಮತ್ತು ಸ್ವಾಮಿ ಮೇಷ್ಟರು ಕೊಡುವ ಪುಸ್ತಕಗಳನ್ನು ತಂದಿಟ್ಟಿರುತ್ತೇನೆ. ನೀನು 5 ಗಂಟೆಗೆ ಬಸ್ ಹತ್ತಿದರೂ ಏಳೂವರೆ ಎಂಟರ ಹೊತ್ತಿಗೆಲ್ಲಾ ನಿಮ್ಮೂರಿನಲ್ಲಿರಬಹುದು" ಎಂದರು. ಅವರಿಗೆ ಥ್ಯಾಂಕ್ಸ್ ಹೇಳಿ ರೂಮಿಗೆ ಹಿಂದಿರುಗಿದಳು.

ವಸುಂಧರಾ ಪಿ.ಜಿ. ತಲುಪಿದ ಸುಮಾರು ಒಂದು ಗಂಟೆಯ ನಂತರ ಏಳು ಗಂಟೆಯ ಸುಮಾರಿಗೆ ಶೀಲಾ ಬಂದರು. ಆಕೆ ಸುಮಾರು 40–42ರ ಪ್ರಾಯದವರು. ಎತ್ತರದ, ಆ ಎತ್ತರಕ್ಕೆ ತಕ್ಕ ಗಾತ್ರದ ಗೌರ ವರ್ಣದ ಹೆಂಗಸು. ವಸುಂಧರಾ ತಾನೇ ತನ್ನ ಪರಿಚಯ ಮಾಡಿಕೊಂಡಳು. ಅವರ ಊರು ಹಾಸನವಂತೆ. ಆಕೆ ಸರ್ಕಾರೀ ಲೇಬರ್ ಕಮೀಷನರ್ ಆಫೀಸಿನಲ್ಲಿ ಸೂಪರಿಂಟೆಂಡೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರ ಒಬ್ಬನೇ ಮಗ ಹಾಸನದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆರನೇ ಸೆಮಿಸ್ಟರ್‌ನಲ್ಲಿ ಓದುತ್ತಿದ್ದಾನಂತೆ. ಇವರಿಗೆ ಬೆಂಗಳೂರಿಗೆ ವರ್ಗವಾದ್ದರಿಂದ ಅವನನ್ನು ಹಾಸ್ಟೆಲ್ನಲ್ಲಿ ಇರಲು ವ್ಯವಸ್ಥೆ ಮಾಡಿ, ಭದ್ರತೆಯ ದೃಷ್ಟಿಯಿಂದ ಪಿ.ಜಿ. ಯಲ್ಲಿರುವುದೇ ಸರಿ ಎಂದು ಇಲ್ಲಿಗೆ ಈಗ್ಗೆ ಒಂದು ತಿಂಗಳ ಹಿಂದೆ ಬಂದರಂತೆ. ಮಗನ ಓದು ಮುಗಿದ ಮೇಲೆ ಅವನು ಕೆಲಸಕ್ಕೆ ಸೇರುತ್ತಾನೋ, ಮುಂದೆ ಓದುತ್ತಾನೋ ನೋಡಿಕೊಂಡು ಮನೆಮಾಡುವ ಉದ್ದೇಶವಿದೆಯಂತೆ.

ರಾತ್ರಿ ಡ್ಯೂಟಿ ಮುಗಿಸಿಕೊಂಡು ವಿದ್ಯಾ ಬೆಳಿಗ್ಗೆ ಬೇಗನೆ ಬಂದರು. ಅದುವರೆಗೆ ವಸುಂಧರಾ ಎದ್ದು ಸ್ನಾನಾದಿಗಳನ್ನು ಮುಗಿಸಿದ್ದಳು. ಇಬ್ಬರೂ ಒಟ್ಟಿಗೇ ತಿಂಡಿ ತಿಂದು ಮದುವೆಗೆ ಹೊರಡಲು ಸಿದ್ಧರಾದರು. ಶೀಲಾ ತಾನು ದೂರದ ಬಂಧುಗಳೊಬ್ಬರ ಮನೆಗೆ ಹೋಗಬೇಕಾಗಿದೆಯೆಂದು ಹೇಳಿ, ಭಾರತಿಗೆ ನನ್ನ ವಿಶ್ ತಿಳಿಸಿಬಿಡಿ ಎಂದು ಹೇಳಿದರು.

ಮದುವೆ ರಾಜಾಜಿನಗರದ ಒಂದು ಕನ್ವೆನ್ಷನ್ ಹಾಲ್‌ನಲ್ಲಿ ಏರ್ಪಾಡಾಗಿತ್ತು. ಇವರು ಅಲ್ಲಿಗೆ ತಲುಪಿದಾಗ ಮುಹೂರ್ತಕ್ಕೆ ಇನ್ನೂ ಅರ್ಧಗಂಟೆ ಇತ್ತು. ಮದುವೆಗೆಂದು ಬಂದಿದ್ದವರು ಎಲ್ಲಾ ಸೇರಿ ಐವತ್ತು ಜನಕ್ಕಿಂತ ಹೆಚ್ಚಿರಲಿಲ್ಲ.

ಮದುವೆಯ ವೇದಿಕೆಯ ಮೇಲೆ ಭಾರತಿ ಮತ್ತು ಅವಳ ಕೈಹಿಡಿಯಲಿರುವ ಗೆಳೆಯ ಕುಳಿತಿದ್ದರು. ಭಾರತಿಯ ಕೈಹಿಡಿಯಲಿರುವ ಹುಡುಗ ಭಾರತಿಗಿಂತ ಸಾಕಷ್ಟು

ಎತ್ತರವಿದ್ದ. ಕಣ್ಣಿಗೆ ಕನ್ನಡಕ ಧರಿಸಿದ್ದು ತುಂಬ ಲಕ್ಷಣವಾಗಿದ್ದ. ವಧುವಿನ ತಾಯಿ ಮತ್ತು ವರನ ತಂದೆ ತಾಯಿಯರು ಕೂಡ ವೇದಿಕೆಯ ಮೇಲಿದ್ದರು. ಆರ್ಯ ಸಮಾಜದ ಕಡೆಯಿಂದ ಬಂದಿದ್ದ ಹಿರಿಯರೊಬ್ಬರು ಪಂಚೆ ಉಟ್ಟು ಶಲ್ಯ ಹೊದ್ದು ವೇದಿಕೆಯ ಮೇಲಿದ್ದರು. ಸಾಂಪ್ರದಾಯಿಕ ಮದುವೆಗಳಲ್ಲಿರುವಂತೆ ಕಾಶಿಯಾತ್ರೆಯಾಗಲಿ, ಗಂಡಿನ ಪಾದಗಳನ್ನು ಹೆಣ್ಣಿನ ತಂದೆ ತೊಳೆಯುವ ವಿಧಿಯಾಗಲಿ ಯಾವುದೂ ಇರಲಿಲ್ಲ. ತಮ್ಮ ತಂದೆ ಮಾಡಿಸುತ್ತಿದ್ದ ಮತ್ತು ತಮ್ಮದೇ ಬಂಧು ಬಳಗಗಳಲ್ಲಿ ನಡೆಯುತ್ತಿದ್ದ ಮದುವೆಯ ಸಮಾರಂಭಗಳನ್ನು ನೋಡಿದ್ದ ವಸುಂಧರಾಗೆ ಈ ಮದುವೆಯ ಪ್ರಕ್ರಿಯೆ ನೋಡಿ ಆಶ್ಚರ್ಯವೂ ಸಂತೋಷವೂ ಆದುವು. ಹಿಂದೂ ಮದುವೆಗಳ ಬಹುಮುಖ್ಯ ಅಂಗಗಳಾದ ಪಾಣಿಗ್ರಹಣ, ಲಾಜಾ ಹೋಮ ಮತ್ತು ಸಪ್ತಪದಿಗಳನ್ನು ಮತ್ತು ಆಯ್ದ ಕೆಲವು ಮಂತ್ರಗಳನ್ನು ಮಾತ್ರ ಉಳಿಸಿಕೊಂಡಂತಿತ್ತು. ಮದುವೆ ಮಾಡಿಸಲು ಆರ್ಯ ಸಮಾಜದ ಪರವಾಗಿ ಬಂದಿದ್ದ ಪ್ರತಿನಿಧಿಯು ಮಂತ್ರಗಳನ್ನು ಉಚ್ಚರಿಸುವುದರ ಜೊತೆಗೆ ಅವುಗಳ ಅರ್ಥ ವಿವರಗಳನ್ನೂ ನೀಡಿದರು. ಪಾಣಿಗ್ರಹಣ, ಸಪ್ತಪದಿ ಮತ್ತು ಲಾಜಾ ಹೋಮ ಇವು ಮೂರೂ ವಿಧಿಗಳನ್ನು ನಡೆಸಿದರು. ವರ ಮತ್ತು ವಧು ಪರಸ್ಪರರ ಕೈಹಿಡಿಯುವುದೇ ಪಾಣಿಗ್ರಹಣ. "ಸೌಭಾಗ್ಯದ ಪ್ರಾಪ್ತಿಗಾಗಿ ನಾನು ನಿನ್ನ ಕೈ ಹಿಡಿಯುತ್ತಿದ್ದೇನೆ. ನೀನು ಧರ್ಮಾನುಸಾರ ನನ್ನ ಪತ್ನಿ. ಈಕೆಯನ್ನು ದೇವರೇ ನನಗೆ ಕೃಪೆಮಾಡಿದ್ದಾನೆ. ಈಕೆಗೆ ಗೊತ್ತಿಲ್ಲದಂತೆ ಯಾವ ಸುಖವನ್ನೂ ಅನುಭವಿಸುವುದಿಲ್ಲ" ಎಂಬ ಅರ್ಥದ ಮಂತ್ರಗಳನ್ನು ವರನ ಬಾಯಿಂದ ಹೇಳಿಸಿದರು. ಮುಂದಿನ ವಿಧಿಯಾದ ಲಾಜಾ ಹೋಮದಲ್ಲಿ ಗಂಡು ಹೆಣ್ಣು ಕಂಕಣ ಕಟ್ಟಿದ ತಮ್ಮ ಅಂಗೈಗಳನ್ನು ಒಟ್ಟಿಗೆ ಜೋಡಿಸುತ್ತಾರೆ. ಅದರಲ್ಲಿ ಬತ್ತದ ಅರಳನ್ನು ಹಾಕಲಾಗುತ್ತದೆ. ತುಪ್ಪ ಹಾಕುತ್ತ ಹೆಣ್ಣು ಮಂತ್ರಗಳನ್ನು ಹೇಳುತ್ತಾಳೆ. ವಧೂ ವರರಿಬ್ಬರೂ ಅಂಗೈಯಲ್ಲಿರುವ ಅರಳನ್ನು ಒಟ್ಟಾಗಿಯೇ ಅಗ್ನಿಗೆ ಅರ್ಪಿಸುತ್ತಾರೆ. ನನ್ನ ಗಂಡ ಆಯುಷ್ಮಾನ್ ಆಗಲಿ. ನನ್ನ ಪಿತೃ ಕುಲದವರೆಲ್ಲರೂ ವರ್ಧಿಸಲಿ ಎಂಬ ಅರ್ಥದ ಮಂತ್ರವನ್ನು ವಧು ಉಚ್ಚರಿಸುತ್ತಾಳೆ. ಅದರ ಮುಂದಿನ ಮುಖ್ಯ ವಿಧಿಯೇ ಸಪ್ತಪದಿ. ಗಂಡನ ಜೊತೆಯಲ್ಲಿ ಹೆಂಡತಿ ಹೋಮಕುಂಡದ ಸುತ್ತ ಏಳು ಹೆಜ್ಜೆಗಳನ್ನು ಜೊತೆಯಾಗಿ ಇಡುವುದೇ ಸಪ್ತಪದಿ. ಒಂದೊಂದು ಹೆಜ್ಜೆಗೂ ಒಂದೊಂದು ಮಂತ್ರ ಹೇಳುತ್ತಾರೆ. 'ಸಖಾಸಪ್ತಪದೀಭವ' ಎಂಬುದೇ ಏಳನೆಯ ಹೆಜ್ಜೆ. ಅದರ ಅರ್ಥ 'ಬಾಳಗೆಳತಿಯಾಗಿ ಏಳನೆಯ ಹೆಜ್ಜೆಯನ್ನು ಇಡುವವಳಾಗು' ಎಂದು.

ಅನ್ನಾಹಾರಗಳ ಸಮೃದ್ಧಿಗಾಗಿ ನನ್ನ ಬದುಕಿನಲ್ಲಿ ಒಂದನೆಯ ಹೆಜ್ಜೆಯನ್ನು ಇಡು (ಓಂ ಇಷೇ ಏಕಪದೀಭವ)

ಶಾರೀರಿಕ ಬಲದ ಸಲುವಾಗಿ ಎರಡನೆಯ ಹೆಜೆಯನ್ನು ಇಡು (ಓಂ ಊರ್ಜೇ ದ್ವಿಪದೀಭವ)

ಗೃಹಸ್ವಾಮಿಯ ಐಶ್ವರ್ಯದ ಪುಷ್ಟಿಗಾಗಿ ಮೂರನೆಯ ಹೆಜ್ಜೆಯನ್ನುಇಡು (ಓಂ ರಾಯಸ್ಪೋಷಾಯ ತ್ರಿಪದೀಭವ)

ಗೃಹ ಸುಖ ಮತ್ತು ಶಾಂತಿಯನ್ನು ಪಡೆಯುವ ಸಲುವಾಗಿ ನಾಲ್ಕನೆಯ ಹೆಜ್ಜೆಯನ್ನು ಇಡು (ಓಂ ಮಯೋಭವ್ಯಾಯ ಚತುಷ್ಪದೀಭವ)

ಸಂತತಿಗೋಸುಗ ಐದನೆಯ ಹೆಜ್ಜೆಯನ್ನು ಇಡು (ಓಂ ಪ್ರಜಾಭ್ಯಃ ಪಂಚಪದೀಭವ)

ಋತುಗಳಿಗೆ ತಕ್ಕ ಜೀವನ ಚರ್ಯಾ ಪಾಲನೆಗಾಗಿ ಆರನೆಯ ಹೆಜ್ಜೆ ಇಡು (ಓಂ ಋತುಭ್ಯಃ ಷಟ್‌ಪದೀಭವ)

ಬಾಳ ಗೆಳತಿಯಾಗಿ ಏಳನೆಯ ಹೆಜ್ಜೆಯನ್ನು ಇಡು. (ಓಂ ಸಖಾ ಸಪ್ತಪದೀಭವ)

ಪತಿಪತ್ನಿಯರ ನಡುವೆ ಇರಬೇಕಾದ ಭಾವ ಮತ್ತು ಸಂಬಂಧ ಗೆಳೆತನದ್ದು. ಮಮತಾ ಮೇಡಮ್ ಕಾಲೇಜಿನಲ್ಲಿ ಪು.ತಿ.ನ. ಅವರ 'ಅಹಲ್ಯೆ' ಗೀತನಾಟಕ ಪಾಠ ಮಾಡುತ್ತಿದ್ದಾಗ ಪ್ರಾಸಂಗಿಕವಾಗಿ ನಮ್ಮ ದೇಶದಲ್ಲಿ ಹೆಣ್ಣನ್ನು ಗಂಡು ತನ್ನ ಭೋಗದ ವಸ್ತುವಾಗಿ ಕಂಡು ತನ್ನ ಆಜ್ಞಾಪಾಲಕಳಂತೆ ನಡೆಸಿಕೊಳುತ್ತಿರುತ್ತಾ ಬಂದಿರುವುದೇ ಹೆಚ್ಚು. ಹೆಂಡತಿಯಾದವಳು ಗಂಡನಿಗೆ ವಿಧೇಯಳಾಗಿದ್ದು, ಪತಿಗೆ ನಿಷ್ಠೆಯಿಂದಿರಬೇಕು ಎಂದೇ ಹಿಂದೂ ಧರ್ಮ ಹೇಳುತ್ತದೆ. ಆದರೆ ಪತಿಯಾದವನೂ ಪತ್ನಿಯ ವಿಷಯಕ್ಕೆ ಅದೇ ರೀತಿ ನಿಷ್ಠೆಯಿಂದಿರಬೇಕು ಎಂದು ವಿಧಿಸಿದಂತೆ ಕಾಣುವುದಿಲ್ಲ. ರಾಜರುಗಳಷ್ಟೇ ಏಕೆ ಸಾಮಾನ್ಯ ಪುರುಷರೂ ಬಹುಪತ್ನಿಯರನ್ನು ಹೊಂದಿರುವುದು ಅಧರ್ಮವೆಂದು ಎಲ್ಲಿಯೂ ಹೇಳಿದಂತಿಲ್ಲ. ಆದರೆ ಆಧುನಿಕ ಸ್ತ್ರೀವಾದ ಇದನ್ನು ವಿರೋಧಿಸಿ ಗಂಡು ಹೆಣ್ಣು ಪರಸ್ಪರ ಸಮಾನರಂತೆ ಮಿತ್ರರಂತೆ ನಡೆದುಕೊಳ್ಳಬೇಕೆಂದು ಹೇಳುತ್ತದೆ ಎಂದು ಹೇಳಿದ್ದು ವಸುಂಧರಾಗೆ ನೆನಪಾಯಿತು.

ಆರ್ಯ ಸಮಾಜದವರು ಹೇಳಿದ ಇನ್ನೊಂದು ಸಂಗತಿ ಎಂದರೆ ಮೂಲ ವೈದಿಕ ವಿವಾಹ ವಿಧಿಯಲ್ಲಿ ಗಂಡು ಹೆಣ್ಣಿಗೆ ತಾಳಿಕಟ್ಟುವ ಸಂಪ್ರದಾಯವಿಲ್ಲವಾದರೂ ಸಾವಿರಾರು ವರ್ಷಗಳಿಂದ ಇದು ರೂಢಿಯಲ್ಲಿ ಬಂದು ಬಿಟ್ಟಿರುವುದರಿಂದ ವಧೂವರರ ತಂದೆತಾಯಿಗಳ ಒತ್ತಾಯದ ಕಾರಣದಿಂದ ತಾಳಿಕಟ್ಟುವ ಅವಕಾಶವನ್ನು ಒದಗಿಸಿದೆ ಎಂದರು.

ಅವರು ಹೇಳಿದ ಮತ್ತೊಂದು ಮಾತು: ಸಾಮಾನ್ಯವಾಗಿ ಬಳಕೆಯಲ್ಲಿರುವ 'ಕನ್ಯಾದಾನದ' ಮಾತು ಇಲ್ಲಿ ಇಲ್ಲ. ತಮ್ಮ ಮಗ ಗೃಹಸ್ಥಾಶ್ರಮದಲ್ಲಿ ನೆಲೆ ನಿಲ್ಲಲು ನಿಮ್ಮ ಮನೆಬಾಗಿಲಿಗೆ ಮಗಳನ್ನು ಕೇಳಿಕೊಂಡು ಬಂದಿದ್ದಾರೆ. ಅವರನ್ನು ಸ್ವಾಗತಿಸಿ ವರನಿಗೆ ನೀರುಕೊಡಿ' ಎಂದು ಹೇಳಿದರು. ವಧುವು ವರನಿಗೆ ನೀರು ತಂದು ಕೊಡುತ್ತಾಳೆ. ಆತ ಕೈಕಾಲು ಮುಖ ತೊಳೆದುಕೊಂಡು ಒಳಗೆ ಬರುತ್ತಾನೆ. ಮಣೆಯ ಮೇಲೆ ಕುಳಿತೇ ಈ ಎಲ್ಲ ವಿಧಿಗಳನ್ನೂ ಸಾಂಕೇತಿಕವಾಗಿ ಮಾಡಿ ಮುಗಿಸಿದರು.

ವಧೂ ವರರಿಬ್ಬರೂ ಒಟ್ಟಾಗಿ ಹೇಳುವ ಮಂತ್ರ:

ಓಂ ಸಮಂಜಂತು ವಿಶ್ವೇ ದೇವಾಃ ಸಂ ಆಪಃ ಹೃದಯಾನಿ ನೌ

ಸಂ ಮಾತರಿಶ್ವಾ ಸಂಧಾತಾ ಸಮುದೇಷ್ಟ್ರೀ ದದಾತು ನಃ(ನೌ)(ವಿಶ್ವ ದೇವತೆಗಳು

ನಮ್ಮ ಹೃದಯಗಳನ್ನು ಕೂಡಿಸಲಿ. .. ಇವರೆಲ್ಲ ನಮ್ಮನ್ನು ಒಟ್ಟಾಗಿ ಇಟ್ಟಿರಲಿ.

ಪತಿಗೃಹಕ್ಕೆ ಹೊರಟ ವಧುವಿಗೆ ಹೇಳುವ ಮಾತು(ಮಂತ್ರ): ಓಂ ಸಮ್ರಾಜ್ಞೀ ಶ್ವಶುರೇ ಭವ ಸಮ್ರಾಜ್ಞೀ ಶ್ವಶ್ರ್ವಾ ಭವ ನನಂದಾರೀ ಸಮ್ರಾಜ್ಞೀ ಭವ ಸಮ್ರಾಜ್ಞೀ ಅಧಿದೇವ್ರೇಷು ಸ್ವಾಹಾ. (ಋಗ್ವೇದದ ಮಂತ್ರ.)

ಈ ಎಲ್ಲ ವಿಧಿಗಳೂ ಒಂದು ಒಂದೂವರೆ ಗಂಟೆಗಳ ಅವಧಿಯಲ್ಲಿ ಮುಕ್ತಾಯವಾದುವು. ಆಮೇಲೆ ಎಲ್ಲರೂ ಒಟ್ಟಿಗೇ ಕುಳಿತು ಊಟ ಮಾಡಿದರು. ಊಟವೂ ಭಾರಿಯದೇನಾಗಿರಲಿಲ್ಲ.

ವಸುಂಧರಾ ಮತ್ತು ವಿದ್ಯಾ ಹೊಸದಾಗಿ ಮದುವೆಯಾದ ದಂಪತಿಗಳಿಗೆ ಸುಖೀ ದಾಂಪತ್ಯದ ಬದುಕನ್ನು ಹಾರೈಸಿ ಅಲ್ಲಿಂದ ಹೊರಟರು. ಹೊರಡುವ ಮುನ್ನ ಭಾರತಿ ವಸೂ ಹತ್ತಿರ ಬಂದು ತನ್ನ ನೆನಪಿಗಾಗಿ ತನ್ನ ಹೆಸರಿನ ಸೂಚಕವಾದ 'ಬಿ' ಅಕ್ಷರವುಳ್ಳ ಕಿರು ಉಂಗುರವನ್ನು ಅವಳ ಬೆರಳಿಗೆ ತೊಡಿಸಿದಳು.

ಸೋಮವಾರ ಬೆಳಿಗ್ಗೆ ತಿಂಡಿ ತಿಂದ ನಂತರದಲ್ಲಿ ವಸುಂಧರಾ ವಿದ್ಯಾಗೆ ತಾನು ಕೆಲವು ಪುಸ್ತಕ ಕೊಳ್ಳಲು ಮೆಜೆಸ್ಟಿಕ್ ಕಡೆ ಹೋಗಿ ಬರುವುದಾಗಿಯೂ ಮಧ್ಯಾಹ್ನ ಊಟ ಮಾಡಿಕೊಂಡು ಮಮತಾ ಮೇಡಮ್ ಮನೆಗೆ ಹೋಗಿ ಅಲ್ಲಿಂದಲೇ ತುಮಕೂರಿಗೆ ಹೊರಡುವುದಾಗಿಯು ಹೇಳಿದಳು. ಮಮತಾ ಮೇಡಮ್ ತಮ್ಮ ಬಳಿ ಸಿಗುವುದು ಅನುಮಾನ ಎಂದು ಹೇಳಿದ್ದ ನಾಲ್ಕೈದು ಪುಸ್ತಕಗಳನ್ನು ತರಲೆಂದು ಸಪ್ನಾ ಬುಕ್ ಹೌಸ್, ಐ.ಬಿ.ಎಚ್. ಕಡೆ ಹೊರಟಳು. ಅಲ್ಲಿಯೂ ಅವಳಿಗೆ ಒಂದು ಪುಸ್ತಕ ಮಾತ್ರ ಸಿಗಲಿಲ್ಲ. ಆಮೇಲೆ ನೋಡಿದರಾಯಿತೆಂದುಕೊಂಡು ಆಗಲೇ ಊಟದ ಸಮಯವಾಗಿತ್ತಾದ್ದರಿಂದ ಹೋಟೆಲ್‌ನಲ್ಲಿ ಊಟವನ್ನೂ ಮುಗಿಸಿಯೇ ಪಿ.ಜಿ.ಗೆ ಹಿಂತಿರುಗಿದಳು. ಒಂದರ್ಧ ಗಂಟೆ ರೆಸ್ಟ್ ತೆಗೆದುಕೊಂಡ ನಂತರ ಆಟೋ ಮಾಡಿಕೊಂಡು ಮಮತಾ ಮೇಡಮ್ ಮನೆಗೆ ಹೊರಟಳು. ಮೇಡಮ್ ಇವಳ ದಾರಿಯನ್ನೇ ಕಾಯುತ್ತಿದ್ದರು. ಹೋದ ಕೂಡಲೇ ತಮ್ಮ ಬಳಿಯಲ್ಲಿದ್ದ ಪುಸ್ತಕಗಳು, ಕಾಲೇಜಿನ ಗ್ರಂಥಭಂಡಾರದಲ್ಲಿ ದೊರಕಿದ ಪುಸ್ತಕಗಳು ಎಂದು ಎಲ್ಲವನ್ನೂ ಎಣಿಕೆ ಮಾಡಿಕೊಟ್ಟರು. ಜೊತೆಗೆ ತಮ್ಮದೊಂದು ನೋಟ್ ಪುಸ್ತಕದಲ್ಲಿ ಕೊಟ್ಟ ಪುಸ್ತಕಗಳ ಶೀರ್ಷಿಕೆ, ಲೇಖಕರ ಹೆಸರು ಎಲ್ಲ ಬರೆದಿಟ್ಟುಕೊಂಡರು. "ಪುಸ್ತಕಗಳು ಜೋಪಾನ. ನನ್ನದೂ ಅಷ್ಟೇ. ಗ್ರಂಥಾಲಯದ್ದೂ ಅಷ್ಟೇ. 'ಪುಸ್ತಕಂ ವನಿತಾ ವಿತ್ತಮ್ ಪರಹಸ್ತಗತಂ ಗತಮ್, ಪುನರಾಯಾದಪಿ ಜೀರ್ಣಂ ಶೀರ್ಣಂ' ಎಂದು ಕೇಳಿದ್ದೀಯಲ್ಲವೆ? ಹಾಗಾಗಬಾರದು. ಇನ್ನೊಂದೆರಡು ಪುಸ್ತಕ ಸಿಕ್ಕಿಲ್ಲ. ಸ್ವಾಮಿ ಮೇಷ್ಟ್ರ ಹತ್ತಿರ ಕೇಳೋಣ ಅಂದರೆ ಅವರು ಇವತ್ತು ಎಲ್ಲೋ ಸಿಗಲೇ ಇಲ್ಲ. ನೀನು ಅಡ್ರೆಸ್ ಕೊಟ್ಟಿರು. ಪುಸ್ತಕ ಸಿಕ್ಕಿದರೆ ಪೋಸ್ಟ್‌ನಲ್ಲಿ ಕಳಿಸಿಕೊಡುತ್ತೇನೆ. ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ" ಎಂದರು. ಅವರು ಕೊಟ್ಟ ಕಾಫಿ ಕುಡಿದು ಥ್ಯಾಂಕ್ಸ್ ಹೇಳಿ ಎಲ್ಲವನ್ನೂ ಒಂದು ಬ್ಯಾಗ್‌ನಲ್ಲಿ ಹಾಕಿಕೊಂಡು ಆಟೋ ಮಾಡಿಕೊಂಡು ಬಸ್ ಸ್ಟ್ಯಾಂಡ್ ಕಡೆ ಹೊರಟೇ ಬಿಟ್ಟಳು.

ಅಧ್ಯಾಯ-19

ಹೇಮಾ ಮತ್ತು ಶಿವರಾಜ ಒಂದೇ ಮನೆಯಲ್ಲೇ ಇದ್ದರೂ, ಒಂದೇ ರೂಮಿನಲ್ಲೇ ಪಕ್ಕ ಪಕ್ಕದಲ್ಲೇ ಮಲಗುತ್ತಿದ್ದರೂ ಇಬ್ಬರ ನಡುವೆ ಒಂದು ತೆರೆ ಇಳಿಬಿದ್ದಂತಿತ್ತು. ಹೇಮಾ ಊಟದ ನಂತರ ಪಾತ್ರೆ ತೊಳೆಯುವುದು, ನಾಳಿನ ಪಾಠಪ್ರವಚನಗಳ ಸಿದ್ಧತೆ ಎಂದುಕೊಂಡು ಬೇಕೆಂದೇ ತಡಮಾಡಿ ರೂಮಿಗೆ ಹೋಗುತ್ತಿದ್ದಳು. ಅದುವರೆಗೆ ಶಿವರಾಜನಿಗೆ ನಿದ್ದೆ ಹತ್ತಿರುತ್ತಿತ್ತಾಗಿ ತನ್ನ ಪಾಡಿಗೆ ತಾನು ಪಕ್ಕಕ್ಕೆ ಹೊರಳಿ ಮಲಗಿಬಿಡುತ್ತಿದ್ದಳು. ಇಬ್ಬರ ನಡುವೆ ಮಾತಂತೂ ಇಲ್ಲವೇ ಇಲ್ಲ. ಒಂದು ವಾರ ಹೀಗೆಯೇ ಕಳೆದ ಮೇಲೆ ಶಿವರಾಜನಿಗೆ ಇದನ್ನು ತಾಳಿಕೊಳ್ಳುವುದು ಕಷ್ಟವಾಗಿ ಅವಳು ಹೊರಳಿ ಮುಖ ತಿರುಗಿಸಿ ಮಲಗಿದ ಕೂಡಲೇ ತಾನೇ ಬಲವಂತವಾಗಿ ಅವಳನ್ನೆಳೆದುಕೊಂಡು ತಬ್ಬಿದ. ಹೇಮಾ ಬಿಡಿಸಿಕೊಳ್ಳಲು ಯತ್ನಿಸಿದರೂ ಯಶಸ್ವಿಯಾಗಲಿಲ್ಲ. ಅವನ ಅಪ್ಪುಗೆ ಅಷ್ಟು ಬಲವಾಗಿತ್ತು. ಹಾಗಾಗಿ ಅವಳಿಗೆ ಮನಸ್ಸಿಲ್ಲದಿದ್ದರೂ ಯಾಂತ್ರಿಕವಾಗಿ ಅವನ ವಶವರ್ತಿಯಾದಳು. ನಂತರ "ನಿಮ್ಮ ಹೊರಸಂಬಂಧ ಏನೇ ಇದ್ದರೂ ಈ ಕ್ಷಣದಿಂದಲೇ ಅದಕ್ಕೆ ಪೂರ್ತಿ ಫುಲ್ ಸ್ಟಾಪ್ ಹಾಕಬೇಕು. ಮತ್ತೇನಾದರೂ ಇದು ಮುಂದುವರಿದರೆ ನಾನು ಯಾವ ಕಾರಣಕ್ಕೂ ಸಹಿಸುವವಳಲ್ಲ." ಎಂದು ಖಡಾಖಂಡಿತವಾಗಿ ಹೇಳಿಬಿಟ್ಟಳು. ಶಿವರಾಜ ಕೇವಲ ಗೋಣು ಹಾಕಿದ.

ಒಂದೆರಡು ದಿನಗಳ ನಂತರ ಹೇಮಾ ಸಂದೇಹಿಸಿದ್ದ ಚಿತ್ರದುರ್ಗದ ಕಛೇರಿಯ ಹೆಂಗಸನ್ನು ಕೆಲಸದಿಂದ ಬಿಡಿಸಿರುವುದಾಗಿ ಹೇಳಿದ. "ಇನ್ನು ಮೇಲೆ ನನ್ನನ್ನು ಅನುಮಾನಿಸುವುದು ಬಿಡು" ಎಂದು ಹೇಳಿದ್ದ. ಹೆಂಡತಿ ಗಂಡನ ಮಾತನ್ನು ನಂಬದಿರುವುದಾದರೂ ಹೇಗೆ? ಹೇಮಾ ನಂಬಿದಳು. ದಿನಗಳು ಸರಿಯುತ್ತಿದ್ದುವು.

ಹೇಮಾ ಕೆಲಸಕ್ಕೆ ಸೇರಿ ಮೂರು ವರ್ಷದ ಅನುಭವವಿದ್ದ ಕಾರಣಕ್ಕೆ ಅವಳಿಗೆ ಮೌಲ್ಯಮಾಪನ ಕೆಲಸದ ಆದೇಶ ಬಂತು. ಕೇಂದ್ರೀಕೃತ ಮೌಲ್ಯಮಾಪನ ಹೊಸದಾಗಿ ಸ್ಥಾಪಿತವಾದ ಕುವೆಂಪು ವಿಶ್ವವಿದ್ಯಾನಿಲಯದ ಕೇಂದ್ರ ಸ್ಥಾನವಾದ ಶಿವಮೊಗ್ಗದ ಕಮಲಾ ನೆಹರೂ ಕಾಲೇಜಿನಲ್ಲಿ ನಡೆಯಲಿರುವುದಾಗಿ ತಿಳಿಸಲಾಗಿತ್ತು.

ಏಪ್ರಿಲ್ ತಿಂಗಳ ಎರಡನೇ ವಾರ ಮೌಲ್ಯಮಾಪನ ಕೆಲಸ ಆರಂಭವಾಯಿತು. ಅಲ್ಲಿ ಹೋಗಿ ಎಲ್ಲಿರುವುದು ಹೇಗಿರುವುದು ಎಂಬ ಚಿಂತೆ ಹೇಮಾಳಿಗೆ ಮೌಲ್ಯಮಾಪನದ ಆದೇಶ ಬಂದ ದಿನದಿಂದಲೂ ಇದ್ದೇ ಇತ್ತು. ತನ್ನ ಕೆಲವು ಹಿರಿಯ ಸಹೋದ್ಯೋಗಿಗಳೊಂದಿಗೆ ಮಾತನಾಡಿದಾಗ ಅವರು "ಇದು ಪ್ರಾರಂಭವಾಗಿ ಈಗಾಗಲೇ ಮೂರು ನಾಲ್ಕು ವರ್ಷ ಆಗಿದೆ. ಕೆಲವರು ತಮ್ಮ ಬಂಧು ಬಳಗದವರ

ಮನೆಗಳಲ್ಲಿ ಇರುತ್ತಾರೆ. ಹಾಗೆ ಯಾರೂ ಇಲ್ಲದವರು ಇಬ್ಬರು ಮೂವರು ಸೇರಿಕೊಂಡು ಲಾಡ್ಜ್‌ಗಳಲ್ಲಿ ಇರುತ್ತಾರೆ. ನೀವು ಯಾರಾದರೂ ಮೌಲ್ಯ ಮಾಪನದ ಆದೇಶ ಬಂದಿರುವ ಮಹಿಳಾ ಅಧ್ಯಾಪಕರ ಹತ್ತಿರ ಮಾತಾಡಿ" ಎಂದರು. ಸರಿ ಎಂದು ಮಾತಾಡಿ ಅವಳ ಸಹೋದ್ಯೋಗಿಗಳಿಬ್ಬರ ಜೊತೆ ಲಾಡ್ಜ್‌ನಲ್ಲಿ ತಂಗುವುದೆಂದು ತೀರ್ಮಾನಿಸಿದಳು.

ಮೌಲ್ಯಮಾಪನ ಇನ್ನೊಂದೆರಡು ಮೂರು ದಿನಗಳಲ್ಲಿ ಮುಗಿಯುತ್ತದೆ ಎನ್ನುವಾಗ ಒಂದು ದಿನ ಮೌಲ್ಯಮಾಪನದ ಕೆಲಸ ಬೇಗ ಮುಗಿದಿದ್ದರಿಂದ ಅಲ್ಲಿಯೇ ಹತ್ತಿರದ ಪಾರ್ಕೊಂದರಲ್ಲಿ ತನ್ನ ಸಹ ಮೌಲ್ಯಮಾಪಕರ ಜೊತೆ ಕುಳಿತಿದ್ದಳು. ಕಡಲೆ ಕಾಯಿ ಮಾರುವ ಹೆಂಗಸೊಬ್ಬಳಿಂದ ಕಡಲೆ ಕಾಯಿ ಕೊಂಡು ಇಬ್ಬರೂ ತಿನ್ನುತ್ತಿದ್ದರು. ಸ್ವಲ್ಪ ಹೊತ್ತಾದ ಮೇಲೆ ಇವರಿಬ್ಬರೂ ಕುಳಿತಿದ್ದ ಎದುರುಗಡೆಯ ಕಲ್ಲು ಬೆಂಚಿನ ಮೇಲೆ ಕುಳಿತಿದ್ದ ಯುವಕನೊಬ್ಬ ಇವರು ಕುಳಿತಿದ್ದ ಕಡೆಗೆ ಬಂದ. ಹೇಮಾಳನ್ನು ಕುರಿತು– "ಮೇಡಮ್ ನೀವು ಶಿವರಾಜ್ ಸರ್ ಅವರ ಮಿಸೆಸ್ ಅಲ್ಲವಾ" ಎಂದು ಕೇಳಿದ. ಹೇಮಾ ಆಶ್ಚರ್ಯದಿಂದ "ಹೌದು ನೀವು ಯಾರು?" ಎಂದಳು. "ಮೇಡಮ್ ನನ್ನನ್ನು ನೀವು ಮರೆತಿರುತ್ತೀರಿ. ಆದರೆ ನನಗೆ ನಿಮ್ಮ ನೆನಪು ಚೆನ್ನಾಗಿದೆ. ನಾನು ಶಿವರಾಜ್ ಸರ್ ಅವರ ಚಿತ್ರದುರ್ಗದ ಆಫೀಸಿನಲ್ಲಿ ಕೆಲಸ ಮಾಡುತ್ತಾ ಇದ್ದೆ. ನೀವು ಅದರ ಪ್ರಾರಂಭದ ಪೂಜೆ ಇಟ್ಟುಕೊಂಡಿದ್ದಾಗ ಬಂದಿದ್ದಿರಿ ಅಲ್ಲವೆ?" ಎಂದ. "ನೀವು ಚೆನ್ನಾಗಿ ಜ್ಞಾಪಕ ಇಟ್ಟುಕೊಂಡಿದ್ದೀರಿ. ನನಗೆ ನಿಮ್ಮ ನೆನಪು ಇರಲಿಲ್ಲ. ಅದು ಸರಿ, ನೀವೇನು ಇಲ್ಲಿ" ಎಂದಳು. "ಮೇಡಮ್ ಈಗ ಒಂದು ತಿಂಗಳ ಹಿಂದೆ ಇಲ್ಲಿ ಒಂದು ಆಫೀಸನ್ನು ಸರ್ ಪ್ರಾರಂಭಿಸಿದ್ದಾರೆ. ನಿಮಗೆ ಗೊತ್ತಿಲ್ಲವಾ ಮೇಡಮ್? ನಾನು ಮತ್ತು ಇನ್ನೊಬ್ಬ ಮೇಡಮ್ ಇಲ್ಲಿ ನೋಡಿಕೊಳ್ತಿದ್ದೀವಿ. ಅವರೂ ಮುಂಚೆ ದುರ್ಗದಲ್ಲೇ ಇದ್ದರು. ಈಗ ಅವರು ಪರ್ಮನೆಂಟಾಗಿ ಇಲ್ಲೇ ಇರ್ತಾರೆ. ನಾನು ಸದ್ಯ ಒಂದೆರಡು ಮೂರು ತಿಂಗಳು ಇಲ್ಲಿ ಕೆಲಸ ಮಾಡಬೇಕಾಗುತ್ತೆ. ಆಮೇಲೆ ಚಿತ್ರದುರ್ಗಕ್ಕೇ ಬರುವೆಯಂತೆ ಅಂತ ಸರ್ ಹೇಳಿದ್ದಾರೆ. ಅದೂ ದಿನವೂ ಇಲ್ಲಿರಲ್ಲ. ವಾರದಲ್ಲಿ ಒಂದು ಮೂರು ದಿನ ಇಲ್ಲಿರುತ್ತೇನೆ. ಇನ್ನೊಂದು ಮೂರು ದಿನ ದುರ್ಗದಲ್ಲೇ ಇರ್ತೀನಿ. ಸರ್ ಅವಾಗವಾಗ ಬಂದು ಹೋಗುತ್ತಿರುತ್ತಾರೆ. ಇಲ್ಲಿಂದ ದುರ್ಗ ಹತ್ತಿರ ಅಲ್ಲವಾ ಮೇಡಮ್. ನಾಳೆ ದುರ್ಗಕ್ಕೆ ವಾಪಸ್ ಹೋಗುತ್ತೀನಿ. ನೀವೇನು ಮೇಡಮ್ ಇಲ್ಲಿ." ಎಂದು ಕೇಳಿದ. ನಾನು ಇಲ್ಲಿ ಪೇಪರ್ ವ್ಯಾಲ್ಯುಯೇಷನ್‌ಗೆ ಬಂದಿದ್ದೆ. ಎಂದಳು. ಆ ಮೇಲೆ "ಬರ್ತೀನಿ ಮೇಡಮ್. ನಿಮ್ಮನ್ನು ನೋಡಿದನಲ್ಲ, ಮೆಡಮ್ ಇದೇನಿಲ್ಲಿದ್ದಾರಲ್ಲ, ಮಾತಾಡಿಸಿಕೊಂಡು ಬರೋಣಾ ಅಂತ ಬಂದೆ" ಎಂದ. "ಒಳ್ಳೇದು. ಥ್ಯಾಂಕ್ಸ್ ರೀ" ಎಂದಳು.

ಹೇಮಾ ಲಾಡ್ಜ್‌ಗೆ ಬಂದ ಮೇಲೆ ಪಾರ್ಕಿನಲ್ಲಿ ಸಿಕ್ಕಿದ್ದ ಯುವಕ ಹೇಳಿದ ವಿಷಯದ ಬಗ್ಗೆಯೇ ಚಿಂತಿಸತೊಡಗಿದಳು. ಅಲ್ಲಿಗೆ ಆ ಹೆಂಗಸನ್ನು ಕೆಲಸದಿಂದ ತೆಗೆದಿರೋದು ಸುಳ್ಳು. ಕೇವಲ ನನ್ನನ್ನು ನಂಬಿಸೋದಕ್ಕೆ ಹಾಗೆ ಹೇಳಿ ಚಿತ್ರದುರ್ಗವನ್ನು ತಪ್ಪಿಸಿ ಇಲ್ಲಿಗೆ ಕಳಿಸಿದ್ದಾರೆ. ಆಗಾಗ ಬಂದು ಹೋಗುತ್ತಿರುತ್ತಾರೆ ಅಂದ ಮೇಲೆ ಸಂಪರ್ಕ ಇದ್ದೇ ಇದೆ ಅಂತ ಆಯ್ತು. ಇಂಥ ಅಯೋಗ್ಯ ಮನುಷ್ಯನ ಜೊತೆ ಇನ್ನು ಬಾಳ್ವೆ ನಡೆಸಕ್ಕೆ

ಆಗಲ್ಲ. ಇದರದ್ದು ಏನಾದರೂ ಒಂದು ಇತ್ಯರ್ಥ ಮಾಡಿಕೊಂಡುಬಿಡಬೇಕು ಎಂದು ನಿಶ್ಚಯಿಸಿಬಿಟ್ಟಳು. ಈ ಮನುಷ್ಯನಿಗೆ ಹೆಂಡತಿಯ ಮನಸ್ಸಿನ ಭಾವನೆಗಳೇನು ಅಂತ ಗೊತ್ತಾಗೋದೇ ಇಲ್ಲ. ಅಥವಾ ಗೊತ್ತಾದರೂ ಅವಳು ಲೆಕ್ಕಕ್ಕಿಲ್ಲ. ತನ್ನ ಸುಖವೇ ಮುಖ್ಯ. ಇಂಥ ನಂಬಿಕೆಗೆ ಅರ್ಹನಲ್ಲದ ಮನುಷ್ಯನ ಜೊತೆ ತನಗೆ ಬದುಕೇ ಬೇಡ ಅನ್ನಿಸಿತು.

ಅಲ್ಲಿಂದ ಮೂರನೇ ದಿನ ಮಧ್ಯಾಹ್ನಕ್ಕೇ ಮೌಲ್ಯಮಾಪನ ಮುಗಿಯಿತು. ಹೇಮಾ ಅಲ್ಲಿ ಒಂದು ಕ್ಷಣವೂ ನಿಲ್ಲದೆ ಊರಿಗೆ ಬಂದು ಬಿಟ್ಟಳು. ಇವಳು ಬಂದಾಗ ಶಿವರಾಜ್ ಇರಲಿಲ್ಲ. ಊಟದ ಹೊತ್ತಿಗೆ ಬಂದ. ಊಟ ಮಾಡೋಣ ಬಾ ಅಂತ ಕರೆದಾಗ ನನಗೆ ಹಸಿವಿಲ್ಲ ನೀವು ಮಾಡಿ ಎಂದಳು. ಅವಳ ಮಾತಿನ ಧೋರಣೆ, ಮುಖ ನೋಡಿ ಶಿವರಾಜನಿಗೆ ಏನೋ ಸಂದೇಹ. ಊಟ ಮುಗಿಸಿ ಬಂದ ಮೇಲೆ ಶಿವರಾಜನನ್ನು ತರಾಟೆಗೆ ತೆಗೆದುಕೊಂಡಳು. "ನಿಮಗೆ ನಿಮ್ಮ ಕೈ ಹಿಡಿದವಳ ಭಾವನೆಗಳೇನೂ ಎಂದು ಎಂದೂ ಅರ್ಥವಾಗಲ್ಲ. ಆ ನಿಮ್ಮ ಪ್ರಿಯಕರಿಯನ್ನು ಕೆಲಸದಿಂದ ತೆಗೀತೀನಿ ಅಂತ ಹೇಳಿದ್ದು ಬರೀ ನನ್ನನ್ನು ನಂಬಿಸೋದಕ್ಕೆ ಹೇಳಿದ ಸುಳ್ಳು. ಅವಳನ್ನು ಬೇರೆ ಊರಿಗೆ ಕಳಿಸಿ ನನ್ನನ್ನು ಯಾಮಾರಿಸಿ ನಿಮ್ಮ ಕಳ್ಳಾಟ ಮುಂದುವರಿಸುವುದೇ ನಿಮ್ಮ ಉದ್ದೇಶ. ಶಿವಮೊಗ್ಗದಲ್ಲಿ ನಿಮ್ಮ ಹೊಸ ಆಫೀಸಿನಲ್ಲಿ ಕೆಲಸ ಮಾಡೋ ಹುಡುಗ ಅಕಸ್ಮಾತ್ ಸಿಕ್ಕಿದಾಗ ನನಗೆಲ್ಲಾ ಗೊತ್ತಾಯಿತು. ನಿಮ್ಮಂಥೋರ ಜೊತೆ ನನಗೆ ಜೀವನ ಸಾಕಾಗಿದೆ. ಒಂದು ವೇಳೆ ನಾನೇ ನಿಮ್ಮ ಥರ ಬೇರೆಯವರ ಜೊತೆ ಸಂಬಂಧ ಇಟ್ಟುಕೊಳ್ಳೋದಿರಲಿ, ಸಲಿಗೆಯಿಂದ ಇದ್ದರೂ ನೀವು ಸಹಿಸುತ್ತಾ ಇದ್ದಿರಾ? ಅಂದ ಮೇಲೆ ನಾನು ಯಾಕೆ ಸಹಿಸಬೇಕು? ನಿಮಗಿರೋ ಸಂಪತ್ತಿನಿಂದ ಹೇಗೆ ಬೇಕಾದರೂ ನೀವು ಬದುಕಿ. ಆದರೆ ಅಂಥ ಬದುಕಿನಲ್ಲಿ ನಾನು ನಿಮ್ಮ ಜೊತೆ ಪಾಲುಗಾರಳಾಗಿರಲು ಸಾಧ್ಯವಿಲ್ಲ. ನಾವು ಡೈವರ್ಸ್ ತೆಗೆದುಕೊಂಡುಬಿಟ್ಟರೇನೆ ಇಬ್ಬರಿಗೂ ಒಳ್ಳೇದು" ಎಂದು ಹೇಳಿಬಿಟ್ಟಳು. ಶಿವರಾಜ ಅಪ್ರತಿಭನಾದ. ಈ ವಿಷಯ ಇವಳಿಗೆ ತಿಳಿಯಲು ಸಾಧ್ಯವಿಲ್ಲ ಅಂತ ಅಂದುಕೊಂಡಿದ್ದರೆ ಗೊತ್ತಾಗಿ ಹೋಗಿದೆ. ಇನ್ನು ಮನವೊಲಿಸುವುದು, ಅನುನಯಿಸುವುದು ಅವನ ಸ್ವಭಾವಕ್ಕೆ ಸಾಧ್ಯವಿಲ್ಲದ್ದು; ಅದು ಇಷ್ಟವೂ ಇರಲಿಲ್ಲ. "ಆಯಿತು. ನಿನ್ನ ಇಷ್ಟ ಅದೇ ಆಗಿದ್ದರೆ ಹಾಗೇ ಮಾಡಿದರಾಯಿತು. ನಿನ್ನಿಂದ ನನಗೆ ಮಕ್ಕಳೂ ಆಗೋದು ಅನುಮಾನ. ಮನೇಲಿ ನಾನು ನಿಧಾನಕ್ಕೆ ಹೇಳಿ ಒಪ್ಪಿಸುತ್ತೇನೆ. ಮ್ಯೂಚುಯಲ್ ಕನ್ಸೆಂಟ್ ಮೇಲೆ ಡೈವರ್ಸ್ ತೆಗೆದುಕೊಂಡರೆ ಡೈವರ್ಸ್ ಬೇಗ ಸಿಗುತ್ತೆ. ವರ್ಷಗಟ್ಟಲೆ ಎಳೆಯಲ್ಲ. ನಾನು ಲಾಯರ್ ಹತ್ತಿರ ಆ ಬಗ್ಗೆ ಮಾತಾಡಿ ತಿಳಿಸುತ್ತೀನಿ" ಎಂದು ತನ್ನ ಪಾಡಿಗೆ ತಾನು ಹೋಗಿ ಮಲಗಿದ.

ಹೇಗೂ ಕಾಲೇಜಿಗೆ ಬೇಸಿಗೆ ರಜೆ ಬಂದಿತ್ತು. ತನಗೆ ತೋಚಿದ ಒಂದಷ್ಟು ಕೆಲಸ ಮಾಡುತ್ತ ಹಾಗೆಯೇ ತನ್ನ ಬಹುಮುಖ್ಯವಾದ ಸಾಮಾನುಗಳೆಲ್ಲವನ್ನೂ ಪ್ಯಾಕ್ ಮಾಡುತ್ತಾ ಒಂದು ವಾರ ಕಳೆದಳು. ಅತ್ತೆ ನಾದಿನಿಯ ಹತ್ತಿರ ಎಷ್ಟು ಬೇಕೋ ಅಷ್ಟೇ ಮಾತು. ಸೊಸೆಯ ವರ್ತನೆ ಗಮನಿಸುತ್ತಿದ್ದ ಅತ್ತೆಗೆ ಏನೋ ಸಂದೇಹ. ಆ ಮಧ್ಯೆ ಶಿವರಾಜನ ಜೊತೆ ಹೋಗಿ ಲಾಯರ್ ಅವರನ್ನು ಭೇಟಿಮಾಡಿ ಬಂದಿದ್ದಳು. ಅವರು

ಅದಕ್ಕೆ ಕೌಟುಂಬಿಕ ನ್ಯಾಯಾಲಯ ಅಂತ ಇರುತ್ತೆ. ಒಂದು ಕೌನ್ಸೆಲ್ಲಿಂಗ್ ಸೆಲ್ ಕೂಡ ಇದೆ. ಅದರ ಮುಂದೇನೂ ಹೋಗಬೇಕಾಗುತ್ತೆ. ಏನೇ ಆದರೂ ನಾವು ಅಂದರೆ ಲಾಯರ್‌ಗಳು, ನ್ಯಾಯಾಧೀಶರು ಯಾರೂ ಡೈವರ್ಸ್ ಅನ್ನು ಎನ್‌ಕರೇಜ್ ಮಾಡಲ್ಲ. ಡೈವರ್ಸ್ ಬೇಕೇ ಬೇಕು ಅಂದರೆ ಒಂದು ಕಾಲ ಮಿತಿಯಲ್ಲೇ ಇತ್ಯರ್ಥ ಆಗಬಹುದು ಅಂದರು.

ಲಾಯರ್ ಅವರನ್ನು ಭೇಟಿ ಮಾಡುವ ಮುನ್ನ ಶಿವರಾಜ ತನ್ನ ಅಮ್ಮನಿಗೆ ತನ್ನ ಮತ್ತು ಹೇಮಾಳ ನಡುವೆ ಆದ ಮಾತುಕತೆಯ ವಿವರಗಳನ್ನು ಹೇಳಿದ. ಸೊಸೆಯ ಬಗ್ಗೆ ಅವರಿಗೆ ಎಷ್ಟೇ ಅಸಮಾಧಾನವಿದ್ದರೂ ಮಗ ಅವಳಿಗೆ ಡೈವರ್ಸ್ ನೀಡುವ ಹಂತಕ್ಕೆ ಹೋದದ್ದು ಸರಿಕಾಣಲಿಲ್ಲ. ಆದರೆ ಅವಳಿಂದ ತನಗೆ ಮಕ್ಕಳಾಗುವ ಬಗ್ಗೆ ಶಿವರಾಜ ಅನುಮಾನ ವ್ಯಕ್ತಪಡಿಸಿದಾಗ ಈ ನೆವದಲ್ಲಿ ಅವಳಿಂದ ಬಿಡುಗಡೆಯಾದ ಮೇಲೆ ಮಗನಿಗೆ ಬೇರೆ ಮದುವೆ ಮಾಡಿಸಬಹುದು ಎಂದು ಕಷ್ಟದಿಂದ ಸಮ್ಮತಿಸಿದರು. ಇದರಿಂದ ನೆಂಟರು ಇಷ್ಟರಲ್ಲಿ ತನಗೆ ಸೊಸೆಯನ್ನು ಬಾಳಿಸಲಾರದ ಅತ್ತೆ ಎಂದು ಕೆಟ್ಟ ಹೆಸರು ಬರುತ್ತದೆಂದು ಅನ್ನಿಸಿದರೂ ಮಗನನ್ನು ಬಿಟ್ಟುಕೊಡುವ ಮನಸ್ಸಾಗಲಿಲ್ಲ. ಈ ಸಲ ಇಷ್ಟೊಂದು ಓದಿರೋಳನ್ನು ಸೊಸೆಯಾಗಿ ತಂದುಕೊಳ್ಳೋದು ಬೇಡ. ಒಂದು ಎಸ್.ಎಸ್.ಎಲ್.ಸೀನೋ ಪಿ.ಯು.ಸೀನೋ ಆಗಿದ್ದರೆ ಸಾಕು ಅಂತ ತೀರ್ಮಾನಿಸಿದರು. ಮಗನಿಗೂ "ನೀನು ನಿನ್ನ ಹೊರ ಚಾಳಿಗಳನ್ನು ನಿಲ್ಲಿಸದಿದ್ದರೆ ಹೆಣ್ಣು ಕೊಡಿ ಅಂತ ಹೆಣ್ಣು ಹೆತ್ತವರನ್ನು ಕೇಳೋದಕ್ಕೆ ನಮಗೆ ತಾನೆ ಹೇಗೆ ಬಾಯಿ ಬರುತ್ತೆ? ನೀನು ಹೀಗೆ ಅಂತ ಗೊತ್ತಾದರೆ ನಿನಗೆ ಯಾರೂ ಹೆಣ್ಣು ಕೊಡಲ್ಲ." ಎಂದು ನಿಷ್ಠೂರವಾಗಿ ಹೇಳಿದರು.

ಲಾಯರ್ ಅವರನ್ನು ಭೇಟಿ ಮಾಡಿಬಂದ ಮೇಲೆ ಹೇಮಾ "ನಮ್ಮ ಅಮ್ಮನಿಗೆ ಆರೋಗ್ಯ ತೀರಾ ಹದಗೆಟ್ಟಿದೆ ಕೂಡಲೇ ಹೊರಟು ಬಾ ಅಂತ ನಮ್ಮಪ್ಪನಿಂದ ಕಾಗದ ಬಂದಿತ್ತು. ನಾನು ಊರಿಗೆ ಹೋಗ್ತೀನಿ" ಎಂದು ಹೇಳಿ ಅವರ ಉತ್ತರಕ್ಕೂ ಕಾಯದೆ ಮರುದಿನವೇ ಶಿವರಾಜ ಬರುವುದಕ್ಕೂ ಕಾಯದೆ ಆಟೋ ಮಾಡಿಕೊಂಡು ಹೊರಟೇಬಿಟ್ಟಳು.

ಇದ್ದಕ್ಕಿದ್ದಂತೆ ಮಗಳು ಬಂದದ್ದು ಕಂಡು ಹೇಮಾಳ ಅಪ್ಪ ಅಮ್ಮನಿಗೆ ಸಂತೋಷದ ಜೊತೆಗೆ ಆಶ್ಚರ್ಯವಾಯಿತು. ಅವರು ಕೇಳುವುದಕ್ಕೆ ಮುಂಚೆಯೇ ಹೇಮಾ– "ರಜೆ ಬಂದು ಆಗಲೇ ಮೂರು ವಾರದ ಮೇಲಾಯಿತು. ಪೇಪರ್ ವ್ಯಾಲ್ಯುಯೇಷನ್ನಿನಲ್ಲಿ ಆಗಲೇ ಹತ್ತು ದಿವಸ ಕಳೆದು ಹೊಯಿತು. ದುಡ್ಡು ಬರುತ್ತೆ ಅನ್ನುವುದು ಬಿಟ್ಟರೆ ಆ ಕೆಲಸವೇ ಬೇಜಾರು ಹಿಡಿಸಿತ್ತು. ಅದಕ್ಕೇ ಇಲ್ಲಿ ಒಂದಷ್ಟು ದಿನ ಇದ್ದು ಬೇಜಾರು ಕಳೆದುಕೊಳ್ಳೋಣಾ ಅಂತ ನಿಮಗೆ ತಿಳಿಸದೆ ಸೀದಾ ಬಂದುಬಿಟ್ಟೆ ಎಂದಳು". "ಬಹಳ ಒಳ್ಳೇ ಕೆಲಸ ಮಾಡಿದೆ. ನಿನ್ನ ಮನೆಗೆ ನೀನು ಬರೋದಕ್ಕೆ ಯಾರನ್ನು ಯಾಕೆ ಕೇಳಬೇಕು? ಎಷ್ಟೊಂದು ಸೊರಗಿಹೋಗಿದ್ದೀ ನೋಡು. ಒಂದಷ್ಟು ದಿವಸ ಏನೂ ಕೆಲಸ ಗಿಲಸ ಮಾಡಕ್ಕೆ ಹೋಗದೆ, ಎಲ್ಲ ಯೋಚನೆ ಬಿಟ್ಟು ಆರಾಮವಾಗಿ ಉಂಡುಕೊಂಡು ತಿಂದುಕೊಂಡು ಇರು," ಎಂದು ಇಬ್ಬರೂ ಹೇಳಿದರು.

ಅಧ್ಯಾಯ-20

ವಸುಂಧರಾ ಒಂದು ಕಡೆ ಶಾಲೆಯ ಕೆಲಸ ಇನ್ನೊಂದು ಕಡೆ ಎಂ.ಎ. ಮೊದಲ ವರ್ಷದ ಅಧ್ಯಯನ ಎರಡನ್ನೂ ಸರಿಸರಿಯಾಗಿ ತೂಗಿಸಿಕೊಂಡು ಹೋಗುತ್ತಿದ್ದಳು. ತನ್ನ ಜೀವನದಲ್ಲಿ ಘಟಿಸಿಹೋದ ಶ್ರೀನಿವಾಸ್‌ನೊಂದಿಗಿನ ಪ್ರೇಮ ಪ್ರಕರಣ ಮತ್ತು ಶಾಮೂ ತನ್ನ ಮೇಲೆ ಹದ್ದಿನಂತೆ ಎರಗಿ ನಡೆಸಿದ ಅತ್ಯಾಚಾರ ಎರಡನ್ನೂ ಮನಸ್ಸಿನ ಪರದೆಯಿಂದ ದೂರ ಸರಿಸುವಲ್ಲಿ ನಿರಂತರವಾಗಿ ಕೆಲಸದಲ್ಲಿ ತೊಡಗಿಸಿಕೊಂಡದ್ದು ನೆರವಾದದ್ದು ಅಷ್ಟಿಷ್ಟಲ್ಲ. ಮನೆಯಿಂದಾಚೆ ಎಲ್ಲಿಗೂ ಹೋಗುತ್ತಿರಲಿಲ್ಲ. ಪರಿಚಯದವರ ಬಂಧುಗಳ ಮನೆಯ ಸಮಾರಂಭಗಳಿಗೂ ತಪ್ಪಿಸಿಕೊಳ್ಳುತ್ತಿದ್ದಳು. ಒಂದು ರೀತಿಯಲ್ಲಿ ಅಂತರ್ಮುಖಿಯಾಗಿಬಿಟ್ಟಳು. ಈ ಮಧ್ಯೆ ತಾಯಿಯ ಆರೋಗ್ಯದ್ದೊಂದು ದೊಡ್ಡ ಸವಾಲಾಯಿತು. ಮಳೆಗಾಲ ಮತ್ತು ಚಳಿಗಾಲಗಳಲ್ಲಿ ಹತ್ತಿರ ಹತ್ತಿರ ವರ್ಷದಲ್ಲಿ ಆರು ತಿಂಗಳ ಕಾಲ ಅಸ್ತಮಾ ಅವರನ್ನು ಬಿಡದೆ ವಿಪರೀತವಾಗಿ ಕಾಡುತ್ತಿತ್ತು. ಮೊದಲೆಲ್ಲ ದೇಹ ದಾರ್ಢ್ಯ ಮತ್ತು ಔಷಧಿ ಪಥ್ಯಗಳಿಂದ ತಮ್ಮ ದೈನಂದಿನ ಕೆಲಸ ಕಾರ್ಯಗಳಿಗೆ ಹೆಚ್ಚೇನೂ ಅಡ್ಡಿಯಾಗದ ರೀತಿಯಲ್ಲಿ ಹೇಗೋ ನಿಭಾಯಿಸಿಕೊಂಡುಹೋಗುತ್ತಿದ್ದರು. ಆದರೆ ಈಗ ವಯಸ್ಸು ಹೆಚ್ಚುತ್ತ ಹೋದಂತೆ ದೇಹಶಕ್ತಿ ಕುಗ್ಗುತ್ತಿದ್ದ ಪರಿಣಾಮವಾಗಿ ಮನೆಯ ಕೆಲಸಗಳನ್ನು ಮಾಡಲು ತುಂಬ ಕಷ್ಟಪಡುತ್ತಿದ್ದರು. ವಸುಂಧರಾ ತನ್ನ ಓದು ಮತ್ತು ಕೆಲಸಗಳ ನಡುವೆ ಅದನ್ನೂ ತೂಗಿಸಬೇಕಾಗಿಬಂತು. ಅಮ್ಮನಿಗೆ ಮೊದಲಿನ ಹಾಗೆ ಕೆಲಸ ಮಾಡಲು ಸಾಧ್ಯವಿಲ್ಲವೆಂದು ತಿಳಿದು ಅವರಿಗೆ ನೀನು ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ನಿನ್ನ ಪಾಡಿಗೆ ನೀನು ರೆಸ್ಟು ತಗೋ. ನಾನೆಲ್ಲ ನೋಡಿಕೊಳ್ತೀನಿ ಎಂದು ಹೇಳಿ ಅಮ್ಮನಿಗೆ ಒತ್ತಾಯಿಸುತ್ತಿದ್ದಳು.

ಆ ವರ್ಷದ ಡಿಸೆಂಬರ್ ತಿಂಗಳಿನಲ್ಲಿ ಕಾಂಟ್ಯಾಕ್ಟ್ ಕ್ಲಾಸಸ್ ಸಲುವಾಗಿ ಎರಡು ವಾರ ಮೈಸೂರಿಗೆ ಬರಬೇಕೆಂಬ ಪತ್ರ ಬಂತು. ಗಿರಿಜಾ ಮೇಡಮ್ ಅವರಿಗೆ ಫೋನ್ ಮಾಡಿ ಅಲ್ಲಿ ಇರುವುದಕ್ಕೆ ಹೇಗೆ ಮಾಡುವುದು ಎಂದು ವಿಚಾರಿಸಿದ್ದಳು. ಅವರು ಅದಕ್ಕೆ ಯೋಚನೆ ಮಾಡುವಂಥದೇನೂ ಇಲ್ಲವೆಂದೂ ಇದು ಇಲ್ಲಿ ಪ್ರತಿವರ್ಷ ನಡೆಸಿಕೊಂಡು ಬರುತ್ತಿರುವ ಕಾರ್ಯಕ್ರಮವಾಗಿರುವುದರಿಂದ ಕ್ಲಾಸಸ್ ನಡೆಯುವ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಗೆ ಸಮೀಪದ ಬಡಾವಣೆಯಲ್ಲಿ ಅದಕ್ಕೋಸ್ಕರವೇ ಕೆಲವರು ಮೂರು ನಾಲ್ಕು ಜನ ಇರಬಹುದಾದಂಥ ವಸತಿಗಳನ್ನು ಕಟ್ಟಿಸಿದ್ದಾರೆ. ಈಗಾಗಲೇ ಈ ಬಗ್ಗೆ ಒಂದಿಬ್ಬರು ವಿಚಾರಿಸಿದ್ದಾರೆ, ನೀವೆಲ್ಲ ಒಟ್ಟಿಗೇ ಇರಬಹುದು. ನಾನು ಸಂಬಂಧಿಸಿದವರಿಗೆ ಹೇಳಿರ್ತೀನಿ ಎಂದರು. ಒಂದು ದೊಡ್ಡ ಸಮಸ್ಯೆ

ಬಗೆಹರಿಯಿತಲ್ಲ ಎಂದು ವಸುಂಧರಾ ನಿಟ್ಟುಸಿರು ಬಿಟ್ಟಳು. "ನನ್ನ ಲೆಕ್ಕದಲ್ಲಿ ರಜೆ ಬೇಕಾದಷ್ಟು ಇರುವುದರಿಂದ ನಿವೃತ್ತಿ ಪೂರ್ವ ರಜೆಯನ್ನು ಹಾಕಿಕೊಂಡು ಮನೆಯನ್ನು ನೋಡಿಕೊಳ್ಳುತ್ತೇನೆ. ನೀನೇನೂ ಯೋಚಿಸಬೇಡ" ಎಂದು ಅಪ್ಪ ಹೇಳಿದ್ದು ಅವಳಿಗೆ ಸಮಾಧಾನ ತಂದಿತು. ನಿಶ್ಚಿಂತಳಾಗಿ ಕಾಂಟ್ಯಾಕ್ಟ್ ಕ್ಲಾಸಸ್‌ಗೆ ಹಾಜರಾಗಲು ಮೈಸೂರಿಗೆ ಹೋದಳು. ಅಲ್ಲಿ ಎಲ್ಲ ತರಗತಿಗಳನ್ನೂ ಅಟೆಂಡ್ ಮಾಡಿ, ಅಧ್ಯಾಪಕರ ಹತ್ತಿರ ಚರ್ಚಿಸಿ ತನಗೆ ಸರಿಯಾಗಿ ಅರ್ಥವಾಗದೆ ಇದ್ದ ಹಳೆಗನ್ನಡ ಕಾವ್ಯಗಳ ಕೆಲವು ಭಾಗಗಳನ್ನು ಅರ್ಥಮಾಡಿಕೊಂಡಳು. ಅವರು ಕಳಿಸಿಕೊಟ್ಟಿದ್ದ ಪ್ರಶ್ನಾವಳಿಗೆ ತಾನು ಬರೆದಿದ್ದ ಉತ್ತರಗಳನ್ನು ತೋರಿಸಿ ಸಲಹೆಗಳನ್ನು ಪಡೆದುಕೊಂಡಳು. ಒಟ್ಟಾರೆ ಕಾಂಟ್ಯಾಕ್ಟ್ ಕ್ಲಾಸಸ್ ಅವಳ ಪಾಲಿಗೆ ವಿಶಿಷ್ಟವಾದ ಅನುಭವವನ್ನು ನೀಡಿತು. ಬೆಂಗಳೂರಿನಿಂದ ಹಿಂತಿರುಗಿದ ಎರಡು ವಾರದೊಳಗೇ ಇವಳಿಗೆ ಬೇಕಿದ್ದ ಮೂರು ಪುಸ್ತಕಗಳ ಒಂದು ಪಾರ್ಸೆಲ್ ಮಮತಾ ಅವರ ಕಡೆಯಿಂದ ಅಂಚೆಯಲ್ಲಿ ತಲುಪಿ ಪುಸ್ತಕಗಳಿಲ್ಲವೆಂಬ ಯೋಚನೆಯನ್ನು ಇಲ್ಲವಾಗಿಸಿತು.

ಅವಳ ಮೊದಲ ಎಂ.ಎ. ಪರೀಕ್ಷೆಗೆ ಇನ್ನೊಂದು ವಾರವಿದೆ ಎನ್ನುವಾಗ ಅಪ್ಪ ನಿವೃತ್ತರಾದರು. ಒಂದು ರೀತಿಯಲ್ಲಿ ಅದು ಅಮ್ಮನನ್ನು ಈ ಸ್ಥಿತಿಯಲ್ಲಿ ಬಿಟ್ಟು ಮೈಸೂರಿಗೆ ಪರೀಕ್ಷೆಗೆ ಹೇಗೆ ಹೋಗುವುದು ಎಂಬ ಸಮಸ್ಯೆಯನ್ನು ಬಗೆಹರಿಸಿತು. ಪರೀಕ್ಷೆಗೆ ನಾಲ್ಕು ದಿನ ಮುಂಚೆಯೇ ಹೋಗಿ ಕಾಂಟ್ಯಾಕ್ಟ್ ಕ್ಲಾಸಸ್ ಸಂದರ್ಭದಲ್ಲಿ ಜೊತೆಯಾದ ಗೆಳತಿಯರ ಜೊತೆಯಲ್ಲೇ ಇದ್ದು ಪರೀಕ್ಷೆ ಬರೆದು ಬಂದಳು. ಪರೀಕ್ಷೆಯಲ್ಲಿ ತೃಪ್ತಿಕರವಾದ ರೀತಿಯಲ್ಲಿ ಉತ್ತರ ಬರೆದ ಸಮಾಧಾನದಿಂದ ಊರು ಸೇರಿಕೊಂಡಳು.

* * *

ಬರಡೆನಿಸಿದ್ದ ವಸುಂಧರಾಳ ಬದುಕಿಗೆ ಎಂ.ಎ. ಓದು ನವ ಉತ್ಸಾಹವನ್ನು ತುಂಬಿತ್ತು. ಮೊದಲಿನಿಂದಲೂ ಅವಳು ಓದಾಳಿಯೇ. ಈಗ ಪರೀಕ್ಷೆಯ ಉದ್ದೇಶವೂ ಕೂಡಿಕೊಂಡು ಆ ಓದಿಗೆ ಎಲ್ಲಿಲ್ಲದ ಭರತ ಬಂದಿತ್ತು. ಬೇರಾವ ಯೋಚನೆಗೂ ಮನಸ್ಸಿನಲ್ಲಿ ಎಡೆಯೇ ಇಲ್ಲವೆಂಬಂತೆ ಸದಾ ಹಳೆಗನ್ನಡ ಕಾವ್ಯಗಳ, ಕಾದಂಬರಿಗಳ ಇನ್ನಿತರ ಗ್ರಂಥಗಳ ಅಧ್ಯಯನದಲ್ಲಿ ನಿರತಳಾಗಿಬಿಟ್ಟಳು. ಮಧ್ಯೆ ಒಂದೆರಡು ಸಲ ಬೆಂಗಳೂರಿಗೆ ಹೋಗಿ ಮಮತಾ ಮೇಡಮ್ ಅವರನ್ನು ಭೇಟಿ ಮಾಡಿ ತನ್ನ ಕೆಲವು ಸಂದೇಹಗಳನ್ನು ಪರಿಹರಿಸಿಕೊಂಡು, ಮಾರ್ಗದರ್ಶನ ಪಡೆದುಕೊಂಡು ಬಂದಿದ್ದಳು. ಹಾಗೆ ಅವಳು ಚರ್ಚಿಸಿದ ಸಂಗತಿ ಜನ್ನ ಕವಿಯ ಕಾವ್ಯಗಳನ್ನು ಕುರಿತಂತೆ. ಜನ್ನ ಆ ವರ್ಷ ಅವರಿಗೆ ನಿಗದಿತವಾಗಿದ್ದ ವಿಶೇಷ ಕವಿ. ಹಾಗಾಗಿ ಅವನ ಎರಡೂ ಕಾವ್ಯಗಳು ಇಡಿಯಾಗಿಯೇ ಪಠ್ಯಗಳಾಗಿದ್ದುವು. ಅದರಲ್ಲಿ ಯಶೋಧರ ಚರಿತ್ರೆಯ ಅಮೃತ ಮತಿಯ ವರ್ತನೆಗೆ ಸಂಬಂಧಿಸಿದಂತೆ ಮತ್ತು ಅನಂತನಾಥ ಪುರಾಣದ ಚಂಡಶಾಸನ ಪ್ರಸಂಗಕ್ಕೆ ಸಂಬಂಧಿಸಿದಂತೆ ಚರ್ಚಿಸಿದಾಗ ಮಮತಾ ಅವರು ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ಹೇಳಿದ್ದರು. ಜನ್ನನ ಎರಡೂ ಕಾವ್ಯಗಳ ವಸ್ತು ಧಾರ್ಮಿಕವೇ ಆದರೂ

ಅದನ್ನೂ ಮೀರಿ ಗಂಡು ಹೆಣ್ಣಿನ ಸಂಬಂಧ ಮತ್ತು ಮನುಷ್ಯನನ್ನು ಮುಗಿಯದ ಮಾಯೆಯಂತೆ ಬಿಡದೆ ನಿರಂತರವಾಗಿ ಕಾಡುತ್ತ ಬಂದಿರುವ ಕಾಮದ ಸಮಸ್ಯೆಯನ್ನು ಅದರೆಲ್ಲ ಜಟಿಲತೆಗಳೊಂದಿಗೆ ಚಿತ್ರಿಸುವುದು ಅವನ ಉದ್ದೇಶವಾಗಿದ್ದಂತೆ ತೋರುತ್ತದೆ. ಯಶೋಧರ ಅಮೃತಮತಿಯರ ಪ್ರೇಮ ಏಕಮುಖವಿರಬೇಕು. ಯಶೋಧರನೇನೋ ಅವಳನ್ನು ಒಲಿದಿದ್ದ. ಮನ್ಮಥನಂಥ ಗಂಡನಿದ್ದೂ, ಅವನಿಂದ ಮಗನನ್ನು ಪಡೆದಿದ್ದಾಗ್ಯೂ ಅಮೃತಮತಿ ನಿಜಕ್ಕೂ ಅವನನ್ನು ಒಲಿದಿದ್ದಳೆ ಎಂಬುದು ಕಾವ್ಯದಲ್ಲಿ ಎಲ್ಲಿಯೂ ಸ್ಪಷ್ಟವಾಗಿ ಉಕ್ತವಾಗಿಲ್ಲ. ಆ ಬಗ್ಗೆ ಸಂದೇಹವೇ ಇದೆ. 'ತದ್ರಮಣನನ್ ಒಲಿದಂತೆ ಗೋರಿಗೊಳಿಸುತ್ತಿರ್ಕುಂ' ಎಂಬ ಮಾತು ಅದು ನಿಜವಾದ ಒಲವು ಆಗಿರುವ ಬಗೆಗಿನ ಸಂದೇಹವನ್ನೇ ದೃಢಪಡಿಸುತಿದೆ. ಬಹುಶಃ ಹಾಗೆ ಒಲಿದಿಲ್ಲದ ಕಾರಣದಿಂದಲೇ ಅವಳು ತಾನು ಒಲಿದ ಅಷ್ಟವಂಕನ ಸಂಗದಲ್ಲಿ ತೃಪ್ತಿ ಪಟ್ಟುಕೊಂಡಳು. ಹಾಗಾಗಿ ತಾನು ನಿಜಕ್ಕೂ ಒಲಿದ ಅಷ್ಟವಂಕನಿಗಾಗಿ ಅವಳು ಎಂಥ ದುಸ್ಥಿತಿಯನ್ನೂ, ಅದು ಜನರ ಛೀ ಥೂಕಾರವಾಗಬಹುದು, ಅದು ಧೂಮ ಪ್ರಭೆ ಎಂಬ ನರಕವಾಗಬಹುದು ಅಪ್ಪಿಕೊಳ್ಳಲು ಸಿದ್ಧ ಎಂಬುದು ಅದರಿಂದ ಹೊರಪಡುತ್ತದೆ ಎಂದು ವಿಶ್ಲೇಷಿಸಿದ್ದರು. ಅದೇ ರೀತಿ ಚಂಡಶಾಸನ ಪ್ರಸಂಗದಲ್ಲಿ ಕ್ಷೀಣವಾಗಿಯೇ ಆದರೂ ಹೆಣ್ಣಿನ ನೋವಿನ ದನಿಗೆ ಕವಿ ಅಭಿವ್ಯಕ್ತಿ ಕೊಟ್ಟಿದ್ದಾನೆ. ಸುನಂದೆ ತನ್ನನ್ನು ಒಲಿಯದೆ ಇದ್ದರೂ ಚಂಡಶಾಸನ ತಾನು ಅವಳನ್ನು ಗಾಢವಾಗಿ ಒಲಿದಿದ್ದೇನೆನ್ನುವುದರ ದ್ಯೋತಕವಾಗಿ ಅವಳ ಶವದೊಂದಿಗೆ ಸಹಗಮನಕ್ಕೆ ಸಿದ್ಧನಾದಾಗ ಅವನ ಇನ್ನಿತರೆ ರಾಣಿಯರು ತಮ್ಮ ನೋವನ್ನು "ಮಲ್ಲಿಗೆಗಳ್ ಮಾವಿಂಗೆ ಕೂರ್ತೊಡೆ ಮಾವು ಕೂರ್ತುದು ವಸಂತಶ್ರೀಗೆ"– ಎಂಬ ಮಾತಿನ ಮೂಲಕ ತೋಡಿಕೊಳ್ಳುವುದನ್ನು ಚಿತ್ರಿಸುವ ಮೂಲಕ ಕವಿ ಹೆಣ್ಣಿನ ನೋವಿಗೆ ಅಭಿವ್ಯಕ್ತಿ ನೀಡಿದ್ದಾನೆ. ಗಂಡಾಗಲಿ ಹೆಣ್ಣಾಗಲಿ ಕೌಟುಂಬಿಕವೋ ಸಾಮಾಜಿಕವೋ ಆದ ಕಟ್ಟುಪಾಡಿಗೆ ಒಳಗಾಗಿ ವಿವಾಹ ಬಂಧನಕ್ಕೊಳಪಟ್ಟಿದ್ದರೂ ಅನುಕೂಲಕರವಾದ ಸನ್ನಿವೇಶ ಒದಗಿಬಂದ ಕೂಡಲೆ ಆ ಕಟ್ಟುಪಾಡು ಅಥವಾ ನಿರ್ಬಂಧದಿಂದ ಹೊರಬಂದು ತಾವು ಒಲಿದ ಜೀವದತ್ತ ತುಡಿಯುವುದು ಈ ಮುಗಿಯದ ಮಾಯೆಯ ಪ್ರಭಾವದಿಂದಾಗಿಯೇ ಎಂದೆಲ್ಲ ತಮ್ಮ ಸ್ತ್ರೀವಾದಿ ದೃಷ್ಟಿಕೋನದ ನೆಲೆಯಿಂದ ವಿಶ್ಲೇಸಿದ್ದರು.

ಮೊದಲ ವರ್ಷದಲ್ಲಿ ಅವಳಿಗೆ ಪರೀಕ್ಷೆಯಲ್ಲಿ ಪ್ರಥಮ ದರ್ಜೆಗೆ ಕೆಲವು ಅಂಕಗಳ ಕೊರತೆಯಾಗಿತ್ತು. ಆ ಬಗ್ಗೆ ಮಮತಾ ಅವರು–"ಕ್ರಮವಾಗಿ ತರಗತಿಗಳಿಗೆ ಹೋಗುವ ರೆಗ್ಯುಲರ್ ವಿದ್ಯಾರ್ಥಿಗಳು ಅಷ್ಟು ಅಂಕ ಗಳಿಸುವುದು ದೊಡ್ಡದಲ್ಲ. ಆದರೆ ಕನ್ನಡವನ್ನು ಐಚ್ಛಿಕವಾಗಿ ಅಭ್ಯಾಸ ಮಾಡದ ನೀನು ಕರೆಸ್ಪಾಂಡೆನ್ಸ್ ಕೋರ್ಸಿನಲ್ಲಿ ಇಷ್ಟು ಅಂಕ ಗಳಿಸಿರುವುದೇನೂ ಕಡಿಮೆ ಸಾಧನೆಯಲ್ಲ" ಎಂದು ಬೆನ್ನು ತಟ್ಟಿದ್ದರು.

ಒಂದು ಶನಿವಾರ ಮಧ್ಯಾಹ್ನವೇ ಶಾಲೆಯಿಂದ ಹಿಂತಿರುಗಿದ ಮೇಲೆ ನಾಲ್ಕು ಗಂಟೆಯ ಸಮಯದಲ್ಲಿ ರೂಮಿನಲ್ಲಿ ಏನೋ ಪುಸ್ತಕ ಓದಿಕೊಂಡು ಕುಳಿತಿದ್ದ ವಸುಂಧರಾಗೆ – "ವಸೂ ನೋಡಿಲ್ಲಿ ಯಾರು ಬಂದಿದ್ದಾರೆ ಅಂತ" ಎಂಬ ಅಮ್ಮನ

ಕರೆ ಕೇಳಿ ನಡುಮನೆಗೆ ಬಂದರೆ ಎದುರಿನಲ್ಲಿ ಜೀವದ ಗೆಳತಿ ಹೇಮಾ ನಿಂತಿದ್ದಾಳೆ. ವಸುಂಧರಾಗೆ ತನ್ನ ಕಣ್ಣನ್ನೇ ನಂಬಲಾಗಲಿಲ್ಲ. ಓಡಿ ಹೋಗಿ ಗೆಳತಿಯನ್ನು ತಬ್ಬಿಕೊಂಡಳು. ಸಾವಿತ್ರಮ್ಮನವರು ಅವರಿಬ್ಬರೂ ಕುಳಿತಿದ್ದಲ್ಲಿಗೇ ಕಾಫಿ ಮತ್ತು ಕುರುಕಲು ತಂದಿಟ್ಟರು. ಇಬ್ಬರೂ ತಾವು ಹಿಂದೆ ಭೇಟಿಯಾದಾಗಿನಿಂದ ಇಲ್ಲಿಯವರೆಗಿನ ಸಂಗತಿಗಳನ್ನು ಮೆಲುಕು ಹಾಕಿದರು. ಆಮೇಲೆ ಹೇಮಾ "ಏ ವಸುಂಧರಾ ನನಗೆ ಮನೇಲೆ ಕೂತು ಬೇಜಾರಾಗಿದೆ. ಹಾಗೇ ಸ್ವಲ್ಪ ಸುತ್ತಾಡಿಕೊಂಡು ಬರೋಣ ಬಾ. ನಿನ್ನ ಹತ್ತಿರ ತುಂಬಾ ಮಾತಾಡೋದಿದೆ" ಎಂದು ವಸುಂಧರಾಳನ್ನೂ ಎಳೆದುಕೊಂಡು ಹೊರಟಳು.

ಮಾಮೂಲಿ ಹೋಗುತ್ತಿದ್ದ ಪಾರ್ಕಿಗೆ ಹೋಗಿ ಒಂದು ಮೂಲೆಯಲ್ಲಿನ ಬೆಂಚುಕಲ್ಲಿನ ಮೇಲೆ ಕುಳಿತರು. ವಸುಂಧರಾಳೇ "ಹೌದು ಹೇಮಾ, ನಿನ್ನ ಮದುವೆ ಆಗಿ ಆಗಲೇ ಮೂರು ವರ್ಷಕ್ಕೆ ಬಂತು. ಏನು ವಿಶೇಷ ಏನಿಲ್ಲವೇನೇ? ಏನು ಭಾರೀ ಪ್ಲಾನಿಂಗಾ? ಹೇಗಿದೆ ನಿನ್ನ ದಾಂಪತ್ಯದ ಬದುಕು?" ಎಂದು ನಗುತ್ತಾ ಪ್ರಶ್ನಿಸಿದಳು. ಅವಳ ಮಾತನ್ನು ಕೇಳುತ್ತಿದ್ದಂತೆ ಹೇಮಾಳ ಮುಖ ಮ್ಲಾನವಾಯಿತು. ಮುಖದಲ್ಲಿ ನೋವು ಕಾಣಿಸಿಕೊಂಡಿತು. "ಯಾಕೆ ಹೇಮಾ ಏನಾಯಿತೆ?" ಎಂದು ವಸುಂಧರಾ ಬೆನ್ನ ಮೇಲೆ ಕೈಯಾಡಿಸುತ್ತ ಕೇಳಿದಳು.

"ನನ್ನ ಸಾಂಸಾರಿಕ ಬದುಕಿನ ಬಗ್ಗೆ ನಾನು ಏನೇನೋ ಆಸೆ ಇಟ್ಟುಕೊಂಡಿದ್ದೆ. ಕನಸು ಕಟ್ಟಿದ್ದೆ. ಎಲ್ಲ ಆಸೆಗಳೂ ಕನಸುಗಳೂ ಈ ಮೂರು ವರ್ಷಗಳಲ್ಲಿ ಭಗ್ನಗೊಂಡುವು. ನಾನು ಮದುವೇನೇ ಆಗಬಾರದಾಗಿತ್ತು ವಸೂ. ಈಗ ನೀನು ನೋಡು. ಆಗ ಒಂದಷ್ಟು ದಿವಸ ನೀನು ಇಷ್ಟಪಟ್ಟವರನ್ನು ಮದುವೆ ಆಗಕ್ಕಾಗಲಿಲ್ಲವಲ್ಲ ಅಂತ ನಿನಗೆ ಇನ್ನಿಲ್ಲದ ನೋವಾದರೂ, ನನ್ನ ಹಾಗೆ ಯಾಕಾದರೂ ಮದುವೆ ಆದೆನೋ ಅಂತ ಪರಿತಪಿಸುವ ಹಾಗೆ ಆಗಲಿಲ್ಲ." ಎಂದು ಶುರು ಮಾಡಿಕೊಂಡು ತನ್ನ ಅತ್ತೆ ನಾದಿನಿ ಕೊಡುತ್ತಿರುವ ಕಾಟ. ಅದಕ್ಕಿಂತ ಹೆಚ್ಚಾಗಿ ಗಂಡನ ದೈಹಿಕ ಹಸಿವು, ಹೊರಚಾಳಿಗಳನ್ನು ವಿವರವಾಗಿ ಹೇಳಿಕೊಂಡು ತಾನು ಇನ್ನು ಅವರ ಮನೆಗೆ ಹೋಗಲ್ಲ. ನಾನು ಡೈವರ್ಸ್ ತೆಗೆದುಕೊಂಡುಬಿಡ್ತೇನೆ. ಅದಕ್ಕೆ ಶಿವರಾಜನೂ ಸಮ್ಮತಿಸಿದ್ದಾನೆ ಎಂದು ಹೇಳಿಕೊಂಡು ಕಣ್ಣೀರು ಹಾಕಿದಳು. ಹೇಮಾಳ ಕಥೆ ಕೇಳಿ ವಸುಂಧರಾಳ ಬಾಯಿಂದ ಮಾತೇ ಹೊರಡಲಿಲ್ಲ. ಮದುವೆಯಾಗಿ ಸುಖವಾಗಿದ್ದಾಳೆ ಎಂದುಕೊಂಡಿದ್ದ ಗೆಳತಿಯ ಬದುಕು ಹೀಗೆ ಕಾದ ಹೆಂಚಿನ ಮೇಲೆ ಬಿದ್ದ ಹುಳುವಿನಂತಾಗಿ ಹೋಯಿತೆ ಎಂದು ಪರಿತಪಿಸತೊಡಗಿದಳು. "ಇನ್ನೂ ಒಂದು ಛಾನ್ಸ್ ಕೊಟ್ಟು ನೋಡಬಹುದಿತ್ತೇನೋ" ಎಂದದ್ದಕ್ಕೆ "ಇಲ್ಲ ಅದು ನಾಯಿಬಾಲ. ಅದೆಂದೂ ನೆಟ್ಟಗಾಗಲ್ಲ. ಹೆಂಡತಿ ಇರುವುದೇನಿದ್ದರೂ ತನ್ನ ದೈಹಿಕ ಬಯಕೆ ಈಡೇರಿಸೋದಕ್ಕಷ್ಟೆ ಎಂದು ತಿಳಿದಿರುವವನ ಜೊತೆ, ಹೆಂಡತಿಗೂ ಒಂದು ವ್ಯಕ್ತಿತ್ವ ಇದೆ ಅಂತ ತಿಳಿಯದೆ ಇರುವವನ ಜೊತೆ, ಸಂಸಾರ ಹೇಗೆ ಮಾಡೋದು? ಯಾಕಾದರೂ ಮಾಡಬೇಕು?" ಎಂದು ಕಡ್ಡಿ ಎರಡು ತುಂಡುಮಾಡಿದಂತೆ ಹೇಳಿದಳು. "ಮನೆಯಲ್ಲಿ ಈ ಬಗ್ಗೆ ಮಾತಾಡಿದ್ದೀಯಾ?" ಎಂದಾಗ "ಇಲ್ಲ. ನನಗಿನ್ನೂ ಹೇಳುವ ಧೈರ್ಯವಾಗಿಲ್ಲ. ನಿನ್ನ ಹತ್ತಿರಾನೇ ಬಾಯಿ

ಬಿಟ್ಟದ್ದು. ಸಂತೋಷದ ಸಂಗತಿ ಆದರೆ ಹೇಳಿಕೊಳ್ಳಬಹುದು. ಇದನ್ನು ಹೇಳೋದು ಹೇಗೆ ಅನ್ನುವ ಚಿಂತೆಯಲ್ಲೇ ಇವತ್ತು ನಾಳೆ ಅಂತ ಮುಂದಕ್ಕೆ ಹಾಕುತ್ತಾ ಇದ್ದೀನಿ. ನಾನು ಅವರಿಗೂ ಭಾರವಾಗಿರಲ್ಲ. ಬೇರೆ ಎಲ್ಲಾದರೂ ಕೆಲಸಕ್ಕೆ ಟ್ರೈ ಮಾಡ್ತೀನಿ" ಎಂದಳು. ಅವಳು ದುಗುಡದ ಮುಖ ಹೊತ್ತು ಮನೆಗೆ ತೆರಳಿದ ಮೇಲೆ ವಸುಂಧರಾಳಿಗೆ ಮನಸ್ಸು ತುಂಬ ಭಾರವಾಯಿತು. ಏನೆಲ್ಲ ಕನಸುಗಳನ್ನು ಕಂಡಿದ್ದ ಗೆಳತಿಯ ಬದುಕು ಹೀಗಾಯಿತೆ ಎಂಬ ನೋವಿನಲ್ಲಿ ಹೃದಯ ಹಿಂಡಿದಂತಾಯಿತು. ಅದನ್ನು ಮರೆಯಲು ಎಷ್ಟೋ ದಿನಗಳಿಂದ ಮೂಲೆಯಲ್ಲಿ ಮುಸುಕು ಹಾಕಿಟ್ಟಿದ್ದ ವೀಣೆಯನ್ನು ಕೈಗೆತ್ತಿಕೊಂಡು ತನ್ನೆಲ್ಲ ನೋವನ್ನು ಬಗೆದೀಡಾಡುವಂತೆ ನುಡಿಸತೊಡಗಿದಳು. ಆ ದಿನ ಓದು ಸಾಗಲಿಲ್ಲ.

* * *

ವಸುಂಧರಾ ತನ್ನೆಲ್ಲ ಶ್ರದ್ಧೆ ಶ್ರಮಗಳನ್ನು ಒಟ್ಟುಗೂಡಿಸಿ ಅಂತಿಮ ಎಂ.ಎ. ಪರೀಕ್ಷೆಗೆ ಸಿದ್ಧತೆ ನಡೆಸಿದ್ದಳು. ಅದರ ಫಲವೋ ಎಂಬಂತೆ ಪ್ರಥಮ ಎಂ.ಎ. ಯಲ್ಲಿ ಕೈಕೊಟ್ಟಿದ್ದ ಪ್ರಥಮ ದರ್ಜೆ ಅದನ್ನೂ ಕೂಡಿಸಿಕೊಂಡು ಈಗ ಅವಳ ಮುಡಿಗೇರಿತು. ಇದರಿಂದ ಹೆಚ್ಚು ಸಂತೋಷ ಪಟ್ಟವರೆಂದರೆ ಮಮತಾ ಮೇಡಮ್ ಮತ್ತು ಗಿರಿಜಾ ಮೇಡಮ್. ಸ್ಕೂಲಿನಲ್ಲಿ ಕೆಲಸ ಮಾಡಿಕೊಂಡು ಮನೆಯಲ್ಲಿ ಆಗಾಗ್ಗೆ ಕೈಕೊಡುತ್ತಿರುವ ಅಮ್ಮನ ಆರೋಗ್ಯದ ನಿಗಾ ನೋಡಿಕೊಂಡು ಇಷ್ಟರ ಮಟ್ಟಿನ ಸಾಧನೆ ಮಾಡಿದ್ದು ನಿಜಕ್ಕೂ ಮೆಚ್ಚುವಂಥದು ಎಂದು ಇಬ್ಬರೂ ಅಭಿಪ್ರಾಯ ಪಟ್ಟರು. ಪುಸ್ತಕಗಳನ್ನು ಹಿಂತಿರುಗಿಸುವ ಸಲುವಾಗಿ ಮಮತಾ ಅವರನ್ನು ಭೇಟಿಮಾಡಲು ಅವರ ಮನೆಗೇ ಹೋಗಿದ್ದಳು. ಆ ಸಮಯದಲ್ಲಿ ಸ್ವಾಮಿ ಮೇಷ್ಟರು ಕೂಡ ಇದ್ದರು. ಇಬ್ಬರೂ ಹೃತ್ಪೂರ್ವಕವಾಗಿ ಅಭಿನಂದಿಸಿದರು. ಸ್ವಾಮಿ ಮೇಷ್ಟ್ರು "ಇದರಿಂದ ಇವತ್ತಲ್ಲ ನಾಳೆ ನೀವು ನಮ್ಮ ಹಾಗೆ ಪದವಿ ಕಾಲೇಜಿನಲ್ಲೋ ಪದವಿ ಪೂರ್ವ ಕಾಲೇಜಿನಲ್ಲೋ ಅಧ್ಯಾಪಕಿಯಾಗುವ ದಿನ ದೂರವಿಲ್ಲ" ಎಂದರು. "ಎಂ.ಎ. ಮುಗಿದುಹೋಯಿತು ಅಂತ ಓದನ್ನು ಇಲ್ಲಿಗೇ ನಿಲ್ಲಿಸಬೇಡ. ನಿಜವಾದ ಓದು ಶುರುವಾಗೋದು ಎಂ.ಎ. ಆದಮೇಲೇ. ಓದು, ಸಾಧ್ಯವಾದರೆ ಏನಾದರೂ ಬರೀತಾ ಇರು ಎಂದು" ಮೇಡಮ್ ಹೇಳಿದರು. ಮೇಡಮ್ ಮನೆಯಿಂದ ತನ್ನ ಹಳೆಯ ಪಿ.ಜಿ.ಗೆ ಹೋಗಿ ವಿದ್ಯಾ ಅವರನ್ನು ಭೇಟಿ ಮಾಡಿದಳು. ಮುಂಚೇನೇ ಫೋನ್ ಮಾಡಿ ಹೇಳಿದ್ದಳು. ಇವಳ ಜಾಗಕ್ಕೆ ಬಂದಿದ್ದ ಶೀಲಾ ಮೇಡಮ್ ಮಗನಿಗೆ ಬೆಂಗಳೂರಿನಲ್ಲೇ ಎಂ.ಇ. ಮಾಡಲು ಸೀಟು ಸಿಕ್ಕಿದ್ದರಿಂದ ಅವರು ಮನೆ ಮಾಡಿಕೊಂಡು ಮಗನ ಜೊತೆ ಇರಲು ಹೋಗಿಬಿಟ್ಟಿದ್ದರು.

ವಿದ್ಯಾ ಆ ಮಾತು ಈ ಮಾತಿನ ನಡುವೆ "ಮದುವೆ ಗಿದುವೆ ಯೋಚನೆ ಮಾಡಲು ಇದುವರೆಗೆ ನಿನ್ನ ತಲೆಯಲ್ಲಿ ಜಾಗ ಖಾಲಿ ಇರಲಿಲ್ಲ. ಬಿ.ಎಡ್. ಎಂ.ಎ. ಅಂತೆಲ್ಲಾ ವ್ಯಸ್ತಳಾಗಿಬಿಟ್ಟಿದ್ದೆ. ಈಗ ಇನ್ನೂ ಮುಂದಕ್ಕೆ ಹಾಕೋದು ಸರಿಯಲ್ಲ ಅಂತ ಅನ್ನಿಸುತ್ತೆ. ನಿಮ್ಮ ಮನೆಯಲ್ಲಿ ಈ ಬಗ್ಗೆ ಒತ್ತಾಯ ಮಾಡ್ತಿಲ್ಲವೇನು?" ಎಂದು ಕೇಳಿಯೇ ಬಿಟ್ಟರು. ವಸುಂಧರಾ ಮುಖ ಸಪ್ಪಗೆ ಮಾಡಿ– "ಏಕೋ ವಿದ್ಯಾ ನನಗೆ ಮದುವೆ ಅಂದರೇನೆ ಭಯ

ಶುರುವಾಗುತ್ತೆ. ಈಗಾಗಲೇ ನಾನು ಸಾಕಷ್ಟು ಕೈ ಸುಟ್ಟುಕೊಂಡಿರೋಳಲ್ಲವಾ?" ಎಂದು ಹೇಳಿ ಎರಡು ನಿಮಿಷ ಸುಮ್ಮನಿದ್ದು ನಂತರ ವೈವಾಹಿಕ ಬದುಕಿನ ಬಗ್ಗೆ ನೂರಾರು ಕನಸುಗಳನ್ನು ಕಟ್ಟಿಕೊಂಡು ದಾಂಪತ್ಯಕ್ಕೆ ಕಾಲಿಟ್ಟ ತನ್ನ ಗೆಳತಿ ಹೇಮಾಳ ವಿಷಯ ಪ್ರಸ್ತಾಪಿಸಿ "ಅವಳ ದಾಂಪತ್ಯ ಬದುಕು ಈ ರೀತಿಯಲ್ಲಿ ಮಣ್ಣುಗೂಡಿದ್ದು ನೋಡಿದ ಮೇಲೆ ನನಗೆ ಮುಂದೆ ಹೆಜ್ಜೆ ಇಡೋಕೆ ಧೈರ್ಯವೇ ಬರುತ್ತಾ ಇಲ್ಲ. ಮನೇಲಿ ಅಪ್ಪ ಅಮ್ಮ ಒಂದೇ ಸಮನೆ ಒತ್ತಾಯ ಮಾಡ್ತಾನೇ ಇದ್ದಾರೆ. ನಾನೇ ಹಿಂಜರಿತಾ ಇದ್ದೀನಿ" ಎಂದಳು. "ನಿನಗಾಗಿರೋ ಕೆಟ್ಟ ಅನುಭವಗಳಿಂದ ಹಿಂಜರಿಕೆ ಸಹಜವೇ. ಹೇಮಾಳಿಗೆ ಹೀಗಾದದ್ದು ತುಂಬಾ ನೋವಿನ ಸಂಗತಿ. ಆದರೆ ನಿನ್ನದು ಹಾಗಾಗಬೇಕು ಅಂತೇನೂ ಇಲ್ಲವಲ್ಲ. ಚೆನ್ನಾಗೇ ಆಗಬಹುದು. ಮನುಷ್ಯ ಸದಾ ಆಶಾವಾದಿಯಾಗಿರಬೇಕು. ಇಲ್ಲದೆ ಹೋದರೆ ಜೀವನದಲ್ಲಿ ಬದುಕೋದೇ ಕಷ್ಟ. ಆದ್ದರಿಂದ ಜೀವಮಾನ ಪರ್ಯಂತ ನೀನು ಹೀಗೇ ಇದ್ದುಬಿಡಕ್ಕಾಗಲ್ಲ. ಈಗೇನು ನಿನಗೆ 27–28 ವರ್ಷ ಇರಬೇಕು. ಇನ್ನು ಒಂದೆರಡು ವರ್ಷದಲ್ಲಿ ನೀನು ದಾಂಪತ್ಯದಲ್ಲಿ ನೆಲೆಗೊಳ್ಳಬೇಕೆಂಬುದು ನನ್ನ ಹಾರೈಕೆ. ಸಾಂಸಾರಿಕ ಜೀವನದ ಅನುಭವ ಇಲ್ಲದೆ ಹೋದರೆ ಮನುಷ್ಯನಿಗೆ ಜೀವನವೇ ಬರಡು ಅಂತ ಅನ್ನಿಸಿಬಿಡುತ್ತೆ. ಅಪೂರ್ಣವಾಗುತ್ತೆ. ಏನೇ ಓದಿ ಬರೆದು ಮಾಡಿದರೂ ನಿನ್ನ ಪ್ರೀತಿಯನ್ನು ಹಂಚಿಕೊಳ್ಳುವಂಥ ಜೀವ ಸಿಕ್ಕಿದಾಗ ಅದಕ್ಕೊಂದು ಸಾರ್ಥಕತೆ ಬರುತ್ತೆ. ಮದುವೇನೇ ಬೇಡಾ ಎನ್ನುವ ವೈರಾಗ್ಯ ಭಾವ ತಳೆಯುವ ವಯಸ್ಸೂ ನಿನ್ನದಲ್ಲ. ಅದುಮಿಟ್ಟ ಬಯಕೆಗಳು ಇನ್ನು ಯಾವಾಗಲೋ ತೀವ್ರವಾಗಿ ಕಾಡತೊಡಗಬಹುದು. ಅದೊಂದು ಮಾಯೆಯ ಹಾಗೆ." ಎಂದರು. "ಆಗಲಿ ವಿದ್ಯಾ, ನೀವು ಹೇಳಿದ್ದನ್ನು ಕುರಿತು ಯೋಚನೆ ಮಾಡ್ತೀನಿ." ಎಂದಳು.

ಅಧ್ಯಾಯ–21

ತೌರಿಗೆ ಹಿಂದಿರುಗಿ ಹದಿನೈದು ದಿನ ಕಳೆದ ಮೇಲೂ ತನ್ನ ಇಜ್ಜೋಡು ಸಂಸಾರದ ಬಗ್ಗೆ ತಂದೆ ತಾಯಿಗಳ ಹತ್ತಿರ ಹೇಳಿಕೊಳ್ಳಲು ಹೇಮಾಳಿಗೆ ಬಾಯಿ ಬರಲಿಲ್ಲ. ಅಷ್ಟೆಲ್ಲ ಆಸೆ ಅಕರಾಸ್ಥೆ ಇಟ್ಟುಕೊಂಡು ಮದುವೆ ಮಾಡಿ ಕಳಿಸಿದ ಅಪ್ಪ ಅಮ್ಮನಿಗೆ ಸಂಸಾರ ಅನ್ನುವುದು ಮಗಳ ಪಾಲಿಗೆ ಸೆರಗಿನಲ್ಲಿ ಕಟ್ಟಿಕೊಂಡ ಕೆಂಡದಂತಾಗಿದೆ ಎನ್ನುವುದು ಗೊತ್ತಾದರೆ ಅವರ ಎದೆ ಒಡೆದೇ ಹೋಗುತ್ತದೆ. ಆದರೆ ಹಾಗೆಂದು ನಿಜ ಸಂಗತಿ ಹೇಳದೆ ಎಷ್ಟು ದಿನ ತಾನೆ ಸುಮ್ಮನಿರುವುದು ಎಂದು ಯೋಚಿಸಿ ಒಂದು ದಿನ ಮನೆಯಲ್ಲಿ ಅಪ್ಪ ಅಮ್ಮ ಇಬ್ಬರೇ ಇದ್ದಾಗ ಕಣ್ಣೀರು ಸುರಿಸುತ್ತ ಎಲ್ಲವನ್ನೂ ಹೇಳಿಕೊಂಡು ಹಗುರಾದಳು. ಅಷ್ಟೇ ಅಲ್ಲ ತಾನು ಮತ್ತೆ ಅಲ್ಲಿ ಕಾಲೇಜಿನ ಕೆಲಸಕ್ಕೂ ಹೋಗುವುದಿಲ್ಲ ಎಂದಳು. ಕೈ ಹಿಡಿದ ಗಂಡ ಅನ್ಯ ಸ್ತ್ರೀಯಲ್ಲಿ ಆಸಕ್ತನಾಗಿ ಕಟ್ಟಿಕೊಂಡ ಹೆಂಡತಿಯನ್ನು ಕಡೆಗಣಿಸಿರುವುದು, ತಾಯಿಯ ಸ್ಥಾನದಲ್ಲಿದ್ದು ನೋಡಿಕೊಳ್ಳಬೇಕಾದ ಅತ್ತೆ, ತಮ್ಮ ಮಗಳ ಪಾಲಿಗೆ ಕಂಟಕಿಯಾಗಿರುವುದು ಕೇಳಿದ ಮೇಲೆ ನಿನ್ನ ನಿರ್ಧಾರ ತಪ್ಪು ಎಂದು ಹೇಳಲು ಇಬ್ಬರಿಗೂ ಬಾಯಿಬರಲಿಲ್ಲ. ಗುರುಶಾಂತಪ್ಪನವರು "ಆಗಲಿ ಮಗಳೆ ನೀನು ನೊಂದುಕೊಳ್ಳಬೇಡ. ಕಣ್ಣಿಗೆ ಕತ್ತಲೆ ಕವಿದ ಹಾಗೆ ಆಗಿರೋದಂತೂ ನಿಜ. ಏನೇ ಆದರೂ ಒಂದು ಸಲ ದಾವಣಗೆರೆಗೆ ಹೋಗಿ ಸ್ವಾಮಿಗಳನ್ನು ನೋಡಿ ಬರುತ್ತೇನೆ. ದೇವರು ಏನೋ ಒಂದು ದಾರಿ ತೋರಿಸ್ತಾನೆ" ಎಂದರು.

ಹಾಗೆ ಹೇಳಿದ ಅವಳ ತಂದೆ ಮುಂದಿನ ವಾರವೇ ದಾವಣಗೆರೆಗೆ ಹೋಗಿ ಸ್ವಾಮಿಗಳನ್ನು ಕಂಡು ಮಗಳ ಸಾಂಸಾರಿಕ ಬದುಕಿನ ಕಥೆ ಹೇಳಿಕೊಂಡು ಪೇಚಾಡಿದರು. ಸ್ವಾಮಿಗಳಿಗೆ ಅಸಾಧ್ಯ ಕೋಪ ಬಂತು. ತಾವು ಶಿವರಾಜನನ್ನೂ ಅವರ ಅಪ್ಪನನ್ನೂ ಕರೆಸಿ ಬುದ್ಧಿ ಹೇಳುವುದಾಗಿ ಹೇಳಿದರು. ಅದಕ್ಕೆ ಗುರುಶಾಂತಪ್ಪನವರು "ಬುದ್ದೀ, ತಮ್ಮ ಮಾತಿಗೆ ಬೀಕರಕ್ಕೆ ಒಪ್ಪಿಕೊಂಡರೂ ಆ ಮನುಷ್ಯನ ಬಗ್ಗೆ ನನ್ನ ಮಗಳು ಎಲ್ಲ ನಂಬಿಕೆ ಕಳೆದುಕೊಂಡುಬಿಟ್ಟಿದ್ದಾಳೆ. ಈಗ ಇದು ಹೇಳಿ ಸರಿಪಡಿಸುವ ಹಂತ ಮೀರಿದೆ. ಅವಳು ಮುಂದಿನ ಸಲ ಕಾಲೇಜು ಶುರುವಾದ ಮೇಲೂ ಕೆಲಸಕ್ಕೇ ಹೋಗಲ್ಲಾ ಅಂತ ಕೂತಿದ್ದಾಳೆ" ಎಂದರು. ಅದಕ್ಕೆ ನೀವು ನಾಳೆ ಮತ್ತೆ ಬನ್ನಿ. ಏನಾದರೂ ಬೇರೆ ಉಪಾಯ ಸಾಧ್ಯವೇನೋ ನೋಡೋಣ ಎಂದರು. ಅವರು ಮರುದಿನ ಸ್ವಾಮಿಗಳನ್ನು ನೋಡಲು ಹೋದಾಗ ಸ್ವಾಮಿಗಳು "ಆ ಅಯೋಗ್ಯನ ಸಂಬಂಧವೇ ಬೇಡ. ಆದರೆ ಹುಡುಗಿ ಕೆಲಸ ಏನೂ ಬಿಡಬೇಕಾಗಿಲ್ಲ. ಈ ಕಾಲದಲ್ಲಿ ಕೆಲಸ ಸಿಕ್ಕೋದು ತುಂಬ ಕಷ್ಟ. ಚಿಕ್ಕಮಗಳೂರಿನಲ್ಲಿ ನಮ್ಮದೇ ಒಂದು ಕಾಲೇಜಿದೆ. ಅವಳನ್ನು ಅಲ್ಲಿಗೆ ಟ್ರಾನ್ಸ್‌ಫರ್

ಮಾಡಿಸಿಕೊಡ್ತೀನಿ. ಅವಳ ಜೊತೆ ನೀವು ಅಪ್ಪ ಅಮ್ಮ ಯಾರಾದರೂ ಅಥವಾ ಇಬ್ಬರೂ ಹೋಗಿ ಇರಬೇಕಾಗಬಹುದು. ಇದೆಲ್ಲ ಸ್ವಲ್ಪ ಸಮಯ ಹಿಡಿಯಬಹುದು" ಎಂದರು. ಸ್ವಾಮಿಗಳ ಮಾತು ಕೇಳಿ ಗುರುಶಾಂತಪ್ಪನವರಿಗೆ ಹೋದ ಜೀವ ಬಂದಂತಾಯಿತು. ಸ್ವಾಮಿಗಳಿಗೆ ನಮಸ್ಕಾರ ಮಾಡಿ "ತುಂಬಾ ಉಪಕಾರ ಆಯಿತು ಬುದ್ದೀ" ಎಂದು ಹೇಳಿ ಊರಿಗೆ ಹಿಂತಿರುಗಿದರು.

ಸ್ವಾಮಿಗಳೇನೋ ಶಿವರಾಜನನ್ನೂ ಅವರ ತಂದೆಯನ್ನೂ ಕರೆಸಿಕೊಂಡು "ಒಬ್ಬ ಮರ್ಯಾದೆವಂತ ಹೆಣ್ಣು ಮಗಳ ಬದುಕನ್ನು ಹಾಳುಗೆಡವಿದ ಪಾಪಿಗಳು ನೀವು. ನಿಮ್ಮ ಮನೇಲೂ ಒಬ್ಬಳು ಹೆಣ್ಣು ಮಗಳಿದ್ದಾಳೆ ಅನ್ನೋ ಪ್ರಜ್ಞೆ ಇಲ್ಲ ನಿಮಗೆ. ನಿಮ್ಮಂಥೋರು ನಮ್ಮ ಮಠದ ಭಕ್ತರಾಗಿರೋದು ಮಠದ ದುರ್ದೈವ" ಎಂದೆಲ್ಲ ಛೀಮಾರಿ ಹಾಕಿದರು. ಶಿವರಾಜನ ತಂದೆ "ನಾನು ಎಷ್ಟೋ ಹೇಳಿನೋಡಿದೆ ಬುದ್ದೀ. ಅಮ್ಮ ಮಗ ಒಂದಾಗಿ ಬಿಟ್ಟಿದ್ದಾರೆ. ಮನೆಯಲ್ಲಿ ನನ್ನ ಮಾತಿಗೆ ಏನೂ ಬೆಲೆಯಿಲ್ಲದಂತಾಗಿದೆ" ಎಂದು ನೊಂದು ನುಡಿದರು.

ಕೆಲಸ ಬಿಡಬೇಕಾಗಿಲ್ಲ, ಚಿಕ್ಕಮಗಳೂರಿನಲ್ಲಿರುವ ಕಾಲೇಜಿಗೆ ವರ್ಗ ಮಾಡಿಸಿಕೊಡುವುದಾಗಿ ಸ್ವಾಮಿಗಳು ಹೇಳಿದ್ದಾರೆಂದು ಅಪ್ಪ ದಾವಣಗೆರೆಯಿಂದ ಬಂದಕೂಡಲೇ ಹೇಳಿದ ಮಾತನ್ನು ಕೇಳಿ ಹೇಮಾಳಿಗೆ ಕತ್ತಲಿನಲ್ಲಿ ಒಂದು ಬೆಳಕಿನ ಕಿರಣ ಗೋಚರಿಸಿದಂತಾಯಿತು. ಓದಿ ಕೆಲಸದಲ್ಲಿದ್ದ ನನ್ನಂಥವಳ ಮೇಲೇ ಗಂಡನೆನಿಸಿಕೊಂಡ ಪ್ರಾಣಿ ಹೀಗೆ ದಬ್ಬಾಳಿಕೆ ನಡೆಸುತ್ತಾನೆ, ಬದುಕನ್ನು ಮೂರಾಬಟ್ಟೆ ಮಾಡುತ್ತಾನೆ ಎಂದ ಮೇಲೆ ಕಿಂಚಿತ್ತಾದರೂ ನೈತಿಕ ಪ್ರಜ್ಞೆಯಿಲ್ಲದ ಶಿವರಾಜನಂಥ ಗಂಡಂದಿರು ಅವಿದ್ಯಾವಂತ, ಅಥವಾ ಹೆಚ್ಚು ಓದಿಲ್ಲದ, ಓದಿದ್ದರೂ ಆರ್ಥಿಕವಾಗಿ ಸ್ವಾವಲಂಬಿಯಲ್ಲದ ಹೆಣ್ಣುಗಳನ್ನು ಅದೆಷ್ಟು ರೀತಿಯಲ್ಲಿ ಹಾಳುಗೆಡವುತ್ತಿದ್ದಾರೋ ಎಂದು ಹೇಮಾ ಯೋಚನೆಗೊಳಗಾದಳು. ಏನೇ ಆದರೂ ಹೆಣ್ಣಿಗೆ ಆರ್ಥಿಕ ಸ್ವಾವಲಂಬನೆ ಬೇಕೇ ಬೇಕು. ಇಲ್ಲದಿದ್ದರೆ ಶಿವರಾಜನಂಥ ಗಂಡಂದಿರು ಹುರಿದು ಮುಕ್ಕುತ್ತಾರೆ ಎನಿಸಿತು.

ಮುಂದಿನ ಎರಡು ವಾರಗಳಲ್ಲಿ ಹೇಮಾಳ ಬದುಕು ಬೇರೊಂದು ತಿರುವನ್ನು ಪಡೆದುಕೊಳ್ಳುವ ಘಟ್ಟ ಬಂತು. ಕಾಲೇಜು ಪುನರಾರಂಭವಾಗುವ ಸಮಯ ಬಂದರೂ ಅವಳ ಟ್ರಾನ್ಸ್‌ಫರ್ ಬರಲಿಲ್ಲ. ಆ ಬಗ್ಗೆ ಅವರ ತಂದೆ ಹೋಗಿ ಸ್ವಾಮಿಗಳನ್ನು ಕಂಡು ವಿಚಾರಿಸಿದಾಗ ಇನ್ನೊಂದು ವಾರದಲ್ಲಿ ಅದರ ವ್ಯವಸ್ಥೆ ಮಾಡುವುದಾಗಿ ತಿಳಿಸಿದರು. ಸ್ವಾಮಿಗಳು ಹೇಳಿದಂತೆ ಅವಳನ್ನು ಚಿಕ್ಕಮಗಳೂರಿನ ಕಾಲೇಜಿಗೆ ವರ್ಗಮಾಡಿರುವ ಆದೇಶ ಕಾಲೇಜು ಪುನರಾರಂಭವಾಗುವುದಕ್ಕೆ ಇನ್ನೂ ಒಂದು ವಾರವಿದೆ ಎನ್ನುವಾಗ ಮ್ಯಾನೇಜ್‌ಮೆಂಟಿನಿಂದ ಬಂತು. ತಂದೆಯವರನ್ನೂ ಕರೆದುಕೊಂಡು ಹರಿಹರಕ್ಕೆ ಹೋಗಿ ಒಂದು ಹೋಟೆಲ್‌ನಲ್ಲಿ ರೂಮ್ ಮಾಡಿ ತಾನೊಬ್ಬಳೇ ಮರುದಿನ ಕಾಲೇಜಿಗೆ ಹೋಗಿ ಪ್ರಿನ್ಸಿಪಾಲರನ್ನು ಕಂಡು ಅಂದೇ ಮಧ್ಯಾಹ್ನ ಅಥವಾ ಮರುದಿನ ತನ್ನನ್ನು

ಬಿಡುಗಡೆ ಮಾಡಿದರೆ ಹೊಸ ಊರಿಗೆ ಹೋಗಿ ರಿಪೋರ್ಟ್ ಮಾಡಿಕೊಳ್ಳಲು ಅನುಕೂಲವಾಗುತ್ತದೆಂದು ಕೇಳಿಕೊಂಡಳು. ಪ್ರಿನ್ಸಿಪಾಲರು ಏಕೆ ಈ ಊರು ಬಿಟ್ಟುಹೋಗುತ್ತಿದ್ದೀರಿ? ದಾವಣಗೆರೆಯ ಹವೆ ಹೊಂದಲಿಲ್ಲವೆ? ಎಂದೆಲ್ಲ ಕೇಳಿದರು. ಹೌದು ಸರ್, ನನಗೆ ಹೊಂದಿಕೆಯಾಗಲಿಲ್ಲ ಎಂದಷ್ಟೇ ಹೇಳಿದಳು. "ಆಯಿತು, ನಾಳೆ ನಿಮ್ಮನ್ನು ರಿಲೀವ್ ಮಾಡುತ್ತೇನೆ" ಎಂದು ಹೇಳಿದರು. ಅಂದೇ ಸಂಜೆ ಮಠಕ್ಕೆ ಹೋಗಿ ಅಪ್ಪ ಮಗಳು ಇಬ್ಬರೂ ಸ್ವಾಮಿಗಳ ಪಾದಗಳಿಗೆ ನಮಿಸಿ "ತಮ್ಮಿಂದ ತುಂಬಾ ಉಪಕಾರವಾಯಿತು ಬುದ್ಧೀ" ಎಂದು ಹೇಳುತ್ತಿದ್ದಂತೆ ಕಣ್ಣಂಚಿನಲ್ಲಿ ನೀರು ಕಾಣಿಸಿಕೊಂಡಿತು. ಸ್ವಾಮಿಗಳು "ಅಳಬೇಡ ಮಗಳೆ. ನಿನ್ನಂಥ ಹುಡುಗಿಯ ಕಣ್ಣಲ್ಲಿ ನೀರು ತರಿಸಿದವನು ಎಂದೂ ಏಳಿಗೆಯಾಗಲ್ಲ" ಎಂದರು. ಮರುದಿನ ಕಾಲೇಜಿನಿಂದ ಬಿಡುಗಡೆ ಹೊಂದುವಾಗ ಪ್ರಿನ್ಸಿಪಾಲರು–"ನೀವು ನಮ್ಮ ಕಾಲೇಜಿಗೆ ಒಂದು ಒಳ್ಳೇ ಅಸೆಟ್ ಆಗಿದ್ದಿರಿ. ಈಗ ನಮ್ಮ ಕಾಲೇಜಿಗಾದ ನಷ್ಟ ನಮ್ಮದೇ ಸೊಸೈಟಿಯ ಚಿಕ್ಕಮಗಳೂರು ಕಾಲೇಜಿಗೆ ಆದ ಲಾಭ. ಹೇಗೂ ಈಗ ಇನ್ನೂ ಹತ್ತಿರ ಹತ್ತಿರ ಒಂದು ವಾರದ ತನಕ ಕಾಲೇಜಿಗೆ ಬೇಸಿಗೆ ರಜೆ ಇದೆ. ಕಾಲೇಜು ತೆರೆಯುವ ದಿನ ನೀವು ಹೋಗಿ ವರದಿ ಮಾಡಿಕೊಂಡರೆ ಸಾಕು" ಎಂದರು.

ಊರಿಗೆ ಹಿಂತಿರುಗಿದ ಮೇಲೆ ಕಾಲೇಜು ಪುನರಾರಂಭವಾಗುವ ದಿನದ ತನಕ ಕಾಯುವುದು ಬೇಡ. ಇನ್ನೊಂದೆರಡು ದಿನದಲ್ಲಿ ತಾನು ಮತ್ತು ಅಪ್ಪ ಇಬ್ಬರೂ ಚಿಕ್ಕಮಗಳೂರಿಗೆ ಹೋಗಿ ಹೋಟೆಲ್‌ನಲ್ಲಿದ್ದುಕೊಂಡು ತಾವು ಮೂರು ಜನ ಇರಲು ಸಣ್ಣ ಮನೆಯೊಂದನ್ನು ಹುಡುಕಿ ಅಲ್ಲಿ ತಳ ಊರಿದ ಮೇಲೆ ಮತ್ತು ತಾನು ಹೊಸ ಕಾಲೇಜಿನಲ್ಲಿ ವರದಿ ಮಾಡಿಕೊಂಡ ನಂತರ ಅಪ್ಪ ಹೊರಟು ಬಂದು ಆಚೆಗೆ ಒಂದು ವಾರದಲ್ಲಿ ಅಮ್ಮನನ್ನೂ ಕರೆತರುವುದೆಂದು ಮಾತಾಡಿಕೊಂಡರು.

ಚಿಕ್ಕಮಗಳೂರಿಗೆ ಹೋಗುವ ಮುನ್ನ ವಸುಂಧರಾಳನ್ನು ಭೇಟಿಯಾಗಲು ಹೇಮಾ ಅವಳ ಮನೆಗೆ ಹೋದಳು. ದಾವಣಗೆರೆಗೆ ಹೋಗಿ ಬಂದ, ಚಿಕ್ಕಮಗಳೂರಿಗೆ ಹೋಗುತ್ತಿರುವ ವಿಚಾರಗಳನ್ನು ಕೇಳಿ ವಸುಂಧರಾಗೆ ಒಂದು ರೀತಿಯಲ್ಲಿ ಸಮಾಧಾನವಾಯಿತು. "ಹೋಗಲಿ ಬಿಡು. ಮುಂದೆ ದಾರಿ ಹೇಗಪ್ಪಾ ದೇವರೆ ಅಂತ ಪರಿತಪಿಸುವ ಹಾಗೆ ಆಗದೆ ಗೌರವದಿಂದ ಬದುಕುವುದಕ್ಕೆ ಒಂದು ದಾರಿ ಆಯ್ತಲ್ಲ, ಅದಕ್ಕೆ ನಾವು ಸಂತೋಷ ಪಡಬೇಕು. ಹೌದು ಅಲ್ಲಿ ನಿನ್ನ ಜೊತೆ ಯಾರಿರುತ್ತಾರೆ?" ಎಂದು ಕೇಳಿದಳು. "ನಮ್ಮ ಅಪ್ಪ ಅಮ್ಮ ನನ್ನ ಜೊತೆ ಇರುತ್ತಾರೆ, ಇಲ್ಲಿ ನಮ್ಮ ಅಣ್ಣ ಮತ್ತು ಅತ್ತಿಗೆ ಇರುತ್ತಾರೆ. ರಜೆ ಬಂದಾಗ ಹೋಗಿ ಬಂದು ಮಾಡೋದು ಅಂತ ಅಂದುಕೊಂಡಿದ್ದೀವಿ" ಎಂದಳು. ವಸುಂಧರಾ "ನೀನು ಅಲ್ಲಿಗೆ ಹೋಗಿ ಸೆಟ್ಲ್ ಆದ ಮೇಲೆ ನಾನೂ ಯಾವಾಗಲಾದರೂ ಬರ್ತೀನಿ." ಎಂದಳು. "ಬರಲೇ ಬೇಕು. ಅದಕ್ಕೆ ಮುಂಚೆ ನಿನ್ನದೂ ಏನಾದರೂ ಒಂದು ದಾರಿ ಆಗಬೇಕು. ನಾನು ಹೇಳಿದ್ದರ ಅರ್ಥ ಆಯಿತಲ್ಲವಾ" ಎಂದಳು. "ಹೂಂ. ಆಯಿತಮ್ಮಾ. ಅಲ್ಲಿ ವಿದ್ಯಾ ಕೂಡಾ ಅದೇ ಹೇಳಿದರು. ಆದರೆ ನಿನಗೆ ಹೀಗಾದದ್ದು ನೋಡಿ ನನಗೆ ಈಗ ನಾನು ಇರೋ ರೀತೀಲೇ

ಸುಖವಾಗಿದ್ದೀನಲ್ಲ ಅಂತ ಅನ್ನಿಸುತ್ತಾ ಇದೆ" ಎಂದಳು. ಅದಕ್ಕೆ ಹೇಮಾ– "ಅಯ್ಯೋ ವಸೂ ನಾನು ನತದೃಷ್ಟೆ. ನನಗೆ ಹೀಗಾಯ್ತು ಅಂತ ನಿನಗೂ ಹಾಗೇ ಅಗಬೇಕು ಅಂತ ಏನಿಲ್ಲವಲ್ಲ. ದಿನವೂ ಎಲ್ಲಾದರೂ ಒಂದು ಕಡೆ ಆಕ್ಸಿಡೆಂಟ್ ಆಗ್ತಾನೇ ಇರುತ್ತೆ. ಹಾಗಂತ ಬಸ್ ಪ್ರಯಾಣ ಯಾರಾದರೂ ನಿಲ್ಲಿಸಿದ್ದಾರೇನು? ಹಾಗೇ ಬದುಕಿನ ಪಯಣವೂ ನಿಲ್ಲದೆ ಸಾಗಬೇಕು. ಇನ್ನೇನು ಮುಂದಕ್ಕೆ ದಾರೀನೇ ಇಲ್ಲ, ಇರೋದೇನಿದ್ದರೂ ಪ್ರಪಾತವೇ ಅಂತ ಅನ್ನುವಾಗಲೂ ಒಂದು ದಾರಿ ಕಾಣಿಸಿಕೊಳ್ಳಬಹುದಲ್ಲವಾ? ಈಗ ನೀನೇ ಹೇಳಿದ ಹಾಗೆ" ಎಂದಳು. ವಸುಂಧರಾ ಬರಿದೆ ತಲೆಯಾಡಿಸಿದಳು.

ಅಧ್ಯಾಯ–22

ವಸುಂಧರಾಳ ಬದುಕಿನ ಪಯಣ ನಿಲ್ಲದೆ ಸಾಗಿತ್ತೇನೋ ನಿಜ. ಆದರೆ ಅದು ಹೇಮಾ ಹಾರೈಸಿದಂತೆ ಅಲ್ಲ. ಎಂದಿನಂತೆ ಶಾಲೆಗೆ ಹೋಗುವುದು, ತನ್ನ ಪಾಲಿನ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿಕೊಂಡು ಹೋಗುವುದು ಅವಳ ಸ್ವಭಾವದ ಭಾಗವೇ ಆಗಿತ್ತೇನೋ ಎನ್ನುವ ಹಾಗೆ ನಿರ್ವಹಿಸಿಕೊಂಡುಹೋಗುತ್ತಿದ್ದಳು. ಸಾಹಿತ್ಯದ ಓದನ್ನು ಬಿಡದೆ ನಡೆಸಿಕೊಂಡು ಹೋಗುತ್ತಿದ್ದಳು. ಬಿಡುವು ಸಿಕ್ಕಿದಾಗ ಸ್ಥಳೀಯ ಪತ್ರಿಕೆಗಳಿಗೆ ಸಣ್ಣ ಪುಟ್ಟ ಲೇಖನಗಳನ್ನು ಕಳಿಸುತ್ತಿದ್ದಳು. ಇದರ ಜೊತೆಗೆ ಮನೆಯ ಕೆಲಸದ ಕಡೆ ಹೆಚ್ಚು ನಿಗಾ ಕೊಡಬೇಕಾಗಿ ಬಂತು. ಅದಕ್ಕೆ ಕಾರಣ ದಿನೇದಿನೇ ಹದಗೆಡುತ್ತಾ ಹೋಗುತ್ತಿದ್ದ ಅಮ್ಮನ ಆರೋಗ್ಯ. ಅಡಿಗೆ ಮನೆಯ ಕೆಲಸವನ್ನೇನೋ ತಾನು ನೋಡಿಕೊಂಡು ಹೊಗುತ್ತಿದ್ದಳು. ಆದರೆ ಅದರ ಜೊತೆಗೆ ಪಾತ್ರೆ ತೊಳೆಯುವುದು, ಮನೆ ಸಾರಿಸುವುದು ಮೊದಲಾದ ಕೆಲಸಗಳನ್ನೂ ಮಾಡಿಕೊಂಡು ಹೋಗುವುದು ದಿನ ಕಳೆದಂತೆ ಅವಳಿಗೂ ಕಷ್ಟವೆನಿಸತೊಡಗಿತು. ಅದಕ್ಕಾಗಿ ಸಹಾಯಕ್ಕಿರಲೆಂದು ಒಬ್ಬ ಕೆಲಸದ ಆಳನ್ನು ನೇಮಿಸಿಕೊಂಡಳು. ಇನ್ನು ಅವಳ ತಮ್ಮ ಪ್ರದ್ಯುಮ್ನ ಎಸ್.ಎಸ್.ಎಲ್.ಸಿ ಮುಗಿಸಿ ಪಿ.ಯು.ಸಿ.ಗೆ ಹೋದರೂ ಅದನ್ನು ಮುಗಿಸಲಾಗಲಿಲ್ಲ. ಕೊನೆಗೆ ಪಾಲಿಟೆಕ್ನಿಕ್ ಕಾಲೇಜಿಗೆ ಸೇರಿಕೊಂಡು ಕಷ್ಟದಿಂದ ಮೆಕ್ಯಾನಿಕಲ್ ಡಿಪ್ಲೊಮಾ ಮುಗಿಸಿದ. ಒಂದೆರಡು ವರ್ಷ ಕೆಲಸವಿಲ್ಲದೆ ಅಲೆದಾಡಿಕೊಂಡು ಇದ್ದ. ಅಷ್ಟು ಹೊತ್ತಿಗೆ ತುಮಕೂರಿನಲ್ಲೇ ಹೊಸದಾಗಿ ಪ್ರಾರಂಭವಾದ ಒಂದು ಕಾರ್ಖಾನೆಯಲ್ಲಿ ಅವನಿಗೆ ಕೆಲಸ ಸಿಕ್ಕಿತು. ಎಂಥದೋ ಒಂದು. ತಿಂಗಳಿಗೆ ಸಂಬಳ ಬರುವ ಕೆಲಸ. ಮನೆಯ ಮುಂದಿನದು. ಎಲ್ಲೂ ಹೊರಗೆ ಹೋಗಬೇಕಾಗಿಲ್ಲವಲ್ಲ ಎಂದು ಜೋಯಿಸರು ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಅವನೀಗ 24ರ ಸ್ಫುರದ್ರೂಪಿ ತರುಣ. ಅದಾಗಲೇ ಅವನಿಗೆ ಹೆಣ್ಣು ಕೊಡಲು ಹೆಣ್ಣು ಹೆತ್ತವರು ಜೋಯಿಸರ ಬಳಿ ಪ್ರಸ್ತಾಪಗಳನ್ನು ತರತೊಡಗಿದರು. ಆದರೆ ಮನೆಯಲ್ಲಿ ಮದುವೆಯ ವಯಸ್ಸು ಮಿರುತ್ತ ಬಂದಿರುವ ಹೆಣ್ಣು ಮಗಳಿರುವಾಗ ಅವಳ ಮದುವೆ ಮಾಡುವುದು ಬಿಟ್ಟು ಮಗನಿಗೆ ಮದುವೆ ಮಾಡಿದರೆ ನೋಡಿದವರು ಏನೆಂದಾರು ಎಂಬ ಲೋಕ ಮರ್ಯಾದೆಯ ಪ್ರಶ್ನೆ ಒಂದೆಡೆಯಾದರೆ, ಸ್ವತಃ ವಸುಂಧರಾ ಬಾಯಲ್ಲಿ ಏನೂ ಹೇಳದೆ ಹೋದರೂ ಮನಸ್ಸಿನಲ್ಲಿ ನೊಂದುಕೊಳ್ಳುವುದಿಲ್ಲವೆ ಹೀಗೆಲ್ಲಾ ಸಾವಿತ್ರಮ್ಮನವರು ಯೋಚಿಸುತ್ತಿದ್ದರು. ಜೊಯಿಸರಿಗೂ ಈಗ ಅರುವತ್ತು ದಾಟಿದೆ. ಕೊನೆಗೆ ವಸುಂಧರಾಳೇ ಒಂದು ದಿನ ಅಮ್ಮನ ಹತ್ತಿರ "ನೀವು ನನ್ನ ಸಲುವಾಗಿ ಪ್ರದ್ಯುಮ್ನನ ಮದುವೆ ಮುಂದೆ ಹಾಕುತ್ತ ಹೋಗಬೇಡಿ. ಒಳ್ಳೆಯ ಕಡೆ ಸಂಬಂಧ ಬಂದರೆ ಮಾಡಿಬಿಡಿ. ನನ್ನದು ಆಗುವ ಸಮಯ ಬಂದಾಗ ಆಗುತ್ತದೆ. ಹಾಗೊಂದು

ವೇಳೆ ನನಗೂ ಮದುವೆಯಾಗಿ ಬೇರೆ ಕಡೆ ಹೋಗಬೇಕಾಗಿ ಬಂದರೆ ನಿಮ್ಮನ್ನು ನೋಡಿಕೊಳ್ಳುವವರು ಯಾರು. ನಿನ್ನ ಆರೋಗ್ಯವಂತೂ ದಿನೇದಿನೇ ಕ್ಷೀಣಿಸುತ್ತಿದೆ. ಮನೆಗೆ ಸೊಸೆ ಬಂದರೆ ಒಳ್ಳೆಯದಲ್ಲವೆ" ಎಂದು ಹೇಳಿದ್ದಷ್ಟೇ ಅಲ್ಲದೆ ಅಪ್ಪನನ್ನೂ ಅದಕ್ಕೆ ಒಪ್ಪಿಸಿದಳು. ಅವರಿಗೂ ಅವಳು ಹೇಳುತ್ತಿರುವುದರಲ್ಲಿ ಅರ್ಥವಿದೆ ಎನಿಸಿತು. ಅದರಿಂದ ಅವನಿಗೆ ಬಂದಿದ್ದ ಪ್ರಸ್ತಾವಗಳಲ್ಲಿ ಜಾತಕಾನುಕೂಲವಾಗಿ ಗಂಡು ಹೆಣ್ಣಿಗೆ ಪರಸ್ಪರ ಒಪ್ಪಿಗೆಯಾದ ಒಂದು ಸಂಬಂಧವನ್ನು ಒಪ್ಪಿಕೊಂಡು ಮದುವೆಯನ್ನು ನಡೆಸಿಯೇ ಬಿಟ್ಟರು. ಮದುವೆಗೆ ತೀರ ಹತ್ತಿರದ ಬಳಗದವರಾಗಿ ಬಂದಿದ್ದವರೆಂದರೆ ವಿಶಾಲಾಕ್ಷಮ್ಮ ಮತ್ತು ಅವರ ಕುಟುಂಬದವರು. ಶಾಮೂ ಕೂಡ ಪತ್ನೀ ಸಮೇತ ಬಂದಿದ್ದನಾದರೂ ವಸುಂಧರಾ ಅವನತ್ತ ನೋಡುವುದಾಗಲಿ ಮಾತಾಡಿಸುವುದಾಗಲಿ ಮಾಡಲಿಲ್ಲ. ಬೇಕೆಂದೇ ಅವನನ್ನು ತಪ್ಪಿಸುತ್ತಿದ್ದಳು. ಅವನ ವಿಷಯಕ್ಕೆ ಅವಳಿಗೆ ಇದ್ದುದ್ದು ಕೇವಲ ತಿರಸ್ಕಾರ. ಪ್ರದ್ಯುಮ್ನನ ಕೈಹಿಡಿದು ಸೊಸೆಯಾಗಿ ಬಂದ ಪಂಕಜ ವೈದಿಕರ ಮನೆತನದ ಕೆಳಮಧ್ಯಮ ವರ್ಗದ ಹುಡುಗಿ. ಅವಳ ತಂದೆ ಜೋಯಿಸರಿಗೆ ಚೆನ್ನಾಗಿ ಪರಿಚಯವಿದ್ದವರೇ. ಬಡತನದ ಅನುಭವ ಇರುವ ಹುಡುಗಿ ಆಗಿದ್ದರೆ ತಮ್ಮ ಮನೆಗೆ ಹೊಂದಿಕೆಯಾಗುತ್ತಾಳೆಂಬುದು ಜೋಯಿಸರ ನಿಲುವಾಗಿತ್ತು. ಆದರೆ ಓದಿದ್ದು ಎಸ್.ಎಸ್.ಎಲ್.ಸಿ. ವರೆಗೆ ಮಾತ್ರ. ಅದೇನೂ ಮದುವೆಗೆ ಅಡ್ಡಿಯಾಗಲಿಲ್ಲ. ಎಲ್ಲರ ಜೊತೆ ಹೊಂದಿಕೊಂಡು ಹೋಗುವ ಸ್ವಭಾವದವಳಾಗಿದ್ದರಿಂದ ಎಲ್ಲರಿಗೂ ಸಮಾಧಾನವಾಗಿತ್ತು.

ಈ ಮಧ್ಯೆ ವಸುಂಧರಾ ಕೆಲಸ ಮಾಡುತ್ತಿದ್ದ ಪ್ರೌಢಶಾಲೆಯ ಆಡಳಿತ ಮಂಡಳಿಯವರು ಬೇಲೂರಿನಲ್ಲಿ ಬಹಳ ಹಿಂದೆಯೇ ತಮ್ಮ ವಿನಾಯಕ ಎಜುಕೇಷನ್ ಸೊಸೈಟಿಯ ವತಿಯಿಂದ ಪ್ರಾರಂಭಿಸಿದ್ದ ಜೂನಿಯರ್ ಕಾಲೇಜನ್ನು ಪದವಿ ಕಾಲೇಜಾಗಿ ಪದೋನ್ನತಿಗೊಳಿಸಿ ಅಂತಿಮ ಬಿ.ಎ. ತರಗತಿಗೆ ಅಡ್ಮಿಷನ್ನು ಮಾಡಿಸಿದ್ದರು. ಆ ಕಾಲೇಜಿಗೆ ಈಗಾಗಲೇ ಇದ್ದ ಒಬ್ಬ ಕನ್ನಡ ಅಧ್ಯಾಪಕರ ಜೊತೆಗೆ ಈಗ ಇನ್ನೊಬ್ಬ ಅಧ್ಯಾಪಕರ ಅಗತ್ಯವಿತ್ತು. ವಸುಂಧರಾ ಈಗ್ಗೆ ಎರಡು ವರ್ಷಗಳ ಹಿಂದೆ ಪ್ರಥಮ ದರ್ಜೆಯಲ್ಲಿ ಕನ್ನಡದಲ್ಲಿ ಎಂ.ಎ. ಮಾಡಿದ್ದು ಆಡಳಿತ ಮಂಡಳಿಯವರಿಗೆ ಗೊತ್ತಿದ್ದರಿಂದ ಅವಳು ಒಪ್ಪುವುದಾದರೆ ಅವಳನ್ನೇ ಏಕೆ ಅಲ್ಲಿಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಬಾರದು ಎಂದು ಯೋಚಿಸಿ ಅವಳ ಹೆಡ್ ಮಾಸ್ಟರ್ ಅವರ ಮೂಲಕ ಕೇಳಿಸಿದರು. ವಸುಂಧರಾ ಯೋಚಿಸಿ ಹೇಳುತ್ತೇನೆಂದು ಹೇಳಿದಳು. ಯೋಚಿಸಿದ ಮೇಲೆ ವೈಯಕ್ತಿಕವಾಗಿ ಅವಳಿಗೆ ಇದನ್ನು ಒಪ್ಪಿಕೊಳ್ಳುವುದರಲ್ಲಿ ಅಭ್ಯಂತರವೇನೂ ಇಲ್ಲವೆನಿಸಿತು. ಅಷ್ಟೇ ಅಲ್ಲ ಅದು ಅತ್ಯಂತ ಇಷ್ಟವೂ ಅಯಿತು. ಹೈಸ್ಕೂಲು ಮಕ್ಕಳಿಗೆ ಪಾಠ ಮಾಡುವುದಕ್ಕಿಂತ ಪದವಿ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾ ಇದ್ದರೆ ತನಗೆ ಸಾಹಿತ್ಯಿಕವಾಗಿ ಬೆಳೆಯಲು ಹೆಚ್ಚು ಅವಕಾಶವಾಗುತ್ತದೆ ಮತ್ತು ತಾನು ಎಂ.ಎ. ಓದಿದ್ದಕ್ಕೂ ಒಂದು ಸಾರ್ಥಕ ಎನ್ನಿಸಿತು. ಅದರ ಜೊತೆಗೆ ತಮ್ಮನಿಗೆ ಮದುವೆಯಾದರೂ ತಾನಿನ್ನೂ ಮದುವೆಯಾಗದೆ ಇರುವುದರ ಬಗ್ಗೆ ಪ್ರಶ್ನಿಸುವ ಪರಿಚಿತರೇ ಸುತ್ತಮುತ್ತ ಇರುವ ಊರಿನಿಂದ ಕಾಣದೆ

ಕಣ್ಮರೆಯಲ್ಲಿದ್ದರೆ ಅವರನ್ನು ನಿವಾರಿಸಿದಂತಾಗುವುದರ ಜೊತೆಗೆ ಒಂದು ಬದಲಾವಣೆ ಆದಹಾಗೂ ಆಗುತ್ತದಲ್ಲವೆ ಎಂಬ ಲೆಕ್ಕಾಚಾರವೂ ಸೇರಿತ್ತು. ಆದರೆ ತನ್ನೊಬ್ಬಳನ್ನೇ ಅಲ್ಲಿಗೆ ಕಳಿಸಲು ಅಪ್ಪ ಅಮ್ಮ ಒಪ್ಪುವ ಬಗ್ಗೆ ತೀರ ಅನುಮಾನವಿತ್ತು. ಎಂದಿನಂತೆ ಅಮ್ಮನ ಬಳಿ ಇದನ್ನು ಪ್ರಸ್ತಾಪಿಸಿದಳು. ನೀನು ಹೋಗಲು ಸಿದ್ಧಳಿದ್ದರೆ ನನಗೆ ಒಪ್ಪಿಗೆ ಇದೆ ಎಂದು ಕೇಳಿದ ಕೂಡಲೇ ಹೇಳಿ ಅವಳಿಗೆ ಪರಮಾಶ್ಚರ್ಯ ಉಂಟುಮಾಡಿದರು. ಅವರು ಮನಸ್ಸಿನಲ್ಲಿ ಯೋಚಿಸಿದ್ದೆಂದರೆ ತಾನು ಒಪ್ಪಿದವನ ಜೊತೆ ಮದುವೆ ಈಡೇರದೆ, ಮತ್ತು ಏನೋ ಕಾರಣಕ್ಕೆ ಮದುವೆಯ ಪ್ರಸ್ತಾಪಕ್ಕೆ ಅವಕಾಶವೇ ಕೊಡದಿರುವ ಮಗಳಿಗೆ ಇದರಿಂದ ಸಂತೋಷ ಸಿಗುವಂತಿದ್ದರೆ ತಾನೇಕೆ ಅಡ್ಡಿಬರಬೇಕು ಎಂಬುದು ಒಂದಾದರೆ ತನಗಿಂತ ಚಿಕ್ಕ ವಯಸ್ಸಿನ ನಾದಿನಿ ವೈವಾಹಿಕ ಜೀವನ ಸಾಗಿಸುತ್ತಿರುವಾಗ ಅವಳ ಕಣ್ಣೆದುರು ಅವಳಿಗಿಂತ ದೊಡ್ಡವಳಾದ ಮಗಳು ಇನ್ನೂ ಮದುವೆಯಾಗದೆ ಇರುವುದು ಸರಿಕಾಣದು ಎಂಬುದು ಇನ್ನೊಂದು. ಜೊತೆಗೆ ಅತ್ತಿಗೆ ನಾದಿನಿಗೆ ಘರ್ಷಣೆಗೆ ಅವಕಾಶವಾಗುವ ಸಂದರ್ಭವನ್ನೂ ತಪ್ಪಿಸಿದಂತಾಗುತ್ತದೆ. “ನೀನು ಒಬ್ಬಳೇ ಪರಸ್ಥಳದಲ್ಲಿ ಇರಲು ಸಾಧ್ಯವಾಗುವುದಿಲ್ಲ. ನಿನ್ನ ಜೊತೆ ನಾನು ಬರುತ್ತೇನೆ. ನಿಮ್ಮ ಅಪ್ಪ ಬರುವುದು ಅನುಮಾನ. ಬರದಿದ್ದರೆ ಬೇಡ. ಅವರನ್ನು ನೋಡಿಕೊಳ್ಳಲು ಹೇಗೂ ನೆಚ್ಚಿನ ಸೊಸೆ ಇದ್ದಾಳೆ. ರಜೆ ಬಂದಾಗ ನಾವೇ ಬರುವುದೋ ಅವರೇ ಬರುವುದೋ ಮಾಡಿದರೆ ಆಯಿತು” ಎಂದು ಅವಳ ಸಮಸ್ಯೆಯನ್ನು ಬಗೆಹರಿಸಿಯೇ ಬಿಟ್ಟರು. ಜೋಯಿಸರಿಗೂ ಒಂದು ರೀತಿಯಲ್ಲಿ ಸ್ವಲ್ಪ ಸಮಾಧಾನವೆನಿಸಿತು. ಮಗಳು ಎದುರುಗಡೆ ಇದ್ದಾಗ ಇನ್ನೂ ಈ ಹುಡುಗಿಯ ಮದುವೆ ಆಗಲಿಲ್ಲವಲ್ಲ ಎಂಬ ಯೋಚನೆ ಅನಿವಾರ್ಯವಾಗಿ ಬರುತ್ತಿತ್ತು. ಜೊತೆಗೆ ಮನೆಗೆ ಬಂದವರು ಏನು ಮಗಳ ಮದುವೆ ಯಾಕೆ ಇನ್ನೂ ತಡ ಮಾಡ್ತಾ ಇದ್ದೀರಿ ಎಂದು ಕೇಳುವವರಿಗೆ ಉತ್ತರ ಹೇಳುವ ಕಷ್ಟ ಸ್ವಲ್ಪ ಕಡಿಮೆಯಾಗಬಹುದು ಎಂಬುದು ಅವರ ಯೋಚನೆ. ಅಂತೂ ವಸುಂಧರಾ ಬೇಲೂರಿಗೆ ಹೋಗಲು ಭೂಮಿಕೆ ಸಿದ್ಧವಾಯಿತು.

* * *

ಚಿಕ್ಕಮಗಳೂರಿನ ಹೊಸ ಆರ್ಟ್ಸ್ ಮತ್ತು ಕಾಮರ್ಸ್ ಕಾಲೇಜಿನಲ್ಲಿ ಹೇಮಾಳ ಹೊಸ ಬದುಕು ಆರಂಭವಾಗಿ ಒಂದು ವರ್ಷ ಕಳೆದೇ ಹೋಯಿತು. ಆ ಊರಿನ ಕೋಟೆ ಬಡಾವಣೆಯಲ್ಲಿ ಅವಳ ಕಾಲೇಜು ಇತ್ತು. ಕಾಲೇಜಿಗೆ ನಡೆದು ಹೋಗಬಹುದಾದಷ್ಟು ದೂರದಲ್ಲಿ ಒಂದು ಅನುಕೂಲವಾದ ಮನೆಯನ್ನು ನೋಡಿದರು. ಆ ಕಾಲೇಜು ಹೇಮಾಳಿಗೆ ಹೊಸದಾದರೂ ಅದು ಸಾಕಷ್ಟು ಹಳೆಯ ಕಾಲೇಜೇ. ಕಾಲೇಜಿನ ಖಾಯಂ ಉಪನ್ಯಾಸಕರೇ 40 ಜನರಿದ್ದರು. ಅವರ ಜೊತೆಗೆ ಅಂಶಕಾಲಿಕ ಉಪನ್ಯಾಸಕರು ಹತ್ತು ಜನರಿದ್ದರು. ಹೇಮಾಳ ಸಮಾಜ ಶಾಸ್ತ್ರ ವಿಭಾಗದಲ್ಲಿ ಹೇಮಾ ಸೇರಿ ನಾಲ್ಕು ಜನರಿದ್ದರು. ಅದರಲ್ಲಿ ಇಬ್ಬರು ಪುರುಷರಾದರೆ ಇನ್ನಿಬ್ಬರು ಮಹಿಳಾ ಉಪನ್ಯಾಸಕಿಯರು. ಶಿವರಾಜನಿಂದ ಡೈವರ್ಸ್ ಸಿಗಲು ಇನ್ನೂ ಸಾಕಷ್ಟು ಕಾಲವಿತ್ತು.

ಜಿಲ್ಲೆಯ ಕೇಂದ್ರ ಸ್ಥಾನವಾದ ಚಿತ್ರದುರ್ಗದ ಕೋರ್ಟಿನಲ್ಲಿ ಅದು ಅಡ್ಮಿಷನ್‌ಗೆ ಬರುವುದಿತ್ತು. ಆಗ ಕೋರ್ಟಿಗೆ ರಜಾಕಾಲ. ಲಾಯರ್ ಹೇಳಿದ ಪ್ರಕಾರ ಜುಡಿಷಿಯಲ್ ಸೆಪರೇಷನ್ ಅವಧಿ ಮುಗಿದ ನಂತರದಲ್ಲೂ ಬೇರೆಯಾಗಬೇಕೆಂಬ ಅವರ ನಿರ್ಧಾರದಲ್ಲಿ ಏನೂ ಬದಲಾವಣೆಯಾಗದಿದ್ದರೆ ಡೈವರ್ಸ್ ಸಿಗುವುದೇನೂ ಕಷ್ಟವಾಗಲಾರದು. ಆಗಲಿ. ತನಗೆ ಮುಂಚೆ ಡೈವರ್ಸ್ ಸಿಕ್ಕಿ ತಾನೆ ಏನಾಗಬೇಕಾಗಿದೆ? ಈಗೇನು ನಾನು ಮದುವೆಯಾಗಲು ತುದಿಗಾಲ ಮೇಲೇನೂ ನಿಂತಿಲ್ಲವಲ್ಲ ಎಂದು ಅ ವಿಷಯಕ್ಕೆ ಅಷ್ಟು ತಲೆಕೆಡಿಸಿಕೊಳ್ಳಲಿಲ್ಲ. ಈ ವಿಷಯದ ಬಗ್ಗೆ ನಿಜವಾಗಿ ತಲೆಕೆಡಿಸಿಕೊಳ್ಳಬೇಕಾಗಿದ್ದದ್ದು ಶಿವರಾಜ. ಡೈವರ್ಸ್ ಸಿಗುವವರೆಗೂ ಮತ್ತೆ ಮದುವೆಯಾಗುವಂತಿಲ್ಲ. ಅಲ್ಲಿಯ ವರೆಗೂ ಹೆಣ್ಣಿನ ಸಹವಾಸವಿಲ್ಲದೆ ಶಿವರಾಜನಿಗೆ ಇರಲು ಸಾಧ್ಯವೇ ಇಲ್ಲ. ಅವನ ಸ್ವಚ್ಛಂದ ಬದುಕು ಇನ್ನು ಮೇಲೆ ನಿರಾತಂಕವಾಗಿ ಸಾಗಲು ಯಾವ ಅಡ್ಡಿಯೂ ಇಲ್ಲ. ಹೀಗೆ ಯೋಚಿಸುವಳು.

ಕಾಲೇಜಿನ ಅಧ್ಯಾಪನದ ಅವಧಿ ಮುಗಿದ ಮೇಲೆ ಬೇಕಾದಷ್ಟು ಸಮಯ ಸಿಗುತ್ತಿತ್ತು. ಹೇಮಾ ಈಗ ಅಧ್ಯಯನದ ಕಡೆ ಹೆಚ್ಚು ಹೆಚ್ಚು ಸಮಯವನ್ನು ವಿನಿಯೋಗಿಸ ತೊಡಗಿದಳು. ಮಾನವಿಕ ಮ್ಯಾಗಜೈನುಗಳಲ್ಲಿ ಮತ್ತು ಇನ್ನಿತರೆ ನಿಯತ ಕಾಲಿಕೆಗಳಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಕುರಿತಂತೆ ಲೇಖನಗಳನ್ನು ಬರೆಯತೊಡಗಿದಳು. ಸಾಮಾನ್ಯವಾಗಿ ಬರವಣಿಗೆ ಮಾಡುತ್ತಿದ್ದವರು ಸಾಹಿತ್ಯದ ಅಧ್ಯಾಪಕರು. ಕಲಾವಿಭಾಗದ ಅಧ್ಯಾಪಕರಲ್ಲಿ ಹಾಗೆ ಬರವಣಿಗೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದವರ ಸಂಖ್ಯೆ ಕಡಿಮೆ. ಹೇಮಾಳ ವಿಭಾಗದಲ್ಲಿ ಹೇಮಾ ಒಬ್ಬಳೇ ಹಾಗೆ ಲೇಖನಗಳನ್ನು ಬರೆಯುತ್ತಿದ್ದದ್ದು. ಆ ವರ್ಷ ನಡೆದ ಎರಡು ವಿಚಾರ ಸಂಕಿರಣಗಳಲ್ಲೂ ಅವಳು ಭಾಗವಹಿಸಿದ್ದಳು. ಮೊದಲನೆಯದು ಬೆಂಗಳೂರಿನಲ್ಲಿ ನಡೆದಿತ್ತಾದರೆ ಎರಡನೆಯದು ಧಾರವಾಡದಲ್ಲಿ ನಡೆಯಿತು.

ಬೆಂಗಳೂರಿನ ವಿಚಾರ ಸಂಕಿರಣದಲ್ಲಿ ಅವಳೇ ಶುಲ್ಕ ಸಂದಾಯ ಮಾಡಿ ಒಒಡಿ ತೆಗೆದುಕೊಂಡು ಶ್ರೋತೃವಾಗಿ ಭಾಗವಹಿಸಿದ್ದಳು. ಇನ್ನೊಂದರಲ್ಲಿ ಅವಳು ಬೆಂಗಳೂರಿನ ವಿಚಾರ ಸಂಕಿರಣದಲ್ಲಿ ಪ್ರಬಂಧ ಮಂಡಿಸಲು ಬಂದಿದ್ದ ಒಂದು ಕಾಲೇಜಿನ ಪ್ರಾಧ್ಯಾಪಕರ ಆಹ್ವಾನದ ಮೇರೆಗೆ ಪ್ರಬಂಧ ಮಂಡಿಸಲು ಧಾರವಾಡಕ್ಕೆ ಆಹ್ವಾನಿತಳಾಗಿ ಹೋಗಿದ್ದಳು. ಬೆಂಗಳೂರಿನ ವಿಚಾರ ಸಂಕಿರಣದಲ್ಲಿ ಇವಳು ಶ್ರೋತೃವಾಗಿ ಭಾಗವಹಿಸಿದ್ದರೂ ಚರ್ಚೆಗಳಲ್ಲಿ ಬಹಳ ಕ್ರಿಯಾಶೀಲವಾಗಿ ಪಾಲ್ಗೊಳ್ಳುತ್ತಿದ್ದಳು. ಅದನ್ನು ನೋಡಿ ಡಾ. ಪಾರ್ವತಿ ಇವಳನ್ನು ಧಾರವಾಡದ ವಿಚಾರ ಸಂಕಿರಣಕ್ಕೆ ಪ್ರಬಂಧ ಮಂಡಿಸಲು ಆಹ್ವಾನಿಸಿದ್ದರು. ಆ ವಿಚಾರ ಸಂಕಿರಣ ರೂಪಿಸಿದ ಸಮಿತಿಯಲ್ಲಿ ಅವರೂ ಇದ್ದರು. ಧಾರವಾಡದ ವಿಚಾರ ಸಂಕಿರಣ ಇದ್ದದ್ದು 'ಟ್ರೈಬಲ್ ಸೊಸೈಟೀಸ್ ಆಫ್ ಇಂಡಿಯಾ ಅಂಡ್ ದೇರ್ ಕಲ್ಚರ್ಸ್' ಎಂಬುದರ ಬಗ್ಗೆ. ಎರಡು ದಿನಗಳ ಆ ವಿಚಾರ ಸಂಕಿರಣದಲ್ಲಿ ಪ್ರಾರಂಭದಲ್ಲಿ ಆಶಯ ಭಾಷಣ ಮಾಡಿದವರು ಡಾ. ಅಶೋಕ ಮಹಾಪಾತ್ರ ಎಂಬುವವರು. ಹೇಮಾ ಅದರಲ್ಲಿ 'ಬಿಳಿಗಿರಿ ರಂಗನ ಬೆಟ್ಟ ಪ್ರದೇಶದ

ಸೋಲಿಗರ ಬುಡಕಟ್ಟು ಜನರ ಆಚರಣೆಗಳು" ಕುರಿತಂತೆ ಇಂಗ್ಲಿಷಿನಲ್ಲಿ ಪ್ರಬಂಧ ಮಂಡಿಸಿದಳು. ಹಿಂದೆ ತಾನು ಎಂ.ಎ. ಓದುತ್ತಿದ್ದಾಗ ಡೆಸರ್ಟೇಷನ್‌ಗಾಗಿ ಕ್ಷೇತ್ರ ಕಾರ್ಯ ಮಾಡಿ ಸಿದ್ದಪಡಿಸಲಾಗಿದ್ದ ಪ್ರಬಂಧವನ್ನು ಸ್ವಲ್ಪ ಪರಿಷ್ಕರಿಸಿ ವಿಚಾರ ಸಂಕಿರಣದಲ್ಲಿ ಮಂಡಿಸಿದ್ದಳು. ಪ್ರಬಂಧದ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು. ವಿಚಾರ ಸಂಕಿರಣದ ಎರಡನೇ ದಿವಸ ಊಟದ ವಿರಾಮದಲ್ಲಿ ಡಾ. ಪಾರ್ವತಿ ಅವರೊಡನೆ ಮಾತನಾಡುತ್ತ ಇದ್ದಾಗ ಇವಳು ಕುಳಿತಿದ್ದಲ್ಲಿಗೆ ಡಾ. ಅಶೋಕ ಮಹಾಪಾತ್ರ ಹುಡುಕಿಕೊಂಡು ಬಂದು ಅವಳ ಪ್ರಬಂಧ ಒಳ್ಳೆಯ ಒಳನೋಟಗಳಿಂದ ಕೂಡಿದ ಪ್ರಬಂಧವಾಗಿತ್ತೆಂದು ಹೇಳಿ ಅಭಿನಂದಿಸಿದರು. ಹೇಮಾ– "ಥ್ಯಾಂಕ್ಸ್ ಫಾರ್ ದಿ ಕಾಂಪ್ಲಿಮೆಂಟ್ಸ್ ಸರ್" ಎಂದಳು. ಆಮೇಲೆ ನೀವು ಅದೇ ಬುಡಕಟ್ಟಿನ ಬಗ್ಗೆ ಅಥವಾ ಬೇರಾವುದಾದರೂ ಬುಡಕಟ್ಟಿನ ಬಗ್ಗೆ ಪಿಎಚ್ಡಿ. ಏಕೆ ಮಾಡಬಾರದು ಎಂದು ಕೇಳಿದರು. ಹೇಮಾ 'ಯೋಚಿಸುತ್ತೇನೆ ಸರ್' ಎಂದಷ್ಟೇ ಉತ್ತರಿಸಿದಳು.

ನೋಡಲು ತರುಣರಂತಿರುವ, ಆದರೆ ಗಂಭೀರ ಮುಖಮುದ್ರೆಯ ಈ ಅಶೋಕ ಮಹಾಪಾತ್ರರ ಬಗ್ಗೆ ತಿಳಿಯುವ ಕುತೂಹಲದಿಂದ ಡಾ. ಪಾರ್ವತಿಯವರನ್ನು ಕುರಿತು ಹೇಮಾ ಆಮೇಲೆ "ಅಶೋಕ ಮಹಾಪಾತ್ರ ಅಂದರೆ ಯಾವ ವಿಶ್ವವಿದ್ಯಾನಿಲಯದವರು. ಹೆಸರು ನೋಡಿದರೆ ಒರಿಸ್ಸಾದವರೆನಿಸುತ್ತದೆ" ಎಂದು ಕೇಳಿದಳು. ಅದಕ್ಕೆ ಅವರು "ಹೌದು ಅವರು ಒರಿಸ್ಸಾದವರೇ. ಸಮಾಜ ಶಾಸ್ತ್ರದ ದೊಡ್ಡ ವಿದ್ವಾಂಸರು. ಅವರು ಈಗ ನಮ್ಮ ರಾಜ್ಯದಲ್ಲೇ ಶಿವಮೊಗ್ಗದ ಬಿ.ಆರ್ ಪ್ರಾಜೆಕ್ಟ್‌ನಲ್ಲಿ ಸಮಾಜಶಾಸ್ತ್ರ ವಿಭಾಗದ ರೀಡರ್ ಆಗಿ ಮೂರು ವರ್ಷದಿಂದ ಕೆಲಸ ಮಾಡುತ್ತಾ ಇದ್ದಾರೆ. ಕನ್ನಡವನ್ನು ಅರ್ಥ ಮಾಡಿಕೊಳ್ತಾರೆ. ಆದರೆ ಮಾತಾಡಲು ಸರಿಯಾಗಿ ಬರಲ್ಲ." ಎಂದರು.

ಅಧ್ಯಾಯ–23

ತಾನೀಗ ಬೇಲೂರು ಪದವಿ ಕಾಲೇಜಿಗೆ ಕನ್ನಡ ಅಧ್ಯಾಪಕಳಾಗಿ ನೇಮಕಹೊಂದಿ ಅಲ್ಲಿಗೆ ಬರುತ್ತಿದ್ದೇನೆಂಬ ವಸುಂಧರಾಳ ಪತ್ರ ಓದಿ ಹೇಮಾಳ ಸಂತೋಷಕ್ಕೆ ಪಾರವೇ ಇಲ್ಲವಾಯಿತು. ಕಾರಣ ಬೇಲೂರು ಚಿಕ್ಕಮಗಳೂರಿನಿಂದ ಅತ್ಯಲ್ಪ ದೂರದಲ್ಲಿ ಅಂದರೆ ಕೇವಲ 13–14 ಮೈಲಿಗಳ ದೂರದಲ್ಲಿ ಇದ್ದ ಊರು. ಇನ್ನೇನು ಯೋಚನೆ ಇಲ್ಲ. ಯಾವಾಗ ಬೇಕೆಂದರೆ ಆಗ ಅವಳೂ ನಾನೂ ಹೋಗುತ್ತಾ ಬರುತ್ತಾ ಇರಬಹುದು. ಬೆಂಗಳೂರಿನಂಥ ಊರಾಗಿದ್ದರೆ ಬೇಲೂರು ಆ ನಗರದ ಭಾಗವೇ ಆಗಿರುತ್ತಿತ್ತು. ಈಗ ಬೇಲೂರು ಹೆಸರಿಗೆ ಬೇರೆ ಊರಾದರೂ ಚಿಕ್ಕಮಗಳೂರಿನ ಭಾಗವೇ ಅನ್ನುವಂತಿದೆ. ಎಷ್ಟೋ ಜನ ವಿದ್ಯಾರ್ಥಿಗಳು ಅಲ್ಲಿಂದಿಲ್ಲಿಗೆ ಕಾಲೇಜಿಗೆ ಓದಲು ಓಡಾಡುವುದು ಮಾಮೂಲು. ತನ್ನ ಅಪ್ಪ ಅಮ್ಮನಿಗೂ ವಸುಂಧರಾ ಬೇಲೂರಿಗೆ ಬರುತ್ತಿರುವ ಬಗ್ಗೆ ಹೇಳಿದಳು. ಅವರೂ ಬಹಳ ಸಂತೋಷಪಟ್ಟರು.

ಅಲ್ಲಿಂದಾಚೆಗೆ ಒಂದೇ ವಾರಕ್ಕೆ ಬಂದ ಪತ್ರದಲ್ಲಿ ಬೇಲೂರಿನಲ್ಲಿ ಮನೆ ಮಾಡಿರುವುದಾಗಿ ವಸುಂಧರಾ ತಿಳಿಸಿದ್ದಳು. ಜೊತೆಗೆ ತನ್ನ ಅಪ್ಪ ಮತ್ತು ಅಮ್ಮ ಕೂಡ ಬಂದಿದ್ದು ಅಪ್ಪ ಇನ್ನೊಂದು ವಾರ ಇಲ್ಲಿದ್ದು ಊರಿಗೆ ಹಿಂತಿರುಗಲಿರುವುದಾಗಿಯೂ ಅಮ್ಮ ಮಾತ್ರ ತನ್ನ ಜೊತೆಯೇ ಇರುವುದಾಗಿಯೂ ತಿಳಿಸಿದಳು. ಜೊತೆಗೆ ಇನ್ನೊಂದು ಮಾತೂ ಸೇರಿಸಿದ್ದಳು. ಅದೆಂದರೆ "ನಿನ್ನ ಅಕರ್ಷಣ ಶಕ್ತಿಯೇ ಹೆಚ್ಚು. ಕಾರಣ ನೀನು ಬೆಂಗಳೂರಿಗೆ ಹೋದ ಒಂದು ವರ್ಷದ ನಂತರ ನಾನೂ ಬೆಂಗಳೂರಿಗೆ ಬಿ.ಎಡ್ ಓದಲು ಬಂದೆ. ಈಗ ನೀನು ಚಿಕ್ಕಮಗಳೂರಿಗೆ ಹೋದ ಒಂದು ವರ್ಷದ ನಂತರ ನಿನ್ನೊಂದಿಗಿನ ವಿರಹ ಸಹಿಸಲಾರದೆ ನಿನಗೆ ಸಮೀಪವಿರಲೆಂದೇ ನಿನ್ನನ್ನು ಹಿಂಬಾಲಿಸಿ ನಾನೂ ಬೇಲೂರಿಗೆ ಬರುತ್ತಿದ್ದೇನೆ!"

ಬೇಲೂರಿಗೆ ಬಂದು ಹೊಸ ಮನೆಯಲ್ಲಿ ತಳ ಊರಿದ ನಂತರದಲ್ಲಿ ತಾನು ಕೆಲಸ ಮಾಡಬೇಕಾದ ಕಾಲೇಜಿಗೆ ಹೋಗಿ ಪೂರ್ಣ ಕಾಲಿಕ ಕನ್ನಡ ಉಪನ್ಯಾಸಕಿಯಾಗಿ ತಾತ್ಪೂರ್ತಿಕವಾಗಿ ನೇಮಕಾತಿ ಮಾಡಲಾಗಿದೆ ಎಂಬ ಒಕ್ಕಣೆ ಇದ್ದ ಆಡಳಿತ ಮಂಡಳಿ ನೀಡಿದ್ದ ನೇಮಕಾತಿ ಆದೇಶವನ್ನು ಪ್ರಿನ್ಸಿಪಾಲರಿಗೆ ನೀಡಿದಳು. ಜೊತೆಗೆ ತನ್ನ ಎಸ್.ಎಸ್.ಎಲ್.ಸಿ. ಅಂಕಪತ್ರ, ಮತ್ತು ಎಂ.ಎ. ಅಂಕಪತ್ರ ನೀಡಿದಳು. ಪ್ರಿನ್ಸಿಪಾಲರು ಅವಳನ್ನು ರಿಪೋರ್ಟ್ ಮಾಡಿಸಿಕೊಂಡು ಅಭಿನಂದಿಸಿದರು. "ತರಗತಿಗಳೆಲ್ಲಾ ಪ್ರಾರಂಭವಾಗಿವೆ. ನಿಮ್ಮ ಸಹೋದ್ಯೋಗಿ ಮತ್ತು ವಿಭಾಗದ ಮುಖ್ಯಸ್ಥರಾದ ರಘುನಾಥರಾವ್ ಅವರನ್ನು ಭೇಟಿಮಾಡಿ" ಎಂದು ಹೇಳಿ, ಆಮೇಲೆ "ತಾಳಿ ಅವರನ್ನು ಇಲ್ಲಿಗೇ ಕರೆಸುತ್ತೇನೆ."

ಎಂದು ಹೇಳಿ ಅಟೆಂಡರನನ್ನು ಕರೆದು ರಘುನಾಥರಾವ್ ಅವರನ್ನು ಕರೆತರಲು ಹೇಳಿದರು. ತರಗತಿಗೆ ಹೋಗಿದ್ದ ರಘುನಾಥರಾವ್ ಅವರು ಅದನ್ನು ಮುಗಿಸಿಕೊಂಡು ಪ್ರಿನ್ಸಿಪಾಲರ ಕೊಠಡಿಗೆ ಹೋದರು. ಅವರಿಗಾಗಿ ಕಾಯುತ್ತಿದ್ದ ಪ್ರಿನ್ಸಿಪಾಲರು "ಬನ್ನಿ ರಘುನಾಥರಾವ್ ಮೀಟ್ ಮಿಸ್. ವಸುಂಧರಾ ಎಂದು ಹೇಳಿ ವಸುಂಧರಾಳ ಪರಿಚಯ ಮಾಡಿಕೊಟ್ಟರು. ವಸುಂಧರಾ ಎದ್ದು ನಿಂತು ಕೈಮುಗಿದು "ನಮಸ್ಕಾರ ಸರ್" ಎಂದಳು. ನಮಸ್ಕಾರ ಕೂತುಕೊಳ್ಳಿ ಎಂದು ಹೇಳಿ ನೀವು ಬಂದು ಎಷ್ಟು ದಿನ ಆಯಿತು, ಎಲ್ಲಿ ಇದ್ದೀರಿ, ಮನೆ ಮಾಡಿದ್ದೀರಾ ಮನೆ ಎಲ್ಲಾ ಅನುಕೂಲವಾಗಿದೆಯೆ? ಎಂದೆಲ್ಲಾ ಕೇಳಿದರು. ಅವರು ಆಗಲೇ ನಲವತ್ತು ದಾಟಿದ್ದ ಹಿರಿಯರು. ಅವರು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿದಳು. ಆಮೇಲೆ ಪ್ರಿನ್ಸಿಪಾಲರು "ನೋಡಿ ವಸುಂಧರಾ, ರಘುನಾಥರಾವ್ ಒಬ್ಬ ಥರ್ರೋ ಜಂಟಲ್ ಮನ್. ಅವರು ನಿಮ್ಮ ಹೆಡ್ ಅಷ್ಟೇ ಅಲ್ಲ, ನಿಮ್ಮ ಸಕಲ ಯೋಗಕ್ಷೇಮವನ್ನು ಒಬ್ಬ ಹಿರಿಯಣ್ಣನಂತೆ ನೋಡಿಕೊಳ್ಳುತ್ತಾರೆ." ಎಂದರು. ಆಮೇಲೆ ರಘುನಾಥರಾವ್ ಅವಳನ್ನು ತಮ್ಮ ವಿಭಾಗದ ಕೊಠಡಿಗೆ ಕರೆದೊಯ್ದರು. ಸಿದ್ಧಪಡಿಸಿದ್ದ ಅವಳ ವೇಳಾಪಟ್ಟಿಯನ್ನು ನೀಡಿ "ನೀವು ನಾಳೆಯಿಂದಲೇ ತರಗತಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ನಿಮಗೆ ಇದರಲ್ಲಿ ಏನಾದರೂ ಬದಲಾವಣೆ ಬೇಕೆನಿಸಿದರೆ ನನಗೆ ತಿಳಿಸಿ. ನೀವು ಇಲ್ಲಿ ಬೇಕಾದರೂ ಕೂರಬಹುದು, ಬೇಕೆಂದರೆ ಮಹಿಳಾ ಅಧ್ಯಾಪಕರಿಗೇ ಇರುವ ಕೊಠಡಿಯಲ್ಲಿ ಬೇಕಾದರೂ ಕೂರಬಹುದು. ಎಂದು ಹೇಳಿದರು. ಇನ್ನೊಂದು ಗಂಟೆ ತಡೆದು ಗ್ರಂಥ ಭಂಡಾರಕ್ಕೆ ಹೋಗಿ ನಿಮಗೆ ಬೇಕಾಗುವ ಪುಸ್ತಕ ತೆಗೆದುಕೊಳ್ಳಬಹುದು. ಅಷ್ಟು ಹೊತ್ತಿಗೆ ಅವರಿಗೂ ನೀವು ವರದಿ ಮಾಡಿಕೊಂಡಿದ್ದು ಹೋಗಿರುತ್ತೆ." ಎಂದರು. ಆಮೇಲೆ ಅವರೇ ಅಧ್ಯಾಪಕಿಯರ ಕೊಠಡಿಗೆ ಕರೆದೊಯ್ದು ವಸುಂಧರಾಳ ಪರಿಚಯವನ್ನು ಅವರಿಗೆಲ್ಲ ಮಾಡಿಕೊಟ್ಟರು.

ಕಾಲೇಜಿನ ಕಟ್ಟಡ ಅಂಥ ಭಾರಿಯೇನಲ್ಲ. ಹಾಗೆ ನೋಡಿದರೆ ಇದೇ ಸಂಸ್ಥೆ ತುಮಕೂರಿನಲ್ಲಿ ನಡೆಸುತ್ತಿದ್ದ, ಇದುವರೆಗೆ ತಾನು ಕೆಲಸ ಮಾಡುತ್ತಿದ್ದ ಪ್ರೌಢಶಾಲೆಯ ಕಟ್ಟಡವೇ ಇದಕ್ಕಿಂತ ಭವ್ಯವಾಗಿತ್ತು ಎನಿಸಿತು. ಆ ಮೇಲೆ ಗ್ರಂಥ ಭಂಡಾರಕ್ಕೆ ಹೋಗಿ ತನ್ನ ಪರಿಚಯ ಮಾಡಿಕೊಂಡು ತನಗೆ ಬೇಕಾಗಿದ್ದ ಪುಸ್ತಕಗಳನ್ನು ತೆಗೆದುಕೊಂಡಳು. ಅಲ್ಲೇ ಪರಾಮರ್ಶನ ವಿಭಾಗದಲ್ಲಿ ಸ್ವಲ್ಪ ಹೊತ್ತು ಯಾವುದೋ ಪುಸ್ತಕ ಓದುತ್ತ ಕೂತಿದ್ದಳು.

ಧಾರವಾಡದ ವಿಚಾರ ಸಂಕಿರಣ ಮುಗಿಸಿಕೊಂಡು ಬಂದ ಒಂದು ವಾರಕ್ಕೆ ಹೇಮಾ ವಸುಂಧರಾಳ ಕಾಲೇಜಿನಲ್ಲಿ ಅವಳ ವಿಭಾಗದ ರೂಮಿನಲ್ಲೇ ಪ್ರತ್ಯಕ್ಷಳಾದಳು. ವಸುಂಧರಾಗೆ ಅವಳನ್ನು ನೋಡಿ ತನ್ನ ಕಣ್ಣನ್ನೇ ನಂಬಲಾಗಲಿಲ್ಲ. "ಇದೇನೇ ಹೇಮಾ, ಇದ್ದಕ್ಕಿದ್ದ ಹಾಗೇ ಬಂದುಬಿಟ್ಟಿದ್ದೀಯಾ. ಇವತ್ತೇನು ಕಾಲೇಜಿಗೆ ರಜವೇನೆ?" ಎಂದಳು. "ಇಲ್ಲಾ ವಸೂ. ಇವತ್ತು ಶನಿವಾರ ಅಲ್ಲವಾ. ಬೆಳಿಗ್ಗೆ ಕಾಲೇಜಿಗೆ ಹೋದರೆ ಯಾರೋ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದ ಅಂತ ಸಂತಾಪ ಸೂಚಕ ಸಭೆ ನಡೆಸಿ ಕಾಲೇಜಿಗೆ ರಜೆ ಘೋಷಿಸಿಬಿಟ್ಟರು. ಹೀಗಾಗಿ ನಾನು ಕೂಡಲೇ ಮನೆಗೂ ಹೋಗದೆ ಬೇಲೂರಿಗೆ

ಯಾಕೆ ಹೋಗಿ ಬರಬಾರದು ಅಂತ ಅಂದುಕೊಂಡು ಸೀದಾ ಬಸ್ ಸ್ಟ್ಯಾಂಡಿಗೆ ಬಂದು ಬಸ್ ಹತ್ತಿ ಅರ್ಧ ಗಂಟೆ ಒಳಗೆ ಬಂದೇಬಿಟ್ಟೆ ನೋಡು." ವಸುಂಧರಾ ನಗುತ್ತಾ– "ಅಷ್ಟೊಂದು ಹತ್ತಿರಾನೇನೇ ನಿಮ್ಮೂರು?" ಎಂದಳು. ಆಮೇಲೆ "ನಮ್ಮ ಎಚ್‌ಓಡಿ ಕ್ಲಾಸ್‌ಗೆ ಹೋಗಿದ್ದಾರೆ. ನನ್ನದು ಕ್ಲಾಸ್ ಮುಗಿದಿದೆ. ಅವರಿಗೆ ಹೇಳಿಬಿಟ್ಟು ಇಲ್ಲೇ ಹತ್ತಿರದ ಹೋಟೆಲ್‌ನಲ್ಲಿ ಕಾಫಿ ಕುಡಿದು ಮನೆಗೆ ಹೋಗೋಣ. ಅಮ್ಮನಿಗೆ ನಿನ್ನನ್ನು ನೋಡಿದರೆ ಖುಷಿಯಾಗುತ್ತೆ" ಎಂದು ಮಾತಾಡುತ್ತಾ ಇದ್ದರು. ಅಷ್ಟು ಹೊತ್ತಿಗೆ ಬೆಲ್ ಆಯಿತು. ಅವರ ವಿಭಾಗದ ಮುಖ್ಯಸ್ಥರು ಬಂದರು. ಹೇಮಾಳನ್ನು ತನ್ನ ಜೀವದ ಗೆಳತಿ ಎಂದು ಅವರಿಗೆ ಪರಿಚಯಿಸಿದಳು. ಹೋಟೆಲ್‌ಗೆ ಹೋಗಿ ಕಾಫಿ ಕುಡಿದು ಮನೆಗೆ ಹೋದರು.

ಸಾವಿತ್ರಮ್ಮನವರು ಹೇಮಾಳನ್ನು ನೋಡಿ ತುಂಬಾ ಸಂತೋಷಪಟ್ಟರು. "ಅಲ್ವೇ ಹುಡುಗೀರಾ ಇದೇನ್ರೇ ದೇವರ ಆಟ! ನಿಮ್ಮಿಬ್ಬರನ್ನು ಮತ್ತೆ ಹೆಚ್ಚು ಕಡಮೆ ಒಂದೇ ಕಡೆ ಸೇರಿಸಿದ ಹಾಗಾಯಿತಲ್ರೇ" ಎಂದರು. "ಹೌದು ಆಂಟಿ. ಬರೀ ಸ್ಥಳ ಅಷ್ಟೇ ಅಲ್ಲ ಆಂಟಿ. ಈಗ ನನ್ನ ಪರಿಸ್ಥಿತೀನೂ ವಸುಂಧರಾಳ ಪರಿಸ್ಥಿತೀನೂ ಒಂದೇ ಆಗಿಬಿಟ್ಟಿದೆ" ಎಂದು ಮುಖ ಸಪ್ಪೆ ಮಾಡಿದಳು. ಅವಳ ಡೈವರ್ಸ್ ಕೇಸು ಈಗ ಕೋರ್ಟಿನಲ್ಲಿದೆ ಎಂಬುದನ್ನು ವಸುಂಧರಾಳಿಂದ ತಿಳಿದಿದ್ದ ಸಾವಿತ್ರಮ್ಮ "ಅದು ಯಾಕೆ ಹಾಗೆ ಮುಖ ಸಪ್ಪಗೆ ಮಾಡಿಕೊಳ್ತೀ ಹೇಮಾ. ನಿನ್ನಂಥ ಬಂಗಾರದಂಥ ಹುಡುಗಿ ಜೊತೆ ಬಾಳೋ ಯೋಗ್ಯತೆ ಅವನಿಗೆ ಇರಲಿಲ್ಲ. ದುಃಖ ಆದ ಮೇಲೆ ಸುಖ, ಸುಖ ಆದ ಮೇಲೆ ದುಃಖ ಇದೇ ಈ ಪ್ರಪಂಚದ ನಿಯಮ. ಈಗ ನೋಡು ನೀನು ಕೆಲಸಕ್ಕೇ ಮತ್ತೆ ಹೋಗಲ್ಲಾ ಅಂತ ಕೂತಿದ್ದೆ. ಆದರೆ ಅದಕ್ಕೊಂದು ದಾರಿ ಆಗಲಿಲ್ಲವಾ? ಹಾಗೆ ಬರೀ ಕತ್ತಲೇನೇ ಇರಲ್ಲ. ಅದರ ಅಂಚಿನಲ್ಲೇ ಬೆಳಕಿನ ಗೆರೆ ಇರುತ್ತಮ್ಮಾ. ದೇವರು ತೀರ ಅಷ್ಟೊಂದು ಕ್ರೂರಿ ಅಲ್ಲ". "ಏನು ದೇವರೋ ಏನೋ." ಎಂದಳು.

ಆಮೇಲೆ ಗೆಳತಿಯರು ಸುಮಾರು ಹೊತ್ತು ಮಾತಾಡುತ್ತ ಕೂತಿದ್ದರು. ಬೆಂಗಳೂರು, ಧಾರವಾಡಗಳಲ್ಲಿ ವಿಚಾರ ಸಂಕಿರಣಗಳಲ್ಲಿ ಪಾಲ್ಗೊಂಡಿದ್ದ ಬಗ್ಗೆ ಹೇಮಾ ಹೇಳಿದಳು. ವಸುಂಧರಾ – "ಅದು ಯಾರೋ ಹೇಳಿದೆಯಲ್ಲಾ ಅಶೋಕ ಮಿತ್ರಾನೋ ಏನೋ ಅವರು ಹೇಳಿದ ಹಾಗೇ ನೀನು ಪಿಎಚ್.ಡಿ. ಮಾಡಬಹುದಲ್ವೇನೆ?." "ಅಶೋಕ ಮಿತ್ರ ಅಲ್ಲ ಅಶೋಕ ಮಹಾಪಾತ್ರ ಅಂತ ಒರಿಸ್ಸಾದವರು." 'ಐಡ್ಲ್‌ಬ್ರೈನ್ ಈಸ್ ಎ ಡೆವಿಲ್ಸ್ ವರ್ಕ್ ಶಾಪ್' ಅಂತಾರಲ್ಲ ಹಾಗಾಗಿಬಿಟ್ಟಿದೆ ನನ್ನ ಮನಸ್ಸು ಈಗ. ಅದಕ್ಕೆ ಬೇರೆ ಯೋಚನೆಗೆ ಜಾಗ ಇಲ್ಲದ ಹಾಗೆ ಮಾಡಬೇಕು ಅಂದರೆ ನೀನು ಹೇಳಿದ ಹಾಗೇ ಪಿಎಚ್.ಡಿ.ಗೆ ರಿಜಿಸ್ಟರ್ ಮಾಡಿಸೋದೇ ಒಳ್ಳೇದು ಅನ್ನಿಸುತ್ತೆ. ಯೋಚನೆ ಮಾಡ್ತೀನಿ". ಆಮೇಲೆ ವಸುಂಧರಾಳ ಹತ್ತಿರ ಮೆಲುದನಿಯಲ್ಲಿ "ಈಗ ಗಂಡನಿಗೆ ಡೈವರ್ಸ್ ಕೊಡಕ್ಕೆ ಹೊರಟಿದ್ದೀನಿ. ಅಂದಮೇಲೆ ಈ ತಾಳಿ ಸರ, ಕಾಲುಂಗುರ ಎಲ್ಲ ಯಾಕೆ ಬೇಕು. ಅದಕ್ಕೇ ತೆಗೆದು ಹಾಕಿದರೆ ಹೇಗೆ ಅಂತ ಯೋಚನೆ ಮಾಡ್ತಿದ್ದೀನಿ." ಅದಕ್ಕೆ ವಸುಂಧರಾ ತನ್ನ ಪಿ.ಜಿ. ರೂಮ್ ಮೇಟ್ ವಿದ್ಯಾಳ ಅನುಭವ ಹೇಳಿ ತಾನು ವಿಧವೆ ಆಗಿದ್ದರೂ ಕಾಮುಕರ ಕಣ್ಣು ತಪ್ಪಿಸಲು ತನಗೆ ಅದೊಂದು ಬೇಲಿಯಂತಿದೆ ಎಂಬ

ಅವಳ ಮಾತನ್ನು ಹೇಳಿದಳು. ಹೇಮಾ– "ಸರಿಬಿಡು. ಅಪ್ಪ ಅಮ್ಮನಿಗೂ ಅದನ್ನು ತೆಗೆಯೋದು ಸರಿಕಾಣದೆ ಇರಬಹುದು" ಎಂದಳು. "ನೀನೂ ಒಂದು ಭಾನುವಾರ ಅಮ್ಮನನ್ನು ಕರೆದುಕೊಂಡು ನಮ್ಮೂರಿಗೆ ಬಾರೆ. ನನ್ನ ಮನೆ ನೋಡಿಕೊಂಡರೆ ಅವಾಗವಾಗ ಬಂದು ಹೋಗ್ತಾ ಇರಬಹುದು." ಎಂದು ಹೇಳಿ ಅಲ್ಲಿಂದ ಹೊರಟಳು.

ಆರುನೂರು ಜನ ಹುಡುಗ ಹುಡುಗಿಯರಿದ್ದ ಕಾಲೇಜಿನ ವಾತಾವರಣ ವಸುಂಧರಾಗೆ ತುಂಬಾ ಸಂತೋಷ ಉಂಟುಮಾಡಿತು. ಬಂದ ಐದಾರು ತಿಂಗಳಲ್ಲೇ ಕೆಲವು ಅಧ್ಯಾಪಕಿಯರು ಅವಳ ಹತ್ತಿರದ ಗೆಳತಿಯರಾದರು. ಅವಳ ಎಚ್‌ಓಡಿ ರಘುನಾಥರಾಯರಂತೂ ಬಹಳ ಒಳ್ಳೆಯ ಸಾಧು ಪ್ರಾಣಿ. ವಿಭಾಗದ ಏನೇ ಕೆಲಸಗಳಿದ್ದರೂ ವಸುಂಧರಾಳನ್ನು ಪೂರ್ತಿ ವಿಶ್ವಾಸಕ್ಕೆ ತೆಗೆದುಕೊಂಡೇ ಮಾಡುತ್ತಾ ಇದ್ದರು. ಮೊದಲು ಭೇಟಿ ಮಾಡಿದಾಗ ನೀಡಿದ್ದ ವೇಳಾಪಟ್ಟಿಯಲ್ಲಿ ಒಂದೆರಡು ಪುಸ್ತಕಗಳ ಬದಲು ಬೇರೆ ಪುಸ್ತಕ ತೆಗೆದುಕೊಳ್ಳಲು ತನಗೆ ಆಸಕ್ತಿ ಇದೆ ಅಂದಾಗ ಅದಕ್ಕೆ ನಿರಾಕರಿಸದೆ "ತೆಗೆದುಕೊಳ್ಳಿ ಅದಕ್ಕೇನಂತೆ. ನಿಮಗೆ ಬೇಡವಾದ ಪುಸ್ತಕವನ್ನು ನಾನೇ ತೆಗೆದುಕೊಳ್ತೀನಿ. ನಾನು ಈಗಾಗಲೇ ಕಾವ್ಯ, ಕಾದಂಬರಿ, ನಾಟಕ ಎಲ್ಲ ತೆಗೆದುಕೊಂಡಾಗಿದೆ. ನೀವು ಅನುಭವ ಪಡೆದುಕೊಳ್ಳಬೇಕಲ್ವೆ" ಎಂದು ಔದಾರ್ಯ ತೋರುತ್ತಿದ್ದರು. ಅವಳೂ ಹೊಸ ಮತ್ತು ಹಳೆಯ ಗ್ರಂಥಗಳ ವ್ಯಾಸಂಗದಲ್ಲಿ ಗಂಭೀರವಾಗಿ ತೊಡಗಿಸಿಕೊಂಡಳು.

ಓದು ಬೇಸರವಾದ ಒಂದು ದಿನ ಅವಳಿಗೆ ಇದೇ ಬೇಲೂರು, ಶ್ರವಣಬೆಳುಗೊಳದ ಕಡೆ ಕಾಲೇಜಿನಿಂದ ಟೂರಿಗೆ ಬಂದಾಗ ಅಲ್ಲವೆ ತಾನು ಪ್ರೀತಿಸುತ್ತಿದ್ದ ಎನ್.ಎಸ್ ಮಾಸ್ಟರ್ ಬೆಟ್ಟ ಇಳಿಯುವಾಗ ಜಾರಿಬಿಡುತ್ತಿದ್ದ ತನ್ನನ್ನು ತಬ್ಬಿ ಹಿಡಿದದ್ದು ಮತ್ತು ಅಲ್ಲಿಂದ ಮುಂದೆತಾನೆ ತಮ್ಮಿಬ್ಬರ ಸಂಬಂಧ ಗಾಢವಾಗುತ್ತ ಹೋದದ್ದು ಎಂಬುದು ನೆನಪಾಗಿ ಮನಸ್ಸು ಮುದುಡಿತು.

ಅಧ್ಯಾಯ–24

ಮನಸ್ಸಿಗೆ ಏನಾದರೂ ಒಂದು ಯೋಚನೆ ಹೊಕ್ಕರೆ ಅದನ್ನು ಮಾಡಿ ಮುಗಿಸುವವರೆಗೂ ಸುಮ್ಮನಿರುವ ಜಾಯಮಾನದವಳಲ್ಲ ಹೇಮಾ. ತನಗೆ ಪರಿಚಯವಾಗಿದ್ದ ಧಾರವಾಡದ ಡಾ. ಪಾರ್ವತಿ ಮೇಡಮ್ ಅವರ ಹತ್ತಿರವೂ ಪಿಎಚ್.ಡಿ. ಮಾಡುವ ಬಗ್ಗೆ ಪತ್ರದ ಮೂಲಕವೇ ಚರ್ಚಿಸಿದಳು. ಅವರು ಅವಳಿಗೆ ಬರೆದ ಪತ್ರದಲ್ಲಿ– "ಅದು ಬಹಳ ಒಳ್ಳೆಯ ಯೋಚನೆ. ಸುಮ್ಮನೆ ಏನೋ ಸಿಕ್ಕಿದ ಗ್ರಂಥಗಳನ್ನು ಓದುತ್ತಾ ಹೋಗುವ ಬದಲು ಒಂದು ವಿಷಯ ಆರಿಸಿಕೊಂಡು ಅದರ ಕುರಿತಾದ ಸಂಶೋಧನೆಗೆ ತೊಡಗಿಸಿಕೊಂಡರೆ ಅಧ್ಯಯನಕ್ಕೆ ಒಂದು ಫೋಕಸ್ ಸಿಗುತ್ತೆ. ಅಧ್ಯಯನ ಮಾಡುತ್ತಾ ಮಾಡುತ್ತಾ ಅದರ ಬಗ್ಗೆ ಪ್ರಭುತ್ವ ಬರುವುದರ ಜೊತೆಗೆ ಒಂದು ಡಿಗ್ರೀನೂ ಆಗುತ್ತೆ. ಮುಂದೆ ಅದರಿಂದ ಉದ್ಯೋಗದಲ್ಲಿ ಬಡ್ತಿಗೂ ಸಹಾಯ ಆಗುತ್ತೆ. ಅದಕ್ಕೆ ನೀವು ಮೊದಲು ಮಾಡಬೇಕಾದ್ದು ಒಬ್ಬ ಸರಿಯಾದ ಗೈಡ್ ಅನ್ನು ಆರಿಸಿಕೊಳ್ಳಬೇಕು. ಈಗ ಸದ್ಯದಲ್ಲಿನ್ನೂ ಅಫಿಲಿಯೇಟೆಡ್ ಕಾಲೇಜುಗಳಲ್ಲಿರುವವರಿಗೆ ಗೈಡ್‌ಮಾಡುವ ಅವಕಾಶ ಕೊಟ್ಟಿಲ್ಲ. ಹಾಗಿದ್ದರೆ ನಾನೇ ಮಾಡಬಹುದಾಗಿತ್ತು. ವಿಶ್ವ ವಿದ್ಯಾನಿಲಯಗಳಲ್ಲಿರುವ ರೀಡರ್‌ಗಳು ಮತ್ತು ಪ್ರೊಫೆಸರ್‌ಗಳು ಗೈಡ್ ಮಾಡಬಹುದು. ನಿಮ್ಮದು ಸದ್ಯ ಕುವೆಂಪು ವಿ.ವಿ. ವ್ಯಾಪ್ತಿಗೆ ಬರುತ್ತದಲ್ಲವೆ? ಒಂದು ಸಲ ಬಿ.ಆರ್. ಪ್ರಾಜೆಕ್ಟ್‌ಗೆ ಹೋಗಿ ಡಾ. ಅಶೋಕ ಮಹಾಪಾತ್ರ ಅವರನ್ನೇ ಕೇಳಿ. ಹೇಗೂ ನಿಮಗೆ ಪಿಎಚ್.ಡಿ. ಮಾಡಲು ಸೂಚಿಸಿದವರು ಅವರೇ ಅಲ್ಲವೆ? ಅವರಲ್ಲಿ ಜಾಗ ಖಾಲಿ ಇದ್ದರೆ ಅವರ ಹತ್ತಿರವೇ ರಿಜಿಸ್ಟರ್ ಮಾಡಿಸಬಹುದು." ಎಂದು ಸೂಚಿಸಿದ್ದರು.

ಅಶೋಕ ಮಹಾಪಾತ್ರ ಅವರಿಗೆ ಪತ್ರ ಬರೆದು ಪಿಎಚ್.ಡಿ. ಮಾಡುವ ಬಗ್ಗೆ ಮಾತಾಡುವುದಿದೆ ಯಾವಾಗ ಭೇಟಿಮಾಡಬಹುದೆಂದು ಇಂಗ್ಲಿಷ್‌ನಲ್ಲೇ ಪತ್ರ ಬರೆದಳು. ಮುಂದಿನ ಶುಕ್ರವಾರ ತಾವು ಹಾಸನದ ಸರ್ಕಾರೀ ಕಾಲೇಜಿಗೆ ವಿಶ್ವವಿದ್ಯಾನಿಲಯದ ಕೆಲಸದ ನಿಮಿತ್ತ ಬರುವುದಿದೆಯೆಂದೂ ನಿಮಗೆ ಅನುಕೂಲವಾದರೆ ಶನಿವಾರ ಅಲ್ಲೇ ಭೇಟಿಮಾಡಬಹುದೆಂದು ತಿಳಿಸಿದ್ದರು. ಹಾಸನವಾದರೆ ಬಹಳ ಒಳ್ಳೆಯದೇ ಆಯಿತು. ಬೆಳಿಗ್ಗೆ ಹೋಗಿ ಸಂಜೆಗೆ ಬಂದುಬಿಡಬಹುದು ಎಂದು ಅಂದುಕೊಂಡಳು. ಮರುದಿನ ಭಾನುವಾರವಾದ್ದರಿಂದ ಬರುತ್ತ ಬೇಲೂರಿನಲ್ಲಿ ವಸುಂಧರಾಳ ಮನೆಯಲ್ಲಿ ತಂಗಿದ್ದು ಸಾಯಂಕಾಲದ ಹೊತ್ತಿಗೆ ಬರಬಹುದು ಎಂದು ಯೋಚಿಸಿದಳು.

ಅದರಂತೆ ಶನಿವಾರ ಬೆಳಿಗ್ಗೆ ಬೇಗನೆ ಹೊರಟು ಹಾಸನದ ಸರ್ಕಾರೀ ಕಲಾ ಕಾಲೇಜಿಗೆ ಹೋದಳು. ಇವಳು ಅಲ್ಲಿ ಸಮಾಜಶಾಸ್ತ್ರ ವಿಭಾಗವನ್ನು ಹುಡುಕುತ್ತಾ ಕಾರಿಡಾರ್‌ನಲ್ಲಿ ಹೋಗುತ್ತಿದ್ದಾಗ ಎದುರುಗಡೆಯಿಂದ ಬರುತ್ತಿದ್ದ ಮಮತಾ ಮೇಡಮ್

ಅವರನ್ನು ಕಂಡು ಆಶ್ಚರ್ಯಚಕಿತಳಾದಳು. "ನಮಸ್ಕಾರಾ ಮೇಡಮ್" ಎಂದು ನಗುತ್ತ ಕೈಜೋಡಿಸಿದಾಗ ಮಮತಾ ಅವರು ಪ್ರೀತಿಯಿಂದ ಹೇಮಾಳ ಎರಡೂ ಭುಜ ಹಿಡಿದು "ಓ ಹೇಮಾ ಇದೇನು ನೀನು ಇಲ್ಲಿ? ನೀನು ದಾವಣಗೆರೆಯ ಹತ್ತಿರದ ಹರಿಹರದ ಕಾಲೇಜಿನಲ್ಲಿ ಇದ್ದೀನಿ ಅಂತ ತಿಳಿಸಿದ್ದೆ ಅಲ್ಲವಾ?" ಎಂದು ಹೇಳಿದರು. "ಹೌದು ಮೇಡಮ್. ನೀವೇನಿಲ್ಲಿ" ಎಂದಳು. "ನನಗೀಗ ಇದೇ ಕಾಲೇಜಿಗೆ ಟ್ರಾನ್ಸ್‌ಫರ್ ಆಗಿದೆಯಮ್ಮ. ಈಗ ಒಂದೆರಡು ತಿಂಗಳಾಯಿತು ಇಲ್ಲಿಗೆ ಬಂದು. ನಮ್ಮದು ಗವರ್ನಮೆಂಟ್ ಕಾಲೇಜಲ್ಲವಾ. ಮೂರುವರ್ಷಕ್ಕೊಂದು ಸಲ ಗಂಟು ಮೂಟೆ ಕಟ್ಟಿಕೊಂಡು ಹೋಗುತ್ತಾ ಇರೋದೇ ನಮ್ಮ ಕೆಲಸ" ಎಂದರು. "ಅದೊಂದು ಥರಾ ಚೆನ್ನಾಗಿರುತ್ತಲ್ಲವಾ ಮೇಡಮ್. ಹೊಸಾ ಹೊಸಾ ಊರು, ಹೊಸಾ ಹೊಸಾ ಕಾಲೇಜು. ಹೊಸಾ ಹೊಸಾ ಜನರನ್ನು ನೋಡುತ್ತ ಇರಬಹುದು." ಎಂದರೆ "ಹೂಂ ಹೂಂ. ಕನ್ನಡದಲ್ಲಿ ಒಂದು ಗಾದೆ ಇದೆಯಲ್ಲ–'ಕಂಡೋರ ಹೆಂಡಿರು ಸುಂದರಿ'–ಅಂತ ಹಾಗೆ. ಸರ್ಕಾರಿ ಕಾಲೇಜಿನೋರಿಗೆ ಖಾಸಗಿ ಕಾಲೇಜಿನೋರನ್ನು ನೋಡಿ ಇವರು ಇದ್ದ ಕಡೇನೇ ಇರ್ತಾರೆ. ಟ್ರಾನ್ಸ್‌ಫರ್ ಕಾಟ ಇಲ್ಲ. ಮನೆಮಠ ಎಲ್ಲ ಮಾಡಿಕೊಳ್ಳಬಹುದು ಅಂತ ಹೊಟ್ಟೆ ಉರಿ ಆದರೆ ಖಾಸಗಿ ಕಾಲೇಜಿನೋರಿಗೆ ನೀನು ಹೇಳಿದ ಹಾಗೆ ಇವರುಗಳು ಮೂರು ಮೂರು ವರ್ಷಕ್ಕೊಂದು ಸಲ ಹೊಸ ಹೊಸ ಜಾಗ ನೋಡುತ್ತಾರೆ. ಹೊಸ ಹೊಸ ಮೇಷ್ಟ್ರುಗಳನ್ನು ನೋಡ್ತಾರೆ. ನಾವಾದರೆ ಇದ್ದ ಕಡೇನೇ ಇದ್ದುಕೊಂಡು ಅದೇ ಹಳಸಲು ಮುಖಗಳನ್ನು ನೋಡಿಕೊಂಡು ಅವರ ಹತ್ತಿರಾನೇ ಜಗಳಾಡಿಕೊಂಡು ಇರಬೇಕು ಅಂತ ಹೊಟ್ಟೆ ಉರಿ ಪಟ್ಟುಕೊಳ್ತಾರೆ. ಮೊದಲು ಒಂದೆರಡು ಟ್ರಾನ್ಸ್‌ಫರ್ ಆಗೋವರೆಗೂ ಹಾಗೇ ಅನ್ನಿಸುತ್ತೆ. ಆಮೇಲೆ ಸಂಸಾರ ಕಟ್ಟಿಕೊಂಡ ಮೇಲೆ ಊರಿಂದ ಊರಿಗೆ ಗಂಟು ಮೂಟೆ ಕಟ್ಟಿಕೊಂಡು ಹೋಗೋದಿದೆಯಲ್ಲ ಅದಕ್ಕಿಂತ ದೊಡ್ಡ ಶಿಕ್ಷೆ ಇಲ್ಲ. ಈಗ ನನ್ನನ್ನೇ ನೋಡು. ತುಮಕೂರಿನಲ್ಲಿದ್ದಾಗೇನೋ ಬೆಂಗಳೂರಿನಿಂದ ಓಡಾಡೋಕೆ ಅನುಕೂಲ ಇತ್ತು ಓಡಾಡಿದೆ. ಆದರೆ ಈಗ ಬೆಂಗಳೂರಿನಲ್ಲಿ ನಮ್ಮ ಅಪ್ಪ ಅಮ್ಮ. ಅವರ ಜೊತೇನೇ ಮಗನನ್ನೂ ಬಿಟ್ಟು ಇಲ್ಲಿ ನಾನೊಬ್ಬಳೇ ಒಂದು ಸಣ್ಣ ಮನೆಮಾಡಿಕೊಂಡು ಇರಬೇಕಾಗಿದೆ. ಒಂದು ಥರಾ ವಾನಪ್ರಸ್ಥ ಅಂತ ಇಟ್ಟುಕೋ." ಎಂದು ನಕ್ಕರು. "ಅಯ್ಯೋ ಇದೇನು ಕಾರಿಡಾರಲ್ಲೇ ಮಾತಿಗೆ ನಿಲ್ಲಿಸಿಕೊಂಡೆನಲ್ಲ. ಬಾ ನಮ್ಮ ಡಿಪಾರ್ಟ್‌ಮೆಂಟಿಗೆ ಹೋಗೋಣ ಎಂದು ಕರೆದುಕೊಂಡು ಹೋದರು. ಅವರ ಕೊಠಡಿಯ ಹೊರಗಡೆ ಇದ್ದ 'ಡಾ. ಎಸ್. ಮಮತಾ' ಎಂಬ ಬೋರ್ಡ್ ನೋಡಿ "ಕಂಗ್ರಾಟ್ಸ್ ಮೇಡಮ್ ಡಾಕ್ಟೊರೇಟ್ ಯಾವಾಗ ಅವಾರ್ಡ್ ಆಯಿತು ಮೇಡಮ್." ಎಂದು ಕೇಳಿದಳು. "ಆಯಿತಮ್ಮ ಒಂದಾರು ತಿಂಗಳು. ಅದರಿಂದಲೇ ಈಗ ನನ್ನ ರೇಟ್ ಹೆಚ್ಚಾಗಿದೆ!" ಎಂದು ನಕ್ಕರು. ಹೇಮಾ ನಗುತ್ತಾ "ಒಳ್ಳೇ ಜೋಕ್ ಮೇಡಮ್" ಎಂದಳು. ಅಲ್ಲಿ ಹೋದ ಮೇಲೆ ಹೇಮಾ ತಾನು ಈಗ ಅಲ್ಲಿಗೆ ಬಂದ ಉದ್ದೇಶ ಹೇಳಿದಳು. "ಓಹ್! ಅವರನ್ನು ನೋಡೋಕೆ ಬಂದ್ಯಾ. ಒಳ್ಳೇದಾಯ್ತು. ತಾಳು ಅವರ ವಿಭಾಗದವರಿಗೆ ಯಾರಿಗಾದರೂ ಹೇಳಿಕಳಿಸಿ ಅವರು ಇಲ್ಲಿಗೇ ಬರ್ತಾರಾ ಅಥವಾ ಐ.ಬಿ.ಗೆ ಹೋಗಬೇಕಾ ತಿಳಿದುಕೊಳ್ಳೋಣ" ಎಂದು ಹೇಳಿ ಒಬ್ಬ ಅಟೆಂಡರ್‌ನನ್ನು

ಕರೆದು ಡಾ. ಅಶೋಕ ಮಹಾಪಾತ್ರ ಈಗ ಬರ್ತಾರಾ ಹೇಗೆ ತಿಳಿದುಕೊಂಡು ಬಾ ಎಂದು ಹೇಳಿದರು. ಐದೇ ನಿಮಿಷದಲ್ಲಿ ಹಿಂತಿರುಗಿದ ಅವನು ಅವರು ಆಗಲೇ ಬಂದು ವಿಭಾಗದಲ್ಲಿದ್ದಾರೆ ಎಂದು ಹೇಳಿದ. ಹೇಮಾ ಮೇಡಮ್‌ಗೆ ಮತ್ತೆ ಸಿಕ್ಕುತ್ತೇನೆ ಎಂದು ಹೇಳಿ ಹೊರಡುವ ಮೊದಲು ಈಗ ತಾನು ಚಿಕ್ಕಮಗಳೂರಿನ ಟಿ.ಎಸ್.ಜೆ. ಕಾಲೇಜಿನಲ್ಲಿ ಇರುವುದಾಗಿ ಅಷ್ಟೇ ಹೇಳಿದಳು. ತನ್ನ ಸಂಸಾರದ ವಿಷಯ ಹೇಳಲಿಲ್ಲ. ಜೊತೆಗೆ ವಸುಂಧರಾ ಕೂಡ ಬೇಲೂರಿನ ಖಾಸಗಿ ಪದವಿ ಕಾಲೇಜಿನಲ್ಲಿ ಉಪನ್ಯಾಸಕಳಾಗಿ ಇರುವುದಾಗಿ ತಿಳಿಸಿದಳು. "ಓ ಹಾಗಾದರೆ ನೀವಿಬ್ರೂ ಜೋಡಿ ಹಕ್ಕಿಗಳು ಹತ್ತತ್ರಾನೇ ಸೇರಿದ ಹಾಗಾಯ್ತು" ಅನ್ನು ಎಂದರು. "ಹೌದು ಮೇಡಮ್" ಎಂದು ನಕ್ಕಳು. "ಹಾಗಾದರೆ ಒಂದು ಕೆಲಸ ಮಾಡಿ. ನಾನು ಸಾಮಾನ್ಯವಾಗಿ ಪ್ರತಿವಾರವೂ ಬೆಂಗಳೂರಿಗೆ ಹೋಗುತೀನಿ. ಆದರೆ ನೀವಿಬ್ಬರೂ ಮುಂಚೇನೇ ತಿಳಿಸಿ. ಒಂದು ಶನಿವಾರ ಸಾಯಂಕಾಲವೋ ಭಾನುವಾರ ಬೆಳಿಗ್ಗೆನೋ ಇಲ್ಲಿ ನಮ್ಮ ಮನೆಗೇ ಬಂದು ಬಿಡಿ. ನಾನು ಬೆಂಗಳೂರಿಗೆ ಆ ವಾರ ಹೋಗಲ್ಲ. ಆರಾಮವಾಗಿ ಮಾತಾಡಿಕೊಂಡು ಕಾಲ ಕಳೆಯೋಣ" ಎಂದು ಹೇಳಿ ಮನೆಯ ಅಡ್ರೆಸ್ ನೀಡಿದರು.

ಹೇಮಾ ಡಾ. ಅಶೋಕ ಮಹಾಪಾತ್ರ ಅವರನ್ನು ಭೇಟಿ ಮಾಡಿದಳು. ಅವರೇ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಿಗೆ ಹೇಮಾಳನ್ನು ಪರಿಚಯಿಸಿದರು. ಆ ನಂತರ. ಬನ್ನಿ ಎಂದು ಹೇಳಿ ತಮ್ಮ ಕಾರಿನಲ್ಲಿ ಅವಳನ್ನು ತಾವು ಇಳಿದುಕೊಂಡಿದ್ದ ಪ್ರವಾಸಿಮಂದಿರಕ್ಕೆ ಕರೆದೊಯ್ದರು. ಅಲ್ಲಿ ಹೋದ ಮೇಲೆ ಹೇಮಾ ತಾನು ಪಿಎಚ್.ಡಿ. ಮಾಡಬೇಕೆಂದಿರುವ ವಿಚಾರ ತಿಳಿಸಿ, ನೀವೇ ಗೈಡ್ ಮಾಡಲು ಸಾಧ್ಯವೆ ಎಂದು ಕೇಳಿದಳು. ಮಾಡಬಹುದು. ಯಾವ ವಿಷಯದ ಬಗ್ಗೆ ಸಂಶೋಧನೆ ಮಾಡಬೇಕೆಂದಿದ್ದೀರಿ ಎಂದೆಲ್ಲ ವಿಚಾರಿಸಿದರು. ಈಗಾಗಲೇ ಧಾರವಾಡದ ವಿಚಾರ ಸಂಕಿರಣದಲ್ಲಿ ಮಂಡಿಸಿದ 'ಬಿಳಿಗಿರಿ ರಂಗನ ಬೆಟ್ಟ ಪ್ರದೇಶದ ಸೋಲಿಗರ ಆಚರಣೆಗಳು ಮತ್ತು ಪದ್ಧತಿಗಳು–ಒಂದು ಅಧ್ಯಯನ' ವಿಷಯವನ್ನೇ ತೆಗೆದುಕೊಂಡರೆ ಹೇಗೆ ಎಂದು ಕೇಳಿದಳು. "ಆಗಬಹುದು, ಇನ್ನೂ ವ್ಯಾಪಕವಾಗಿ ಕ್ಷೇತ್ರಕಾರ್ಯ ಮಾಡಬೇಕಾಗುತ್ತದೆ" ಎಂದು ಹೇಳಿ "ಸದ್ಯಕ್ಕೆ ನನ್ನಲ್ಲಿ ಸ್ಥಳ ಖಾಲಿ ಇಲ್ಲ. ಆದರೆ ಇನ್ನೆರಡು ತಿಂಗಳ ನಂತರ ಖಾಲಿಯಾಗುತ್ತೆ. ಒಬ್ಬರು ಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿದ್ದಾರೆ. ಅಷ್ಟರಲ್ಲಿ ನಿಮಗೆ ತೋರಿದಂತೆ ಈ ವಿಷಯದ ಬಗ್ಗೆ ಒಂದು ಸಿನಾಪ್ಸಿಸ್‌ನ ಒಂದು ಡ್ರಾಫ್ಟ್ ತಯಾರಿಸಿಕೊಂಡು ನನಗೆ ತಿಳಿಸಿ. ನೀವು ಬರಬೇಕಾದ ದಿನ ನಾನು ತಿಳಿಸುತ್ತೇನೆ. ನೀವು ಬಂದ ಮೇಲೆ ಇಬ್ಬರೂ ಪರಸ್ಪರ ಚರ್ಚಿಸಿ ಅಲ್ಲೇ ಫೈನಲ್ ಆಗಿ ಸಿನಾಪ್ಸಿಸ್ ಸಿದ್ಧಪಡಿಸೋಣ. ಅರ್ಜಿಯನ್ನು ನಾನು ಮುಂಚೆಯೇ ನಿಮ್ಮ ವಿಳಾಸಕ್ಕೆ ಕಳಿಸಿರುತ್ತೇನೆ. ಅದನ್ನು ಭರ್ತಿಮಾಡಿ ನಿಮ್ಮ ಪ್ರಿನ್ಸಿಪಾಲರ ಮೂಲಕ ಫಾರ್ವರ್ಡ್ ಮಾಡಿಸಿಕೊಂಡು ಬಂದುಬಿಟ್ಟರೆ ವಿ.ವಿ.ಯಲ್ಲಿ ರಿಜಿಸ್ಟರ್ ಮಾಡಿಸಿಯೇ ನೀವು ಊರಿಗೆ ಹೋಗಬಹುದು ಎಂದರು. ಒಂದು ದಿನ ಇರಬೇಕಾಗಿ ಬರಬಹುದು. ಅದಕ್ಕೆ ಗೆಸ್ಟ್ ಹೌಸ್‌ನಲ್ಲಿ ವ್ಯವಸ್ಥೆ ಮಾಡಬಹುದು" ಎಂದರು.

ಅಧ್ಯಾಯ–25

ವಸುಂಧರಾ ಬೇಲೂರಿಗೆ ಬಂದು ಒಂದು ವರ್ಷ ಕಳೆದೇ ಹೋಯಿತು. ಅಷ್ಟರಲ್ಲಿ ಅವಳ ವಿಭಾಗದ ಮುಖ್ಯಸ್ಥರಾದ ರಘುನಾಥರಾಯರು ಅವರ ಪ್ರಿನ್ಸಿಪಾಲರು ಅಲ್ಲಿಗೆ ಹೋದ ದಿನ ತಿಳಿಸಿದಂತೆಯೇ ಅವಳಿಗೆ ಅತ್ಯಂತ ಆತ್ಮೀಯರಾಗಿಬಿಟ್ಟರು. ತಮ್ಮ ಪೈಕಿಯೇ ಎಂದು ಗೊತ್ತಾದ ಮೇಲೆ ಎರಡನೇ ವಾರವೇ ತಮ್ಮ ಮನೆಗೂ ಕರೆದುಕೊಂಡು ಹೋಗಿ ತಮ್ಮ ಹೆಂಡತಿ ಮತ್ತು ಮಕ್ಕಳಿಗೆ ಪರಿಚಯಿಸಿದರು. ಅವರಿಗೆ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದ ಒಬ್ಬ ಮಗ ಮತ್ತು ಆರನೇ ತರಗತಿಯಲ್ಲಿ ಓದುತ್ತಿದ್ದ ಒಬ್ಬ ಮಗಳು ಇದ್ದರು. ಅದಾದ ಮೇಲೂ ಸತ್ಯನಾರಾಯಣ ಪೂಜೆಯ ಮತ್ತು ಗಣೇಶ ಹಬ್ಬದಂಥ ಒಂದೆರಡು ಸಂದರ್ಭಗಳಲ್ಲಿ ಮನೆಗೆ ಆಹ್ವಾನಿಸಿದ್ದರು. ವಸುಂಧರಾ ತಾಯಿಯನ್ನೂ ಕರೆದುಕೊಂಡು ಆ ಎರಡೂ ಸಮಾರಂಭಗಳಿಗೆ ಹೋಗಿದ್ದಳು. ಬೇಲೂರು ಚಿಕ್ಕ ಊರಾಗಿದ್ದರಿಂದ ಮನೆ ಕೂಡ ದೂರವೇನಿರಲಿಲ್ಲ. ನಡೆದೇ ಹೋಗಬಹುದಾಗಿತ್ತು. ರಘುನಾಥರಾಯರು ಮತ್ತು ಅವರ ಹೆಂಡತಿ ಕೂಡ ಒಂದು ಸಲ ವಸುಂಧರಾ ಕರೆದಿದ್ದರಿಂದ ಅವರ ಮನೆಗೆ ಹೋಗಿದ್ದರು.

ವಸುಂಧರಾಳಂಥ ನೋಡಲು ಅತ್ಯಂತ ಸ್ಫುರದ್ರೂಪಿಯೂ ಬುದ್ಧಿವಂತೆಯೂ ಆದ ಹುಡುಗಿ ಮದುವೆಯ ವಯಸ್ಸು ಮೀರುತ್ತ ಬಂದಿದ್ದರೂ ಇನ್ನೂ ಯಾಕೆ ಮದುವೆಯಾಗಿಲ್ಲ ಎಂಬುದು ರಘುನಾಥರಾಯರಿಗೆ ಒಂದು ಒಗಟೇ ಆಗಿತ್ತು. ಆ ಬಗ್ಗೆ ಅವಳೊಂದಿಗೆ ಮಾತಾಡುವುದಕ್ಕಿಂತ ಅವರ ತಾಯಿಯ ಜೊತೆ ಮಾತಾಡುವುದು ಉಚಿತವೆಂದು ಭಾವಿಸಿ ಒಂದು ವೇಳೆ ಎಲ್ಲವೂ ಕೂಡಿಬಂದರೆ ಚಿಕ್ಕಮಗಳೂರಿನಲ್ಲಿದ್ದ ಅವರ ಸೋದರ ಮಾವನ ಮಗ ರಂಗಣ್ಣನಿಗೆ ಪ್ರಸ್ತಾಪಿಸಬಹುದೇನೋ ಎಂಬುದು ಅವರ ಯೋಚನೆ. ವಸುಂಧರಾ ಕಾಲೇಜಿಗೆ ಹೋಗಿರುವ ಸಮಯ ನೋಡಿಕೊಂಡು ಅವರ ತಾಯಿಯ ಹತ್ತಿರ ವಿಚಾರಿಸಲು ತಮ್ಮ ಹೆಂಡತಿಗೆ ಸೂಚಿಸಿದ್ದರು. ಅದರಂತೆ ಒಂದು ದಿನ ಹನ್ನೆರಡು ಗಂಟೆಯ ಸಮಯದಲ್ಲಿ ರಘುನಾಥರಾಯರ ಹೆಂಡತಿ ಜಾಹ್ನವಿಯವರು ವಸುಂಧರಾಳ ಮನೆಗೆ ಹೋದರು. ಸಾವಿತ್ರಮ್ಮನವರು ಬಹಳ ವಿಶ್ವಾಸದಿಂದ ಅವರನ್ನು ಬರಮಾಡಿಕೊಂಡರು. ತಾವು ಕೊಟ್ಟ ಕಾಫಿ ಕುಡಿದ ಮೇಲೆ ಜಾಹ್ನವಿ ಅವರನ್ನು ಇದೇನು ಬಿಸಿಲು ಹೊತ್ತಿನಲ್ಲಿ ಹೀಗೆ ಇದ್ದಕ್ಕಿದ್ದಂತೆ ಬಂದಿರಲ್ಲಾ ಎಂದು ವಿಚಾರಿಸಿದರು. ಆಗ ಏನೇನೋ ಪೀಠಿಕೆ ಹಾಕಿ ವಸುಂಧರಾಗೆ ಮದುವೆ ಮಾಡುವ ಯೋಚನೆ ಇದೆಯೆ? ಎಂದು ಕೇಳಿದರು. ಹೌದು ಯೋಚನೆಯೇನೋ ಇದೆ. ಆದರೆ ಅವಳೇ ಮುಂದಕ್ಕೆ ಹಾಕಿಕೊಂಡು ಬರುತ್ತಾ ಇದ್ದಾಳೆ. ಆ ಬಗ್ಗೆ ಸೂಕ್ಷ್ಮವಾಗಿ ಇವಳು

ಇಷ್ಟಪಟ್ಟಿದ್ದ ಹುಡುಗನಿಗೆ ಬೇರೆ ಕಡೆ ಮದುವೆಯಾಯಿತೆಂದು ಬೇಸರ ಮಾಡಿಕೊಂಡು ಮದುವೆಗೆ ಒಪ್ಪುತ್ತಿಲ್ಲ ಎಂದಷ್ಟೇ ಹೇಳಿದರು. ಸಾವಿತ್ರಮ್ಮನವರು ಏಕೆ ಕೇಳಿದಿರಿ ಎಂದಾಗ ಜಾಹ್ನವಿ ಅವರು ನಮ್ಮ ಯಜಮಾನರ ಸೋದರ ಮಾವನ ಮಗ ಒಬ್ಬ ಇವರಿಗಿಂತ 5–6 ವರ್ಷ ಚಿಕ್ಕವನು ಚಿಕ್ಕಮಗಳೂರಿನಲ್ಲಿ ಇದ್ದಾನೆ. ಬಿ.ಕಾಮ್. ಮಾಡಿ ಕಂಪನಿ ಸೆಕ್ರೆಟರಿ ಪರೀಕ್ಷೆ ಪಾಸ್ ಮಾಡಿ ಅಲ್ಲಿ ಕಾಫಿ ಕ್ಯೂರಿಂಗ್ ವರ್ಕ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾನೆ. ಅವನೂ ಹೀಗೇ ಹಲವು ವರ್ಷಗಳಿಂದ ಮದುವೆಯನ್ನು ಮುಂದೂಡುತ್ತ ಬಂದಿದ್ದಾನೆ. ನೋಡಲು ತುಂಬ ಚೆನ್ನಾಗಿದ್ದಾನೆ. ವಸುಂಧರಾಳ ಬಳಿ ವಿಷಯ ಪ್ರಸ್ತಾಪಿಸಿ ನೋಡಿ. ಅವರು ಒಪ್ಪಿದರೆ ಮುಂದುವರಿಯಬಹುದು. ನಮ್ಮ ಯಜಮಾನರೇ ನಿಮ್ಮ ಬಳಿ ಈ ವಿಷಯ ಮಾತಾಡಲು ನನಗೆ ಹೇಳಿದ್ದರಿಂದ ಈ ವಿಷಯ ಪ್ರಸ್ತಾಪಿಸಿದೆ ಎಂದರು. ಆಗಲಿ ನೋಡೋಣ ನಿಧಾನವಾಗಿ ವಸುಂಧರಾಳ ಹತ್ತಿರ ಮಾತಾಡಿ ನೋಡ್ತೀನಿ ಎಂದರು.

ಅವರು ಬಂದು ಹೋದ ಎರಡು ದಿನದ ನಂತರ ಸಾವಿತ್ರಮ್ಮನವರು ಮಗಳ ಹತ್ತಿರ ಪ್ರಸ್ತಾಪಿಸಿದರು. ನನಗೆ ಸ್ವಲ್ಪ ಟೈಮ್ ಕೊಡು. ಯೋಚನೆ ಮಾಡಿ ನೋಡ್ತೀನಿ ಎಂದಳು. ಆಮೇಲೆ ವಸುಂಧರಾ ಈ ಬಗ್ಗೆ ಗಂಭೀರವಾಗಿಯೇ ಯೋಚಿಸಿದಳು. ಜೀವಮಾನ ಪರ್ಯಂತ ಅವಿವಾಹಿತಳಾಗಿಯೇ ಉಳಿಯುವುದು ಯಾವತ್ತೂ ತನ್ನ ಮನಸ್ಸಿನಲ್ಲಿರಲಿಲ್ಲ. ಈ ಬಗ್ಗೆ ಭಾರತಿ, ವಿದ್ಯಾ ಅವರು ಹೇಳಿದ ಮಾತುಗಳೂ ನೆನಪಾದವು. ಅಲ್ಲದೆ ಜೀವನದಲ್ಲಿ ನಾವು ಇಚ್ಛಿಸಿದಂತೆಯೇ ಎಲ್ಲವೂ ನಡೆಯುವುದಿಲ್ಲ ಎಂಬುದೂ ಅವಳಿಗೆ ಇದುವರೆಗೆ ಅನುಭವಕ್ಕೆ ಬಂದೇ ಇತ್ತು. ವಿದ್ಯಾ, ಹೇಮಾರ ಬದುಕೂ ಅದಕ್ಕೆ ನಿದರ್ಶನವಾಗಿ ಕಣ್ಣೆದುರು ಇದ್ದೇ ಇತ್ತು. ತಾನು ಇಷ್ಟಪಟ್ಟಿದ್ದ ಶ್ರೀನಿವಾಸ್ ಇದುವರೆಗಾಗಲೇ ಅಮ್ಮ ಹೇಳಿದ ಹೆಣ್ಣನ್ನು ಮದುವೆಯಾಗಿ ಸಂಸಾರದಲ್ಲಿ ನೆಲೆಗೊಂಡಿರಬೇಕು. ಇನ್ನು ಅವನ ಯೋಚನೆಯಲ್ಲೇ ಜೀವಮಾನ ಪೂರ್ತಿ ತಾನು ಕಳೆಯುವುದರಲ್ಲಿ ಅರ್ಥವಿಲ್ಲ ಎನಿಸಿತು. ಅಲ್ಲದೆ ತನ್ನ ಯಾವುದೇ ಇಚ್ಛೆ ಇಲ್ಲದೆಯೂ ಶಾಮೂ ತನ್ನಲ್ಲಿ ಹೊತ್ತಿಸಿದ ದೇಹದ ಬಯಕೆಯ ಕಿಡಿ ಆರಿದ ಹಾಗೇನೂ ಅನ್ನಿಸುತ್ತಿಲ್ಲ. ಅದೂ ಇದೂ ಓದು ಬರಹದಲ್ಲಿ ಹತ್ತಿಕ್ಕಲು ಪ್ರಯತ್ನಿಸಿದಷ್ಟೂ ಅದು ಒಳಗೊಳಗೇ ಪ್ರಜ್ವಲಿಸುತ್ತಲೇ ಇದೆ. ತಾನು ಪ್ರೀತಿಸಿದವನನ್ನು ಮದುವೆಯಾಗಲು ಸಾಧ್ಯವಾಗದಿದ್ದಾಗ ಸರಿಯಾದ ಪ್ರಸ್ತಾಪ ಬಂದಾಗ ಮದುವೆಗೆ ಒಪ್ಪುವುದೇ ಸರಿಯೆನಿಸಿತು. ಪ್ರಸ್ತಾಪ ಬಂದಿರುವುದೂ ತನ್ನ ಹಿತಾಕಾಂಕ್ಷಿಯಾದ ರಘುನಾಥರಾಯರ ಕಡೆಯಿಂದ ಅಂದ ಮೇಲೆ ಪರಿಶೀಲಿಸಲು ಅಡಿಯಿಲ್ಲವೆಂದು ನಿರ್ಧರಿಸಿ ಅಮ್ಮನಿಗೆ ಅದನ್ನೇ ಹೇಳಿದಳು.

* * *

ಚಿಕ್ಕಮಗಳೂರಿನ ಸೋಮಶೇಖರರಾಯರು ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿದ್ದು ನಿವೃತ್ತರಾದವರು. ಅಲ್ಲೇ ವಿಜಯಪುರದಲ್ಲಿ ಅವರ ಮನೆ. ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಮಗಳು ಇದ್ದ ಒಂದು ಮಧ್ಯಮವರ್ಗೀಯ ಸುಖೀ ಕುಟುಂಬ. ಅವರ

ಹಿರಿಯ ಮಗ ರಂಗನಾಥ್ ಚಿಕ್ಕಮಗಳೂರಿನಲ್ಲೇ ಬಿ.ಕಾಂ. ಪಾಸ್ ಮಾಡಿ ಹಾಸನದಲ್ಲಿ ಯಾವುದೋ ಒಂದು ಖಾಸಗಿ ಸಂಸ್ಥೆಯಲ್ಲಿ ಅಕೌಂಟೆಂಟ್ ಆಗಿದ್ದು ಆಮೇಲೆ ಕಂಪನಿ ಸೆಕ್ರೆಟರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೇಲೆ ದೊಡ್ಡ ದೊಡ್ಡ ಹುದ್ದೆಗಳು ಹುಡುಕಿಕೊಂಡು ಬರಹತ್ತಿದವು. ಎರಡನೇ ಮಗ ಎಲೆಕ್ಟ್ರಿಕಲ್ ಇಂಜಿನಿಯರ್ ಆಗಿ ಬೆಳಗಾಂ ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿದ್ದರಿಂದ ಹಿರಿಯ ಮಗನಾಗಿ ತಾನು ಅಪ್ಪ ಅಮ್ಮನ ಹತ್ತಿರವಿರಬೇಕೆಂದು ಆಶಿಸಿ ಅಲ್ಲೇ ಚಿಕ್ಕಮಗಳೂರಿನ ಒಂದು ಕಾಫಿ ಕ್ಯೂರಿಂಗ್ ವರ್ಕ್ಸ್‌ನಲ್ಲಿ ಎಂ.ಡಿ. ಆಗಿರಲು ಆಹ್ವಾನಿಸಿದಾಗ ಒಪ್ಪಿಕೊಂಡು ಅಲ್ಲೇ ಇದ್ದನು. ಮಗಳು ಜ್ಯೋತಿ ಅಲ್ಲಿಯ ಟಿ.ಎಸ್.ಜೆ. ಕಾಲೇಜಿನಲ್ಲಿ ಎರಡನೇ ಬಿ.ಎ. ಓದುತ್ತಿದ್ದಳು. ಮಗ ರಂಗನಾಥ್ ಈಗಾಗಲೇ ಮದುವೆಯ ವಯಸ್ಸು ಮೀರಿ 36–37ರ ವಯಸ್ಸಿನವನು. ಅವನು ಅಕೌಂಟೆಂಟ್ ಆಗಿ ಕೆಲಸಕ್ಕೆ ಸೇರಿ ಸೆಟಲ್ ಆದ ಮೇಲೆ 25ನೇ ವಯಸ್ಸಿನಿಂದಲೂ ಮದುವೆಯ ಪ್ರಸ್ತಾಪಗಳು ಬರುತ್ತಿದ್ದು ಮನೆಯಲ್ಲಿ ಅಪ್ಪ ಅಮ್ಮನ ಒತ್ತಾಯ ನಿರಂತರವಾಗಿ ಇದ್ದರೂ ರಂಗನಾಥ ಮಾತ್ರ ನನಗೆ ಸದ್ಯ ಮದುವೆ ಬೇಡಿ. ಹಾಗೆ ಬೇಕೆನಿಸಿದಾಗ ನಾನೇ ಹೇಳುತ್ತೀನಿ. ಹರಿಗೆ ಬೇಕಾದರೆ ಮದುವೆ ಮಾಡಿ ಎಂದು ಹೇಳಿಬಿಟ್ಟಿದ್ದ. ಹರಿ ರಂಗನಾಥನಿಗಿಂತ ಮೂರು ವರ್ಷ ಕಿರಿಯವನು. ಅಲ್ಲದೆ ಅವನು ಬೇರೆ ಊರಲ್ಲಿ ಇದ್ದವನು. ಹಾಗಾಗಿ ಅವನಿಗೆ ಮದುವೆಯಾಗಿ ಆಗಲೇ ನಾಲ್ಕೈದು ವರ್ಷಗಳೇ ಆಗಿತ್ತು. ರಂಗನಾಥ ನೋಡಲು ತುಂಬ ಲಕ್ಷಣವಾದ ಯುವಕ. ಆದರೂ ಮದುವೆ ಮುಂದೂಡುತ್ತಿದ್ದುದು ಮನೆಯವರಿಗೆ ನುಂಗಲಾರದ ತುತ್ತಾಗಿತ್ತು. ಒಂದು ವೇಳೆ ಯಾರನ್ನಾದರೂ ಲವ್ ಮಾಡಿದ್ದಾನೋ ಹೇಗೆ ಎಂದು ತಾಯಿ ಒತ್ತಾಯ ಮಾಡಿ ಕೇಳಿದ್ದರು. ಹಾಗೇನಾದರೂ ಇದ್ದರೆ ಅದೇ ಹುಡುಗಿಯನ್ನು ನೀನು ಮದುವೆಯಾಗಲೂ ನಮ್ಮದೇನೂ ಅಭ್ಯಂತರವಿಲ್ಲ ಎಂದು ಕೂಡ ಹೇಳಿದ್ದರು. ಇಲ್ಲ ಅಂಥದೇನೂ ಇಲ್ಲ ಎಂದು ಹೇಳಿದ್ದ. ಸೋಮಶೇಖರರಾಯರಿಗೆ ಮತ್ತು ಅವರ ಹೆಂಡತಿಗೆ ಇದೇ ಒಂದು ದೊಡ್ಡ ಯೋಚನೆಯಾಗಿತ್ತು. ಅವರ ಸೋದರಳಿಯ ರಘುನಾಥರಾಯರ ಕಡೆಯಿಂದಲೂ ಮದುವೆ ಆಗುವಂತೆ ಕೇಳಿಸಿ ನೋಡಿದ್ದರು. ಆದರೆ ಅವರಿಗೂ ಕೊಟ್ಟ ಉತ್ತರ ಅದೇ ಆಗಿತ್ತು.

ರಂಗನಾಥ ತೀರ ಚಿಕ್ಕವನಾಗಿದ್ದಾಗ ಎಲ್ಲ ಹುಡುಗರಂತೆಯೇ ಇದ್ದರೂ ಪ್ರೌಢಶಾಲೆಗೆ ಬಂದ ಮೇಲೆ ಗಂಭೀರ ಸ್ವಭಾವದ ಹುಡುಗನಾಗಿಬಿಟ್ಟ. ಯಾರೊಂದಿಗೂ ಹೆಚ್ಚು ಬೆರೆಯುತ್ತಿರಲಿಲ್ಲ. ಎಷ್ಟು ಬೇಕೋ ಅಷ್ಟೇ ಮಾತು. ಗೆಳೆಯರು ತೀರ ಕೈಬೆರಳಲ್ಲೆಣಿಸುವಷ್ಟು ಜನವೂ ಇರಲಿಲ್ಲ. ಸದಾ ಓದಿನಲ್ಲಿ ಮಗ್ನನಾಗಿರುತ್ತಿದ್ದ. ಮತ್ತು ಪರೀಕ್ಷೆಗಳಲ್ಲಿ ಯಾವಾಗಲೂ ಉತ್ತಮ ದರ್ಜೆಯಲ್ಲೇ ತೇರ್ಗಡೆಯಾಗುತ್ತಿದ್ದ. ಅದೇ ಅವನ ತಮ್ಮ ಹರಿ ಕಲ್ಲನ್ನೂ ಮಾತಾಡಿಸುವಂಥವನು. ಅಣ್ಣ ತಮ್ಮಂದಿರ ಸ್ವಭಾವಗಳಲ್ಲಿನ ಈ ವ್ಯತ್ಯಾಸ ಸ್ವತಃ ತಂದೆ ತಾಯಿಗಳಿಗೇ ಆಶ್ಚರ್ಯವುಂಟು ಮಾಡಿತ್ತು. ಬಟ್ಟೆ ಬರೆ, ಊಟ ತಿಂಡಿ ವಿಷಯಕ್ಕೂ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಒಂದು ರೀತಿಯಲ್ಲಿ ಅಲಕ್ಷ್ಯವೆಂದೇ ಹೇಳಬೇಕು. ತನಗೆ ಅದೇ ಬೇಕು ಇದೇ ಬೇಕು ಎಂದು ಯಾವತ್ತೂ

ಹೇಳುತ್ತಿರಲಿಲ್ಲ. ಆದರೆ ಅತ್ಯಂತ ಸಮಾಧಾನದ ಸ್ವಭಾವ. ಈ ಹುಡುಗನಿಗೆ ಸಿಟ್ಟೇ ಬರುವುದಿಲ್ಲವೆ ಎನಿಸುವಷ್ಟು ತಾಳ್ಮೆಯಿಂದಿರುತ್ತಿದ್ದ.

ಅಕೌಂಟೆಂಟ್ ಆಗಿದ್ದಾಗ ತನ್ನ ಕೆಲಸದಲ್ಲಿ ಎಷ್ಟೇ ದಕ್ಷನೇ ಆಗಿದ್ದರೂ ಸ್ವಂತ ಹಣಕಾಸಿನ ವಿಷಯದಲ್ಲಿ ಮಾತ್ರ ಯಾವಾಗಲೂ ನಿರ್ಲಕ್ಷ್ಯವೇ. ಸಂಬಳದಲ್ಲಿ ತನ್ನ ಖರ್ಚಿಗೆಂದು ಸ್ವಲ್ಪ ಮಾತ್ರ ಉಳಿಸಿಕೊಂಡು ಬಹಳಷ್ಟನ್ನು ಮನೆ ಖರ್ಚಿಗೆಂದು ಅಮ್ಮನ ಕೈಯಲ್ಲಿ ಹಾಕಿಬಿಡುತ್ತಿದ್ದ. ಯಾರಾದರೂ ಕಷ್ಟದಲ್ಲಿದ್ದಾರೆಂದರೆ ಮಾತ್ರ ಬಹಳ ಬೇಗ ಕರಗಿಬಿಡುತ್ತಿದ್ದ. ಈಗಂತೂ ಎಂ.ಡಿ. ಆಗಿದ್ದರಿಂದ ಸಂಬಳವೂ ಸಾಕಷ್ಟು ಬರುತ್ತಿತ್ತು. ಅದರಲ್ಲಿ ಒಂದು ಮುಖ್ಯ ಭಾಗವನ್ನು ಕಷ್ಟದಲ್ಲಿದ್ದ ತಮ್ಮ ಕ್ಯೂರಿಂಗ್ ವರ್ಕ್ಸ್‌ನ ಕೆಲಸಗಾರರಿಗೆ ಕೊಟ್ಟುಬಿಡುತ್ತಿದ್ದ. ಹಾಗಾಗಿ ಎಂ.ಡಿ. ಸಾಹೇಬರು ಅಂದರೆ ಕೆಲಸಗಾರರಿಗೆಲ್ಲ ಬಹಳ ಗೌರವ ಮತ್ತು ಪ್ರೀತಿ.

ಈ ಮಧ್ಯೆ ಒಂದು ಸಲ ರಘುನಾಥರಾಯರು ತಮ್ಮ ಸೋದರ ಮಾವನನ್ನು ಮಾತಾಡಿಸಿಕೊಂಡು ಹೋಗಲೆಂದು ಬಂದಿದ್ದಾಗ ಮಾತಿನ ನಡುವೆ "ನನಗೆ ಬೇರೆ ಯಾವ ಯೋಚನೇನೂ ಇಲ್ಲಯ್ಯ. ರಂಗಣ್ಣನದು ಒಂದು ಮದುವೆ ಅಂತ ಅಗಿಬಿಟ್ಟರೆ ಆಮೇಲೆ ನನಗೇನಾದರೆ ಏನಂತೆ. ಇನ್ನು ಒಂದೆರಡು ವರ್ಷ ಕಳೆದರೆ ಜ್ಯೋತಿಯ ಮದುವೆ ಆಗಿ ಗಂಡನ ಮನೆಗೆ ಹೊರಟುಹೋಗುತ್ತಾಳೆ. ನಾನು ನಿಮ್ಮತ್ತೆ ಇನ್ನೆಷ್ಟು ದಿವಸ ಇರುತ್ತೀವಿ. ಜ್ಯೋತಿಯ ಮದುವೆಗೆ ಮುಂಚೆ ಇವನದೊಂದು ಮದುವೆ ಅಂತ ಆಗಿಬಿಟ್ರೆ ನಾನು ನಿಶ್ಚಿಂತ ನೋಡು. ಅವನಿಗೆ ಯಾವುದೊಂದಕ್ಕೂ ಕೊರತೆ ಇಲ್ಲ. ನಾವೆಲ್ಲ ಹೇಳಿ ಸಾಕಾಗಿದೆ. ನೀನು ಹೆಚ್ಚು ಕಡಮೆ ಅವನ ವಯಸ್ಸಿನವನು. ನೀನು ಒಂದು ಮಾತು ಹೇಳಿ ನೋಡಪ್ಪ" ಎಂದಿದ್ದರು. ಆಗ "ನೋಡೋಣ ರಂಗಣ್ಣನ ಹತ್ತಿರ ಮಾತಾಡಿನೋಡ್ತೀನಿ. ಇವನು ಹೂಂ ಅಂದರೆ ಇವನಿಗೆಂದೇ ಹೇಳಿಮಾಡಿಸಿದಂಥ ಒಂದು ಹೆಣ್ಣಿದೆ. ಮೊದಲು ಇವನೇನು ಹೇಳ್ತಾನೆ ನೋಡಿಕೊಂಡು ಆಮೇಲೆ ಮುಂದುವರಿದರೆ ಆಯಿತು." ಎಂದು ವಸುಂಧರಾಳನ್ನು ಮನಸ್ಸಿನಲ್ಲಿಟ್ಟುಕೊಂಡು ಒಂದು ಸೂಚನೆ ಕೂಡ ಅವರ ಮಾವನಿಗೆ ಕೊಟ್ಟಿದ್ದರು.

ಅದಾದ ಒಂದು ನಾಲ್ಕೈದು ದಿನಕ್ಕೆ ಸಂಜೆ ಹೊತ್ತಿಗೆ ರಘುನಾಥರಾಯರು ನೇರವಾಗಿ ಸಂಜೆ ರಂಗಣ್ಣನ ಕಾಫಿ ಕ್ಯೂರಿಂಗ್ ವರ್ಕ್ಸ್‌ನ ಅವನ ಛೇಂಬರಿಗೇ ಹೋದರು. ರಘುನಾಥರಾಯರನ್ನು ನೋಡಿ ರಂಗನಾಥನಿಗೆ ಎಲ್ಲಿಲ್ಲದ ಸಂತೋಷ ಮತ್ತು ಆಶ್ಚರ್ಯ ಆಗಿ – "ಓಹ್ ಏನು ರಘುನಾಥಣ್ಣ ಎಷ್ಟು ದಿವಸ ಆಯಿತು ನಿನ್ನನ್ನು ನೋಡಿ. ಇವತ್ತೇನು ಸೂರ್ಯ ಪಶ್ಚಿಮ ದಿಕ್ಕಿನಲ್ಲಿ ಹುಟ್ಟಿಲ್ಲ ತಾನೆ? ಇದ್ದಕ್ಕಿದ್ದ ಹಾಗೆ ಬಂದುಬಿಟ್ಟಿದ್ದೀಯಲ್ಲಾ? ಏನು ಸಮಾಚಾರ? ಹಾಗೆಲ್ಲಾ ಸುಮ್ಮ ಸುಮ್ಮನೆ ಬರೋನಲ್ಲವಲ್ಲ ನೀನು. ಅದೂ ಮನೆಗೂ ಬರದೆ ಇಲ್ಲಿಗೇ ಬಂದುಬಿಟ್ಟಿದ್ದೀಯಾ?"

"ಹೌದಪ್ಪಾ ನಾವು ಮೇಷ್ಟ್ರುಗಳು. ನಮಗೆ ಕಾಲ ಅಷ್ಟೇನೂ ಮುಖ್ಯವಲ್ಲ. ಆದರೆ ನೀನು ಎಂ.ಡಿ. ನಿನ್ನ ಕಾಲಕ್ಕೆ ತುಂಬಾ ಬೆಲೆ ಅಲ್ಲವೇನಯ್ಯಾ? ಆದರೂ ಈಗ

ನನಗೋಸ್ಕರ ನಿನ್ನ ಕಾಲಾನ ಒಂದಷ್ಟು ಮೀಸಲಿಡು. ನಿನ್ನ ಹತ್ತಿರ ಮಾತಾಡೋದಿದೆ. ಇಲ್ಲಿ ನಿನ್ನ ಛೇಂಬರ್‌ನಲ್ಲಿ ಬೇಡ. ಸುಮ್ಮನೆ ಹಾಗೇ ಎಲ್ಲಾದರೂ ಒಂದು ಸ್ವಲ್ಪ ಹೊತ್ತು ತಿರುಗಾಡಿಕೊಂಡು ಬರೋಣ ಬಾ" ಎಂದು ಕರೆದರು. ಅವರು ಹಾಗೆ ಹೇಳಿದ ಮೇಲೆ ಕ್ಯೂರಿಂಗ್ ವರ್ಕ್ಸ್‌ನಿಂದ ಹೊರಕ್ಕೆ ಬಂದು ಇಬ್ಬರೂ ಒಂದಷ್ಟು ದೂರ ನಡೆದ ಮೇಲೆ ರಸ್ತೆ ಬದಿಯಲ್ಲಿ ಮರದ ನೆರಳಿದ್ದ ಒಂದು ಸೇತುವೆ ಮೇಲೆ ಆರಾಮವಾಗಿ ಕೂತುಕೊಂಡರು. ಆ ಮೇಲೆ ವಸುಂಧರಾಳ ವಿಷಯ ಪ್ರಸ್ತಾಪಿಸಿ ನೀನು ಮದುವೆ ಆಗಬೇಕು ಅಂತ ಮನಸ್ಸಿನಲ್ಲಿದ್ದರೆ ಇದಕ್ಕಿಂತ ಉತ್ತಮವಾದ ಸಂದರ್ಭ ಮತ್ತೆಂದೂ ಬರಲ್ಲ. ಎಲ್ಲ ರೀತಿಯಲ್ಲೂ ನಿನಗೆ ಅತ್ಯಂತ ಸೂಕ್ತವಾದ್ದು ಅಂತ ಅನ್ನಿಸಿದ್ದರಿಂದ ಹೇಳ್ತಾ ಇದ್ದೀನಿ. ಇನ್ನು ಮುಂದೆ ನಾವ್ಯಾರೂ ನಿನ್ನ ಹತ್ತಿರ ಈ ಬಗ್ಗೆ ಪ್ರಸ್ತಾಪ ಮಾಡೋದೂ ಇಲ್ಲ. ಅದೂ ಅವರನ್ನು ನಾನಿನ್ನೂ ಕೇಳಿಲ್ಲ. ನೀನು ಮುಂದುವರಿಯಬಹುದು ಅಂತ ಹೇಳಿದರೆ ಅವರೂ ಒಂದು ವೇಳೆ ಒಪ್ಪಿದರೆ ಎಲ್ಲವೂ ಕೂಡಿ ಬಂದರೆ ಖಂಡಿತವಾಗಿಯೂ ಇಬ್ಬರ ದೃಷ್ಟಿಯಿಂದಲೂ ಒಳ್ಳೇದಾಗಬಹುದು." ಎಂದು ಮಾತು ಮುಗಿಸಿದರು. ರಂಗನಾಥ್ ಅವರ ಮಾತೆಲ್ಲ ಕೇಳಿ ಒಂದು ಹತ್ತು ನಿಮಿಷ ಯೋಚನೆ ಮಾಡಿ "ಆಯಿತು. ನೀನು ಇಷ್ಟು ಹೇಳಿದ ಮೇಲೆ ಇನ್ನು ಮೀನಮೇಷ ಎಣಿಸೋದು ಸರಿಯಲ್ಲವೇನೋ. ಮುಖ್ಯವಾಗಿ ನನ್ನ ಅದೃಷ್ಟದಲ್ಲಿ ಏನು ಬರೆದಿದೆಯೋ ಅದನ್ನೂ ನೋಡೇ ಬಿಡೋಣ. ಅವರ ಹತ್ತಿರ ನೀವುಗಳೆಲ್ಲ ಮಾತಾಡಿ. ಅವರು ಯಾವುದೇ ಒತ್ತಾಯವಿಲ್ಲದೆ ಒಪ್ಪಬೇಕು. ಅವರ ತಂದೆ ತಾಯಿ ಒಪ್ಪಬೇಕು. ಉಳಿದ ಸಂಗತಿಗಳೆಲ್ಲಾ ಸರಿ ಅಂತ ಅದ ಮೇಲೆ ನಾನು ವೈಯಕ್ತಿಕವಾಗಿ ಅವರ ಹತ್ತಿರ ಒಂದು ಸ್ವಲ್ಪ ಮಾತಾಡಬೇಕು" ಎಂದನು.

ಅಧ್ಯಾಯ–26

ಅಶೋಕ ಮಹಾಪಾತ್ರ ಅವರು ಹೇಳಿದ್ದಂತೆ ಹಲವಾರು ಗ್ರಂಥಗಳು, ಇದೇ ಬಗೆಯ ಕೆಲವು ಪ್ರಕಟಿತ ಪಿಎಚ್.ಡಿ. ನಿಬಂಧಗಳು ಇವನ್ನೆಲ್ಲ ಪರಾಮರ್ಶಿಸಿ ತಾನು ಪಿಎಚ್.ಡಿ. ಮಾಡಬೇಕೆಂದಿರುವ ವಿಷಯದ ಕುರಿತಾಗಿ ಒಂದು ಸಿನಾಪ್ಸಿಸ್ (ವಿಷಯಸಾರ) ಸಿದ್ಧಪಡಿಸಿದಳು. ಅದನ್ನು ತಯಾರಿಸಿದ ಬಗ್ಗೆ ಮಹಾಪಾತ್ರ ಅವರಿಗೆ ತಿಳಿಸಿದಳು. ಅವರು ಒಂದು ಅರ್ಜಿಯನ್ನು ಮತ್ತು ಅದರ ಜೊತೆ ಮಾರ್ಗದರ್ಶನ ಮಾಡಲು ತಮ್ಮ ಒಪ್ಪಿಗೆ ಪತ್ರವನ್ನೂ ಕಳಿಸಿಕೊಟ್ಟರು. ಜೊತೆಯಲ್ಲೇ ಮುಂದಿನ ವಾರದ ಕೊನೆಯಲ್ಲಿ ಹೇಮಾ ಬಂದು ಇರಲು ಅನುಕೂಲವಾಗುವಂತೆ ವಿ.ವಿ. ಗೆಸ್ಟ್ ಹೌಸ್‌ನಲ್ಲಿ ಕೊಠಡಿ ಕಾದಿರಿಸಿರುವುದಾಗಿಯೂ ತಿಳಿಸಿದ್ದರು. ತಾನು ಕಾಲೇಜಿನಲ್ಲಿ ಕೆಲಸ ಮಾಡುತ್ತಲೇ ತನ್ನ ವಿರಾಮದ ವೇಳೆಯಲ್ಲಿ ಪಿಎಚ್.ಡಿ ಮಾಡುವುದಾಗಿದ್ದದ್ದರಿಂದ ಪ್ರಿನ್ಸಿಪಾಲರ ಮತ್ತು ಮ್ಯಾನೇಜ್‌ಮೆಂಟಿನ ಒಪ್ಪಿಗೆ ಪಡೆದುಕೊಳ್ಳಲು ಏನೂ ಕಷ್ಟವಾಗಲಿಲ್ಲ. ಬದಲಿಗೆ ಅವರು ಪ್ರೋತ್ಸಾಹದ ಮಾತುಗಳನ್ನೇ ಆಡಿದರು. ಅರ್ಜಿಯನ್ನು ಭರ್ತಿ ಮಾಡಿಕೊಂಡು, ಅದಕ್ಕೆ ತನ್ನ ಮಾರ್ಗದರ್ಶಿಯವರ ಒಪ್ಪಿಗೆ ಪತ್ರವನ್ನು ಲಗತ್ತಿಸಿ ಪ್ರಿನ್ಸಿಪಾಲರ ಕಡೆಯಿಂದ ಅದನ್ನು ಫಾರ್ವರ್ಡ್ ಮಾಡಿಸಿಕೊಂಡು ಮಹಾಪಾತ್ರ ಅವರು ತಿಳಿಸಿದ ದಿನ 12 ಗಂಟೆಯ ಸುಮಾರಿಗೆ ಅವರನ್ನು ಭೇಟಿಮಾಡಿದಳು. ಅವಳು ಸಿದ್ಧಪಡಿಸಿದ ಸಿನಾಪ್ಸಿಸ್ ನೋಡಿ, ಅವಳೊಂದಿಗೆ ಚರ್ಚಿಸಿ ಅದಕ್ಕೆ ಕೆಲವೊಂದು ಅಂಶಗಳನ್ನು ಸೇರಿಸಿ ಇನ್ನು ಕೆಲವನ್ನು ಕಿಂಚಿತ್ ಬದಲಾಯಿಸಿ ಕಛೇರಿಯಲ್ಲಿ ಟೈಪ್ ಮಾಡಲು ಕೊಟ್ಟು ಅವಳನ್ನು ಕ್ಯಾಂಟೀನಿಗೆ ಊಟಕ್ಕೆ ಕರೆದೊಯ್ದರು. ಊಟ ಮುಗಿಸಿಕೊಂಡು ಬರುವ ಹೊತ್ತಿಗೆ ತಡವೇ ಆಗಿತ್ತು. ಹಾಗಾಗಿ ಅವಳಿಗೆ ಅಂದು ವಿಶ್ರಾಂತಿ ತೆಗೆದುಕೊಳ್ಳಲು ಹೇಳಿ ಮರುದಿನ ಭಾನುವಾರವಾದ್ದರಿಂದ ಅಲ್ಲೇ ವಸತಿಗೃಹದಲ್ಲಿರುವ ತಮ್ಮ ಮನೆಗೇ ಬೆಳಗಿನ ಉಪಹಾರಕ್ಕೆ ಬರಬೇಕೆಂದು ಆಹ್ವಾನಿಸಿದರು. ನಿಮಗೇಕೆ ತೊಂದರೆ ಸರ್. ನಾನು ಕ್ಯಾಂಟೀನಿನಲ್ಲಿ ಏನಾದರೂ ತಿಂದುಕೊಳ್ಳುತ್ತೇನೆ ಎಂದರೂ ಒಪ್ಪದೆ "ನಾನು ಬೆಳಿಗ್ಗೆ ನಿಮ್ಮ ರೂಮ್ ಹತ್ತಿರ ಬರುತ್ತೇನೆ. ನೀವು ಸಿದ್ಧವಾಗಿರಿ" ಎಂದರು.

ಮರುದಿನ ಒಂಬತ್ತೂವರೆಯ ಹೊತ್ತಿಗೆ ಅಶೋಕ ಮಹಾಪಾತ್ರ ಅವರು ತಮ್ಮ ಕಾರಿನಲ್ಲಿ ಗೆಸ್ಟ್ ಹೌಸ್ ಬಳಿ ಬಂದರು. ಅಲ್ಲಿಯೇ ಕಾಯುತ್ತ ನಿಂತಿದ್ದ ಹೇಮಾಳನ್ನು ಕೂಡಿಸಿಕೊಂಡು ತಮ್ಮ ಮನೆಯ ಕಡೆ ಹೊರಟರು. ಮನೆಗೆ ಹೋದರೆ ಅಲ್ಲಿ ಒಬ್ಬ ಸುಮಾರು ಐವತ್ತರ ಪ್ರಾಯದ ಮಹಿಳೆ ಒಬ್ಬರು ಹಾಲ್‌ನಲ್ಲಿ ಕುರ್ಚಿಯ ಮೇಲೆ ಕುಳಿತಿದ್ದರು. "ಮಿಸೆಸ್ ಹೇಮಾ ಮೀಟ್ ಮೈ ಲವ್ಲೀ ಅಮ್ಮಾ ಸುಷ್ಮಿತಾ ಮಹಾಪಾತ್ರ"

ಎಂದು ಹೇಮಾಳಿಗೆ ಅವರನ್ನು ಪರಿಚಯಿಸಿದರು. ಹೇಮಾ ಎರಡೂ ಕೈ ಜೋಡಿಸಿ ನಮಸ್ಕಾರ ಎಂದಳು. ಅವರೂ ಕೈ ಮುಗಿದು 'ವೆಲ್ ಕಮ್ ಟು ಅವರ್ ಹೋಮ್' ಎಂದು ಕುರ್ಚಿ ತೋರಿಸಿದರು. ಆ ಮೇಲೆ ಪರೋಟಾ ಸಾಗು ಮತ್ತು ಯಾವುದೋ ಹೊಸ ಬಗೆಯ ಒಂದು ಸಿಹಿ ತಿಂಡಿಯಿದ್ದ ಪ್ಲೇಟ್ ಅನ್ನು ಇಬ್ಬರಿಗೂ ತಂದು ಟೇಬಲ್ ಮೇಲೆ ಇಟ್ಟರು. ಅವರ ಹರಕು ಮುರುಕು ಕನ್ನಡದಲ್ಲಿ 'ತೆಗೆದುಕೊಳ್ಳಿ' ಎಂದರು. ಹೇಮಾ ಸಂಕೋಚದಿಂದ ತಟ್ಟೆಯಲ್ಲಿದ್ದುದನ್ನು ತಿನ್ನತೊಡಗಿದಳು. ಮಹಾಪಾತ್ರ ಕೂಡ ತಿನ್ನುತ್ತಲೇ ಮಾತಾಡುತ್ತಿದ್ದರು. ಹೇಮಾ ಮಹಾಪಾತ್ರ ಅವರ ತಾಯಿಗೂ "ಅಮ್ಮಾ ವೈಡೋಂಟ್ ಯು ಆಲ್ಸೋ ಹ್ಯಾವ್ ದಿ ಬ್ರೇಕ್ ಫಾಸ್ಟ್" ಎಂದಳು. 'ನೋ ನೋ ಅತಿಥಿ ದೇವೋಭವ. ಐ ವಿಲ್ ಹ್ಯಾವ್ ಇಟ್ ಲೇಟರ್' ಎಂದು ಮುಗುಳ್ನಕ್ಕರು. ಮಾತಾಡುತ್ತ ತಮ್ಮ ತಾಯಿ ಹೈಸ್ಕೂಲ್‌ನಲ್ಲಿ ಟೀಚರ್ ಆಗಿದ್ದು ಈಗ ಸ್ವಯಂ ನಿವೃತ್ತಿ ಪಡೆದುಕೊಂಡಿದ್ದಾರೆಂದು ತಿಳಿಸಿದರು. ತಮ್ಮ ತಂದೆ ಲಕ್ಷ್ಮಣ ಮಹಾಪಾತ್ರ ಭುವನೇಶ್ವರದಲ್ಲಿ ವಿಶ್ವ ವಿದ್ಯಾಲಯದಲ್ಲಿ ಒರಿಯಾ ಭಾಷೆಯ ಪ್ರಾಧ್ಯಾಪಕರಾಗಿದ್ದವರು. ಐದು ವರ್ಷಗಳ ಹಿಂದೆ ಹೃದಯಾಘಾತದಿಂದ ತೀರಿಕೊಂಡರೆಂದು ಹೇಳಿದರು. ತಿಂಡಿ ತಿಂದಾದ ಮೇಲೆ ಚಹಾ ತಂದು ಕೊಟ್ಟರು. ಚಹಾ ಕುಡಿಯುತ್ತ ನಿಮ್ಮ ಹಸ್‌ಬೆಂಡ್ ಏನು ಕೆಲಸ ಮಾಡುತ್ತಾರೆಂದು ಕೇಳಿದರು. ಹೇಮಾಳಿಗೆ ಉತ್ತರಿಸಲು ಸ್ವಲ್ಪ ಕಸಿವಿಸಿಯೆನಿಸಿತು. ಆದರೂ ಈಗ ಬೇರೆ ವಿಷಯವೆಲ್ಲ ಏಕೆ ಎಂದು ಅವರು ದಾವಣಗೆರೆಯಲ್ಲಿ ಸಿ.ಎ. ಆಗಿ ಸ್ವತಂತ್ರವಾಗಿ ಕೆಲಸಮಾಡುತ್ತಿದ್ದಾರೆಂದು ಹೇಳಿದಳು.

ಆ ಮೇಲೆ ಸುಮಾರು ಹೊತ್ತು ಅವಳ ಸಂಶೋಧನೆಯ ವಿಷಯದ ಬಗ್ಗೆಯೇ ಚರ್ಚಿಸಿದರು. ಅವಳು ಅಧ್ಯಯನ ಮಾಡಬೇಕಾದ ಪುಸ್ತಕಗಳ ಒಂದು ದೊಡ್ಡ ಪಟ್ಟಿಯನ್ನೇ ನೀಡಿದರು. ಆರಾರು ತಿಂಗಳಿಗೊಮ್ಮೆ ಮಾಡಿರುವ ಕೆಲಸದ ಬಗ್ಗೆ ವಿ.ವಿ.ಗೆ ಪ್ರೋಗ್ರೆಸ್ ರಿಪೋರ್ಟ್ ನೀಡಬೇಕಾಗುತ್ತದೆ ಎಂದು ಹೇಳಿದರು. ಕ್ಷೇತ್ರ ಕಾರ್ಯ ಕೈಗೊಳ್ಳುವ ಬಗ್ಗೆ ಕೆಲ ತಿಂಗಳ ನಂತರ ತಿಳಿಸುವುದಾಗಿ ಹೇಮಾ ಹೇಳಿದಳು. ಪ್ರೋಗ್ರೆಸ್ ರಿಪೋರ್ಟ್ ನೀಡಲು ಬಂದಾಗಲೇ ಸಂಶೋಧನೆಗೆ ಸಂಬಂಧಿಸಿದಂತೆ ಬರವಣಿಗೆ ಏನಾದರೂ ಮಾಡಿದ್ದರೆ ಅದರ ಬಗ್ಗೆ, ಸಂದೇಹಗಳಿದ್ದರೆ ಅದರ ಬಗ್ಗೆಯೂ ಚರ್ಚಿಸಬಹುದೆಂದು ಹೇಳಿದರು. ಹೇಮಾ ಅವರ ಎಲ್ಲ ಮಾತಿಗೂ ನಮ್ರವಾಗಿ 'ಯೆಸ್ ಸರ್' ಎಂದು ಹೇಳಿ "ನಾನು ಬರುತ್ತೇನೆ ಸರ್. ಥ್ಯಾಂಕ್ಸ್' ಎಂದು ಹೇಳಿ ಒಳಗೆ ಇದ್ದ ಅವರ ತಾಯಿಗೂ ಹೊರಡುವುದಾಗಿ ಹೇಳಿ ಅಲ್ಲಿಂದ ಹೊರಟಳು. ಮರು ದಿನ ವಿ.ವಿಯ ಕಛೇರಿಗೆ ಹೋಗಿ ಅರ್ಜಿ ಸಲ್ಲಿಸಿ ಅಗತ್ಯವಾದ ಫೀಸ್ ಕಟ್ಟಿ ರಿಜಿಸ್ಟ್ರೇಷನ್ ಮಾಡಿಸಿ ಊರಿಗೆ ಬಸ್ ಹತ್ತಿದಳು.

* * *

ಹೇಮಾಳಿಗೆ ಈಗ ಕಾಲೇಜಿನ ದಿನ ನಿತ್ಯದ ಪಾಠ ಪ್ರವಚನಗಳ ನಡುವೆ ಪಿಎಚ್.ಡಿ. ಅಧ್ಯಯನವೂ ಜೊತೆಗೂಡಿದ್ದರಿಂದ ಸದಾ ಓದುವುದು, ಟಿಪ್ಪಣಿ ಮಾಡಿಕೊಳ್ಳುವುದು,

ಇಲ್ಲದೆ ಇರುವ ಪುಸ್ತಕಗಳಿಗಾಗಿ ಕಾಲೇಜಿನ ಪುಸ್ತಕ ಭಂಡಾರವಲ್ಲದೆ ಬೇರೆ ಬೇರೆ ಕಡೆಯಲ್ಲೂ ಹುಡುಕಾಡುವುದು, ವಿಚಾರಿಸುವುದು ಇವುಗಳಲ್ಲಿ ವ್ಯಸ್ತಳಾಗಿರುತ್ತಿದ್ದಳು. ಆರು ತಿಂಗಳ ನಂತರ ಮೊದಲ ಪ್ರಗತಿ ವರದಿ ಸಿದ್ಧಪಡಿಸಿದಳು. ಮಹಾಪಾತ್ರ ಅವರೊಂದಿಗೆ ಚರ್ಚಿಸಬೇಕಾದ ಸಂಗತಿಗಳನ್ನು ಗುರುತುಹಾಕಿಕೊಂಡಳು. ಚಿಕ್ಕಮಗಳೂರಿನಿಂದಲೇ ಟ್ರಂಕ್ ಕಾಲ್ ಬುಕ್ ಮಾಡಿ ತಾನು ಯಾವಾಗ ಬರಬಹುದೆಂದು ಕೇಳಿದಳು. ಭಾನುವಾರದ ಹಿಂದೆಮುಂದೆ ವಿ.ವಿ ಕೆಲಸ ಮಾಡುವ ದಿನ ಬನ್ನಿ ಎಂದು ಹೇಳಿದರು. ಅದರಂತೆ ಆ ವಾರದ ಕೊನೆಯಲ್ಲಿ ಸೋಮವಾರ ಕಾಲೇಜಿಗೆ ರಜೆ ಹಾಕಿ ಭಾನುವಾರ ಬೇಗನೆ ಮನೆ ಬಿಟ್ಟು ಹನ್ನೊಂದು ಗಂಟೆಯ ಹೊತ್ತಿಗೆಲ್ಲಾ ಮೊದಲೇ ನಿಗದಿಯಾಗಿದ್ದ ಗೆಸ್ಟ್ ಹೌಸ್‌ನ ರೂಮಿಗೆ ಹೋಗಿ ರಿಲ್ಯಾಕ್ಸ್ ಮಾಡಿಕೊಂಡು ಕ್ಯಾಂಟೀನಿಗೆ ಹೋಗಿ ಊಟ ಮುಗಿಸಿ ನಾಲ್ಕು ಗಂಟೆಯ ಸುಮಾರಿಗೆ ಮಹಾಪಾತ್ರ ಅವರ ಮನೆಗೆ ಹೋದಳು. ಇವಳು ಹೋದಾಗ ಮಹಾಪಾತ್ರ ಅವರು ಇರಲಿಲ್ಲ. "ಯಾರೋ ಗೆಳೆಯರ ಜೊತೆ ಶಿವಮೊಗ್ಗೆಗೆ ಹೋಗಿದ್ದಾನೆ. ಆರು ಗಂಟೆಯ ಹೊತ್ತಿಗೆ ಬರುವುದಾಗಿ ಹೇಳಿ ಹೋಗಿದ್ದಾನೆ. ನೀವು ಬಂದರೆ ಇಲ್ಲಿಯೇ ಮಾತಾಡುತ್ತ ಕುಳಿತು ಕೊಂಡಿರಲು ಹೇಳಿದ್ದಾನೆ ಎಂದು ಅವರ ತಾಯಿ ತಿಳಿಸಿದರು. ಇಬ್ಬರೂ ಟೀ ಕುಡಿಯುತ್ತ ಪರಸ್ಪರ ಕ್ಷೇಮ ಸಮಾಚಾರದ ಔಪಚಾರಿಕ ಮಾತುಗಳನ್ನಾಡಿ ಮುಗಿಸಿದ ಮೇಲೆ ಮಹಾಪಾತ್ರ ಅವರ ತಾಯಿ "ನಿಮ್ಮ ಯಜಮಾನರನ್ನೂ ಕರೆದುಕೊಂಡು ಬಂದಿದ್ದರೆ ನಿಮಗೂ ಒಂದು ಕಂಪನಿ ಆಗುತ್ತಿತ್ತು. ನಾವೂ ಅವರನ್ನು ನೋಡಬಹುದಾಗಿತ್ತು" ಎಂದರು. ಆಗ ಹೇಮಾ ಮುಖ ಸಪ್ಪಗೆ ಮಾಡಿಕೊಂಡು ತಡೆದು ತಡೆದು "ನಾನು ಅಷ್ಟೆಲ್ಲ ಅದೃಷ್ಟವಂತೆ ಅಲ್ಲ ಮೇಡಮ್." ಎಂದು ಪ್ರಾರಂಭಿಸಿ ಗಂಡನಿಗೂ ತನಗೂ ಸರಿಬರದೆ ತಮ್ಮಿಬ್ಬರ ಡೈವರ್ಸ್ ಕೇಸು ಕೋರ್ಟಿನಲ್ಲಿರುವ ಬಗ್ಗೆ ತಿಳಿಸಿದಳು. ಕೂಡಲೇ ಅವರು "ವೆರಿ ಸಾರಿ. ನಿಮ್ಮ ಪರ್ಸನಲ್ ಮ್ಯಾಟರ್ ಕೇಳಿ ನಿಮಗೆ ನೋವು ಮಾಡಿದೆ ಅನ್ನಿಸುತ್ತೆ" ಎಂದರು. ಹೇಮಾ– "ಇಲ್ಲ ಆಂಟಿ ನಿಮಗೆ ನನ್ನ ವಿಷಯ ಏನು ಗೊತ್ತಿತ್ತು. ನೀವು ಸಹಜವಾಗಿಯೇ ಕೇಳಿದಿರಿ" ಎಂದು ಹೇಳಿ ತಮ್ಮಿಬ್ಬರ ಮಧ್ಯೆ ಭಿನ್ನಾಭಿಪ್ರಾಯ ಉಂಟಾದ್ದನ್ನು ಸೂಕ್ಷ್ಮವಾಗಿ ತಿಳಿಸಿದಳು. ಅವರು–"ದಾಂಪತ್ಯದಲ್ಲಿ ಎಲ್ಲಾ ಸರಿಹೋದರೆ ಸರಿ. ಇಲ್ಲದೆ ಹೋದರೆ ಯಾವುದೊಂದು ಹೆಚ್ಚು ಕಡಿಮೆ ಆದರೂ ದಾಂಪತ್ಯ ಉಳಿಯಲ್ಲ. 'ಮ್ಯಾರೇಜಸ್ ಆರ್ ಮೇಡಿನ್ ಹೆವನ್' ಅಂತ ಅದಕ್ಕೇ ಅಲ್ಲವೆ ಹೇಳೋದು. ನೋಡಿ ನಾವು ಅಂದುಕೊಂಡಂತೆ ಎಲ್ಲವೂ ನಡೆದಿದ್ದರೆ ಇಷ್ಟು ಹೊತ್ತಿಗೆ ನಮ್ಮ ಅಶೋಕನಿಗೂ ಐದಾರು ವರ್ಷದ ಒಬ್ಬ ಮಗನೋ ಮಗಳೋ ಇರಬೇಕಾಗಿತ್ತು. ನನಗೂ ಮುದ್ದು ಮಾಡೋಕೆ ಮೊಮ್ಮಗನೋ ಮೊಮ್ಮಗಳೋ ಇರುತ್ತಾ ಇದ್ದಳು" ಎಂದು ಏನನ್ನೋ ನೆನೆದು ಕಣ್ಣೀರಿಟ್ಟರು. ಹೇಮಾಳಿಗೆ ಆಶ್ಚರ್ಯದ ಜೊತೆಗೆ ಸ್ವಲ್ಪ ಕಸಿವಿಸಿ ಅನ್ನಿಸಿತು. "ಏನಾಯಿತು ಆಂಟಿ, ಸಮಾಧಾನ ಮಾಡಿಕೊಳ್ಳಿ" ಎಂದು ಕೇಳಿದಳು. "ಅಶೋಕ ಅವನ ಕ್ಲಾಸ್ ಮೇಟ್ ಒಬ್ಬಳನ್ನು ತುಂಬ ಪ್ರೀತಿಸಿದ್ದ. ಆ ಹುಡುಗಿ ನನಗೂ ಒಪ್ಪಿಗೆ ಆಗಿದ್ದಳು. ಮದುವೆ ಡೇಟೊಂದು ಫಿಕ್ಸ್ ಆಗಬೇಕಾಗಿತ್ತು. ಆದರೆ ತನ್ನ ಗೆಳತಿಯರ

ಜೊತೆ ಭುವನೇಶ್ವರದ ಹತ್ತಿರ ಇರುವ ಒಂದು ಸ್ಥಳಕ್ಕೆ ಪಿಕ್‌ನಿಕ್‌ಗೆ ಅಂತ ಹೋಗಿದ್ದಾಗ ಇವರ ಮಿನಿ ಬಸ್‌ಗೆ ಆಕ್ಸಿಡೆಂಟಾಗಿ ಐದು ಜನ ಸ್ಥಳದಲ್ಲೇ ತೀರಿಕೊಂಡರು. ಅದರಲ್ಲಿ ಆ ಹುಡುಗಿಯೂ ಒಬ್ಬಳು. ಆ ಘಟನೆ ನಡೆದ ಮೇಲೆ ಅಶೋಕ ತುಂಬಾ ಡಿಪ್ರೆಸ್ ಆಗಿಬಿಟ್ಟ. ಯೂನಿವರ್ಸಿಟಿ ಲೆಕ್ಚರರ್ ಕೆಲಸಕ್ಕೆ ತಿಂಗಳುಗಟ್ಟಲೆ ರಜಾ ಹಾಕಿಬಿಟ್ಟ. ಕೊನೆಗೆ ಎಷ್ಟೊಂದು ಡಿಪ್ರೆಸ್ ಆಗಿಬಿಟ್ಟ ಅಂದರೆ ಭುವನೇಶ್ವರದಲ್ಲಿ ಇರೋದೇ ಬೇಡ, ಇಲ್ಲಿ ಇದ್ದರೆ ಮತ್ತೆ ಮತ್ತೆ ಅದೇ ಎಲ್ಲ ನೆನಪು ಬರುತ್ತಿರುತ್ತೆ ಅನ್ನುವ ತೀರ್ಮಾನಕ್ಕೆ ಬಂದುಬಿಟ್ಟ. ಅದೇ ಸಮಯಕ್ಕೆ ಇಲ್ಲಿ ಯೂನಿವರ್ಸಿಟಿಯಲ್ಲಿ ರೀಡರ್ ಪೋಸ್ಟ್‌ಗೆ ಕರೆದಿದ್ದರಲ್ಲ. ಅರ್ಜಿ ಹಾಕಿಕೊಂಡು ಸೆಲೆಕ್ಟ್ ಆಗಿ ಬಂದುಬಿಟ್ಟ. ಇದೆಲ್ಲ ನಡೆದು ಆಗಲೇ ನಾಲ್ಕೈದು ವರ್ಷದ ಮೇಲಾಯಿತು. ಅಶೋಕನಿಗೆ ಓದೋದು ಬರೆಯೋದು ಬಿಟ್ಟರೆ ಬೇರೆ ಎಲ್ಲದರ ಬಗೆಗೂ ವೈರಾಗ್ಯ ಬಂದುಬಿಟ್ಟಿದೆ. ಮದುವೆಯ ಮಾತೆತ್ತಿದರೆ ಆ ಜಾಗವನ್ನೇ ಬಿಟ್ಟು ಹೊರಟು ಹೋಗುತ್ತಾನೆ. ಅದಕ್ಕೇ ನಾನು ಹೇಳಿದ್ದು ಮ್ಯಾರೇಜಸ್ ಆರ್ ಮೇಡಿನ್ ಹೆವನ್ ಅನ್ನುವ ಮಾತಿನಲ್ಲಿ ಹೆಚ್ಚು ಸತ್ಯ ಇದೆ ಅಂತ. ಆ ಹುಡುಗಿ ತನ್ನ ಬಾಳ ಗೆಳತಿ ಆಗಬೇಕು ಅಂತ ಅಶೋಕ ಅಂದುಕೊಂಡಿದ್ದ. ಆದರೆ ಅದು ದೇವರ ಇಚ್ಛೆಯಲ್ಲಿರಲಿಲ್ಲ ಅಂತ ಕಾಣಿಸುತ್ತೆ. ಬೇರೆ ಇನ್ಯಾರ ಜೊತೆಯಲ್ಲಿ ಅವನು ಬಾಳುವೆ ನಡೆಸುವುದು ಇದೆಯೋ. ಎಷ್ಟು ದಿವಸ ಹೀಗೇ ಇರುತ್ತಾನೋ" ಎಂದು ಹೇಳುತ್ತಿದ್ದಂತೆ ಅವರ ಮುಖ ಮ್ಲಾನವಾಯಿತು. ಆ ಮೇಲೆ "ಅಯ್ಯೋ ನಾನು ಅಶೋಕನ ಕತೆ ಹೇಳುತ್ತಾ ನಿಮ್ಮ ನೋವಿನ ಕಥೆ ಮರೆತೇ ಬಿಟ್ಟೆ. ನೀವೂ ಬೇಜಾರು ಪಟ್ಟುಕೊಳ್ಳಬೇಡಿ. ನಿಮ್ಮ ವಯಸ್ಸಿಗೆ ಹೆಚ್ಚು ಜನಕ್ಕೆ ಮದುವೇನೇ ಆಗಿರೋದಿಲ್ಲ. ನಿಮಗೆ ಬೇಗ ಡೈವರ್ಸ್ ಸಿಕ್ಕಿ ಬೇರೆ ಯಾರಾದರೂ ನಿಮ್ಮನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ, ಪ್ರೀತಿ ತೋರಿಸುವ ಗಂಡ ಸಿಕ್ಕಿಯೇ ಸಿಗುತ್ತಾನೆ. ಸಿಗಲಿ ಅಂತ ನಾನು ಹಾರೈಸುತ್ತೀನಿ" ಅಂದರು. ಹೀಗೇ ಅವರು ಮಾತಾಡುತ್ತ ಕೂತಿದ್ದಾಗಲೇ ಮಹಾಪಾತ್ರ ಅವರು ಬಂದರು. ಬರುತ್ತಿದ್ದ ಹಾಗೇನೇ "ವೆರಿ ವೆರಿ ಸಾರಿ. ನಾನು ಅನ್‌ಎಕ್ಸ್‌ಪೆಕ್ಟೆಡ್ ಆಗಿ ಒಬ್ಬರ ಜೊತೆ ಶಿವಮೊಗ್ಗಾಕ್ಕೆ ಹೋಗಬೇಕಾಗಿ ಬಂತು. ಹೀಗಾಗಿ ನಿಮ್ಮನ್ನು ಕಾಯಿಸಬೇಕಾಯಿತು" ಎಂದರು. "ನಥಿಂಗ್ ಟು ಬಾದರ್ ಸರ್. ನಾನು ಅಮ್ಮಾ ಹತ್ತಿರ ಮಾತಾಡ್ತಾ ಕೂತಿದ್ದೆ. 'ಷಿ ಈಸ್ ವೆರಿ ಮಚ್ ಅಫೆಕ್ಷನೇಟ್ ಅಂಡ್ ಲವ್ಲೀ ಮದರ್ ಸರ್.' ಅಂತ ಹೇಳಿದಳು. "ಆ ಅಮ್ಮನ ಪ್ರೀತಿ ಉಂಡೇ ಈ ಅಶೋಕ ಇಷ್ಟು ದೊಡ್ಡ ದೇಹ ಮನಸ್ಸು ಎಲ್ಲ ಬೆಳೆಸಿಕೊಂಡಿರೋದು" ಎಂದರು. ಆಮೇಲೆ ಅವಳ ಪ್ರೋಗ್ರೆಸ್ ರಿಪೋರ್ಟ್ ಈಸಿಕೊಂಡು ನೋಡಿದರು. "ಎಲ್ಲ ಸರಿಯಾಗಿದೆ ಮೇಡಮ್. ನೀವು ಈಗ ರಾತ್ರಿಗೆ ಇಲ್ಲೇ ನಮ್ಮ ಜೊತೇಲೇ ಊಟ ಮಾಡಿ. ನಿಮ್ಮ ಜೊತೆ ಚರ್ಚೆ ಮಾಡಬೇಕಾದ ಸಂಗತಿಗಳಿವೆ. ನಿಮಗೂ ಡೌಟ್ಸ್ ಏನಾದರೂ ಇರಬಹುದು. ಅದೆಲ್ಲ ಚರ್ಚೆ ಮಾಡೋಣ." ಎಂದರು.

ಮೂರೂ ಜನ ಜೊತೆಯಲ್ಲೇ ಊಟ ಮುಗಿಸಿದರು. ಅವರ ಊಟದಲ್ಲಿ ಹೇಮಾಳಿಗೆ ಚಿರಪರಿಚಿತವಾಗಿದ್ದ ಸಾಂಬಾರ್ ಅಥವಾ ಹುಳಿಗೆ ಜಾಗವಿರಲಿಲ್ಲ.

ಅವರ ಕಡೆಯ ಕೆಲವು ಡಿಷಸ್ ಇತ್ತು. ಮಹಾಪಾತ್ರ ಅವರು "ನಿಮಗೆ ನಮ್ಮ ಕಡೆಯ ಈ ಡಿಷಸ್ ಹೇಗನ್ನಿಸುತ್ತೋ ಏನೋ. ನಾನು ಊಟಕ್ಕೆ ಇರಿ ಎಂದು ಒತ್ತಾಯಿಸಬಾರದಾಗಿತ್ತೇನೋ. ಆದರೆ ಒಂದು ಅಶ್ಯೂರೆನ್ಸ್ ಕೊಡುತ್ತೇನೆ. ಇದೆಲ್ಲ ಒನ್ ಹಂಡ್ರೆಡ್ ಪರ್ಸೆಂಟ್ ವೆಜಿಟೇರಿಯನ್ ಫುಡ್. ಅಂದಹಾಗೆ ನೀವು ವೆಜಿಟೇರಿಯನ್ನೋ ನಾನ್ ವೆಜಿಟೇರಿಯನ್ನೋ" ಎಂದು ನಗುತ್ತಾ ಕೇಳಿದರು. "ಅಯ್ಯೋ ಸರ್ ನಾವು ಲಿಂಗಾಯಿತರು. ಪ್ಯೂರ್ ವೆಜಿಟೇರಿಯನ್ಸ್." ಅಂದಳು. "ಬೈ ದಿ ಬೈ ನಮ್ಮ ಇಂಡಿಯಾದಲ್ಲಿ ಫುಡ್ ಹ್ಯಾಬಿಟ್ಸ್ ಮುಖ್ಯವಾಗಿ ಜಾತಿ ಧರ್ಮಗಳ ಮೇಲೆ ಹೋಗುತ್ತವೆ. ಕೆಲವು ಜಾತಿಗಳು ಬೈ ಬರ್ತ್ ವೆಜಿಟೇರಿಯನ್ಸ್ ಆದರೆ ಇನ್ನು ಕೆಲವು ಜಾತಿಗಳವರು ಬೈ ಬರ್ತ್ ನಾನ್ ವೆಜಿಟೇರಿಯನ್ಸ್. ಬ್ರಾಹ್ಮಣರಲ್ಲಿ ವೇದಗಳ ಕಾಲದಲ್ಲಿ ಋಷಿಗಳು ಮೊದಲುಗೊಂಡು ಬ್ರಾಹ್ಮಣರೆಲ್ಲರೂ ಬೀಫ್ ಕೂಡ ತಿನ್ನುತ್ತಾ ಇದ್ದರು. ಆಮೇಲೆ ಬೌದ್ಧ ಅದಕ್ಕಿಂತ ಹೆಚ್ಚಾಗಿ ಜೈನ ಧರ್ಮದ ಪ್ರಭಾವದಿಂದ ಬಹು ಪಾಲು ಬ್ರಾಹ್ಮಣರಲ್ಲಿ ಸಸ್ಯಾಹಾರವೆಂಬುದು ಜೀವನ ಪದ್ದತಿಯೇ ಆಗಿಹೋಯಿತು. ಆದರೆ ಬಂಗಾಳ, ಒರಿಸ್ಸಾ, ಗೋವ ಹೀಗೆ ಕಡಲ ತೀರದಲ್ಲಿರುವ ಬಹುಪಾಲು ಬ್ರಾಹ್ಮಣರು ಬೇರೆ ನಾನ್‌ವೆಜ್ ಆಹಾರವನ್ನು ತಿನ್ನದೆ ಹೋದರೂ ಫಿಶ್ ಮಾತ್ರ ಅವರ ಆಹಾರದ ಭಾಗವಾಗಿಬಿಟ್ಟಿದೆ. ಅದು ಅವರ ಲೆಕ್ಕದಲ್ಲಿ 'ಗಂಗಾಫಲ.' ಕೆಲವರು ವೆಜಿಟೇರಿಯನ್ ಫ್ರೆಂಡ್ಸ್ ನಾನ್ ವೆಜಿಟೇರಿಯನ್ ಫುಡ್ ಅನ್ನು ಅಭ್ಯಾಸ ಮಾಡಿಕೊಂಡಿರ್ತಾರೆ. ಆದರೆ ಅವರ ಮನೆಗಳಲ್ಲಿ ಮಾತ್ರ ಅದೇ ಸಾಂಪ್ರದಾಯಿಕ ವೆಜಿಟೇರಿಯನ್ ಫುಡ್ಡೇ ಮಾಡೋದು. ಒಂದು ರೀತಿಯಲ್ಲಿ ನಮ್ಮ ಸಂಸ್ಕೃತಿ ಸಂಪ್ರದಾಯಗಳು ಇವತ್ತಿಗೂ ಕೆಲವು ಉಳಿದು ಬಂದಿವೆ ಅಂದರೆ ಅದು ನಮ್ಮ ಮಾತೆಯರಿಂದಲೇ. ಅದೇ ಪಶ್ಚಿಮದ ದೇಶಗಳಲ್ಲಿ ಅವರ ಧರ್ಮ, ಜಾತಿ ಯಾವುದೇ ಆಗಿರಲಿ ಸಾಮಾನ್ಯವಾಗಿ ಎಲ್ಲರೂ ನಾನ್ ವೆಜಿಟೇರಿಯನ್ಸ್. ವೆಜಿಟೇರಿಯನ್ಸ್ ಎಕ್ಸೆಪ್ಷನ್ಸ್ ಅಷ್ಟೆ. ಧರ್ಮಕ್ಕೂ ಫುಡ್‌ಗೂ ಸಂಬಂಧವೇ ಇಲ್ಲ." ಎಂದರು. ಹೇಮಾ– "ಓಹ್ ಸರ್ ಸಸ್ಯಾಹಾರ ಮತ್ತು ಮಾಂಸಾಹಾರದ ಬಗ್ಗೆ ವಿಸ್ತಾರವಾದ ವಿಶ್ಲೇಷಣೆಯನ್ನೇ ಕೊಟ್ಟುಬಿಟ್ಟರು. ನಮ್ಮ ವೀರಶೈವ ಅಥವಾ ಲಿಂಗಾಯತ ಧರ್ಮದ ಪ್ರವರ್ತಕರಾದ ಬಸವಣ್ಣನವರು, ದಯೆ ಅದರಲ್ಲೂ ಪ್ರಾಣಿ ದಯೆಯ ಬಗ್ಗೆ ವಿಶೇಷವಾಗಿ ಒತ್ತುಕೊಟ್ಟರು. ದಯೆಯೇ ಧರ್ಮದ ಮೂಲ ಅಂತ ಹೇಳ್ತಾರೆ ಅವರು. ಮೂಲತಃ ಬ್ರಾಹ್ಮಣರಾದರೂ ಆ ಕಾಲದಲ್ಲಿ ಯಜ್ಞ ಯಾಗಾದಿಗಳ ಸಮಯದಲ್ಲಿ ಆಗುತ್ತಿದ್ದ ಪ್ರಾಣಿಬಲಿಯನ್ನು ಬಹಳ ಉಗ್ರವಾಗಿ ತಮ್ಮ ವಚನಗಳಲ್ಲಿ ಖಂಡಿಸುತ್ತಾರೆ. ಅವರ ವಚನಗಳಲ್ಲಿ ಮಾಂಸಾಹಾರದ ಬಗ್ಗೆ ಉದ್ದಕ್ಕೂ ಖಂಡನೆಯೇ ವ್ಯಕ್ತವಾಗಿದೆ. ಸಮಾಜದ ಎಲ್ಲ ಜಾತಿಗಳಿಂದ ಲಿಂಗಾಯತ ಧರ್ಮಕ್ಕೆ, ಜನರು ಬಂದರು. ಅವರಲ್ಲಿ ಹುಟ್ಟಿನಿಂದ ಮಾಂಸಾಹಾರದ ಅಭ್ಯಾಸವಾಗಿದ್ದ ಜನವರ್ಗಗಳಿಗೆ ಬಸವಣ್ಣನವರ ಧರ್ಮದ ಈ ಸಸ್ಯಾಹಾರ ನಿಷ್ಠೆ ಮೊದಲು ಮೊದಲು ಬಹಳ ಕಷ್ಟ ಕೊಟ್ಟಿರಬೇಕು. ಆ ಮೇಲೆ ಕೆಲವರು ಈ ಸಸ್ಯಾಹಾರದ ಕಾರಣಕ್ಕಾಗಿಯೇ ತಮ್ಮ ಹಳೆಯ ಜಾತಿಗಳಿಗೇ ವಾಪಸ್ ಹೋಗಿರಲಿಕ್ಕೂ ಸಾಕು. ಅಲ್ಲಮ ಪ್ರಭುಗಳು

'ಭಕ್ತನು ಭವಿಯಾದಡೆ ಏನನುಪಮಿಸುವೆನಯ್ಯಾ ಎಂದು ಇಂಥವರನ್ನು ಕುರಿತೇ ಹೇಳಿರಬೇಕೇನೋ. ಲಂಕೇಶ್ ಅಂತ ನಮ್ಮ ಕನ್ನಡದ ಒಬ್ಬ ಖ್ಯಾತ ಸಾಹಿತಿಗಳು ಬರೆದಿರುವ 'ಸಂಕ್ರಾಂತಿ' ಅಂತ ಒಂದು ನಾಟಕ ಇದೆ. ಅದರಲ್ಲಿ ಉತ್ಸಾಹದಿಂದ ಲಿಂಗಾಯಿತರಾಗಿ ದೀಕ್ಷೆ ತೆಗೆದುಕೊಂಡ ದಲಿತರು ಮತ್ತು ಕೆಳ ವರ್ಗದವರು ತಮಗೆ ಮಾಂಸಾಹಾರ ತಪ್ಪಿಹೋದುದಕ್ಕೆ ಬಹಳ ಪರಿತಪಿಸುತ್ತಿರುವ ರೀತಿಯಲ್ಲಿ ಚಿತ್ರಿಸಲಾಗಿದೆ." "ಹೌದಾ ವೆರಿ ಇಂಟರೆಸ್ಟಿಂಗ್. ನೀವು ಬಿಡುವಾದಾಗ ಇದರ ಬಗ್ಗೆಯೇ ಒಂದು ಪೇಪರ್ ಯಾಕೆ ರೆಡಿ ಮಾಡಬರದು.?" ಹೇಮಾ "ನೋಡ್ತೀನಿ ಸರ್" ಎಂದಳು. ಅಶೋಕರು– "ನೋಡಿ ಆಹಾರದ ಅಭ್ಯಾಸ ಎನ್ನುವುದು ಅವರವರು ಮಾಡಿಕೊಂಡ ಹಾಗೆ. ಅದರಲ್ಲಿ ಶ್ರೇಷ್ಠ, ಕನಿಷ್ಠ ಎಂಬುದಿಲ್ಲ; ಇರಬಾರದು. ಇನ್ನು ಅವರು ತೆಗೆದುಕೊಳ್ಳುವ ಆಹಾರಕ್ಕೂ ಅವರ ಸ್ವಭಾವ ಅಥವಾ ಗುಣಕ್ಕೂ ಸಂಬಂಧ ಕಲ್ಪಿಸಲೇಬಾರದು. ಜಗತ್ತಿನ ಮಹಾಕ್ರೂರಿ, ಲಕ್ಷಾಂತರ ಯಹೂದಿಗಳನ್ನೆಲ್ಲ ನಿಷ್ಕರುಣೆಯಿಂದ ಕಾನ್ಸೆಂಟ್ರೇಷನ್ ಕ್ಯಾಂಪ್‌ಗಳಲ್ಲಿಟ್ಟು ಚಿತ್ರ ಹಿಂಸೆಗೆ ಗುರಿಮಾಡಿದ, ಗ್ಯಾಸ್ ಛೇಂಬರಿಗೆ ತಳ್ಳಿಸಿ ಕೊಲ್ಲಿಸಿದ ಸರ್ವಾಧಿಕಾರಿ ಹಿಟ್ಲರ್ ಒಬ್ಬ ಸಸ್ಯಾಹಾರಿಯಾಗಿದ್ದು, ಸಸ್ಯಾಹಾರಿಗಳ ಸಂಘ ಸ್ಥಾಪಿಸಿಕೊಂಡು ತಾನೇ ಅದರ ಅಧ್ಯಕ್ಷನೂ ಆಗಿದ್ದನಂತೆ! ಇದಕ್ಕೇನು ಹೇಳಬೇಕು? ಅಹಿಂಸೆಯನ್ನು ಬೋಧಿಸಿದ ಕರುಣಾಮೂರ್ತಿ ಬುದ್ಧ ಬೌದ್ಧರಿಗೆ ಮಾಂಸಾಹಾರ ವರ್ಜ್ಯವೆಂದು ಹೇಳಿದಂತಿಲ್ಲ. ಖ್ಯಾತ ಲೇಖಕ ಬರ್ನಾರ್ಡ್ ಷಾ "ಮೈ ಬೆಲ್ಲಿ ಈಸ್ ನಾಟ್ ಎ ಗ್ರೇವ್ ಯಾರ್ಡ್ ಅಫ್ ಡೆಡ್‌ಅನಿಮಲ್ಸ್" ಎಂದು ಹೇಳಿದ ಮಹಾನ್ ಸಸ್ಯಾಹಾರಿ. ಆಹಾರ ತೀರ ವೈಯಕ್ತಿಕವಾದ್ದು." ಎಂದರು. ಹೇಮಾ "ಎಷ್ಟೊಂದು ಸರಿಯಾಗಿ ಹೇಳಿದಿರಿ ಸರ್! ಕನ್ನಡದಲ್ಲಿ ಒಂದು ಗಾದೇನೇ ಇದೆ ಸರ್. 'ಊಟ ತನ್ನಿಚ್ಛೆ, ನೋಟ ಪರರಿಚ್ಛೆ' ಅಂತ" ಎಂದು ಹೇಳಿ ಅದರ ಅರ್ಥವಿವರಿಸಿದಳು. ಅಶೋಕರು "ಓಹ್ ಫೈನ್!" ಎಂದರು.

ಆಹಾರದ ಬಗ್ಗೆ ಚರ್ಚೆ ಮಾಡುತ್ತಲೇ ಊಟ ಮುಗಿಸಿದರು. ಊಟದ ನಂತರವೂ ಬಹಳ ಹೊತ್ತಿನ ತನಕ ಅವಳ ಸಂಶೋಧನೆಯ ವಿಷಯದ ಬಗ್ಗೆ, ಅವಳು ಎತ್ತಿದ ಸಂದೇಹಗಳ ಕುರಿತು ಮಾತುಕತೆ ನಡೆಸಿದರು. ಆಮೇಲೆ ತಮ್ಮ ಕಾರಿನಲ್ಲೇ ಗೆಸ್ಟ್ ಹೌಸಿಗೆ ಅವಳನ್ನು ತಲುಪಿಸಿದರು.

ಹೇಮಾ ಮನೆಗೆ ಹಿಂತಿರುಗಿದ ಮೇಲೂ ಅಶೋಕ ಮಹಾಪಾತ್ರ ಅವರ ಸರಳತೆಯ ಕುರಿತೇ ಯೋಚಿಸುತ್ತಿದ್ದಳು. ಮನುಷ್ಯನಿಗೆ ಕಿಂಚಿತ್ತೂ ಅಹಂ ಇಲ್ಲ. ಎಲ್ಲರ ಹತ್ತಿರವೂ ಸುಲಭವಾಗಿ ಬೆರೆಯುತ್ತಾರೆ. ಅವರ ಜೀವನದಲ್ಲೂ ಒಂದು ದುರ್ಘಟನೆ ನಡೆದುಹೋಗಿರುವುದು ತಿಳಿದು ಅವಳಿಗೆ ತೀರಾ ವಿಷಾದವೆನಿಸಿತು. ಆದರೂ ಅದನ್ನು ಕಿಂಚಿತ್ತೂ ತೋರಿಸಿಕೊಳ್ಳದೆ ತಾವೇ ನುಂಗಿಕೊಂಡಿದ್ದಾರೆ. ಅವರ ತಾಯಿ ಕೂಡ ತುಂಬಾ ಆತ್ಮೀಯವಾದ ವ್ಯಕ್ತಿ. ಅಂಥವರ ಹೊಟ್ಟೆಯಲ್ಲಿ ಹುಟ್ಟಿರೋದರಿಂದಲೇ ಇಂಥ ಸ್ವಭಾವ, ನಡವಳಿಕೆ ಬಂದಿರಬೇಕು ಎಂದು ಭಾವಿಸಿದಳು. ಮುಂದಿನ ದಿನಗಳಲ್ಲಿ ಸಂಶೋಧನೆ ಕುರಿತಂತೆ ಗಾಢ ಅಧ್ಯಯನದಲ್ಲಿ ತೊಡಗಿಸಿಕೊಂಡಳು.

ಹೇಮಾ ಚಿಕ್ಕಮಗಳೂರಿಗೆ ಬಂದು ಆಗಲೇ ಒಂದೂವರೆ ವರ್ಷದ ಮೇಲಾಗಿತ್ತು. ಸೆಮಿನಾರ್‌ಗಳನ್ನು ಅಟೆಂಡ್ ಮಾಡುವುದು, ಪಿಎಚ್ಡಿ. ರಿಜಿಸ್ಟ್ರೇಷನ್, ಅಧ್ಯಯನ ಇತ್ಯಾದಿಗಳಲ್ಲಿ ಮುಳುಗಿಹೋಗಿದ್ದರಿಂದ ಡೈವರ್ಸ್ ಕೇಸ್ ಬಗ್ಗೆ ವಿಚಾರಿಸುವುದನ್ನೇ ಮರೆತಿದ್ದಳು. ಇದ್ದಕ್ಕಿದ್ದಂತೆ ಒಂದು ದಿನ ಹೇಮಾಳಿಗೆ ತನ್ನ ಡೈವರ್ಸ್ ಕೇಸ್ ಏನಾಯಿತು ಎಂದು ತಿಳಿಯುವ ಕುತೂಹಲ ಉಂಟಾಗಿ ಲಾಯರ್‌ಗೆ ಫೋನ್ ಮಾಡಿ ಕೇಳಿದಾಗ ಅವರು ಹೇಳಿದ್ದು ಕೇಳಿ ಹೇಮಾಳಿಗೆ ಒಂದು ಕ್ಷಣ ದಿಕ್ಕು ತೋಚದಂತಾಯಿತು. ಜೊತೆಗೆ ಶಿವರಾಜನ ಮೇಲೆ ಅಸಾಧ್ಯ ಸಿಟ್ಟು ಬಂತು. ಒಂದೂವರೆ ವರ್ಷದ ಹಿಂದೆ ಶಿವರಾಜನ ಜೊತೆ ಡೈವರ್ಸ್‌ಗೆ ಅರ್ಜಿ ಸಲ್ಲಿಸಲು ಹೋದಾಗ ಕೋರ್ಟಿನ ರಜೆ ಕಳೆದ ಮೇಲೆ ನ್ಯಾಯಾಲಯಕ್ಕೆ ಅರ್ಜಿಸಲ್ಲಿಸಲು ಲಾಯರ್ ತಿಳಿಸಿದ್ದರಷ್ಟೆ. ರಜೆ ಕಳೆದ ಮೇಲೆ ಅವರು ಹೇಮಾ ಅವರಿಗೂ ಬರಲು ತಿಳಿಸಿ ಎಂದು ಶಿವರಾಜನಿಗೆ ಹೇಳಿದಾಗ ಈಗಲೇ ಅವಸರವಿಲ್ಲ ಎಂದು ಹೇಮಾಳೇ ತಿಳಿಸಿದ್ದಾಳೆಂದು ಹೇಳಿದ್ದರಿಂದ ಡೈವರ್ಸ್‌ಗೆ ಅರ್ಜಿ ಸಲ್ಲಿಸಿಯೇ ಇಲ್ಲ ಎಂದು ಲಾಯರ್ ಹೇಳಿದ್ದರು. ಉದ್ದೇಶಪೂರ್ವಕವಾಗಿಯೇ ತನ್ನನ್ನು ಸತಾಯಿಸಲು ಡೈವರ್ಸ್ ಕೊಡುವುದನ್ನು ನಿಧಾನ ಮಾಡುತ್ತಿದ್ದಾನೆಂದು ತಿಳಿಯಲು ಅವಳಿಗೆ ಏನೂ ಕಷ್ಟವಾಗಲಿಲ್ಲ. ಮರುದಿನ ಲಾಯರ್‌ಗೆ ಫೋನ್ ಮಾಡಿ ತಾನೇ ಬರುವುದಾದರೆ ಯಾವಾಗ ಬರಬೇಕೆಂದು ಕೇಳಿದಳು. ಆಗ ಕೋರ್ಟಿಗೆ ಯಾವುದೋ ಮಧ್ಯಂತರ ರಜೆ ಇದ್ದದ್ದರಿಂದ ಎರಡು ತಿಂಗಳ ನಂತರ ಫೋನ್ ಮಾಡಿ ಬನ್ನಿ. ಶಿವರಾಜನಿಗೂ ತಪ್ಪದೆ ಬರಲು ತಿಳಿಸಿರುತ್ತೇನೆ ಎಂದು ಹೇಳಿದರು. ಅದರಂತೆ ಹಿಂದಿನ ದಿನವೇ ಚಿತ್ರದುರ್ಗಕ್ಕೆ ಹೋಗಿ ಹೋಟೆಲ್‌ನಲ್ಲಿದ್ದುಕೊಂಡು ಮರುದಿನ ಲಾಯರ್ ಆಫೀಸಿಗೆ ಹೋದಳು. ಶಿವರಾಜ ಬಂದಿದ್ದ. ಹೆಂಡತಿಯನ್ನು ಬಾಳಿಸಲಾರದ ಗಂಡ, ಸೊಸೆಯನ್ನು ಬಾಳಿಸಲಾರದ ಮನೆ ಎಂದು ಈಗಾಗಲೇ ಅವರ ಬಂಧು ಬಳಗದಲ್ಲಿ ಸುದ್ದಿ ಹಬ್ಬಿದ್ದರಿಂದ ತಮ್ಮ ಸಮುದಾಯದಲ್ಲಿ ಮರು ಮದುವೆಗೆ ಹೆಣ್ಣು ಹುಡುಕುವುದು ತೀರಾ ತೊಡಕಾಗುತ್ತದೆಂದು ಅರಿತಿದ್ದರಿಂದ ತಂದೆ ತಾಯಿಯರಂತೆಯೇ ಅವನೂ ಸ್ವಲ್ಪ ಚಿಂತಿತನಾಗಿದ್ದ. ಹಾಗಾಗಿ ಹೇಮಾಳಿಗೆ ಸ್ವಲ್ಪ ಮಾತಾಡಬೇಕಾಗಿದೆ ಎಂದು ಹೇಳಿ, "ಈ ಡೈವರ್ಸೆಲ್ಲ ಯಾಕೆ, ನಾನೀಗ ಬದಲಾಗಿದ್ದೇನೆ. ಜೊತೆಯಲ್ಲೇ ಇರೋಣ" ಎಂದು ಪುಸಲಾಯಿಸಲು ಪ್ರಯತ್ನಿಸಿದ. ಆದರೆ ಅವನ ಬುದ್ಧಿ ತಿಳಿದಿದ್ದ ಹೇಮಾ ಒಪ್ಪದೆ ಡೈವರ್ಸ್‌ಗೆ ಪಟ್ಟುಹಿಡಿದಾಗ ಇಬ್ಬರೂ ಪರಸ್ಪರ ಸಮ್ಮತಿಯ ಮೇರೆಗೆ ಅರ್ಜಿ ಸಲ್ಲಿಸಿದರು. ಲಾಯರ್ ಅವರು "ನೀವು ಹೇಗೂ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಒಬ್ಬರಿಂದ ಒಬ್ಬರು ದೂರ ಇದ್ದಿರಿ. ಆದರೂ ಡೈವರ್ಸ್ ತೀರ್ಪಿಗಾಗಿ ಆರು ತಿಂಗಳ 'ಕೂಲಿಂಗ್ ಆಫ್ ಪೀರಿಯಡ್(ಶಾಂತವಾಗುವ ಅವಧಿ)' ವರೆಗೆ ಕಾಯಲು ಕೋರ್ಟ್ ಹೇಳಬಹುದು. ಆರು ತಿಂಗಳ ನಂತರವೂ ನೀವಿಬ್ಬರೂ ಒಮ್ಮನಸ್ಸಿನಿಂದ ಬೇರೆಯಾಗಲು ಇಚ್ಛಿಸಿದರೆ ವಿಚ್ಛೇದನ ಸಾಧ್ಯವಾಗುತ್ತದೆ" ಎಂದು ಹೇಳಿದರು. ಮುಂದೆ ಆರು ತಿಂಗಳು ಕಳೆದ ಮೇಲೊಮ್ಮೆ ಹೋಗಿ ಒಮ್ಮನಸ್ಸಿನಿಂದ ಬೇರೆಯಾಗಲಿಚ್ಛಿಸಿದ್ದೇವೆ ಎಂದು ತಿಳಿಸಿಬಂದಿದ್ದರು.

ಅಧ್ಯಾಯ–27

ರಘುನಾಥರಾಯರ ಕಡೆಯಿಂದ ವಸುಂಧರಾಗೆ ವರನ ಪ್ರಸ್ತಾಪ ಬಂದಿರುವ ಬಗ್ಗೆ ಸಾವಿತ್ರಮ್ಮನವರೇ ನರಸಿಂಹಜೋಯಿಸರಿಗೆ ಕಾಗದ ಬರೆದು ತಿಳಿಸಿದರು. 'ವಸುಂಧರಾ ಮದುವೆಯಾಗಲು ಸಮ್ಮತಿಸಿರುವುದೇ ದೊಡ್ಡದು. ಹಾಗಿದ್ದಾಗ ಜಾತಕ ಅದೂ ಇದೂ ಅಂತ ನೀವು ಯಾವುದೇ ಷರತ್ತು ಹಾಕುವುದು ಬೇಡ' ಎಂಬ ಒಂದು ಮಾತನ್ನೂ ಅದರಲ್ಲಿ ಸೇರಿಸಿದ್ದರು. ಜೋಯಿಸರು ಇಷ್ಟು ವರ್ಷದ ನಂತರ ಮದುವೆಯ ಪ್ರಸ್ತಾಪ ಅಂದರೇನೇ ಮಾರು ದೂರ ಸರಿಯುತ್ತಿದ್ದ ಮಗಳು ಮದುವೆಗೆ ಸಮ್ಮತಿಸಿದಳಲ್ಲ ಎಂದು ಸಮಾಧಾನಪಟ್ಟುಕೊಂಡು 'ನನ್ನ ಕಡೆಯಿಂದ ಯಾವ ವಿಷಯಕ್ಕೂ ಅಭ್ಯಂತರ ಎಂಬುದು ಇರುವುದಿಲ್ಲ. ಹೇಗೋ ಅವಳಿಗೆ ಒಪ್ಪಿಗೆಯಾಗಿ ಮದುವೆ ಅಂತ ಒಂದು ಆದರೆ ಸಾಕು. ಎಲ್ಲವೂ ಅವರವರ ಅದೃಷ್ಟವಿದ್ದಂತೆ ಆಗುತ್ತದೆ. ನನ್ನದೇನಿದ್ದರೂ ಮದುವೆಗೆ ವ್ಯವಸ್ಥೆ ಮಾಡುವುದು ಮತ್ತು ಮದುವೆ ಮಾಡಿಕೊಡುವುದು ಅಷ್ಟೇ' ಎಂದು ಉತ್ತರಿಸಿದ್ದರಿಂದ ಸಾವಿತ್ರಮ್ಮನವರು ನಿರಾಳವಾದರು.

ರಘುನಾಥರಾಯರಿಂದ ಮಗ ಮದುವೆಯಾಗಲು ಸಮ್ಮತಿಸಿದ್ದಾನೆಂಬ ವಿಷಯ ಕೇಳಿ ಸೋಮಶೇಖರರಾಯರು ಮತ್ತು ಅವರ ಹೆಂಡತಿಗೆ ಆದ ಸಂತಸ ಅಷ್ಟಿಷ್ಟಲ್ಲ. ಅವರು ತಮ್ಮ ಸೋದರಳಿಯನಿಗೆ 'ತುಂಬಾ ಥ್ಯಾಂಕ್ಸ್ ಕಣಪ್ಪಾ' ಎಂದು ಹೇಳಿದರು. "ನೀವು ದೊಡ್ಡವರು. ನನಗೆ ಥ್ಯಾಂಕ್ಸ್ ಹೇಳೋ ಅಗತ್ಯವೇ ಇಲ್ಲ. ಮೊದಲಿಗೆ ರಂಗಣ್ಣ ಮತ್ತು ವಸುಂಧರಾ ಪರಸ್ಪರ ಭೇಟಿ ಮಾಡಿ ಮಾತಾಡಿಕೊಳ್ಳಲಿ' ಆಮೇಲೆ ಮುಂದಿನ ಮಾತು. ಈಗಲೇ ಇನ್ನೂ ಏನೂ ಹೇಳಲಾಗುವುದಿಲ್ಲ ಎಂದರು.

ಒಂದು ದಿನ ಅನೌಪಚಾರಿಕವಾಗಿ ತಮ್ಮ ಮನೆಯಲ್ಲೇ ವಸುಂಧರಾ ಮತ್ತು ರಂಗನಾಥ ಪರಸ್ಪರ ಭೇಟಿಯಾಗಲು ಏರ್ಪಾಟು ಮಾಡಿದರು. ರಂಗನಾಥನ ಜೊತೆ ಅವರ ಅಪ್ಪ ಮತ್ತು ಅಮ್ಮ ಮಾತ್ರ ಬಂದಿದ್ದರು. ವಸುಂಧರಾ ತನ್ನ ತಾಯಿಯನ್ನು ಕರೆತಂದಿದ್ದಳು. ವಧು ಮತ್ತು ವರ ಇಬ್ಬರೂ ಸ್ವಲ್ಪ ಸಮಯ ವೈಯಕ್ತಿಕವಾಗಿ ಮಾತಾಡಿಕೊಂಡರು. ರಂಗನಾಥ್ ತಲೆ ಎತ್ತದೆಯೆ– "ನಾನು ತುಂಬಾ ಸಂಕೋಚದ ಮನುಷ್ಯ. ನಿಮ್ಮ ಪೂರ್ಣ ಸಹಕಾರದಿಂದ ಮಾತ್ರ ನಾನು ಸಂಸಾರದಲ್ಲಿ ನೆಲೆಗೊಳ್ಳಲು ಸಾಧ್ಯ. ಮದುವೆಯೇ ಬೇಡವೆಂದಿದ್ದವನು ಕೊನೆಗೂ ಹಿತೈಷಿಗಳ ಪ್ರೀತಿಯ ಒತ್ತಾಯ ಮತ್ತು ಹೃದಯದ ಭಾವನೆಗಳನ್ನು ಹಂಚಿಕೊಳ್ಳಲು ಆತ್ಮೀಯರೊಬ್ಬರಿದ್ದರೆ ಸರಿಯಾದೀತೆಂದು ಯೋಚಿಸಿ ಒಪ್ಪಿದೆ. ಗಂಡ ಎನ್ನುವುದಕ್ಕಿಂತ ನಿಮ್ಮ ಒಬ್ಬ ಆತ್ಮೀಯ ಸ್ನೇಹಿತ ಎಂದು ನನ್ನನ್ನು ನೀವು ತಿಳಿದರೆ ಸಾಕು. ನಿಮ್ಮನ್ನು ನಾನು ಬಹುವಚನದಲ್ಲೇ

ಮಾತಾಡಿಸುತ್ತೇನೆ. ನಿಮ್ಮ ಒಪ್ಪಿಗೆಯೇ ನನಗೆ ಬಹಳ ಮುಖ್ಯವಾದ್ದು. ಯಾರದೇ ಒತ್ತಾಯಕ್ಕೆ ಮಣಿಯದೆ ನೀವು ನಿಮ್ಮ ಅಭಿಪ್ರಾಯವನ್ನು ನಿಧಾನವಾಗಿ ಯೋಚನೆ ಮಾಡಿ ತಿಳಿಸಿ. ಇಷ್ಟು ವರ್ಷವೇ ಆಗಿದೆಯಂತೆ. ಈಗೇನೂ ಅವಸರವಿಲ್ಲ" ಎಂದನು. ಅದಕ್ಕೆ ವಸುಂಧರಾ "ಏನೋ ಕಾರಣಕ್ಕೆ ನನಗೂ ಮನಸ್ಸಿಗೆ ಬೇಸರವಾಗಿ ಮದುವೆ ಮುಂದೆ ಹಾಕುತ್ತ ಬಂದಿದ್ದೆ. ಆದರೆ ಹಾಗೆ ಮುಂದೆ ಹಾಕುತ್ತ ಹೋಗುವುದರಲ್ಲಿ ಅರ್ಥವಿಲ್ಲವೆನಿಸಿ ನಾನು ತುಂಬ ಗೌರವಿಸುವ ರಘುನಾಥರಾಯರ ಕಡೆಯಿಂದ ಈ ವಿಷಯದ ಪ್ರಸ್ತಾಪ ಬಂದಿರುವ ಕಾರಣ ನಾನೂ ಇದಕ್ಕೆ ಮನಸ್ಸು ಮಾಡಿದೆ. ನಿಮ್ಮ ಭಾವನೆಗಳನ್ನು ನಾನು ಗೌರವಿಸುತ್ತೇನೆ. ನನ್ನ ಭಾವನೆಗಳನ್ನೂ ನೀವು ಗೌರವಿಸಬೇಕೆಂಬುದೇ ನನ್ನ ಆಸೆ" ಎಂದಳು. "ಖಂಡಿತಾ." ಎಂದನು.

ಅವರಿಬ್ಬರ ನಡುವಿನ ಮಾತುಕತೆ ಮುಗಿದ ಮೇಲೆ ಇಬ್ಬರೂ ಪರಸ್ಪರ ಒಪ್ಪಿಗೆ ಇದೆ ಎಂದು ಹೇಳಿದರು. ಎಲ್ಲರಿಗೂ ತುಂಬಾ ಸಂತೋಷವಾಯಿತು. ಮದುವೆ ಮಾತ್ರ ಅತ್ಯಂತ ಮಿತ ಪರಿವಾರದವರ ಸಮ್ಮುಖದಲ್ಲಿ ತುಂಬ ಸರಳವಾಗಿ ಕನಿಷ್ಠ ವಿಧಿಗಳೊಂದಿಗೆ ಆಗಬೇಕೆಂದು ಅವರಿಬ್ಬರೂ ಹೇಳಿದರು. ವಸುಂಧರಾಳ ಮನಸ್ಸಿನಲ್ಲಿ ಆರ್ಯ ಸಮಾಜದ ವಿಧಿ ವಿಧಾನದ ಪ್ರಕಾರ ನಡೆದ ಭಾರತಿಯ ಮದುವೆಯೇ ಇತ್ತು.

ವಸುಂಧರಾ ತನ್ನ ಪ್ರಿಯ ಗೆಳತಿ ಹೇಮಾಳನ್ನು ಭೇಟಿ ಮಾಡಿ ತನ್ನ ಮದುವೆಯ ವಿಷಯ ಹೇಳಲೆಂದು ಒಂದು ಭಾನುವಾರ ಬೆಳಿಗ್ಗೆ ಹತ್ತು ಗಂಟೆಯ ಸುಮಾರಿಗೇ ಅವಳ ಮನೆಗೆ ಬಂದಳು. ಹೇಮಾಗೆ ವಸುಂಧರಾ ಬಂದದ್ದು ಆಶ್ಚರ್ಯವಾಯಿತು. ವಿಷಯ ತಿಳಿದು ಅತ್ಯಂತ ಹರ್ಷಪಟ್ಟಳು. ಈಚೆಗೆ ವಸುಂಧರಾಳ ಮುಖದ ಮೇಲಿನ ನಗುವಿನ ಜಾಗವನ್ನು ಗಾಂಭೀರ್ಯ ಆಕ್ರಮಿಸಿತ್ತು. "ಅಂತೂ ಇಷ್ಟು ದಿನ ಕಾದದ್ದಕ್ಕೂ ಒಳ್ಳೆ ಎಂ.ಡಿ. ಪೋಸ್ಟ್‌ನಲ್ಲಿರುವವರೇ ಸಿಕ್ಕಿದರಲ್ಲ ಬಿಡು. ಅದೃಷ್ಟಹೀನೆ ಅಂತ ಕೊರಗುತ್ತಾ ಇದ್ದೆಯಲ್ಲಮ್ಮ ಈಗೇನು ಹೇಳ್ತಿ?" ಎಂದು ಗೆಳತಿಯ ಕೈಕುಲುಕಿದಳು. ವಸುಂಧರಾ ಏನೂ ಪ್ರತಿ ಹೇಳಲಿಲ್ಲ. 'ಅಯ್ಯೋ ಗೂಬೆ ಒಂದು ಸಲ ನಗೇ' ಎಂದು ಅವಳನ್ನು ತಿವಿದಳು. 'ಗೂಬೆ ಎಲ್ಲಾದರೂ ನಗುತ್ತೇನೆ' ಎಂದು ಹೇಳುತ್ತಲೇ ವಸುಂಧರಾ ನಕ್ಕಳು. ಅವಳ ಮಾತಿಗೆ ಹೇಮಾ ಕೂಡ ನಕ್ಕಳು. ಅವಳ ತಂದೆ ತಾಯಿಯರೂ "ಈಗಲಾದರೂ ಮದುವೆಗೆ ಒಪ್ಪಿದೆಯಲ್ಲಮ್ಮ ಅದೇ ಸಂತೋಷದ ವಿಷಯ" ಎಂದು ಹರ್ಷಪಟ್ಟರು. "ಇನ್ನು ನಮ್ಮ ಹೇಮಾಳ ಬದುಕು ಯಾವತ್ತು ಸರಿಹೋಗುತ್ತೋ ಆ ದೇವರಿಗೇ ಗೊತ್ತು" ಎಂದು ಸಣ್ಣಗೆ ಸುಯ್ದರು. "ಎಲ್ಲವುದಕ್ಕೂ ಕಾಲ ಬರಬೇಕಲ್ಲವಾ ಆಂಟಿ" ಎಂದು ವಸುಂಧರಾ ಹೇಳಿದಾಗ 'ನೀನು ಹೇಳೋದೂ ನಿಜವೇ' ಅಲ್ಲಿಯ ವರೆಗೂ ಕಾಯೋದಷ್ಟೇ ನಮ್ಮ ಕೆಲಸ ಎಂದರು.

ಮದುವೆ ಗೊತ್ತಾದ ಮೇಲೆ ತಡಮಾಡುವುದು ಬೇಡವೆಂದು ಎರಡೂ ಕಡೆಯವರು ತೀರ್ಮಾನಿಸಿದರು. ಸಂಪ್ರದಾಯದ ಪ್ರಕಾರ ಹೆಣ್ಣಿನ ಊರಿನಲ್ಲಿ ಹೆಣ್ಣಿನ ಮನೆಯವರೇ ಮದುವೆಯ ವ್ಯವಸ್ಥೆ ಮಾಡಿ ಮದುವೆ ಮಾಡಿಕೊಡಬೇಕು. ಆದರೆ

ಏಕೋ ವಸುಂಧರಾಗೆ ಮದುವೆಯ ಸಲುವಾಗಿ ತುಮಕೂರಿಗೆ ಹೋಗುವುದು ಬೇಡವೆನಿಸಿತು. ಅದನ್ನು ತಂದೆಗೂ ತಿಳಿಸಿದಳು. ಕೊನೆಗೆ ಚಿಕ್ಕಮಗಳೂರಿನಲ್ಲೇ ಮದುವೆಯ ಸಮಾರಂಭ ನಡೆಯುವುದೆಂದು ಗೊತ್ತಾಯಿತು. ಮದುವೆಗೆ ಬರುವ ಶ್ರಾವಣದ ಕೊನೆಯ ಭಾನುವಾರ ಒಂದು ಒಳ್ಳೆಯ ಮುಹೂರ್ತವಿದೆಯೆಂದು ನರಸಿಂಹ ಜೋಯಿಸರೇ ಹೆಂಡತಿಗೆ ತಿಳಿಸಿದರು. ಮದುವೆಗೆ ಮುನ್ನ ಗಂಡಿನ ಕಡೆಯವರನ್ನು ಮತ್ತು ಅಳಿಯನಾಗುವವನನ್ನು ಭೇಟಿ ಮಾಡುವುದು ಉಚಿತವೆಂದು ತಿಳಿದು ಅವರು ಮೂರು ವಾರ ಮುಂಚೆಯೇ ಬಂದೂ ಬಿಟ್ಟರು. ಆಮೇಲೆ ವಸುಂಧರಾಳ ವಿಭಾಗದ ಮುಖ್ಯಸ್ಥರಾದ ರಘುನಾಥರಾಯರ ಜೊತೆ ಚಿಕ್ಕಮಗಳೂರಿಗೆ ಹೋಗಿ ಭಾವಿ ಬೀಗರನ್ನೂ ಅಳಿಯನನ್ನೂ ಮಾತಾಡಿಸಿಕೊಂಡು ಬಂದರು. ಜೋಯಿಸರು ಸೂಚಿಸಿದ ಮುಹೂರ್ತಕ್ಕೆ ಅವರುಗಳೂ ಒಪ್ಪಿದರು. ನೀವು ಹೆಣ್ಣಿನ ಕಡೆಯವರು, ಮದುವೆ ಮಾಡಿಕೊಡಬೇಕಾದವರು, ನಾವು ಗಂಡಿನ ಕಡೆಯವರು ಎಂಬಂಥ ಭಾವನೆಗಳಿಗೆಲ್ಲಾ ಇಲ್ಲಿ ಅವಕಾಶವಿಲ್ಲ. ನಾವೆಲ್ಲರೂ ಸೇರಿ ಮಾಡುತ್ತಿರುವ ಮದುವೆ ಇದು ಎಂದು ಸೋಮಶೇಖರರಾಯರು ಹೇಳಿದ್ದರಿಂದ ನರಸಿಂಹಜೋಯಿಸರಿಗೆ ಇದ್ದ ಸಂಕೋಚ ದೂರವಾಯಿತು.

ಮುಂದಿನ ನಾಲ್ಕೈದು ದಿನಗಳಲ್ಲಿ ಸರಳ ರೀತಿಯ ಆಹ್ವಾನ ಪತ್ರಿಕೆಯೂ ಸಿದ್ಧವಾಯಿತು. ಮದುವೆಗೆ ಹೆಚ್ಚು ಜನರನ್ನು ಕರೆಯುವುದು ಬೇಡವೆಂದುಕೊಂಡರೂ ತುಂಬಾ ಹತ್ತಿರದ ನೆಂಟರು, ಹಿತೈಷಿಗಳು ಮತ್ತು ಸ್ನೇಹಿತರನ್ನಾದರೂ ಕರೆಯಬೇಕಾಗುತ್ತದೆಂದುಕೊಂಡು ವಸುಂಧರಾ ಮತ್ತು ಅವರ ಅಮ್ಮ ಕುಳಿತು ಒಂದು ಪಟ್ಟಿ ತಯಾರಿಸಿದರು. ವಸುಂಧರಾಳ ಹತ್ತಿರದ ಬಂಧುಗಳಿಗೆ ಆಹ್ವಾನ ಪತ್ರಿಕೆ ಕಳಿಸಿ ಕರೆಯುವ ಕೆಲಸಕ್ಕೆ ಜೋಯಿಸರು ತೊಡಗಿಸಿಕೊಂಡರು. ವಸುಂಧರಾ ಬೆಂಗಳೂರಿನ ತನ್ನ ಪಿ.ಜಿ. ಯ ಗೆಳತಿಯರಾದ ಭಾರತಿ ಮತ್ತು ವಿದ್ಯಾರನ್ನು ಮಾತ್ರ ಆಹ್ವಾನಿಸುವುದೆಂದುಕೊಂಡಳು. ಅದರಂತೆ ಆಹ್ವಾನ ಪತ್ರಿಕೆ ಕಳಿಸಿ ತಪ್ಪದೆ ಬರಬೇಕೆಂದು ಪತ್ರ ಬರೆದಳು. ವಿದ್ಯಾ ಕೂಡಲೇ ಪತ್ರ ಬರೆದು ತನ್ನ ಅಪಾರ ಸಂತಸ ವ್ಯಕ್ತಪಡಿಸಿದಳು. ಒಂದು ದಿನ ಹೇಮಾಳನ್ನೂ ಕರೆದುಕೊಂಡು ಹಾಸನಕ್ಕೆ ಹೋಗಿ ಮಮತಾ ಮೇಡಮ್ ಅವರನ್ನು ಭೇಟಿಮಾಡಿ ಆಹ್ವಾನ ಪತ್ರಿಕೆ ನೀಡಿಬಂದಳು. ಅವರು ಖಂಡಿತಾ ಬರುವುದಾಗಿ ಹೇಳಿದರು.

ಇತ್ತ ಗಂಡಿನ ಕಡೆಯಲ್ಲೂ ಅದೇ ರೀತಿಯ ಕೆಲಸ ಕಾರ್ಯಗಳು ಶುರುವಾದುವು. ತಾವು ಗೊತ್ತು ಮಾಡಿದ ಸಂಬಂಧ ಎನ್ನುವ ಕಾರಣಕ್ಕೆ ರಘುನಾಥರಾಯರು ಹೆಚ್ಚಿನ ಮುತುವರ್ಜಿಯಿಂದ ಮದುವೆಯ ಕೆಲಸಗಳಲ್ಲಿ ತೊಡಗಿಸಿಕೊಂಡರು. ಎಲ್ಲ ಸಿದ್ಧತೆಗಳೂ ಮುಗಿದು ಮದುವೆಗೆ ಇನ್ನು ಹತ್ತು ದಿನ ಇದೆ ಎನ್ನುವಾಗ ರಂಗನಾಥ್ ನಾಡಿದ್ದು ತನಗೆ ಬೆಂಗಳೂರಿನಲ್ಲಿ ಕಾಫಿ ಬೋರ್ಡಿನಲ್ಲಿ ಒಂದು ಮೀಟಿಂಗ್‌ಗೆ ಹೋಗುವುದಿದೆ. ಗುರುತಿನವರು, ಸ್ನೇಹಿತರು ಎಲ್ಲ ಬಂದಿರುತ್ತಾರೆ. ಜೊತೆಗೆ ಅಲ್ಲಿ ಇರುವ ಕೆಲವು ಹತ್ತಿರದ ಬಂಧುಗಳನ್ನು ಭೇಟಿಮಾಡಿ ಒಂದು ದಿನ ಅಲ್ಲಿಯೇ ಇದ್ದು ಸ್ನೇಹಿತರಿಗೆ

ಆಹ್ವಾನ ಪತ್ರಿಕೆ ಕೊಟ್ಟು ಕರೆದು ಬರುತ್ತೇನೆ ಎಂದು ಹೇಳಿದ. ಹಾಗೆ ಕಾಫಿ ಬೋರ್ಡಿನ ಮೀಟಿಂಗು ಕಂಪನಿ ಸೆಕ್ರೆಟರಿಗಳ ಮೀಟಿಂಗ್ ಎಂದು ವರ್ಷಕ್ಕೆ ಆರೇಳು ಮಿಟಿಂಗುಗಳಿಗೆ ಅವನು ಹೋಗುವುದು ಪ್ರತಿವರ್ಷ ಇದ್ದೇ ಇರುತ್ತಿತ್ತು. ಆಗಬಹುದು ಎಂದು ಅವರ ಮನೆಯವರು ಹೇಳಿದರು. ಅವನಿಗೊಬ್ಬ ಡ್ರೈವರ್ ಇದ್ದೇ ಇದ್ದ. ಅಪರೂಪಕ್ಕೊಮ್ಮೆ ರಂಗನಾಥನೇ ಕಾರು ಡ್ರೈವ್ ಮಾಡಿಕೊಂಡು ಹೋಗುತ್ತಿದ್ದುದೂ ಉಂಟು.

ಈ ಸಲ ಡ್ರೈವರನನ್ನು ಕರೆದುಕೊಂಡು ಹೋಗಲಿಲ್ಲ. ಅದಕ್ಕೆ ಕಾರಣ ಬಂಧುಗಳ ಮನೆಗಳಿಗೆ ಹೋಗಬೇಕಾಗಿದ್ದದ್ದು. ಬೆಂಗಳೂರು ಹೆಚ್ಚು ಪರಿಚಯವಿಲ್ಲದ ಈ ಡ್ರೈವರ್ ಬದಲು ಬೆಂಗಳೂರಿನಲ್ಲಿರುವ ಚೆನ್ನಾಗಿ ಕಾರು ಓಡಿಸುವ ಅನುಭವ ಇರುವ ತನ್ನ ಆತ್ಮೀಯ ಬಂಧುವೊಬ್ಬರನ್ನು ಫೋನ್ ಮಾಡಿ ಕರೆಸಿಕೊಂಡು ಅವರನ್ನು ಜೊತೆಯಲ್ಲಿ ಕರೆದುಕೊಂಡುಹೋಗುವುದೇ ಸರಿ ಎಂದು ಕೊಂಡಿದ್ದು. ಮೀಟಿಂಗ್ ಇದ್ದದ್ದು ಶನಿವಾರ. ಶುಕ್ರವಾರ ಬೆಳಿಗ್ಗೆ ಬೇಗನೆ ಎದ್ದು ಐದೂವರೆಯ ಹೊತ್ತಿಗೆಲ್ಲಾ ಸಿದ್ಧವಾಗಿ ಬೆಂಗಳೂರು ಕಡೆಗೆ ಹೊರಟೇಬಿಟ್ಟ. ಬೆಳಗಿನ ಪ್ರಯಾಣ ಹೆಚ್ಚು ಟ್ರಾಫಿಕ್ ಇರುವುದಿಲ್ಲ. ಜೊತೆಗೆ ಆಹ್ಲಾದಕರವಾಗಿರುತ್ತದೆ ಎಂಬುದು ಲೆಕ್ಕಾಚಾರ. ಹನ್ನೊಂದು ಹನ್ನೊಂದೂವರೆಯ ಹೊತ್ತಿಗೆ ಹೋಗಿ ಹೋಟೆಲ್‌ನಲ್ಲಿ ಉಳಿದುಕೊಂಡು ಊಟದ ನಂತರ ಅಲ್ಲಿಗೆ ಬರಲು ಹೇಳಿರುವ ತನ್ನ ಬಂಧುವನ್ನು ಕರೆದುಕೊಂಡು ಅವರನ್ನು ಡ್ರೈವ್ ಮಾಡಲು ಬಿಟ್ಟು ಹೋಗಬೇಕಾದ ನಾಲ್ಕೈದು ಮನೆಗಳಿಗೆ ಹೋಗಿ ಆಹ್ವಾನಿಸುವುದು ಉದ್ದೇಶ. ಅದೆಲ್ಲ ರಂಗನಾಥ ಅಂದುಕೊಂಡಿದ್ದಂತೆಯೇ ಆಯಿತು. ಬಂಧುಗಳೆಲ್ಲ ಮದುವೆಯ ವಿಷಯ ತಿಳಿದು ಸಂತಸ ವ್ಯಕ್ತಪಡಿಸಿದರು. "ಅಂತೂ ಗಣೇಶನ ಮದುವೆಯೂ ಆಗುವ ದಿನ ಕೂಡ ಬಂದ ಹಾಗಾಯ್ತು ಎಂದು" ಅವನ ಸೋದರತ್ತೆಯ ಮಗ ಛೇಡಿಸಿದ. "ಅದಕ್ಕೆ ಕಾರಣ ನಿಮ್ಮ ದೊಡ್ಡಮ್ಮನ ಮಗ ರಘುನಾಥನಪ್ಪಾ. ಅವನು ಬಿಡದೆ ನನ್ನ ಬೆನ್ನು ಹತ್ತಿಬಿಟ್ಟನಪ್ಪ" ಎಂದ. ಒಳ್ಳೇದಾಯ್ತು ಬಿಡು. ನಾವೆಲ್ಲಾ ಈ ಗೃಹಸ್ಥಾಶ್ರಮದ ಬಿಲಕ್ಕೆ ಕೈಯಿಟ್ಟು ಚೇಳಿನ ಕೈಯಲ್ಲಿ ಕಡಿಸಿಕೊಂಡಿದ್ದಾಗಿದೆ. ನೀನೊಬ್ಬನೇ ಯಾಕೆ ಹಾಗೇ ಇರಬೇಕು, ನಿನಗೂ ಅದರ ಛಳುಕು ಹತ್ತಲಿ ಅಂತ ಮಾಡಿದ್ದಾನೆ. ರಘು ಫೋನ್ ಮಾಡಿ ಹಾಗೇ ಹೇಳಿದನಯ್ಯಾ. ಒಳ್ಳೇದೇ ಮಾಡಿದ್ದಾನೆ ಬಿಡು. ಮದುವೆ ಆಗದೆ ಇದ್ದರೆ ಜೀವನ ಅಪೂರ್ಣ ಕಣಯ್ಯಾ"" ಅಂದ. ಇಬ್ಬರೂ ನಕ್ಕರು.

ಶನಿವಾರ 11 ಗಂಟೆಗೆ ಶುರುವಾದ ಮೀಟಿಂಗು ಸಾಯಂಕಾಲ ಸುಮಾರು ನಾಲ್ಕೂವರೆಯ ಹೊತ್ತಿಗೆ ಮುಗಿಯಿತು. ಮೀಟಿಂಗ್ ಮುಗಿದ ಮೇಲೆ ರಂಗನಾಥ್ ಒಂದರ್ಧ ಮುಕ್ಕಾಲು ಗಂಟೆ ವಿಶ್ರಾಂತಿ ತೆಗೆದುಕೊಂಡು ಆರು ಗಂಟೆಯ ಸುಮಾರಿಗೆ ಬೆಂಗಳೂರು ಬಿಟ್ಟು ಹೊರಟ. ಅವನ ಸ್ನೇಹಿತರು ಒಂದಿಬ್ಬರು ಈಗ ಮೋಡ ಆಗುತ್ತಿದ್ದ ಹಾಗಿದೆ. ನಾಳೆ ಹೇಗೂ ಭಾನುವಾರ ಬೆಳಿಗ್ಗೆ ಹೊರಡಬಹುದಲ್ಲಾ ಅಂದರು. ಇಲ್ಲ, ಈಗ ಹೊರಟರೂ ಹನ್ನೊಂದು ಹನ್ನೊಂದೂ ವರೆಯ ಹೊತ್ತಿಗೆಲ್ಲಾ ಊರು ಸೇರಿಕೊಳ್ಳಬಹುದು. ನಾಳೆ ಇಡೀ ದಿನ ರೆಸ್ಟ್ ತೆಗೆದುಕೊಂಡು ಸಾಯಂಕಾಲ ಅಲ್ಲೇ ಒಂದು ಮೂರು ಮನೆಗೆ ಇನ್ವಿಟೇಷನ್ ಕೊಡೋದಿದೆ. ಇನ್ನು ಒಂದೇ ವಾರ

ಉಳಿದಿದೆ. ಕೊನೇ ಗಳಿಗೇಲಿ ಮರೆತುಹೋದರೆ ಕಷ್ಟ. ಈಗ ಹೊರಡೋದೇ ಸರಿ" ಎಂದು ಅವರಿಗೆಲ್ಲಾ ಬೈ ಹೇಳಿದ.

ಮಧ್ಯೆ ತಿಪಟೂರಿನಲ್ಲಿ ಊಟ ಮುಗಿಸಿಕೊಂಡು ಕಡೂರು ತಲುಪುವ ಹೊತ್ತಿಗೆ ಆಗಲೇ ಹತ್ತು ಗಂಟೆ ದಾಟಿತ್ತು. ಅಲ್ಲಿಯವರೆಗೂ ಮಳೆಯ ಹನಿ ಅಷ್ಟೇನೂ ಜೋರಿರಲಿಲ್ಲ. ಆದರೆ ಕಡೂರಿನಲ್ಲೇ ಜೋರುಮಳೆ ಪ್ರಾರಂಭವಾಯಿತು. ಇನ್ನೇನು ಹೆಚ್ಚೆಂದರೆ ಒಂದು ಗಂಟೆಯ ಪ್ರಯಾಣ. ಮಳೆ ಇಲ್ಲದೆ ಹೋಗಿದ್ದರೆ ಇನ್ನೂ ಮುಂಚೇನೇ ಹೋಗಿಬಿಡಬಹುದಾಗಿತ್ತು ಎಂದೆಲ್ಲ ಯೋಚಿಸುತ್ತ ಚಿಕ್ಕಮಗಳೂರಿನ ಹಾದಿಯಲ್ಲಿ ಎಚ್ಚರಿಕೆಯಿಂದಲೇ ಮುನ್ನಡೆದ.

* * *

ಸೋಮಶೇಖರ ರಾಯರು ಹೆಣ್ಣಿನ ಕಡೆಯವರಲ್ಲದಿದ್ದರೂ ಇನ್ನೊಂದು ವಾರಕ್ಕೆ ಮದುವೆ ತಮ್ಮ ಊರಿನಲ್ಲೇ ನಡೆಯುತ್ತಿರುವುದರಿಂದ ಅದರ ಸಿದ್ಧತೆಗಳ ಬಗ್ಗೆ ಶನಿವಾರ ದಿನವೆಲ್ಲ ಮನೆಯವರ ಜೊತೆ ಮತ್ತು ಇನ್ನಿತರರ ಜೊತೆ ಮಾತಾಡಿ ರಾತ್ರಿ ಊಟ ಮುಗಿಸಿ ಬೇಗನೇ ಮಲಗಿದರು. ಬೆಳಿಗೆಯಿಂದಲೂ ಮೋಡದ ವಾತಾವರಣವೇ ಇತ್ತು. ಆದರೆ ಒಂಬತ್ತು ಗಂಟೆ ಆಗ್ತಾ ಇದ್ದಹಾಗೆ ಇದ್ದಕ್ಕಿದ್ದ ಹಾಗೆ ದಟ್ಟ ಮೋಡಗಳು ಮಂದೈಸಿ ಕುಂಭದ್ರೋಣ ಮಳೆ ಸುರಿಯತೊಡಗಿತು. ಜೊತೆಯಲ್ಲೇ ಗುಡುಗು ಸಿಡಿಲಿನ ಆರ್ಭಟವೂ ಶುರುವಾಯಿತು. ಶ್ರಾವಣ ಮಾಸ ಅಂದರೇನೆ ಮಳೆಗಾಲ. ವರ್ಷಗಳಿಂದ ಅದನ್ನು ನೋಡಿಕೊಂಡೇ ಬಂದಿದ್ದ ರಾಯರಿಗೂ ಅವತ್ತಿನದು ಭಾರಿ ಮಳೆ ಅನ್ನಿಸಿಬಿಟ್ಟಿತು. ಮಗ ಬೇರೆ ತಾನೇ ಡ್ರೈವ್ ಮಾಡಿಕೊಂಡು ಬರುತ್ತಾ ಇದ್ದಾನೆ ಅಂತ ಒಂದು ಕ್ಷಣ ಆತಂಕವಾದರೂ ಇದೇನು ಅವನಿಗೆ ಹೊಸದಲ್ಲವಲ್ಲ ಅಂದುಕೊಂಡು ನಿದ್ರೆಗೆ ಜಾರಿದರು.

ಇದ್ದಕ್ಕಿದ್ದ ಹಾಗೆ ಒಂದು ಹೊತ್ತಿನಲ್ಲಿ ಫೋನ್ ಟ್ರಿಣ್ ಗುಟ್ಟತೊಡಗಿತು. ಗಾಢ ನಿದ್ರೆಯಲ್ಲಿದ್ದ ಸೋಮಶೇಖರ ರಾಯರು ಇದೇನು ಇಷ್ಟು ಹೊತ್ತಿನಲ್ಲಿ ಫೋನು ಅಂತ ಗೋಡೆ ಗಡಿಯಾರದ ಕಡೆಗೊಮ್ಮೆ ಕಣ್ಣು ಹಾಯಿಸಿದರು. ಆಗಲೇ 12 ಗಂಟೆ. ಯಾರಪ್ಪಾ ಈಗ ಫೋನು ಮಾಡುತ್ತಿರೋರು ಎಂದು ಆತಂಕದಲ್ಲೇ ಫೋನ್ ತೆಗೆದುಕೊಂಡರು. ಆ ಕಡೆಯಿಂದ "ಇದು ಕಾಫಿ ಕ್ಯೂರಿಂಗ್ ವರ್ಕ್ಸ್ ಎಂ.ಡಿ. ರಂಗನಾಥ್ ಅವರ ಮನೇನಾ?" ಎಂದು ಯಾರೋ ಕೇಳಿದರು. "ಹೌದು ನೀವು ಯಾರು?" "ಸರ್. ಇದು ಚಿಕ್ಕಮಗಳೂರು ಟೌನ್ ಪೋಲಿಸ್ ಸ್ಟೇಷನ್ ನಿಂದ. ವೆರಿ ವೆರಿ ಸಾರಿ ಸರ್. ಎಂಡಿ ಅವರ ಕಾರಿಗೆ ಆಕ್ಸಿಡೆಂಟ್ ಆಗಿದೆ ಸರ್. ಹಿರೇಗೌಜ ದಾಟಿ ಎಂ.ಡಿ. ಅವರ ಕಾರು ಸ್ವಲ್ಪ ಮುಂದೆ ಬಂದಿದ್ದಾಗ ಹಿಂದಿನಿಂದ ಬಹಳ ವೇಗವಾಗಿ ಬರುತ್ತಿದ್ದ ಲಾರಿಯೊಂದು ಬ್ರೇಕ್ ಫೇಯಿಲ್ ಆಗಿ ಎಂ.ಡಿ. ಅವರ ಕಾರಿಗೆ ಗುದ್ದಿದ್ದರಿಂದ ಕಾರು ಆಳ ಕಂದರಕ್ಕೆ ಬಿದ್ದು ಪಲ್ಟಿಹೊಡೆದು ಎಂ.ಡಿ. ಅವರಿಗೆ ಹೆಡ್ ಇಂಜುರಿ ಆಗಿ ತುಂಬ ಸೀರಿಯಸ್ ಆಗಿದೆ ಸರ್. ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯ ಕ್ಯಾಷುಯಲ್ಟಿ ವಿಭಾಗದಲ್ಲಿ ಡಾಕ್ಟರುಗಳು

ನೋಡ್ತಾ ಇದ್ದಾರೆ ಸರ್." ಎಂದು ಹೇಳಿ ಫೋನ್ ಕಟ್ ಮಾಡಿದರು.

ಸೋಮಶೇಖರ ರಾಯರಿಗೆ ಎದೆ ಒಡೆದುಹೋಯಿತು. ಇದೇನಪ್ಪಾ ಭಗವಂತಾ ಅಂತ ಗಾಬರಿಯಿಂದ ಹೆಂಡತಿ ಮತ್ತು ಮಗಳನ್ನು ಎಬ್ಬಿಸಿದರು. ಯಾರ ಬಾಯಿಂದಲೂ ಮಾತೇ ಇಲ್ಲ. ಏನಾಗಿದೆಯೋ ಏನೋ, ಯಾವ ಪರಿಸ್ಥಿತೀಲಿ ಇದ್ದಾನೋ ಮಗ ಎಂದು ದಿಕ್ಕೇ ತೋಚದಂತಾಗಿಬಿಟ್ಟರು. ಮನೆಯಲ್ಲಿ ಗಂಡ ಹೆಂಡತಿ ಬಿಟ್ಟರೆ ಮಗಳು ಜ್ಯೋತಿಯೇ ಹುಡುಗಿ. ಅಪ್ಪ ಅಮ್ಮ ಮಾತನಾಡುವ ಪರಿಸ್ಥಿತಿಯಲ್ಲಿ ಇಲ್ಲದ್ದನ್ನು ನೋಡಿದ ಜ್ಯೋತಿ ತಮ್ಮ ನೆರೆಮನೆಯವರನ್ನು ಎಬ್ಬಿಸಿದಳು. ಅವರೂ ಗಾಬರಿಗೊಂಡು ಒಂದು ಹತ್ತು ನಿಮಿಷದಲ್ಲಿ ಬರುತ್ತೀನಿ ಅಂತ ಹೇಳಿ ಮುಂದಿನ ಬೀದಿಯಲ್ಲಿದ್ದ ಟ್ಯಾಕ್ಸಿಯವನನ್ನು ಎಬ್ಬಿಸಿ ಟ್ಯಾಕ್ಸಿ ಸಮೇತ ಕರೆದುಕೊಂಡುಬಂದರು. ಎಲ್ಲರೂ ಆಸ್ಪತ್ರೆ ಕಡೆ ಧಾವಿಸಿದರು.

ಇವರನ್ನು ನೋಡಿದ ಕೂಡಲೇ ಪರಿಚಯವಿದ್ದ ಡಾಕ್ಟರ್ ಅವರು ರಾಯರ ಭುಜಗಳನ್ನು ಹಿಡಿದುಕೊಂಡು ಕೂಡಿಸಿ ಸೋಮಶೇಖರರಾಯರೇ "ಐ ಆಮ್ ವೆರಿ ಸಾರಿ. ಬ್ರೈನ್‌ಗೆ ಭಾರೀ ಏಟು ಬಿದ್ದುಬಿಟ್ಟಿತ್ತು. ಒಳಗಡೆಯೇ ಬ್ಲೀಡಿಂಗ್ ಆಗಿ ಹೆಮರೇಜ್ ಆಗಿದೆ. ನಾವು ಏನೂ ಮಾಡೋ ಪರಿಸ್ಥಿತಿಯಲ್ಲಿ ಇರಲಿಲ್ಲ. ಇಲ್ಲಿಯ ತನಕ ಬರೋವರೆಗೂ ಹೇಗೋ ಹಿಡಿದಿದ್ದ ಕುಟುಕು ಜೀವ, ಒಳಕ್ಕೆ ಕರೆದುಕೊಂಡು ಹೋಗಿ ಶರೀರವನ್ನು ಬೆಡ್ ಮೇಲೆ ಮಲಗಿಸುತ್ತಿದ್ದ ಹಾಗೇ ಹೋಗಿಬಿಟ್ಟಿತು. ವಿ ಆರ್ ಆಲ್ ಹೆಲ್ಪ್ ಲೆಸ್. ಹಿಸ್ ವಿಲ್ ಪ್ರಿವೆಯ್ಲ್ಡ್" ಎಂದು ಮೇಲಕ್ಕೆ ಕೈ ತೋರಿಸಿದರು. ಶರೀರದ ಮೇಲೆ ಬೇರೆ ಯಾವುದೊಂದು ಕಡೆಯೂ ಏನೊಂದು ಚೂರೂ ಗಾಯವಾಗಿಲ್ಲ." ಎಂದು ತಲೆ ಕೆಳಗೆ ಹಾಕಿದರು.

ನಡೆಸಬೇಕಾದ ವಿಧಿಗಳನ್ನೆಲ್ಲ ನಡೆಸಿ ಪಾರ್ಥಿವ ಶರೀರವನ್ನು ಬೆಳಿಗ್ಗೆ ಬಂಧುಗಳಿಗೆ ಹಸ್ತಾಂತರ ಮಾಡಿದರು. ಅಷ್ಟು ಹೊತ್ತಿಗಾಗಲೇ ಅಕ್ಕ ಪಕ್ಕದವರಿಗೆಲ್ಲ ಸುದ್ದಿ ಹಬ್ಬಿ ಮನೆಯ ಮುಂದೆ ಜನ ಕಿಕ್ಕಿರಿದು ನೆರೆದುಬಿಟ್ಟಿದ್ದರು. ಕಾಫಿ ಕ್ಯೂರಿಂಗ್ ವರ್ಕ್ಸ್‌ನ ಸಿಬ್ಬಂದಿಯೆಲ್ಲಾ ಕಣ್ಣೀರಿಡುತ್ತ ಓಡೋಡಿ ಬಂದು ಹೂವಿನ ಹಾರಗಳನ್ನು ಶವದ ಮೇಲಿಟ್ಟು ಮೌನವಾಗಿ ಸುತ್ತುಗಟ್ಟಿ ನಿಂತುಬಿಟ್ಟರು. ಇಡೀ ಮನೆಯಲ್ಲಷ್ಟೇ ಅಷ್ಟೇ ಅಲ್ಲ ಬೀದಿಯಲ್ಲಿ ಶೋಕ ಮಡುಗಟ್ಟಿತು. ಸುದ್ದಿ ತಿಳಿದ ರಘುನಾಥರಾಯರು ಧಾವಿಸಿ ಬಂದು ಸೋದರ ಮಾವನನ್ನು ತಬ್ಬಿಕೊಂಡು ಗಳಗಳನೆ ಕಣ್ಣೀರು ಸುರಿಸತೊಡಗಿದರು. ಇನ್ನೊಂದು ವಾರಕ್ಕೆ ಮದುವೆ ಮಂಟಪದಲ್ಲಿರಬೇಕಾದ ರಂಗಣ್ಣ ಮಸಣದ ಹಾದಿ ಹಿಡಿಯುವಂತಾಯಿತೆ ಎಂದು ಮಮ್ಮಲ ಮರುಗಿದರು. ಅವರ ಜೊತೆಯೇ ಬಂದಿದ್ದ ಜೋಯಿಸರು ಮಾತೇ ಆಡದೆ ಮೌನವಾಗಿ ತಲೆತಗ್ಗಿಸಿ ನಿಂತುಬಿಟ್ಟರು.

* * *

ಬಹಳ ಕಷ್ಟದಿಂದ ನೆಲ ಬಿಟ್ಟು ಕಿಂಚಿತ್ ತಲೆ ಮೇಲೆತ್ತಿ ಆಗ ತಾನೆ ಸುಳಿಯುತ್ತಿದ್ದ

ಸುಳಿಗಾಳಿಗೆ ಅತ್ತಿತ್ತ ಒಲೆದಾಡುತ್ತಿದ್ದ ಎಳೆಯ ಸಸಿ ಇದ್ದಕ್ಕಿದ್ದಂತೆ ಮೇಲಿನಿಂದ ಕೆಡೆದ ಇಟ್ಟಿಗೆಯ ಆಘಾತಕ್ಕೆ ಕುಸಿದು ಧರಾಶಾಯಿಯಾದಂತಾಗಿಬಿಟ್ಟಿತ್ತು ವಸುಂಧರಾಳ ಬದುಕು. ಸೂರ್ಯನ ಎಳೆಬಿಸಿಲಿಗೆ ಅರಳತೊಡಗಿದ್ದ ಕಮಲದ ದಳಗಳು ಇದ್ದಕ್ಕಿದ್ದಂತೆ ಸುರಿಯ ತೊಡಗಿದ ಹಿಮಕ್ಕೆ ಮುದುಡಿಹೋದಂತೆ ವಸುಂಧರಾಳ ನಳನಳಿಸುತ್ತಿದ್ದ ಮುಖ ಬಾಡಿಹೋಯಿತು. ಯಾವುದೂ ಬೇಡವಾಯಿತು. ಯಾರಿಗೂ ಮುಖ ತೋರಿಸಲೂ ಇಷ್ಟವಾಗದೆ ತಾನಾಯಿತು ತನ್ನ ಕೊಠಡಿಯಾಯಿತು ಎಂಬಂತೆ ಒಂದು ವಾರ ಕೊಠಡಿಯನ್ನು ಬಿಟ್ಟು ಕದಲಿರಲಿಲ್ಲ. ಅಪ್ಪ ನರಸಿಂಹ ಜೋಯಿಸರು ಮತ್ತು ತಾಯಿ ಸಾವಿತ್ರಮ್ಮನವರು ವಸುಂಧರಾಳನ್ನು ಎದುರಿಸುವ ಧೈರ್ಯವನ್ನೇ ಕಳೆದುಕೊಂಡವರಂತೆ ಕುಳಿತುಬಿಟ್ಟಿದ್ದರು. ಎರಡು ದಿನಗಳ ನಂತರ ಜೋಯಿಸರು ಹೆಂಡತಿಗೆ ಊರಿಗೆ ಹೋಗುತ್ತೇನೆಂದಷ್ಟೇ ಹೇಳಿ ಹೋಗಿಬಿಟ್ಟರು. ತಾವೂ ಹಾಗೆಯೇ ಇದ್ದುಬಿಟ್ಟರೆ ನಿರಾಶೆಯೇ ಮೂರ್ತಿವೆತ್ತಂತಿರುವ ವಸುಂಧರಾಳನ್ನು ಕೇಳುವವರಾರು ಎಂದು ಸಾವಿತ್ರಮ್ಮನವರು ಸಮಾಧಾನ ತಂದುಕೊಂಡು ಎಲ್ಲವೂ ಈಶ್ವರೇಚ್ಛೆ ನಮ್ಮದೇನಿದೆ ಎಂದು ಧೈರ್ಯ ತಂದುಕೊಂಡು ಮಗಳನ್ನೂ ನಿಧಾನವಾಗಿ ದುಃಖದಿಂದ ಹೊರತರತೊಡಗಿದರು. ಹೇಮಾಳಂತೂ ಆಗ ಎರಡು ದಿನ ವಸುಂಧರಾಳ ಬಳಿಯಿಂದ ಕದಲಲಿಲ್ಲ. "ನೋಡು ವಸೂ, ನನಗಿಂತ ಹೆಚ್ಚು ಸಾಹಿತ್ಯ ಓದಿದ ನಿನಗೆ ನಾನು ಹೇಳಬೇಕಾದ್ದೇ ಇಲ್ಲ. ನಾವು ಓದಿದ ಸಾಹಿತ್ಯ, ಮೇರು ಲೇಖಕರ, ವಿಚಾರವಂತರ ಉನ್ನತ ವಿಚಾರಗಳು ಇಂಥ ಸಮಯದಲ್ಲಿ ನಮಗೆ ಆಸರೆಯಾಗದಿದ್ದರೆ, ನಮ್ಮನ್ನು ಕೈಹಿಡಿದು ಎತ್ತದಿದ್ದರೆ ಬೇರಿನ್ನಾವುದು ತಾನೆ ಆಸರೆಯಾದೀತು, ಎತ್ತೀತು. ಮದುವೆಯಾದ ನಂತರ ಹೀಗಾಗಿದ್ದರೆ ಏನು ಮಾಡಬೇಕಿತ್ತು ಹೇಳು? ಆಗಬೇಕಾಗಿದ್ದ ಭಾರೀ ಅನಾಹುತವೊಂದು ಅದೃಷ್ಟವಶಾತ್ ಹೀಗೆ ತಪ್ಪಿದೆ ಎಂದೇ ನಾವು ಇದನ್ನು ಅರ್ಥೈಸಬೇಕು. ಇಲ್ಲಿಗೆ ಎಲ್ಲವೂ ಮುಗಿದು ಹೋಗಲಿಲ್ಲ. ರಂಗನಾಥರ ಜೊತೆ ನಿನಗೆ ಬಾಳುವ ಋಣವಿರಲಿಲ್ಲ; ಹಾಗೆಯೇ ಅವರಿಗೂ ಆ ಋಣವಿರಲಿಲ್ಲ, ಮತ್ತು ಅವರ ಆಯುಷ್ಯ ಮುಗಿದಿತ್ತು ಎಂದಷ್ಟೇ ಇದಕ್ಕೆ ಅರ್ಥ. ಆಗುವುದೆಲ್ಲಾ ಒಳ್ಳೆಯದಕ್ಕೆ ಎಂದು ತಿಳಿದರೆ ಮಾತ್ರ ನಾವು ಬದುಕಿನ ಪಥದಲ್ಲಿ ಮುಂದುವರಿಯಲು ಸಾಧ್ಯ. ಮದುವೆಯಾಗಿದ್ದರೂ ವಿಧವೆಯ ಹಾಗೆ ಬದುಕಬೇಕಾಗಿ ಬಂದಿರುವ ನನ್ನನ್ನು ನೋಡು." ಹೀಗೆ ಏನೇನೋ ಸಮಾಧಾನದ, ಸಾಂತ್ವನದ ಮಾತುಗಳನ್ನು ಆಡಿ ಅವಳನ್ನು ಸಹಜ ಸ್ಥಿತಿಗೆ ತಂದಿದ್ದಳೆಂದೇ ಹೇಳಬೇಕು.

ಕಾಲ ಯಾವುದಕ್ಕೂ ಕಾಯುವುದಿಲ್ಲ. ವಸುಂಧರಾ ಬೇಲೂರಿಗೆ ಬಂದು ಎರಡು ವರ್ಷ ಮುಗಿದು ಮೂರನೇ ವರ್ಷದ ಪ್ರಾರಂಭದಲ್ಲಿ ಕಾಲೇಜಿನ ಆಡಳಿತ ಮಂಡಳಿ ಕೆಲವು ಹುದ್ದೆಗಳಲ್ಲಿ ಈಗಾಗಲೇ ಎರಡು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಉಪನ್ಯಾಸಕರನ್ನು ಖಾಯಂ ಮಾಡುವ ಪ್ರಕ್ರಿಯೆಯ ಅಂಗವಾಗಿ ಅವರ ಹುದ್ದೆಗಳಿಗೆ ಜಾಹೀರಾತು ನೀಡಿ ಕ್ರಮಬದ್ಧವಾದ ಆಯ್ಕೆ ಪ್ರಕ್ರಿಯೆ ಪ್ರಾರಂಭಿಸಿತು. ಅದರಂತೆ ವಸುಂಧರಾ ಕೂಡ ಅರ್ಜಿ ಸಲ್ಲಿಸಿದ್ದಳು. ಅದಕ್ಕಾಗಿ ಒಂದು ದಿನ ಆ ಎಲ್ಲ ಹುದ್ದೆಗಳಿಗೆ

ಸಂದರ್ಶನ ಏರ್ಪಡಿಸಿತು. ಇಲಾಖೆಯ ನಿಯಮದಂತೆ ನಿರ್ದೇಶಕರ ನಾಮಿನಿ ಆಗಿ ಡಾ. ಮಮತಾ ಅವರು ಮತ್ತು ಕನ್ನಡ ವಿಷಯದ ವಿಷಯ ತಜ್ಞರಾಗಿ ಡಾ. ಸ್ವಾಮಿ ಅವರು ಬಂದಿದ್ದರು. ಕನ್ನಡದ ಜೊತೆಯಲ್ಲೇ ಬೇರೆ ಕೆಲವು ವಿಷಯಗಳ ಸಂದರ್ಶನ ಕೂಡ ಇದ್ದದ್ದರಿಂದ ಆಯಾ ವಿಷಯಗಳ ತಜ್ಞರೂ ಬಂದಿದ್ದರು. ವಸುಂಧರಾಗೆ ಡಾ. ಮಮತಾ ಪಾಠ ಹೇಳಿದ ಅಧ್ಯಾಪಕರು. ಸ್ವಾಮಿ ಅವರು ಮಮತಾ ಅವರ ಮನೆಯಲ್ಲೇ ಬೆಂಗಳೂರಿನಲ್ಲಿ ಬಿ.ಎಡ್. ಓದುತ್ತಿದ್ದಾಗ ಪರಿಚಯವಾಗಿದ್ದವರು. ಅದರಿಂದ ವಸುಂಧರಾಗೆ ತುಂಬ ಸಂತೋಷವಾಗಿತ್ತು. ಆಡಳಿತ ಮಂಡಳಿ, ಪ್ರಿನ್ಸಿಪಾಲರು ಕೂಡ ವಸುಂಧರಾಳ ವಿಷಯಕ್ಕೆ ವಿಶೇಷ ಆಸಕ್ತಿ ವಹಿಸಿದ್ದರಿಂದ ಬಹಳ ಸುಲಭವಾಗಿ ಅವಳ ಆಯ್ಕೆ ಪ್ರಕ್ರಿಯೆ ಮುಗಿದು ಅವಳು ಹುದ್ದೆಯಲ್ಲಿ ಖಾಯಂ ಆಗಿದ್ದಳು. ರಂಗನಾಥರ ಆಕಸ್ಮಿಕ ಸಾವಿನ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿ ವಸುಂಧರಾಳ ಆಗಬೇಕಿದ್ದ ಮದುವೆ ನಿಂತುಹೋದದ್ದು ಮಮತಾ ಅವರಿಗೆ ಹೇಗೂ ಗೊತ್ತೇ ಇತ್ತು. ಆಗ ಹೇಮಾಳ ಮೂಲಕ ತಮ್ಮ ಅಪಾರ ದುಃಖವನ್ನು ಮೇಡಮ್ ತಿಳಿಸಿದ್ದರು. ಸಂದರ್ಶನದ ಸಂದರ್ಭದಲ್ಲಿ ಭೇಟಿ ಮಾಡಿದಾಗಲೂ ಅವಳಿಗೆ ಧೈರ್ಯ ಹೇಳಿ ಯಾವುದೇ ಕಾರಣಕ್ಕೂ ನಿರಾಶೆಗೆ ಎಡೆಕೊಡಬೇಡ. ನೀನೂ ಯಾಕೆ ಪಿಎಚ್.ಡಿ.ಗೆ ತೊಡಗಿಸಿಕೊಳ್ಳಬಾರದು ಅಂತ ಕೇಳಿದಾಗ "ಏನೋ ಮೇಡಮ್ ಈಗಿನ ನನ್ನ ಮನಸ್ಥಿತಿಯಲ್ಲಿ ಸಂಶೋಧನೆಗೆ ತೊಡಗಿಸಿಕೊಳ್ಳಲು ಮನಸ್ಸಿಲ್ಲ. ಅಲ್ಲದೆ ಅಮ್ಮನ ಆರೋಗ್ಯ ಇತ್ತಿತ್ತ ಬಹಳ ಕೆಡುತ್ತಾ ಇದೆ. ಅವರನ್ನು ನೋಡಿಕೊಳ್ಳುವುದೇ ಒಂದು ದೊಡ್ಡ ಸವಾಲಾಗಿದೆ." ಎಂದಳು. "ಅದು ಬೇಡ. ಆದರೆ ಏನಾದರೂ ಲೇಖನ ಬರೆಯೋದೋ ವರ್ಷಕ್ಕೆ ಒಂದೋ ಎರಡೋ ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವುದೋ ಏನಾದರೂ ಮಾಡುತ್ತಾ ಇರು." ಎಂದು ಸಲಹೆ ನೀಡಿದ್ದರು. "ಆಗಲಿ ಮೇಡಮ್" ಎಂದು ಹೇಳಿದ್ದಳು. ಮನೆಗೆ ಬನ್ನಿ ಎಂದು ಕರೆದಾಗ "ಈ ಸಂದರ್ಭದಲ್ಲಿ ಬರುವುದು ಉಚಿತವಾಗಲ್ಲ. ಮತ್ತೆ ಸಿಕ್ಕೋಣ" ಎಂದಿದ್ದರು.

ಮನೆಗೆ ಬಂದ ಮೇಲೆ ಅಮ್ಮ ಮಲಗಿ ನಿದ್ದೆ ಹೋದ ನಂತರ ಅಂದು ಏಕೋ ಪಿ.ಜಿ. ರೂಮ್‌ನ ಗೆಳತಿ ಭಾರತಿಯ ನೆನಪಾಗಿ ಕೊಠಡಿಯಲ್ಲಿ ತನ್ನ ಹಳೆಯ ಸೂಟ್ ಕೇಸ್ ತೆಗೆದು ಭಾರತಿಯ ಮದುವೆಗೆ ಹೋಗಿದ್ದಾಗ ತನ್ನ ನೆನಪಾಗಿರಲೆಂದು ಅವಳು ನೀಡಿದ್ದ ಉಂಗುರ ಹುಡುಕತೊಡಗಿದಳು. ಯಾವಯಾವುದೋ ವಸ್ತುಗಳ ನಡುವೆ 'ಬಿ' ಇಂಗ್ಲಿಷ್ ಅಕ್ಷರವಿದ್ದ ಆ ಉಂಗುರವೇನೋ ಸಿಕ್ಕಿತು. ಅದರ ಜೊತೆಯಲ್ಲೇ ಇನ್ನೊಂದು ಉಂಗುರವೂ ಕಣ್ಣಿಗೆ ಬಿತ್ತು. ಅದು ಇಂಗ್ಲಿಷ್ S ಅಕ್ಷರವಿದ್ದ ಉಂಗುರ. ಶ್ರೀನಿವಾಸನನ್ನು ತಾನು ಕೊನೆಯ ಬಾರಿ ಭೇಟಿಯಾದಾಗ ನೀಡಿದ್ದ ಉಂಗುರ ಅದು. ತಾನು ಖಂಡಿತಾ ನಿನ್ನ ಕೈಬಿಡುವುದಿಲ್ಲವೆಂದು ಹೇಳಿ ತನ್ನ ಬೆರಳಲ್ಲಿದ್ದ ಆ ಉಂಗುರವನ್ನು ಶ್ರೀನಿವಾಸ ಅವಳ ಬೆರಳಿಗೆ ತೊಡಿಸಿದ್ದ. ಆದರೆ ತನ್ನ ಕೈಯಲ್ಲಿ ಮೊದಲೇ ಅಪ್ಪ ಮಾಡಿಸಿಕೊಟ್ಟ ಉಂಗುರವಿದ್ದ ಕಾರಣ ಇನ್ನೊಂದು ಉಂಗುರ ಧರಿಸಿಕೊಂಡರೆ ಕೇಳಿದವರಿಗೆ ಏನೆಂದು ಹೇಳುವುದೆಂದು ಯೋಚಿಸಿ ಅಪ್ಪ ಮಾಡಿಸಿಕೊಟ್ಟಿದ್ದ ಉಂಗುರವನ್ನು ಒಂದು ದಿನಕ್ಕೆ

ಮಾತ್ರ ತೆಗೆದಿಟ್ಟು ಶ್ರೀನಿವಾಸ ತೊಡಿಸಿದ್ದ ಉಂಗುರ ಧರಿಸಿದ್ದಳು. ಆದರೆ ಮರುದಿನ ಹೇಮಾ ನೋಡಿದರೆ ಅಥವಾ ಅಮ್ಮನೇ ಆ ಉಂಗುರದಲ್ಲಿದ್ದ ಅಕ್ಷರ ನೋಡಿದರೆ ಯಾವುದೀ ಉಂಗುರ ಎಂದು ಕೇಳಿದರೆ ಏನುಗತಿ ಎಂದು ಅದನ್ನು ತೆಗೆದು ತನ್ನ ಸೂಟ್ ಕೇಸಿನಲ್ಲಿ ಇನ್ನಿತರೆ ವಸ್ತಗಳ ಜೊತೆ ಇಟ್ಟುಬಿಟ್ಟಿದ್ದಳು. ಈಗ ಅದನ್ನು ನೋಡಿದಾಗ ಒಂದು ಕ್ಷಣ ಹಳೆಯದೆಲ್ಲ ನೆನಪಾಗಿ ಒಂದು ಕಡೆ ದುಃಖ, ಇನ್ನೊಂದು ಕಡೆ ಕೋಪ ಎಲ್ಲ ಸೇರಿಕೊಂಡು ಮನಸ್ಸಿಗೆ ತೀರ ತಳಮಳವಾಯಿತು. ನನ್ನ ಹಣೆಯ ಬರಹ ಬರೀ ಶ್ರೀನಿವಾಸನ ನೆನಪಿನಲ್ಲಿ ಬಾಳು ಕಳೆಯುವುದಷ್ಟೇ ಆಗಿಬಿಟ್ಟಿತಲ್ಲ ಎಂದು ದುಃಖ ಉಮ್ಮಳಿಸಿಬಂತು. ಹಾಗೆ ಒಬ್ಬಳೇ ಕಣ್ಣೀರು ಸುರಿಸುತ್ತ ಕುಳಿತಿದ್ದು ಅನಂತರ “ಇಲ್ಲ ಇನ್ನು ಆ ಮನುಷ್ಯನ ನೆನಪನ್ನು ಪೂರ್ತಿ ಕಿತ್ತೊಗೆಯಬೇಕು. ಅದಕ್ಕೆ ಮಮತಾ ಮೇಡಮ್ ಹೇಳಿದ ಹಾಗೆ ಓದು ಬರಹದಲ್ಲಿ ಮತ್ತಷ್ಟು ತೊಡಗಿಸಿಕೊಳ್ಳಬೇಕು ಎಂದು ನಿರ್ಧರಿಸಿದ ಮೇಲೆ ಮನಸ್ಸಿಗೆ ಕಿಂಚಿತ್ ನೆಮ್ಮದಿಯೆನಿಸಿತು. ಇಂಥ ತಳಮಳದ ಮನಸ್ಥಿತಿಯಲ್ಲೇ ಅದನ್ನೆಲ್ಲ ಮರೆಸಲು ಅವಳು ಮೊರೆಹೊಕ್ಕಿದ್ದು ಅದೇ ತನ್ನ ಪ್ರಿಯ ವೀಣೆಯನ್ನು. ಅದರಲ್ಲಿ “ಇಂದು ಎನಗೆ ಗೋವಿಂದ ನಿನ್ನ ಪಾದಾರವಿಂದವ ತೋರೋ ಮುಕುಂದನೆ” ಎಂಬ ರಾಘವೇಂದ್ರ ಸ್ವಾಮಿಗಳ ಕೀರ್ತನೆಯನ್ನು ನುಡಿಸುತ್ತ ನುಡಿಸುತ್ತ “ಬಂಧುಗಳು ಎನಗಿಲ್ಲ ಬದುಕಿನಲಿ ಸುಖವಿಲ್ಲ, ನಿಂದೆಯಲಿ ನೊಂದೆನೈ ನೀರಜಾಕ್ಷ” ಎಂಬ ನುಡಿಗೆ ಬಂದಾಗ ಅವಳ ಕಣ್ಣುಗಳಿಂದ ಒಂದೇ ಸಮನೆ ನೀರು ಧಾರಾಕಾರವಾಗಿ ಹರಿಯತೊಡಗಿತು. ವೀಣೆ ನುಡಿಸುವುದನ್ನು ಅಲ್ಲಿಗೇ ನಿಲ್ಲಿಸಿ ಅದನ್ನು ಅತ್ತ ತೆಗೆದಿಟ್ಟು ಹಾಗೆಯೇ ಹಾಸಿಗೆಯ ಮೇಲೊರಗಿದಳು.

ಅಧ್ಯಾಯ–28

ಹೇಮಾ ಸಂಶೋಧನೆ ಪ್ರಾರಂಭಿಸಿದ ಮೇಲೆ ಎರಡು ವರ್ಷ ಕಳೆದು ಮೂರನೇ ವರ್ಷ ಪ್ರಾರಂಭವಾಗಿತ್ತು. ಈ ಮಧ್ಯೆ ಕ್ಷೇತ್ರ ಕಾರ್ಯಕ್ಕೆಂದು ಬಿಳಿಗಿರಿರಂಗನ ಬೆಟ್ಟ ಪ್ರದೇಶಕ್ಕೂ ಹೋಗಿ ಅಲ್ಲೇ ಕೆಲವು ದಿವಸ ತಂಗಿದ್ದು ವ್ಯಾಪಕವಾಗಿ ಕ್ಷೇತ್ರ ಕಾರ್ಯ ನಡೆಸಿದಳು. ಕ್ಷೇತ್ರ ಕಾರ್ಯ ಮಾಡುವಾಗ ಯಾವ ಯಾವ ಸಂಗತಿಗಳನ್ನು ಕುರಿತು ಜನರನ್ನು ಪ್ರಶ್ನಿಸಬೇಕು, ಯಾವೆಲ್ಲ ಸಂಗತಿಗಳಿಗೆ ಪ್ರಾಮುಖ್ಯ ನೀಡಬೇಕು ಎಂಬ ಬಗ್ಗೆ ಬಿಳಿಗಿರಿ ರಂಗನ ಬೆಟ್ಟ ಪ್ರದೇಶಕ್ಕೆ ಹೋಗುವ ಮುನ್ನ ತನ್ನ ಮಾರ್ಗದರ್ಶಕರಾದ ಮಹಾಪಾತ್ರ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದಳು. ಈ ಕ್ಷೇತ್ರ ಕಾರ್ಯ ಮಾಡಿಬಂದ ಮೇಲೆ ಕೂಡ ಅದುವರೆಗೆ ಸಂಗ್ರಹಿಸಿರುವ ದತ್ತಾಂಶಗಳನ್ನು ತೆಗೆದುಕೊಂಡು ತಮ್ಮನ್ನು ಭೇಟಿಮಾಡಿ ಚರ್ಚಿಬೇಕೆಂದು ಹೇಳಿದ್ದರು. ಮತ್ತು ಚರ್ಚಿಸಿದ ನಂತರದಲ್ಲಿ ಸಂಶೋಧನ ಪ್ರಬಂಧದ ಬರವಣಿಗೆ ಪ್ರಾರಂಭಿಸಬಹುದೆಂದು ಹೇಳಿದ್ದರು. ಕ್ಷೇತ್ರ ಕಾರ್ಯ ಮುಗಿಸಿಕೊಂಡು ಚಿಕ್ಕಮಗಳೂರಿಗೆ ಹೋಗಿ ತಾನು ಕಾಲೇಜಿಗೆ ರಜೆ ಹಾಕಿದ್ದ ಅವಧಿಯ ಪಾಠ ಪ್ರವಚನಗಳನ್ನು ಮುಗಿಸಲು ವಿಶೇಷ ತರಗತಿಗಳನ್ನು ತೆಗೆದುಕೊಂಡಳು. ಪ್ರಿನ್ಸಿಪಾಲರು ಮತ್ತು ಆಡಳಿತ ಮಂಡಳಿಯವರಿಗೆ ಈ ವಿಷಯದಲ್ಲಿ ಹೇಮಾಳ ಬಗೆಗೆ ಅಪಾರ ಮೆಚ್ಚುಗೆ ಇತ್ತು.

ಕ್ಷೇತ್ರ ಕಾರ್ಯದ ನಂತರದಲ್ಲಿ ಮಹಾಪಾತ್ರ ಅವರೊಂದಿಗೆ ಚರ್ಚಿಸಲು ಭಾನುವಾರವನ್ನೂ ಸೇರಿಸಿಕೊಂಡಂತೆ ಎರಡು ದಿನ ರಜೆಹಾಕಿ ಬಿ.ಆರ್.ಪ್ರಾಜೆಕ್ಟ್‌ಗೆ ಹೋಗಿದ್ದಳು. ಅದು ಡಿಸೆಂಬರ್ ತಿಂಗಳು. ಐದು ಗಂಟೆಗೇ ಎದ್ದು ಗೆಸ್ಟ್ ಹೌಸಿನ ತನ್ನ ಕೊಠಡಿಯಲ್ಲಿ ಕುಳಿತು ಏನೋ ಅಧ್ಯಯನ ಮಾಡುತ್ತಾ ಟಿಪ್ಪಣಿ ಮಾಡಿಕೊಳ್ಳುತ್ತ ಇದ್ದಳು. ಬಾಗಿಲು ತಟ್ಟಿದ ಶಬ್ದವಾಯಿತು. ತೆರೆದು ನೋಡಿದರೆ ಡಾ. ಮಹಾಪಾತ್ರ ಅವರು ಬಾಗಿಲ ಬಳಿ ನಿಂತಿದ್ದಾರೆ!. ಲಗುಬಗೆಯಿಂದ ಕೈ ಜೋಡಿಸಿ "ನಮಸ್ಕಾರ ಸರ್, ಇದೇನು ಸರ್ ಇಷ್ಟು ಬೆಳಿಗ್ಗೆ ಬೆಳಿಗ್ಗೇನೇ?" ಎಂದಳು. "ಏನಿಲ್ಲ, ನನಗೆ ದಿನವೂ ಬೆಳಿಗ್ಗೆ ಅರ್ಧ ಮುಕ್ಕಾಲು ಗಂಟೆ ವಾಕ್ ಹೋಗುವ ಅಭ್ಯಾಸ. ಈ ಕಡೆ ಹೋಗುತ್ತಾ ಇದ್ದಾಗ ಏಕೋ ತಲೆ ಎತ್ತಿ ಇತ್ತ ನೋಡಿದರೆ ನಿಮ್ಮ ರೂಮಿನಿಂದ ದೀಪದ ಬೆಳಕು ಕಾಣಿಸಿತು. ಎದ್ದಿದ್ದೀರೆಂದು ತಿಳಿದು ಮಾತಾಡಿಸಲು ಬಂದೆ" ಎಂದರು. "ಬನ್ನಿ ಸ್ವಲ್ಪ ದೂರ ಸುತ್ತಾಡಿ ಬರೋಣ. ಬೆಳಗಿನ ಹವೆಯಲ್ಲಿ ಸುತ್ತಾಡಿದರೆ ಇಡೀ ದಿನ ಉಲ್ಲಾಸದಿಂದ ಇರುತ್ತೀರಿ." ಎಂದರು. "ಬರ್ತಿನಿ ಸರ್" ಎಂದು ಕೂಡಲೇ ಚಪ್ಪಲಿ ಮೆಟ್ಟಿ ಹೊರಟಳು. ಹೊರಟಾಗ ಸುಮಾರಾಗಿದ್ದ ಕಾವಳ ಮುಂದೆ ಸಾಗುತ್ತಿದ್ದಂತೆ ದಟ್ಟವಾಗತೊಡಗಿತು.

ಮಹಾಪಾತ್ರ ಅವರು ತಾವು ಹೊದ್ದಿದ್ದ ಶಾಲು ತೆಗೆದು ಹೇಮಾಳ ಹೆಗಲ ಮೇಲೆ ಹೊದಿಸಿ "ಶೀತ ಆಗಿಬಿಡುತ್ತೆ. ತುಂಬಾ ಚಳಿ ಇದೆ. ಹುಶಾರಾಗಿರಬೇಕು. ನನಗೆ ಇದೆಲ್ಲ ಬಹಳ ಅಭ್ಯಾಸವಾಗಿಬಿಟ್ಟಿದೆ. ಒರಿಸ್ಸಾದ ಗುಡ್ಡಗಾಡು ಪ್ರದೇಶಗಳಲ್ಲಿ ಈ ಕಾಲದಲ್ಲಿ ಮಂಜು ಎಷ್ಟು ದಟ್ಟವಾಗಿರುತ್ತೆ ಅಂದರೆ ನೀವು ತೋಳು ಮುಂದಕ್ಕೆ ಚಾಚಿದರೆ ನಿಮ್ಮ ಕೈಬೆರಳ ತುದಿ ನಿಮಗೆ ಕಾಣಿಸಲ್ಲ" ಎಂದರು. ಹೇಮಾ "ಚಿಕ್ಕಮಗಳೂರಿನಲ್ಲಿ ಕೂಡ ಹಾಗೆನೇ ಸರ್. ನವೆಂಬರ್, ಡಿಸೆಂಬರ್ ಮತ್ತು ಜನವರಿ ಈ ಮೂರು ತಿಂಗಳು ಮೈ ಕೊರೆಯುವ ಚಳಿ ಮತ್ತು ದಟ್ಟವಾದ ಮಂಜು ಇರುತ್ತೆ ಸರ್. ಈ ಕಾಲದಲ್ಲಿ ಸುಮಾರು ಒಂಬತ್ತು ಹತ್ತು ಗಂಟೆಯ ಹೊತ್ತಿಗೆ ತುಂಬ ಶೀತಲ ಗಾಳಿಯ ಸುಳಿವು ಬೀಸುತ್ತಿರುತ್ತೆ. ನಾನು ಊರಿಂದ ಶಾಲು ತರೋದು ಮರೆತುಬಿಟ್ಟೆ." ಎಂದಳು. ವಾಕ್ ಹೋಗುತ್ತ ಮಹಾಪಾತ್ರ ಅವರು ಮಾತಿನ ಮಧ್ಯೆ "ಅಮ್ಮ ಹೇಳಿದರು– ನಿಮ್ಮ ದಾಂಪತ್ಯದಲ್ಲಿ ಬಿರುಕು ಮೂಡಿ ಡೈವರ್ಸ್‌ಗೆ ಹಾಕಿದ್ದೀರಂತೆ. ಇಟೀಸ್ ವೆರಿ ಬ್ಯಾಡ್. ಈ ನಮ್ಮ ಗಂಡಸರು ಇದ್ದಾರಲ್ಲ ಇವರ ಪಾಲಿಗೆ ಹೆಂಡತಿಯರು ಅಂದರೆ ತಮ್ಮ ಭೋಗದ ವಸ್ತುಗಳು ಅಂತಲೇ ಲೆಕ್ಕ. ಅವರ ಮನಸ್ಸನ್ನು ಅರ್ಥ ಮಾಡಿಕೊಳ್ಳೊದಕ್ಕಾಗಲಿ, ಅವರ ಕಷ್ಟ ಸುಖ ತಿಳಿದುಕೊಳ್ಳುವುದಕ್ಕಾಗಲಿ ಅವುಗಳಿಗೆ ಸ್ಪಂದಿಸುವುದಾಗಲಿ ತಮ್ಮ ಘನತೆಗೆ ಕಡಿಮೆ ಅಂತ ತಿಳಿದುಕೊಳ್ಳುವವರೇ ಜಾಸ್ತಿ ಆಗುತ್ತಾ ಇದ್ದಾರೆ." ಎಂದರು. ಹೇಮಾ – "ಮ್ಯೂಚುಯಲ್ ಕನ್ಸೆಂಟ್ ಮೇಲೆ ಡೈವರ್ಸ್‌ಗೆ ಹಾಕಿರೋದರಿಂದ ಇಷ್ಟರಲ್ಲೇ ಡೈವರ್ಸ್ ಸಿಗುತ್ತೆ ಅಂತ ನಮ್ಮ ಲಾಯರ್ ಹೇಳಿದ್ದಾರೆ ಸರ್." ಎಂದಳು. "ಓಹ್! ವೆರಿ ಗುಡ್. ಆ ಮೇಲೆ ನೀವು ಫ್ರೀ ಬರ್ಡ್. ಈಗಲೂ ನೀವು ಫ್ರೀನೇ. ವಾಟ್ ಐ ಮೀನ್ ಈಸ್ ದಟ್ ದೆನ್ ನಥಿಂಗ್ ಪ್ರಿವೆಂಟ್ಸ್ ಯೂ ಫ್ರಮ್ ಮ್ಯಾರೀಯಿಂಗ್ ಎ ಪರ್ಸನ್ ಅಫ್ ಯುವರ್ ಛಾಯ್ಸ್ ಹೂ ರಿಯಲೀ ಲವ್ಸ್ ಅಂಡ್ ಅಂಡರ್‌ಸ್ಟ್ಯಾಂಡ್ಸ್ ಯೂ" ಎಂದು ನಕ್ಕರು. ಆಮೇಲೆ "ಐ ವಿಶ್ ಯೂ ಆಲ್ ದಿ ಬೆಸ್ಟ್" ಎಂದರು. ಹೇಮಾ ಏನೂ ಮಾತಾಡಲಿಲ್ಲ. ವಾಕ್ ಮುಗಿಸಿ ಮನೆ ಕಡೆ ಹೋಗುವಾಗ ಬನ್ನಿ "ಚಾ ಕುಡಿಯೋಣ" ಎಂದು ಕ್ಯಾಂಟೀನಿನತ್ತ ಹೆಜ್ಜೆ ಹಾಕಿದರು. ಮಹಾಪಾತ್ರ ಅವರು ಟೀಗೆ ಆರ್ಡರ್ ಮಾಡಿದರೆ ಹೇಮಾ "ನಾನು ಕಾಫಿ ಹೇಳ್ತೀನಿ ಸರ್" ಎಂದು ಸ್ಟ್ರಾಂಗ್ ಕಾಫಿ ತರಲು ಹೇಳಿದಳು. ಆ ಮೇಲೆ "ನಮಗೆ ಅದರಲ್ಲೂ ದಕ್ಷಿಣ ಕರ್ನಾಟಕದ ಜನರಿಗೆ ಸಾಯಂಕಾಲ ಬೇಕಾದರೆ ಟೀ ಅಗಬಹುದು. ಬೆಳಿಗ್ಗೆ ಹೊತ್ತು ಮಾತ್ರ ಬಿಸಿಬಿಸಿ ಕಾಫೀನೇ ಬೇಕು. ಅದರ ರುಚಿ ಅಮೃತಕ್ಕೂ ಇಲ್ಲ" ಅಂದಳು. "ಯಸ್ ಯೂ ಆರ್ ಪರ್ಫೆಕ್ಟ್‌ಲೀ ರೈಟ್. ಅದೂ ಈಗ ನೀವು ಇರೋದು ಕಾಫಿಯ ತವರೂರು ಚಿಕ್ಕಮಗಳೂರಿನಲ್ಲಿ. ಈಗೀಗ ಅಮ್ಮನಿಗೂ ಕಾಫಿ ಬಹಳ ಹಿಡಿಸುತ್ತೆ. ನನಗೆ ಮಾತ್ರ ಚಹಾನೇ ಸರಿ. ಆಮೇಲೆ ಸಿಕ್ಕೋಣ" ಎಂದು ಹೇಳಿ ಮನೆಯತ್ತ ಹೆಜ್ಜೆ ಹಾಕಿದರು.

ಪಿಎಚ್ಡಿ ಪ್ರೌಢ ಪ್ರಬಂಧದ ಬರವಣಿಗೆ ಪ್ರಾರಂಭಿಸಿದ ಮೇಲೆ ಒಂದೊಂದೂ ಅಧ್ಯಾಯ ಮುಗಿಯುತ್ತಿದ್ದಂತೆಯೇ ಅದನ್ನು ಅಂಚೆಯಲ್ಲಿ ಮಹಾಪಾತ್ರ ಅವರಿಗೆ ಕಳಿಸುತ್ತಿದ್ದಳು. ಅವರು ಏನಾದರೂ ಮಾರ್ಪಾಟು ಸೂಚಿಸಿದರೆ ಅದನ್ನು

ಅಳವಡಿಸಿಕೊಳ್ಳುತ್ತಿದ್ದಳು. ಕೆಲವೊಂದು ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯಕ್ಕಿಂತ ಭಿನ್ನವಾದ ಅಭಿಪ್ರಾಯವನ್ನು ಅವಳು ವ್ಯಕ್ತಪಡಿಸಿದ್ದಾಗಲೂ ನಿಮ್ಮ ಅಭಿಪ್ರಾಯವೇ ಇರಲಿ. ನನ್ನದನ್ನು ನಾನು ಹೇರುವುದಿಲ್ಲ ಎನ್ನುತ್ತಿದ್ದರು. ಈ ವಿಷಯದಲ್ಲಿ ಹೇಮಾಳಿಗೆ ಅಶೋಕರ ವಿಷಯಕ್ಕೆ ದಿನೇದಿನೇ ಗೌರವ ಹೆಚ್ಚಾಗುತ್ತಿತ್ತು. ಈ ಮಧ್ಯೆ ಮೂರು ಸಲ ಬಂದು ಗೆಸ್ಟ್ ಹೌಸಿನಲ್ಲಿ ಇದ್ದುಕೊಂಡು ಅವರನ್ನು ಭೇಟಿಯಾಗಿ ತನ್ನ ಬರವಣಿಗೆಯನ್ನು ಅವರ ಮನೆಯಲ್ಲಿಯೇ ಓದಿ ಚರ್ಚಿಸಿದ್ದಳು. ಕೊನೆಯ ಸಲ, "ನಿಮ್ಮ ಥೀಸಿಸ್ ಪೂರ್ತಿ ಓದಿ ಚರ್ಚಿಸಿದ್ದು ಎಲ್ಲಾ ಆಗಿದೆ. ಇನ್ನೇನಿದ್ದರೂ ನಿಮ್ಮ ಥೀಸಿಸ್ ಅನ್ನು ಟೈಪ್ ಮಾಡಿಸಿ ಬೈಂಡ್ ಮಾಡಿಸಿ ಫೈನಲ್ ಮಾಡಿಕೊಂಡು ತಂದುಬಿಡಿ. ವಿಶ್ವವಿದ್ಯಾಲಯಕ್ಕೆ ಸಬ್‌ಮಿಟ್ ಮಾಡಿಬಿಡೋಣ" ಎಂದು ಹೇಳಿದರು. ಆದರೆ ಈ ಸಲ ಮಾತ್ರ ನೀವು ಗೆಸ್ಟ್ ಹೌಸಿಗೆ ಹೋಗಬೇಡಿ. ಸೀದಾ ನಮ್ಮ ಮನೆಗೇ ಬಂದುಬಿಡಿ. ನಾನು ಯೂನಿವರ್ಸಿಟಿಗೆ ಹೋಗಿದ್ದರೂ ಅಮ್ಮ ಹೇಗೂ ಇದ್ದೇ ಇರುತ್ತಾರೆ. ನಮ್ಮ ಮನೆಯಲ್ಲೇ 'ಬಸವಣ್ಣನವರ ಊಟ ಮಾಡೋಣ' ಎಂದಿದ್ದರು. ಹೇಮಾಳಿಗೆ ನಗೆ ತಡೆಯಲಾಗಿರಲಿಲ್ಲ.

ಅವರು ಹೇಳಿದಂತೆ ನವೆಂಬರ್ ತಿಂಗಳ ಕೊನೆಯಲ್ಲಿ ಒಂದು ಶುಕ್ರವಾರ ಬೆಳಿಗ್ಗೆ ಬೆಳಿಗ್ಗೆಯೇ ಊರಿಂದಲೇ ನೇರವಾಗಿ ಒಂದು ಟ್ಯಾಕ್ಸಿ ಮಾಡಿಕೊಂಡು ವಿ.ವಿ.ಗೆ ಸಲ್ಲಿಸಬೇಕಾಗಿದ್ದ ಪ್ರೌಢ ಪ್ರಬಂಧದ ಪ್ರತಿಗಳನ್ನೆಲ್ಲಾ ಹೇರಿಕೊಂಡು ಡಾ. ಮಹಾಪಾತ್ರ ಅವರ ಮನೆಗೆ ಬಂದಿಳಿದಳು. ಮಹಾಪಾತ್ರ ಅವರ ತಾಯಿ ನಗೆಮೊಗದಿಂದ ಬರಮಾಡಿಕೊಂಡರು. "ಇನ್ನರ್ಧ ಗಂಟೆಗೆಲ್ಲಾ ಬಂದು ಬಿಡ್ತೀನಿ ಅಂತ ಅವನು ಹೇಳಿ ಹೋಗಿ ಆಗಲೇ ಸುಮಾರು ಹೊತ್ತಾಯಿತು. ಇನ್ನೇನು ಒಂದು ಹತ್ತು ನಿಮಿಷದಲ್ಲಿ ಬಂದುಬಿಡ್ತಾನೆ. ರಿಲ್ಯಾಕ್ಸ್ ಮಾಡಿಕೊಳ್ಳಿ" ಎಂದು ಹೇಳಿ ಚಹಾ ತಂದು ಕೊಟ್ಟರು. ಚಹಾ ಕುಡಿಯುತ್ತ "ಅಶೋಕ ನಿಮ್ಮ ಬಗ್ಗೆ 'ಬಹಳ ಇಂಡಸ್ಟ್ರಿಯಸ್ ಸ್ಕಾಲರ್. ಒಳ್ಳೆ ಡಿಸಿಪ್ಲಿನ್ಡ್ ಲೇಡಿ' ಅಂತೆಲ್ಲ ಹೇಳ್ತಾ ಇದ್ದ" ಎಂದರು. ಅದಕ್ಕೆ ಹೇಮಾ "ಸರ್‌ಗೆ ನನ್ನನ್ನು ಕಂಡರೆ ತುಂಬಾ ಅಭಿಮಾನ. ಅವರು ಪಟ್ಟುಹಿಡಿದು ನನ್ನ ಕೈಯಲ್ಲಿ ಕೆಲಸಮಾಡಿಸಿದ್ದರಿಂದ ಇಷ್ಟು ಬೇಗ ಈ ಕೆಲಸ ಆಯಿತು. ಕ್ರೆಡಿಟ್ ಎಲ್ಲ ಸರ್‌ಗೆ ಸೇರಬೇಕು" ಎಂದಳು. "ಅಯ್ಯೋ ಅವನು ನಿಮಗೆ ಅಂತ ಅಲ್ಲಮ್ಮ. ಹೋದ ವಾರವೂ ಒಬ್ಬ ಯುವ ಲೆಕ್ಚರರ್ ನಿಮ್ಮ ಹಾಗೇ ಥೀಸಿಸ್ ಮುಗಿಸಿದೆ ಅಂತ ಹೇಳಿದ್ದರು. ಆತನನ್ನೂ ಇಲ್ಲಿಗೇ ಬರಹೇಳಿ ಇಲ್ಲೇ ಥೀಸಿಸ್ ನೋಡಿ ಆಮೇಲೆ ಡಿಪಾರ್ಟ್‌ಮೆಂಟ್‌ಗೆ ಕರೆದುಕೊಂಡು ಹೋಗಿದ್ದ. ಅವನ ಸ್ವಭಾವವೇ ಹಾಗೆ" ಎಂದರು. ಮಾತಿನ ನಡುವೆ ನಿಮ್ಮ ಡೈವರ್ಸ್ ಕತೆ ಏನಾಯಿತು ಎಂದು ಕೇಳಿದರು. "ಡೈವರ್ಸ್ ಸಿಕ್ಕಿತಮ್ಮ. ಈ ತಿಂಗಳ ಮೊದಲ ವಾರದಲ್ಲಿ ಜಡ್ಜ್‌ಮೆಂಟ್ ಬಂತು." "ಹೋಗಲಿ ಬಿಡಿ. ಒಂದು ರೀತೀಲಿ ನಿಮಗಿದೊಂದು ಸಮಾಧಾನ. ದಾಂಪತ್ಯ ಎನ್ನುವುದು ಪ್ರೀತಿಯ ಸಂಬಂಧ ಆಗದೆ ಇದ್ದಾಗ ಡೈವರ್ಸ್ ಅಂದರೆ ಒಂದು ಥರ ಬಾಂಡೇಜ್‌ನಿಂದ ಬಿಡುಗಡೆ ಇದ್ದ ಹಾಗೆ" ಎಂದರು. "ಸರಿಯಾಗಿ ಹೇಳಿದಿರಿ ಅಮ್ಮ." ಎಂದಳು. ಇವರಿಬ್ಬರೂ ಮಾತಾಡುತ್ತಾ

ಕುಳಿತಿದ್ದಾಗಲೇ ಮಹಾಪಾತ್ರ ಬಂದರು. "ಬಹಳ ಹೊತ್ತು ಆಯ್ತ ಬಂದು? ನನಗೆ ಒಂದು ಕ್ಲಾಸ್ ಇತ್ತು. ಮುಗಿಸಿಕೊಂಡು ಬರಲು ಇಷ್ಟು ಹೊತ್ತಾಯಿತು" ಅಂದರು. "ಏನಿಲ್ಲ ಸರ್. ಅಮ್ಮನ ಹತ್ತಿರ ಹರಟೆ ಹೊಡೆಯುತ್ತಾ ಕೂತಿದ್ದೆ" ಎಂದಳು.

ಆಮೇಲೆ ಥೀಸಿಸ್‌ನ ಪ್ರತಿಯನ್ನು ಕೈಯಲ್ಲಿ ಹಿಡಿದು ನೋಡಿದರು. ಎಲ್ಲವನ್ನೂ ಸುಮ್ಮನೆ ಒಂದು ಸಲ ಗ್ಲಾನ್ಸ್ ಮಾಡಿದರು. ಬಹಳ ತೃಪ್ತಿಯಿಂದ– "ನಿಮ್ಮ ರೈಟಿಂಗ್ ಬಗ್ಗೆ ಈಗಾಗಲೇ ಹೇಳಿದ್ದೀನಿ. ಇಟ್ ಈಸ್ ರಿಯಲೀ ಎ ವೆರಿ ಸ್ಕಾಲರ್ಲಿ ಅಂಡ್ ಕಮೆಂಡಬಲ್ ವರ್ಕ್. ಒಳ್ಳೇ ರೆಫರೆನ್ಸ್ ವರ್ಕ್ ಆಗಿ ಉಳಿಯುತ್ತೆ. ಇಟೀಸ್ ಯುವರ್ ಬ್ರೈನ್ ಚೈಲ್ಡ್. ನಿಮಗೆ ಪಿಎಚ್.ಡಿ. ಸಿಗುವುದರ ಬಗ್ಗೆ ಅನುಮಾನವೇ ಇಲ್ಲ. ಈ ಸಂಶೋಧನ ಪ್ರಬಂಧ ಸಿದ್ಧಪಡಿಸಲು ನೀವು ಬೇಕಾದಷ್ಟು ಮೆಟೀರಿಯಲ್ ಕಲೆಕ್ಟ್ ಮಾಡಿರುತ್ತೀರಿ. ಓದಿರುತ್ತೀರಿ. ಇದರಲ್ಲಿ ಬಳಕೆಮಾಡದೆ ಇರೋವನ್ನು ಬಳಸಿಕೊಂಡು ಇನ್ನೊಂದೆರಡು ಸಣ್ಣ ಪುಸ್ತಕಗಳನ್ನು ನಿಧಾನವಾಗಿ ಇದರ ಬೈಪ್ರಾಡಕ್ಟ್ ಆಗಿ ತರಬಹುದು. ಈಗ ಮೊದಲು ಊಟ ಮಾಡೋಣ. ಆಮೇಲೆ ಎಲ್ಲವುದಕ್ಕೂ ಸಹಿ ಹಾಕಿ ಕೊಡುತ್ತೀನಿ. ನಮ್ಮ ವಿಭಾಗದ ಮುಖ್ಯಸ್ಥರು ಮತ್ತು ಪ್ರೊಫೆಸರ್ ಅವರ ಹತ್ತಿರ ಹೋಗಿ ಅವರ ಸಹಿ ಪಡೆದುಕೊಳ್ಳೋಣ. ಆ ಮೇಲೆ ರಿಜಿಸ್ಟ್ರಾರ್ ಕಛೇರಿಗೆ ಹೋಗಿ ಸಬ್‌ಮಿಟ್ ಮಾಡಿದರೆ ಆಯಿತು."

ಊಟಕ್ಕೆ ಅಶೋಕ ಅವರ ತಾಯಿ ಒರಿಸ್ಸಾದ ವಿಶೇಷ ಸಿಹಿಯೊಂದನ್ನು ತಯಾರಿಸಿದ್ದರು. ಹೇಮಾ ತನ್ನ ತಲೆ ಮೇಲಿನ ಮಹಾಭಾರವೊಂದನ್ನು ಕೆಳಗಿಳಿಸಿದ ನಿರಾಳ ಮನಸ್ಸಿನಿಂದ ಊಟಮಾಡಿದಳು. ಊಟದ ನಂತರ ಒಂದರ್ಧ ಗಂಟೆ ವಿಶ್ರಾಂತಿ ತೆಗೆದುಕೊಂಡು ಥೀಸಿಸ್ ಪ್ರತಿಗಳನ್ನು ತಮ್ಮ ಕಾರಿನ ಡಿಕ್ಕಿಯಲ್ಲಿಟ್ಟುಕೊಂಡು ಹೇಮಾಳೊಂದಿಗೆ ತಮ್ಮ ವಿಭಾಗದ ಪ್ರೊಫೆಸರ್ ಅವರ ಕೊಠಡಿಗೆ ಹೋಗಿ ಹೇಮಾಳನ್ನು ಪರಿಚಯ ಮಾಡಿಕೊಟ್ಟರು. ಪ್ರೊಫೆಸರ್ ಅವರು ಸಹಿ ಹಾಕಿ "ವಿಶ್ ಯು ಅಡ್ವಾನ್ಸ್ ಕಂಗ್ರಾಟ್ಸ್ ಹೇಮಾ" ಎಂದರು. ಹೇಮಾ "ಥ್ಯಾಂಕ್ ಯೂ ಸರ್" ಎಂದಳು. ಆಮೇಲೆ ರಿಜಿಸ್ಟ್ರಾರ್ ಕಛೇರಿಗೆ ತೆರಳಿ ಥೀಸಿಸ್ ಪ್ರತಿಗಳನ್ನು ಸಲ್ಲಿಸಿ ಮನೆಗೆ ಹಿಂತಿರುಗಿದರು.

* * *

ಫೆಬ್ರುವರಿ ಕಳೆದು ಮಾರ್ಚ್–ಏಪ್ರಿಲ್ ಬಂತೆಂದರೆ ಆ ವರ್ಷದ ಶೈಕ್ಷಣಿಕ ವರ್ಷದ ಪರೀಕ್ಷೆಗಳು, ಮೌಲ್ಯಮಾಪನದ ಋತು ಪ್ರಾರಂಭವಾಯಿತೆಂದೇ ಅರ್ಥ. ಈ ಸಲದ ಮೌಲ್ಯಮಾಪನಕ್ಕೆ ಇಮ್ಮಡಿಸಿದ ಉತ್ಸಾಹದಿಂದ ಹೇಮಾ ಹೊರಟು ನಿಂತಿದ್ದಳು. ಅದಕ್ಕೆ ಮುಖ್ಯವಾದ ಕಾರಣ ಇದುವರೆಗೆ ಅವಳನ್ನು ಅತ್ತಿತ್ತ ಮಿಸುಕಾಡದಂತೆ ಕಟ್ಟಿಹಾಕಿದ್ದ ಪಿಎಚ್.ಡಿ. ಸಂಶೋಧನೆ ಮತ್ತು ಪ್ರಬಂಧ ಸಿದ್ಧಪಡಿಸುವ ಕೆಲಸ ಮುಗಿದು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದೂ ಮುಗಿದದ್ದು. ಈ ಸಲ ಜಾಲಿಯಾಗಿ ಸುತ್ತಾಡಿಕೊಂಡು ಫ್ರೆಂಡ್ಸ್‌ನೆಲ್ಲಾ ಮಾತಾಡಿಸಿಕೊಂಡು ಬರಬಹುದು ಎನ್ನುವುದು ಅವಳ ಉತ್ಸಾಹಕ್ಕೆ ಇನ್ನೊಂದು ಕಾರಣ. ಸಾಮಾನ್ಯವಾಗಿ ಒಂದು ಮೂರು ನಾಲ್ಕು ದಿನ ಹೆಚ್ಚು ಕಡಿಮೆ

ಎಲ್ಲ ವಿಷಯಗಳ ಕೇಂದ್ರೀಕೃತ ಮೌಲ್ಯಮಾಪನವೂ ಶಿವಮೊಗ್ಗದಲ್ಲೇ ಬೇರೆ ಬೇರೆ ಕಾಲೇಜುಗಳಲ್ಲಿ ಪ್ರಾರಂಭವಾಗಲಿದ್ದವು. ಈ ಸಲ ಅವಳ ಉತ್ಸಾಹ ಮತ್ತಷ್ಟು ಗರಿಗೆದರಲು ಕಾರಣವಾದ್ದು ಮೌಲ್ಯಮಾಪನ ಇನ್ನೊಂದು ಹದಿನೈದು ದಿನಕ್ಕೆ ಪ್ರಾರಂಭವಾಗಲಿದೆ ಎನ್ನುವಾಗ ಡಾ. ಮಮತಾ ಮೇಡಮ್ ಅವರಿಂದ ಬಂದ ಫೋನ್. ಅದರಲ್ಲಿ ಅವರು "ನಾನು ಈ ಸಲ ನಿಮ್ಮ ವಿಶ್ವವಿದ್ಯಾನಿಲಯದ ಎಕ್ಸಟರ್ನಲ್ ಎಕ್ಸಾಮಿನರ್ ಆಗಿ ನೇಮಕ ಆಗಿದ್ದೇನೆ. ಅಲ್ಲಿ ಐಚ್ಛಿಕ ಕನ್ನಡದ ಒಂದು ಪ್ರಶ್ನಪತ್ರಿಕೆಯನ್ನು ನಾನು ಸಿದ್ಧಪಡಿಸಿದ್ದೇನೆ. ಹಾಗಾಗಿ ನಾನೂ ಶಿವಮೊಗ್ಗಕ್ಕೆ ಬರ್ತಾ ಇದ್ದೀನಿ. ನಿಮ್ಮ ಸಬ್ಜೆಕ್ಟ್‌ನ ಮೌಲ್ಯ ಮಾಪನ ಯಾವಾಗ ಪ್ರಾರಂಭ ಆಗುತ್ತೆ" ಎಂದು ಕೇಳಿದ್ದರು. ಅದಕ್ಕೆ ಹೇಮಾ ಇಂಥ ದಿನ ಆಗಬಹುದು ಅಂತ ಹೇಳಿದ ಮೇಲೆ "ನೋಡು ನಿಮ್ಮ ಮೌಲ್ಯಮಾಪನಕ್ಕಿಂತ ನಾನು ಸೆಟ್ ಮಾಡಿರುವ ಪೇಪರ್‌ನ ಮೌಲ್ಯಮಾಪನ ಕೊನೇ ಪಕ್ಷ ಮೂರುದಿನ ಮುಂಚೆ ಶುರುವಾಗುತ್ತೆ. ನಾನು ಪೇಪರ್ ಸೆಟ್ಟರ್ ಆದದ್ದರಿಂದ ಮುಂಚೆನೇ ಹೋಗಿ ಒಂದು ಒಳ್ಳೆ ಲಾಜ್‌ನಲ್ಲಿ ಮೂರು ಜನ ಇರಬಹುದಾದಂಥ ರೂಮ್ ಮಾಡಿರುತ್ತೇನೆ. ಯಾವ ಲಾಜ್, ರೂಮು ಯಾವುದು ಅಂತ ಅಲ್ಲಿಗೆ ಹೋದಮೇಲೆ ತಿಳಿಸುತ್ತೇನೆ. ನೀನು ಅಲ್ಲಿಗೇ ಬಂದು ಬಿಡು. ಬೇರೆ ರೂಮ್ ಮಾಡಕ್ಕೆ ಹೋಗಬೇಡ. ನಿನ್ನ ಫ್ರೆಂಡು ವಸುಂಧರಾಳಿಗೂ ಅಲ್ಲಿಗೇ ಬರೋದಕ್ಕೆ ಹೇಳು. ಮೌಲ್ಯಮಾಪನದ ದಿನಗಳಲ್ಲೇ ಯೂನಿವರ್ಸಿಟಿಯಲ್ಲಿ 'ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ' ಎಂಬ ವಿಚಾರ ಸಂಕಿರಣ ಇದೆ. ಅದರ ಒಂದು ಗೋಷ್ಠಿಯ ಅಧ್ಯಕ್ಷತೆ ನಾನು ವಹಿಸುವುದಿದೆ. ಹೇಗೂ ರಜೆ ಇರುವುದರಿಂದ ವಸುಂಧರಾಗೂ ಅಟೆಂಡ್ ಮಾಡಲು ತಿಳಿಸುತ್ತೇನೆ. ನೀನೂ ಹೇಳು. ಮೂರು ಜನವೂ ಒಂದೆರಡು ದಿನ ಜಾಲಿಯಾಗಿ ಕಳೆಯೋಣ" ಎಂದಿದ್ದರು.

ಮೇಡಮ್ ಹೇಳಿದ ಮಾತನ್ನು ವಸುಂಧರಾಗೆ ಹೇಳಿದಾಗ ಅವಳು – "ನಮ್ಮ ತಾಯಿಗೆ ತೀರಾ ಹುಶಾರಿಲ್ಲ. ಊರಿಗೆ ಕರೆದುಕೊಂಡು ಹೋಗು ಅಂತ ಒಂದೇ ಸಮ ಹೇಳುತ್ತಾ ಇದ್ದಾರೆ. ನಾನು ಅವರನ್ನು ಕರೆದುಕೊಂಡುಹೋಗಿ ತುಮಕೂರಿನಲ್ಲಿ ಬಿಟ್ಟು ಒಂದು ವಾರ ಅಲ್ಲಿದ್ದು ಅಲ್ಲಿಂದಲೇ ಶಿವಮೊಗ್ಗಕ್ಕೆ ಬರುತ್ತೇನೆ" ಎಂದಿದ್ದಳು. ಹೇಮಾ ಹಾಗೇ ಮಾಡು ಎಂದಿದ್ದಳು.

ಅದಾದ ನಾಲ್ಕನೇ ದಿನ ವಸುಂಧರಾಳಿಂದ ಹೇಮಾಳಿಗೆ ಒಂದು ಟೆಲಿಗ್ರಾಮ್ ಬಂತು. ಅದರಲ್ಲಿ "ಮದರ್ ಎಕ್ಸ್‌ಪೈರ್ಡ್ ಟೂ ಡೇಸ್ ಆಫ್ಟರ್ ರೀಚಿಂಗ್ ತುಮಕೂರ್. ಲೆಟರ್ ಫಾಲೋಸ್" ಎಂದಿತ್ತು. ಅನಂತರ ಬಂದ ಪತ್ರದಲ್ಲಿ "ತುಮಕೂರಿಗೆ ಹೋದ ಮಾರನೇ ದಿನವೇ ಅಮ್ಮನಿಗೆ ಉಸಿರಾಟ ತುಂಬ ಕಷ್ಟವಾಗಿ ಕೂಡಲೇ ಆಸ್ಪತ್ರೆ ಸೇರಿಸಿದೆವು. ಆಕ್ಸಿಜನ್ನು ಇಂಜೆಕ್ಷನ್ನು ಎಂದು ವೈದ್ಯರು ಏನೆಲ್ಲ ಪ್ರಯತ್ನಿಸಿದರೂ ಅಮ್ಮನನ್ನು ಉಳಿಸಿಕೊಳ್ಳಲಾಗಲಿಲ್ಲ. ಮರುದಿನವೇ ತೀರಿಕೊಂಡರು. ನನ್ನನ್ನು ಅತಿಯಾಗಿ ಪ್ರೀತಿಸುತ್ತಿದ್ದ ಜೀವವೊಂದು ಇನ್ನಿಲ್ಲವಾಯಿತು. ನನಗೀಗ ತೀರ ತೀರ ಒಂಟಿ ಎನಿಸುತ್ತಿದೆ. ಶಿವಮೊಗ್ಗಕ್ಕೆ ಬಹುಶಃ ನಾನು ಬರಲಾರೆ. ಮಮತಾ ಮೇಡಮ್‌ಗೆ

ಹೇಳಿಬಿಡು" ಎಂದು ತಿಳಿಸಿದ್ದಳು.

ಡಾ. ಮಮತಾ ಶಿವಮೊಗ್ಗಕ್ಕೆ ಹೋಗಿ ಲಾಜ್‌ನಲ್ಲಿ ರೂಮ್ ಮಾಡಿದ ಮೇಲೆ ಹೇಮಾಳಿಗೆ ಲಾಜ್‌ನ ಹೆಸರು ಮತ್ತು ಕೊಠಡಿಯ ಸಂಖ್ಯೆ ತಿಳಿಸಿದರು. ಹೇಮಾ ಮೌಲ್ಯಮಾಪನದ ದಿನ ಬೆಳಿಗ್ಗೆ ಚಿಕ್ಕಮಗಳೂರಿನಿಂದ ಹೊರಟು ಅಂದು ಮೌಲ್ಯಮಾಪಕರ ಸಭೆ ಮತ್ತು ಆ ನಂತರ ಮಧ್ಯಾಹ್ನ ಪ್ರಾರಂಭವಾದ ಮೌಲ್ಯಮಾಪನದ ಕೆಲಸ ಮುಗಿಸಿಕೊಂಡು ಆರೂವರೆಯ ಸುಮಾರಿಗೆ ಮಮತಾ ಅವರು ತಂಗಿದ್ದ ಲಾಜ್‌ಗೆ ಹೋದಳು. ಮಮತಾ ನಗುತ್ತಾ ಬರಮಾಡಿಕೊಂಡರು. ಊಟದ ಕಾರ್ಯಕ್ರಮ ಮುಗಿದ ಮೇಲೆ ಹೇಮಾ ವಸುಂಧರಾಳ ತಾಯಿ ತೀರಿಕೊಂಡ ಸುದ್ದಿ ತಿಳಿಸಿದಳು. ಮಮತಾ ಅವರು ಮಮ್ಮಲ ಮರುಗಿದರು. "ಪಾಪ ಆ ಹುಡುಗಿಗೆ ಕಷ್ಟದ ಮೇಲೆ ಕಷ್ಟಗಳು ಬರುತ್ತಾನೆ ಇವೆ. ಅವಳನ್ನು ಮದುವೆಯಾಗಬೇಕಿದ್ದ ವರ ತೀರಿಹೋಗಿ ಇನ್ನೂ ಒಂದು ಒಂದೂವರೆ ವರ್ಷ ಆಗಿರಬೇಕು ಅಷ್ಟೇ ಅಲ್ಲವೆ? ಅವಳಿಗೆ ಇಲ್ಲಿಗೆ ಬರೋದಕ್ಕೆ ಹೇಳು. ಈ ಸಮಯದಲ್ಲಿ ಅವಳೊಬ್ಬಳನ್ನೇ ಬಿಟ್ಟಿರೋದು ಸರಿಯಲ್ಲ. ಡಿಪ್ರೆಷನ್‌ಗೆ ಹೋಗಿಬಿಡಬಹುದು. ನಮ್ಮಗಳ ಜೊತೆ ಇದ್ದರೆ ಸ್ವಲ್ಪವಾದರೂ ದುಃಖ ಮರೆಸೋದಕ್ಕೆ ಪ್ರಯತ್ನಿಸಬಹುದು" ಎಂದರು. ಅದರಂತೆ ಮರುದಿನವೇ ಹೇಮಾಪತ್ರ ಬರೆದು– "ನೀನು ತಪ್ಪದೆ ಬರಬೇಕು ಅಂತ ಹೇಳು ಎಂದು ಮಮತಾ ಮೇಡಮ್ ಹೇಳಿದ್ದಾರೆ. ನಿಮ್ಮ ತಾಯಿಯ ಉತ್ತರಕ್ರಿಯಾದಿಗಳೆಲ್ಲ ಮುಗಿಸಿಕೊಂಡು ಬೇಲೂರಿಗೆ ಹೋಗಿಬಿಡಬೇಡ. ಅಲ್ಲಿ ಒಬ್ಬಳೇ ಏನು ಮಾಡ್ತೀ? ಇಲ್ಲಿಗೇ ಬಂದುಬಿಡು." ಎಂದು ತಿಳಿಸಿದಳು.

ಹೇಮಾಳ ಪತ್ರ ನೋಡಿ ವಸುಂಧರಾಗೆ ಏನೆನ್ನಿಸಿತೋ ತಾಯಿಯ ಉತ್ತರಕ್ರಿಯಾದಿಗಳೆಲ್ಲ ಮುಗಿದ ಮೇಲೆ ಅಪ್ಪನಿಗೂ ತಮ್ಮ ಮತ್ತು ತಮ್ಮನ ಹೆಂಡತಿಗೂ ಹೇಮಾ ಪತ್ರ ಬರೆದಿರುವ ಸಂಗತಿ ತಿಳಿಸಿ ನಾನು ಶಿವಮೊಗ್ಗಕ್ಕೆ ಹೋಗುತ್ತಿದ್ದೀನಿ ಎಂದು ಹೇಳಿದಳು. ಅವರೆಲ್ಲರೂ ಒಳ್ಳೆಯದು. ಹಾಗೇ ಮಾಡು ಎಂದರು. ಮರುದಿನವೇ ಹೊರಟು ಮಧ್ಯಾಹ್ನ ಎರಡೂವರೆಯ ಹೊತ್ತಿಗೆ ಕನ್ನಡ ಮೌಲ್ಯಮಾಪನ ಕೇಂದ್ರಕ್ಕೆ ಬಂದುಬಿಟ್ಟಳು. ಮಮತಾ ಮೇಡಮ್‌ಗೆ ಅವಳನ್ನು ನೋಡಿ ಹೃದಯ ತುಂಬಿಬಂದು ಕಣ್ಣಂಚಿನಲ್ಲಿ ನೀರಾಡಿತು. ಅವಳ ಕೈಹಿಡಿದು ನೀನು ಎಷ್ಟುಹೊತ್ತಿಗೆ ಊರಿಂದ ಹೊರಟಿದ್ದೆಯೋ, ನಿನ್ನದು ಊಟ ಆಗಿದೆಯಾ ಎಂದು ಕೇಳಿದರು. ಇಲ್ಲ ಮೇಡಮ್. ಬಸ್ ಇಳಿದವಳು ಈ ಸೂಟ್‌ಕೇಸ್ ಸಮೇತ ಸೀದಾ ಇಲ್ಲಿಗೇ ಬಂದುಬಿಟ್ಟೆ ಎಂದಳು. ಹಾಗಾದರೆ ನಡಿ ಊಟ ಮಾಡು ಎಂದು ಅವಳನ್ನು ಊಟಕ್ಕೆ ಕರೆದುಕೊಂಡುಹೋಗಿ ಹೋಟೆಲ್‌ನಲ್ಲಿ ಊಟ ಮಾಡಿಸಿದರು. ಆಮೇಲೆ ಛೇರ್‌ಮನ್‌ಗೆ ಹೇಳಿಬಿಟ್ಟು ನಾನೂ ನಿನ್ನ ಜೊತೇಲೇ ಬರುತ್ತೀನಿ ಎಂದು ಮೌಲ್ಯ ಮಾಪನ ಕೇಂದ್ರಕ್ಕೆ ವಾಪಸ್ ಬಂದು ಛೇರ್‌ಮನ್ ಅವರಿಗೆ ಹೇಳಿ ಆಟೋ ಹತ್ತಿ ಲಾಜ್‌ಗೆ ಬಂದು ಬಿಟ್ಟರು. "ನಿನಗೆ ಪ್ರಯಾಣ ಮಾಡಿ ಆಯಾಸ ಆಗಿರಬೇಕು. ನೀನು ಮಲಗಿಕೋ. ನಾನೂ ಇದರ ಮೇಲೆ ಕಣ್ಣಾಡಿಸಿಕೊಂಡು ಮಲಗಿರುತ್ತೀನಿ ಅಂತ ಹೇಳಿ ಮಲಗಿಕೊಂಡೇ ಯಾವುದೋ

ಪುಸ್ತಕ ಓದತೊಡಗಿದರು.

ಹೇಮಾ ಅಂದಿನ ಮೌಲ್ಯಮಾಪನದ ಕೆಲಸ ಮುಗಿಸಿಕೊಂಡು ರೂಮಿಗೆ ಬಂದು ನೋಡಿದರೆ ಪಕ್ಕದ ಮಂಚದಲ್ಲಿ ವಸುಂಧರಾ ಮಲಗಿದ್ದಾಳೆ. ಮಮತಾ ಮೇಡಮ್ "ಪಾಪ ಆಯಾಸವಾಗಿದೆ ಅನ್ನಿಸುತ್ತೆ. ಅವಳಾಗಿ ಅವಳೇ ಏಳುವವರೆಗೂ ಎಬ್ಬಿಸೋದು ಬೇಡ" ಎಂದರು. ಅದೇ ಸರಿ ಎಂದು ರೂಮ್ ಬಾಯ್‌ಗೆ ಹೇಳಿ ಟೀ ತರಿಸಿಕೊಂಡು ಕುಡಿದು ಮೆಲ್ಲಗೆ ಮಾತಾಡುತ್ತ ಇದ್ದರು. ಇದೇನು ಎಷ್ಟು ಹೊತ್ತು ಮಲಗಿಬಿಟ್ಟೆ ನಾನು ಅಂದುಕೊಂಡು ವಸುಂಧರಾ ಎದ್ದು ನೋಡಿದರೆ ಆಗಲೇ ಗಂಟೆ ಏಳಾಗಿ ಹೇಮಾ ಮತ್ತು ಮಮತಾ ಮೇಡಮ್ ಇಬ್ಬರೂ ಏನೋ ಮಾತಾಡುತ್ತಿದ್ದರು. ಹೇಮಾಳ ಮುಖ ನೋಡಿದ ಕೂಡಲೇ ವಸುಂಧರಾಗೆ ದುಃಖ ಒತ್ತರಿಸಿಕೊಂಡು ಬಂತು. ಹೇಮಾ ಹತ್ತಿರ ಸರಿದು ತಬ್ಬಿಕೊಂಡು ಸಂತೈಸಿದಳು. ಮಮತಾ ಮೌನವಾಗಿ ವಿಷಾದ ಭಾವದಿಂದ ನೋಡುತ್ತಿದ್ದರು. ಆಮೇಲೆ ಬನ್ನಿ ಅಡ್ಡಾಡಿಕೊಂಡು ಕೆಳಗೆ ಹೋಗಿ ಕಾಫಿ ಕುಡಿದುಕೊಂಡು ಬರೋಣ ಎಂದು ಅವರಿಬ್ಬರನ್ನೂ ಕರೆದುಕೊಂಡು ಮೆಟ್ಟಲಿಳಿದರು.

ಬೆಳಿಗ್ಗೆ ಭಾನುವಾರವೇ ಯೂನಿವರ್ಸಿಟಿಯಲ್ಲಿ ವಿಚಾರ ಸಂಕಿರಣ ಆಯೋಜಿತವಾಗಿದ್ದದ್ದು. ಭಾನುವಾರವಾದದ್ದರಿಂದ ಮೌಲ್ಯಮಾಪನಕ್ಕೂ ಒಂದು ರೀತಿಯಲ್ಲಿ ರಜೆಯೇ. ಮಮತಾ ಅವರು ಭಾಗವಹಿಸಬೇಕಾಗಿದ್ದದ್ದು ಮಧ್ಯಾಹ್ನದ ಅಧಿವೇಶನದಲ್ಲಿಯಾದರೂ ಬೆಳಿಗಿನ ಅಧಿವೇಶನಕ್ಕೂ ಹೋಗೋಣ ಎಂದು ವಸುಂಧರಾ ಮತ್ತು ಹೇಮಾರನ್ನು ಕರೆದುಕೊಂಡು ಒಂದು ಟ್ಯಾಕ್ಸಿ ಮಾಡಿಕೊಂಡು ಹೋದರು. ಉಪಾಹಾರದ ವ್ಯವಸ್ಥೆ ಇದ್ದರೂ ಇವರುಗಳು ಉಪಾಹಾರ ಮಾಡಿಕೊಂಡೇ ಹೋಗಿದ್ದರಿಂದ ಕೇವಲ ಕಾಫಿ ತೆಗೆದುಕೊಂಡರು. ಕಾಫಿ ಕುಡಿದು ಅಲ್ಲಿ ಕುಳಿತಿದ್ದಾಗ ಅಲ್ಲಿಯೇ ಕುಳಿತಿದ್ದ ಡಾ. ಅಶೋಕ ಮಹಾಪಾತ್ರ ಅವರು ಹೇಮಾಳನ್ನು ನೋಡಿ ಹತ್ತಿರ ಬಂದರು. "ವಾಟ್ ಎ ಸರ್ಪ್ರೈಸ್ ಯೂ ಆರ್ ಹಿಯರ್?" ಎಂದು ಕೇಳಿದರು. ಹೇಮಾ ಮೌಲ್ಯಮಾಪನ ಕೆಲಸಕ್ಕೆ ಬಂದಿರುವುದಾಗಿ ಹೇಳಿ ತನ್ನ ಪಕ್ಕದಲ್ಲೇ ಕುಳಿತಿದ್ದ ಮಮತಾ ಮೇಡಮ್ ಅವರನ್ನು ಪರಿಚಯಿಸಿ "ಷಿ ವಾಸ್ ಮೈ ಟೀಚರ್ ಅಟ್ ತುಮಕೂರ್ ಡಿಗ್ರೀ ಕಾಲೇಜ್" ಎಂದು ಹೇಳಿದಳು. ಡಾ. ಮಮತಾ– "ಡಾಕ್ಟರೇ ನೀವು ಹಾಸನಕ್ಕೆ ನಮ್ಮ ಕಾಲೇಜಿಗೆ ಯೂನಿವರ್ಸಿಟಿಯ ಕೆಲಸಕ್ಕಾಗಿ ಬಂದಿದ್ದಾಗ ನಿಮ್ಮನ್ನು ಪ್ರಿನ್ಸಿಪಾಲರ ಕೊಠಡಿಯಲ್ಲಿ ನೋಡಿದ್ದೆ. ಆದರೆ ಪರಿಚಯವಾಗಿರಲಿಲ್ಲ" ಎಂದರು. ಆ ಮೇಲೆ ಹೇಮಾ ವಸುಂಧರಾಳನ್ನು "ನನ್ನ ಕ್ಲೋಸ್ ಫ್ರೆಂಡ್ ಅಂಡ್ ಲೆಕ್ಚರರ್ ಇನ್ ಕನ್ನಡ ಅಟ್ ಬೇಲೂರ್ ಡಿಗ್ರೀ ಕಾಲೇಜ್" ಎಂದು ಪರಿಚಯಿಸಿದಳು. ಆಮೇಲೆ ಹೇಮಾ "ಮಧ್ಯಾಹ್ನದ ಗೋಷ್ಠಿಯ ಅಧ್ಯಕ್ಷತೆ ನಮ್ಮ ಮ್ಯಾಮ್‌ದು" ಎಂದಳು. "ಹೌದು ಇನ್ವಿಟೇಷನ್ ನೋಡಿದ್ದೆ. ಇವರೇ ಆ ಮಮತಾ ಅಂತ ಗೊತ್ತಿರಲಿಲ್ಲ. ವೆರಿ ನೈಸ್ ಮೇಡಮ್." ಎಂದರು ಆಮೇಲೆ ಡಾ. ಮಹಾಪಾತ್ರ ಅವರು– "ಬೈ ದಿ ಬೈ ಹೇಮಾ ನಿಮಗೊಂದು ಗುಡ್ ನ್ಯೂಸ್ ಇದೆ. ನಿಮ್ಮ ಥೀಸಿಸ್ ಬಗ್ಗೆ ಒಬ್ಬ ಮೌಲ್ಯಮಾಪಕರ ಒಪೀನಿಯನ್ ಬಂದಿದೆ. ಅತ್ಯಂತ ಫೇವರಬಲ್ ಆಗಿದೆ. ಬಹಳ ಮೆಚ್ಚಿಕೊಂಡಿದ್ದಾರೆ.

ಇನ್ನೊಬ್ಬರ ಒಪೀನಿಯನ್ ಬರಬೇಕಾಗಿದೆ. ಇನ್ನು ಒಂದು ತಿಂಗಳಲ್ಲಿ ಅದೂ ಬರಬಹುದು." ಎಂದರು. ಹೇಮಾಳಿಗೆ ತುಂಬಾ ಸಂತಸವಾಯಿತು. ಮಹಾಪಾತ್ರ ಅವರು ಮಮತಾ ಅವರಿಗೆ– "ನಿಮ್ಮ ಸೆಷನ್ ಮುಗಿದ ಕೂಡಲೇ ಹೊರಟುಬಿಡಬೇಡಿ. ನನ್ನ ಮನೆ ಇಲ್ಲೇ ಇದೆ. ನನ್ನ ಕಾರಲ್ಲೇ ಹೋಗೋಣ. ಹೇಮಾಗೆ ಗೊತ್ತಿದೆ. ನಮ್ಮ ಮನೆಯಲ್ಲಿ ಜೊತೆಯಲ್ಲೇ ಟೀ ತೆಗೆದುಕೊಳ್ಳೋಣ. ಈಗಲೇ ಹೇಳಿದ್ದೀನಿ" ಎಂದರು. "ಅದೆಲ್ಲ ಯಾಕೆ ಸರ್" ಎಂದು ಮಮತಾ ಹೇಳಿದಾಗ "ಹೇಮಾ ಅಂತೂ ಸಿಗುತ್ತಿರುತ್ತಾರೆ. ಆದರೆ ನೀವು ಮತ್ತು ವಸುಂಧರಾ ಮತ್ತೆ ಸಿಗುವುದು ಯಾವಾಗಲೋ ಏನೋ. ಆದ್ದರಿಂದ ಸಂಕೋಚ ಮಾಡಿಕೊಳ್ಳಬೇಡಿ. ದಯವಿಟ್ಟು ಬನ್ನಿ" ಎಂದರು. "ಥ್ಯಾಂಕ್ ಯೂ ಸರ್" ಎಂದು ಮಮತಾ ಹೇಳಿದರು.

ವಿಚಾರ ಸಂಕಿರಣಕ್ಕೆ ಸಾಕಷ್ಟು ಜನ ಬಂದಿದ್ದರು. ಚರ್ಚೆಗಳು ಬಹಳ ಚೇತೋಹಾರಿಯಾಗಿದ್ದುವು. ಮಧ್ಯಾಹ್ನದ ಊಟದ ನಂತರ ಎರಡನೇ ಗೋಷ್ಠಿ ಪ್ರಾರಂಭವಾಯಿತು. "ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ" ಎಂಬುದು ಚರ್ಚೆಗಿದ್ದ ವಿಷಯ. ಇಬ್ಬರು ವಿದ್ವಾಂಸರು – ಅದರಲ್ಲಿ ಒಬ್ಬರು ಮಹಿಳೆ ತಮ್ಮ ವಿಚಾರಗಳನ್ನು ಮಂಡಿಸಿದರು. ಡಾ. ಮಮತಾ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೆಣ್ಣಿನ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಸಮಾಜ ಹೇಗೆ ದ್ವಂದ್ವ ಮಾನದಂಡಗಳನ್ನು ಅನುಸರಿಸಿಕೊಂಡು ಬಂದಿದೆ ಎಂಬುದನ್ನು ವಿಸ್ತಾರವಾಗಿ ಪ್ರಸ್ತಾಪಿಸಿದರು. ಗಂಡು ಹಲವು ಹೆಣ್ಣುಗಳೊಂದಿಗೆ ಸಂಬಂಧ ಹೊಂದಿದ್ದರೆ ಅದನ್ನು ರಸಿಕತೆ ಎಂದು ಪ್ರಶಂಸಾತ್ಮಕವಾಗಿ ಇಲ್ಲವೆ ಮೆಚ್ಚುಗೆಯ ದೃಷ್ಟಿಯಿಂದ ನೋಡುವುದು. ಅದೇ ಹೆಣ್ಣು ಆ ರೀತಿ ಇದ್ದರೆ ಅವಳನ್ನು ಕುಲಟೆ ಜಾರೆ ಮುಂತಾಗಿ ನಿಂದನಾತ್ಮಕವಾಗಿ ನೋಡುವುದು ಮೊದಲಿನಿಂದಲೂ ಬಂದಿದೆ. ಹೆಂಡತಿ ಮಾತ್ರ ಗಂಡನಿಗೆ ನಿಷ್ಠಳಾಗಿರಬೇಕು ಎಂದು ಬಯಸುವ ಸಮಾಜ ಅದೇ ನಿಷ್ಠೆಯನ್ನು ಗಂಡನಾದವನು ತನ್ನ ಹೆಂಡತಿಯ ಬಗ್ಗೆಯೂ ಹೊಂದಿರಬೇಕೆಂದು ನಿಷ್ಠುರವಾಗಿ ಹೇಳುವುದಿಲ್ಲ. ಅದನ್ನು ಕಡೆಗಣಿಸುತ್ತಾ ಬಂದಿದೆ. ಅಥವಾ ಹಗುರವಾಗಿ ತೆಗೆದುಕೊಂಡಿದೆ. ಸಮಾಜದ ದೃಷ್ಟಿಯೇನೋ ಹೀಗಿದೆ. ಉನ್ನತ ವಾದ ಮೌಲ್ಯಪ್ರಜ್ಞೆ ಇರುವ ಒಬ್ಬ ಸೃಜನಶೀಲ ಲೇಖಕನ ದೃಷ್ಟಿ ಕೂಡ ಅದನ್ನೇ ಬಿಂಬಿಸಬಾರದು. ಬಿಂಬಿಸಿದರೆ ಪ್ರಯೋಜನ ಏನುಬಂತು. ಹೊಸ ಮೌಲ್ಯವನ್ನು ಅವನು ಕೊಡಬೇಕಾಗುತ್ತೆ. ಉದಾಹರಣೆಗೆ ಕಾರಂತರ ಅಳಿದ ಮೇಲೆ ಕಾದಂಬರಿಯಲ್ಲಿ ಬರುವ ಯಶವಂತರು ಸರಸಿ ಎಂಬುವಳೊಂದಿಗೆ ಹೊಂದಿದ್ದ ಸಂಬಂಧವನ್ನೇನೂ ಟೀಕಿಸುವುದಿಲ್ಲ. ಒಂದು ರೀತಿಯಲ್ಲಿ ಅದಕ್ಕೆ ಲೇಖಕರ ಸಮರ್ಥನೆ ಇದೆ. ಆದರೆ ಅದೇ ಯಶವಂತರ ಹೆಂಡತಿ ಧಾರೇಶ್ವರದ ವಕೀಲನೊಂದಿಗೆ ಇಟ್ಟುಕೊಂಡಿದ್ದ ಸಂಬಂಧದ ಬಗ್ಗೆ ಅವಳು ದಾರಿತಪ್ಪಿದವಳು ಎಂಬ ರೀತಿಯ ಚಿತ್ರಣವಿದೆ. ಸ್ತ್ರೀ ಸಮಾನತೆ ಸ್ತ್ರೀ ಸ್ವಾತಂತ್ರ್ಯಗಳನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ಬರಹಗಳಲ್ಲಿ, ಭಾಷಣಗಳಲ್ಲಿ ಎತ್ತಿ ಹಿಡಿಯುವ ಲೇಖಕರು ವೈಯಕ್ತಿಕ ಜೀವನದಲ್ಲಿ ಇಬ್ಬರು ಮೂರು ಜನ ಹೆಂಡತಿಯರನ್ನು ಕಟ್ಟಿಕೊಂಡಿರುತ್ತಾರೆ" ಎಂದೆಲ್ಲಾ ತಮ್ಮ ವಿಚಾರಗಳನ್ನು ಮಂಡಿಸಿದರು. ಅವರ ಭಾಷಣದ

ಬಗ್ಗೆ ಅನೇಕರು ಮೆಚ್ಚಿಗೆ ವ್ಯಕ್ತಪಡಿಸಿದರು.

ವಿಚಾರ ಸಂಕಿರಣದ ನಂತರದಲ್ಲಿ ಡಾ. ಅಶೋಕ ಮಹಾಪಾತ್ರ ಅವರು ಮೂರೂ ಜನರನ್ನು ತಮ್ಮ ಮನೆಗೆ ಕರೆದೊಯ್ದು ತಮ್ಮ ತಾಯಿಗೆ ಪರಿಚಯಿಸಿದರು. ಹೇಮಾ ಅಶೋಕರ ತಾಯಿಗೆ "ಡಾ. ಮಮತಾ ಮೇಡಮ್ ನಮ್ಮಿಬ್ಬರ ಟೀಚರ್" ಎಂದು ಹೇಳಿದಳು. ಅಶೋಕರ ತಾಯಿ ಮಮತಾಗೆ 'ಯುವರ್ ಸ್ಟೂಡೆಂಟ್ ಈಸ್ ಎ ವೆರಿ ನೈಸ್ ಅಂಡ್ ಅಫೆಕ್ಷನೇಟ್ ಗರ್ಲ್' ಎಂದು ಮುಗುಳ್ನಕ್ಕರು. ತಿನ್ನಲು ಸ್ನ್ಯಾಕ್ಸ್ ಮತ್ತು ಚಹಾ ತಂದುಕೊಟ್ಟರು. ಮಹಾಪಾತ್ರ ಅವರು ಮಮತಾ ಅವರ ಭಾಷಣದ ಬಗ್ಗೆ "ಬಹಳ ಬೋಲ್ಡ್ ಆಗಿ ನಿಮ್ಮ ವಿಚಾರ ಮಂಡಿಸಿದಿರಿ. ಮತ್ತು ಅವೆಲ್ಲ ಫ್ಯಾಕ್ಟ್ಸ್ ಕೂಡ. ನಿಮ್ಮ ಅನಾಲಿಸಿಸ್ ತುಂಬಾ ಚೆನ್ನಾಗಿತ್ತು. ಲೇಖಕರ ಕಡೆಯಿಂದ ನಿಮ್ಮ ವಿಚಾರಗಳ ಬಗ್ಗೆ ಟೀಕೆಗಳೂ ಬರಬಹುದು" ಎಂದರು. ಆಮೇಲೆ "ನನಗೂ ಸಿಟಿಯಲ್ಲಿ ಸ್ವಲ್ಪ ಕೆಲಸ ಇದೆ. ನಿಮ್ಮನ್ನೂ ಹಾಗೇ ಸಿಟಿಗೆ ತಲುಪಿಸುತ್ತೇನೆ ನಡೆಯಿರಿ" ಎಂದು ಅವರುಗಳನ್ನು ಹೋಟೆಲ್ ಹತ್ತಿರ ಬಿಟ್ಟು ಬೀಳ್ಕೊಂಡರು.

ಅವರು ಅತ್ತ ಹೋದ ಮೇಲೆ ಊಟದ ನಂತರದಲ್ಲಿ ಮೂವರೂ ತಮ್ಮ ಕಷ್ಟ ಸುಖಗಳ ವಿಚಾರ ಕಾಲೇಜಿನ ಕೆಲಸದ ವಿಚಾರ ಎಲ್ಲ ಮಾತಾಡುತ್ತ ಕುಳಿತರು. ವಸುಂಧರಾ ಮತ್ತು ಹೇಮಾ ಇಬ್ಬರೂ ಮಮತಾ ಅವರ ವಿಚಾರಗಳ ಬಗ್ಗೆ ನೀವು ಹೇಳಿದ್ದೆಲ್ಲವೂ ಅತ್ಯಂತ ವಾಸ್ತವ ಮೇಡಮ್ ಎಂದು ಹೇಳಿದರು. ಹೇಮಾಳ ಗೈಡ್ ಅಶೋಕ ಮಹಾಪಾತ್ರ ಅವರ ಸ್ನೇಹ ಸ್ವಭಾವ, ಒಳ್ಳೆಯತನ ಕುರಿತು ಮಮತಾ ಅವರು ಬಹಳ ಹೊಗಳಿದರು. "ಅದೇನು ಅವರಿಗೆ ಮದುವೆ ಆಗಿಲ್ಲವೇನು? ಅವರ ತಾಯಿನೇ ಚಹಾ ಎಲ್ಲ ತಂದು ಕೊಟ್ಟರಲ್ಲಾ" ಎಂದು ಕೇಳಿದರು. ಆಗ ಹೇಮಾ "ಇಲ್ಲ ಮೇಡಮ್ ಅವರು ಮದುವೆಯಾಗಬೇಕೆಂದಿದ್ದ ಅವರ ಕ್ಲಾಸ್ ಮೇಟ್ ಮತ್ತು ಲವರ್ ಪಿಕ್ನಿಕ್‌ಗೆ ಅಂತ ಹೋಗಿದ್ದಾಗ ಅವರ ಮಿನಿ ಬಸ್‌ಗೆ ಆಕ್ಸಿಡೆಂಟಾಗಿ ಸ್ಪಾಟ್‌ನಲ್ಲೇ ತೀರಿಕೊಂಡರಂತೆ. ಅದೇ ನೋವಿನಲ್ಲಿ ಅವರು ತಮ್ಮ ತಾಯ್ನಾಡನ್ನೇ ಬಿಟ್ಟು ಇಲ್ಲಿ ಯೂನಿವರ್ಸಿಟಿಯಲ್ಲಿ ರೀಡರ್ ಆಗಿ ಕೆಲಸ ಸಿಕ್ಕಿದ ಕೂಡಲೇ ಇಲ್ಲಿಗೇ ಬಂದುಬಿಟ್ಟರಂತೆ. ಮದುವೆ ವಿಷಯ ಎತ್ತಿದರೆ ಸಾಕು ಆ ಜಾಗವನ್ನೇ ಬಿಟ್ಟು ಎದ್ದುಹೋಗಿಬಿಡುತ್ತಾರಂತೆ ಎಂದು ಹೇಳಿದಳು. ಆದರೆ ವ್ಯಕ್ತಿ ತುಂಬಾ ಸರಳ. ಸಜ್ಜನರಲ್ಲಿ ಸಜ್ಜನರು. ಇಂಥವರು ನನಗೆ ಗೈಡಾಗಿ ಸಿಕ್ಕಿದ್ದು ನಿಜಕ್ಕೂ ನನ್ನ ಪುಣ್ಯ" ಎಂದಳು. "ಅವರ ತಾಯಿಯೂ ಅಷ್ಟೆ. ನನ್ನನ್ನು ಕಂಡರೆ ಬಹಳ ವಿಶ್ವಾಸ ತೋರಿಸುತ್ತಾರೆ" ಅಂದಳು. ಮಾತಿನ ಮಧ್ಯೆ ಮಮತಾ ಅವರು ಹೇಮಾಳಿಗೆ "ಅಂದಹಾಗೆ ನಿನ್ನ ಡೈವರ್ಸ್ ವಿಷಯ ಏನಾಯಿತು? ಎಂದು ಕೇಳಿದರು. ಹೇಮಾ – "ಜಡ್ಜ್‌ಮೆಂಟ್ ಬಂದಾಯಿತು. ಡೈವರ್ಸ್ ಆಯಿತು ಮೇಡಮ್" ಎಂದು ಕುಗ್ಗಿದ ದನಿಯಲ್ಲಿ ಹೇಳಿದಳು. ಮಮತಾ ಅವರು "ಅಯ್ಯೋ ಅದಕ್ಕೆ ನೀನು ಯಾಕೆ ಹಾಗೆ ನೀನೇ ಏನೋ ಭಾರೀ ಅಪರಾಧ ಮಾಡಿದವರ ಹಾಗೆ, ಮಾಡಬಾರದ್ದು ಮಾಡಿದವರ ಹಾಗೆ ಬೇಜಾರು ಮಾಡಿಕೊಳ್ತೀಯಾ? ನನ್ನ ವೈಯಕ್ತಿಕ ವಿಚಾರ ನಿಮಗೆ ಗೊತ್ತಿದೆಯೋ ಇಲ್ಲವೋ. ನಾನು ಯಾವತ್ತೂ ಹೇಳಿಕೊಂಡಿಲ್ಲ. ಈಗ ನಿಮ್ಮ ಹತ್ತಿರ ಹೇಳಿಕೊಳ್ಳಬಹುದು.

ಯಾಕೆ ಅಂದರೆ ನೀವು ಈಗ ಕೇವಲ ನನ್ನ ವಿದ್ಯಾರ್ಥಿನಿಯರಲ್ಲ. ನನ್ನ ಹಾಗೆ ಹೆಣ್ಣು ಜೀವಗಳು. ಅದರಲ್ಲೂ ನೊಂದ ಹೆಣ್ಣುಜೀವಗಳು ಮತ್ತು ಆತ್ಮೀಯರು. ನೋಡು ಹೇಮಾ, ನನಗೂ ನಿನ್ನ ಹಾಗೇ ನನ್ನ ಎಂ.ಎ. ಮುಗಿದು ಕೆಲಸ ಸಿಕ್ಕಿ ಒಂದು ಮೂರು ವರ್ಷ ಸರ್ವಿಸ್ ಆದ ಮೇಲೆ ಮದುವೆ ಆಗಿತ್ತು. ಅದು ನಮ್ಮ ಅಪ್ಪ ಅಮ್ಮ ನಮ್ಮ ಕಮ್ಯುನಿಟಿಯಲ್ಲೇ ನೋಡಿ ಮಾಡಿದ ಅರೇಂಜ್ಡ್ ಮ್ಯಾರೇಜ್. ನನ್ನ ಕೈ ಹಿಡಿದವರು ಒಂದು ಖಾಸಗಿ ಅನುದಾನಿತ ಕಾಲೇಜಿನಲ್ಲಿ ಮ್ಯಾಥೆಮ್ಯಾಟಿಕ್ಸ್ ಲೆಕ್ಚರರ್ ಆಗಿದ್ದವರು. ಅವರ ಜೊತೆ ನಾನು ಒಂದೈದು ವರ್ಷ ಹಾಗೂ ಹೀಗೂ ಸಂಸಾರ ನಡೆಸಿದೆ. ನಮಗೆ ಒಂದು ಮಗುವೂ ಆಯಿತು. ಅವನೇ ನೀವಿಬ್ಬರೂ ನೋಡಿರುವ ನನ್ನ ಮಗ ವಸಂತ್. ಆದರೆ ನನ್ನ ದಾಂಪತ್ಯ ಜೀವನದಲ್ಲಿ ನನಗೆ ಒಂದು ದಿನವೂ ನೆಮ್ಮದಿ ಅನ್ನುವುದು ಸಿಕ್ಕಲಿಲ್ಲ. ನಮ್ಮ ಅತ್ತೆಮನೆಯರು ನನ್ನ ಜೊತೆ ಹೊಂದಿಕೊಳ್ಳಲೇ ಇಲ್ಲ. ಅವರ ಮನೆಗೆ ಕೆಲಸ ಮಾಡೋದಕ್ಕೆ ಬಂದ ಒಬ್ಬ ಆಳು ಎನ್ನುವ ರೀತಿಯಲ್ಲೇ ನಡೆಸಿಕೊಂಡರು. ಇನ್ನು ನನ್ನ ಗಂಡ ಅನ್ನಿಸಿಕೊಂಡ ವ್ಯಕ್ತಿ ಲೆಕ್ಕದ ಮೇಷ್ಟ್ರಲ್ಲವಾ. ಯಾವಾಗಲೂ ಕಾಸಿಗೆ ಕಾಸು ಲೆಕ್ಕ ಹಾಕುವ ಮನುಷ್ಯ. ಮಹಾ ಕಂಜೂಸ್. ಸದಾ ಪಿ.ಯು.ಸಿ. ಮತ್ತು ಡಿಗ್ರೀ ಹುಡುಗರಿಗೆ ಕಾಲೇಜಿಗೆ ಹೋಗಕ್ಕೆ ಮುಂಚೆ, ಕಾಲೇಜಿನಿಂದ ಬಂದ ಮೇಲೆ ಬ್ಯಾಚ್ ಮೇಲೆ ಬ್ಯಾಚ್ ಟ್ಯೂಷನ್ ಮಾಡ್ತಾ ಕೂತುಕೊಂಡರು ಅಂದರೆ, ಅಥವಾ ಷೇರ್ ಪೇಟೆ ಹೇಗಿದೆ ಅಂತ ನೋಡಿಕೊಂಡು ಕೂತುಬಿಟ್ಟರೆ ಹೆಂಡತಿ ಅಂತ ಒಬ್ಬಳು ಪ್ರಾಣಿ ಇದ್ದಾಳೆ ಎನ್ನುವುದು ನೆನಪಿಗೇ ಬರುತ್ತಿರಲಿಲ್ಲ. ಅಲ್ಲದೆ ಮಹಾ ಸಂದೇಹದ ಪ್ರಾಣಿ. ಒಂದು ಸಲ ಯಾವುದೋ ತರಗತಿಯ ಕ್ಲಾಸ್ ಸೋಷಿಯಲ್ಸ್ ಮುಗಿಸಿಕೊಂಡು ಮನೆಗೆ ಬರೋದು ಸ್ವಲ್ಪ ತಡ ಆಯ್ತು. ಅದಕ್ಕೆ ಏನು ಯಾರ ಜೊತೆ ಹೋಗಿದ್ದೆ, ಯಾಕೆ ಲೇಟಾಯ್ತು ಹೀಗೆ ಎಲ್ಲಾ ಥರದ ಎನ್‌ಕ್ವೈರಿ ಶುರು ಮಾಡ್ತೋರು. ನನ್ನ ಜೆಂಟ್ಸ್ ಕಲೀಗ್ಸ್ ಎಲ್ಲಾದರೂ ಸಿಕ್ಕಿ ಸ್ವಲ್ಪ ಹೊತ್ತು ಮಾತಾಡ್ತಾ ನಿಂತುಕೊಂಡರೂ ಅನುಮಾನವೇ. ಒಂದು ಸಿನಿಮಾ, ಸಂಗೀತ, ಪುಸ್ತಕ ಓದೋದು, ಎಲ್ಲದರೂ ಪ್ರವಾಸಕ್ಕೆ ಹೋಗೋದು ಇಂಥ ಯಾವ ಒಳ್ಳೆಯ ಅಭಿರುಚಿಗಳು, ಆಸಕ್ತಿಗಳು ಇರಲಿಲ್ಲ. ದುರಭ್ಯಾಸಗಳೂ ಇರಲಿಲ್ಲ ಅಂತ ಇಟ್ಟುಕೋ. ಅವರ ಕಲೀಗೇ ಒಬ್ಬರು ಇಂಗ್ಲಿಷ್ ಲೆಕ್ಚರ್ 'ಏನಯ್ಯಾ ಮನೆ ಮುಂದೆ ಆಪಾಟಿ ಸೈಕಲ್‌ಗಳು ನಿಂತಿದ್ದುವು. ನಿಮ್ಮ ಮನೆ ಒಳಕ್ಕೆ ಬರೋವಾಗ ಒಬ್ಬರು ನನ್ನನ್ನು ಏನು ಸಾರ್ ಇದು ಸೈಕಲ್ ಷಾಪಾ? ಅಂತ ಕೇಳಿದರು' ಎಂದು ಗೇಲಿ ಮಾಡಿದರು. ಆದರೆ ಅದೆಲ್ಲಾ ಅವರಿಗೆ ಲೆಕ್ಕ ಇರಲಿಲ್ಲ. ಹೆಂಡತಿ ಹಾಸಿಗೆ ಸುಖಕ್ಕೆ ಮಾತ್ರ ಬೇಕು ಎನ್ನುವ ರೀತಿಯ ಮನುಷ್ಯನೊಂದಿಗೆ ನನಗೆ ಬದುಕು ಭಾರ ಅನ್ನಿಸಲು ಶುರು ಆಯಿತು. ನಾನು ಹೊಸ ಹೊಸ ಪುಸ್ತಕ ಕೊಳ್ಳೋದು, ಓದು ಬರಹ ಈ ಅಭಿರುಚಿ ಇರೋಳು. ಬಹುಶಃ ನನ್ನ ರೀತಿಯೂ ಆ ಮನುಷ್ಯನಿಗೆ ಕಷ್ಟ ಕೊಟ್ಟಿರಬೇಕು. ಇಂಥ ಮನುಷ್ಯನ ಜೊತೆ ಜೀವಮಾನ ಪರ್ಯಂತ ಬಾಳ್ವೆ ಮಾಡಿಕೊಂಡಿರೋದು ಹೇಗಪ್ಪಾ ಅನ್ನಿಸಿ ಕೊನೆಗೆ ನಾವಿಬ್ಬರೂ ಈಗ ನೀನು ತೊಗೊಂಡೆಯಲ್ಲಾ ಹಾಗೆ ಮ್ಯೂಚುಯಲ್ ಕನ್ಸೆಂಟ್ ಮೇಲೆ ಡೈವರ್ಸ್ ತೊಗೊಂಡು ಬಿಟ್ಟೆವು. ಮಗೂ ನನ್ನ ಹತ್ತಿರವೇ ಇರಬೇಕು

ಅಂತ ನಾನು ಪಟ್ಟು ಹಿಡಿದೆ. ಆಗ ವಸಂತನಿಗೆ ನಾಲ್ಕು ವರ್ಷ. ಹೇಗೂ ಡೈವರ್ಸ್ ಆದ ಮೇಲೆ ಬೇರೆ ಮದುವೆ ಮಾಡಿಕೊಳ್ಳುವ ಯೋಚನೆ ಇದ್ದ ಮನುಷ್ಯನಲ್ಲವಾ. ಆಗ ಈ ಮಗನೇ ಒಂದು ಪ್ರಾಬ್ಲಮ್ ಆಗಬಹುದು ಅಂತಲೋ ಏನೋ ಅದಕ್ಕೆ ಏನೂ ತಕರಾರು ಮಾಡಲಿಲ್ಲ. ಇದೆಲ್ಲ ಆಗಿ ಒಂದು ಹತ್ತು ವರ್ಷದ ಮೇಲೇ ಆಯಿತೇನೋ. ಅಲ್ಲಿಗೆ ಆ ಅಧ್ಯಾಯ ಮುಗಿಯಿತು.

ನಮ್ಮ ತಂದೆ ತಾಯಿ "ನಿನಗೇನು ಅಂಥ ವಯಸ್ಸಾಗಿರೋದು. ಬೇರೆ ಮದುವೆ ಮಾಡಿಕೋ. ನಿನಗೆ ಇಷ್ಟವಾದೋರು, ಅಭಿರುಚಿಗೆ ಹೊಂದುವವರು, ಯಾವ ಜಾತಿಯವರಾದರೂ ಸರಿ; ನೀನು ಒಪ್ಪಿದವರ ಜೊತೆ ಮದುವೆ ಮಾಡುವುದಷ್ಟೇ ನಮ್ಮ ಕೆಲಸ" ಅಂತೆಲ್ಲ ಬಹಳ ಒತ್ತಾಯಿಸಿದರು. ಆದರೆ ನನಗೆ ಏಕೋ ಮತ್ತೆ ಮದುವೆ ಆಗಬೇಕು ಅಂತ ಅನ್ನಿಸಲಿಲ್ಲ. ನಮ್ಮ ಅಪ್ಪ ಅಮ್ಮ ಹೇಳಿದಂಥೋರು ಒಬ್ಬರಿದ್ದರು. ಆದರೆ ಅದು ಕೆಲವು ವರ್ಷಗಳ ಹಿಂದೆ. ಅವರು ನನ್ನ ಕ್ಲಾಸ್ ಮೇಟ್. ಅವರ ಬಗ್ಗೆ ಡೀಪ್ ಲವ್ ಇತ್ತು. ಆದರೆ ಅದೊಂದು ರೀತಿಯ ಪ್ಲೆಟಾನಿಕ್ ಲವ್. ನೇರವಾಗಿ ಹೇಳಲಾಗದೆ ಪರೋಕ್ಷವಾಗಿ ಅದನ್ನು ವ್ಯಕ್ತಪಡಿಸುತ್ತಾ ಇದ್ದೆ. ಅದನ್ನು ನನ್ನ ಒಳಗೇ ಇಟ್ಟುಕೊಂಡುಬಿಟ್ಟಿದ್ದೆ. ಅದಕ್ಕೆ ಕಾರಣ ಅವರು ಬೇರೆ ಜಾತಿಯವರು. ನಮ್ಮದು ಸಮಾಜದ ದೃಷ್ಟಿಯಲ್ಲಿ ಅವರದಕ್ಕಿಂತ ಕೆಳಗಿನ ಜಾತಿ. ಅವರಿಗೆ ನನ್ನ ಪ್ರೀತಿಯ ವಿಷಯ ಹೇಳಿಕೊಳ್ಳುವ ಧೈರ್ಯ ಬರಲಿಲ್ಲ. ಅವರಿಗೂ ನನ್ನ ವಿಚಾರಕ್ಕೇ ಅದೇ ಥರಾ ಪ್ರೀತಿ ಇತ್ತು ಅಂತ ಆಮೇಲೆ ಗೊತ್ತಾಯಿತು. ಅವರದ್ದು ಅವರ ಜಾತೀಲೇ ಮದುವೆ ಆಗಿ ಎರಡು ಮಕ್ಕಳೂ ಆಯಿತು. ನನಗೂ ಆಮೇಲೆ ಮದುವೆ ಆಯ್ತಲ್ಲ. ಆಗ ಅವರು ಎಲ್ಲೋ ಬೇರೆ ಕಡೆ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಹೀಗಾಗಿ ಅವರ ಬದುಕು ಅವರದಾಯಿತು. ನನ್ನ ಓದು ಬರಹ ಕೆಲಸ ಮಗನ ಲಾಲನೆ ಪಾಲನೆ ಆಟ ಪಾಠಗಳಲ್ಲಿ ಹೇಗೋ ಕಾಲ ಕಳೀತಿತ್ತು. ಆದರೆ. ಬದುಕು ಇಷ್ಟು ಸರಳ ಅಲ್ಲ. ದೇಹದ ವಾಂಛೆಗಳು ಒಂದು ಕಡೆ ಸತಾಯಿಸುತ್ತ ಇದ್ದುವು. ಅವುಗಳನ್ನು ಹತ್ತಿಕ್ಕಲು ಬಹಳ ಪ್ರಯತ್ನಿಸಿದೆ. ಆದರೂ ಕಷ್ಟ ಅಂತ ಅನ್ನಿಸಿದ ಸಂದರ್ಭದಲ್ಲಿ ಒಂದು ದಾರಿ ಸಿಕ್ಕಿತು. ಆ ನನ್ನ ಕ್ಲಾಸ್‌ಮೇಟು ನಾನೂ ಒಂದೇ ಕಾಲೇಜಿನಲ್ಲಿ ಕೆಲಸ ಮಾಡುವ ಸಂದರ್ಭ ಒದಗಿ ಬಂತು. ನನ್ನ ವಿಷಯ ಎಲ್ಲ ಅವರಿಗೆ ಗೊತ್ತಾಗಿತ್ತು. ನಮ್ಮ ಮನದಾಳದ ಭಾವನೆಗಳನ್ನು ಯಾವುದೋ ಒಂದು ಗಳಿಗೆಯಲ್ಲಿ ಪರಸ್ಪರ ತೋಡಿಕೊಂಡೆವು. ನನಗೆ ಗಂಡನಿಂದ ದೊರೆಯಬಹುದಾದ ಸುಖ ಅವರಿಂದ ದೊರೆಯಿತು. ಆದರೆ ಅದನ್ನೊಂದು ಆಬ್ಸೆಷನ್ ಮಾಡಿಕೊಳ್ಳಲಿಲ್ಲ. ಯಾಕೆ ಅಂದರೆ ಅವರ ಸುಖೀ ಸಂಸಾರಕ್ಕೆ ನಾನು ಎಂದೂ ಕುತ್ತು ತರಬಾರದೆಂದು, ಮುಳ್ಳಾಗಬಾರದೆಂದು ದೃಢವಾಗಿ ನಿಶ್ಚಯಿಸಿದ್ದೆ. ಹಾಗಾಗಿ ನಾನು ಬೇರೆಯೇ ಉಳಿದಿರುತ್ತೀನಿ. ದೂರವೇ ಇರುತ್ತೀನಿ. ಆದರೆ ಇದೊಂದು ಮಾಯೆ. ಬರೀ ಮಾಯೆ ಅಲ್ಲ. ಎಂದೆಂದೂ ಮುಗಿಯದ ಮಾಯೆ. ಸಕಲ ಜೀವರಾಶಿಯನ್ನು ಎಡೆಬಿಡದೆ ಒಂದೇ ಸಮನೆ ಕಾಡುತ್ತಿರುವ ಮಾಯೆ. ಈ ಮಾಯೆಗೆ ನಾನು ಅಪವಾದ ಅಲ್ಲ. ನಾನೂ ಅದರ ಬಲೆಯಲ್ಲೇ ಇದ್ದೇನೆ. ಆದರೆ ಬಲೆಯ ಅಂಚಿನಲ್ಲಿ. ಸದಾ

ಓದು, ಬರಹ, ಅಧ್ಯಾಪನಗಳಲ್ಲಿ ತೊಡಗಿಸಿಕೊಂಡು ಮನಸ್ಸು ಅನ್ಯಾಕ್ರಾಂತವಾಗದಂತೆ ನೋಡಿಕೊಳ್ಳುತ್ತೇನೆ. ತೀರ ಅನಿವಾರ್ಯವೆನ್ನಿಸಿದಾಗ ಅದರ ಕರೆಗೆ ಓಗೊಟ್ಟು ಅದೊಂದು ಅಬ್ಸೆಷನ್ ಆಗದ ಹಾಗೆ ನಿಯಂತ್ರಣದಲ್ಲಿಟ್ಟುಕೊಂಡಿದ್ದೀನಿ.

ಅದಕ್ಕೇ ನಿಮ್ಮಿಬ್ಬರಿಗೂ ನಾನು ಹೇಳೋದು. ನನ್ನ ದಾರಿಯನ್ನು ನೀವು ತುಳಿಯ ಬೇಡಿ. ಅದು ನನ್ನ ಹಣೆಬರಹ. ಅದು ಆಕ್ಷೇಪಾರ್ಹ ಅಂತ ಗೊತ್ತಿದೆ. ಏಕೆಂದರೆ ನಾನು ವಿಚಾರ ಸಂಕಿರಣದಲ್ಲಿ ಹೇಳಿದ ಹಾಗೇ ಈ ಸಮಾಜದಲ್ಲಿ ಗಂಡಸರಿಗೇ ಒಂದು ಮಾನದಂಡ. ಹೆಂಗಸರಿಗೇ ಒಂದು ಮಾನದಂಡ. ಒಬ್ಬರು ತುಂಬಾ ಖ್ಯಾತ ಸಾಹಿತಿ ಇದ್ದಾರೆ. ಅವರ ಹೊರಸಂಬಂಧಗಳನ್ನೂ ಪ್ರೀತಿಯ ಅನ್ವೇಷಣೆ ಅಂತ ಕೊಂಡಾಡುವ ಈ ಸಮಾಜ ಹೆಣ್ಣಿನ ವಿಷಯಕ್ಕೆ ಅಷ್ಟೆಲ್ಲಾ ಔದಾರ್ಯ ತೋರಿಸೋಲ್ಲ. ಆದರೆ ಜೀವಿಯನ್ನು ಕಾಡುವ ಈ ಮಾಯೆ ಸಮಾಜದ ಆಕ್ಷೇಪಗಳನ್ನಾಗಲಿ, ನ್ಯಾಯ ನೀತಿಗಳನ್ನಾಗಲಿ ಲೆಕ್ಕಿಸದೆ ಬಲೆಬೀಸುತ್ತದೆ. ನಮಗೇ ಗೊತ್ತಿಲ್ಲದ ಹಾಗೆ ಮದುವೆಯಾಗದೆ ಹಾಗೇ ಇದ್ದುಬಿಡಬಲ್ಲೆವು ಅಂತೆಲ್ಲ ನಮ್ಮಲ್ಲೇ ಒಂದೊಂದು ಭ್ರಮೆ ಬೆಳೆಸಿಕೊಂಡು ಬಿಟ್ಟಿರುತ್ತೇವೆ. ಆ ಭ್ರಮೆ ಕಳಚಿಬೀಳೋ ಹೊತ್ತಿಗೆ ಕಾಲಮೀರಿಹೋಗಿ ಬಿಟ್ಟಿರುತ್ತೆ. ಹಾಗೆ ನೀವಿಬ್ಬರೂ ಭ್ರಮೆಗೆ ಬೀಳಬೇಡಿ. ನಿಮಗೆ ಸರಿಯಾದ ಸಂಗಾತಿಯ ಪ್ರಸ್ತಾಪ ಬಂದಾಗ ಅದರಿಂದ ವಿಮುಖರಾಗಬೇಡಿ. ಹೇಮಾ ಈ ಹೊತ್ತು ನಿಮ್ಮ ಗೈಡ್ ಡಾ. ಅಶೋಕ ಅವರ ಮನೆಗೆ ಹೋಗಿದ್ದಾಗ ಅವರ ತಾಯಿ ನಿನ್ನ ಬಗ್ಗೆ ಏನು ಹೇಳಿದರು ನೆನಿಸಿಕೋ. 'ಷಿ ಈಸ್ ಎ ವೆರಿ ನೈಸ್ ಅಂಡ್ ಅಫೆಕ್ಷನೆಟ್ ಗರ್ಲ್' ಅಂದರು. ಅವರಿಗೆ ನಿನ್ನ ಬಗ್ಗೆ ತುಂಬಾ ಒಳ್ಳೆಯ ಅಭಿಪ್ರಾಯ ಇದೆ. ಮಹಾಪಾತ್ರ ಅವರಿಗೂ ಮೃದುವಾದ ಭಾವನೆಗಳಿದ್ದ ಹಾಗಿದೆ. ಒಂದು ವೇಳೆ ಏನಾದರೂ ಅವರ ಕಡೆಯಿಂದಲೋ ಅವರ ತಾಯಿಯ ಕಡೆಯಿಂದಲೋ ಪ್ರಸ್ತಾಪ ಬಂದರೆ ಹಿಂದುಮುಂದೆ ನೋಡದೆ ಒಪ್ಪಿಕೊಂಡುಬಿಡು. ನಾನು ವಾಸ್ತವವಾಗಿ ನಿಮ್ಮಿಬ್ಬರಿಗೂ ನನ್ನ ಜೊತೆ ಇರಲು ಹೇಳಿದ್ದು ಈ ವಿಷಯ ಮಾತಾಡೋಕೇನೆ. ಅಶೋಕರ ವಿಷಯ ನನಗೆ ಗೊತ್ತಿಲ್ಲ. ಆದರೆ ಹೇಮಾ, ವಸುಂಧರಾ ನಿಮ್ಮಿಬ್ಬರ ಸಾಂಸಾರಿಕ ಬದುಕು ಈಗ ಛಿದ್ರಗೊಂಡಿದೆ. ಹೇಮಾ ನಿನ್ನದು ಮದುವೆಯಾಗಿಯೂ ನನ್ನ ಹಾಗೇ ಇಜ್ಜೋಡು ದಾಂಪತ್ಯವಾಗಿ ಛಿದ್ರಗೊಂಡಿದ್ದರೆ ವಸುಂಧರಾಳದು ಇನ್ನೇನು ಮದುವೆಯಾಗಬೇಕೆನ್ನುವಾಗಲೇ ಎರಡು ಸಲವೂ ಬೇರೆ ಬೇರೆ ಕಾರಣಕ್ಕೆ ಮುರಿದು ಬಿದ್ದಿದೆ. ಈಗ ಇಬ್ಬರದೂ ಒಂದೇ ದೋಣಿಯ ಪಯಣ. ನಿನಗೆ ಅಸ್ಪಷ್ಟವಾದ ರೀತಿಯಲ್ಲಿ ಏನೋ ಒಂದು ಬೆಳಕಿನ ಗೆರೆ ಗೋಚರಿಸುತ್ತಾ ಇದೆ. ವಸುಂಧರಾಳ ಎದುರು ಸದ್ಯಕ್ಕೆ ಅಂಥ ಬೆಳಕಿನ ಗೆರೆ ಯಾವುದೂ ಗೋಚರಿಸುತ್ತಿಲ್ಲ. ಆದರೆ ನನ್ನ ಮನಸ್ಸಿನಲ್ಲಿ ಏನೋ ಒಂದು ಇದೆ. ಅದನ್ನು ಇವತ್ತು ಹೇಳಲ್ಲ. ಅವಳು ಈಗ ತಾನೆ ತಾಯಿಯನ್ನು ಕಳೆದುಕೊಂಡಿದ್ದಾಳೆ. ಆ ದುಃಖದಿಂದ ಮೊದಲು ಹೊರಕ್ಕೆ ಬರಲಿ. ಅಷ್ಟು ಹೊತ್ತಿಗೆ ನನ್ನ ಮನಸ್ಸಿನಲ್ಲಿ ಹೊಳೆದಿರುವ ಬೆಳಕಿನ ಗೆರೆ ಕಣ್ಣೆದುರು ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತೆ ಅಂತ ಅಂದುಕೊಂಡಿದ್ದೀನಿ." ಎಂದು ಹೇಳಿದರು.

ಆಗ ಹೇಮಾ– "ನೀವು ಹೇಳಿದಿರಲ್ಲ ಮೇಡಮ್ ಈ ಸಮಾಜದಲ್ಲಿ ಗಂಡಸರಿಗೇ

ಒಂದು ಮಾನದಂಡ, ಹೆಂಗಸರಿಗೇ ಒಂದು ಮಾನದಂಡ ಎನ್ನುವ ಮಾತು ನಿಜ. ನಾನು ನನ್ನ ಯಜಮಾನರನ್ನು ಇದೇ ಮಾತು ಕೇಳಿದ್ದೆ. ಈಗ ನೀವು ಹೆಂಡತಿ ಇದ್ದೂ ಹೊರಗಿನ ಸಂಬಂಧ ಇಟ್ಟುಕೊಳ್ಳೋದನ್ನು ನಾನು ಸಹಿಸಬೇಕು ಅಂತ ನಿರೀಕ್ಷಿಸುತ್ತೀರಿ. ಆದರೆ ಒಂದು ವೇಳೆ ನಾನೇ ನಿಮ್ಮ ಹಾಗೆ ಮಾಡಿದ್ದರೆ ನೀವು ಸುಮ್ಮನೆ ಇರುತ್ತಾ ಇದ್ದಿರಾ ಅಂತ? ಅದಕ್ಕೆ ಅವರ ಬಾಯಿಂದ ಮಾತೇ ಹೊರಡಲಿಲ್ಲ" ಎಂದಳು. ಮಮತಾ – "ಅಯ್ಯೋ ಹೇಮಾ ಇದು ಇವತ್ತಿನದಲ್ಲ. ಅನಾದಿ ಕಾಲದ್ದು. ಹೆಣ್ಣಿನ ನ್ಯಾಯಯುತವಾದ ಪ್ರಶ್ನೆಗೆ ಉತ್ತರ ಕೊಡೋ ಗೋಜಿಗೇ ಹೋಗಿಲ್ಲ ಗಂಡಸರು. ಅಥವಾ ಅವರಿಗೆ ಕೊಡಕ್ಕಾಗಲ್ಲ. ಮಹಾಭಾರತದಲ್ಲಿ ದ್ರೌಪದಿ ತುಂಬಿದ ಸಭೆಯಲ್ಲಿ ಅಲ್ಲಿ ಸೇರಿದ್ದ ಭೀಷ್ಮ, ದ್ರೋಣ, ಕೃಪ ಮುಂತಾದ ಹಿರಿಯರಿಗೆ ಹಾಕಿದ ಒಂದು ಲಾಪಾಯಿಂಟ್–ನ್ಯಾಯಯುತವಾದ ಪ್ರಶ್ನೆ– 'ಧರ್ಮರಾಯ ಮೊದಲು ತನ್ನನ್ನು ಪಣ ಇಟ್ಟು ಸೋತುಕೊಂಡ ಮೇಲೆ ನನ್ನನ್ನು ಅವನು ಪಣ ಇಡಲು ಹೇಗೆ ಸಾಧ್ಯ?' ಅನ್ನುವ ಪ್ರಶ್ನೆಗೆ ಅವರು ಕೊನೆಗೂ ಉತ್ತರವನ್ನೇ ಕೊಡಲಿಲ್ಲ. 'ಸ್ತ್ರೀಮತವನುತ್ತರಿಸಲಾಗದೆ' ಅಂತ ಕುಮಾರವ್ಯಾಸನ ದ್ರೌಪದಿ ಆರ್ತಳಾಗಿ ಕೇಳ್ತಾಳೆ. ಬಹುಶ: ಅವರ ಅನುಕ್ತ ಉತ್ತರ ಏನಿರಬಹುದು ಅಂದರೆ ಹೆಂಡತಿಯಾದವಳು ಗಂಡನ ಖಾಸಗಿ ಅಥವಾ ಸ್ವಂತ ಆಸ್ತಿ. ತನ್ನನ್ನೇ ಸೋತುಕೊಂಡರೂ ಅವಳ ಮೇಲೆ ಅವನಿಗೆ ಅಧಿಕಾರ ಇದ್ದೇ ಇದೆ ಅನ್ನುವುದು." ಇದು ಹೆಚ್ಚು ಕಡಿಮೆ ಎಲ್ಲ ದೇಶದ ಎಲ್ಲ ಕಾಲದ ಗಂಡಸರ ಧೋರಣೆ ಎಂದು ಮಾತು ಮುಗಿಸಿ "ಅಂತೂ ನನ್ನ ಹಳೇ ಚಾಳಿ ಬಿಡದೆ, ವಿಧೇಯರಾಗಿ ಕೇಳುವ ಹಳೇ ವಿದ್ಯಾರ್ಥಿಗಳಿಬ್ಬರು ಸಿಕ್ಕಿದ್ದೀರಿ ಅಂತ ಕ್ಲಾಸ್ ರೂಮ್‌ನಲ್ಲಿ ಲೆಕ್ಚರ್ ಕೊಡೋ ಹಾಗೆ ಇಷ್ಟು ಹೊತ್ತೂ ಲೆಕ್ಚರ್ ಕೊಟ್ಟು ಬೋರ್ ಹೊಡೆಸಿದ್ದಕ್ಕೆ ಕ್ಷಮೆ ಇರಲಿ. ಈಗ ಮಲಗೋಣ ಎಂದು ಹೇಳಿದರು. ಮೂವರೂ ನಗುತ್ತಾ ನಿದ್ದೆಗೆ ಶರಣಾದರು.

ಅಧ್ಯಾಯ–29

ಶಿವಮೊಗ್ಗದಿಂದ ಬಂದ ಮೂರು ತಿಂಗಳ ನಂತರ ಕಾಲೇಜಿನಲ್ಲಿದ್ದಾಗಲೇ ಒಂದು ದಿನ ಡಾ. ಅಶೋಕ ಮಹಾಪಾತ್ರ ಅವರಿಂದ ಟ್ರಂಕ್ ಕಾಲ್ ಬಂತು. "ನಿಮ್ಮ ಥೀಸಿಸ್ ಅನ್ನು ಮೌಲ್ಯ ಮಾಪನ ಮಾಡಿದ್ದ ಇನ್ನೊಬ್ಬ ಮೌಲ್ಯಮಾಪಕರ ರಿಪೋರ್ಟ್ ಬಂದಿದೆ. ಅದು ಕೂಡ ಫೇವರಬಲ್ ರಿಪೋರ್ಟ್. ಇನ್ನು ವೈವಾ ಒಂದಿದೆ. ಬಹುಶಃ ಇನ್ನೊಂದೆರಡು ವಾರದಲ್ಲಿ ವಿ.ವಿ. ಯಿಂದ ನಿಮಗೆ ಅಧಿಕೃತವಾಗಿ ಪತ್ರ ಬರುತ್ತದೆ." ಎಂದು ಹೇಳಿ ಫೋನ್ ಇಟ್ಟಿದ್ದರು. ಹೇಮಾಳಿಗೆ ನಿರಾಳವಾಯಿತು.

ಅವರು ಹೇಳಿದಂತೆ ಒಂದೇ ವಾರಕ್ಕೆ ವಿ.ವಿ. ಯಿಂದ ವೈವಾ ದಿನಾಂಕ ತಿಳಿಸಿದ ಪತ್ರ ಬಂದಿತು. ಮೂರು ವರ್ಷಕ್ಕೂ ಹೆಚ್ಚು ಕಾಲ ಸಂಶೋಧನೆ ನಡೆಸಿ ಒಳ್ಳೆಯ ಪ್ರೌಢ ಪ್ರಬಂಧ ಬರೆದವಳಿಗೂ, ವೈವಾದಲ್ಲಿ ಏನು ಕೇಳುತ್ತಾರೋ ಎಂಬ ಬಗ್ಗೆ ಕಿಂಚಿತ್ ಆತಂಕ ಇದ್ದೇ ಇತ್ತು. ಹಿಂದಿನ ದಿನವೇ ಬೇಗನೆ ಹೋಗಿ ಗೆಸ್ಟ್ ಹೌಸಿನಲ್ಲಿ ಇಳಿದುಕೊಂಡು ಸಂಜೆ ನಾಲ್ಕು ಗಂಟೆಗೆಲ್ಲಾ ಮಹಾಪಾತ್ರ ಅವರ ಮನೆಗೆ ದೌಡಾಯಿಸಿದಳು. ಏನೇನು ಕೇಳುತ್ತಾರೋ ಎಂದು ಆತಂಕ ವ್ಯಕ್ತ ಪಡಿಸಿದಾಗ ಅವರು ದೊಡ್ಡದಾಗಿ ನಕ್ಕು "ವೈವಾ ಎನ್ನುವುದು ಒಂದು ಫಾರ್ಮಾಲಿಟಿ. ನಿಮ್ಮ ಥೀಸಿಸ್‌ನಲ್ಲಿ ನೀವು ಮಂಡಿಸಿರುವ ಅಭಿಪ್ರಾಯ, ವಿಚಾರಗಳಿಗೆ ಸಂಬಂಧಿಸಿದಂತೆಯೇ ತಮ್ಮ ಸಂದೇಹಗಳನ್ನೋ, ನೀವು ಹೇಳಿರುವ ಹೊಸ ಅಂಶಗಳ ಕುರಿತಾದ ಸ್ಪಷ್ಟೀಕರಣವನ್ನೋ ಕೇಳಬಹುದು ಅಷ್ಟೆ. ಅದಕ್ಕೇಕೆ ಇಷ್ಟು ಗಾಬರಿ. ಬೀ ಕೂಲ್" ಎಂದು ಹೇಳಿದರು.

ವೈವಾದಲ್ಲಿ ಮೌಲ್ಯಮಾಪಕರಿಬ್ಬರು ಮತ್ತು ಗೈಡ್ ಅಶೋಕ ಮಹಾಪಾತ್ರ ಅವರಲ್ಲದೆ ಕೊಠಡಿಯಲ್ಲಿ ಅಶೋಕ ಅವರ ವಿಭಾಗದ ಕೆಲವರು ಅಧ್ಯಾಪಕರು, ಸಂಶೋಧನ ಸಹಾಯಕರು, ಕೆಲವರು ಸ್ನಾತಕೋತ್ತರ ವಿದ್ಯಾರ್ಥಿಗಳು ಕೂಡ ಇದ್ದರು. ಅವರೂ ಬೇಕಿದ್ದರೆ ಪ್ರಶ್ನೆ ಕೇಳಬಹುದಿತ್ತು. ಹೇಮಾಳ ಉತ್ತರಗಳ ಬಗ್ಗೆ ಮೌಲ್ಯಮಾಪಕರು ತೃಪ್ತಿ ವ್ಯಕ್ತಪಡಿಸಿದರು. ಕೆಲವೊಂದು ಅಭಿಪ್ರಾಯಗಳ ಬಗ್ಗೆ ಸ್ಪಷ್ಟೀಕರಣ ಕೇಳಿದರು. ಕೊನೆಯಲ್ಲಿ ಮೌಲ್ಯಮಾಪಕರು ಮತ್ತು ಅಶೋಕ ಮಹಾಪಾತ್ರ ಅವರು "ಕಂಗ್ರಾಟ್ಸ್ ಡಾ. ಹೇಮಾ" ಎಂದರು. ಹೇಮಾ ಕಿಂಚಿತ್ ಅಪ್ರತಿಭಳಂತೆ ಕಂಡಳು. ಆಮೇಲೆ "ಥ್ಯಾಂಕ್ ಯೂ ಆಲ್ ವೆರಿಮಚ್ ಸರ್" ಎಂದಳು. ಆಗ ಅಶೋಕ ಅವರೇ "ವೈವಾ ಆದಮೇಲೆ ವಿ.ವಿ.ಯ ಗೆಝೆಟ್ ಪ್ರಕಟಣೆ ಅಷ್ಟೇ ಉಳಿದಿರೋದು. ಅದೆಲ್ಲಾ ರೊಟೀನ್. ಸೋ ನೀವೀಗ ಡಾಕ್ಟರ್ ಹೇಮಾ. ಹಾಗಂತ ಯಾರಿಗೂ ಔಷಧಿ ಕೊಡೋಹಾಗಿಲ್ಲ!" ಎಂದರು. ಎಲ್ಲರೂ ನಕ್ಕರು. ಆಮೇಲೆ ಒಂದು ಕ್ಷಣ ಬಿಟ್ಟು "ಆದರೆ ಸಾಮಾಜಿಕ

ವ್ಯಾಧಿಗಳಿಗೆ ಔಷಧಿ ಕೊಡಬಹುದು" ಎಂದರು. ಆಮೇಲೆ "ಈಗ ಎಲ್ಲರಿಗೂ ಸ್ವೀಟ್ ಕೊಡಿಸುವ ಪ್ರಿವಿಲೇಜ್ ನಿಮ್ಮದು" ಎಂದರು. ಎಲ್ಲರೂ ಕ್ಯಾಂಟೀನಿನತ್ತ ನಡೆದರು. ಹೇಮಾಳೇ ಎಲ್ಲರಿಗೂ ಊಟ ಮತ್ತು ಸ್ವೀಟ್‌ಗೆ ಆರ್ಡರ್ ಮಾಡಿದಳು. ಊಟವಾದ ನಂತರ ಅಶೋಕ ಅವರು "ನೀವು ನಾಳೆ ತಾನೆ ಊರಿಗೆ ಹೋಗುವುದು. ಸಂಜೆ ಸಾಧ್ಯವಾದರೆ ಸಿಕ್ಕಿ" ಎಂದರು. "ಖಂಡಿತಾ ಸಿಕ್ಕುತ್ತೀನಿ ಸರ್." ಎಂದಳು.

ಹೇಮಾ ಅಂದು ಸಂಜೆ ಡಾ. ಅಶೋಕ ಮಹಾಪಾತ್ರ ಅವರ ಮನೆಗೆ ಹೋದಾಗ ಮಹಾಪಾತ್ರ ಅವರು ವಿಭಾಗದಿಂದ ಇನ್ನೂ ಹಿಂತಿರುಗಿರಲಿಲ್ಲ. ಎಂದಿನಂತೆ ಮಹಾಪಾತ್ರ ಅವರ ತಾಯಿಯೇ ಬರಮಾಡಿಕೊಂಡರು. ಕುಳಿತಿರಿ. ಚಹಾ ಮಾಡಿಕೊಂಡು ಬರುತ್ತೇನೆ ಎಂದು ಒಳಗೆ ಹೋಗಿ ಹತ್ತು ನಿಮಿಷದಲ್ಲಿ ಚಹಾ ಮಾಡಿಕೊಂಡು ತಂದುಕೊಟ್ಟರು. ಚಹಾ ಕುಡಿಯುತ್ತಲೇ ವೈವಾ ಹೇಗಾಯಿತು ಎಂದು ಕೇಳಿದರು. ಚೆನ್ನಾಗಿ ಆಯಿತು. "ಈಗ ನೀವು ಡಾಕ್ಟರ್ ಹೇಮಾ. ಆದರೆ ಯಾರಿಗೂ ಔಷಧಿ ಕೊಡುವ ಹಾಗಿಲ್ಲ" ಎಂದು ಅಶೋಕರು ಹೇಳಿದ ಮಾತನ್ನು ಹೇಳಿ ನಗುತ್ತಾ "ಸರ್. ಅವರ ಮಾರ್ಗದರ್ಶನ ಮತ್ತು ನಿಮ್ಮ ಪ್ರೀತಿ ವಿಶ್ವಾಸದಿಂದಲೇ ಇದು ಸಾಧ್ಯವಾಯಿತು. ಇನ್ನೇನಿದ್ದರೂ ವಿ.ವಿ.ಯಿಂದ ಅಧಿಕೃತ ಪ್ರಕಟಣೆ ಹೊರಬೀಳುವುದಷ್ಟೇ ಬಾಕಿ" ಎಂದಳು. ತಾನು ಊರಿನಿಂದ ಬರುವಾಗಲೇ ತಂದಿದ್ದ ಬೆಲೆಬಾಳುವ ಸೀರೆ ಮತ್ತು ಹಣ್ಣುಗಳಿದ್ದ ತಟ್ಟೆಯನ್ನು ಅವರಿಗೆ ಕೊಟ್ಟು ಕಾಲುಮುಟ್ಟಿ ನಮಸ್ಕರಿಸಿದಳು. ಅಶೋಕರ ತಾಯಿ ಇದನ್ನು ನಿರೀಕ್ಷಿಸಿರಲಿಲ್ಲ. ಅವರ ಹೃದಯ ತುಂಬಿ ಬಂತು. "ನನಗೆ ಏಕೆ ನಮಸ್ಕಾರ. ನಮಸ್ಕಾರ ಏನಿದ್ದರೂ ಆ ದೇವರಿಗೆ ಸಲ್ಲಬೇಕು. ನಿಮ್ಮ ಶ್ರದ್ಧೆ ಮತ್ತು ಪ್ರಾಮಾಣಿಕ ಸಾಧನೆ ಎಲ್ಲಕ್ಕಿಂತ ಹೆಚ್ಚಾಗಿ ನಿಮ್ಮ ಒಳ್ಳೆಯತನದಿಂದ ಇದು ದೊರೆತಿದೆ" ಎಂದು ಹೇಳಿ– "ನೀವು ತಪ್ಪು ತಿಳಿಯದಿದ್ದರೆ ಬಹಳ ದಿನಗಳಿಂದ ನನ್ನ ಮನಸ್ಸನ್ನು ಕೊರೆಯುತ್ತಾ ಇರುವ ಒಂದು ವಿಷಯ ಪ್ರಸ್ತಾಪಿಸಬೇಕು ಅಂತ ಇದ್ದೀನಿ. ಮತ್ತೆ ನೀವು ಸಿಕ್ಕುವುದು ಇನ್ನು ಯಾವಾಗಲೋ ಏನೋ. ಯಾರಿಗೂ ಔಷಧಿ ಕೊಡೋಹಾಗಿಲ್ಲ ಅಂತ ಹೇಳಿದ ಅಶೋಕನಿಗೇ ನೀವು ಔಷಧಿ ಕೊಡಬೇಕಾಗಿದೆ. ಆ ಶಕ್ತಿ ನಿಮಗಿದೆ. ನೀವೇ ಕೊಡಬೇಕು" ಎಂದರು. ಹೇಮಾಳಿಗೆ ವಿಸ್ಮಯ ಮತ್ತು ಆತಂಕವಾಯಿತು. "ಸರ್‌ಗೆ ನಾನು ಔಷಧಿ ಕೊಡೋದು ಅಂದರೆ ಏನಮ್ಮಾ, ಇಂಪಾಸಿಬಲ್". ಎಂದಳು. ಅದಕ್ಕೆ ಅವರು "ಇಟೀಸ್ ಪಾಸಿಬಲ್. ಅಂಡ್ ಇಟೀಸ್ ಪಾಸಿಬಲ್ ಫಾರ್ ಯೂ ಓನ್ಲೀ" ಎಂದು ಹೇಳಿ – "ನೋಡಿ ನಿಮಗೆ ಅವನ ವಿಷಯ ಹೇಳಿದ್ದೀನಿ. ಅವನು ಮದುವೆಯಾಗಬೇಕೆಂದಿದ್ದ ಹುಡುಗಿ ಆಕ್ಸಿಡೆಂಟಿನಲ್ಲಿ ತೀರಿಕೊಂಡ ಮೇಲೆ ಅವನು ಎಲ್ಲದರ ಬಗೆಗೆ ವೈರಾಗ್ಯ ತಾಳಿ ಆ ಊರನ್ನೇ ಬಿಟ್ಟುಬಂದ ಕಥೆ ನಿಮಗೆ ಹೇಳಿದ್ದೀನಿ. ಈಗ ನೀವು ಆ ಗತಿಸಿದ ಅವನ ಪ್ರೇಮಿಯ ಸ್ಥಾನವನ್ನು ತುಂಬಬೇಕು. ಅಂದರೆ ಅಶೋಕನ ಕೈಹಿಡಿದು ಅವನ ಮನೆ ಮತ್ತು ಮನಸ್ಸು ತುಂಬಬೇಕು ಅನ್ನುವುದು ನನ್ನ ಆಸೆ. ಇದುವರೆಗೆ ಬೇರೆ ಯಾರನ್ನೂ ಹಚ್ಚಿಕೊಳ್ಳದಿದ್ದಷ್ಟು ನಿಮ್ಮನ್ನು ಅವನು ಹಚ್ಚಿಕೊಂಡಿದ್ದಾನೆ. ನಾನೂ ಈಗ ಮೂರು ವರ್ಷಕ್ಕಿಂತ ಹೆಚ್ಚಿನ ದಿನದಿಂದ ನೋಡುತ್ತಾ

ಇದ್ದೀನಿ. ನೀವು ಬಂದಾಗ, ನಿಮ್ಮ ಹತ್ತಿರ ಮಾತಾಡುವಾಗ ಅವನು ತುಂಬಾ ಗೆಲುವಾಗಿರುವುದನ್ನು ಗಮನಿಸಿದ್ದೀನಿ. ಅವನೇನೂ ಈ ಬಗ್ಗೆ ನನ್ನ ಹತ್ತಿರ ಹೇಳಿಲ್ಲ. ಆದರೆ ತಾಯಿಯ ಹೃದಯಕ್ಕೆ ಮಗನ ಮನಸ್ಸು ಅರ್ಥವಾಗುತ್ತೆ. ನಾನು ಕೆಲವು ದಿನಗಳ ಹಿಂದೆ, ಅವನ ಹತ್ತಿರ ಯಾವುದೋ ಸಂದರ್ಭದಲ್ಲಿ ಮಾತಾಡುತ್ತ ಸುಮ್ಮನೆ "ಏನಪ್ಪಾ ಯಾವಾಗ ಮದುವೆಯಾಗೋದು" ಅಂದಾಗ "ಕಾಲಬಂದರೆ ಅದೂ ಆಗುತ್ತಮ್ಮ" ಅಂತ ಹೇಳಿದ. ಇದುವರೆಗೆ ಮದುವೆಯ ವಿಷಯ ಪ್ರಸ್ತಾಪಿಸುವುದಕ್ಕೇ ಅವಕಾಶ ಕೊಡದಿದ್ದವನು ಈಗ ಹೀಗೆ ಹೇಳಿರುವುದು ಸಾಮಾನ್ಯವಾದ ಸಂಗತಿ ಅಲ್ಲ. ನೀವು ಏನು ಅಂತ ಅವನಿಗೆ ಗೊತ್ತಿದೆ. ನೀವೂ ಕೂಡ ಅವನನ್ನು ಅರ್ಥಮಾಡಿಕೊಂಡಿದ್ದೀರಿ. ಒಂದು ವೇಳೆ ಅವನೇನಾದರೂ ನಿಮ್ಮ ಕೈ ಹಿಡಿಯಲು ಒಪ್ಪಿದರೆ ನೀವೂ ಒಪ್ಪಲು ಸಾಧ್ಯವೆ? ಅಫ್ ಕೋರ್ಸ್ ಈ ವಿಷಯದಲ್ಲಿ ಯಾವುದೇ ಒತ್ತಾಯ ಖಂಡಿತಾ ಇಲ್ಲ. ನೀವು ಈಗಲೇ ನಿಮ್ಮ ಅಭಿಪ್ರಾಯ ತಿಳಿಸಬೇಕೆಂದಿಲ್ಲ. ಯೋಚನೆ ಮಾಡಿ ನಿಧಾನವಾಗಿ ತಿಳಿಸಿ. ಅವನು ತುಂಬಾ ಸಂಕೋಚದ ಮನುಷ್ಯ. ತಾನಾಗಿಯೇ ಈ ವಿಷಯ ನಿಮ್ಮ ಹತ್ತಿರ ಮಾತಾಡಲ್ಲ. ಅದಕ್ಕೇ ಅವನ ತಾಯಿಯಾದ ನಾನು ಹೇಳುತ್ತಾ ಇದ್ದೀನಿ" ಎಂದರು. ಹೇಮಾಳಿಗೆ ದಿಗ್ಭ್ರಮೆಯಾಯಿತು. ಏನು ಮಾತಾಡಬೇಕೆಂದು ತೋಚಲಿಲ್ಲ. "ನೀವು ನನ್ನ ತಾಯಿಯ ಸ್ಥಾನದಲ್ಲಿದ್ದೀರಿ. ಖಂಡಿತಾ ಯೋಚಿಸಿ ಹೇಳುತ್ತೇನೆ" ಎಂದಷ್ಟೇ ಹೇಳಿದಳು.

ಆಮೇಲೆ ಅಶೋಕ ಮಹಾಪಾತ್ರ ಬಂದರು. "ನಿಮ್ಮ ಮೌಲ್ಯಮಾಪನಕ್ಕೆ ಬಂದಿದ್ದರಲ್ಲ ಪ್ರೊಫೆಸರ್ಸ್, ಅವರು ನಾನು ಮತ್ತು ನಮ್ಮ ವಿಭಾಗದ ಮುಖ್ಯಸ್ಥರು ಏನೋ ಡಿಸ್ಕಷನ್ನಿನಲ್ಲಿ ತೊಡಗಿಕೊಂಡೆವು. ಟೈಮ್ ಆದದ್ದೇ ಗೊತ್ತಾಗಲಿಲ್ಲ. ಸಾರಿ" ಎಂದರು. ಹೇಮಾ "ಯೂ ನೀಡ್ ನಾಟ್ ಬಾದರ್ ಅಬೋಟ್ ದಟ್ ಸರ್. ಐ ವಾಸ್ ಷೇರಿಂಗ್ ಮೈ ಹ್ಯಾಪಿ ಮೊಮೆಂಟ್ಸ್ ವಿತ್ ಅಮ್ಮಾ" ಎಂದಳು. ಅಶೋಕರು ನಕ್ಕರು. ಅಶೋಕರ ತಾಯಿ ಇನ್ನೊಮ್ಮೆ ಚಹಾ ಕುಡಿಯೋಣ ಎಂದು ಚಹಾ ಮಾಡಿಕೊಂಡು ಬರಲು ಒಳಕ್ಕೆ ಹೋದರು. ಆಗ ಹೇಮಾ ಮಹಾಪಾತ್ರರ ತಾಯಿಗೆ ತಂದಿದ್ದಂತೆ ಮಹಾಪಾತ್ರ ಅವರಿಗೂ ಪ್ಯಾಕ್ ಮಾಡಿಸಿಕೊಂಡು ತಂದಿದ್ದ ಒಂದು ಬೆಲೆ ಬಾಳುವ ಸೂಟ್ ಬಟ್ಟೆಯನ್ನು ನೀಡಿ ಕಾಲುಮುಟ್ಟಿ ನಮಸ್ಕರಿಸಿದಳು. ಅಶೋಕರು ನಗುತ್ತ– 'ಇದೇನು ನನಗೆ ಗಿಫ್ಟ್ ಕೊಡುತ್ತಾ ಇದ್ದೀರಿ. ಇದು ಸಾಕಾಗಲ್ಲ. ಇದಕ್ಕಿಂತ ಭಾರೀ ಗಿಫ್ಟ್ ಕೊಡಬೇಕು.' ಎಂದು ನಗುತ್ತಾ ಮೆಲ್ಲಗೆ ಭುಜಹಿಡಿದು ಎತ್ತಿದರು. "ಈ ಹೊತ್ತು ಇಲ್ಲೇ ಬಸವಣ್ಣನವರ ಊಟ" ಎಂದರು. "ಅದಕ್ಕೆ ನಾನು ರೆಡಿಯಾಗೇ ಬಂದಿದ್ದೀನಿ ಸರ್" ಎಂದು ಬಾಯಿತುಂಬ ನಕ್ಕಳು.

* * *

ವೈವಾ ಮುಗಿದ ಒಂದು ತಿಂಗಳಿಗೆ ಹೇಮಾಳಿಗೆ ಪಿಎಚ್.ಡಿ. ಬಂದಿರುವ ವಿಷಯ ಗೆಜೆಟ್‌ನಲ್ಲಿ ಪ್ರಕಟವಾಗಿ ವಿ.ವಿ.ಯಿಂದ ಅವಳಿಗೆ ಆದೇಶದ ಪ್ರತಿ ಬಂತು. ಅವಳ

ಕಾಲೇಜಿನಲ್ಲಿ ಎಲ್ಲರೂ ಅಭಿನಂದಿಸಿದರು. ಅದಾದ ಕೆಲವೇ ದಿನಕ್ಕೆ ತುಮಕೂರಿಗೆ ಹೋಗಿದ್ದ ಅವರ ತಂದೆ ಗುರುಶಾಂತಪ್ಪನವರು ಹೃದಯಾಘಾತದಿಂದ ತೀರಿಕೊಂಡ ಸುದ್ದಿ ಬಂತು. ಕೂಡಲೇ ತಾಯಿಯನ್ನೂ ಕರೆದುಕೊಂಡು ಊರಿಗೆ ಹೊರಟುಬಿಟ್ಟಳು. ವೈವಾ ಮುಗಿಸಿಕೊಂಡು ಬಂದ ದಿನವೇ ಮಗಳ ಬಾಯಿಂದ ಡಾಕ್ಟರೇಟ್ ಬಂದ ಸುದ್ದಿ ಕೇಳಿ ಅವರು ಅತ್ಯಂತ ಸಂತಸ ಪಟ್ಟಿದ್ದರು. ನಮ್ಮ ವಂಶದಲ್ಲೇ ಯಾರೂ ಮಾಡದ ಸಾಧನೆ ನೀನು ಮಾಡಿದೆ ಎಂದು ಮೆಚ್ಚಿಕೆ ವ್ಯಕ್ತಪಡಿಸಿ ತುಮಕೂರಿನಲ್ಲಿ ಎಲ್ಲರಿಗೂ ತಾವೇ ಸ್ವತಃ ತಿಳಿಸಬೇಕೆಂದೇ ಹೋಗಿದ್ದರು. ಆ ಸಂತೋಷದ ಅತಿರೇಕದಿಂದಲೋ ಎಂಬಂತೆ ತಿಂಡಿ ತಿಂದು ಈಸಿಛೇರ್ ಮೇಲೆ ಕುಳಿತು ವಿಶ್ರಮಿಸಿಕೊಳ್ಳುತ್ತಿದ್ದವರು ಇದ್ದಕ್ಕಿದ್ದ ಹಾಗೆಯೇ ಹೃದಯಾಘಾತವಾಗಿ ಶಿವನ ಪಾದ ಸೇರಿಕೊಂಡಿದ್ದರು. ಶಿವಮೊಗ್ಗಾಕ್ಕೆ ಹೋಗಿ ಡಾ. ಅಶೋಕ ಮಹಾಪಾತ್ರ ಅವರನ್ನು ಭೇಟಿಮಾಡುವುದನ್ನೂ ಈ ಕಾರಣದಿಂದಲೇ ಹೇಮಾ ಮುಂದೂಡಬೇಕಾಯಿತು. ಅವರು ಕೂಡಲೇ ತಮ್ಮ ಸಂತಾಪ ಸೂಚಿಸಿ ಟೆಲಿಗ್ರಾಮ್ ಕೊಟ್ಟಿದ್ದರು. ತಮ್ಮ ಸಂಪ್ರದಾಯದ ಪ್ರಕಾರ ಮಾಡುವ ಶಿವಗಣಾರಾಧನೆಯನ್ನು ಮುಗಿಸಿಕೊಂಡು ಚಿಕ್ಕಮಗಳೂರಿಗೆ ಹಿಂತಿರುಗಲು ಹತ್ತಿರ ಹತ್ತಿರ ಹದಿನೈದು ದಿನಗಳೇ ಅದುವು. ಡಾ. ಮಮತಾ ಕೂಡ ವಿಷಯ ತಿಳಿದು ತಮ್ಮ ಬೇಸರ ವ್ಯಕ್ತಪಡಿಸಿದ್ದರು. ಜೊತೆಯಲ್ಲೇ ನಿನಗೆ ಡಾಕ್ಟರೇಟ್ ಬಂದಿರುವುದು ನನಗೆ ಅತೀವ ಸಂತಸ ತಂದಿದೆ ಎಂದೂ ತಿಳಿಸಿದ್ದರು. ಊರಿಂದ ಬಂದ ಮೇಲೆ ನೀನು ಮತ್ತು ವಸುಂಧರಾ ಒಮ್ಮೆ ಬಂದು ಹೋಗಿ ಎಂದಿದ್ದರು. ಹೇಮಾ ಕೂಡ ಅವರನ್ನು ಭೇಟಿಮಾಡಬೇಕೆಂದೇ ಇದ್ದಳು. ಹೇಮಾಳ ತಾಯಿ ತಾವು ಇನ್ನೂ ಸ್ವಲ್ಪ ದಿನ ತುಮಕೂರಿನಲ್ಲೇ ಇದ್ದು ಬರುವುದಾಗಿ ಹೇಳಿದ್ದರು. ಈಗ ಚಿಕ್ಕಮಗಳೂರಿಗೆ ಬಂದ ಮೇಲೆ ಭಾನುವಾರ ಬೆಳಿಗ್ಗೆ ವಸುಂಧರಾಳನ್ನು ಭೇಟಿಮಾಡಲು ನೇರವಾಗಿ ಬೇಲೂರಿಗೆ ಹೋದಳು. ವಸುಂಧರಾ ಗೆಳತಿಯನ್ನು ತಬ್ಬಿಕೊಂಡು ಕಣ್ಣೀರು ಸುರಿಸುತ್ತಾ ಆರೇಳು ತಿಂಗಳ ಹಿಂದೆ ನಾನು ತಾಯಿಯನ್ನು ಕಳೆದುಕೊಂಡೆ. ಈಗ ನೀನು ತಂದೆಯನ್ನು ಕಳೆದುಕೊಂಡೆ. ನಿನಗೆ ನಾನು ನನಗೆ ನೀನು ಪರಸ್ಪರ ಸಂತೈಸುವುದಷ್ಟೇ ಉಳಿದಿರುವುದು ಎಂದು ಹೇಳಿದಳು. ಮಮತಾ ಮೇಡಮ್ ನಾವಿಬ್ಬರೂ ತಮ್ಮನ್ನು ಭೇಟಿಮಾಡಬೇಕೆಂದು ಹೇಳಿರುವ ಸಂಗತಿಯನ್ನು ಹೇಮಾ ತಿಳಿಸಿದಳು. ಹಾಗಾದರೆ ಮೇಡಮ್‌ಗೆ ಮುಂದಿನ ಶನಿವಾರ ಬರುವುದಾಗಿ ತಿಳಿಸು. ನೀನು ನೇರವಾಗಿ ಇಲ್ಲಿಗೇ ಬಂದುಬಿಡು. ಇಲ್ಲಿಂದಲೇ ಹಾಸನಕ್ಕೆ ಹೋಗೋಣ ಎಂದು ಗೆಳತಿಗೆ ಹೇಳಿದಳು.

ಅದರಂತೆ ಇಬ್ಬರೂ ಶನಿವಾರ ಮಧ್ಯಾಹ್ನದ ಹೊತ್ತಿಗೇ ಮಮತಾ ಅವರ ಮನೆಗೇ ಹೋದರು. ಇವರಿಗಾಗಿಯೇ ಕಾಯುತ್ತಿದ್ದ ಮಮತಾ "ಬನ್ನಿ ನಾನೇ ಕೈಯಾರೆ ತಯಾರಿಸಿದ ಊಟ ಬಡಿಸುತ್ತೀನಿ. ಬೇರೆ ಏನೂ ಸ್ಪೆಷಲ್ ಇಲ್ಲ. ನೀವಿಬ್ಬರೂ ಪುಳಿಚಾರುಗಳಲ್ಲವಾ. ಅದಕ್ಕೇ ಪುಳಿಚಾರು ಅಡಿಗೇನೆ ಮಾಡಿದ್ದೀನಿ. ನೀವುಗಳು ಮಾಡುವಷ್ಟು ರುಚಿಯಾಗಿ ಇರಲಾರದು" ಎಂದು ನಗುತ್ತಾ ಊಟದ ಟೇಬಲ್‌ನತ್ತ ಹೋದರು. "ನಿಮ್ಮ ಪ್ರೀತಿ ಸೇರಿರೋದರಿಂದ ಅದಕ್ಕೆ ರುಚಿ ಜಾಸ್ತಿ ಮೇಡಮ್"

ಎಂದು ವಸುಂಧರಾ ಹೇಳಿದಳು. ಮೂವರೂ ತಮ್ಮ ಕಾಲೇಜು, ಪರೀಕ್ಷೆಗಳ ವಿಷಯ ಮಾತಾಡುತ್ತ ಊಟ ಮುಗಿಸಿದರು. ಮಮತಾ ಬೇಕೆಂದೇ ಹೇಮಾಳ ತಂದೆಯ ಸಾವಿನ ವಿಷಯ ಮಾತಾಡುವುದನ್ನು ತಪ್ಪಿಸಿದ್ದರು. ಒಂದು ಸ್ವಲ್ಪ ಹೊತ್ತು ರೆಸ್ಟ್ ತಗೊಳ್ಳಿ. ಆಮೇಲೆ ಮಾತಾಡೋಣ ಎಂದು ಹೇಳಿ ತಾವೂ ಕೊಠಡಿಗೆ ನಡೆದರು.

ಲಘು ನಿದ್ರೆಯ ನಂತರ ಚಹಾ ಕುಡಿದ ಮೇಲೆ ಹೇಮಾಳೇ ಮಾತು ಪ್ರಾರಂಭಿಸಿದಳು. "ನೀವು ಬಾ ಅಂತ ನನಗೆ ಹೇಳದೆ ಇದ್ದರೂ ನಾನೇ ಬರಬೇಕು ಅಂತ ಇದ್ದೆ." ಎಂದು ಶುರುಮಾಡಿಕೊಂಡು "ಮೇಡಮ್ ನಿಮಗೆ ನಿಜಕ್ಕೂ ದಿವ್ಯ ದೃಷ್ಟಿ ಇದೆ. ನೀವು ಆ ಹೊತ್ತು ಶಿವಮೊಗ್ಗಾದಲ್ಲಿ ಹೇಳಿದ ಮಾತು ನೂರಕ್ಕೆ ನೂರರಷ್ಟು ನಿಜ ಎಂದು ಹೇಳಿ ವೈವಾ ಮುಗಿದ ದಿನ ತಾನು ಅಶೋಕರ ಮನೆಗೆ ಹೋಗಿದ್ದಾಗ ಅವರ ತಾಯಿ ಆಡಿದ ಮಾತುಗಳನ್ನು ಹೇಳಿದಳು. ಈಗ ಹೇಗೆ ಮಾಡುವುದು? ಏನು ಮಾಡುವುದು? ಅವರಿಗೆ ಏನು ಹೇಳುವುದು? ಅಂತ ನಿಮ್ಮ ಸಲಹೆ ಕೇಳೋಣ ಅಂತ ಬಂದೆ ಎಂದಳು. ಅದಕ್ಕೆ ಮಮತಾ "ನೋಡು ನೀನು ಸಂಸಾರದಲ್ಲಿ ನೆಲೆ ನಿಲ್ಲಲು ಇದಕ್ಕಿಂತ ಒಳ್ಳೆಯ ಅವಕಾಶ ಇನ್ನೊಂದು ನಿನಗೆ ದೊರೆಯಲಾರದು. ರೊಟ್ಟಿ ಜಾರಿ ತುಪ್ಪದಲ್ಲಿ ಬಿತ್ತು ಅಂತ ತಿಳಿದುಕೋ. ನೀನು ಬೇರೆ ಇನ್ನೇನೂ ಯೋಚನೆ ಮಾಡದೆ ಅವರ ತಾಯಿಗೆ ನಿನ್ನ ಒಪ್ಪಿಗೆ ತಿಳಿಸು." ಎಂದರು. "ಆದರೆ ಮೇಡಮ್ ಅವರು ನಮ್ಮ ರಾಜ್ಯ, ನಮ್ಮ ಭಾಷೆ, ನಮ್ಮ ಜಾತಿ, ನಮ್ಮ ಸಂಸ್ಕೃತಿಯವರಲ್ಲ. ದಾಂಪತ್ಯದಲ್ಲಿ ಹೊಂದಾಣಿಕೆ ಆಗುತ್ತೋ ಹೇಗೋ" ಎಂದು ಸಂದೇಹ ವ್ಯಕ್ತಪಡಿಸಿದಳು. ಮಮತಾ ಅವರು– "ಈಗಾಗಲೇ ನೀನು ಬೆರಳು ಸುಟ್ಟುಕೊಂಡಿರುವುದರಿಂದ ನಿನ್ನ ಹೆದರಿಕೆ ಸಹಜ. ಆದರೆ ಒಂದು ಮಾತು ತಿಳಿದುಕೋ. ಪ್ರೀತಿ ಒಂದು ಇತ್ತು ಅಂದರೆ ಬೇರೆ ಯಾವುದೂ ಲೆಕ್ಕಕ್ಕೆ ಬರುವುದಿಲ್ಲ. ಈಗಾಗಲೇ ಮೂರು ವರ್ಷಗಳಿಂದ ಅಶೋಕರು ಮತ್ತು ಅವರ ತಾಯಿ ಎಂಥವರೆಂದು ನಿನ್ನ ಅನುಭವಕ್ಕೆ ಬಂದಿದೆ. ಅವರು ಮೇಲೆ ನೋಡಲಿಕ್ಕೆ ಅಷ್ಟೆ ರಿಸರ್ವ್ ಥರ ಕಾಣಿಸುತ್ತಾರೆ ಅಂತ ನನ್ನ ಅನಿಸಿಕೆ. ಅವರು ಸಜ್ಜನರಲ್ಲಿ ಸಜ್ಜನರು ಅಂತ ನೀನೇ ಅವತ್ತು ಹೇಳಿದೆ. ಸರಿ ಮತ್ತಿನ್ನೇನು? ಈಗ ನಿಮ್ಮ ಜಾತಿಯವನನ್ನೇ ಮದುವೆಯಾಗಿದ್ದೆಯಲ್ಲ ಅವನಿಂದ ನಿನಗೆ ಸಿಕ್ಕಿದ್ದೇನು? ಬರೀ ದುಃಖದ ಬಳುವಳಿ ಅಷ್ಟೆ ತಾನೆ? ಇನ್ನು ಭಾಷೆ. ಅಶೋಕರಿಗೆ ಮತ್ತು ಅವರ ತಾಯಿಗೆ ಕನ್ನಡ ಚೆನ್ನಾಗಿ ಅರ್ಥ ಆಗುತ್ತೆ. ಅಲ್ಪ ಸ್ವಲ್ಪ ಮಾತಾಡ್ತಾರೆ. ನೀನು ಅವರಿಗೆ ಚೆನ್ನಾಗಿ ಕನ್ನಡ ಕಲಿಸು. ಪ್ರೀತಿಗೆ ಭಾಷೆ ಬೇಕಿಲ್ಲಮ್ಮ. ಅದಕ್ಕೆ ಬೇಕಾಗಿರೋದು ಹೃದಯ" ಎಂದರು. "ನನ್ನ ಡೋಲಾಯಮಾನವಾಗಿದ್ದ ಮನಸ್ಸು ನಿಮ್ಮ ಮಾತಿನಿಂದ ಈಗ ಒಂದು ನಿಲುಗಡೆಗೆ ಬಂತು. ತುಂಬಾ ಥ್ಯಾಂಕ್ಸ್ ಮೇಡಮ್" ಎಂದಳು. "ನಿನಗೆ ಈಗ ಕಂಗ್ರಾಟ್ಸ್ ಹೇಳಬೇಕು ನಾನು. ಯಾಕೆ ಅಂದರೆ ಈಗ ನೀನು ಡಾಕ್ಟರಿಗೇನೆ ಔಷಧಿ ಕೊಡೋ ಡಾಕ್ಟರ್ ಆದೆಯಲ್ಲ ಅದಕ್ಕೆ." ಮೂವರೂ ಮನಃಪೂರ್ವಕವಾಗಿ ನಕ್ಕರು.

ಆಮೇಲೆ ವಸುಂಧರಾಳತ್ತ ತಿರುಗಿ – "ವಸುಂಧರಾ ಈಗ ನಿನಗೇ ಆಶ್ಚರ್ಯಕರ ಅನ್ನಿಸುವಂಥ ಒಂದು ಪ್ರಸ್ತಾಪ ನಾನು ಸೂಚಿಸುತ್ತೇನೆ. ನಾನು ಹೇಳೋದನ್ನು ಶಾಂತವಾಗಿ

ಕೇಳು. ನಿನ್ನ ಬದುಕಿನ ವಿಷಯದಲ್ಲಿ ವಿಧಿ ಬಹಳ ಕ್ರೂರವಾಗಿ ನಡೆದುಕೊಂಡಿದೆ. ಆದರೆ ಅದೇ ವಿಧಿ ನಿನಗಾಗಿ ಒಂದು ದಾರಿಯನ್ನೂ ಸಿದ್ಧಪಡಿಸಿದೆ. ನಿನ್ನ ಮತ್ತು ಶ್ರೀನಿವಾಸ್ ಅವರ ವಿವಾಹ ಆಗಬೇಕಾಗಿತ್ತು. ಆದರೆ ಶ್ರೀನಿವಾಸ್ ಅವರ ತಾಯಿಯ ರೂಪದಲ್ಲಿ ಆ ವಿಧಿ ಅಡ್ಡ ಬಂದು ನಿಮ್ಮ ವಿವಾಹ ಆಗುವುದನ್ನು ತಪ್ಪಿಸಿತು. ಆದರೆ ಇದೆಲ್ಲ ಮುಗಿದು ಒಂದು ಹತ್ತು ವರ್ಷ ಆಗುತ್ತಾ ಬಂತಲ್ಲವೆ? ಈಗ ಶ್ರೀನಿವಾಸನ ಬದುಕು ತೆಗೆದುಕೊಂಡ ತಿರುವು ಕೇಳಿದರೆ ನೀನೂ ಮರುಗುತ್ತೀಯಾ. ನಿನ್ನನ್ನು ಮದುವೆಯಾಗುವುದನ್ನು ತಪ್ಪಿಸಿದ ಅವರ ತಾಯಿಯಾದರೂ ಮಗ ಸುಖವಾಗಿರೋದನ್ನು ನೋಡಿದರಾ? ಇಲ್ಲವೇ ಇಲ್ಲ. ತುಮಕೂರಿನಿಂದ ವರ್ಗವಾಗಿ ಇಲ್ಲಿಗೆ ಬಂದ ಮೇಲೆ ಅಮ್ಮನ ಒತ್ತಾಯಕ್ಕೆ ಕಟ್ಟುಬಿದ್ದು ಶ್ರೀನಿವಾಸ್ ಅವರ ತಾಯಿಯ ತಮ್ಮನ ಮಗಳನ್ನೇ ಅದೂ ಎರಡು ವರ್ಷದ ನಂತರ ಮದುವೆಯೇನೋ ಆದರಂತೆ. ಆ ಹುಡುಗಿ ನಿನ್ನ ಹಾಗೆ ಓದಿದೋಳಲ್ಲವಂತೆ. ಅಷ್ಟು ತಿಳಿದವಳೂ ಅಲ್ಲವಂತೆ. ಶ್ರೀನಿವಾಸ್‌ಗೆ ಸರಿಯಾದ ಜೋಡಿಯೂ ಆಗಿರಲಿಲ್ಲವಂತೆ. ಏನೇ ಆದರೂ ಅವಳು ಅವರ ಹೆಂಡತಿಯಾಗಿ ಮನೆ ತುಂಬಿದಳು. ಒಂದು ವರ್ಷ ಕೂಡ ಅವರ ದಾಂಪತ್ಯ ಮುಗಿದಿರಲಿಲ್ಲ. ಅವಳು ಗರ್ಭಿಣಿಯಾಗಿ ಒಂದು ಹೆಣ್ಣು ಮಗುವನ್ನೂ ಹೆತ್ತಳು. ಆದರೆ ಸಿಸೇರಿಯನ್ ಮಾಡಿ ಹೆರಿಗೆ ಮಾಡಿಸಬೇಕಾಗಿ ಬಂತು. ಆಪರೇಷನ್ ಆದಾಗ ಬ್ಲಡ್ ಕೊಡಬೇಕಾಗಿ ಬಂತು. ಆದರೆ ಮ್ಯಾಚಿಂಗ್ ಬ್ಲಡ್ ಕೊಡುವ ಬದಲು ನರ್ಸಿಂಗ್ ಹೋಮ್‌ನವರ ಅಚಾತುರ್ಯದಿಂದಾಗಿ ಬೇರೆ ಗ್ರೂಪ್‌ನ ಬ್ಲಡ್ ಕೊಟ್ಟಿದ್ದರಿಂದ ತೀರಿಕೊಂಡುಬಿಟ್ಟಳಂತೆ. ಅದು ಹೆಸರು ವಾಸಿಯಾದ ನರ್ಸಿಂಗ್ ಹೋಮ್. ಡಾಕ್ಟರೂ ನುರಿತವರೇ. ಆದರೆ ಅಚಾತುರ್ಯ ನಡೆದೇ ಹೋಯಿತು. ಪಾಪ ಮಗು ಹುಟ್ಟುತ್ತಿದ್ದ ಹಾಗೆ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಯಿತು. ಅವಳ ತವರು ಮನೆಯವರು ಅಂದರೆ ಶ್ರೀನಿವಾಸನ ತಾಯಿಯ ತವರು ಮನೆಯವರೇ ತಾನೆ. ಅವರೇ ಇಟ್ಟುಕೊಂಡು ಮಗುವನ್ನು ಸಾಕಿ ಬೆಳೆಸುತ್ತಾ ಇದ್ದಾರಂತೆ. ಅಷ್ಟೆಲ್ಲ ಒತ್ತಡ ಹಾಕಿ ತಾನು ತನ್ನ ತಮ್ಮನ ಮಗಳ ಜೊತೆ ಮಾಡಿಸಿದ ಮದುವೆ ಈ ರೀತಿಯಲ್ಲಿ ಕೊನೆಗೊಂಡು ಮಗನ ವೈವಾಹಿಕ ಬದುಕಿಗೆ ಬಂದ ದುರ್ಗತಿಯ ಕೊರಗಿನಿಂದ ಮೊದಲೇ ತೀರಾ ಕೆಡುತ್ತಾ ಇದ್ದ ಶ್ರೀನಿವಾಸ್ ತಾಯಿಯ ಆರೋಗ್ಯ ತೀರಾ ವಿಷಮಿಸಿ ಮುಂದೆ ಆರೇ ತಿಂಗಳಲ್ಲಿ ತೀರಿಕೊಂಡರಂತೆ. ಅತ್ತ ಹೆಂಡತಿಯ ಸಾವು ಇತ್ತ ಅಮ್ಮನ ಸಾವು, ಮಗು ತಾಯಿಯಿಲ್ಲದ ತಬ್ಬಲಿಯಾದ್ದು ಇವೆಲ್ಲ ಘಟನೆಗಳಿಂದ ಶ್ರೀನಿವಾಸ್ ತೀರಾ ಕಂಗಾಲಾಗಿ ಡಿಪ್ರೆಷನ್ನಿಗೆ ಹೋಗಿಬಿಟ್ಟಿದ್ದರಂತೆ. ತಿಂಗಳುಗಟ್ಟಲೆ ರಜೆ ಹಾಕಿದ್ದರಂತೆ. ಕೊನೆಗೆ ಎಸ್.ಆರ್. ಮಾಸ್ಟರ್ ಅವರೇ ಸೈಕಿಯಾಟ್ರಿಸ್ಟ್ ಕಡೆ ಕರೆದುಕೊಂಡುಹೋಗಿ ಟ್ರೀಟ್‌ಮೆಂಟ್ ಕೊಡಿಸಿದ ಮೇಲೆ ಸರಿಹೋದರಂತೆ. ಇಲ್ಲೇ ಹಾಸನದ ಕಾಲೇಜಿಗೆ ತಾನೆ ಅವರು ತುಮಕೂರಿನಿಂದ ಬಂದದ್ದು. ನಾನು ಈ ಕಾಲೇಜಿಗೆ ಟ್ರಾನ್ಸ್‌ಫರ್ ಆದ ವರ್ಷ ಅವರೂ ಇಲ್ಲಿಂದ ಮಂಡ್ಯಕ್ಕೆ ಟ್ರಾನ್ಸ್‌ಫರ್ ಮಾಡಿಸಿಕೊಂಡಿದ್ದರು. ನಾನು ಇಲ್ಲಿಗೆ ರಿಪೋರ್ಟ್ ಮಾಡಿಕೊಳ್ಳಲಿಕ್ಕೆ ಬಂದ ಮರುದಿನ ಅವರೂ ಇಲ್ಲಿಂದ ರಿಲೀವ್ ಆದರು. ಗಡ್ಡ ಗಿಡ್ಡ ಎಲ್ಲ ಬಿಟ್ಟುಕೊಂಡು ನನಗಂತೂ ಅವತ್ತು ನೋಡಿದಾಗ ಅವರನ್ನು ಗುರುತು

ಹಿಡಿಯೋಕೆ ಕಷ್ಟವಾಯಿತು. ಅಷ್ಟೊಂದು ಸ್ಮಾರ್ಟ್ ಆಗಿದ್ದ ಶ್ರೀನಿವಾಸ್ ಇವರೇನಾ ಅನ್ನುವ ಮಟ್ಟಿಗೆ ಆಗಿದ್ದರು. ಅವರೇ ನನ್ನನ್ನು ಮಾತಾಡಿಸಿ ಪತ್ನಿ ತೀರಿಕೊಂಡ ವಿಷಯ ತಿಳಿಸಿದ್ದರು. ಅದಾದ ಆರು ತಿಂಗಳಿಗೆ ಅವರ ತಾಯಿಯೂ ತೀರಿಕೊಂಡದ್ದು ಮತ್ತು ಆಗಲೆ ನಾನು ಹೇಳಿದ ಸಂಗತಿಗಳನ್ನೆಲ್ಲ ಹೇಳಿದವರು ಎಸ್.ಆರ್. ಮೇಷ್ಟ್ರೇ. ಅವರು ಇಲ್ಲಿಯವರೇ ಅಲ್ಲವಾ. ಈಗ ಅವರು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿದ್ದಾರೆ. ಮೌಲ್ಯಮಾಪನದ ಕೆಲಸದ ಸಂದರ್ಭದಲ್ಲಿ ಮೈಸೂರಿನಲ್ಲಿ ಶ್ರೀನಿವಾಸ ಸಿಕ್ಕಿದಾಗ ಏನೋ ಮಾತಿಗೆ ಬಂದು ನಿನ್ನ ವಿಷಯ ಅಂದರೆ ನೀನು ಎಂ.ಎ. ಮಾಡಿ ಕೆಲಸಕ್ಕೆ ಸೇರಿದ್ದು, ನೀನು ಮದುವೆಯಾಗಬೇಕಾಗಿದ್ದವರು ಆಕ್ಸಿಡೆಂಟಿನಲ್ಲಿ ತೀರಿಕೊಂಡದ್ದು, ಆಮೇಲೆ ನಿಮ್ಮ ತಾಯಿ ತೀರಿಕೊಂಡದ್ದು ಎಲ್ಲ ಹೇಳದರಂತೆ. ಅದೆಲ್ಲ ಕೇಳಿ ಶ್ರೀನಿವಾಸ್ ಕಣ್ಣೀರು ಹಾಕಿದರಂತೆ. ನಿನ್ನನ್ನು ಒಂದೇ ಒಂದು ಕ್ಷಣವೂ ಅವರು ಮರೆತಿಲ್ಲವಂತೆ. ನಿನ್ನ ನೆನಪಿಗಾಗಿಯೋ ಎಂಬಂತೆ ಈಗ ಇರುವ ಆ ಮಗಳಿಗೆ ನಿನ್ನ ಹೆಸರಿನ ಅರ್ಥವೇ ಬರುವ 'ಭೂಮಿಕಾ' ಎನ್ನುವ ಹೆಸರಿಟ್ಟಿದ್ದಾರಂತೆ. ನಿನ್ನನ್ನು ನೋಯಿಸಿದ್ದರಿಂದಾಗಿಯೇ ತನಗೀ ಗತಿ ಬಂತು ಎನ್ನುವ ಅಪರಾಧಿ ಭಾವ ಬೆಳೆಸಿಕೊಂಡಿದ್ದಾರಂತೆ. ತನ್ನಿಂದಾಗಿಯೇ ನಿನಗೆ ಈ ಎಲ್ಲ ಕಷ್ಟ ಬಂತು ಎನ್ನುವ ಕೊರಗು ಇದೆಯಂತೆ. ನಿನ್ನನ್ನು ಅಷ್ಟೊಂದು ಇಷ್ಟ ಪಡುತ್ತಾ ಇದ್ದ ಅವರ ಬದುಕು ಹೇಗೋ ಸಾಗಿ ಈಗ ಬ್ಯಾಕ್ ಟು ಸ್ಕ್ವೇರ್ ಒನ್ ಅಂತಾರಲ್ಲ ಹಾಗೆ ಆಗಿ ಮೊದಲಿನ ಸ್ಥಿತಿಗೇ ಬಂದಿದೆ. ನಿನ್ನ ಬದುಕೂ ಹೆಚ್ಚು ಕಡಮೆ ಹೇಗೋ ಹೋಗಿ ಏನೂ ಆಗದೆ ಅದೇ ರೀತಿ ಬ್ಯಾಕ್ ಟು ಸ್ಕ್ವೇರ್ ಒನ್ ಆಗಿ ಮೊದಲಿನ ಸ್ಥಿತಿಗೇ ಬಂದಿದೆ. ಆಗಿರೋದು ಏನಪ್ಪ ಅಂದರೆ ಇಬ್ಬರ ಬದುಕಿನಲ್ಲೂ ಅಷ್ಟು ವರ್ಷಗಳು ಕಳೆದುಹೋಗಿವೆ. ಆ ಮನುಷ್ಯನಲ್ಲಂತೂ ಈ ಕ್ಷಣಕ್ಕೂ ನಿನ್ನ ಬಗ್ಗೆ ಅದೇ ಪ್ರೀತಿ, ಆರ್ದ್ರ ಭಾವಗಳು, ಹಸಿರು ಭಾವಗಳೇ ತುಂಬಿವೆ. ನಿನಗೂ ಆಗ ಬೇಸರ ಅನ್ನಿಸಿದ್ದರೂ ಇಷ್ಟು ವರ್ಷ ಆದ ಮೇಲೆ ಅದೇ ಪ್ರೀತಿ, ಆರ್ದ್ರ ಭಾವಗಳಿರಬಹುದು ಅಂತ ನನ್ನ ಊಹೆ. ಹಾಗಿದ್ದರೆ ನಿಧಾನವಾಗಿ ನನಗೆ ನಿನ್ನ ನಿರ್ಧಾರ ತಿಳಿಸು. ಅವರ ಹತ್ತಿರ ನಾನೂ ಎಸ್.ಆರ್. ಮೇಷ್ಟ್ರೂ ಮಾತಾಡುತ್ತೀವಿ. ನೀವಿಬ್ಬರೂ ಮತ್ತೆ ಬದುಕಿನಲ್ಲಿ ಒಂದುಗೂಡುವಂತಾದರೆ ನಿಜಕ್ಕೂ ಅದೊಂದು ಅಪೂರ್ವ ಗಳಿಗೆ. ಆಗ ನಿನಗಿಂತ ಹೆಚ್ಚು ಸಂತೋಷಪಡುವವರು ನಾನು ಮತ್ತು ಹೇಮಾ" ಎಂದು ಮಾತು ಮುಗಿಸಿದರು. ಹೇಮಾ ಮತ್ತು ವಸುಂಧರಾ ಮರುದಿನ ಬೆಳಿಗ್ಗೆಯೇ ಹಿಂತಿರುಗಿದರು.

* * *

ಮೇಡಮ್ ಹೇಳಿದ್ದೆಲ್ಲ ಕೇಳಿದ ಮೇಲೆ ಮನೆಗೆ ಬಂದು ವಸುಂಧರಾ ಹಿಂದಿನದನೆಲ್ಲ ನೆನೆದಳು. ತಾನು ಮನಃಪೂರ್ವಕವಾಗಿ ಪ್ರೀತಿಸಿದ್ದು ಶ್ರೀನಿವಾಸ್ ಅಂದರೆ ಎನ್.ಎಸ್. ಮೇಷ್ಟ್ರನ್ನು ಮಾತ್ರ. ಶಾಮೂನ ಬಗ್ಗೆ ಎಂದೂ ಆ ರೀತಿಯ ಪ್ರೀತಿ ಇರಲೇ ಇಲ್ಲ, ಅವನನ್ನು ತನ್ನ ಬಾಳ ಸಂಗಾತಿ ಎನ್ನುವ ರೀತಿಯಲ್ಲಿ ಎಂದೂ ಕಲ್ಪಿಸಿಕೊಂಡಿರಲಿಲ್ಲ. ಅವನು ಅಂದು ತನ್ನ ಮೇಲೆ ಮಾಡಿದ್ದು ವಸ್ತುಶಃ

ಅತ್ಯಾಚಾರ. ಕೂಡಿದ ಕ್ಷಣದಲ್ಲಿ ದೇಹ ಅದರ ಧರ್ಮಕ್ಕೆ ತಕ್ಕಂತೆ ಸ್ಪಂದಿಸಿ ಒಂದು ಬಗೆಯ ಸುಖದ ಭಾವ ಉಂಟಾಗಿದ್ದರೂ ಅದು ಅತ್ಯಂತ ಕ್ಷಣಿಕ. ಆ ವಿಷಯಕ್ಕೆ ಅವನ ಬಗ್ಗೆ ಆಗ ಉಂಟಾದದ್ದು ತಿರಸ್ಕಾರವೇ, ಕೋಪವೇ. ಆಮೇಲೂ ಅವನ ಬಗ್ಗೆ ಶಾಶ್ವತವಾಗಿ ಉಳಿದಿರುವುದು ತಿರಸ್ಕಾರವೇ. ಇನ್ನು ತನ್ನನ್ನು ಮದುವೆಯಾಗಬೇಕಿದ್ದ ರಂಗನಾಥ್ ಬಗೆಗಿನದು ಕೇವಲ ಕಲ್ಪನೆಯಲ್ಲೇ ಪರ್ಯವಸಾನಗೊಂಡಿತು. ತಾನು ಅಂದುಕೊಂಡಿದ್ದಂತೆ ಸಂಸಾರದಲ್ಲಿ ಆಗಲೇ ನೆಲೆಗೊಂಡಿದ್ದ ಶ್ರೀನಿವಾಸ್ ನೆನಪಿನಲ್ಲೇ ತನ್ನ ಇಡೀ ಬಾಳನ್ನು ಕಳೆಯಲು ಸಾಧ್ಯವಿಲ್ಲವೆಂಬ ವಾಸ್ತವ ಎದುರಾದಾಗ ತಂದೆ ತಾಯಿ, ಹಿತೈಷಿಗಳು, ಹಾಗೂ ಸ್ನೇಹಿತರ ಸಲಹೆಯ ಮೇರೆಗೆ ಸಂಸಾರದಲ್ಲಿ ಆಗ ನನಗುಳಿದಿದ್ದ ಅನಿವಾರ್ಯವಾಗಿದ್ದ ಒಂದು ಪರ್ಯಾಯ ಅಷ್ಟೆ; ಪ್ರೀತಿ ಅಲ್ಲ. ಶ್ರೀನಿವಾಸ್ ವಿಷಯಕ್ಕೆ ಆಗ ತನ್ನ ಮನಸ್ಸಿನಲ್ಲಿ ಕಹಿ ಇದ್ದು ಮನಸ್ಸು ಕಲ್ಲಾಗಿದ್ದದ್ದು ನಿಜ. ಆದರೆ ಅಮ್ಮನ ಸಾವು ಬದುಕಿನ ಇಕ್ಕಟ್ಟಿನ ಸನ್ನಿವೇಶದಲ್ಲಿ ವಿಧಿಯಿಲ್ಲದೆ ತನ್ನನ್ನು ಮದುವೆಯಾಗಲು ಅವರಿಗೆ ಸಾಧ್ಯವಾಗಲಿಲ್ಲವೆ ಹೊರತು ಬೇರೆ ಕಾರಣಕ್ಕಾಗಿ ಅಲ್ಲ ಎಂಬುದು ದೃಢವಾದ ಮೇಲೆ ಆ ಕಹಿ ಉಳಿದಿರಲಿಲ್ಲ. ಅಲ್ಲದೆ ಮಮತಾ ಮೇಡಮ್ ಮಾತಿನ ಮಧ್ಯೆ ಎಸ್.ಆರ್. ಮಾಸ್ಟರ್ ಅವರಿಂದ ತಾವು ಕೇಳಿದ್ದ ಒಂದು ಸಂಗತಿಯನ್ನು ಹೇಳಿದ ಮೇಲಂತೂ ಶ್ರೀನಿವಾಸನ ಸ್ವಭಾವದ ಬಗ್ಗೆ ಮೊದಲೇ ತಿಳಿದಿದ್ದ ವಸುಂಧರಾಗೆ ಅವನ ಬಗೆಗಿನ ಪ್ರೀತಿ ಮತ್ತು ಗೌರವ ಇನ್ನಷ್ಟು ಹೆಚ್ಚಾಯಿತು. ಅದು– ತುಮಕೂರು ವಿಜ್ಞಾನ ಕಾಲೇಜಿನಲ್ಲಿ ಮೇಲ್ಜಾತಿಯ ಪ್ರಾಣಿಶಾಸ್ತ್ರ ಉಪನ್ಯಾಸಕಳೊಂದಿಗೆ ದೇಹ ಸಂಬಂಧವನ್ನೂ ಇಟ್ಟುಕೊಂಡು ನಂತರ ತಮ್ಮ ಧರ್ಮದವಳನ್ನೇ ಮದುವೆಯಾದ ಅಲ್ಪ ಸಂಖ್ಯಾತ ಕೋಮಿನ ಅದೇ ವಿಭಾಗದ ಲೆಕ್ಚರರ್ ತುಮಕೂರು ಕಾಲೇಜಿನಲ್ಲಿ ಶ್ರೀನಿವಾಸ್‌ಗೆ ಓಂದು ಸಲ "ಏನು ಶ್ರೀನಿವಾಸ್ ಆ ಬ್ರಾಹ್ಮಣರ ಹುಡುಗಿ ಜೊತೆ ನಿಮ್ಮದು ಏನೋ ಅಫೇರ್ ಇತ್ತಲ್ಲ ಎಲ್ಲಿಗೆ ಬಂತು" ಅಂತೇನೋ ಕೇಳಿದಾಗ, "ಏನೂ ಇಲ್ಲ, ಸುಮ್ಮನೆ ಮಾತಾಡಿರೋದು ಅಷ್ಟೆ" ಅಂದಾಗ, "ಅದೆಂಥಾ ಲವರ್ ರೀ ನೀವು? ನಿಷ್ಪ್ರಯೋಜಕರು. ಮೊದಲನೇ ಸಲ ನೋಡಬೇಕು. ಎರಡನೇ ಸಲ ಮಾತಾಡಬೇಕು. ಮೂರನೇ ಸಲಕ್ಕೆ ಮಜಾಮಾಡಬೇಕು. ಇಲ್ಲದಿದ್ದರೆ ಅದೆಂಥಾ ಅಫೇರು ಅದೆಂಥಾ ಲವ್ವು? ನನ್ನ ಪ್ರಿನ್ಸಿಪಲ್ಲೇನೋ ಇದೇ" ಅಂದಾಗ "ನಿಮ್ಮ ಪ್ರಿನ್ಸಿಪಲ್ ನೀವೇ ಇಟ್ಟುಕೊಳ್ಳಿ. ನಾನು ನಿಮ್ಮಷ್ಟು ಪ್ರಗತಿಪರ ಅಲ್ಲ; ನಿಷ್ಪ್ರಯೋಜಕನಾಗೇ ಇರುತ್ತೀನಿ. ಹೆಣ್ಣು ಮಕ್ಕಳ ಬದುಕಿನ ಬಗ್ಗೆನೂ ಯೋಚನೆ ಮಾಡಬೇಕಲ್ಲವೆ" ಅಂದಿದ್ದನಂತೆ. ಈಗ ಅವರ ಬಾಳಿನಲ್ಲಿ ಆಮೇಲೆ ಆಗಿಹೋದ ದುರಂತ ತಿಳಿದ ನಂತರದಲ್ಲಂತೂ ಆತನ ವಿಷಯಕ್ಕೆ ಮನಸ್ಸು ತೀರ ಮೃದುವಾಗಿದೆ ಎಂದು ಅವಳಿಗೇ ಅನ್ನಿಸಿತು. ಇದೀಗ ಅತ್ಯಂತ ಅನಿರೀಕ್ಷಿತವಾಗಿ ನಾನು ಮನಸಾರೆ ಪ್ರೀತಿಸಿದ ವ್ಯಕ್ತಿಯೇ ನನ್ನ ಬಾಳ ಸಂಗಾತಿಯಾಗಿ ಬದುಕಿನ ಪಯಣದಲ್ಲಿ ಶಾಶ್ವತವಾಗಿ ನನ್ನೊಂದಿಗೆ ಹೆಜ್ಜೆಹಾಕುವ ಸಂದರ್ಭ ತಾನಾಗಿ ಒದಗಿ ಬರುತ್ತಿರುವಾಗ ಅದರಿಂದ ವಿಮುಖಳಾಗುವುದರಲ್ಲಿ ಯಾವ ಅರ್ಥವೂ ಇಲ್ಲ ಎನಿಸಿತು. ಮಮತಾ ಮೇಡಮ್ ಮತ್ತು ಎಸ್.ಆರ್. ಮಾಸ್ಟರ್ ಅವರುಗಳು

ಇದರ ರೂವಾರಿಗಳಾಗಿ ಒದಗಿ ಬರುತ್ತಿರುವುದೂ ನನ್ನ ಅದೃಷ್ಟವೇ. ಈ ಗಳಿಗೆಯಲ್ಲಿ ಅಮ್ಮ ಇದ್ದಿದ್ದರೆ ನಿಜಕ್ಕೂ ಅತ್ಯಂತ ಸಂತೋಷಪಡುತ್ತಿದ್ದಳು. ಅಪ್ಪ ಸಂತೋಷ ಪಡುತ್ತಾರೋ ಹೇಗೋ ತಿಳಿಯದು. ಆದರೆ ಖಂಡಿತವಾಗಿಯೂ ವಿರೋಧಿಸಲಾರರು. ವಿರೋಧಿಸಿದರೂ ಅವರ ವಿರೋಧವನ್ನು ಮೆಟ್ಟಿನಿಲ್ಲುವ ಸಂಕಲ್ಪ, ಶಕ್ತಿ ನನಗೆ ಅಂದೂ ಇತ್ತು, ಇಂದೂ ಇದೆ. ಹೀಗೆಲ್ಲ ಯೋಚಿಸಿ ಅವಳ ಮನಸ್ಸು ಮತ್ತು ಹೃದಯಕ್ಕೆ ಎಲ್ಲಿಲ್ಲದ ಹಿಗ್ಗುಂಟಾಯಿತು; ನೆಮ್ಮದಿ ಉಂಟಾಯಿತು. ಇನ್ನೇನು ನಾನು ಹೀಗೆಯೇ ಒಂಟಿಯಾಗಿಯೇ ಮುಂದಿನ ಬದುಕಿನ ಪಯಣ ಸಾಗಿಸದೆ ವಿಧಿಯಿಲ್ಲ ಎಂದು ಮನಸ್ಸನ್ನು ಅದಕ್ಕೆ ಅಣಿಗೊಳಿಸುತ್ತಿದ್ದ ಕ್ಷಣದಲ್ಲಿ ಒಮ್ಮೆಲೇ ಒದಗಿ ಬಂದ ಈ ತಿರುವು ನಿಜಕ್ಕೂ ನನ್ನ ಸುಕೃತ ಎಂದೇ ತಿಳಿದಳು. ತನ್ನ ನಿರ್ಧಾರ ತಿಳಿಸಲು ನಿಧಾನ ಮಾಡುವ ಅಗತ್ಯವೇ ಇಲ್ಲ ಎನಿಸಿತು. ಹೇಮಾಳಿಗೂ ತನ್ನ ಯೋಚನೆ ಮತ್ತು ನಿರ್ಧಾರ ತಿಳಿಸಿದಾಗ ಅವಳು ಇದಕ್ಕಿಂತ ಒಳ್ಳೆಯ ನಿರ್ಧಾರ ಇನ್ನೊಂದು ಇರಲು ಸಾಧ್ಯವೇ ಇಲ್ಲ ಎಂದು ಗೆಳತಿಯನ್ನು ಅಭಿನಂದಿಸಿದಳು.

ಹಾಸನದಿಂದ ಬಂದ ಒಂದು ವಾರದ ನಂತರ ಮಮತಾ ಮೇಡಮ್ ಅವರಿಗೆ ಫೋನ್ ಮಾಡಿ ತನ್ನ ನಿರ್ಧಾರ ತಿಳಿಸಿದಳು. ಅವರು ಬಹಳ ಸಂತೋಷಪಟ್ಟು "ಹಾಗಾದರೆ ಈ ಭಾನುವಾರ ಬೆಳಿಗ್ಗೆ ನೀನೊಬ್ಬಳೇ ಬಾ. ಶ್ರೀನಿವಾಸ್‌ಗೂ ಬರಲು ಹೇಳ್ತೀನಿ. ನಿಮ್ಮ ಹಳೇ ಪ್ರೀತಿಯನ್ನು ರಿನ್ಯೂ ಮಾಡಿಕೊಳ್ಳುವಿರಂತೆ" ಎಂದರು.

ಅಧ್ಯಾಯ–30

ತಂದೆ ತೀರಿಕೊಂಡು ಒಂದು ತಿಂಗಳೇ ಕಳೆಯಿತು. ತನ್ನ ಪಿಎಚ್.ಡಿ. ಫಲಿತಾಂಶ ಅಧಿಕೃತವಾಗಿ ಘೋಷಣೆಯಾದ ಮೇಲೆ ಅಶೋಕ ಮಹಾಪಾತ್ರ ಅವರನ್ನು ಭೇಟಿ ಮಾಡಲೇ ಇಲ್ಲವಲ್ಲ ಎಂದು ಯೋಚಿಸಿ ಒಂದು ಶನಿವಾರ ಸೂಚನೆ ಕೊಡದೆ ನೇರವಾಗಿ ಅವರ ವಿಭಾಗದಲ್ಲಿನ ಅವರ ಕೊಠಡಿಗೇ ಹೋದಳು. ಅಶೋಕರು ಆಗತಾನೆ ತರಗತಿ ಮುಗಿಸಿ ವಿರಾಮವಿದ್ದುದರಿಂದ ಪುಸ್ತಕವೊಂದರಲ್ಲಿ ಕಣ್ಣುಗಳನ್ನು ಕೀಲಿಸಿ ಏನೋ ಓದುತ್ತ ಕುಳಿತಿದ್ದರು. "ನಮಸ್ಕಾರಾ ಸರ್" ಎಂಬ ಅತ್ಯಂತ ಪರಿಚಿತ ದನಿ ಕೇಳಿ ತಲೆಯೆತ್ತಿ ಆಶ್ಚರ್ಯ ಮತ್ತು ಸಂತಸದ ಕಣ್ಣುಗಳಿಂದ ನೋಡಿದರು. "ಇದೇನು ಹೇಮಾ ಇದ್ದಕ್ಕಿದ್ದ ಹಾಗೆ ಬಂದು ಬಿಟ್ಟರಿ?" ಎಂದರು. "ಹೇಮಾ ಐ ಮೀನ್ ನಮ್ಮ ಹೇಮಾವತಿ ನದಿ, ಪ್ರವಾಹ ಬಂದಾಗ ಹರಿಯೋದೇ ಹಾಗಂತೆ. ಬೇರೆ ಎಲ್ಲೋ ಮಳೆಯಾದರೆ ನಿರೀಕ್ಷಿಸದೆ ಇದ್ದ ಕಡೆ ನಿರೀಕ್ಷಿಸದೆ ಇದ್ದ ರೀತಿಯಲ್ಲಿ ಉಕ್ಕಿ ಹರಿದುಬಿಡುತ್ತೆ ಅಂತ ಕವಿಗಳು ಹೇಳ್ತಾರೆ ಸರ್." ಅವಳ ಮಾತಿನ ಚಾತುರ್ಯ ಮತ್ತು ತುಂಟತನ ಅವರಿಗೆ ಎಲ್ಲಿಲ್ಲದ ಮುದಕೊಟ್ಟಿತು. ಆಮೇಲೆ "ಏನೋ ನಿಮ್ಮನ್ನು ನೋಡಬೇಕೆನ್ನಿಸಿತು ಬಂದುಬಿಟ್ಟೆ". "ದಟೀಸ್ ಲೈಕ್ ಎ ಗುಡ್ ಗರ್ಲ್. ರಿಯಲೀ ಇಟೀಸ್ ಮೈ ಫಾರ್ಚೂನ್" ಎಂದು ನಕ್ಕರು. "ಐ ಹೋಪ್ ಇಟ್ ವಿಲ್ ಬಿ ಮೈ ಫಾರ್ಚೂನ್ ಆಲ್ಸೋ" ಎಂದು ಹೇಳಿ "ನಿಮ್ಮ ಹತ್ತಿರ ಪರ್ಸನಲ್ ಆಗಿ ಮಾತಾಡೋದಿದೆ" ಎಂದಳು. "ಶೂರ್, ಬನ್ನಿ" ಎಂದು ಹೇಳಿ ಅವಳನ್ನು ಕಾರಿನಲ್ಲಿ ಕೂಡಿಸಿಕೊಂಡು ಸ್ವಲ್ಪ ದೂರ ಸಾಗಿದ ಮೇಲೆ ಜನವಿದೂರವಾದ ಒಂದು ಜಾಗದಲ್ಲಿ ಕಾರು ನಿಲ್ಲಿಸಿ ಅಲ್ಲೊಂದು ಮರದ ಕೆಳಗೆ ಹುಲ್ಲು ಹಾಸಿನ ಮೇಲೆ ಇಬ್ಬರೂ ಕುಳಿತುಕೊಂಡರು.

ಐದು ನಿಮಿಷವಾಯಿತು, ಹತ್ತು ನಿಮಿಷವಾಯಿತು. ಪರ್ಸನಲ್ ಆಗಿ ಮಾತನಾಡಬೇಕೆಂದ ಹೇಮಾ ಮೌನ ಗೌರಿಯಾಗಿಬಿಟ್ಟಳು. ಹೇಗೆ ಮಾತು ಆರಂಭಿಸಬೇಕೆಂದು ತಿಳಿಯದೆ ಒದ್ದಾಡುತ್ತಾ ಇದ್ದಾಳೆ. ಕೊನೆಗೂ ಮೌನ ಮುರಿದು "ಸರ್, ವೈವಾಕ್ಕೆ ಬಂದಾಗ ಅಮ್ಮ ಏನೋ ಒಂದು ಮಾತು ಹೇಳಿದ್ದರು....." ಎಂದು ನಿಲ್ಲಿಸಿದಳು. ಅಶೋಕರು– "ಹೌದು ಹೇಮಾ, ಅದನ್ನು ಹೇಗೆ ಪ್ರಸ್ತಾಪಿಸುವುದು ಎಂದು ತಿಳಿಯದೆ ಒದ್ದಾಡುತ್ತಾ ಇದ್ದೆ. ಥ್ಯಾಂಕ್ಸ್ ಎ ಲಾಟ್. ಅಮ್ಮ ಎಲ್ಲ ಹೇಳಿದ್ದಾಳೆ. ಪ್ರಮಿತಾ ಅಂದರೆ ಪ್ರಮಿತಾ ಮೊಹಂತಿ ಆಕ್ಸಿಡೆಂಟ್‌ನಲ್ಲಿ ತೀರಿಕೊಂಡ ಮೇಲೆ ಸಾಂಸಾರಿಕ ಬದುಕಿನ ಬಗ್ಗೆ ಒಂದು ರೀತಿಯಲ್ಲಿ ನನಗೆ ತೀವ್ರ ವೈರಾಗ್ಯ ಬಂದುಬಿಟ್ಟಿತ್ತು. ನನ್ನ ಸ್ಟಡೀಸ್‌ನಲ್ಲೇ ಎಲ್ಲ ಸಂತೋಷ ಕಂಡುಕೊಳ್ತಾ ಇದ್ದೆ. ಅದೇನೋ ಅಂಥ

ಸಮಯದಲ್ಲಿ ನೀವು ಬಂದಿರಿ. ನೀವೂ ನನ್ನ ಹಾಗೆಯೇ ಒಬ್ಬ ಅಕಾಡೆಮಿಕ್ ಇಂಟರೆಸ್ಟ್ ಇರುವಂಥವರು ಅಂತ ತಿಳಿದು ಸಂತೋಷವಾಗಿತ್ತು. ನನ್ನ ಅಭಿರುಚಿ, ಆಸಕ್ತಿಗೆ ತಕ್ಕ ಸ್ನೇಹಿತರು ಅಂತ ಅನ್ನಿಸಿತ್ತು. ನಿಮ್ಮ ಜೊತೆ ಮಾತಾಡುವಾಗ ಚರ್ಚಿಸುವಾಗ ನನಗೆ ಎಲ್ಲಿಲ್ಲದ ಸಂತೋಷ ಸಿಗುತ್ತಾ ಇತ್ತು. ಅಮ್ಮ ಅದನ್ನು ಕಂಡುಕೊಂಡಳು. ನೀವೂ ಡೈವರ್ಸ್ ತೆಗೆದುಕೊಂಡು ನನ್ನ ಹಾಗೇ ವೈವಾಹಿಕ ಬದುಕು ಮುರಿದು ಬಿದ್ದು ನೊಂದಿದ್ದಿರಿ. ನೀವು, ನಾನು ಜೀವನದಲ್ಲೂ ಜೊತೆಗೂಡಿದರೆ ನಾವಿಬ್ಬರೂ ಮತ್ತೆ ಬದುಕಿನ ಪಯಣ ಪ್ರಾರಂಭಿಸಬಹುದು ಅಂತ ಅಮ್ಮನ ಅಂತಃಕರಣಕ್ಕೆ ತೋಚಿತು. ಅದನ್ನೇ ನಿಮಗೆ ಹೇಳಿದಳು. ಅಷ್ಟೇ ಅಲ್ಲ ಪಟ್ಟುಹಿಡಿದು ನನಗೂ ಒಪ್ಪಿಸಿದಳು. ನೀವು ಬೆಂದುಹೋಗಿರುವ ನನ್ನ ಹೃದಯಕ್ಕೆ ಪ್ರೀತಿಯ ಮಳೆ ಕರೆಯಲು ಸಾಧ್ಯವೆ? ಅಲ್ಲಿ ಹೊಸ ಹಸಿರು ಹೊಮ್ಮಿಸಲು ಸಾಧ್ಯವೆ? ಈ ಹೊತ್ತು ನಾನು ಭಿಕ್ಷುಕನಾಗಿ ನಿಮ್ಮ ಮುಂದೆ ನಿಂತಿದ್ದೀನಿ" ಎಂದು ತಮ್ಮ ಮನಸ್ಸಿನಲ್ಲಿದ್ದುದನ್ನೆಲ್ಲಾ ಆಡಿ ಮುಗಿಸಿದರು. ಹೇಮಾ – "ಸರ್, ಇಲ್ಲಿ ಒಬ್ಬರು ಕೊಡೋರು ಇನ್ನೊಬ್ಬರು ತಗೊಳ್ಳೋರು ಅನ್ನುವ ಮಾತೇ ಇಲ್ಲ. ಇಬ್ಬರೂ ಕೊಡೋರು ಮತ್ತು ಇಬ್ಬರೂ ತಗೊಳ್ಳೋರು. ಆದರೆ, ಆದರೆ ನಾವು ಭಾರತೀಯ ಸಮಾಜಕ್ಕೆ ಸೇರಿದವರು. ಇಲ್ಲಿಯ ಸಮಾಜದಲ್ಲಿ ಜಾತಿ, ಜಾತಿಗೇ ವಿಶಿಷ್ಟವಾದ ಸಂಸ್ಕೃತಿ ಇದೆಲ್ಲ ಇದೆ. ನಾವು ಲಿಂಗಾಯಿತರು. ನೀವು ಬಹುಶಃ ಬ್ರಾಹ್ಮಣರು ಅಂತ ತಿಳಿದುಕೊಂಡಿದ್ದೀನಿ. ಇದು ನಿಮಗೆ ಆಗಬಹುದಾ ಸರ್." ಅಶೋಕರು ಗಹಗಹಿಸಿ ನಕ್ಕರು. "ಒಬ್ಬ ಸೋಷಿಯಾಲಜಿಸ್ಟ್ ಆಗಿ ನೀವು ಜಾತಿಯ ವಿಷಯ ಎತ್ತುತ್ತಿದ್ದೀರಲ್ಲ! ನನ್ನ ವೈಯಕ್ತಿಕ ವಿಷಯ ನನ್ನ ಅಮ್ಮನನ್ನು ಬಿಟ್ಟರೆ ಬೇರೆ ಯಾರಿಗೂ ಗೊತ್ತಿಲ್ಲ. ನಾನೊಬ್ಬ ಅನಾಥ. ಅನಾಥಾಶ್ರಮದಲ್ಲಿ ಬೆಳೆದವನು. ಹಾಗಾಗಿ ನನ್ನ ಜಾತಿ ಯಾವುದು ಅಂತ ನನಗೆ ಗೊತ್ತಿಲ್ಲ. ಮಕ್ಕಳಿಲ್ಲದ ಮಹಾಪಾತ್ರ ದಂಪತಿಗಳು ಮೂರು ವರ್ಷದ ಮಗುವಾಗಿದ್ದ ನನ್ನನ್ನು ಅನಾಥಾಶ್ರಮದಿಂದ ತಂದು ಪ್ರೀತಿಯಿಂದ ಬೆಳೆಸಿ ವಿದ್ಯಾಭ್ಯಾಸ ಮಾಡಿಸಿ ಒಂದು ವ್ಯಕ್ತಿತ್ವ ಕೊಟ್ಟು ಮನುಷ್ಯನನ್ನಾಗಿ ಮಾಡಿದರು. ನಾನು ಹೊಟ್ಟೆಯಲ್ಲಿ ಹುಟ್ಟಿದ ಮಗನಲ್ಲ ಎನ್ನುವ ಭಾವನೆ ಒಂದು ದಿನವೂ ಬಾರದ ಹಾಗೆ ಪ್ರೀತಿ ವಾತ್ಸಲ್ಯದಿಂದ ಬೆಳೆಸಿದರು. ಅವರು ಒರಿಸ್ಸಾದ ಬ್ರಾಹ್ಮಣರಾದ್ದರಿಂದ ನನಗೆ ಉಪನಯನ ಸಂಸ್ಕಾರವನ್ನೂ ಮಾಡಿ ನನ್ನ ಹೆಸರಿನ ಜೊತೆಗೆ 'ಮಹಾಪಾತ್ರ' ಎಂಬ ಅವರ ಸರ್ ನೇಮ್ ಕೂಡ ಕೊಟ್ಟರು. ನಾನು ಅವರ ದತ್ತು ಪುತ್ರ ಅಂತ ಗೊತ್ತಾದದ್ದು ನಮ್ಮ ತಂದೆ ಲಕ್ಷ್ಮಣ ಮಹಾಪಾತ್ರ ಅವರು ತೀರಿಕೊಂಡಾಗ. ಸಂಸ್ಕಾರದ ಸಮಯದಲ್ಲಿದ್ದ ಬಂದಿದ್ದ ಅವರ ದಾಯಾದಿಗಳಿಂದ. ಅದುವರೆಗಾಗಲೇ ಯೂನಿವರ್ಸಿಟಿಯಲ್ಲಿ ನನಗೆ ಐದು ವರ್ಷ ಸರ್ವೀಸ್ ಆಗಿತ್ತು. ನಿಜ ಹೇಳಬೇಕೆಂದರೆ ಮಗು ಹುಟ್ಟಿದಾಗ ಅದಕ್ಕೆ ಯಾವ ಜಾತಿಯೂ ಇರಲ್ಲ. ಆಮೇಲೆ ನಾವು ಅದರ ತಲೆಯಲ್ಲಿ ಜಾತಿ ಬೀಜ ಬಿತ್ತುತ್ತೇವೆ. ನಮ್ಮ ತಂದೆ ತಾಯಿಗಳು ಅತ್ಯಂತ ಉದಾರಿಗಳು. ಜಾತಿಯ ಸಂಕುಚಿತ ಭಾವ ಯಾವತ್ತೂ ಬಾರದ ಹಾಗೆ ಬೆಳೆಸಿದರು. ಈಗ ಹೇಳಿ ನಾನು ಯಾವ ಜಾತಿ? ಬ್ರಾಹ್ಮಣನಾ? ನೀವೇ ಹೇಳುತ್ತಿದ್ದಿರಿ ಬ್ರಾಹ್ಮಣ ಜಾತಿಯಲ್ಲಿ

ಹುಟ್ಟಿದ ಬಸವಣ್ಣನವರು ಜನಿವಾರ ಕಿತ್ತೆಸೆದು, ಜಾತಿರಹಿತ, ಮೇಲು ಕೀಳುಗಳಿಲ್ಲದ ಸಮ ಸಮಾಜದ ರಚನೆಯ ಕನಸನ್ನು ನನಸು ಮಾಡಿದ್ದವರು ಎಂದು. ಈಗ ಇಂಥ ನಾನು ನಿಮಗೆ ಒಪ್ಪಿಗೇನಾ?" ಅವರ ವಾದ ಸರಣಿ ಕೇಳಿ ಹೇಮಾ ಅಪ್ರತಿಭಳಾದಳು. "ನಿಜ ಸರ್. ನಮ್ಮ ರಾಷ್ಟ್ರ ಕವಿ ಕುವೆಂಪು ಕೂಡ ಇದೇ ಮಾತು ಹೇಳ್ತಾರೆ. ಜಾತಿ ಇಲ್ಲದೆ ಹುಟ್ಟಿದ ಮಗುವನ್ನು ನಾವು ಜಾತಿಯಲ್ಲಿ ಬೆಳೆಸಿ ವಿಶ್ವಮಾನವನಾಗಬೇಕಾಗಿದ್ದವನನ್ನು ಸಂಕುಚಿತ ಮಾನವನನ್ನಾಗಿ ಮಾಡುತ್ತೇವೆ ಅಂತ." ಅಶೋಕ ಅವರು ಹೇಮಾಳ ಕೈ ಹಿಡಿದು– "ಸಂಶೋಧನೆಯಲ್ಲಿ ನಾನು ನಿಮಗೆ ಗೈಡ್ ಆಗಿದ್ದೆ. ಆದರೆ ಬದುಕಿನಲ್ಲಿ ನೀವು ನನಗೆ ಗೈಡಾಗಿ ಮುನ್ನಡೆಸುತ್ತೀರಾ?" ಎಂದು ಭಾವುಕರಾಗಿ ಕೇಳಿದರು. ಹೇಮಾ– "ನಾನು ತಪ್ಪಿದರೆ ನೀವು ಗೈಡಾಗಿ ನನ್ನನ್ನು ತಿದ್ದಿ, ನೀವು ತಪ್ಪಿದರೆ ನಾನು ಗೈಡಾಗುತ್ತೀನಿ." ಎಂದು ಹೇಳಿ ಮುಗುಳ್ನಕ್ಕಳು. "ಬನ್ನಿ ಹೇಮಾ ಲೇಟಾಗಿದೆ. ಅಮ್ಮನಿಗೆ ಈಗ ತೊಂದರೆ ಕೊಡೋದು ಬೇಡ. ನಾವು ಹೊರಗಡೆ ಎಲ್ಲಾದರೂ ಹೋಟೆಲ್‌ನಲ್ಲಿ ಊಟಮಾಡಿಕೊಂಡು ಅಮ್ಮನಿಗೆ ಸ್ವೀಟ್ ಜೊತೇಲಿ ಸ್ವೀಟ್ ನ್ಯೂಸ್ ಕೊಡೋಣ."

ಸಂಜೆ ನಾಲ್ಕು ಗಂಟೆಯ ಹೊತ್ತಿಗೆ ಸ್ವೀಟ್ ಪ್ಯಾಕೆಟ್ ಹಿಡಿದು ಜೊತೆಯಲ್ಲಿ ಬಂದ ಹೇಮಾ ಮತ್ತು ಅಶೋಕರನ್ನು ನೋಡಿಯೇ ಅಮ್ಮನಿಗೆ ಸಂತಸ ಉಕ್ಕಿಬಂತು. ಇಬ್ಬರೂ ಅರ್ಧರ್ಧ ಸ್ವೀಟನ್ನು ಅವರ ಬಾಯಲ್ಲಿಟ್ಟು ಕಾಲಿಗೆ ನಮಸ್ಕರಿಸಿದರು. ಅವರನ್ನು ಬಾಯಿ ತುಂಬ ಹರಸುತ್ತ "ಈ ಹೇಮಾವತಿಯ ದಡದಲ್ಲಿ ಅಶೋಕ ವೃಕ್ಷ ಸದಾ ಹಸಿರಾಗಿರಲಿ" ಎಂದರು. "ಭಾವೀ ಸೊಸೆ ಹೇಮಾಳ ಹೆಸರಿನ ಪ್ರಭಾವದಿಂದ ಅಮ್ಮ ಕೂಡ ಕವಿಯಾಗಿಬಿಟ್ಟರು" ಎಂದು ಅಶೋಕ ಉದ್ಗರಿಸಿದರು.

ಅಧ್ಯಾಯ–31

ಮಮತಾ ಅವರು ತಿಳಿಸಿದ ಪ್ರಕಾರವೇ ವಸುಂಧರಾ ಭಾನುವಾರ ಬೆಳಗಿನ ಬಸ್ಸಿಗೇ ಹೊರಟು 11 ಗಂಟೆಗೆಲ್ಲ ಹಾಸನ ತಲುಪಿದಳು. ಮಮತಾ ನಗುಮುಖದಿಂದ ಬರಮಾಡಿಕೊಂಡರು. ಒಳಗೆ ಕಾಲಿಟ್ಟ ಕೂಡಲೇ ಎದುರಿನ ಸೋಫಾದ ಮೇಲೆ ಸ್ಥೂಲಕಾಯದವರೊಬ್ಬರು ಕುಳಿತಿದ್ದು ಕಂಡುಬಂತು. ತಕ್ಷಣ ಯಾರೆಂದು ಗೊತ್ತಾಗದೆ ಮೇಲೆ ಕೆಳಗೆ ನೋಡಿದಳು. "ಯಾಕ್ರೀ ವಸುಂಧರಾ ಗುರುತು ಸಿಕ್ಕಲಿಲ್ಲವೇನ್ರೀ" ಅಂತ ಅವರು ಕೇಳಿದ ಕೂಡಲೇ ಅಯ್ಯೋ ನನಗೇನು ಬಂತು! ಎಸ್.ಆರ್. ಮಾಸ್ಟರ್ ಅಲ್ಲವೆ ಎನಿಸಿ "ನಮಸ್ಕಾರಾ ಸರ್" ಎಂದಳು. "ಸಾರಿ ಸರ್ ನನಗೆ ತಕ್ಷಣ ಗುರುತು ಸಿಕ್ಕಲಿಲ್ಲ" "ತಪ್ಪು ನಿಮ್ಮದಲ್ಲಮ್ಮ. ನೀವು ತುಮಕೂರಿನಲ್ಲಿ ನೋಡಿದಾಗ ಕದಿರು ಕಡ್ಡಿ ಥರ ಇದ್ದೋನು ಈಗ ದೊಣ್ಣೆ ಥರ ಆಗಿಬಿಟ್ಟಿದ್ದೀನಲ್ಲ ಅದರ ಎಫೆಕ್ಟು. ನೀವು ತಾನೆ ಅದು ಹ್ಯಾಗೆ ಗುರುತು ಹಿಡೀತೀರಿ?" ಎಂದು ನಕ್ಕರು. ವಸುಂಧರಾ ಕೂಡಾ ನಕ್ಕಳು. ಬನ್ನಿ ಕೂತುಕೊಳ್ಳಿ ಎಂದು ತಮ್ಮ ಎದುರಿನ ಸೋಫಾ ಕಡೆ ಕೈ ತೋರಿಸಿದರು. ಒಂದು ನಿಮಿಷ ಬಂದೆ ಎಂದು ಹೇಳಿ ಮಮತಾ ಒಳಕ್ಕೆ ಹೋದರು. "ನೋಡ್ರೀ ವಸುಂಧರಾ ನಿಮ್ಮ ನಗು ಮಾತ್ರ ಹಾಗೆ ಇದೇರೀ. ಆದರೂ ಮುಖದ ಮೇಲೆ ಅಗತ್ಯಕ್ಕಿಂತ ಹೆಚ್ಚೇ ಗಾಂಭೀರ್ಯ ಕಾಣಿಸುತ್ತೆ. ನಿಮ್ಮ ಜೀವನದಲ್ಲಾದ ಆಘಾತಗಳ ಪರಿಣಾಮ ಇರಬೇಕು. ಸ್ವಲ್ಪ ಸೊರಗಿದ ಹಾಗೆ ಕಾಣ್ತೀರಿ. ಇನ್ನುಮೇಲೆ ಸರಿಹೋಗ್ತೀರಿ ಬಿಡಿ. ನೀವು ಹೀಗೇ ನಗು ನಗುತ್ತಾ ಇರಬೇಕು ಅನ್ನುವುದೇ ನಮ್ಮೆಲ್ಲರ ಆಸೆ. ಅದಕ್ಕೇ ನಾನು, ಮಮತಾ ನಿಮಗೆ ಇವತ್ತು ಇಲ್ಲಿಗೆ ಬರಲು ಹೇಳಿದ್ದು." "ನಾನು ನಕ್ಕು ತುಂಬ ಕಾಲ ಆಯ್ತು ಸರ್" ಎಂದು ಹೇಳುತ್ತಿದ್ದವಳ ಕಣ್ಣಂಚಿನಲ್ಲಿ ನೀರಾಡಿತು. ಅದೇ ಸಮಯಕ್ಕೆ ಶ್ರೀನಿವಾಸ್‌ನೊಂದಿಗೆ ಅಲ್ಲಿಗೆ ಬಂದ ಮಮತಾ "ನೋಡ್ರೀ ಶ್ರೀನಿವಾಸ್ ಕೇಳಿಸಿತೇನು ಆ ಹುಡುಗಿ ಹೇಳಿದ್ದು. ಇನ್ನು ಮೇಲೆ ಅವಳ ಕಣ್ಣಿಂದ ನೀರು ಬರದ ಹಾಗೆ ನೋಡಿಕೊಳ್ಳಬೇಕಾದ್ದು ನಿಮ್ಮ ಜವಾಬ್ದಾರಿ" ಎಂದು ಹೇಳಿ "ನೋಡಮ್ಮಾ ನಿನ್ನ ಎಸ್.ಎಸ್. ಮೇಷ್ಟ್ರು ಗುರುತು ಸಿಗುತ್ತಾರಾ?" ಎಂದರು. ಅವರು ಹೇಳದಿದ್ದರೆ ಅವಳಿಗೆ ಖಂಡಿತಾ ಗುರುತು ಸಿಗುತ್ತಿರಲಿಲ್ಲ. ಆ ಮುಖ ಷೇವ್ ಕಂಡೇ ಎಷ್ಟೋ ದಿವಸ ಆಗಿದೆ. ಚಿಂತೆಯಿಂದ ಬಾಡಿದಂತಿದ್ದ ಮುಖದ ಮೇಲೆ ಮೊದಲಿನ ಆ ಕಳೆ ಕಾಣಿಸುತ್ತಿಲ್ಲ. ವಸುಂಧರಾ ನೋಡಿ ತಲೆ ಕೆಳಗೆ ಮಾಡಿದಳು. ಮಮತಾ ಅವರು– "ವಸುಂಧರಾ ನೀನು ಈಗ ತಾನೆ ಪ್ರಯಾಣ ಮಾಡಿ ಬಂದಿದ್ದೀ. ಎಲ್ಲರೂ ಲೈಟಾಗಿ ಸ್ವಲ್ಪ ತಿಂಡಿ ಮತ್ತು ಕಾಫಿ ತಗೊಳ್ಳೋಣ ಎಂದು ಹೇಳಿ ಒಳಗಿನಿಂದ ಕಾಫಿ ತಿಂಡಿ ತಂದುಕೊಟ್ಟರು. ತಿಂಡಿ ತಿಂದಾದ ಮೇಲೆ ಚಹಾ ಕುಡಿಯುತ್ತ ಎಸ್.ಆರ್. ಮಾಸ್ಟರ್

ಅವರು "ನೀವಿಬ್ಬರೂ ಜೀವನದಲ್ಲಿ ತುಂಬ ನೊಂದಿದ್ದೀರಿ. ವಸುಂಧರಾ ನಿಮ್ಮ ಜೊತೆ ನಿಮ್ಮ ಕುಟುಂಬವಾದರೂ ಇತ್ತು. ಆದರೆ ಶ್ರೀನಿವಾಸ್ ಮದುವೆಯಾದ ಒಂದೇ ವರ್ಷಕ್ಕೆ ಹೆಂಡತಿಯನ್ನು ಮತ್ತು ತಾಯಿಯನ್ನು ಕಳೆದುಕೊಂಡು ಮಗುವನ್ನು ಅದರ ಅಜ್ಜಿಯ ಮನೆಯಲ್ಲಿ ಬಿಟ್ಟು ಒಬ್ಬರೇ ಚಿಂತೆ, ದುಃಖಗಳಲ್ಲಿ ದಿನ ದೂಡಿದ್ದಾರೆ. ನಾನು ಅವರ ನೋವು ಸಂಕಟ ಹತ್ತಿರದಿಂದ ನೋಡಿದ್ದೀನಿ. ತೀರಾ ಅಸಹಾಯಕ ಪರಿಸ್ಥಿತಿಯಲ್ಲಿ ನಿರ್ವಾಹವಿಲ್ಲದೆ ಪ್ರೀತಿಸಿದ ನಿಮ್ಮನ್ನು ಕೈಹಿಡಿಯಲಾಗಲಿಲ್ಲವಲ್ಲ ಅನ್ನುವ ನೋವು ಅವರನ್ನು ನಿರಂತರವಾಗಿ ಕಾಡಿದೆ. ಒಬ್ಬರು ಇನ್ನೊಬ್ಬರನ್ನು ಆಕ್ಷೇಪಿಸುವುದೇನಿಲ್ಲ. ಒಬ್ಬರನ್ನೊಬ್ಬರು ಗಾಢವಾಗಿ ಪ್ರೀತಿಸಿದ ನೀವಿಬ್ಬರೇ ಮಾತಾಡಿಕೊಂಡು ಮನಸ್ಸುಗಳನ್ನು ಹಗುರ ಮಾಡಿಕೊಳ್ಳಿ. ಇಲ್ಲೇ ಹತ್ತಿರದಲ್ಲಿ ವಾಕಬಲ್ ಡಿಸ್ಟೆನ್ಸ್ ನಲ್ಲಿ ನಮ್ಮ ಮನೆ ಇದೆ. ನಾನು ಮಮತಾ ಹಾಗೇ ಸ್ವಲ್ಪ ಹೊತ್ತು ಆ ಕಡೆ ಅಡ್ಡಾಡಿಕೊಂಡು ಬರುತ್ತೀವಿ" ಎಂದು ಹೊರಟೇಬಿಟ್ಟರು. ಅವರು ಅತ್ತ ಹೋದಮೇಲೆ ಶ್ರೀನಿವಾಸ್, ಅವನ ಹೆಸರಿನ ಅಕ್ಷರವಿದ್ದ ಉಂಗುರ ಧರಿಸಿದ್ದ ವಸುಂಧರಾಳ ಕೈಹಿಡಿದುಕೊಂಡು– "ವಸುಂಧರಾ, ನನ್ನನ್ನು ಕ್ಷಮಿಸಿ ಅಂತ ಹೇಳುವ ಯೋಗ್ಯತೆಯೂ ನನಗಿಲ್ಲ. ನಿಮ್ಮ ಪಾಡಿಗೆ ನೀವು ಮುಗ್ಧವಾಗಿ ಹಕ್ಕಿಯ ಹಾಗೆ ಹಾರಾಡಿಕೊಂಡಿದ್ದ ಕಾಲದಲ್ಲಿ ನಿಮ್ಮ ಮನಸ್ಸಿನಲ್ಲಿ ಪ್ರೀತಿ, ಪ್ರೇಮದ ಬಣ್ಣ ಬಣ್ಣದ ಕನಸುಗಳನ್ನು ಬಿತ್ತಿ ಕೊನೆಗೆ ಎಲ್ಲವೂ ಹಗಲುಗನಸುಗಳೇ ಆಗೋ ಹಾಗೆ ಮಾಡಿ ನಿಮ್ಮ ಜೀವನದಲ್ಲಿ ಒಂದು ರೀತಿಯಲ್ಲಿ ಧೂಮಕೇತುವಾಗಿ ಸುಳಿದೆನೇನೋ ಅಂತ ಅದೆಷ್ಟು ಸಲ ನನ್ನನ್ನು ನಾನೇ ಬೈದುಕೊಂಡಿದ್ದೀನೋ ಗೊತ್ತಿಲ್ಲ. ನನ್ನಿಂದಾಗೇ ನೀವು ಏನೆಲ್ಲ ಕಷ್ಟಕ್ಕೆ ಗುರಿಯಾದಿರಿ. ಇಷ್ಟಾದರೂ ಮಮತಾ ಅವರು ಹೇಳಿದ ಕೂಡಲೇ ಬಂದಿರಲ್ಲಾ ಅದಕ್ಕೆ ಸಾವಿರ ಸಾವಿರ ಥ್ಯಾಂಕ್ಸ್. ಈಗ ನೀವು ಹಳೇದನ್ನೆಲ್ಲ ಮರೆತು ಈ ನತದೃಷ್ಟನ ಕೈಹಿಡಿದರೆ ಮಾತ್ರ ಜೀವನದಲ್ಲಿ ನಾವಿಬ್ಬರೂ ನಗು ಕಾಣಬಹುದು. ನನ್ನಿಂದ ಆಗ ಆದ ತಪ್ಪನ್ನು ಸರಿಪಡಿಸಲು ಅವಕಾಶ ಕೊಡಿ. ಇಬ್ಬರೂ ಜೊತೆ ಜೊತೇಲಿ ಹೆಜ್ಜೆ ಹಾಕುತ್ತಾ ಉಳಿದಿರುವ ಜೀವನವನ್ನು ನಗು ನಗುತ್ತಾ ಕಳೆಯೋಣವಾ?" ಎಂದು ಹೇಳಿದ. ವಸುಂಧರಾ ಕಣ್ಣಂಚಿನಲ್ಲಿ ನೀರಾಡಿಸುತ್ತ ಮಾತಿಲ್ಲದೆ ಮೌನವಾಗಿ ಅವನನ್ನು ತಬ್ಬಿ ಎದೆಗೊರಗಿದಳು.

ಇಬ್ಬರೂ ಟೀಪಾಯಿ ಮೇಲಿದ್ದ ಅಂದಿನ ದಿನಪತ್ರಿಕೆಯತ್ತ ಕಣ್ಣಾಡಿಸುತ್ತ ಕುಳಿತಿದ್ದಾಗ ಮಮತಾ ಮತ್ತು ಎಸ್.ಆರ್ ಮಾಸ್ಟರ್ ಒಳಗೆ ಬಂದರು. ಮಮತಾ ಅವರು–"ಏನಪ್ಪಾ ಇಬ್ಬರ ಮನಸ್ಸಿನ ತಾಪಗಳು ತಣ್ಣಗಾದವೇನಪ್ಪಾ" ಅಂದರು. ಇಬ್ಬರೂ "ಮೇಡಮ್, ಸರ್, ಇಬ್ಬರಿಗೂ ಥ್ಯಾಂಕ್ಸ್ ಎ ಲಾಟ್. ನೀವಿಬ್ಬರೂ ನಮ್ಮ ಪಾಲಿನ ಭಾಗ್ಯದೇವತೆಗಳು" ಅಂದರು. ಎಸ್.ಆರ್. ಮಾಸ್ಟರ್ ಅವರು–"ಹಾಗಾದರೆ ಇನ್ನೇನು ಇಬ್ಬರೂ ಸಪ್ತಪದಿ ತುಳಿಯೋದಕ್ಕೆ ಏರ್ಪಾಟುಮಾಡಬಹುದಲ್ಲವೆ?" ಎಂದು ಕೇಳಿದರು. ಮಮತಾ ಮೇಡಮ್– "ಇಬ್ಬರಲ್ಲ. ಒಟ್ಟು ನಾಲ್ವರು ಅಂದರೆ ಇನ್ನೊಂದು ಜೋಡಿ ಕೂಡ ಅಂದೇ ಸತಿಪತಿಯರಾಗಲಿದ್ದಾರೆ. ಅದು ಡಾ. ಹೇಮಾ ಮತ್ತು ಡಾ. ಅಶೋಕ ಮಹಾಪಾತ್ರ. ಕಾಲೇಜು ದಿನಗಳಿಂದಲೂ ವಸುಂಧರಾ ಮತ್ತು ಹೇಮಾ ಇಬ್ಬರೂ ಎಣೆವಕ್ಕಿಗಳೆಂದೇ

ಹೆಸರಾದವರು. ಈಗ ಈ ಇಬ್ಬರು ಗೆಳತಿಯರೂ ಒಟ್ಟಿಗೇ ಗೃಹಸ್ಥಾಶ್ರಮ ಪ್ರವೇಶಿಸುವ ಮೂಲಕ ತಾವಿಬ್ಬರೂ ನಿಜಕ್ಕೂ ಎಣೆವಕ್ಕಿಗಳೆಂದು ಸ್ಥಾಪಿಸಲಿದ್ದಾರೆ. ಮೊನ್ನೆಯೇ ಹೇಮಾ ಫೋನ್ ಮಾಡಿ ತಾನು ಮತ್ತು ಅಶೋಕ ಮಹಾಪಾತ್ರ ಸತಿಪತಿಗಳಾಗಲು ನಿರ್ಧರಿಸಿರುವುದಾಗಿ ತಿಳಿಸಿದ್ದಾಳೆ. ಮುಂದಿನ ಭಾನುವಾರ ಇಲ್ಲೇ ಎಸ್.ಆರ್. ಮಾಸ್ಟರ್ ಅವರ ಮನೆಯಲ್ಲೇ ಸರಳವಾಗಿ ನಡೆಯಲಿರುವ ಕುವೆಂಪು ಮಂತ್ರ–ಮಾಂಗಲ್ಯದ ವಿವಾಹ ವಿಧಿಯ ಪ್ರಕಾರ ಪರಿಮಿತ ಸಂಖ್ಯೆಯ ಬಂಧು–ಮಿತ್ರರ ಸಮ್ಮುಖದಲ್ಲಿ ಎರಡೂ ಜೋಡಿಗಳು ಸತಿಪತಿಯರಾಗಲಿದ್ದಾರೆ." ಎಂದು ಹೇಳಿಬಿಟ್ಟರು. ಎಸ್.ಆರ್. ಮಾಸ್ಟರ್ ಅವರು–"ಹೌದಾ ಅದೇನು ಕುವೆಂಪು ಮಂತ್ರ ಮಾಂಗಲ್ಯದ ಪ್ರಕಾರ?" ಎಂದು ಕೇಳಿದರು. ವಸುಂಧರಾ– "ಮೇಡಮ್ ಆರ್ಯ ಸಮಾಜದ ಪ್ರಕಾರ ಮದುವೆಯಾದರೆ ಹೇಗೆ?" ಎಂದು ಕೇಳಿದಳು. ಮಮತಾ ಅವರು – "ಎಲ್ಲಕ್ಕೂ ಅವತ್ತೇ ಉತ್ತರ ಕೊಡುತ್ತೇನೆ. ಅಶೋಕ ಮಹಾಪಾತ್ರ ಮತ್ತು ಹೇಮಾ ಇದಕ್ಕೆ ಆಗಲೇ ಒಪ್ಪಿದ್ದಾರೆ. ಎಸ್.ಆರ್. ಮಾಸ್ಟರ್ ಅವರ ಮನೆಯಲ್ಲಿ ಯಾಕೆ ಅಂದರೆ ಅವರ ಮನೆ ಮದುವೆ ಮಾಡುವಷ್ಟು ದೊಡ್ಡದಾಗಿದೆ. ಅದಕ್ಕಿಂತ ಹೆಚ್ಚಾಗಿ ಅವರ ಮನಸ್ಸು ಅದಕ್ಕಿಂತ ದೊಡ್ಡದಾಗಿದೆ. ನೋಡು ವಸುಂಧರಾ ಮದುವೆಗೆ ಮುಂಚೆ ನೀನು ಒಂದು ಕೆಲಸ ಮಾಡಬೇಕು. ಅಯ್ಯಂಗಾರ್‌ಗಳಲ್ಲಿ ಮದುವೆಗೆ ಮುಂಚೆ ಹೆಣ್ಣಿನ ಕಡೆಯವರು ವರನಿಗೆ ಅಗತ್ಯ ಬೀಳುವ ಎಲ್ಲವನ್ನೂ, ಷೇವಿಂಗ್ ಸೆಟ್ ಮೊದಲುಗೊಂಡು ಉಡುಗೊರೆಯಾಗಿ ನೀಡುತ್ತಾರೆ ಅಂತ ಕೇಳಿದ್ದೆ. ನೀನು ಅಯ್ಯಂಗಾರ್ ಅಲ್ಲವಲ್ಲ. ಬೇರೆ ಏನೂ ಕೊಡಬೇಡ. ಮದುವೆಗೆ ಮುಂಚೆ ನಿಮ್ಮ ಯಜಮಾನರಿಗೆ ಒಂದು ಒಳ್ಳೆ ಷೇವಿಂಗ್ ಸೆಟ್ ಅನ್ನು ಪ್ರೆಸೆಂಟ್ ಮಾಡಬೇಕು. ಜೊತೆಗೆ ಗಡ್ಡಬಿಟ್ಟವರ ಬಗ್ಗೆ ಎಸ್.ವಿ. ಪರಮೇಶ್ವರ ಭಟ್ಟರ ಒಂದು ಏಳೆ ಏನೋ ಇದೆಯಲ್ಲಾ ಅದನ್ನು ಸ್ವಲ್ಪ ಗಟ್ಟಿಯಾಗಿ ಹೇಳು" ಎಂದರು. ವಸುಂಧರಾ–

"ಗಡ್ಡ ಬಿಟ್ಟವರೆಲ್ಲ ದೊಡ್ಡವರೆನಬೇಡ

ಗಡ್ಡದ ಹೋತ ದೊಡ್ಡದೆ॥" ಎಂದು ಹೇಳಿ ನಕ್ಕಳು. ಶ್ರೀನಿವಾಸ ಮತ್ತು ಎಸ್.ಆರ್. ಮಾಸ್ಟರಿಗೂ ನಗು ತಡೆಯಲಾಗಲಿಲ್ಲ.

ಅಧ್ಯಾಯ-32

ಮದುವೆಯ ಏರ್ಪಾಟಿನ ಬಗ್ಗೆ ಹೇಮಾ ಅಶೋಕರಿಗೆ ಫೋನ್ ಮಾಡಿ ವಿಷಯ ತಿಳಿಸಿದಳು. ಅವರು ಮತ್ತು ಅವರ ತಾಯಿ ಹಿಂದಿನ ದಿನವೇ ಹಾಸನಕ್ಕೆ ಬಂದು ಹೋಟೆಲ್‌ನಲ್ಲಿ ತಂಗುವುದಾಗಿ ತಿಳಿಸಿದರು. ಕೆಲವೇ ಆಪ್ತರಿಗೆ ತಿಳಿಸಿರುವ ಕಾರಣ ಅವರುಗಳು ಅಂದು ಬೆಳಿಗ್ಗೆಯೇ ಬರಬಹುದೆಂದೂ ತಿಳಿಸಿದರು. ಅದಕ್ಕೆ ಮುನ್ನ ಹೇಮಾ ಮತ್ತು ವಸುಂಧರಾ ಪರಸ್ಪರ ಭೇಟಿಯಾಗಿ ಮಾತಾಡಿಕೊಂಡರು. ತುಮಕೂರಿನಿಂದ ತನ್ನ ಅಮ್ಮ ಮತ್ತು ಅಣ್ಣ, ಅತ್ತಿಗೆ ಬರಲಿರುವುದಾಗಿ ಹೇಮಾ ಹೇಳಿದಳು. ವಸುಂಧರಾ ತನ್ನ ತಂದೆ ವಯಸ್ಸು ಮತ್ತು ತಾಯಿ ತೀರಿಕೊಂಡ ಮನಸ್ಸಿನ ಬೇಸರಗಳಿಂದಾಗಿ ಮದುವೆಗೆ ಬರಲಾಗುತ್ತಿಲ್ಲ, ಆದರೆ ತಮ್ಮ ಮತ್ತು ನಾದಿನಿ ಬರುತ್ತಾರೆ ಎಂದು ಹೇಳಿದ್ದುದಲ್ಲದೆ ಮದುವೆಗೆ ತಮ್ಮ ಪೂರ್ಣ ಒಪ್ಪಿಗೆ ಮತ್ತು ಆಶೀರ್ವಾದ ಇರುವುದಾಗಿಯೂ ಮದುವೆಯ ನಂತರ ಬಿಡುವು ಮಾಡಿಕೊಂಡು ತುಮಕೂರಿನ ತಮ್ಮ ಮನೆಗೆ ಬರಬೇಕೆಂದು ತಿಳಿಸಿದ್ದಾರೆಂದು ಹೇಳಿದಳು. ಬೆಂಗಳೂರಿನಿಂದ ವಿದ್ಯಾ ಮತ್ತು ಭಾರತಿ ಬರಲಿದ್ದಾರೆಂದು ಹೇಳಿದಳು. ವಸುಂಧರಾ ಹೇಳಿದ ಒಂದು ಸಂಗತಿ ಹೇಮಾಳನ್ನು ಚಕಿತಗೊಳಿಸಿತು. ಅದೆಂದರೆ ತಾನೇ ಹೋಗಿ ತಾನು ಮದುವೆಯಾಗಬೇಕಿದ್ದ ರಂಗನಾಥರ ತಂದೆ ತಾಯಿಯನ್ನು ಮದುವೆಗೆ ಕರೆದಿರುವುದಾಗಿ ಹೇಳಿದ್ದು. ಅಷ್ಟೇ ಅಲ್ಲ, ಅವರಿಬ್ಬರೂ ನನ್ನ ತಂದೆ ತಾಯಿಯ ಸ್ಥಾನದಲ್ಲಿದ್ದುಕೊಂಡು ಮದುವೆ ನೆರವೇರಿಸಿಕೊಡಲಿದ್ದಾರೆಂದು ಹೇಳಿದ್ದು. ವಸುಂಧರಾಳ ಈ ನಡೆಗೆ ಹೇಮಾ ತುಂಬಾ ಸಂತಸ ವ್ಯಕ್ತಪಡಿಸಿದಳು.

ಅದೇನೋ ಆ ವರ್ಷ ಮಳೆಯೇ ಇಲ್ಲದ ಶ್ರಾವಣದ ಆ ಭಾನುವಾರ ಹಾಸನದಲ್ಲಿ ಬೆಳಗಿನಿಂದಲೂ ಆಕಾಶ ಮುನಿಸಿಕೊಂಡೇ ಇತ್ತು. ಹೇಮಾ ಮತ್ತು ಹಿಂದಿನ ದಿನವೇ ತುಮಕೂರಿನಿಂದ ಬಂದಿದ್ದ ಅವಳ ಅಣ್ಣ ಅತ್ತಿಗೆ ಚಿಕ್ಕಮಗಳೂರಿನಿಂದ ಬೆಳಿಗ್ಗೆ ನಸುಕಿನಲ್ಲೇ ಹೊರಟಾಗಲೂ ಯಾವಾಗ ಬೇಕಾದರೂ ಮಳೆ ಸುರಿಯಬಹುದೆನ್ನುವ ವಾತಾವರಣವೇ ಇತ್ತು. ವಸುಂಧರಾ ತನ್ನ ತಮ್ಮ ಮತ್ತು ನಾದಿನಿಯ ಜೊತೆ ಬೇಲೂರಿನಿಂದ ಹೊರಟು ಎಲ್ಲರಿಗಿಂತ ಮುಂಚೆ ಮಮತಾ ಅವರ ಮನೆಗೆ ಬಂದಿಳಿದಳು. ಅಲ್ಲಿಂದಲೇ ನಡೆದುಹೋಗುವ ದೂರದಲ್ಲಿದ್ದ ಎಸ್.ಆರ್. ಮಾಸ್ಟರ್ ಅವರ ಮನೆಗೆ ಹೋಗಬಹುದೆಂಬುದು ಅವಳ ಯೋಚನೆ. ಅವರು ಹೋದ ಎರಡು ಗಂಟೆಗಳ ನಂತರ ಬೆಂಗಳೂರಿನಿಂದ ಸ್ವಾಮಿ ಮೇಷ್ಟ್ರು ಆಗಮಿಸಿದರು. ವಸುಂಧರಾ ನಮಸ್ಕಾರಾ ಸರ್ ಎಂದು ನಗುತ್ತಾ ಮಾತಾಡಿಸಿದಳು. ಬೇರೆ ಊರುಗಳಿಂದ ಅತಿಥಿಗಳು ಬರಲು ಅನುಕೂಲವಾಗಲೆನ್ನುವ ಕಾರಣಕ್ಕೆ ಹನ್ನೊಂದೂವರೆಗೆ ಮದುವೆಯ ಮುಹೂರ್ತವನ್ನು

ಗೊತ್ತುಪಡಿಸಲಾಗಿತ್ತು. ಮದುವೆಯ ಸಂಪೂರ್ಣ ಹೊಣೆಹೊತ್ತಿದ್ದವರೆಂದರೆ ಮಮತಾ ಮೇಡಮ್. ಅದೇ ಸಮಯಕ್ಕೆ ಎಸ್.ಆರ್. ಮಾಸ್ಟರ್ ಅವರು ಮಮತಾ ಅವರಿಗೆ ಫೋನ್ ಮಾಡಿ ಶ್ರೀನಿವಾಸ್, ಶ್ರೀನಿವಾಸನ ಪುಟ್ಟ ಮಗಳು ಭೂಮಿಕಾ ಮತ್ತು ಅವರ ತಂದೆ ನಿಂಗೇಗೌಡರು, ಆಗಲೇ ಅಲ್ಲಿಗೆ ಬಂದಿರುವುದಾಗಿ ತಿಳಿಸಿದರು. ಮಮತಾ ಅವರು ನಡಿಯಿರಿ ಎಲ್ಲರೂ ಅಲ್ಲಿಗೇ ಹೋಗೋಣ ಎಂದು ಎಲ್ಲರನ್ನೂ ಹೊರಡಿಸಿದರು.

ಇವರೆಲ್ಲ ಅಲ್ಲಿಗೆ ತಲುಪಿದ ಸ್ವಲ್ಪ ಹೊತ್ತಿಗೆಲ್ಲಾ ಹೇಮಾ, ಅವಳ ತಾಯಿ, ಅಣ್ಣ, ಅತ್ತಿಗೆ ಒಂದು ಕಾರಿನಲ್ಲಿ ಬಂದರೆ ಇನ್ನೊಂದು ಕಾರಿನಲ್ಲಿ ಸೋಮಶೇಖರ ರಾಯರು, ಅವರ ಶ್ರೀಮತಿ ಗಿರಿಜಾ ಹಾಗೂ ರಘುನಾಥರಾಯರು ಮತ್ತು ಅವರ ಶ್ರೀಮತಿ ಜಾಹ್ನವಿ ಬಂದಿಳಿದರು. ವಸುಂಧರಾ ಮಮತಾ ಅವರಿಗೆ ಅವರನ್ನು ಪರಿಚಯಿಸಿದಳು. “ಮುಖ್ಯ ವ್ಯಕ್ತಿಗಳೆಲ್ಲಾ ಬಂದ ಹಾಗಾಯ್ತು, ಎಲ್ಲಿ ನಿನ್ನ ಭಾವೀ ಪತಿ ಇನ್ನೂ ಬರಲಿಲ್ಲವಲ್ಲಾ ಮದುವೆ ಅನ್ನುವುದನ್ನೇ ಮರೆತು ಏನಾದರೂ ಒದುತ್ತಾ ಕೂತುಬಿಟ್ಟರಾ ಹೇಗೆ?” ಎಂದು ನಗುತ್ತಾ ಹೇಮಾಳನ್ನು ಕೇಳುತ್ತಿರುವ ಸಮಯಕ್ಕೆ ಸರಿಯಾಗಿ ಅಶೋಕರು ತಮ್ಮ ತಾಯಿಯೊಂದಿಗೆ ಕಾರಿನಲ್ಲಿ ಆಗಮಿಸಿದರು. ಮಮತಾ ಅವರು ಬರಮಾಡಿಕೊಂಡು ಎಲ್ಲರಿಗೂ ಅವರ ಪರಿಚಯ ಮಾಡಿಕೊಟ್ಟರು.

ಪೋರ್ಟಿಕೋದಲ್ಲಿ ಕುಳಿತೇ ಮಾತನಾಡುತ್ತಿದ್ದ ಎಲ್ಲರನ್ನೂ ಎಸ್.ಆರ್. ಮಾಸ್ಟರ್ ಅವರು ಒಳಗೆ ಆಗಮಿಸಬೇಕೆಂದು ಕೋರಿದರು. ಎಲ್ಲರೂ ವಿಶಾಲವಾದ ನಡುಮನೆಗೆ ಪ್ರವೇಶಿಸಿದರು. ಎರಡು ಜೋಡಿ ವಧೂವರರು, ತಂದೆ ತಾಯಿಗಳ ಸ್ಥಾನದಲ್ಲಿದ್ದು ಅವರನ್ನು ಮದುವೆ ಮಾಡಿಕೊಡಲಿರುವ ಸೋಮಶೇಖರರಾಯರು ಮತ್ತು ಅವರ ಶ್ರೀಮತಿ ಗಿರಿಜಾ ಹಾಗೆಯೇ ಎಸ್.ಆರ್. ಮಾಸ್ಟರ್ (ಎಸ್. ರಾಮಸ್ವಾಮಿ) ಮತ್ತು ಅವರ ಶ್ರೀಮತಿ ಜಾನಕಿಯವರು ವೇದಿಕೆಯ ಮೇಲೆ ಬರಬೇಕೆಂದು ಮಮತಾ ಅವರು ಆಹ್ವಾನಿಸಿದರು. ಇಬ್ಬರೂ ವರರು ಕೊಕ್ಕರೆ ಬಿಳುಪಿನ ಧೋತಿ ಧರಿಸಿ, ಅದೇ ಬಣ್ಣದ ಷರ್ಟ್ ಧರಿಸಿದ್ದರೆ ವಧುಗಳಿಬ್ಬರೂ ಆಡಂಬರವೆನಿಸದ ಗಿಣಿಹಸಿರು ಬಣ್ಣದ ಸೀರೆಯಲ್ಲಿ ಕಂಗೊಳಿಸುತ್ತಿದ್ದರು. ವೇದಿಕೆಯ ಬಲಪಕ್ಕದಲ್ಲಿಟ್ಟಿದ್ದ ಶ್ರೀ ರಾಮ, ಸೀತಾದೇವಿ, ರಾಮಕೃಷ್ಣ ಪರಮಹಂಸರು, ಶಾರದಾ ದೇವಿ, ವಿವೇಕಾನಂದರು ಕುವೆಂಪು, ಮಾತೋಶ್ರೀ ಹೇಮಾವತಿ ಮತ್ತು ನಾರಾಯಣಗುರುಗಳ ಫೋಟೋಗಳ ಮುಂದೆ ಎರಡು ಹಣತೆಯ ದೀಪಗಳನ್ನು ಬೆಳಗಿಸಲಾಗಿತ್ತು.

ಮೊದಲಿಗೆ ಕುಮಾರಿ ಜ್ಯೋತಿ ಕುವೆಂಪು ಅವರ ಅನಿಕೇತನಗೀತೆಯನ್ನು (ಓ ನನ್ನ ಚೇತನಾ ಆಗು ನೀ ಅನಿಕೇತನಾ) ಹಾಡುವ ಮೂಲಕ ಕಾರ್ಯಕ್ರಮ. ಪ್ರಾರಂಭವಾಯಿತು. ಈ ಇಡೀ ಕಾರ್ಯಕ್ರಮದ ರೂವಾರಿಯಾದ ಡಾ. ಮಮತಾ ಅವರು ದೀಪವನ್ನು ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಉದ್ಘಾಟನಾ ಭಾಷಣದಲ್ಲಿ ಮಮತಾ ಅವರು ‘ಇಂದು ಎರಡು ಅಧ್ಯಾಪಕ ಜೋಡಿಗಳು ವೈವಾಹಿಕ ಜೀವನಕ್ಕೆ ಪದಾರ್ಪಣ ಮಾಡಲಿದ್ದಾರೆ. ಡಾ. ಹೇಮಾ ಮತ್ತು ಡಾ. ಅಶೋಕ

ಮಹಾಪಾತ್ರ ಹಾಗೂ ಶ್ರೀನಿವಾಸ್ ಮತ್ತು ವಸುಂಧರಾ ಈ ನಾಲ್ವರೂ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅಧ್ಯಾಪಕರುಗಳಾಗಿ ಕೆಲಸ ಮಾಡುತ್ತಿದ್ದಾರೆ. ಡಾ. ಅಶೋಕ ಮಹಾಪಾತ್ರ ಕುವೆಂಪು ವಿ.ವಿ.ಯಲ್ಲಿ ಸಮಾಜಶಾಸ್ತ್ರದ ರೀಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದರೆ, ಡಾ. ಹೇಮಾ ಚಿಕ್ಕಮಗಳೂರಿನ ಟಿ.ಜೆ.ಎಸ್. ಕಾಲೇಜಿನಲ್ಲಿ ಸಮಾಜಶಾಸ್ತ್ರದ ಅಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗೆಯೇ ಶ್ರೀನಿವಾಸ್ ಅವರು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಇತಿಹಾಸ ವಿಭಾಗದಲ್ಲಿ ಅಧ್ಯಾಪಕರಾಗಿ ಮತ್ತು ವಸುಂಧರಾ ಬೇಲೂರಿನಲ್ಲಿ ಕನ್ನಡ ಅಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಜೋಡಿಗಳು ಪರಸ್ಪರರನ್ನು ಹಲವು ವರ್ಷಗಳಿಂದ ಬಲ್ಲವರಾಗಿದ್ದು ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥಮಾಡಿಕೊಂಡ ಅನನ್ಯ ಪ್ರೇಮಿಗಳಾಗಿದ್ದಾರೆ. ಇವರ ವಿವಾಹಕ್ಕೆ ಇದೀಗ ಮುಹೂರ್ತ ಒದಗಿ ಬಂದಿದ್ದು ತಮ್ಮೆಲ್ಲರ ಸಮಕ್ಷಮದಲ್ಲಿ ಕುವೆಂಪು ರೂಪಿಸಿರುವ ಮಂತ್ರ ಮಾಂಗಲ್ಯ ವಿವಾಹ ವಿಧಿಯ ಪ್ರಕಾರ ಸತಿಪತಿಗಳಾಗಿ ಸಂಸಾರ ಜೀವನಕ್ಕೆ ಕಾಲಿಡುತ್ತಿದ್ದಾರೆ. ಈಗ್ಗೆ ಕೆಲವು ದಿನಗಳ ಹಿಂದೆ ನಾನು ಕುವೆಂಪು ರಚಿತ ಮಂತ್ರ ಮಾಂಗಲ್ಯದ ಪ್ರಕಾರ ನಿಮ್ಮೆರಡೂ ಜೋಡಿಗಳ ಮದುವೆ ನಡೆಯಲಿದೆ ಎಂದು ಹೇಳಿದಾಗ ವಸುಂಧರಾ ಅವರು ಆರ್ಯ ಸಮಾಜದ ವಿಧಾನದ ಪ್ರಕಾರ ಮದುವೆಯಾದರೆ ಹೇಗೆ ಎಂದು ಕೇಳಿದ್ದರು. ಆಗ ನಾನು ಇದಕ್ಕೆ ಉತ್ತರವನ್ನು ಅಂದೇ ನೀಡುತ್ತೇನೆ ಎಂದು ಹೇಳಿದ್ದೆ. ಯಾವುದರ ಪ್ರಕಾರ ಬೇಕಾದರೂ ಆಗಬಹುದು. ವಿವಾಹ ಎನ್ನುವುದು ಒಂದು ಸಮಾಜ ಒಪ್ಪಿತ ವಿಧಿ. ಸಮಾಜದ ನಾಲ್ಕು ಜನ ಗಣ್ಯರ ಎದುರಿನಲ್ಲಿ ಅವರ ಸಾಕ್ಷಿಯಾಗಿ ವಧೂವರರು ದಾಂಪತ್ಯ ಜೀವನಕ್ಕೆ ಅಡಿಯಿಡುವುದು ಮುಖ್ಯ. ನಮ್ಮ ದೇಶದಲ್ಲಿ ಹಲವಾರು ಧರ್ಮಗಳು, ನೂರಾರು ಜಾತಿಗಳು, ಇವೆ. ಪ್ರತಿಯೊಂದು ಜಾತಿಗೂ ಧರ್ಮಕ್ಕೂ ಅವುಗಳದೇ ಆದ ಸಂಪ್ರದಾಯ, ವಿಧಿ ವಿಧಾನಗಳಿವೆ. ಆದರೆ ನಿಮ್ಮ ಎರಡೂ ಜೋಡಿಗಳದು ಆ ರೀತಿಯ ಸಾಂಪ್ರದಾಯಿಕ ಮದುವೆ ಅಲ್ಲ. ಇಲ್ಲಿ ವರ ಒಂದು ಜಾತಿಗೆ ಸೇರಿದವರಾಗಿದ್ದರೆ ವಧು ಇನ್ನೊಂದು ಜಾತಿಗೆ ಸೇರಿದವರು. ನಮ್ಮ ವಿವಾಹವಿಧಿಯೇ ಶ್ರೇಷ್ಠ ಎಂಬ ಭಾವನೆ ಅಂತರಂಗದಲ್ಲಿಯಾದರೂ ಆಯಾ ಜಾತಿ, ಧರ್ಮಕ್ಕೆ ಸೇರಿದವರಿಗೆ ಇರಬಹುದು. ಹಾಗಾಗಿ ಯಾವುದೇ ಜಾತಿಯವರಾದರೂ ಸರಿ, ಧರ್ಮದವರಾದರೂ ಸರಿ ಒಂದು ರೀತಿಯಲ್ಲಿ ಜಾತಿ ಧರ್ಮದ ಕಟ್ಟು ಕಟ್ಟಳೆಗಳನ್ನು ಮೀರಿದ, ಒಂದು ಸಾರ್ವತ್ರಿಕ ವಿವಾಹ ಸಂಹಿತೆ ಎಂದರೆ ಕುವೆಂಪು ಅವರ ಮಂತ್ರ ಮಾಂಗಲ್ಯ. ಹಾಗೆ ನೋಡಿದರೆ ಮಹರ್ಷಿ ದಯಾನಂದ ಸರಸ್ವತಿಗಳು ಸರ್ವಸಮಾನತೆ, ಭ್ರಾತೃತ್ವ, ವೈಚಾರಿಕತೆ ಮತ್ತು ರಾಷ್ಟ್ರಭಕ್ತಿಯನ್ನು ಉದ್ಬೋಧಿಸುವ ದೃಷ್ಟಿಯಿಂದ ಸ್ಥಾಪಿಸಿದ ಆರ್ಯಸಮಾಜದ ಅಡಿಯಲ್ಲಿ ಹಿಂದೂಗಳೆಲ್ಲರಿಗೂ ಒಪ್ಪಿಗೆಯಾಗಬಹುದಾದ ಒಂದು ವಿವಾಹ ಸಂಹಿತೆ ರೂಪಿಸಿದ್ದಾರೆ. ವೇದಗಳ ಕಾಲದಲ್ಲಿ ಚಾತುರ್ವರ್ಣ ವ್ಯವಸ್ಥೆ ಇರಲಿಲ್ಲ. ಮನುಷ್ಯರು ಮಾಡುವ ಕಾರ್ಯಗಳನ್ನಾಧರಿಸಿ ರಚಿಸಲಾದ ನಾಲ್ಕು ವರ್ಗಗಳು ಅಪರಿವರ್ತನೀಯವೇನಾಗಿರಲಿಲ್ಲ. ಅವು ಹುಟ್ಟಿನಿಂದಲೇ ಬರುವಂಥವೂ ಆಗಿರಲಿಲ್ಲ. ಇಲ್ಲದಿದ್ದರೆ ಬೆಸ್ತರ ಜಾತಿಗೆ ಸೇರಿದ ವ್ಯಾಸರು ಒಂದೇ ಆಗಿದ್ದ

ವೇದವನ್ನು ನಾಲ್ಕು ವೇದಗಳಾಗಿ ವಿಂಗಡಿಸಿ ವೇದವ್ಯಾಸರೆಂದು ಹೆಸರಾಗಲು ಹೇಗೆ ಸಾಧ್ಯವಾಗುತ್ತಿತ್ತು, ಪರಾಶರ, ವಾಲ್ಮೀಕಿ, ವಿಶ್ವಾಮಿತ್ರ, ಸತ್ಯಕಾಮ ಜಾಬಾಲಿ, ಕೌಂಡಿನ್ಯ ಇವರಾರೂ ಬ್ರಾಹ್ಮಣರಲ್ಲ; ಆದರೆ ಎಲ್ಲರೂ ವೇದಾಭ್ಯಾಸ ಮಾಡಿ ಸಾಧನೆಯಿಂದ ಬ್ರಾಹ್ಮಣರಾದವರು. ದ್ರೋಣ ಹುಟ್ಟಿನಿಂದ ಬ್ರಾಹ್ಮಣನಾದರೂ ಕ್ಷತಿಯರ ಕಸುಬಾದ ಅಸ್ತ್ರ ಶಸ್ತ್ರಗಳ ಪ್ರಯೋಗದಲ್ಲಿ ನಿಷ್ಣಾತನಾಗಿ ಕ್ಷತ್ರಿಯರಿಗೇ ಗುರುವೆನಿಸಿದ. ಪರಶುರಾಮನೂ ಹಾಗೆಯೇ. ವೇದಗಳನ್ನು ಆಧರಿಸಿಯೇ ದಯಾನಂದ ಸರಸ್ವತಿಗಳು ಆರ್ಯಸಮಾಜದ ವಿಧಿವಿಧಾನಗಳನ್ನು ರೂಪಿಸಿದ್ದಾರೆ. ಅದರಲ್ಲಿ ಎಲ್ಲ ಕಾಲಕ್ಕೂ ಒಪ್ಪಬಹುದಾದ ವಿಚಾರಗಳು ಹಲವು ಇವೆ. ಆದರೂ ಹಿಂದೂಯೇತರ ಧರ್ಮದವರು ಈ ವಿಧಿಯ ಪ್ರಕಾರ ಮದುವೆಯಾಗುವುದಾದರೆ ಮೊದಲಿಗೆ ಅವರು ಶುದ್ಧಿ ಕ್ರಿಯೆಯ ಮೂಲಕ ಹಿಂದುಗಳಾಗಬೇಕಾಗುತ್ತದೆ. ಅದಕ್ಕೆ ಒಪ್ಪದವರು ಇರಬಹುದು, ಇದೊಂದು ಅದರ ಮಿತಿ. ಅಲ್ಲದೆ ಹಿಂದೂ ಚೌಕಟ್ಟಿನಲ್ಲಿರುವವರೇ ಕೆಲವರು ಹೋಮ, ಹವನಗಳನ್ನು ವಿರೋಧಿಸುವವರಿದ್ದಾರೆ. ಉದಾಹರಣೆಗೆ ವೀರಶೈವ ಧರ್ಮದ ಬಸವಣ್ಣನವರು ಮತ್ತು ಅದನ್ನು ಅನುಸರಿಸುವವರು. ಅದೂ ಕೂಡ ಇದರ ಒಂದು ಮಿತಿ. ಕುವೆಂಪು ಮಂತ್ರ ಮಾಂಗಲ್ಯದಲ್ಲಿ ಇದಾವುದೂ ಇರುವುದಿಲ್ಲ. ಆದರೂ ಅದರಲ್ಲೂ ಕೆಲವೊಂದು ಮಿತಿಗಳಿವೆ. ಈಗ ಉದಾಹರಣೆಗೆ ಇಷ್ಟರಲ್ಲೇ ನಿಮಗೆ ನೀಡಲಿರುವ ಕುವೆಂಪು ಮಂತ್ರ–ಮಾಂಗಲ್ಯ ಸಂಹಿತೆಯಲ್ಲಿ ಬರುವ 'ಎಲ್ಲ ಸಂಕುಚಿತ ಮತಧರ್ಮಗಳಿಂದ ಮುಕ್ತರನ್ನಾಗಿ ಮಾಡಿದ್ದೇವೆ' ಎಂಬ, 'ಎಲ್ಲ ಆಚಾರ ಸಂಪ್ರದಾಯಗಳಿಂದ ಮುಕ್ತರನ್ನಾಗಿ ಮಾಡಿದ್ದೇವೆ' ಎಂಬ ಹಾಗೂ ಕೊನೆಯಲ್ಲಿ ಬರುವ ಎಲ್ಲ 'ಮತಧರ್ಮ...... ಮುಕ್ತರಾದ ವಧೂವರರೇ......ಇನ್ನು ನೀವು ಯಾವುದೇ ಧರ್ಮಕ್ಕೂ ಸೇರುವ ಅಗತ್ಯವಿಲ್ಲ. ಯಾವುದೇ ಮತಕ್ಕೂ ಸೇರುವ ಅಗತ್ಯವಿಲ್ಲ.' ಎಂಬ ಮಾತುಗಳು ಅತ್ಯುನ್ನತವಾದ ವಿಚಾರಗಳೆನ್ನುವುದರಲ್ಲಿ ಸಂದೇಹವಿಲ್ಲ. ಆದರೆ ವಾಸ್ತವ ಜಗತ್ತಿನಲ್ಲಿ ಹಾಗೆ ಇರಲು ಸಾಧ್ಯವೆ? ನಮ್ಮ ಇಡೀ ಮಾನವ ಸಮಾಜವೆಲ್ಲವೂ ಮತ ಧರ್ಮ ಮುಕ್ತವಾದಾಗ ಅದು ಸಾಧ್ಯವಾಗಬಹುದೇನೋ. ಅಲ್ಲಿಯವರೆಗೂ ತನ್ನ ಮಕ್ಕಳಿಗೆ ವೈವಾಹಿಕ ಸಂಬಂಧ ಬೆಳೆಸಬೇಕಾಗಿ ಬಂದಾಗ ಅವನ ಅಸ್ಮಿತೆಯ ದ್ಯೋತಕವಾಗಿ ಒಂದು ಧರ್ಮಕ್ಕೆ (ಜಾತಿ ಹೊರತುಪಡಿಸಿದರೂ) ಸೇರಿದವನಾಗಿರಬೇಕಾಗುತ್ತದೆ. ಮಂತ್ರಮಾಂಗಲ್ಯದ ಮಂತ್ರಗಳು ಹಿಂದೂ ನಂಬಿಕೆಯ ಭಾಗಗಳೇ ಆಗಿವೆ. ಧರ್ಮಾತೀತತೆ ಎಂಬುದು ಸದ್ಯದ ಪರಿಸ್ಥಿತಿಯಲ್ಲಿ ಒಂದು ಆದರ್ಶ; ಒಂದು ಸದಾಶಯ ಅಷ್ಟೆ. ಇದು ಕುವೆಂಪು ಮಂತ್ರ ಮಾಂಗಲ್ಯದ ಮಿತಿ. ಇಷ್ಟಾದರೂ ಆರ್ಯ ಸಮಾಜದ ವಿವಾಹ ಪದ್ಧತಿಗಿಂತ ಅದೇ ಹೆಚ್ಚು ವಿಶಾಲವಾದ ಭೂಮಿಕೆಯ ಮೇಲೆ ರೂಪಿತವಾಗಿರುವಂಥದು. ಆ ಕಾರಣಕ್ಕೆ ನೀವು ಆ ಪ್ರಕಾರ ಮದುವೆಯಾಗುವುದೇ ಸರಿಯೆಂದು ನನ್ನ ಅನಿಸಿಕೆ." ಋಗ್ವೇದದ ಹತ್ತನೇ ಮಂಡಲದಲ್ಲಿ ಬರುವ ವಿವಾಹ ವಿಧಿಯ ಮೇಲೆ ರೂಪಿತವಾಗಿರುವ ಆರ್ಯ ಸಮಾಜದ ವಧೂ ವರರು ವಿವಾಹ ವಿಧಿಯಲ್ಲಿ ಸಪ್ತಪದಿ ತುಳಿಯುತ್ತಾರೆ. ಆ ಏಳು ಹೆಜ್ಜೆಗಳಲ್ಲಿ ಏಳನೇ ಹೆಜ್ಜೆ ಬಹಳ ಅರ್ಥಪೂರ್ಣವಾದದ್ದು. ಅದರಲ್ಲಿ ವರ

ವಧುವಿಗೆ 'ಸಖಾ ಸಪ್ತಪದೀಭವ' ಮಿತ್ರಳಾಗಿ ಏಳನೆಯ ಹೆಜ್ಜೆಯನ್ನು ಇಡುವವಳಾಗು ಎಂಬುದು. ನಿಜಕ್ಕೂ ಗಂಡ ಹೆಂಡತಿ ಮಿತ್ರರಾಗಿ ಬಾಳು ಸಾಗಿಸಬೇಕು. ಮಿತ್ರರಲ್ಲಿ ಯಾರೂ ಮೇಲಲ್ಲ; ಯಾರೂ ಕೀಳಲ್ಲ. ಅದು ಸಮಾನತೆಯನ್ನಾಧರಿಸಿದ್ದು. ಕವಿ ಪುತಿನ ಹೇಳುವಂತೆ 'ನನ್ನೊಳು ನಾ, ನಿನ್ನೊಳು ನೀ – ಒಲಿವ ಮುಂತಂತೆ ನಾನೀ ನಿನ್ನೊಳು ನಾ ನನ್ನೊಳು ನೀ – ಒಲಿದ ಮೇಲಂತೆ ನಾನೀ

ಇದೆ ಒಲವಿನ ಸರಿಗಮಪದನೀ. ನಿಜವಾದ ಅರ್ಥದಲ್ಲಿ ದಾಂಪತ್ಯವೆಂಬುದು ಸಮರಸ ಸಂಗೀತವಾದಾಗಲೇ ಜೀವನದ ಸಾರ್ಥಕ್ಯ. ಅದರಲ್ಲಿ ಒಡಕು ಸ್ವರ ಎಂದಿಗೂ ಮೂಡಬಾರದು. ರಸವೆ ಜನನ, ವಿರಸ ಮರಣ, ಸಮರಸವೇ ಜೀವನವೆಂಬ ವರಕವಿ ಬೇಂದ್ರೆಯವರ ವಾಣಿಯನ್ನು ನೆನೆಯುತ್ತ ನೀವು ಜೀವನ ಪಥದಲ್ಲಿ ಜೊತೆ ಜೊತೆಯಾಗಿ ಹೆಜ್ಜೆ ಇಡಿ. ನಿಮಗೆಲ್ಲ ಶುಭವಾಗಲಿ ಎಂದು ಹಾರೈಸುತ್ತೇನೆ. ಹೇಮಾ ಮತ್ತು ಅಶೋಕ ಮಹಾಪಾತ್ರ ಅವರ ತಂದೆ ತಾಯಿಯ ಸ್ಥಾನದಲ್ಲಿ ಎಸ್. ರಾಮಸ್ವಾಮಿ (ಎಸ್.ಆರ್. ಮಾಸ್ಟರ್). ಮತ್ತು ಅವರ ಶ್ರೀಮತಿ ಜಾನಕಿ ಹಾಗೂ ಅನುಪಮ ಮತ್ತು ಶ್ರೀನಿವಾಸ್‌ರ ತಂದೆ ತಾಯಿಯ ಸ್ಥಾನದಲ್ಲಿ ಸೋಮಶೇಖರರಾಯರು ಮತ್ತು ಅವರ ಶ್ರೀಮತಿ ಗಿರಿಜಾ ಅವರು ಈ ಮಂಗಳ ಮುಹೂರ್ತಕ್ಕೆ ಸಾಕ್ಷಿಗಳಾಗಿರುತ್ತಾರೆ. ಹೇಮಾ ಮತ್ತು ವಸುಂಧರಾ ನನಗೆ ಎಸ್.ಆರ್ ಮಾಸ್ಟರ್ ಅವರಿಗೆ ಮತ್ತು ಶ್ರೀನಿವಾಸ್ ಅವರಿಗೆ ತುಮಕೂರಿನಲ್ಲಿ ಪ್ರೀತಿಯ ವಿದ್ಯಾರ್ಥಿಗಳಾಗಿದ್ದವರು. ಇವರ ವಿವಾಹ ಮುಹೂರ್ತಕ್ಕೆ ನಾವು ಸಾಕ್ಷಿಗಳಾಗುತ್ತಿರುವುದು ನಮಗೆಲ್ಲ ಅತೀವ ಸಂತಸ ತಂದಿದೆ. ಕನ್ನಡ ಪ್ರಾಧ್ಯಾಪಕ ಡಾ. ಕೆ.ಎನ್. ಸ್ವಾಮಿ ಅವರು ಕುವೆಂಪು ಮಂತ್ರ ಮಾಂಗಲ್ಯದ ವಿವಾಹ ಸಂಹಿತೆಯನ್ನು ಬೋಧಿಸಿ ಅದರ ಮಂತ್ರಗಳನ್ನು ಪಠಿಸಿ ಅದರ ಅರ್ಥವನ್ನು ವಿವರಿಸುವರು." ಅಷ್ಟು ಹೇಳಿ ಅವರು ವೇದಿಕೆಯಿಂದ ಕೆಳಗಿಳಿದರು. ಡಾ. ಕೆ.ಎನ್. ಸ್ವಾಮಿ ಅವರು ಮಂತ್ರ ಮಾಂಗಲ್ಯದ ಪ್ರತಿಗಳನ್ನು ಎರಡೂ ಜೋಡಿಗಳಿಗೆ ನೀಡಿದರು. ನಂತರ ಸ್ವಾಮಿ ಅವರು ಮಂತ್ರಗಳನ್ನು ಪಠಿಸಿ ಅರ್ಥ ವಿವರಿಸಿ ಪ್ರತಿಜ್ಞಾ ರೂಪದ ವಿವಾಹ ಸಂಹಿತೆಯನ್ನು ಬೋಧಿಸಿದರು. ಎರಡೂ ಜೋಡಿಗಳು ಆ ಪ್ರತಿಗಳನ್ನು ಕೈಯಲ್ಲಿ ಹಿಡಿದು ಎಲ್ಲರಿಗೂ ಕೇಳುವಂತೆ ಸ್ಪಷ್ಟವಾಗಿ ಮಂತ್ರಗಳನ್ನು ಮತ್ತು ಪ್ರತಿಜ್ಞಾ ವಿಧಿಯನ್ನು ಪುನರುಚ್ಚರಿಸಿದರು. ಅಶೋಕರು ಮುಂಚೆಯೇ ಇಂಗ್ಲಿಷ್‌ಗೆ ಲಿಪ್ಯಂತರಿಸಲಾಗಿದ್ದ ಅದರ ಪ್ರತಿಯನ್ನು ಹಿಡಿದು ಪುನರುಚ್ಚರಿಸಿದರು. ಆಮೇಲೆ ಮಂತ್ರ ಮಾಂಗಲ್ಯ ಒಪ್ಪಂದ ಪತ್ರಕ್ಕೆ ಇಬ್ಬರಿಂದಲೂ ಸಹಿ ಹಾಕಿಸಲಾಯಿತು. ವಿವಾಹಕ್ಕೆ ಸಾಕ್ಷಿಗಳಾಗಿ ವರ ಮತ್ತು ವಧುವಿನ ಕಡೆಯವರಾಗಿ ವೇದಿಕೆಯ ಮೇಲಿದ್ದವರು ಅವರಿಗಾಗಿ ನಿಗದಿಮಾಡಿರುವ ಕಾಲಂಗಳಲ್ಲಿ ಸಹಿ ಹಾಕಿದರು. ಹಾಗೆ ಸಹಿ ಹಾಕಿದ ಅವರುಗಳಿಗೆ ಸಂಬಂಧಿಸಿದ ಮಂತ್ರಮಾಂಗಲ್ಯದ ಪುಸ್ತಕಗಳನ್ನು ಎರಡೂ ಜೋಡಿ ವಧು ವರರಿಗೆ ನೀಡಲಾಯಿತು. ವೇದಿಕೆಯ ಬಲಪಕ್ಕದಲ್ಲಿಟ್ಟಿದ್ದ ಶ್ರೀರಾಮ, ಸೀತಾದೇವಿ, ರಾಮಕೃಷ್ಣ ಪರಮಹಂಸರು, ಶಾರದಾ ದೇವಿಶ್ರೀ ಕುವೆಂಪು, ಮಾತೋಶ್ರೀ ಹೇಮಾವತಿ, ವಿವೇಕಾನಂದರು ಮತ್ತು ನಾರಾಯಣಗುರುಗಳ ಫೋಟೋಗಳಿಗೆ ಪೂಜೆಸಲ್ಲಿಸಿದರು. ಅನಂತರ ಎರಡು

ತಟ್ಟೆಗಳಲ್ಲಿ ಪ್ರತ್ಯೇಕವಾಗಿ ಇಟ್ಟಿದ್ದ ಮಂಗಳ ಸೂತ್ರಗಳನ್ನು ವಧೂ-ವರ ಜೋಡಿಗಳು ಪೂಜಿಸಿದರು. ಅನಂತರ ಅಲ್ಲಿ ಸೇರಿದ್ದ ಎಲ್ಲ ಗಣ್ಯರು ಸ್ಪರ್ಶಿಸಿ ಕಣ್ಣಿಗೆ ಒತ್ತಿಕೊಂಡ ನಂತರ ಇಬ್ಬರೂ ವರರು ಅದನ್ನು ತಮ್ಮ ತಮ್ಮ ವಧುವಿಗೆ ಕಟ್ಟಿದರು. ವಧೂ ವರರು ಪರಸ್ಪರರ ಕೊರಳಲ್ಲಿ ಹಾರಗಳನ್ನು ಹಾಕಿದರು. ಅನಂತರ ಬಂದಿದ್ದವರೆಲ್ಲ ನೂತನ ವಧೂ ವರರನ್ನು ಅಭಿನಂದಿಸಿ ಶುಭ ಕೋರಿದರು. ಮಮತಾ ಅವರು ನಗುತ್ತ ಡಾ. ಅಶೋಕರನ್ನು ಕುರಿತು– "ಡಾಕ್ಟರೇ ಹೇಮಾಗೆ ನೀವು ಗೈಡ್ ಆಗಿದ್ದಿರಿ. ಅದರೆ ಈಗ ಹೇಮಾ ನಿಮಗೆ ಟೆಕ್ಸ್ಟ್. ಅರ್ಥಾತ್ ನೀವು ಇವಳನ್ನು ಜೀವನ ಪರ್ಯಂತವೂ ಓದುತ್ತ ಹೋಗಬೇಕು" ಎಂದರು. ಅಶೋಕರು– "ವಂಡರ್ ಫುಲ್ ಮೇಡಮ್. ಅದ್ಭುತವಾಗಿ ಹೇಳಿದಿರಿ. ಜೀವನ ಪರ್ಯಂತ ಓದಿದರೂ ಪೂರ್ತಿ ಅರ್ಥವಾಗುವುದು ಡೌಟೇ!" ಅಂದರು. ಆಮೇಲೆ ಮಮತಾ ಅವರು ವಸುಂಧರಾಳತ್ತ ತಿರುಗಿ–"ನೋಡು ವಸುಂಧರಾ ಮದುವೆಯಲ್ಲಿ ನಿನಗೆ ಬರೀ ಶ್ರೀನಿವಾಸ್ ಮಾತ್ರ ದೊರೆತಿಲ್ಲ. ಬೋನಸ್ ರೂಪದಲ್ಲಿ ಒಬ್ಬ ಮಗಳೂ ಸಿಕ್ಕಿದ್ದಾಳೆ. ನೀನು ಇಬ್ಬರನ್ನೂ ಮಮತಾಮಯಿಯಾಗಿ ನೋಡಿಕೊಳ್ಳಬೇಕು. ನೀನು ಬೇರೆ ಅಲ್ಲ, ಮಗಳು ಬೇರೆ ಅಲ್ಲ. ನಿನ್ನದೇ ಇನ್ನೊಂದು ರೂಪ. ಅದಕ್ಕೇ ಅವಳು ಭೂಮಿಕಾ. ಎಂಥ ಒಂದು ಯೋಗಾಯೋಗ." ಎಂದರು. ಡಾ. ಸ್ವಾಮಿಯವರು ವಸುಂಧರಾ ಶ್ರೀನಿವಾಸ್ ಮತ್ತು ಭೂಮಿಕಾರನ್ನು ಒಟ್ಟಿಗೆ ನಿಲ್ಲಿಸಿ– "ನನಗೆ ನೀವು ಕಾಳಿದಾಸನ ಶಕುಂತಲೆ ದುಷ್ಯಂತ ಮತ್ತು ಸರ್ವದಮನನಂತೆಯೇ ಕಾಣುತ್ತಿದ್ದೀರಿ. ಸರ್ವದಮನನ ಬದಲು ಇಲ್ಲಿ ಭೂಮಿಕಾ ಇದ್ದಾಳೆ ಅಷ್ಟೆ. ಅಲ್ಲಿ ಅಗಲಿದ ದಂಪತಿಗಳು ಏಳು ವರ್ಷಗಳ ನಂತರ ಒಟ್ಟುಗೂಡುವಂತೆ ಇಲ್ಲಿ ಅಗಲಿದ ಅನನ್ಯ ಪ್ರೇಮಿಗಳಾದ ನೀವಿಬ್ಬರೂ ಹತ್ತು ವರ್ಷಗಳ ನಂತರ ಒಟ್ಟುಗೂಡಿ ದಂಪತಿಗಳಾಗಿದ್ದೀರಿ. ಇನ್ನು ನಿಮ್ಮ ಬಾಳಿನಲ್ಲಿ ಸಂತಸದ 'ವಸು'(ಶ್ರೀ)ಸದಾ ನೆಲೆಸಿರಲಿ" ಎಂದು ಹಾರೈಸಿದರು.

ಸೋಮಶೇಖರರಾಯರು– "ವಸುಂಧರಾಳನ್ನು ಸೊಸೆಯಾಗಿ ಮನೆ ತುಂಬಿಸಿ ಕೊಳ್ಳಬೇಕಾಗಿದ್ದುದು ತಪ್ಪಿಹೋಯಿತೆ ಎಂದು ಪರಿತಪಿಸುತ್ತಿದ್ದಾಗ ಅವಳನ್ನು ಮಗಳಂತೆ ಮದುವೆ ಮಾಡಿಕೊಡುವ ಯೋಗ ದೊರಕಿಸಿಕೊಟ್ಟದ್ದಕ್ಕೆ ನನಗೆ ಆಗಿರುವ ಸಂತೋಷ ಮಾತಿನಿಂದ ಹೇಳಲೇ ಅಗದ್ದು. ನಿಜಕ್ಕೂ ನೀನು ಜ್ಯೋತಿಯ ಜೊತೆ ನನಗೆ ಇನ್ನೊಬ್ಬ ಮಗಳು. ನಾವು ಅಪ್ಪ ಅಮ್ಮ ನಿನಗೆ ಹತ್ತಿರದಲ್ಲೇ ಇರುತ್ತೇವೆ. ಯಾವಾಗಲೂ ಬಂದುಹೋಗುತ್ತಿರು" ಎಂದರು.

ವಿದ್ಯಾ ಮತ್ತು ಭಾರತಿ ಇಬ್ಬರೂ ವಸುಂಧರಾ ದಂಪತಿಗಳನ್ನು ಅಭಿನಂದಿಸುತ್ತ– "ನಿಜಕ್ಕೂ ನಿಮ್ಮಿಬ್ಬರದೂ ಜನ್ಮ ಜನ್ಮದ ಅನುಬಂಧ. ಪ್ರೇಮಿಗಳಾಗಿದ್ದ ನೀವಿಬ್ಬರೂ ಹತ್ತು ವರ್ಷಗಳ ನಂತರ ವಿವಾಹಬಂಧನದಲ್ಲಿ ಒಟ್ಟುಗೂಡುತ್ತಿರುವುದು ಅಪೂರ್ವ ಯೋಗಾಯೋಗ. ನಮಗೆಲ್ಲಾ ಇದರಿಂದ ಅಪಾರ ಹರ್ಷವಾಗಿದೆ" ಎಂದರು. ವಿವಾಹ ಸಮಾರಂಭದ ನಂತರ ಎಲ್ಲರಿಗೂ ಸರಳವೂ ಸ್ವಾದಿಷ್ಟವೂ ಆದ ಭೋಜನ ಏರ್ಪಡಿಸಲಾಗಿತ್ತು. ನವದಂಪತಿಗಳು ಎಲ್ಲರನ್ನೂ ಭೇಟಿಮಾಡಿ ವಂದಿಸಿದರು. ಹೇಮಾಳ ತಾಯಿ, ಅಣ್ಣ ತಂಗಿ ಮತ್ತು ವಸುಂಧರಾಳ ತಮ್ಮ ಮತ್ತು ನಾದಿನಿ ಸಂಜೆಯೇ

ತುಮಕೂರಿಗೆ ಜೊತೆಯಲ್ಲೇ ತೆರಳಿದರು.

ಎಸ್.ಆರ್. ಮಾಸ್ಟರ್ ಅವರು ನೂತನ ವಧೂವರರಿಗೆ ಇಂದು ನೀವು ನಮ್ಮ ಮನೆಯಲ್ಲೇ ಉಳಿದುಕೊಳ್ಳಿ. ಮನೆ ಬಹಳ ದೊಡ್ಡದಾಗಿದೆ. ನಾಲ್ಕು ರೂಮುಗಳಿವೆ. ಸದ್ಯಕ್ಕೆ ನಾನು ನನ್ನ ಶ್ರೀಮತಿ ಬಿಟ್ಟರೆ ಮನೆಯಲ್ಲಿ ಇನ್ನು ಯಾರೂ ಇಲ್ಲ ಎಂದರು. ಮಮತಾ ಕೂಡ ಹಾಗೆಯೇ ಮಾಡಿ ಎಂದರು. ವಸುಂಧರಾ ಮುದ್ದು ಭೂಮಿಕಾಳನ್ನು ಎತ್ತಿಕೊಂಡು ನಲಿದಾಡಿದ್ದೇ ನಲಿದಾಡಿದ್ದು. ಶ್ರೀನಿವಾಸನ ತಂದೆ ನಿಂಗೇಗೌಡರು ವಸುಂಧರಾಳನ್ನು ಕುರಿತು– "ಇಷ್ಟು ವರ್ಷಕ್ಕೆ ಈ ಹೊತ್ತು ಶ್ರೀನಿವಾಸನ ಮುಖದಲ್ಲಿ ನಗು ಕಂಡೆನಮ್ಮಾ. ಈ ನಗು ಯಾವಾಗಲೂ ಹೀಗೇ ಇರುವ ಹಾಗೆ ನೀನು ನೋಡಿಕೋಬೇಕು ತಾಯಿ" ಎಂದರು. ವಸುಂಧರಾ – "ಅದು ನನ್ನ ಕರ್ತವ್ಯವಷ್ಟೇ ಅಲ್ಲ; ಅದೇ ನನ್ನ ಗುರಿ. ಅದರಲ್ಲೇ ನನ್ನ ಸಂತೋಷವೂ ಅಡಗಿದೆಯಲ್ಲಾ ಅಪ್ಪಾಜಿ" ಎಂದು ಹೇಳಿ ಕಾಲುಮುಟ್ಟಿ ನಮಸ್ಕರಿಸಿದಳು. ಬೆಳಿಗ್ಗೆಯಿಂದ ನೀಲಾಕಾಶದಲ್ಲಿ ಮಂದೈಸಿದ್ದ ದಟ್ಟಮೋಡಗಳು ರಾತ್ರಿ ಹತ್ತು ಗಂಟೆಯ ಸುಮಾರಿಗೆ ಬೀಸಿದ ಗಾಳಿಯ ಹೊಡೆತಕ್ಕೆ ಕರಗಿ ಧೋಧೋ ಎಂದು ಸುರಿಯ ತೊಡಗಿದ ಮುಸಲಧಾರಾ ವರ್ಷ ಇಡೀ ರಾತ್ರಿ ಭೋರ್ಗರೆಯಿತು. ನೀರಿಗಾಗಿ ಹಪಹಪಿಸಿದ್ದ ವಸುಂಧರೆಯ ಒಡಲು ಹನಿಹನಿಯನ್ನೂ ಹೀರಿ ತಣಿದಿತು. ಹೇಮೆಯ ಪಾತ್ರದಲ್ಲೂ ಅಂದು ರಾತ್ರಿ ಎಲ್ಲಿಲ್ಲದ ಸೆಳವು.

●



ಶಾಸ್ತ್ರ ಹಾಗೂ ಅನುವಾದದ ವಿಷಯದಲ್ಲಿ ಹೆಚ್ಚು ಕೆಲಸ ಮಾಡುತ್ತಿದ್ದ ಡಾ. ಆರ್. ಲಕ್ಷ್ಮೀನಾರಾಯಣ ಅವರು 'ಮುಗಿಯದ ಮಾಯೆ' ಎಂಬ ಕಾದಂಬರಿಯನ್ನು ಬರೆದಿದ್ದಾರೆ. ಇದರ ಮೂಲಕ ತಮ್ಮ ಸೃಜನಶೀಲ ಸಾಧ್ಯತೆಯನ್ನು ತೋರಿಸಿದ್ದಾರೆ. ತಾವು ಕನ್ನಡ ಅಧ್ಯಾಪಕರಾಗಿ ಕೆಲಸ ಮಾಡಿದ ಅನುಭವವನ್ನೆಲ್ಲಾ ಇದರಲ್ಲಿ ಎರಕ ಹೊಯ್ದಿದ್ದಾರೆ.

ಕಾದಂಬರಿಯ ಕತೆಯು ಓದುಗನನ್ನು ತನ್ನೊಡನೆ ಸೆಳೆದುಕೊಂಡು ವಸುಂಧರಾ ತಾನು ಪ್ರೀತಿಸಿದ್ದ ಶ್ರೀನಿವಾಸನನ್ನು ಮದುವೆಯಾಗುವುದರೊಡನೆ ಕೊನೆಮುಟ್ಟುತ್ತದೆ. ಇದರಲ್ಲಿ ವಸುಂಧರಾ ಮತ್ತು ಹೇಮಾ ಎಂಬ ಪ್ರಾತಿನಿಧಿಕ ಪಾತ್ರಗಳ ಮೂಲಕ ವಿದ್ಯಾವಂತ ಹೆಣ್ಣುಮಕ್ಕಳ ಹಲವು ಸಮಸ್ಯೆಗಳು ಆಕರ್ಷಕವಾಗಿ ಚಿತ್ರಿಸಲ್ಪಟ್ಟಿವೆ. ಹೆಣ್ಣಿಗೆ ತನ್ನ ದೇಹದ ಬಗೆಗಿನ ಆತಂಕವನ್ನು ಕಳೆದುಕೊಳ್ಳುವ ಹಾಗೂ ಪುರುಷನಿಗೆ ಹೆಣ್ಣಿನ ದೇಹವೆಂಬುದು ಪಾತಿವ್ರತ್ಯದ ಕೂಪವೆಂಬ ದೃಷ್ಟಿಯು ನಮ್ಮ ಸಮಾಜದಲ್ಲಿನ ಹೆಣ್ಣಿನ ಬಗೆಗಿನ ದೇಹ ಕೇಂದ್ರಿತ ದೃಷ್ಟಿಯಿಂದ ಹೇಗೆ ಹೊರಳಬೇಕಾಗಿದೆ ಎಂಬುದರತ್ತ ಕೈಮಾಡುತ್ತದೆ. ಗಂಡು ಹೆಣ್ಣು ವಿರುದ್ಧ ನೆಲೆಯವಲ್ಲ; ಅವೆರಡರ ಸೆಳೆತದ ನಡುವಣ ಬಿಕ್ಕಟ್ಟುಗಳನ್ನು ಅರಿಯುವ ಹಾಗೂ ಅವುಗಳ ಪರಿಹಾರದತ್ತ ಇಡುವ ಹೆಜ್ಜೆಗಳು ಆರೋಗ್ಯಕರ ಸಮಾಜದತ್ತ ನಡೆಸುತ್ತವೆ ಎಂಬುದನ್ನು ಇಲ್ಲಿನ ಕತೆ ತೋರಿಸುತ್ತದೆ. ಇದರ ಮೂಲಕ ಹೆಣ್ಣು ಮತ್ತು ಗಂಡು ಇಬ್ಬರೂ ಬದಲಾಗಬೇಕಾದ ನಿಲುವನ್ನು ಕಾದಂಬರಿ ಮನಗಾಣಿಸುತ್ತದೆ.

- ಡಾ. ಎಚ್. ಶಶಿಕಲಾ

ಡಾ. ಲಕ್ಷ್ಮೀನಾರಾಯಣ ಅವರ ಈ ಕಾದಂಬರಿಯು ಒಟ್ಟು ಬದುಕನ್ನು ಮುಗಿಯದ ಮಾಯೆ ಎಂಬ ರೂಪಕದ ಪರಿಭಾಷೆಯಲ್ಲಿ ಹೇಳುತ್ತಿದೆ. ನಾವು ಅಂದುಕೊಂಡಂತೆ ನಡೆಯದ ಹಾಗೂ ತರ್ಕ ಮೀರಿದ ಘಟನಾವಳಿಯ ರೂಪಕವಾಗಿ ಬದುಕನ್ನು ಕಾಣುವ ದೃಷ್ಟಿಕೋನವನ್ನು 'ಮುಗಿಯದ ಮಾಯೆ'ಯಲ್ಲಿ ಕಾಣಬಹುದು. ಬದುಕಿನಲ್ಲಿ ಅಪೇಕ್ಷೆ, ನಿರೀಕ್ಷೆ, ಕನಸು, ಎಲ್ಲವೂ ಇರುತ್ತವೆ. ಆದರೆ ಎಲ್ಲವೂ ನಾವು ಅಂದುಕೊಂಡಂತೆ ನಡೆಯಬಹುದು, ನಡೆಯದೆ ಇರಬಹುದು, ನಮ್ಮ ತೆಕ್ಕೆಗೆ ದಕ್ಕಬಹುದು ದಕ್ಕದೆ ಇರಬಹುದು- ಎಲ್ಲ ಏರಿಳಿತಗಳನ್ನು ಒಳಗೊಂಡು ನಿರಂತರ ನಡೆಯುತ್ತಲೇ ಇರುವ ಬಾಳ ನಡಿಗೆಯನ್ನು ಲಕ್ಷ್ಮೀನಾರಾಯಣ್ 'ಮುಗಿಯದ ಮಾಯೆ' ಯಲ್ಲಿ ಕಂಡಿದ್ದಾರೆ.

- ಡಾ. ಬರಗೂರು ರಾಮಚಂದ್ರಪ್ಪ (ಮುನ್ನುಡಿಯಿಂದ)

ಕಾದಂಬರಿ/Novel

ISBN 93-88922-91-3

9 789388 922913 03

ಬೆಲೆ: ₹ 170

ವಸಂತ ಪ್ರಕಾಶನ
ನಂ. 360, 10ನೇ 'ಬಿ'ಮುಖ್ಯ ರಸ್ತೆ, 3ನೇ ಬ್ಲಾಕ್
ಜಯನಗರ, ಬೆಂಗಳೂರು - 560 011
ದೂರವಾಣಿ: 22443996
email:vasantha_prakashana@yahoo.com
www.vasanthaprakashana.com